
ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ್: ಸಾಂಸ್ಕೃತಿಕ ವಿದ್ಯಮಾನ

(೧೮೫೬–೧೯೫೬: ನೂರು ವರ್ಷಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಗೆ ಸಾದರಪಡಿಸಿರುವ ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು

ವಿದ್ಯಾ ಕುಂದರಗಿ



ಮಾರ್ಗದರ್ಶಕರು

ಡಾ. ಬಿ ಜಿ ಬಿರಾದಾರ

ಪ್ರಾಚಾರ್ಯರು

ಗುಡ್ ನ್ಯೂಸ್ ಮಹಾವಿದ್ಯಾಲಯ

ಕಲಘಟಗಿ. ಧಾರವಾಡ

ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಜನತಾ ಶಿಕ್ಷಣ ಸಮಿತಿಯ

ಡಾ.ಡಿ.ವೀರೇಂದ್ರ ಹೆಗ್ಗಡೆ ಸಂಶೋಧನಾ ಕೇಂದ್ರ

ವಿದ್ಯಾಗಿರಿ. ಧಾರವಾಡ–೦೪

(ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಮಾನ್ಯತೆ ಪಡೆದ ಸಂಸ್ಥೆ)

೨೦೧೯

ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ್: ಸಾಂಸ್ಕೃತಿಕ ವಿದ್ಯಮಾನ

(೧೮೫೬-೧೯೫೫: ನೂರು ವರ್ಷಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಗೆ ಸಾದರಪಡಿಸಿರುವ ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು

ವಿದ್ಯಾ ಕುಂದರಗಿ

ಮಾರ್ಗದರ್ಶಕರು

ಡಾ. ಬಿ ಜಿ ಬಿರಾದಾರ

ಪ್ರಾಚಾರ್ಯರು

ಗುಡ್ ನ್ಯೂಸ್ ಮಹಾವಿದ್ಯಾಲಯ

ಕಲಘಟಗಿ. ಧಾರವಾಡ

ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩೨೭೬

ಜನತಾ ಶಿಕ್ಷಣ ಸಮಿತಿಯ

ಡಾ.ಡಿ.ವೀರೇಂದ್ರ ಹೆಗ್ಗಡೆ ಸಂಶೋಧನಾ ಕೇಂದ್ರ

ವಿದ್ಯಾಗಿರಿ, ಧಾರವಾಡ-೦೪

(ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಮಾನ್ಯತೆ ಪಡೆದ ಸಂಸ್ಥೆ)

೨೦೧೯

ದೃಢೀಕರಣ ಪತ್ರ

ಶ್ರೀಮತಿ ವಿದ್ಯಾ ಕುಂದರಗಿ ರಾಮಪ್ಪ **"ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜ್: ಸಾಂಸ್ಕೃತಿಕ ವಿದ್ಯಮಾನ (೧೮೫೬–೧೯೫೫: ನೂರು ವರ್ಷಗಳನ್ನು ಅನುಲಕ್ಷಿಸಿ)"** ಎಂಬ ಶೀರ್ಷಿಕೆಯ ಪ್ರೌಢ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿ.ಎಚ್.ಡಿ ಪದವಿಗಾಗಿ ಹಂಪಿ ವಿಶ್ವವಿದ್ಯಾಲಯ ಭಾಷಾ ನಿಕಾಯದ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ ಹಂಪಿ
ದಿನಾಂಕ: /೦೫/೨೦೧೯

ಡಾ. ಬಿ. ಜಿ. ಬಿರಾದಾರ
ಮಾರ್ಗದರ್ಶಕರು ಮತ್ತು ಪ್ರಾಚಾರ್ಯರು
ಗುಡ್ ನ್ಯೂಸ್ ಮಹಾವಿದ್ಯಾಲಯ
ಕಲಘಟಗಿ. ಧಾರವಾಡ

ಪ್ರಮಾಣ ಪತ್ರ

ನಾನು ವಿದ್ಯಾ ಕುಂದರಗಿ ರಾಮಪ್ಪ **"ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜ್: ಸಾಂಸ್ಕೃತಿಕ ವಿದ್ಯಮಾನ (೧೮೫೬-೧೯೫೫: ನೂರು ವರ್ಷಗಳನ್ನು ಅನುಲಕ್ಷಿಸಿ)"** ಎಂಬ ಶೀರ್ಷಿಕೆಯ ಪ್ರೌಢ ಮಹಾಪ್ರಬಂಧವನ್ನು ಡಾ.ಬಿ.ಜಿ.ಬಿರಾದಾರ ಪ್ರಾಚಾರ್ಯರು ಗುಡ್ ನ್ಯೂಸ್ ಮಹಾವಿದ್ಯಾಲಯ ಕಲಘಟಗಿ. ಧಾರವಾಡ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿ.ಎಚ್.ಡಿ ಪದವಿಗಾಗಿ ಹಂಪಿ ವಿಶ್ವವಿದ್ಯಾಲಯ ಭಾಷಾ ನಿಕಾಯದ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ ಹಂಪಿ
ದಿನಾಂಕ: /೦೫/೨೦೧೯

ವಿದ್ಯಾ ಕುಂದರಗಿ ರಾಮಪ್ಪ
ಸಂಶೋಧಕರು
ಜೆ.ಎಸ್.ಎಸ್ ಡಾ.ಡಿ.ವಿರೇಂದ್ರ ಹೆಗ್ಗಡೆ
ಸಂಶೋಧನಾ ಕೇಂದ್ರ
ವಿದ್ಯಾಗಿರಿ, ಧಾರವಾಡ-೦೪

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಸೈದ್ಧಾಂತಿಕ ನೆಲೆಗಳು : ಸಮಸ್ಯೀಕರಣ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ

೧.೪. ವಿಧಾನ ಮತ್ತು ಸ್ವರೂಪ

೧.೫. ಇದುವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

೧.೬. ಅಧ್ಯಯನದ ಆಕರಗಳು

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸ್ವರೂಪ

೧.೧. ಸೈದ್ಧಾಂತಿಕ ನೆಲೆಗಳು : ಸಮಕ್ಷೀಕರಣ

ಭಾರತದ ಮೇಲೆ ರಾಜಕೀಯವಾಗಿ ಸರ್ವಾಧಿಕಾರ ಸ್ಥಾಪಿಸಿದ ಈಸ್ಟ ಇಂಡಿಯಾ ಕಂಪನಿಗೆ ಆಡಳಿತ ನಡೆಸಲು ವೈವಿಧ್ಯಮಯವಾದ ಹವಾಮಾನ, ಪ್ರಾಕೃತಿಕ ಸಂಪನ್ಮೂಲ, ಸಂಸ್ಕೃತಿ, ಹಲವಾರು ಜಾತಿ, ಜನಾಂಗ, ಧರ್ಮಗಳಿಂದ ಹಾಗೂ ಕುಶಲಮತಿ ಪ್ರಜೆಗಳಿಂದ ಕೂಡಿದ ಬಹುಮುಖಿ ಭಾರತವನ್ನು ಅರ್ಥೈಸುವುದು, ತಳಮೂಲದ ನಾಡಿಮಿಡಿತ ತಿಳಿಯುವುದು ಸಾಧಾರಣವಾದ ಕಾರ್ಯವಂತೂ ಆಗಿರಲಿಲ್ಲ. ಗಾಢವಾದ ಮಾಹಿತಿಯ ಅಗತ್ಯವಿತ್ತು. ಅದಕ್ಕಿಂತ ಮಿಗಿಲಾಗಿ ಅಲ್ಪಸಂಖ್ಯಾತ ಬ್ರಿಟಿಷರು ಬಹುಸಂಖ್ಯಾತ ಭಾರತೀಯರನ್ನು ಹತೋಟಿಗೆ ತೆಗೆದುಕೊಳ್ಳುವುದು ಸುಲಭಸಾಧ್ಯದ ಕಾರ್ಯವಾಗಿರಲಿಲ್ಲ. ಯಾಂತ್ರಿಕ ಶಸ್ತ್ರಾಸ್ತ್ರಗಳ ಸಹಾಯದೊಂದಿಗೆ ಬ್ರಿಟಿಷರು ಮಾಡಿದ ಮತ್ತೊಂದು ಚಾಣಾಕ್ಷತನದ ಕಾರ್ಯವೆಂದರೆ ಭಾರತದ ರಾಜಕೀಯ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಆಳವಾದ ಅಧ್ಯಯನ. ಇದರ ಅತೀ ಜರೂರ ಅವರಿಗಿತ್ತು.

ಈ ಅನಿವಾರ್ಯ ಅಗತ್ಯಕ್ಕಾಗಿ ಬ್ರಿಟಿಷ ಅಧಿಕಾರಿಗಳು ತಮ್ಮದೇ ಆದ ಪರಿಣಿತರನ್ನೇ ಕರೆತಂದು ಆಯಾ ವಿಷಯಗಳ ಅಧ್ಯಯನಕ್ಕಾಗಿ ಕ್ಷೇತ್ರ ಪ್ರವೇಶ ಮಾಡಿದರು. ಇದರಿಂದಾಗಿ ಭಾರತೀಯರ ನಾಡಿ ಮಿಡಿತ, ಹೃದಯ ಬಡಿತಗಳ ಸಂಪೂರ್ಣ ಸ್ವಾದೀನ ಬ್ರಿಟಿಷರಿಗೆ ದಕ್ಕಿ ಬಿಟ್ಟಿತು. ಇಂಥ ಸ್ವಾರ್ಥ ಸರ್ವಾಧಿಕಾರದ ಸಾಧನೆ ಕಾರಣವಾಗಿ ಅಧ್ಯಯನಕ್ಕಿಳಿದಿದ್ದರೂ ಕೆಲವು ಬ್ರಿಟಿಷ ಅಧಿಕಾರಿಗಳಿಗೆ, ಅಧ್ಯಯನಕಾರರಿಗೆ ಸ್ಥಳಿಯ ಜನಮನ ಜಾಲಾಡುವಾಗ ಸ್ಥಳಿಯ ನೆಲದ, ಮಣ್ಣಿನ ಗುಣವನ್ನು ಮನಗಂಡು ಅದಕ್ಕೆ ಸ್ಪಂದಿಸುವುದು ಅನಿವಾರ್ಯ ಮತ್ತು ಅವಶ್ಯಕವಾಗಿಯೂ ಕಂಡಿರಬೇಕು.

ಹೀಗೆ ೧೮೧೮ ರಲ್ಲಿ ಧಾರವಾಡ ಭಾಗವನ್ನು ಬ್ರಿಟಿಷರು ವಶಪಡಿಸಿಕೊಂಡ ನಂತರ, ಕೃಷ್ಣೆಯ ದಕ್ಷಿಣದ ಪ್ರದೇಶವನ್ನು ಕನ್ನಡ ಪ್ರದೇಶವೆಂದು ಮನಗಂಡ ಮನ್ರೋ (ಕೃಷ್ಣಾನದಿಯ ದಕ್ಷಿಣದ ಮರಾಠಾ ದೇಶದ ಪ್ರಿನ್ಸಿಪಾಲ್ ಕಲೆಕ್ಟರ್) ಕನ್ನಡ ಪ್ರಾಂತ್ಯಕ್ಕೆ ಸೇರಿಸಲು ಸೂಚಿಸಿದ್ದರು. ಅಂದರೆ ಆದಾಗಲೇ ಕನ್ನಡ ಮಣ್ಣಿನ ವಾಸನೆ ಸ್ಥಳಿಯ ಬ್ರಿಟಿಷ ಅಧಿಕಾರಿಗಳಿಗೆ ತಲುಪಿಯಾಗಿತ್ತು. ಆದಾಗ್ಯೂ ರಾಜಕೀಯ ಉದ್ದೇಶದ ಪ್ರಾಧಾನ್ಯತೆ ಸ್ಥಳೀಯ ಜನರ ಭಾಷೆ ಭಾವನೆಗಳಿಗೆ ಸ್ಪಂದಿಸದೆ, ಮರಾಠ ಸಂಸ್ಥಾನಿಕ ಪ್ರದೇಶ ಮತ್ತು ಮುಂಬೈ ಕೇಂದ್ರ ಸ್ಥಾನದ ಸಾಮೀಪ್ಯಗಳೇ ಪ್ರಧಾನವಾಗಿ, "ಕೃಷ್ಣಾನದಿಯ ದಕ್ಷಿಣದ ಮರಾಠಾ ದೇಶ"ವೆಂಬ ಉದ್ಘೋಷಕ್ಕೆ ಒಳಗಾಗಿ, ಧಾರವಾಡ ಪ್ರದೇಶ ಮುಂಬೈ ಅಧಿಪತ್ಯದಲ್ಲೇ ಉಳಿದುಬಿಟ್ಟಿತು. ತಮ್ಮ ಆಧೀನದಲ್ಲಿದ್ದರೂ ನಿಕಟಪೂರ್ವಕಾಲದಲ್ಲಿ ಸ್ಥಳಿಯ

ಆಧಿಪತ್ಯ ನಡೆಸಿದ ಮರಾಠಿಗರ ಮರ್ಜಿ ಕಾಯ್ದುಕೊಳ್ಳುವುದು ಬ್ರಿಟಿಷರ ಆಡಳಿತ ನೀತಿಯ ಚಾಣಾಕ್ಷತನವಾಗಿತ್ತು. ಹಾಗಾಗೀಯೇ ಬಾಂಬೆ ನೆಟಿವ್ ಎಜ್ಯುಕೇಶನ್ ಸೊಸೈಟಿ ಎಂಬ ಅರೆ ಸರಕಾರಿ ಸಂಸ್ಥೆ ೧೮೨೬ ರಲ್ಲಿ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಒಂದೊಂದು ಮರಾಠಿ ಶಾಲೆ ತೆರೆಯಿತು. ಆಗ ಧಾರವಾಡ ವಿಭಾಗದ ಅಸಿಸ್ಟೆಂಟ ಕಲೆಕ್ಟರನಾಗಿದ್ದ ವಾಲ್ಟೆರ್ ಎಲಿಯಟ್ ಮರಾಠಿ ಶಾಲೆಗಳನ್ನು ಇಲ್ಲಿ ಆರಂಭಿಸಿದ್ದು (೧೮೨೬) ಸೂಕ್ತವಲ್ಲವೆಂದು ವಾದಿಸಿ, ಅದಕ್ಕೆ ಮನ್ನಣೆ ಸಿಗದಿದ್ದಾಗ ೧೮೩೧ ರಲ್ಲಿ ಧಾರವಾಡದಲ್ಲಿ ಒಂದು ಕನ್ನಡ ಶಾಲೆಯನ್ನು ಪ್ರಾರಂಭಿಸಿ ಮೂರು ವರ್ಷಗಳ ಕಾಲ ಒಬ್ಬನೇ ಅದರ ಖರ್ಚುವೆಚ್ಚವನ್ನು ಭರಿಸಿ, ಶಾಲೆ ನಡೆಸಿದನು. ಕನ್ನಡ ಶಿಕ್ಷಣ ಮತ್ತು ಪಠ್ಯಪುಸ್ತಕಗಳ ರಚನೆ ಕುರಿತಂತೆ ಎಲಿಯಟನು ನೀಡಿದ ಸೂಚನೆಗಳು ಸ್ವೀಕೃತವಾಗಿ, ಅವನ ನೇತೃತ್ವದಲ್ಲಿಯೇ 'ಈಸೋಪನ ನೀತಿ ಕಥೆಗಳು', 'ಗಣಿತ ಪುಸ್ತಕ-ಪೂರ್ಣಾಂಕ' ಮತ್ತು 'ಶಾಲಾಪದ್ಧತಿ' ಎಂಬ ೩ ಪುಸ್ತಕಗಳು ಬಳ್ಳಾರಿಯ ಮಿಷನ್ ಪ್ರೆಸ್ಸಿನಲ್ಲಿ ಮುದ್ರಿತವಾಗಿ ಮುಂಬಯಿ ಕರ್ನಾಟಕ ರಾಜ್ಯದ ಮೊಟ್ಟಮೊದಲ ಕನ್ನಡ ಪುಸ್ತಕಗಳಾದವು. ಕನ್ನಡ ಶಿಕ್ಷಣ ಬೀಜಗಟ್ಟಿದ್ದು, ಕನ್ನಡ ಸಾಹಿತ್ಯದ ಕಹಳೆ ಮೊಳಗಿದ್ದು ಇಲ್ಲಿಯೇ ಎಂಬುದು ನಿರ್ವಿವಾದ. ಒಂಭತ್ತು ವರ್ಷಗಳ ತರುವಾಯ ೧೮೩೫ ರಲ್ಲಿ ಸರಕಾರ ಇದೇ ಎರಡೂ ಊರುಗಳಲ್ಲಿ ಒಂದೊಂದು ಕನ್ನಡ ಶಾಲೆ ತೆರೆಯಿತು. ಇದು ಎಲಿಯಟ್ ಎಂಬ ಬ್ರಿಟಿಷ ಅಧಿಕಾರಿಯ ಸತತ ಶ್ರಮದಿಂದಲೇ ಸಾಧ್ಯವಾಯಿತು. ಆಡಳಿತ ಚುಕ್ಕಾಣಿ ಹಿಡಿದವರೂ ಅವರೇ ಆದ್ದರಿಂದ ಅದರಲ್ಲಿ ಅತಿಶಯೋಕ್ತಿ ಏನಿಲ್ಲ ಎನಿಸಿದರೂ ತಮ್ಮ ಮೇಲುಸ್ತುವಾರಿ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿ, ಪ್ರವಾಹಕ್ಕೆ ಮುಖ ಮಾಡಿದ್ದು ಆಶ್ಚರ್ಯವೂ ಅತಿಶಯೋಕ್ತಿಯು ಆಗಿತ್ತು.

೧೮೪೮ ರಲ್ಲಿ ಧಾರವಾಡದಲ್ಲಿ ಮೊದಲ ಇಂಗ್ಲಿಷ ಶಾಲೆ ಆರಂಭಿಸಿದರು. ಕನ್ನಡದ ನೆಲದಲ್ಲಿ ಕನ್ನಡ ಶಾಲೆಗಳ ಅಗತ್ಯ ಮನಗಂಡರೂ ಮುಂದೆ ೧೦-೧೨ ವರ್ಷಗಳ ಅಂತರದಲ್ಲಿ ಇಂಗ್ಲೀಷ ಶಾಲೆಗಳೂ ತಲೆಯೆತ್ತತೊಡಗಿದ್ದು ವಿಪರ್ಯಾಸವಾದರೂ ವಾಸ್ತವ. ಇವು ಬ್ರಿಟಿಷ ಆಜ್ಞಾಧಾರಿಗಳಾದ ಕನ್ನಡಿಗರಿಗೆ ಇಂಗ್ಲಿಷ ಭಾಷಾಜ್ಞಾನದ ಅಗತ್ಯತೆಗೋ? ಅಥವಾ ಮೆಲ್ಲಗೆ ಇಂಗ್ಲಿಷ ಶಿಕ್ಷಣದ ಪ್ರಸಾರಕ್ಕೋ? ತಮ್ಮ ಜನಾಂಗದ ವಿದ್ಯೆಗೋ? ಅಂತೂ ೧೮೪೮ ಸರಕಾರಿ ಇಂಗ್ಲೀಷ ಶಾಲೆ ಪ್ರಾರಂಭವಾಗಿ ಇಂಗ್ಲೀಷ ಶಿಕ್ಷಣಕ್ಕೆ ನಾಂದಿಯಾಯಿತೆಂದರೆ ಕನ್ನಡ ನೆಲೆ ಎಂಥ ಕವಲುದಾರಿಯಲ್ಲಿ ತನ್ನತನವನ್ನು ಸಾಬೀತು ಪಡಿಸಿಕೊಳ್ಳಲು ಹೆಣಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮರಾಠಿಯಿಂದ ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಇಂಗ್ಲಿಷಿಗೆ ಶರಣಾಗುತ್ತಿರುವುದು ಬಹುಶಃ ಕನ್ನಡದ ಗಮನಕ್ಕೆ ಬಾರದೇ ಹೋಯಿತೋ ಏನೋ? ಬಂದರೂ ರಾಜಕೀಯ-ಸರ್ವಾಧಿಕಾರದ ಒತ್ತಡ ಒಂದು ಕಡೆಯಾದರೆ, ಸರಕಾರದ, ದೊರೆಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗುವ ಹವಣಿಕೆ ಇನ್ನೊಂದೆಡೆ; ಪ್ರತಿಷ್ಠಿತರಿಗೆ ಇಂಗ್ಲಿಷ ಬಾರದಿರುವುದು ಅವರ ಸ್ವಾಭಿಮಾನಕ್ಕೆ ಧಕ್ಕೆ ಎನಿಸುತ್ತಿತ್ತು. ಜೊತೆಗೆ ಮರಾಠಿಯನ್ನು ವಿರೋಧಿಸಲು ಆಳಸರ ಕೈಯೊಳಗಿನ ಇಂಗ್ಲೀಷನ್ನೇ ಅಸ್ತ್ರವಾಗಿ ಪ್ರಯೋಗಿಸುವ ಅನಿವಾರ್ಯತೆಯೋ? ಅಗತ್ಯತೆಯೋ? ಅಂತೂ ಒಂದರಿಂದ ಬಿಡಿಸಿಕೊಳ್ಳಲು ಹೋಗಿ

ಇನ್ನೊಂದೆಡೆ ಕಗ್ಗಂಟು ಹಾಕಿಕೊಂಡದ್ದಂತೂ ಸತ್ಯ. ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶವೆಂದರೆ ೧೮೨೬ರಲ್ಲಿ ಮರಾಠಿ ಶಾಲೆಗಳು, ೧೮೩೫ರಿಂದ ಕನ್ನಡ ಶಾಲೆಗಳು ಹಾಗೂ ೧೮೪೮ರಲ್ಲಿ ಆಂಗ್ಲ ಶಾಲೆಗಳು ಆರಂಭವಾಗಿರುವ ಈ ನೀತಿಯನ್ನ ನೋಡಿದರೆ ಆಂಗ್ಲ ಆಡಳಿತ, ಸ್ಥಳಿಯ ಎಲ್ಲ ಜನರ ಒಲೈಕೆಯೊಂದಿಗೆ ತಮ್ಮ ಸ್ವಕೀಯ ಅಗತ್ಯಗಳನ್ನೂ ಈಡೇರಿಸಿಕೊಳ್ಳುವುದರೊಂದಿಗೆ ಈ ತ್ರಿವಿಧ ವ್ಯವಸ್ಥೆಯಲ್ಲಿ ಪ್ರತ್ಯೇಕ ವರ್ಗನಿರ್ಮಾಣಕ್ಕೆ ಕಾರಣವಾಗಿದೆ. ಈ ತ್ರಿವಿಧ ಸುಳಿಯೊಳಗೆ ಮಣ್ಣಿನ ಮೂಲ ಭಾಷೆ ತನ್ನತನದ ಆಸ್ತಿತ್ವದ ಭದ್ರತೆಗಾಗಿ ಆಶಾವಾದಿಯಾಗಿ ಜಗ್ಗಾಡುತ್ತಲೇ ಸಾಗಿದೆ. ಆದರೆ ಕನ್ನಡವನ್ನು ಗುರುತಿಸಿದ ಮನ್ರೋ (೧೮೧೮) ಮತ್ತು ಅದನ್ನ ಉಳಿಸಲು, ಬೆಳೆಸಲು ಅವಿರತ ಪ್ರಯತ್ನಿಸಿದ ವಾಲ್ಟೆರ್ ಎಲಿಯಟ್ (೧೮೨೬) ಮುಂತಾದ ಸ್ಥಳೀಯ ಆಂಗ್ಲ ಅಧಿಕಾರಿಗಳನ್ನು ನಾವು ಯಾವ ಕಾರಣಕ್ಕೂ ಕಡೆಗಣಿಸುವಂತಿಲ್ಲ. ಅವರ ಕಾರ್ಯಕಾರಣ ವೈಚಾರಿಕ ಅವಧಾನವನ್ನು ಪರಿಗಣಿಸಲೇಬೇಕಾಗುತ್ತದೆ. ಆದರೆ ಇಲ್ಲಿ ಮತ್ತೂ ಸೂಕ್ಷ್ಮವಾಗಿ ಅವಲೋಕಿಸಬೇಕಾದದ್ದೆಂದರೆ ಉಚ್ಛಾಧಿಕಾರಿಗೂ ಮತ್ತು ಆಜ್ಞಾಧಾರಿ ಆಂಗ್ಲ ಅಧಿಕಾರಿಗಳ ನಡುವೆ ಇದ್ದ ಭಿನ್ನಾಭಿಪ್ರಾಯ ಬೀದಿಗೆ ಬಾರದಿದ್ದದ್ದು ಮತ್ತು ಅದೇನಿದ್ದರೂ ಎಲ್ಲವನ್ನು ಒಪ್ಪಿಕೊಂಡು, ಯಾವುದರ ವಿರೋಧವನ್ನು ಕಟ್ಟಿಕೊಳ್ಳದೆ ಅಖಂಡಗುರಿ ಸಾಧನೆಯೊಂದೇ ತಮ್ಮ ಮುಂದಿರುವ ಸವಾಲು ಎಂಬ ಏಕೋಭಾವ. ಈ ತ್ರಿವಿಧ ಸುಳಿಯೊಳಗೆ ಟ್ರೇನಿಂಗ ಕಾಲೇಜು ಬೆಳೆದು ಬಂದ ಬಗೆಯನ್ನು ಅಭ್ಯಸಿಸುವುದೇ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಹೀಗೆ ೧೮೩೫ ರಿಂದ ಆರಂಭವಾದ ಕನ್ನಡದ ದುಂದುಭಿ ೧೮೫೬ರಷ್ಟೊತ್ತಿಗೆ ಅಂದರೆ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತು ೨೦ ನೆಯ ಶತಮಾನದ ಪೂರ್ವಾರ್ಧದಲ್ಲಿ ಕಂಡ ಪ್ರಸರಣದ ವ್ಯಾಪ್ತಿ ನನ್ನ ಅಧ್ಯಯನದ ನೇರ ವಿಷಯವಾಗಿದೆ. ಕನ್ನಡ ದುಂದುಭಿ ಎಂದರೆ ಶಿಕ್ಷಣ, ಪಠ್ಯಪುಸ್ತಕ, ಟ್ರೇನಿಂಗ ಕಾಲೇಜ್, ಸಾಹಿತ್ಯ ಎಲ್ಲವೂ ಹೌದು. ಟ್ರೇನಿಂಗ ಕಾಲೇಜು ಮತ್ತು ಪತ್ರಿಕೆ ಎರಡು ಮಹಾ ಸಂಸ್ಥೆಗಳಿದ್ದಂತೆ ಮತ್ತು ಅಲ್ಲಿ ಆರಂಭದಲ್ಲಿ ಸೇವೆ ಸಲ್ಲಿಸಿದ ಮಹನೀಯರು ಮಹಚೇತನಗಳು. ಈ ಎಲ್ಲವುಗಳ ಅಧ್ಯಯನವೆಂದರೆ ಒಂದು ಶತಮಾನದ ಸಂಶೋಧನಾ ಅಧ್ಯಯನವಾಗಿದೆ.

ಆಡಳಿತದ ಅನುಕೂಲಕ್ಕಾಗಿ ಕನ್ನಡ ಅಧ್ಯಯನದ ಪ್ರಾರಂಭವಾಗಿ, ನೆಲದ ಮೂಲಗುಣವಾಗಿದ್ದ ಅದರ ಪ್ರಸರಣ, ಬೆಳೆವಣಿಗೆ ಕೈಗೆತ್ತಿಕೊಂಡರೂ ಮರಾಠಿಯೊಂದಿಗೆ ಮಲಮಗುವಾಗಿ ಏಳುತ್ತ ಬೀಳುತ್ತ, ಅಂದಿನ ಸಮಾಜದಲ್ಲಿ ಕಂಡ ಕುತೂಹಲಕಾರಿ ಬೆಳೆಣಿಗೆಯ ಅವಲೋಕನ ಇಲ್ಲಿ ಮುಖ್ಯವಾಗಿದೆ. ಮರಾಠಿಯಿಂದ ಬಿಡಿಸಿಕೊಳ್ಳಲು ಹೋಗಿ ಇಂಗ್ಲಿಷ ಮುಳ್ಳುಕಂಟಿಯ ಮೇಲೆ ಬಿದ್ದ ಕನ್ನಡ... ಬೆಳೆದು ಪಸರಿಸಿದ ರೀತಿಯ ಮೇಲೆ ಅಧ್ಯಯನ ಬೆಳಕು ಚೆಲ್ಲಲಿದೆ. ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆರಂಭದಲ್ಲಿ ಕನ್ನಡ ಭಾಷಾ ಬೆಳವಣಿಗೆಯ ಪ್ರಯತ್ನ, ನಂತರ ಅದಕ್ಕಾಗಿ ತಯಾರಿಸಿದ ಪಠ್ಯವಸ್ತು, ಪಠ್ಯಕ್ಕೆ ವಸ್ತುವಾದ ಪ್ರಮುಖ ವಿಷಯಗಳು, ಆ ವಿಷಯಗಳ ಮೂಲ ಮತ್ತು ಅದರ ಹಿಂದಿನ ಸತತ ಪ್ರಯತ್ನ ಇಲ್ಲಿ ಅಧ್ಯಯನ

ಯೋಗ್ಯವಾಗಿದೆ. ಆ ಸಮಕಾಲೀನ ಪರಿಸರದ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಬೇರೂರಿದ ಶಿಕ್ಷಣದ ಫಲಶೃತಿ ಪಲ್ಲಟಗಳು ವಿದ್ಯಮಾನವಾಗಿ ಅಧ್ಯಯನದಲ್ಲಿ ಮುಖ್ಯವಾಗಿವೆ. ಆರಂಭದ ಆ ದಿನಗಳಲ್ಲಿ ಶಿಕ್ಷಣ ಸಾಕ್ಷರತೆಗಳು ಎಲ್ಲರಿಗೂ ತಲುಪಲು ಸಾಧ್ಯವಾಯಿತೆ? ನಾಲ್ಕು ಜಿಲ್ಲೆಗಳ ಬಹುವ್ಯಾಪ್ತಿಯ ಪ್ರದೇಶವನ್ನೊಳಗೊಂಡಂತೆ ಕೇಂದ್ರ ಪ್ರದೇಶವಾದ ಧಾರವಾಡದಲ್ಲಿಯ ಈ ಶಿಕ್ಷಣಕೇಂದ್ರ ತನ್ನೆಲ್ಲ ಸೀಮೆಗೂ ಹಸ್ತ ಚಾಚಿತ್ತೆ? 'ನಾರ್ಮಲ್ ಕ್ಲಾಸ್/ಸೂಲ್ಕ್' ಎಂದು ವೈಶೇಷಿಕರಿಸಿಕೊಂಡದ್ದು ಕುತೂಹಲ ಹುಟ್ಟಿಸಿದರೆ, 'ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ್' ಎಂದು ಹೆಸರು ಬದಲಾಯಿಸಿಕೊಂಡದ್ದು ಲಿಂಗ ಮತ್ತು ಭಾಷಾ ನಿಷ್ಪಕ್ಷಪಾತ ದೃಷ್ಟಿಯಿಂದ ಆಶ್ಚರ್ಯ ಹುಟ್ಟಿಸುತ್ತದೆ. ಸಾಮಾಜದಲ್ಲಿಯ ಜಾತಿ ವರ್ಗಗಳ ತಾರತಮ್ಯ ತೊಡೆಯುವಲ್ಲಿ ಈ ಶಿಕ್ಷಣ ಪ್ರಸರಣ ಕೇಂದ್ರ ಪ್ರಯತ್ನಿಸಿತೆ? ನಿಷ್ಪಕ್ಷವಾದ ಶಿಕ್ಷಣ ನೀಡಿತ್ತೆ? ಎಂಬ ಪ್ರಶ್ನೆಗಳಿಗೆ ಉತ್ತರಹುಡುಕುವುದೇ ಇಲ್ಲಿಯ ಉದ್ದೇಶವಾಗಿದೆ. ನಿರಂತರ ಕನ್ನಡ ನುಡಿ ದಾಸೋಹ ಮಾಡುತ್ತ ಬಂದ ಈ ಸಂಸ್ಥೆ ಸರ್ವ ಜನಾಂಗಕ್ಕೆ ಸದಭಿಪ್ರಾಯಪೂರ್ಣವಾಗಿ ಹಂಚಿಕೆಯಾಗಿತ್ತೆ? ರಾಜ ಸಿಂಹಾಸನ ಮೇಲಿದ್ದ ಶಾರದೆ ಬೀದಿಗಿಳಿದಿದ್ದೇನೋ ನಿಜ ಆದರೆ ಯಾವ ಬೀದಿಗಳಿಗೆ? ಎನ್ನುವ ಸಂಕೀರ್ಣ ಪ್ರಶ್ನೆಗೆ ಉತ್ತರ ಹುಡುಕುವುದು ಈ ಸಂಶೋಧನೆಯ ಅಗತ್ಯವಾಗಿದೆ. ಉಳ್ಳವರು ಮತ್ತು ಮೇಲ್ಜಾತಿ-ಮೇಲ್ವರ್ಗದವರು ಬ್ರಿಟಿಷರ ಬಿಸಿಲುಗುದುರೆ ಏರಿ ಅಕ್ಷರ ಕಲಿತರು ಮತ್ತು ಕಲಿಸುವಂತಾದರು. ಆದರೆ ಉಳಿದ ಲಿಂಗ, ಜಾತಿ, ವರ್ಗದ ಜನ ಈ ಮುಖ್ಯವಾಹಿನಿಯಲ್ಲಿದ್ದರೆ?.... ಎಂಬುದು ಉತ್ತರ ಹುಡುಕಬೇಕಾದ ಪ್ರಶ್ನೆ. ಈ ಅಕ್ಷರ ದಾಸೋಹ ಕೇಂದ್ರದಲ್ಲಿ ಕೇಂದ್ರಿತ ಶಕ್ತಿಯ ಸಾಮಾಜಿಕ ಜವಾಬ್ದಾರಿ ಎಂಥದ್ದು? ಎಂಬಂಥಹ ಹಲವು ಪ್ರಶ್ನೆಗಳು ಇಲ್ಲಿ ವಿಮೋಚನ ಪಡೆಯಬೇಕಾಗಿದೆ.

ಇನ್ನು ಪಠ್ಯ ವಿಷಯ ವಸ್ತುವಿನ ಕ್ರೋಢೀಕರಣ ಮತ್ತು ರಚನೆಗಳು ಕನ್ನಡ ಸಾಹಿತ್ಯದ ಬೇರನ್ನು ಒಳಗೊಂಡ ಸತ್ವಯುತ ಕೃತಿಗಳು ಎನ್ನುವುದು ಹೆಮ್ಮೆಯ ಮತ್ತು ನಿರ್ವಿವಾದದ ವಿಷಯ. ಆದರೆ ಈ ಕೃತಿಗಳು ಕೇವಲ ಸಂದರ್ಭೋಚಿತ ಹೇಳಿಕೆಗಳಲ್ಲಿ ಉಳಿದು ಹೋಗಿವೆ. ಏಕೆಂದರೆ ಪದವಿ, ವಿಶ್ವವಿದ್ಯಾಲಯದ ಡಾಕ್ಟರೇಟ್ ಉಪನ್ಯಾಸಕರ ಸ್ವತ್ತಾಗಿರುವ ಇಂದಿನ ಸಾಹಿತ್ಯದಲ್ಲಿ ಪ್ರಾಥಮಿಕ ಶಾಲೆಯ ಪಠ್ಯಕ್ಕಾಗಿ, ಮಾಸ್ತರ ಬರೆದದ್ದು ಯಾವ ಲೆಕ್ಕ? ಎನ್ನುವಂತಾಗಿ ಗಣನೆಗೆ ಬಾರದೆ ಉಳಿದಿವೆ. ಅಂದು ಯಾವ ಸಾಹಿತ್ಯಕ್ಕೆ ಘಟ್ಟನಿರ್ಮಿತಿಗೆ ಮೂಲಕಾರಣಕರ್ತರಾದವರ ಕೃತಿಗಳು ಮುಖ್ಯವಾಗಿದ್ದವೋ ಅವೇ ಇಲ್ಲವಾಗಿದೆ. ಆದರೆ ಈ ಬಗೆಗೆ ಯಾರೂ ತಲೆಕೆಡಿಸಿಕೊಂಡಿಲ್ಲ. ಈ ಎಲ್ಲವೂಗಳ ತಲಸ್ಪರ್ಶಿಯಾದ ಹುಡುಕಾಟ, ಶೋಧ ನನ್ನ ಅಧ್ಯಯನದ ಆಶಯವಾಗಿದೆ.

೧.೨. ಅಧ್ಯಯನದ ಉದ್ದೇಶ:

ಕನ್ನಡ ಭಾಷೆ ಮತ್ತು ಭಾವನೆಗಳು ಅಳಿದು ಹೋಗಿ, ಕನ್ನಡಿಗರು ಅವಮಾನಕ್ಕೀಡಾಗುವಂತಹ ದುಃಸ್ಥಿತಿಯಲ್ಲಿದ್ದಾಗ ಕನ್ನಡದ ಅಭಿವೃದ್ಧಿಗಾಗಿ ಹುಟ್ಟಿದ್ದು ಈ ನಾರ್ಮಲ್ ಸ್ಕೂಲ್ ಅಥವಾ ಟ್ರೇನಿಂಗ

ಕಾಲೇಜ. ಮರಾಠಿಯಿಂದ ಮುಕ್ತಿ ಪಡೆಯಲು ಕನ್ನಡ ಶಾಲೆ ಆರಂಭವಾದದ್ದು ಇಂಗ್ಲೀಷ ತಲೆಬರಹದ ನಾಮಕರಣ ಹೊತ್ತು. ಹುಲಿಯಿಂದ ತಪ್ಪಿಸಿಕೊಳ್ಳಲು ಹೋಗಿ ದರಿಯಲ್ಲಿ ಬಿಳುತ್ತಿರುವ ಎಚ್ಚರಿಕೆ ಅಂದಿನ ಕನ್ನಡಿಗರಿಗೆ ಇತ್ತೆ? ಕನ್ನಡ ಜಾಗೃತಿ, ಆ ಕುರಿತ ತಿಳುವಳಿಕೆಯ ಪರಿಕಲ್ಪನೆ ಹುಟ್ಟಿದ್ದು ಪುಣೆ ಬೊಂಬಾಯಿಯಂಥ ಮಹಾನಗರಗಳಿಗೆ ಹೋಗಿ, ಆಂಗ್ಲರ ಆಡಳಿತದಲ್ಲಿದ್ದ ಉನ್ನತ ವ್ಯಾಸಂಗ ಪಡೆದುಬಂದಾದ ಮೇಲೆ ಅಲ್ಲವೆ? ಹಾಗಾದರೆ ಕನ್ನಡ ನೆಲದ ಅಗತ್ಯತೆಗಳನ್ನು ಆಂಗ್ಲ ಪ್ರಣೀತ ದೃಷ್ಟಿಕೋನದಿಂದ ನೋಡುವಾಗ ಕನ್ನಡಕ್ಕೆ ದೊರಕಿಸಿದ ನ್ಯಾಯ ಎಷ್ಟು? ಆಂಗ್ಲ ಸರಕಾರದಲ್ಲಿ ಉದ್ಯೋಗ ಮಾಡಿ, ಅವರದ್ದೇ ಅಧ್ಯಯನದಿಂದ ಲಭಿಸಿದ ಮಾರ್ಗದರ್ಶನದಲ್ಲಿ ನಡೆಯುತ್ತ, ದುಡಿದ ಮಹನಿಯರ ತನ್ನತನವೇನು? ತನ್ನತನವನ್ನು ಉಳಿಸಿಕೊಳ್ಳುವಲ್ಲಿ ಈ ಕಾಲೇಜಿನ ಪಾತ್ರವೇನು? ಉದ್ದೇಶಿತವಾಗಿಯಲ್ಲದಿದ್ದರೂ ಸಮುದ್ರಕ್ಕೆ ಧುಮುಕಿದ ಮೇಲೆ ಸಾಹಸಿಗರನೇಕರು ತಮ್ಮ ಗುರಿಗಮ್ಯಗಳನ್ನು ಹುಡುಕಿಕೊಂಡು, ಅವುಗಳನ್ನು ತಲುಪಲು ಶತಪ್ರಯತ್ನ ಮಾಡಿ, ಅದಕ್ಕೆ ಸಹಚರರನ್ನೂ ಕೂಡಿಸಿಕೊಂಡು, ಶತಾಯ ಗತಾಯ ಯಶಸ್ವಿಯಾದರು. ಕನ್ನಡ ಅದರದ್ದೇ ಆದ ನೆಲದಲ್ಲಿ ಕಳೆದುಕೊಂಡಿದ್ದ ತನ್ನತನವನ್ನು ಅದಕ್ಕೆ ದೊರಕಿಸಿಕೊಟ್ಟು, ತಾವೂ ಮಹನೀಯರೆನಿಸಿಕೊಂಡರು. ಹೊಟ್ಟೆ ಹೊರೆಗಾಗಿ ನೌಕರಿ ಸೇರಿಕೊಂಡರೂ ಕನ್ನಡತನದ ಅರಿವು ಮೂಡಿದೊಡನೆಯೇ ತತ್‌ಕ್ಷಣವೇ ಆ ನಿಟ್ಟಿನಲ್ಲಿ ಕಾರ್ಯತತ್ಪರರಾಗಿ, ಇದ್ದ ಸ್ಥಾನದ ಬಲದಿಂದಲೇ ಆಡಳಿತ ಚುಕ್ಕಾಣಿಹಿಡಿದವರ ಮನೋಗತದ ಚುಕ್ಕಾಣಿ ಹಿಡಿದು ಅದನ್ನು ಕನ್ನಡಕ್ಕೆ, ಕನ್ನಡದ ಅಭಿವೃದ್ಧಿಗೆ ಬಳಸಿಕೊಳ್ಳುವುದರ ಮೂಲಕ ಹೂವಿನೊಂದಿಗೆ ನಾರಾಗಿ ಸಾರ್ಥಕ್ಯ ಪಡೆದರು. ಇದರ ಪಾರದರ್ಶಕ ಅಧ್ಯಯನ ಇಲ್ಲಿಯ ಮುಖ್ಯ ಉದ್ದೇಶ. ಈ ಸಂಸ್ಥೆ ಹುಟ್ಟಿದ್ದು ಅಚ್ಚಗನ್ನಡ ಹರಡಲು; ಇಟ್ಟಿದ್ದು 'ನಾರ್ಮಲ್ ಕ್ಲಾಸ್, ಸ್ಕೂಲ್', 'ಟ್ರೇನಿಂಗ್ ಕಾಲೇಜ್' ಎಂಬ ಇಂಗ್ಲಿಷ ಹೆಸರು; ಕಲಿಸುತ್ತಿದ್ದದ್ದು ಮರಾಠಿ ಸಹಿತ; ಇಂಗ್ಲಿಷಿನ ಆಡಳಿತ, ಮರಾಠಿಯ ಒತ್ತಡ.... ಎರಡನ್ನು ಇದ್ದಲ್ಲಿಯೇ ಬಿಟ್ಟು ಊರ್ಧ್ವಮುಖವಾಗಿ ಕನ್ನಡ ಬೆಳೆದು, ಬಹು ಆಶಾವಾದಿ ಬೆಳವಣಿಗೆಯನ್ನೇ ಕಂಡಿದೆ. ಇಕ್ಕಟ್ಟಿನಿಂದ ನುಸುಳಿ ಹೆಮ್ಮರವೇ ಆಗಿದೆ. ರಸೆಲ್‌ರ ಸೂಕ್ಷ್ಮಾವಲೋಕನ ಮತ್ತು ನಿಷ್ಪಕ್ಷಪಾತ ನಿರ್ಧಾರ ಹಾಗೂ ಕನ್ನಡದ ಅಪ್ಪಟ ಅಭಿಮಾನಿಯೂ, ಉನ್ನತ ವಿದ್ಯಾವ್ಯಾಸಂಗಿಗಳೂ ಆದ ಪ್ರಾಚಾರ್ಯರೆಲ್ಲರ ದೂರದೃಷ್ಟಿ, ಮೇಧಾಶಕ್ತಿ, ಬಿತ್ತಿದ್ದನ್ನು ಬೆಳೆಯುವ ತಾಕತ್ತು ಮತ್ತು ಉತ್ತರೋತ್ತರ ಅಧಿಕಾರ ವಹಿಸಿಕೊಂಡು, ಧನಾತ್ಮಕವಾಗಿ ಸಹಕರಿಸಿದವರ ನಿಸ್ಪೃಹ ಸೇವೆ ಕನ್ನಡ ಶಿಕ್ಷಣಕ್ಕೆ ನಾಂದಿಹಾಡಲು ಕಾರಣವಾಯಿತು. ಕನ್ನಡಭಾಷೆ, ಶಿಕ್ಷಣ, ಸಾಹಿತ್ಯ ಮತ್ತು ಮುದ್ರಣ ಅಭಿವೃದ್ಧಿಯಲ್ಲಿ ಇತಿಹಾಸವನ್ನೇ ನಿರ್ಮಿಸಿದ ಕೇಂದ್ರವಾಗಿ ಹಲವಾರು ಪ್ರಥಮಗಳಿಗೆ ನಾಂದಿಯಾಯಿತು; ಕನ್ನಡದ ಕೂಸಿಗೆ ತೊಟ್ಟಿಲಾಯಿತು. ಸ್ಪಷ್ಟವಾಗಿ ಹೇಳಬೇಕೆಂದರೆ ಉತ್ತರ ಕರ್ನಾಟಕದ ಈ ಭಾಗದ ಕನ್ನಡ ಜನರ ಮುಖವಾಣಿಯಂತಾದ ಈ ಕೇಂದ್ರದ ಇತಿಹಾಸವೆಂದರೆ ಉತ್ತರ ಕರ್ನಾಟಕದ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಇತಿಹಾಸವೇ ಆಗಿದೆ. ನಗರ ಪ್ರದೇಶದಲ್ಲಿ ನೀಡುವ ಈ ಶಿಕ್ಷಣಕ್ಕಾಗಿ ಸುತ್ತಲಿನ ಎಲ್ಲ ಪ್ರದೇಶಗಳಿಂದ ಲಿಂಗಾಯತ ವಿದ್ಯಾರ್ಥಿಗಳು ಬರುತ್ತಿದ್ದುದರಿಂದ ಅಂಥವರಿಗೆ ಉಳಿಯಲು ಮತ್ತು ಉಣ್ಣಲು ಸುಲಭವಾಗಲೆಂದು ಉಚಿತ ವಸತಿನಿಲಯ ಮತ್ತು

ದಾಸೋಹ ಆರಂಭಿಸಿದ್ದೂ ಇದೆ. ಈ ವಸತಿ ಮತ್ತು ದಾಸೋಹ ಜಾತ್ಯಾತೀತತೆಯ ಪ್ರಶ್ನೆಯನ್ನು ಹುಟ್ಟು ಹಾಕುತ್ತದೆ. ರಾಜಕೀಯ ಸ್ಥಿತ್ಯಂತರವೆಲ್ಲ ಬ್ರಿಟಿಷ್‌ಮಯವಾಗಿದ್ದ ತಿರುವಿನಲ್ಲಿ, ಸಮಾಜದಲ್ಲಿದ್ದ ಜಾತಿ ಬೇಧಕ್ಕೆ ಈ ಸಂಸ್ಥೆ ಎಷ್ಟರಮಟ್ಟಿಗೆ ಸ್ಪಂದಿಸಿದ್ದಿದೆ? ಜಾತಿಭೇದ ಎಣಿಸುವಾಗ ಇಲ್ಲಿ ನಡೆದದ್ದು ಸಮಕಾಲೀನ ಒಟ್ಟು ಸಾಮಾಜಿಕ ನ್ಯಾಯ-ಅನ್ಯಾಯದ ಹಿನ್ನೆಲೆಯಲ್ಲಿ ಮೌಢ್ಯವೇ ಆಗಿದೆ. ಹೋರಾಟಗಳು ಆರಂಭವಾಗಿದ್ದೇ ಮುಂಚುಣಿಯಲ್ಲಿದ್ದವರಿಗೆ ಚ್ಯುತಿ ಬಂದಾಗ! ತಮ್ಮ ಜಾತಿ ಧರ್ಮ ಪಂಗಡ ಪಕ್ಷದವರನ್ನೆಲ್ಲ ಕಟ್ಟಿಕೊಂಡೇ ಧುಮುಕ್ಕಿದ್ದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಆದ್ದರಿಂದ ಅವರವರ ಪ್ರತಿಷ್ಠೆಯ ಪ್ರಶ್ನೆಯಾಗಿ ಕನ್ನಡ ಭಾಷೆ ಮತ್ತು ಶಿಕ್ಷಣ ಬೆಳೆಯಿತೆ? ಇದೊಂದು ರೀತಿ ವರ್ಗ ಮತ್ತು ಸ್ವಾಭಿಮಾನದ ಸಮರವಾಗಿ ಕಾಣುವುದಿಲ್ಲವೇ? ಮುಖ್ಯರಂಗದ ಮೇಲೆ, ಪರದೆಯ ಮುಂದೆಯೇ ಇಷ್ಟೆಲ್ಲ ಇರಬೇಕಾದರೆ ಅಂದಿನ ಸಮಕಾಲೀನ ಪರಿಸ್ಥಿತಿಯಲ್ಲಿ ಪರದೆಯ ಹಿಂದೆ ಕೆಳಜಾತಿ/ಕೆಳವರ್ಗದವರ ಶೈಕ್ಷಣಿಕ ಸ್ಥಿತಿ-ಗತಿಯ ಚಿತ್ರಣ ಹೇಗಿದ್ದೀತು...? ಎಂಬುದಿಲ್ಲಿಯ ಮತ್ತೊಂದು ಪ್ರಮುಖ ಪ್ರಶ್ನೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಆಯಾಮಗಳನ್ನೂ ವಿಶ್ಲೇಷಿಸುವ ಉದ್ದೇಶ ಹೊಂದಿದೆ.

ತೆರೆಯ ಮುಂದೆ ಇದ್ದ ಪುರುಷವರ್ಗಕ್ಕೆ ಮಾತ್ರ ಈ ಶಿಕ್ಷಣ ಎಂಬುದನ್ನು ಅಧಿಕಾರಿಗಳೂ ಒಪ್ಪಿದಂತೆ ಕಾಣುತ್ತದೆ. ಹಾಗೆಂದೇ 'ಗಂಡು ಮಕ್ಕಳ ಟ್ರೇನಿಂಗ ಕಾಲೇಜ' ಎಂದು ಘಂಟಾಘೋಷವಾಗಿ ಸಾರಿಹೇಳಿದ ಮೇಲೆ, ಅಲ್ಲಿ ಮಹಿಳೆಯರ ಸ್ಥಿತಿಗತಿ, ಶಿಕ್ಷಣ, ಅಭಿವೃದ್ಧಿ ಇವೆಲ್ಲ ಗೌಣವಾಗಿ ಬಿಟ್ಟಿದ್ದವು ಎಂಬುದು ಸರ್ವಸಿದ್ಧ. ಈ ಲಿಂಗ ತಾರತಮ್ಯದಲ್ಲಿ ಮಹಿಳೆ ಮತ್ತು ಶಿಕ್ಷಣ ಯಾವ ಸ್ಥರವನ್ನು ಮುಟ್ಟಿದ್ದೀತು? ಎಂಬುದು ಕೂಡ ಇಲ್ಲಿ ಅಧ್ಯಯನಕ್ಕೊಳಗೊಂಡಿದೆ. ಮಹಿಳೆಯ ಸಾಮಾಜಿಕ ಸ್ಥಿತಿಗತಿ, ಶಿಕ್ಷಣ ಕ್ಷೇತ್ರದ ಮೇಲೂ ಪ್ರಭಾವ ಬೀರಿತ್ತು ಮತ್ತು ಮರಾಠಿಯಿಂದ ಕನ್ನಡ ಉಳಿಸುವುದಕ್ಕೆ ಬ್ರಿಟಿಷ ಸರಕಾರದೊಂದಿಗೆ ಧಾಪುಹೆಜ್ಜೆ ಹಾಕಿದ ಕನ್ನಡಿಗ ಅಧ್ವರ್ಯರು ಸಮಾಜಮುಖಿಯಾಗಿ, ಸಾಮಾಜಿಕ ನ್ಯಾಯ ಕುರಿತು ಚಿಂತಿಸಿದ್ದೆಷ್ಟು? ಎಂಬ ಪ್ರಶ್ನೆಗೆ ಉತ್ತರ ಹುಡುಕುವುದೂ ಇಲ್ಲಿಯ ಉದ್ದೇಶಗಳಲ್ಲೊಂದಾಗಿದೆ. ಈ ರೀತಿಯಾಗಿ ಈವರೆಗೂ ಸಾರ್ವಜನಿಕವಾಗಿ ಪ್ರಸ್ತುತಗೊಳ್ಳದ ಹಲವಾರು ವಿಷಯಗಳನ್ನು ವಿಶ್ಲೇಷಿಸುವುದು ಇಲ್ಲಿ ಮಹತ್ವದ್ದಾಗಿದೆ.

ಈ ಸಂಸ್ಥೆಯ 'ಮಾನಸವಾಣಿ'ಯಂತಿರುವ ಮಾಸಪತ್ರಿಕೆ ಎಂದರೆ 'ಕನ್ನಡ ಜ್ಞಾನ ಬೋಧಕ'(೧೮೬೧) ನಂತರ 'ಮಠಪತ್ರಿಕೆ'. ಇದು ಅವಿಚ್ಛಿನ್ನವಾಗಿ ಇಂದಿನವರೆಗೂ ನಡೆದು ಬಂದಿರುವ, ಅತಿಹೆಚ್ಚು ಪ್ರಕಟಣೆಗಳನ್ನು ಕಂಡಿರುವ, ಕನ್ನಡದ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಅವಿಶ್ರಾಂತ ದುಡಿದಿರುವ ಏಕೈಕ ಪತ್ರಿಕೆ ಇದಾಗಿದೆ. ಇದು ಅಂದಿನಿಂದ ಇಂದಿನವರೆಗೂ ಕಾಲಕಾಲಕ್ಕೆ 'ಮಠಪತ್ರಿಕೆ', 'ಶಾಲಾಪತ್ರಕ', 'ಶಾಲಾ ಪತ್ರಿಕೆ', 'ಪ್ರಾಥಮಿಕ ಶಿಕ್ಷಣ' 'ಕನ್ನಡ ಪ್ರಾಥಮಿಕ ಶಿಕ್ಷಣ' ಎಂಬ ಹೆಸರು ಬದಲಿಸುತ್ತ ಪ್ರಕಟಗೊಂಡು ಈಗ 'ಜೀವನ ಶಿಕ್ಷಣ' ಎಂಬ ಹೆಸರಿನಲ್ಲಿ ಪ್ರಕಟಗೊಳ್ಳುತ್ತಿದೆ.

ತರಬೇತಿ ಸಂಸ್ಥೆಯ ಆತ್ಮದಂತಿರುವ ಈ ಪತ್ರಿಕೆ ೧೫೩ ವರ್ಷಗಳಿಂದ ಕನ್ನಡ ಭಾಷೆ, ಶಿಕ್ಷಣ ಮತ್ತು ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿ, ಪತ್ರಿಕಾ ಇತಿಹಾಸದಲ್ಲಿ ದಾಖಲೆ ನಿರ್ಮಿಸಿದೆ ಎಂದೆಲ್ಲ ನಾವು ಓದಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ೮೨ ವರ್ಷಗಳಷ್ಟು ಹಿಂದೆ ಅಂದರೆ ಸರಿಸುಮಾರು ಒಂದು ಶತಮಾನದಷ್ಟು ಹಿಂದೆಯೇ ಕನ್ನಡ ಭಾಷೆ ಆಡುನುಡಿಯಲ್ಲಿ, ಬರಹದಲ್ಲಿ ಮತ್ತು ಲಿಪಿಯಲ್ಲಿ ಯಾವ ರೀತಿ ಬಳಕೆಯಾಗುತ್ತಿತ್ತು ಎಂಬುದಕ್ಕೆ ಇದು ದಿವ್ಯಗನ್ನಡಿಯಾಗಿದೆ. ಈ ನಿಟ್ಟಿನಲ್ಲಿ ಅಧ್ಯಯನ ಮಾಡುವವರಿಗೆ ಇದು ಅಕ್ಷಯನಿಧಿ. ಪ್ರಾರಂಭದ ಪತ್ರಿಕೆಗಳನ್ನು ಹಸ್ತಾಕ್ಷರಗಳಲ್ಲಿಯೇ ಕಲ್ಲಚ್ಚುಗೊಳಿಸಿ ಮುದ್ರಿಸಿದ ಪರಿ ವಿಸ್ಮಯ ಹುಟ್ಟಿಸುವಂಥದ್ದು. ಮುದ್ರಣ ಜಗತ್ತಿಗೂ ಇತಿಹಾಸ ಬರೆದಿದೆ ಈ ಪತ್ರಿಕೆ.ಇದರೊಂದಿಗೆ ಕಾಲಕಾಲಕ್ಕೆ ಸುದ್ದಿ, ಸಮಾಚಾರ, ಆದೇಶ, ವಿನೂತನ ವಿಷಯ ಲೇಖನಗಳನ್ನು ಪ್ರಸಾರಿಸುತ್ತ ಈ ಆದಿಮ ಸಂಸ್ಥೆಯ ಬೆಳವಣಿಗೆಯ ಆಶೋತ್ತರ ಹೊತ್ತು, ಅದರ ಉಚ್ಛ್ರಾಯಾವಸ್ಥೆಗೆ ಕಾರಣವಾಗುವುದರೊಂದಿಗೆ, ತಾನೂ ಬೆಳೆದು ಪೃಥ್ವಿಯಂತೆ ಪರಿಭ್ರಮಿಸುತ್ತಿರುವ ಈ ಮಾಸ ಪತ್ರಿಕೆಯ ದ್ವೈವಿಧ ಬೆಳವಣಿಗೆಯನ್ನೂ ಇಲ್ಲಿ ಅಭ್ಯಸಿಸಲಾಗುವುದು. ಈ ಪ್ರತಿಕೆ ಮಠ, ಮಠಾಧಿಪತಿಗಳು ಮತ್ತು ಅದರ ವಾರಸುದಾರಿಕೆಯನ್ನಷ್ಟೇ ಪ್ರತಿನಿಧಿಸಿತ್ತೋ ಅಥವಾ ಸಮಾಜದ ಸರ್ವಾಂಗೀಣ ಬೆಳವಣಿಗೆಯನ್ನೆ ಗುರಿಯಾಗಿಸಿಕೊಂಡಿತ್ತೋ? ಮಠವೆಂದರೆ 'ಶಾಲೆ' ಎಂಬುದು ನಿಜ. ಆದರೆ ಮಠ ತನ್ನದೇ ಆದ ಕ್ಷೇತ್ರವ್ಯಾಪ್ತಿ, ಜನಾಂಗೀಯ ವ್ಯಾಪ್ತಿ ಹೊಂದಿದ್ದೂ ಅಷ್ಟೇ ನಿಜ. ನಿರ್ದಿಷ್ಟ ಜನರ ಧರ್ಮಗಳನ್ನರುಹುವ ಪ್ರಕ್ರಿಯೆ 'ಮಠ'ಗಳಲ್ಲಿ, ಅಗ್ರಹಾರಗಳಲ್ಲಿ ಆರಂಭವಾದದ್ದು ಮತ್ತು ನಿರ್ದಿಷ್ಟ ವಲಯಕ್ಕೇ ಸೀಮಿತವಾಗಿದ್ದದ್ದು ಸರ್ವವಿಧಿತ. ಈ ಇಂಥ ಮಠ, ಅಗ್ರಹಾರಗಳು ಶಾಲೆಗಳಾಗಿ ಪರಿವರ್ತನೆಗೊಂಡದ್ದೂ ಜನಜನಿತ. 'ಮಠಪತ್ರಿಕೆ' ಎಂದೇ ಪ್ರಸಿದ್ಧಿಗೊಂಡದ್ದರ ಹಿನ್ನೆಲೆ, ಇತಿಹಾಸ ಮತ್ತು ವ್ಯಾಪ್ತಿ ಏಷ್ಟು ಎಂಬುದರ ಅಧ್ಯಯನ, ಹುಡುಕಾಟವೂ ಇಲ್ಲಿ ನಿರ್ದೇಶಿತಗೊಂಡಿದೆ.

೧.೩. ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ

ಈಗ ೧೬೩ ವರ್ಷ ತುಂಬಿರುವ ಈ ಸಂಸ್ಥೆ ೧೮೫೬ ರಿಂದ ಸ್ವಾತಂತ್ರ್ಯ ಸಿಗುವಲ್ಲಿವಲ್ಲಿವರೆಗೂ ಮತ್ತು ಆನಂತರವೂ ಇದರ ಸಾಧನೆ, ಸಿದ್ಧಿ, ಸತತ ಕನ್ನಡ ಕಟ್ಟುವ ಮತ್ತು ಬೆಳೆಸುವ ಪ್ರಯತ್ನಗಳು ವೈಯಕ್ತಿಕ, ಸಾಂಸ್ಥಿಕ, ಸಹಯೋಗ, ಸಮನ್ವಯ ರೂಪದಲ್ಲಿ ಸಾಗಿಯೇ ಇವೆ. ಬೆಳೆಯುವ ಹೊತ್ತಿನಲ್ಲಿ ಇದ್ದ ವೇಗ ಹರಡುವ ಹೊತ್ತಿನಲ್ಲಿ ಇಲ್ಲದಿರಬಹುದಾದರೂ ಸಾಮಾಜಿಕ, ರಾಜಕೀಯ ಕಾಲಗತಿಗನುಗುಣವಾಗಿ, ಪರಿಸ್ಥಿತಿಯ ಬೇಡಿಕೆಗೆ ತಕ್ಕಂತೆ ಒಂದೊಂದೇ ಸ್ಥಿತ್ಯಂತರಗಳು, ಬದಲಾವಣೆಗಳು, ಬೆಳವಣಿಗೆಗಳು ಘಟಿಸುತ್ತಲೇ ಹೋಗಿವೆ. ೧೯೨೦ ರಲ್ಲಿ ಕರ್ನಾಟಕ ಕಾಲೇಜು ಉತ್ತರ ಕರ್ನಾಟಕದ ಪ್ರಥಮ ಉಚ್ಚಸಂಸ್ಥೆಯಾಗಿ ಇದೇ ಆವರಣದಲ್ಲಿಯೇ ಆರಂಭವಾಯಿತು. ೧೯೪೦ ರಲ್ಲಿ ೨೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆದದ್ದೂ ಕೂಡ ಇದೇ ಆವರಣದಲ್ಲಿಯೇ. ೧೯೫೦ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಆರಂಭವಾಯಿತು. ಪ್ರಾಯೋಗಿಕ

ಶಾಲೆ, ಇಂಗ್ಲಿಷ ಲ್ಯಾಂಗವೇಜ ಟ್ರೇನಿಂಗ್ ಸೆಂಟರ್(ಇಎಲ್‌ಟಿಸಿ), ಆರ್ಟಗ್ಯಾಲರಿ ಇಂದಿಗೂ ಆವರಣದಲ್ಲಿ ಇವೆ. ಈ ಸಂಸ್ಥೆಯ ಕಟ್ಟಡದಲ್ಲಿಯೇ ಜಿಲ್ಲಾ ಲೋಕಲ್ ಬೋರ್ಡ, ಸ್ಕೂಲ್ ಬೋರ್ಡ, ರಾಜ್ಯ ಶಿಕ್ಷಣ ಮತ್ತು ಸಂಶೋಧನ ಕೇಂದ್ರ, ಬೆಳಗಾವಿ ವಿಭಾಗದ ಗ್ರಂಥಾಲಯ ಕಛೇರಿ, ಸ್ನಾತಕೋತ್ತರ ಜೀವನ ಶಿಕ್ಷಣ ಕೇಂದ್ರಗಳು, (ಈಗಿನ ಆಯುಕ್ತರ ಕಛೇರಿ) ಮುಂತಾದವುಗಳಿಗೆ ಜನ್ಮವಿತ್ತ, ಆಶ್ರಯವಿತ್ತ ಹೆಮ್ಮೆ ಈ ಸಂಸ್ಥೆಗಿದೆ. ಅತೀ ವೇಗ ಮತ್ತು ಶೀಘ್ರಗತಿಯಲ್ಲಿ ಬೆಳೆದ ಇದರ ರೋಚಕ ಕಥಾನಕದ ಭರಾಟೆ ಕೇಂದ್ರೀಕರಣಗೊಂಡಿರುವುದು ಆರಂಭದ ಅವಧಿಯಲ್ಲಿಯೇ. ಹಾಗಾಗಿ ಸ್ವತಂತ್ರ್ಯ ಪೂರ್ವ ಇತಿಹಾಸವನ್ನು ಅಂದರೆ ೧೮೪೭ ರಿಂದ ೧೯೪೭ ರವರೆಗೆ ಒಟ್ಟು ೧೦೦ ವರ್ಷಗಳ ಅವಧಿಯನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಸುಮಾರು ಶತಮಾನದುದ್ದಕ್ಕೂ ಅವಲೋಕನ ಮಾಡಿದಾಗ ಆರಂಭದ ಭರಾಟೆ ನಂತರದ ದಿನಗಳಲ್ಲಿ ಕಂಡುಬರುವುದಿಲ್ಲ. ೧೯೦೦ರ ನಂತರ ಸೃಜನಾತ್ಮಕತೆ, ರಚನೆ, ಅವಿಷ್ಕಾರಗಳು ಮಂದಗತಿಗೆ ತಲುಪಿದವೋ...? ಅಥವಾ ಅಷ್ಟೊತ್ತಿಗೆ ಮೂಲಅಗತ್ಯವೆನಿಸಿದ್ದ ಪಠ್ಯಸಾಹಿತ್ಯ ರಚನೆಗೊಂಡದ್ದರಿಂದ ಅವುಗಳ ಅವಶ್ಯಕತೆ ಕಡಿಮೆಯಾಗಿತ್ತೋ? ಅಂತೂ ಇಳಿಮುಖವಾದ ಸೃಜನ ಪ್ರಕ್ರಿಯೆಯನ್ನು ಗಮನಿಸಿದಾಗ, ಆರಂಭದ ಸಂಕ್ರಮಣ ಕಾಲದಲ್ಲಿ ಮಹತ್ವದ ಸೇವೆ ಮತ್ತು ಸಾಹಿತ್ಯ ರಚನೆ ಮಾಡಿ ಅಜರಾಮರರಾದ ಡೆಪ್ಯೂಟಿ ಚೆನ್ನಬಸಪ್ಪ, ಹುಯಿಲಗೋಳ ಭುಜಂಗರಾಯರು, ವೆಂಕಟ ರಂಗೋ ಕಟ್ಟಿ, ರೊದ್ದ ಶ್ರೀನಿವಾಸರಾಯರು, ಗಂಗಾಧರ ಮಡಿವಾಳೇಶ್ವರ ತುರಮರಿ, ಗಳಗನಾಥರು, ಶಂಬಾ ಜೋಶಿ, ರಾ.ಯ. ಧಾರವಾಡಕರ, ಮ.ಗು.ಹಂದ್ರಾಳ, ಮಿರ್ಜಿ ಅಣ್ಣಾರಾಯರು, ಮ.ಪ್ರ. ಪೂಜಾರ, ಶಾಂತಕವಿಗಳು, ಶಾಂತವೀರ ಕಿತ್ತೂರು ಇಂಥ ಪ್ರಮುಖರನ್ನು ಸವಿವರವಾಗಿ ಅಧ್ಯಯನಕ್ಕೆ ಒಳಪಡಿಸುವುದು ಅವಶ್ಯವೆನಿಸುತ್ತದೆ. ಕಾಲವ್ಯಾಪ್ತಿಯೊಳಗೆ ಬರುವ ಎಲ್ಲರನ್ನೂ ಸಂದರ್ಭಾನುಸಾರ ಉಲ್ಲೇಖಿಸಲಾಗುವುದು.

"ದಕ್ಷಿಣ ವಿಭಾಗದ ವಿದ್ಯಾ ಇಲಾಖೆಯ ಇನ್ಸಪೆಕ್ಟರ ಕಚೇರಿ ಬೆಳಗಾವಿಯಲ್ಲಿದೆ ಎಂಬ ಕಾರಣಕ್ಕೆ ೧೮೬೧ ರಲ್ಲಿ ಧಾರವಾಡದಲ್ಲಿದ್ದ ನಾರ್ಮಲ್ ಕ್ಲಾಸ್ ಬೆಳಗಾವಿಗೆ ಸ್ಥಳಾಂತರಗೊಂಡು, ಬೆಳಗಾವಿಯಲ್ಲಿದ್ದಾಗ ನಾರ್ಮಲ್ ಸ್ಕೂಲ್ ಆಗಿ, ಟ್ರೇನಿಂಗ್ ಕಾಲೇಜಾಗಿ (೧೮೬೪), ಅದಕ್ಕೆ ಚೆನ್ನಬಸಪ್ಪನವರೇ ಮುಖ್ಯಸ್ಥರಾದರು. ಮುಂದೆ ೧೮೬೬ ರಲ್ಲಿ ಚೆನ್ನಬಸಪ್ಪನವರು ಡೆಪ್ಯೂಟಿ ಇನ್ಸಪೆಕ್ಟರ್ ಆದಾಗ ವೆಂಕಟ ರಂಗೋಕಟ್ಟಿ ಎಂಬ ಖ್ಯಾತವಿದ್ವಾಂಸರು ಇದರ ಹೆಡ್‌ಮಾಸ್ತರ/ಪ್ರಿನ್ಸಿಪಾಲರಾದರು (೧೮೬೬). ಈ ಸಂಸ್ಥೆ ೧೮೭೫ ರಲ್ಲಿ ಪುನಃ ಧಾರವಾಡಕ್ಕೆ ಸ್ಥಳಾಂತರಗೊಂಡಿತು"[೧](ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ(ಪರಿಷ್ಕೃತ ಆವೃತ್ತಿ)-೧೯೭೫) ಎಂದು ತಿಳಿದು ಬರುತ್ತದೆ. ಆದ್ದರಿಂದ ಧಾರವಾಡ ಮತ್ತು ಬೆಳಗಾವಿ ಈ ಎರಡೂ ಜಿಲ್ಲೆಗಳು ಕ್ಷೇತ್ರ ವ್ಯಾಪ್ತಿಯಲ್ಲಿ ಸೇರಿಕೊಂಡಿವೆ.

ಅಧ್ಯಯನದ ಮಹತ್ವ

ಭಾರತದಲ್ಲಿ ಶಿಕ್ಷಣಕ್ಕೆ ಅದರದ್ದೇ ಆದ ಇತಿಹಾಸವಿದೆ. ನಿರ್ದಿಷ್ಟ(ಔಪಚಾರಿಕ) ಶಿಕ್ಷಣ ಸೀಮಿತ ಜನರಿಗೆ ಅಂದರೆ ರಾಜಮನೆತನದ ಮತ್ತು ಉಚ್ಚ ವರ್ಗದವರಿಗೆ ಸಿಗುತ್ತಿತ್ತು ಎನ್ನುವುದನ್ನು ಬಿಟ್ಟರೆ, ಸಮಾಜದಲ್ಲಿ ಕುಲಕಸಬುಗಳನ್ನು ಮುಂದುವರೆಸಿಕೊಂಡು ಹೋಗುವ ಎಲ್ಲ ಗುಡಿ ಬಿಡಿ ಕೈಗಾರಿಕೆ/ವೃತ್ತಿಗಳಲ್ಲಿ ಶಿಕ್ಷಣ ಅನೌಪಚಾರಿಕವಾಗಿ ಅಂತರ್ಗತವಾಗಿತ್ತು. ಔಪಚಾರಿಕ ಶಿಕ್ಷಣ ವ್ಯಾಪಕವಾಗಿ ಹರಡಿರದಿದ್ದರೂ ಸೀಮಿತವಾಗಿಯೇ ಅಂತೂ ಪೂರ್ವಕಾಲದಿಂದಲೂ ಅದು ಅಸ್ಥಿತ್ವದಲ್ಲಿತ್ತು. ಯಾವಾಗ ಬ್ರಿಟಿಷರ ಆಗಮನವಾಯಿತೋ ಅಲ್ಲಿಂದ ಪಾರಂಪರಿಕ ಔಪಚಾರಿಕ ಶಿಕ್ಷಣ ವಸಾಹತುಶಾಹಿಗಳ ವಕ್ರದೃಷ್ಟಿಯಿಂದ ಅನುದ್ದೇಶಿತವಾಗಿಯೇ ಹಿಂಜರಿಯತೊಡಗಿತ್ತು. ಸೈನಿಕ ಶಕ್ತಿಯಿಂದಲೇ ಎಲ್ಲವನ್ನು ಆಳಲಾಗದು ಎಂಬುದು ಹೊಳೆದಾಗ, ಸಮಾಜದ ನಾಡಿಮಿಡಿತ ಪರೀಕ್ಷಿಸಿ, ಜ್ಞಾನದಿಂದ ಆಳಬಹುದು ಎಂಬುದು ವಿಧಿತವಾದಾಗ ಭಾರತದಲ್ಲಿ ಬ್ರಿಟಿಷ ಪ್ರಣೀತ ಔಪಚಾರಿಕ ಶಿಕ್ಷಣ ಮುಖ್ಯವಾಹಿನಿಗೆ ಬಂದಿತು. ಧಾರವಾಡ ವಿಭಾಗದ ಅಸಿಸ್ಟೆಂಟ್ ಕಲೆಕ್ಟರನಾಗಿದ್ದ ವಾಲ್ಟೆರ್ ಎಲಿಯೆಟ್, ಮರಾಠಿ ಶಾಲೆಗಳ ಸ್ಥಾಪನೆ(೧೮೨೬) ವಿರೋಧಿಸಿ ೧೮೩೧ರಲ್ಲಿ ಆರಂಭಿಸಿದ ಕನ್ನಡ ಶಾಲೆಯೇ ಧಾರವಾಡದಲ್ಲಿ ಔಪಚಾರಿಕ ಶಿಕ್ಷಣ ನೀಡಿದ ಪ್ರಥಮ ಶಾಲೆಯಾಗಿದೆ. ಮೂರು ವರ್ಷಗಳ ಕಾಲ ಇವನೊಬ್ಬನೇ ಅದರ ವೆಚ್ಚವನ್ನು ಭರಿಸಿ, ಶಾಲೆ ನಡೆಸಿದ್ದನು ಎಂಬುದು ಮಹತ್ವದ ಸಂಗತಿಯಾದರೂ ತನ್ನ ಪ್ರಾಣಭಿಕ್ಷೆ ನೀಡಿದ ಕಿತ್ತೂರು ಚನ್ನಮ್ಮನ ಮತ್ತು ಕನ್ನಡ ತಾಯಿಯ ಋಣವನ್ನು ವಾಲ್ಟೆರ್ ಎಲಿಯೆಟ್ ಹೀಗೆ ತೀರಿಸಿದ್ದಾನೆ ಎಂಬುದನ್ನಿಲ್ಲಿ ಶೋಧಿಸಿ ನೋಡಲಾಗಿದೆ. ನಂತರ ೧೮೩೫ರಲ್ಲಿ 'ಬಾಂಬೆ ನೇಟಿವ ಎಜ್ಯುಕೆಶನ್ ಸೊಸೈಟಿ' ಎಂಬ ಅರೇ ಸರಕಾರಿ ಸಂಸ್ಥೆ ಧಾರವಾಡದಲ್ಲೊಂದು, ಹುಬ್ಬಳ್ಳಿಯಲ್ಲೊಂದು ಶಾಲೆ ತೆರೆಯಿತು. ಇವೇ ಸರಕಾರದ ಪ್ರಥಮ ಕನ್ನಡ ಶಾಲೆಗಳು. ೧೮೨೬ರಲ್ಲಿಯೇ ಮರಾಠಿ ಶಾಲೆಗಳನ್ನು ಆರಂಭಿಸುವ ಮೂಲಕ, ಸರಕಾರದ ಪ್ರವೇಶವಾಗಿ, ಶಿಕ್ಷಣ ಸಾರ್ವತ್ರಿಕರಣ ಗೊಂಡಿದ್ದರೂ ಕನ್ನಡದ ಮಟ್ಟಿಗೆ ಮತ್ತು ಕನ್ನಡಿಗರ ಮಟ್ಟಿಗೆ ಶಿಕ್ಷಣ ಸಾರ್ವತ್ರೀಕರಣಗೊಂಡಿದ್ದು ೧೮೩೫ ರಿಂದಲೇ ಎಂಬುದು ನಿಸ್ಸಂದೇಹ ಮತ್ತು ಮಹತ್ವಪೂರ್ಣವಾದದ್ದು. ಅಲ್ಲಿಂದ ಕ್ರಮೇಣ ನಿಧಾನವಾಗಿ ಏರುತ್ತ ನಡೆದ ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಗಮನಾರ್ಹವಾಗಿದೆ. "ಸನ್ ೧೮೨೬ರಲ್ಲಿ ಧಾರವಾಡ-ಹುಬ್ಬಳ್ಳಿಗಳಲ್ಲಿ ಮರಾಠಿ ಶಾಲೆಗಳಾದವು. ೧೮೩೦ರಲ್ಲಿ ಬೆಳಗಾವಿಯಲ್ಲಿ ಮರಾಠಿ ಶಾಲೆಯಾಯಿತು. ೧೮೩೫ರಲ್ಲಿ ಧಾರವಾಡದಲ್ಲಿ ಮರಾಠಿ ಶಾಲೆಯಾಯಿತು. ೧೮೩೫ರಲ್ಲಿ ಧಾರವಾಡ-ಹುಬ್ಬಳ್ಳಿಗಳಲ್ಲಿ ಒಂದೊಂದು ಶಾಲೆಗಳಾದವು; ಮುಂದಿನ ವರ್ಷ ರಾಣೇಬೆನ್ನೂರಿನಲ್ಲಿ ಕನ್ನಡ ಶಾಲೆಯಾಯಿತು. ೧೮೩೮ರಲ್ಲಿ ಬೆಳಗಾವಿಯಲ್ಲಿ ಕನ್ನಡ ಶಾಲೆಯಾಯಿತು; ಮುಂದೆ ೨ನೇ ವರ್ಷಕ್ಕೆ ಗೋಕಾವಿಯಲ್ಲಿ ಮರಾಠಿ ಶಾಲೆಯಾಯಿತು. ೧೮೪೮ರಲ್ಲಿ ಧಾರವಾಡದಲ್ಲಿ ಇಂಗ್ಲಿಷ ಶಾಲೆಯಾಯಿತು. ೧೮೫೦ರಲ್ಲಿ ಬೆಳಗಾವಿಯಲ್ಲಿ ಸರದಾರರ ಇಂಗ್ಲಿಷ ಶಾಲೆಯಾಯಿತು. ೧೮೫೩ರಲ್ಲಿ ವಿಜಾಪೂರದಲ್ಲಿ ೧ ಕನ್ನಡ, ೧ ಇಂಗ್ಲಿಷ ಶಾಲೆಗಳಾದವು. ೧೮೫೫-೫೬ರಲ್ಲಿ ಧಾರವಾಡ ಜಿಲ್ಲೆಯಲ್ಲಿ ೧ ಇಂಗ್ಲಿಷ ಶಾಲೆ, ಒಂದು

ನಾರ್ಮಲ್ ಶಾಲೆ, ೨ ಮರಾಠಿ, ೧೦ ಕನ್ನಡ ಅಂತೂ ೧೪ ಶಾಲೆಗಳಿದ್ದವು. ಇವುಗಳಲ್ಲೆಲ್ಲ ಕೂಡಿ ರಜಿಸ್ಟರಿನ ಸಂಖ್ಯೆ ೧೪೧೦, ಸರಾಸರಿ ಹಜಿರಿ ೧೨೨೬ಇತ್ತು”(ಗ್ಯಾಝೆಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು- ಅನುವಾದ-ವೆಂ.ರಂ.ಕಟ್ಟಿ.೧೮೯೩ ಪುಟ-೪೦೮) ಹೀಗೆ ಮಂದಗತಿಯಲ್ಲಿ ಸಾಗಿ, ಮುಂದೆ ಇಡೀ ನಾಡಿನ ಗಮನ ಸೆಳೆದು, ಪ್ರಾಥಮಿಕ ಶಿಕ್ಷಣಕ್ಕೆ ಭಾಗ್ಯದ ಬಾಗಿಲಾದದ್ದು ಒಂದು ಮಹತ್ವದ ಘಟ್ಟವೇ ಸರಿ.

ಈಗ ೧೬೩ ವರ್ಷ ಪೂರೈಸಿರುವ ಈ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯು ಹಲವು ವಿಶ್ವವಿದ್ಯಾಲಯಗಳು, ಅಕ್ಯಾಡೆಮಿಗಳು, ಪರಿಷತ್ತುಗಳೂ ಕೂಡ ಮಾಡಲಾರದಷ್ಟು ಕಾರ್ಯವನ್ನು ಮಾಡಿದೆ. ಕನ್ನಡವನ್ನು ಕಟ್ಟುವ ನಿಟ್ಟಿನಲಿ ನಡೆದ ಪ್ರಯತ್ನ ಮತ್ತು ಸಾಧನೆಗಳಿಗೆಲ್ಲ ಮಡಿಲಿತ್ತು ತನ್ನ ಸದಾ ಸನ್ನದ್ಧತೆಯನ್ನು ಮೆರೆದಿರುವಂಥದ್ದು ಈ ಸಂಸ್ಥೆ. ಈ ಎಲ್ಲದ್ದಕ್ಕಿಂತ ಮಿಗಿಲಾಗಿ ಹೊಸಗನ್ನಡ ಸಾಹಿತ್ಯದ ತೀರ ಆದಿಮ ಕೃತಿಗಳು ಮತ್ತು ರಚನಾಕಾರರು ಕೃತಿಗೊಂಡದ್ದು ಇದೇ ಕಾಲೇಜಿನಲ್ಲಿಯೇ ಎಂಬುದು ಗಮನಿಸಬೇಕಾದ ವಿಷಯ. ಡೆಪ್ಯೂಟಿ ಚೆನ್ನಬಸಪ್ಪ, ಹುಯಿಲಗೋಳ ಭುಜಂಗರಾಯರು, ವೆಂಕಟ ರಂಗೋ ಕಟ್ಟಿ, ರೊದ್ದ ಶ್ರೀನಿವಾಸರಾಯರು, ಗಂಗಾಧರ ಮಡಿವಾಳೇಶ್ವರ ತುರಮರಿ, ಗಳಗನಾಥರು, ಶಂಬಾ ಜೋಶಿ, ರಾ.ಯ.ಧಾರವಾಡಕರ, ಮ.ಗು.ಹಂದ್ರಾಳ, ಮಿರ್ಜಿ ಅಣ್ಣಾರಾಯರು, ಮ.ಪ್ರ. ಪೂಜಾರ, ಶಾಂತಕವಿಗಳು, ಮುಂತಾದವರೆಲ್ಲ ಇದೇ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿ ಕೆಲವರು, ಶಿಕ್ಷಕರಾಗಿ ಕೆಲವರು, ಎರಡೂ ಆಗಿ ಹಲವರು ಕನ್ನಡ ಕಟ್ಟುವಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಕಗ್ಗಾಡಾಗಿದ್ದ ನೆಲವನ್ನು ಇವರೆಲ್ಲರೂ ಸೇರಿ ಹದಗೊಳಿಸಿ, ಕನ್ನಡದ ಬೀಜ ಊರಿದ ಪರಿ ಅಧ್ಯಯನಯೋಗ್ಯವಾಗಿದೆ. ಆರಂಭದಾದಿಯಲ್ಲಿ ಕನ್ನಡ ಬೋಧನೆ, ಬೋಧಿಸುವ ಪದ್ಧತಿಗಳ ನಿರ್ಧಾರದ ಜೊತೆಜೊತೆಗೆ ಪಠ್ಯಕ್ರಮ ಚೌಕಟ್ಟು ಮತ್ತು ಅದರ ರಚನೆ, ಕತ್ತಲಲ್ಲಿ ಕಣ್ಣುಕಟ್ಟಿ ಬೆಳಕ ಹುಡುಕಿದಂತಿತ್ತು. ಭಗಿರಥ ಪ್ರಯತ್ನದಿಂದ ಭೂಮಿಹದಗೊಳಿಸಿದ್ದರೂ ಬೀಜದ ಅವಿಷ್ಕಾರವಾಗಬೇಕಿತ್ತು. ಇದೇ ಕಾಲೇಜಿನಲ್ಲಿಯೇ ಈ ಎಲ್ಲ ಮಹನೀಯರ ಸತತ ಪ್ರಯತ್ನ, ಪರಿಶ್ರಮಗಳಿಂದಲೇ ಕನ್ನಡದಲ್ಲಿಯೂ ಒಂದು ಪಠ್ಯರಚನೆ ಸಾಧ್ಯವಾಯಿತು. ಈ ಸಂದರ್ಭದ ಅಧ್ಯಯನದ ಫಲವಾಗಿ ಹುಟ್ಟಿದ ಕೃತಿಗಳೆಂದರೆ ಬಾಣ ಕಾದಂಬರಿ, ಶಾಕುಂತಲ ನಾಟಕ, ಅರೇಬಿಯನ್ ನೈಟ್ಸ್, ನಗದವರನ್ನು ನಗಿಸುವ ಕಥೆಗಳು(ಶೆಕ್ಷಪಿಯರನ-ಕಾಮಿಡಿ ಆಫ್ ಎರರ್ಸ), ಮ್ಯಾಕಬೆತ್, ಅನುವಾದಗಳು, ಖಗೋಲ ಶಾಸ್ತ್ರ, ಸಮೀಕರಣ ಸಂಗ್ರಹ, ಸ್ನೇಹಾ ವಿಷಯೀ ನಿಬಂಧ, ನಿಘಂಟುಗಳು ಇನ್ನೂ ಹತ್ತು ಹಲವಾರು ಕೃತಿಗಳು ಕನ್ನಡಪಠ್ಯಕ್ಕಾಗಿ ರಚಿತವಾದವು. ಅದೇ ಕನ್ನಡ ಸಾಹಿತ್ಯ ಹುಟ್ಟಿಗೂ 'ಗಜಗಮಿಸಿದ್ದೇ ಗತಿ'ಯಾಗಿ ಪರಿಣಮಿಸಿತು. ಆದರೆ ಅದರಲ್ಲಿಯ ಹಲವಾರು ಕೃತಿಗಳು ಇಂದು ಲಭ್ಯವಿಲ್ಲ. ಅದೂ ಅಲ್ಲದೆ ಈ ಕೃತಿಗಳ ಸಾಹಿತ್ಯ ಕಾಲಘಟ್ಟ ನಿರ್ಧರಿಸುವಾಗ ವ್ಯಕ್ತಿಪ್ರಧಾನವಾಗಿ ಕೃತಿಗಳನ್ನು ಪರಿಗಣಿಸಲಾಗಿದೆ. ಅಲ್ಲದೆ ಮುಂದೆ ಬಂದ ವಿಮರ್ಶಕರೂ ಅದನ್ನೇ ಮುಖ್ಯವಾಗಿ ಪರಿಗಣಿಸಿದ್ದಾರೆಯೇ ಹೊರತು ಅದಕ್ಕೆ ಪ್ರೇರಣೆ ನೀಡಿದ ಅಂದಿನ ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಯನ್ನು ಮುಖ್ಯವಾಗಿ ಪರಿಗಣಿಸಿಯೇ ಇಲ್ಲ. ಈ

ಕೃತಿಕಾರರು ಕೃತಿಗಳನ್ನು ರಚಿಸಲು ಕಾರಣೀಭೂತವಾದದ್ದೇ ಟ್ರೇನಿಂಗ ಕಾಲೇಜಿನ ಅಸ್ತಿತ್ವ ಡಾ. ಎಸ್.ಎಸ್.ಕೋತಿನವರು ಹೇಳುವಂತೆ "ಯಾವುದೇ ಸಮಾಜ ತನ್ನ ನಾಡಿನ ಕವಿ-ಕಲಾವಿದರನ್ನು ನೆನಪಿಡುವಂತೆ, ಆಸಕ್ತಿಯನ್ನು ತೋರುವಂತೆ, ತನ್ನ ಶಿಕ್ಷಣದಾತರನ್ನು ನೆನಪಿನಲ್ಲಿಡುವುದು, ಆಸಕ್ತಿಯನ್ನು ತೋರುವುದು ತೀರ ವಿರಳ.... ಅಂಥವರ ಬದುಕನದನು ಪುರಾಣ ಮಾಡಿಯಾರೆ ಹೊರತು ಚರಿತ್ರೆಯಾಗಿ ಸ್ವೀಕರಿಸುವುದಿಲ್ಲ. ಇದರಿಂದಾಗಿ ಒಬ್ಬ ಕವಿ, ಕಲಾವಿದನ ಬಗೆಗೆ ದಾಖಲೆಗಳು, ವಿವರಗಳು ಉಳಿದುಕೊಂಡು ಬರುವಷ್ಟು ಒಬ್ಬ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ವ್ಯಕ್ತಿಯ ಬಗೆಗೆ ಉಳಿದುಕೊಂಡು ಬರುವುದಿಲ್ಲ"[೩](ಡೆಪ್ಯೂಟಿ ಚೆನ್ನಬಸಪ್ಪನವರು- ಜೀವನ ಮತ್ತು ಸಾಧನೆ(ಮುನ್ನುಡಿಯಿಂದ): ಡಾ. ಬಾಳಣ್ಣ ಸೀಗಿಹಳ್ಳಿ-೧೯೯೩, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ). 'ಪ್ರಭಾವಶಾಲಿ ವ್ಯಕ್ತಿಗಳ ಹೆಸರಿನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗಗಳನ್ನು ನಾವು ಇಟ್ಟುಕೊಳ್ಳುವುದಾದರೆ ೧೮೫೬ ರಿಂದ ಮುಂದಿನ ಆರವತ್ತ್ನಾಲ್ಕು ವರ್ಷಗಳ ಅವಧಿಯನ್ನು ಡೆಪೂಟಿ ಚನ್ನಬಸಪ್ಪನವರ ಯುಗವೆಂದು ಕರೆಯಬೇಕಾಗುತ್ತದೆ. ೧೯೨೦ರ ಹೊಸಗಾಳಿ ನಮ್ಮ ಸಾಹಿತ್ಯರಂಗದಲ್ಲಿ ಬೀಸುವವರೆಗಿನ ಕಾಲ ಈ ಯುಗದಲ್ಲಿ ಸೇರ್ಪಡೆಯಾಗುತ್ತದೆ. ಮುಂಬಯಿ ಕರ್ನಾಟಕದಲ್ಲಿ ಕನ್ನಡದ ನವೋದಯಕ್ಕೆ ಅಸ್ತಿವಾರ ಹಾಕಿದ ಕೀರ್ತಿಯು ಡೆಪೂಟಿ ಚೆನ್ನಬಸಪ್ಪನವರದ್ದಾಗಿದೆ'[೪](ಸಾಹಿತ್ಯ ಸಂಗಮ- ಸ.ಸ.ಮಾಳವಾಡ, ೧೯೭೦, ಪುಟ ೨೩೭) ಹೀಗೆ ಹಿರಿಯ ಸಾಹಿತಿ ಸ.ಸ.ಮಾಳವಾಡರು ಖಚಿತವಾಗಿ ಹೇಳಿದ್ದರೂಇದು ಮುಖಪುಟಕ್ಕೇ ಬರಲೇ ಇಲ್ಲ; ಶ್ರೀನಿವಾಸ ಹಾವನೂರರು ಅರುಣೋದಯ ಸಾಹಿತ್ಯ ಪಠ್ಯಪುಸ್ತಕಗಳ ರಚನೆಯ ಬಹುಪಾಲನ್ನು ಹೊಂದಿದೆ ಎಂಬ ಹೇಳಿಕೆಗಷ್ಟೇ ಸೀಮಿತಗೊಳಿಸಿ ಬಿಡುತ್ತಾರೆ. ಈ ನಿಟ್ಟಿನಲ್ಲಿ ಪಠ್ಯ ಸಾಹಿತ್ಯ ರಚನೆಯ ಅಂದಿನ ಅಗತ್ಯತೆ, ಅನಿವಾರ್ಯತೆ ಮತ್ತು ನಿಜವಾಗಿಯೂ ಆದ ಬೆಳವಣಿಗೆಗಳ ಮೇಲೆ ಹೊಸ ಬೆಳಕು ಚೆಲ್ಲುವುದು ಮತ್ತು ಸ್ವತಂತ್ರವಾಗಿ ಅಧ್ಯಯನ ಮಾಡುವುದು ಇಲ್ಲಿಯ ಉದ್ದೇಶವಾಗಿದೆ

ಅಕ್ಟೋಬರ್ ೨೩, ೧೯೮೦ರಲ್ಲಿ 'ಗೋಕಾಕ ಚಳುವಳಿ'ಯ ಮಹತ್ವದ ಸಭೆ ಮತ್ತು ಆಂದೋಲನ ನಡೆದದ್ದು ಧಾರವಾಡದ ಟ್ರೈನಿಂಗ್ ಕಾಲೇಜಿನ ಸಭಾಂಗಣದಲ್ಲಿಯೇ. ಇಂಥ ಸಾಂಸ್ಕೃತಿಕ ನಾಯಕತ್ವ ವಹಿಸಿದ ಹಿರಿಮೆ ಈ ಸಂಸ್ಥೆಗಿದೆ. ಚಳುವಳಿಯಲ್ಲಿ ಈ ಕಾಲೇಜಿನ ಪಾತ್ರವೇನಿತ್ತು ಎಂಬುದರ ಅಧ್ಯಯನವೂ ಇಲ್ಲಿ ಮಹತ್ವ ಪಡೆದಿದೆ. ಇಷ್ಟೇ ಅಲ್ಲದೆ ಸ್ವಾತಂತ್ರ್ಯ ಸಿಕ್ಕಮೇಲೂ ಇದು ಅಹರ್ನಿಶ ದುಡಿದಂಥ ಕೀರ್ತಿಗೆ ಪಾತ್ರವಾಗಿದೆ. ಈ ಎಲ್ಲವುಗಳೊಂದಿಗೆ 'ಉತ್ತರ ಕರ್ನಾಟಕದ ಈ ಭಾಗದ ಕನ್ನಡ ಜನರ ಮುಖವಾಣಿ......' ಎಂದೆಲ್ಲ ಕರೆಯಿಸಿಕೊಳ್ಳುವ ಈ ಕೇಂದ್ರವನ್ನು ಹಾಗೆಂದು ಒಪ್ಪಿಕೊಳ್ಳುವ ಮೊದಲು ಈ ಶೈಕ್ಷಣಿಕ ಅಭಿಯಾನದಲ್ಲಿ ಸಮಾಜದ ಯಾವ ಯಾವ ಜನವರ್ಗಗಳು ಭಾಗವಹಿಸಿದ್ದವು? ನಾಯಕತ್ವದ ಸ್ವರೂಪವೇನು? ಇದರಿಂದಾಗಿ ಒಟ್ಟು ಸಮಾಜದ ಮೇಲೆ ಮೂಡಿಬಂದ ಪರಿಣಾಮವೇನು? ಈ ಅಭಿಯಾನದಲ್ಲಿರುವ 'ಕನ್ನಡದ ಜನ'ರು ಯಾರ್‍ಯಾರು? ಕನ್ನಡದ ಬೆಳವಣಿಗೆಯೇ ಏಕಮೇವಾದ್ವಿತಿಯ ಉದ್ದೇಶವಾಗಿದ್ದರೂ ಇದರ

ಫಲಾನುಭವಿಗಳು ಯಾರು? ಇಡಿ ಸಮಾಜದ ಪ್ರತಿಕ್ರಿಯೆ, ಸ್ಪಂದನ ಏನಿತ್ತು? ಎಂಬುದನ್ನು ಜಾಲಾಡುವುದೂ ಕೂಡ ಇಲ್ಲಿಯ ಉದ್ದೇಶವಾಗಿದೆ.

೧.೪. ವಿಧಾನ ಮತ್ತು ಸ್ವರೂಪ

ಈ ಅಧ್ಯಯನದ ಕಾಲಘಟ್ಟ ೧೦೦ ವರ್ಷಗಳ(೧೮೫೬ ರಿಂದ ೧೯೫೬) ವ್ಯಾಪ್ತಿಯನ್ನು ಹೊಂದಿರುವುರಿಂದ ಸೈದ್ಧಾಂತಿಕ ಸಂಗತಿಗಳನ್ನೇ ಆಧಾರವಾಗಿಟ್ಟುಕೊಂಡು ಸಂಶೋಧನೆ ಕೈಗೊಳ್ಳಬೇಕಾಗಿದೆ. ಆದಾಗ್ಯೂ ಈ ಸೈದ್ಧಾಂತಿಕ ಮತ್ತು ಈಗಾಗಲೇ ಜನಮನದಲ್ಲಿ ಅಚ್ಚೊತ್ತಿರುವ ತಿಳುವಳಿಕೆಗಳನ್ನು ಮರಳಿ ಪರಾಮರ್ಶಿಸುವುದು, ಮತ್ತು ಇದಕ್ಕಾಗಿ ಲಭ್ಯವಿರುವ ಎಲ್ಲ ಮೂಲಗಳಿಂದ ಆಕರ ಕಲೆಹಾಕಿ, ಅನುಭವಸಿದ್ಧವಾದ (ಎಂಪಿರಿಕಲ್) ಸಂಗತಿಗಳನ್ನು ಅಧ್ಯಯನದಲ್ಲಿ ಪರಿಗಣಿಸಲಾಗುವುದು. ಸಂಶೋಧನಾ ವಿಧಾನಗಳಿಗೆ ಸಂಬಂಧಪಟ್ಟಂತೆ ಸಾಮಾಜಿಕ ವಿಜ್ಞಾನಗಳ ಅಧ್ಯಯನದಲ್ಲಿ ವಿಭಿನ್ನ ರೀತಿಯದಾದ ಎರಡು ಚಿಂತನೆಗಳನ್ನು ನಾವು ನೋಡುತ್ತೇವೆ: ಧನಾತ್ಮಕವಾದ (ಪಾಸಿಟಿವಿಸಂ) ಮತ್ತು ಋಣಾತ್ಮಕವಾದ (ಆಂಟಿಪಾಸಿಟಿವಿಸಂ). 'ಸಂಶೋಧನೆಗಳಲ್ಲಿ ವಸ್ತುನಿಷ್ಠ ಅಂಶಗಳನ್ನು ಪರಿಗಣಿಸಿ, ಪರಿಮಾಣತ್ಮಕ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ಏಕೆಂದರೆ ಅಂಕಿಅಂಶಗಳಿಲ್ಲದೆ ಪೂರ್ಣಪ್ರಮಾಣದ ಅಧ್ಯಯನ ಕೈಗೊಳ್ಳಲು ಸಾಧ್ಯವಿಲ್ಲ. ಕಾರಣ–ಪರಿಣಾಮಗಳ ವೈಜ್ಞಾನಿಕ ಅವಲೋಕನ ಇಲ್ಲಿ ನಡೆಯುತ್ತದೆ' ಎಂದು ಪಾಸಿಟಿವಿಸಂನವರು ವಾದಿಸಿದರೆ, 'ವಸ್ತು ನಿಷ್ಠ ಅಂಶಗಳಿಗಿಂತ ವ್ಯಕ್ತಿನಿಷ್ಠ ಅಂಶಗಳೇ ಪ್ರಧಾನ, ಗುಣಾತ್ಮಕಅಂಶಗಳ ಅಳವಡಿಕೆ ಮುಖ್ಯ' ಎಂಬುದು ಆಂಟಿಪಾಸಿಟಿವಿಸಂ ತಜ್ಞರ ವಿವಾದ. ಅದೇನೆ ಇದ್ದರೂ ಒಂದು ಸಂಶೋಧನೆಯ ಪರಿಪೂರ್ಣತೆ ವಿಷಯದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನಗಳಲ್ಲಿ ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಎರಡೂ ಮೂಲಗಳಿಂದ ತೂಗಿ ನೋಡಿದಾಗಲೇ ಸಿಗುವಂಥದ್ದು. ಈ ಎರಡನ್ನು ಬೇರ್ಪಡಿಸಿ ಸಾಮಾಜಿಕ ವಿಜ್ಞಾನಗಳಲ್ಲಿ ಸಂಶೋಧನೆ ಮಾಡುವುದು ಅಸಾಧ್ಯ. ಆದ್ದರಿಂದ ಇಲ್ಲಿ ಎರಡೂ ವಿಧಾನಗಳ ಸಮೀಕರಣದಿಂದ ಅಧ್ಯಯನ ಕೈಕೊಳ್ಳಲಾಗಿದೆ. ಅಧ್ಯಯನಕ್ಕೊಳಪಡಿಸಿಕೊಂಡ ವಿಷಯವನ್ನು ಸಂಗ್ರಹಿಸಿ, ವೀಕ್ಷಿಸಿ, ಅವಲೋಕಿಸಿ, ಪುನಃಸಂಗ್ರಹಿಸಿ ಒಂದು ಸಾಮಾನ್ಯ ನಿರ್ಣಯಕ್ಕೆ ಬರಲು ಪ್ರಯತ್ನಿಸಲಾಗಿದೆ. ಇಲ್ಲಿ ಯಾವುದೇ ಅಂಕಿ ಸಂಖ್ಯಾತ್ಮಕ ಸೂತ್ರ ಸಿದ್ಧಾಂತಗಳನ್ನು ಬಳಸದೆ, ವಿಮರ್ಶಾತ್ಮಕ ವಿಶ್ಲೇಷಣೆಗೆ ಮಾತ್ರ ಒಳಪಡಿಸಿ ನಿರ್ಣಯಕ್ಕೆ ಬರಲಾಗಿದೆ.

ಸ್ವಾತಂತ್ರ ಪೂರ್ವಕಾಲದಲ್ಲಿ ಶಿಕ್ಷಣ ಅಭಿವೃದ್ಧಿ ಮತ್ತು ಪ್ರಸಾರಕ್ಕಾಗಿ ಹೆಜ್ಜೆ ಎತ್ತಿಡುವುದು ಅಷ್ಟು ಸುಲಭವಾಗಿರಲಿಲ್ಲ. ಆಗ ತೆಗೆದುಕೊಂಡ ಕ್ರಮ, ಅನುಸರಿಸಿದ ಮಾರ್ಗಗಳು ತನ್ನ ಕಣ್ಣ ಬೆಳಕಿನಲ್ಲಿಯೇ ಕತ್ತಲು ಸೀಳಿದಂತಿದ್ದು ಅದನ್ನು ಇದ್ದ ಸ್ವರೂಪದಲ್ಲಿಯೇ ದಾಖಲೆ, ಅಭಿಪ್ರಾಯ ಮತ್ತು ಸಂದರ್ಶನಗಳಿಂದ ಉತ್ಪನನಿಸುವುದು ಕಷ್ಟಸಾಧ್ಯವಾದುದು. ಆದ್ದರಿಂದ ಸಮಾಜ ಅಭಿವೃದ್ಧಿಯಲ್ಲಿ ಶಿಕ್ಷಣ, ಸಾಕ್ಷರತೆ, ಸಾಹಿತ್ಯ ಪ್ರಸಾರಗಳು ಹೇಗೆ ನಿಯೋಗಗಳಾಗಿ ಕಾರ್ಯಗೈದಿವೆಯೋ ಅದೇ ರೀತಿ ಈ ಪ್ರತಿಷ್ಠಿತ ತರಬೇತಿ ಸಂಸ್ಥೆ ಕೇಂದ್ರಿತ ಅಧ್ಯಯನದಲ್ಲಿಯೂ

ಶಿಕ್ಷಣ, ಸಾಹಿತ್ಯಗಳೇ ನಿಯೋಗಗಳಾಗಿವೆ. ಅಂದಿನ ಕೃಷ್ಣಾನದಿಯ ದಕ್ಷಿಣ ಮರಾಠಾ ದೇಶವೆನಿಸಿ, ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಪ್ರಸಾರಕ್ಕೆ ಪೂರಕವಾಗಿರುವ ಈ ತರಬೇತಿ ಕೇಂದ್ರ ಅಧ್ಯಯನದ ಕೇಂದ್ರಬಿಂದುವಾಗಿದೆ. ಈ ಕೇಂದ್ರಸ್ಥಾನ ಗಡಿಯನ್ನು ಮೀರಿ ಬೆಳದದ್ದು ಹೇಗೆ? ಅಂದಿನವರ ಪರಿಶ್ರಮ, ಸತತ ಪ್ರಯತ್ನ, ವಿದ್ಯಾರ್ಥಿಗಳ ದಾಖಲಾತಿ, ಅವರನ್ನು ಉಳಿಸಿಕೊಳ್ಳಲು ಮಾಡಿದ ವಿವಿಧ ಕಸರತ್ತುಗಳು, ಶಾಲೆ ತರಬೇತಿ ಕೇಂದ್ರವಾಗಬೇಕಾಗಿ ಬಂದ ಅಗತ್ಯ, ಪರವಿರೋಧ ಪ್ರಸಂಗಗಳು ಇವೇ ಮೊದಲಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವಿಚಾರಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.

ಸ್ವರೂಪ:

ಪ್ರಸ್ತುತ ಕೈಗೊಂಡಿರುವುದುವುದು "ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ್: ಸಾಂಸ್ಕೃತಿಕ ವಿದ್ಯಮಾನ" ಎಂಬ ಅಧ್ಯಯನವಾಗಿದೆ. ಶಾಲಾ ಶಿಕ್ಷಣ ಪ್ರಮುಖವಾಗಿದ್ದಂಥ ಕಾಲದಲ್ಲಿ ಈ ತರಬೇತಿ ಕೇಂದ್ರ ಪ್ರಬಲ ಪ್ರಾಮುಖ್ಯತೆ ಹೊಂದಿದ್ದು, ಉತ್ತರ ಕರ್ನಾಟಕ ಭಾಗದ ಜನರ ಕಣ್ಮಣಿಯಾಗಿ ಮಹತ್ವ ಪಡೆದಿತ್ತು. ಆ ಸಂಧಿಕಾಲದ ತೆವಳುವಿಕೆಯನ್ನು ನೀಗಿ, ಪ್ರಮುಖ ವಾಹಿನಿಗೆ ತಲುಪಿ, ಸ್ವಯಂ ಹೆದ್ದಾರಿಯಾದ ಇತಿಹಾಸ ರೋಚಕವಾದುದು. ಶಿಕ್ಷಕರಿಗೆ ತರಬೇತಿ ಕೊಡುವುದರೊಂದಿಗೆ ಆರಂಭವಾದ ಇದರ ಬೆಳವಣಿಗೆ ಇಲ್ಲಿ ತರಬೇತಿ ಪಡೆದವರೇ ಶಿಕ್ಷಕರಾಗುವ ಅರ್ಹತೆ ಪಡೆಯುವರು ಎಂಬಲ್ಲಿವರೆಗೂ ತಲುಪುವ ಆ ಪರ್ಯಂತದ ಹಾದಿ ಅಸಾಮಾನ್ಯವಾದುದು. ಆರಂಭದಲ್ಲಿ ಓದು-ಬರಹ ಬಲ್ಲವರು ಶಿಕ್ಷಕರಾಗುತ್ತಿದ್ದರು. ಅವರಿಗೆ ಕಲಿಸುವ ಯಾವುದೇ ನಿರ್ಧಿಷ್ಟ ಪಠ್ಯವಾಗಲಿ, ಪದ್ಧತಿಯಾಗಲಿ ಇರಲಿಲ್ಲ. ಇಂಥ ಶಿಕ್ಷಕರಿಗೆ ಮುಂದೊಂದು ದಿನ ತರಬೇತಿ ಪಡೆಯಬೇಕಾಗಿ ಬಂದದ್ದು ತಮ್ಮ ಅಸಮರ್ಥತೆಯನ್ನು ಬಿಂಬಿಸುವಂತಿದೆ, ಇದು ತಮ್ಮ ವೃತ್ತಿ ಜೀವನಕ್ಕೆ ಅವಮಾನ ತರುವಂಥದ್ದು ಎಂದು ಭಾವಿಸಿ ಶಿಕ್ಷಕ ವೃತ್ತಿಯನ್ನೇ ಬಿಟ್ಟು ಹೋದಂಥ ಹಲವಾರು ಉದಾಹರಣೆಗಳು ನಮಗೆ ಸಿಗುತ್ತವೆ. ಹಾಗಾಗಿ ಕೇವಲ ಈ ತರಬೇತಿ ಕೇಂದ್ರದ ಸ್ಥಾಪನೆ, ಉಳಿಸುವಿಕೆ, ಮತ್ತು ಬೆಳೆಸುವಿಕೆ ಮಾತ್ರವಲ್ಲದೆ ಅದನ್ನು ಒಪ್ಪಿಕೊಳ್ಳುವಂತೆ ಮಾಡುವ, ಸ್ವೀಕರಿಸುವ ಧನಾತ್ಮಕ ಮನೋಭಾವವನ್ನು ನಮ್ಮೊಳಗೆ ಮತ್ತು ನಮ್ಮವರೊಳಗೆ ತುಂಬುವುದಿತ್ತಲ್ಲ ಅದು ಅತೀ ದುರ್ಗಮ ದಾರಿಯಾಗಿತ್ತು. ಈ ಚಕ್ರವ್ಯೂಹ ಭೇದಿಸಿ ಹೊರ ಬಂದು, ಅದಮ್ಯವಾಗಿ ಬೆಳೆಸಿದ ರೀತಿ ಅಧ್ಯಯನಯೋಗ್ಯವಾದ ವಿಷಯವೇ ಆಗಿದೆ. ಜೊತೆಗಿದ್ದ ಹೆಬ್ಬಂಡೆಗಳನ್ನು ತಳ್ಳುತ್ತಲೇ ತಾವೂ ಮುಂದೆ ಸಾಗುವ ಆ ಶತಪ್ರಯತ್ನ ಹೊರ ಜಗತ್ತಿಗೆ ವಿಧಿವತ್ತಾಗಿ ಗೊತ್ತಾಗಬೇಕಿರುವುದು ನ್ಯಾಯವಾದುದು. ಈ ನಿಟ್ಟಿನಲ್ಲಿ ಇದರ ಕುರಿತು ಇದುವರೆಗೂ ಸ್ವತಂತ್ರ ಅಧ್ಯಯನಗಳು ನಡೆದಿರುವುದಿಲ್ಲ. ಈ ಕೇಂದ್ರದ ಸಮಗ್ರ ಅಧ್ಯಯನ ಪ್ರಸ್ತುತ ಪ್ರಬಂಧದ ಮುಖ್ಯ ಆಶಯವಾಗಿದೆ.

ಇದನ್ನು ಒಟ್ಟು ಏಳು ಅಧ್ಯಾಯಗಳಲ್ಲಿ ವಿಂಗಡಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮೊದಲನೆಯದಾಗಿ ಅಧ್ಯಯನದ ಸೈದ್ಧಾಂತಿಕ ನೆಲೆಗಳು ಮತ್ತು ಸಮಸ್ಯೀಕರಣ, ಉದ್ದೇಶ, ವ್ಯಾಪ್ತಿ, ವಿಧಾನ, ಮತ್ತು ಸ್ವರೂಪಗಳ ಕುರಿತು ವಿವರಿಸಲಾಗಿದೆ. ಅಖಂಡ ಇತಿಹಾಸದಲ್ಲಿ ಟ್ರೇನಿಂಗ್ ಕಾಲೇಜಿನ ಗುರುತ್ವ ಹೇಗೆ ಆಗಿದೆ ಮತ್ತು ಈ ಕುರಿತು ಆಗಬೇಕಾದ ಅಧ್ಯಯನದ ಅವಶ್ಯಕತೆ ಹಾಗೂ ಈವರೆಗೆ ನಡೆದ ಅಧ್ಯಯನಗಳ ಮಾಹಿತಿಯನ್ನೊಳಗೊಂಡಿದೆ. ಪ್ರಾಥಮಿಕ ಮತ್ತು ಪೂರಕ ಆಕರಗಳಿಂದ ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಿಸಿ, ಅವುಗಳ ಮಹತ್ವ ಹೇಳಲಾಗಿದೆ.

ಸಮಕಾಲೀನ ಪರಿಸರದ ವಸ್ತುಸ್ಥಿತಿಯನ್ನು ತಿಳಿಸುತ್ತ, ಅಂದಿನ ಸಮಕಾಲೀನ ವೈರುಧ್ಯ ಪರಿಸರಗಳು ಪರಸ್ಪರ ಪ್ರಭಾವಕ್ಕೊಳಗಾಗಿ ಸಮೃದ್ಧಗೊಂಡ ಮತ್ತು ಬತ್ತಿಹೋದ ಪರಿಸ್ಥಿತಿಯ ಪರಿಚಯ, ತನ್ಮೂಲಕ ಮೂರನೆಯ ಪರಿಸ್ಥಿತಿಯ ಉದ್ಭವ ಮುಂತಾದವುಗಳ ವಿವರವನ್ನು ಅಧ್ಯಯನದಲ್ಲಿ ತಿಳಿಸಲಾಗಿದೆ. ವಸಾಹತುಪೂರ್ವ ಮತ್ತು ವಸಾಹತೋತ್ತರ ಕಾಲದ ಶೈಕ್ಷಣಿಕ ಪರಿಸ್ಥಿತಿ ಮತ್ತು ಒಳ ಮತ್ತು ಹೊರ ಸಂಘರ್ಷಗಳ ನಡುವೆ ಕನ್ನಡ ಬೆಳೆದ ಬಗೆ ಕುರಿತು ಅಧ್ಯಯನದಲ್ಲಿ ವಿವರಿಸಲಾಗಿದೆ.

ಟ್ರೈನಿಂಗ್ ಕಾಲೇಜಿನ ಪರಿಕಲ್ಪನೆ, ಶೈಕ್ಷಣಿಕ ರಂಗದ ಅನಿವಾರ್ಯತೆ, ಧಾರವಾಡದ ಇತಿಹಾಸ ಮತ್ತು ಪರಂಪರೆ, ಕನ್ನಡ ಶಿಕ್ಷಣ ಜಾಗೃತಿ, ಹೋರಾಟ ಮತ್ತು ಪರಿಣಾಮದ ವ್ಯಾಪ್ತಿ, ಹೋರಾಟ ನಿರೂಪಿಸಿದ ಶೈಕ್ಷಣಿಕ ಶಿಸ್ತು– ಇವುಗಳ ವಿವರವನ್ನು ಅಧ್ಯಯನ ಒದಗಿಸುತ್ತದೆ.

ಅರುಣೋದಯ ಕಾಲದ ಕನ್ನಡ ಸಾಹಿತ್ಯಕ್ಕೆ ಟ್ರೈನಿಂಗ್ ಕಾಲೇಜ್ ಕನ್ನಡ ಪಠ್ಯಸಾಹಿತ್ಯ ರಚನೆ, ಅನುವಾದಗಳು, ಪ್ರಕಟಣೆಗಳು, ಪತ್ರಿಕೆ, ಸಾಂಸ್ಥಿಕ ಸಮನ್ವಯ ಮುಂತಾದುವುಗಳನ್ನು ಕೊಡುಗೆಯಾಗಿ ನೀಡುವುದರೊಂದಿಗೆ ಬೆಳೆಗಾಗಿ ಭೂಮಿ ಹದಗೊಳಿಸಲು ಹೋಗಿ ಅಕ್ಷಯನಿಧಿಯನ್ನೇ ಹೊರತೆಗೆದಂತೆ ಕನ್ನಡ ಸಾರಸ್ವತ ಲೋಕಕ್ಕೆ ಅತ್ಯಮೂಲ್ಯ ಕೃತಿಗಳನ್ನು ಕೊಟ್ಟಿರುವುದರ ವಿವರ ಇಲ್ಲಿದೆ. ಇದರೊಂದಿಗೆ ಸ್ವಾತಂತ್ರ್ಯೋತ್ತರದ ಕಾಲದಲ್ಲಿ ಈ ಮೊದಲಿಗಿಂತ ಹೆಚ್ಚಿನದೇನನ್ನು ಸಾಧಿಸಲು ಸಾಧ್ಯವಾಯಿತು ಎಂಬುದನ್ನೂ ಇಲ್ಲಿ ವ್ಯಾಪ್ತಿಹೊರಗೂ ವಿವರ ನೀಡುತ್ತದೆ. ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಒಂದು ಪತ್ರಿಕೆ ಏನೆಲ್ಲ ಸಾಧಿಸಬಹುದು, ಎಲ್ಲಿವರೆಗೆ ತನ್ನ ಹಸ್ತ ಚಾಚಬಹುದು ಎಂಬುದರ ವಿವರ 'ಪತ್ರಿಕೆ'ಯನ್ನುದ್ದೇಶಿಸಿ ತಿಳಿಸಲಾಗಿದೆ.

ಈ ಅಧ್ಯಯನದ ಫಲಿತ, ಅಭಿಪ್ರಾಯ ಮತ್ತು ಮುಂದಿನ ಸಾಧ್ಯತೆಗಳ ಕುರಿತು ಸಲಹೆ ಸೂಚನೆ ನೀಡುವುದರೊಂದಿಗೆ ವಿವರಿಸಿ, ಉಪಸಂಹಾರ ಮಾಡಲಾಗಿದೆ. ಒಟ್ಟಂದದಲ್ಲಿ ಟ್ರೇನಿಂಗ್ ಕಾಲೇಜಿನ ಅಧ್ಯಯನಕ್ಕೆ ಅವಶ್ಯವಾದ ಚೌಕಟ್ಟನ್ನು ಅಧ್ಯಾಯಗಳಲ್ಲಿ ವಿಂಗಡಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸಾಂಸ್ಕೃತಿಕ ವಿದ್ಯಮಾನವಾಗಿ ಪ್ರಸ್ತುತ ವಿಷಯವನ್ನು ಅಧ್ಯಯನಕ್ಕೆ ತೆಗೆದುಕೊಂಡಿರುವಾಗ ಸಂಸ್ಕೃತಿಯನ್ನು ಯಾವ ದೃಷ್ಟಿಕೋನದಿಂದ ಇಲ್ಲಿ ಪರಿಗಣಿಸಲಾಗಿದೆ ಎನ್ನುವುದನ್ನೂ ಇಲ್ಲಿ ಸಂಕ್ಷೇಪಿಕರಿಸುವುದು ಅಗತ್ಯವೆನಿಸುತ್ತದೆ. ಮಾನವನ, ಬದುಕಿನ, ಸಮಾಜದ, ಊರೆಂಬ ಚಿಕ್ಕ ಘಟಕದಿಂದ ಆರಂಭಿಸಿ ವಿಶ್ವವೆಂಬ ಬೃಹತ್ ಘಟಕದ ವರೆಗೆ ಅನ್ವಯಿಸುವ ಅರ್ಥ ಹೊಂದಿರುವ 'ಸಂಸ್ಕೃತಿ' ತೆಕ್ಕೆಯೊಳಗೆ ಏನೇನಿದೆ? 'ಸಂಸ್ಕೃತಿ' ಎನ್ನುವುದರ ವಿವರಣೆ, ಚೌಕಟ್ಟು, ಬಳಕೆ ಮತ್ತು ಅದರ ಒಡಲು ಏನೇನನ್ನು ಒಳಗೊಂಡಿದೆ ಎಂಬುದನ್ನು ಅವಲೋಕಿಸುತ್ತ ಈ ಅಧ್ಯಯನದಲ್ಲಿ ಅದರ ಯಾವ ಅರ್ಥಕ್ಕೆ ಮಹತ್ವ ನೀಡಲಾಗಿದೆ, ಅದೇ ಹಿನ್ನೆಲೆಯಲ್ಲಿಯೇ 'ಸಾಂಸ್ಕೃತಿಕ' ಎನ್ನುವುದನ್ನು ಹೇಗೆ ಪ್ರಸ್ತುತ ಪಡಿಸಲಾಗಿದೆ ಎಂಬುದನ್ನೂ ಇಲ್ಲಿ ಹೇಳವುದು ಅವಶ್ಯವಾಗಿದೆ.

'ಸಂಸ್ಕೃತಿ' ಎಂದರೇನು? ಎಂದು ಪ್ರಶ್ನಿಸಿಕೊಂಡಾಗ ಅದಕ್ಕೆ ಹಲವಾರು ಸಾಂಪ್ರದಾಯಿಕ ಮತ್ತು ಆಚರಣೆಯಲ್ಲಿರುವ, ಚಲಿತ ವ್ಯಾಖ್ಯಾನಗಳು ಹೊರಡುತ್ತವೆ. 'ಸಂಸ್ಕೃತಿ' ಆದಿ ಮಾನವನಿಂದ ಆಧುನಿಕ ಯಂತ್ರ ಮಾನವನವರೆಗೂ ತನ್ನ ವ್ಯಾಪ್ತಿ ಮತ್ತು ವಿಸ್ತಾರವನ್ನು ಹೊಂದಿದೆ. ಅಂದರೆ ಯಂತ್ರಮಾನವನ ಪ್ರಸ್ತುತತೆಯೊಂದಿಗೆ ಕೊನೆಯಾಯಿತೆಂದಲ್ಲ. ಅದು ನಿತ್ಯ ನಿರಂತರ. ಅನವರತವೂ ಮುಕ್ತವಾಗಿದೆ. ಅದು ಮಾನವ, ಆತನ ವಿಕಾಸ, ಲಿಂಗ, ಸರ್ವ ಜಾತಿ, ಆಚರಣೆ, ಸಂಪ್ರದಾಯ, ಶಿಕ್ಷಣ, ಸಾಹಿತ್ಯ ಮುಂತಾದ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸುಧಾರಣೆ, ಸಂಘರ್ಷ, ಸಮೃದ್ಧಿ, ಏಳುಬೀಳು, ತಾರತಮ್ಯ, ಹಿಂಬೀಳಿಕೆ ಎಲ್ಲವನ್ನೂ ವಿವರಿಸುತ್ತ ಹೋಗುತ್ತದೆ. ಅದರಲ್ಲಿ ಬೇಲೂರು ನರ್ತಕಿಯರೂ, ದೇವ ಅಧಿದೇವತೆಗಳೂ ಇದ್ದಾರೆ, ಗ್ರಾಮ್ಯ ದುರುಗವ್ವ ದ್ಯಾಮವ್ವರೂ ಇದ್ದಾರೆ, ಸಾಕ್ಷರದ ವಿರಾಟ್ ರೂಪವೂ ಇದೆ; ನಿರಕ್ಷರದ ಸತ್ಯ ದರ್ಶನವೂ ಇದೆ. ನೈಸರ್ಗಿಕ ಮತ್ತು ಸಾಂಸರ್ಗಿಕವಾದ ಎಲ್ಲ ಅವತಾರ, ಅಪರಾವತಾರಗಳೂ ಸಂಸ್ಕೃತಿಯಲ್ಲಿ ಇವೆ. ಸುಂದರ, ಸುಶೀಲ, ಸುಸ್ಥಿತಿಯ, ಶಿಸ್ತಿನ, ನಯನಾಜೂಕಿನ ಕ್ರಮಗಳೇ ಸಂಸ್ಕೃತಿಯ ಭಾಗವಲ್ಲ. ಪರದೆಯ ಮುಂದಿನ ಬಣ್ಣಲೇಪನದ ಸಾಕಾರ ರೂಪದರ್ಶನದೊಂದಿಗೆ ಪರದೆಯ ಹಿಂದಿನ ಚಿಂದಿ, ಹರಕು, ನೋವು, ವ್ಯಥೆ, ಕೊರತೆ, ವಿಕಾರಗಳೂ ಸಂಸ್ಕೃತಿಯ ಭಾಗವೇ ಆಗಿವೆ. ಅವನ್ನೂ ಇಲ್ಲಿ ಪರಿಗಣಿಸಲಾಗಿದೆ.

'Culture' ಎಂಬ ಶಬ್ದದ ಸಂವಾದಿಯಾಗಿ ಕನ್ನಡದಲ್ಲಿ 'ಸಂಸ್ಕೃತಿ' ಎಂಬ ಪದವನ್ನು ಬಳಸಲಾಗುತ್ತಿದೆ ಎಂಬುದು ಸರ್ವ ವಿಧಿತ. ಇದರರ್ಥ 'cult' ಅಥವಾ 'cults' ಅಂದರೆ ಆರಾಧನೆ, ಭಕ್ತಿ, ಉಪಾಸಣೆ ಎಂಬೆಲ್ಲ ಅರ್ಥ ಹೊಂದಿದೆ. ಡಿ ವಿ ಗುಂಡಪ್ಪನವರು ಅರ್ಥೈಸುವಂತೆ ಈ ಆರಾಧನೆ ದೇವತೆಗಳದ್ದಾಗಿರಬಹುದು ಅಥವಾ ಭೂಮಿಯದ್ದಾಗಿರ–ಬಹುದು. ಅಂದರೆ ಕೃಷಿ, ಬೇಸಾಯ ಮಾಡುವುದೂ ಒಂದು ಆರಾಧನೆಯಾಗಿದೆ. ಅಷ್ಟೇ ಏಕೆ ಬದುಕಿನ ಆರಾಧನೆ, ಒಲವಿನ ಆರಾಧನೆ, ಮಮತೆಯ ಆರಾಧನೆ, ಇರುವಿನ ಆರಾಧನೆ, ಜೀವನಾರಾಧನೆ– ಈ ಎಲ್ಲವುಗಳೂ ತನಗೆ ಬೇಕಾಗಿ ಅವುಗಳೊಂದಿಗೆ ಹೊಂದುವ ತಾದಾತ್ಮ್ಯದ ಪ್ರಕ್ರಿಯೆಯಾಗಿ, ಬಾಹ್ಯರೂಪದಲ್ಲಿ ಹೊರಹೊಮ್ಮುವ, ಹೊರಗಾಣುವ ಕ್ರಿಯಾರೂಪವೇ ಸಂಸ್ಕೃತಿ ಎನಿಸಿದೆ. ಉಪಯುಕ್ತ, ಪ್ರಯೋಜನಾತ್ಮಕ ಭೌತಿಕ ಪ್ರಪಂಚದ ಸೌಲಭ್ಯಗಳು ಇದಕ್ಕೆ ಇಂಬುಗೊಡುತ್ತದೆ. ಇದು ಆದರ್ಶ

ಸೂಚಕವಾಗಲಿ, ತೃಪ್ತಿದಾಯಕವಾಗಲಿ ಇರಬೇಕೆಂದೇನೂ ಇಲ್ಲ. ಅದು ಇದ್ದಂತೆ ಕಾಣಬೇಕು ಅಷ್ಟೇ. ಅದಕ್ಕೆ ನಾವು ಹೀಗೆಯೇ ಇರಬೇಕೆಂದು ವಿಧಿಸುವುದಲ್ಲ; ಇದ್ದಂತೆ ಸ್ವೀಕರಿಸಬೇಕು ಮತ್ತು ಅದೇಂಥಹ ಸಂಸ್ಕೃತಿ ಎಂಬುದನ್ನು ಹೆಸರಿಸಬೇಕೇ ಹೊರತು ಮೊದಲೇ ವಿಧಿಸಲಾಗದು. ಎಂ.ಎಂ.ಕಲಬುರ್ಗಿಯವರು "Culture' ಎಂಬುದಕ್ಕೆ 'ಸಂಪ್ರದಾಯ' ಪದವನ್ನು ಬಳಸುವುದು ಯೋಗ್ಯವೆನಿಸುತ್ತದೆ'[೫] (ಸಂಸ್ಕೃತಿ–ವಿಕೃತಿ ಡಾ.ಎಂ.ಎಂ.ಕಲಬುರ್ಗಿ ೨೦೦೬, 'ಮೊದಲ ಮಾತು') ಎಂದದ್ದೂ ಇದೇ ಹಿನ್ನೆಲೆಯಲ್ಲಿಯೇ. ಮೊಟ್ಟಮೊದಲ ಬಾರಿಗೆ ಸಂಸ್ಕೃತಿಯ ಜನಾಂಗೀಯ ಹಿನ್ನೆಲೆಯಲ್ಲಿ ಎಡ್ವರ್ಡ ಬರ್ನೆಟ್ ಟೈಲರ್ (೧೮೩೨–೧೯೧೭)ಎಂಬ ಮಾನವ ಶಾಸ್ತ್ರಜ್ಞ, ತನ್ನ ಸುಪ್ರಸಿದ್ಧ ಗ್ರಂಥ 'Primitive Culture'ನಲ್ಲಿ ಸಂಸ್ಕೃತಿ ಎಂದರೆ "ಜ್ಞಾನ, ನಂಬಿಕೆ, ಕಲೆ, ನೀತಿಗಳು, ಕಾನೂನು, ರೂಢಿ ಮತ್ತು ಮಾನವ ಸಮಾಜದ ಸದಸ್ಯನಾಗಿದ್ದುಕೊಂಡೇ ಸಾಧಿಸಿದ ಇತರ ಸಾಮರ್ಥ್ಯ, ನೈಪುಣ್ಯಗಳನ್ನೂ ಒಳಗೊಂಡಿರುವ ಅಖಂಡವಾದ ಒಂದು ಸಂಕೀರ್ಣ ಪ್ರಕ್ರಿಯೆ"[೬] ಎಂದಿದ್ದಾರೆ. ಈ 'ಅಖಂಡ'ಮತ್ತು 'ಸಂಕೀರ್ಣ'ವಾಗಿ, ಸಹಜವಾಗಿ ಎಲ್ಲ ಆಯಾಮಗಳಿಂದಲೂ ಸಾಧ್ಯವಾಗುವ ಅಥವಾ ಸಂಭವಿಸುವ ಪ್ರಕ್ರಿಯೆಯನ್ನು ಸಂಸ್ಕೃತಿ ಎಂದು ಇಲ್ಲಿ ಹೇಳಲಾಗಿದ್ದರೂ ಅದನ್ನು ಸೀಮಿತವಾಗಿ ಪರಿಭಾವಿಸಿ, ಸಮಾಜದ ಒಳ್ಳೆಯ, ಶಾಂತ, ಧನಾತ್ಮಕ, ಬೆಳೆದ, ಗರತಿಭಾವಗಳು ಮಾತ್ರ ಸಂಸ್ಕೃತಿ, ಸಂಸ್ಕಾರ ಹೊಂದಿದವುಗಳು ಎಂದು ಪರಿಗಣಿಸಲಾಗುತ್ತಿತ್ತು. ಉತ್ತಮ ಫಲಿತಾಂಶ ಪಡೆದು, ನೌಕರಿ ಹಿಡಿದು, ಉನ್ನತ ಹುದ್ದೆಗೇರಿ, ಶ್ರೀಮಂತನಾಗಿ, ಹತ್ತು ಹಲವಾರು ಸಂಘ ಸಂಸ್ಥೆಗಳ ಅಧಿಕಾರ ಪಡೆದು, ಕಾರ್ಯಕ್ರಮಗಳಲ್ಲಿ ಮುಂದೆ ಇದ್ದುದಾದರೆ ಅದೊಂದು ರೀತಿಯಲ್ಲಿ ಪ್ರಸಿದ್ಧ, ಜನಪ್ರಿಯ ಸಂಸ್ಕೃತಿ. ಅವೆಲ್ಲವುಗಳೊಂದಿಗೆ ಜನಪ್ರಿಯಗೊಳ್ಳದ, ಉಪೇಕ್ಷಿತ, ನಿರ್ಲಕ್ಷಿತ, ಪ್ರಮೇಯಗಳೂ ಇದ್ದವು. ಆದಾಗ್ಯೂ ಅವುಗಳು ಸಂಸ್ಕೃತಿಯಲ್ಲಿ ಸ್ಥಾನ ಪಡೆದಿರಲಿಲ್ಲ. ಹಾಗಾದರೆ ಅವು ಸಮಾಜದಲ್ಲಿ ಇರಲಿಲ್ಲವೇ? ಎಂದರೆ ಅಂಥವೂ ಇದ್ದವು ಮತ್ತು ಇವೆ. ಅವನ್ನೆಲ್ಲ ಒಳಗೊಳಿಸಿಕೊಂಡೇ ನಿರ್ಮಿತಿಗೊಂಡಂಥಹ ಸಂಸ್ಕೃತಿಯನ್ನು ತಿಳಿಸುವುದೇ ಈ ಅಧ್ಯಯನದ ಉದ್ದೇಶ.

ಶಾಂತಕವಿಗಳ 'ಕನ್ನಡದ ಜೋಳಿಗೆ' ಮತ್ತು ರೊದ್ದರಾಯರ 'ಮಹಾವಿದ್ಯೆಯ ಜೋಳಿಗೆ' ಇವುಗಳ ಸಂಸ್ಕೃತಿ ಮುಂದುವರೆಯಲೇ ಇಲ್ಲ. ಅವು ಒಡ್ಡಲು ಮುಂದೆಂದೂ ಸಿದ್ಧವಾಗಲೇ ಇಲ್ಲ. ಅಂದು ಒಡ್ಡಿದ ಅದೇ ಜೋಳಿಗೆಗಳು ಎತ್ತಿದ ಭಿಕ್ಷೆಯಿಂದಲೇ ಇಂದು ನಾವು ಪಡೆದ, ಕೊಡುತ್ತಿರುವ ಅಕ್ಷರ ದಾಸೋಹ ಮತ್ತು ಕನ್ನಡದ ದಾಸೋಹ ಸಾಧ್ಯವಾಗಿರುವುದು. ಆದರೆ ಇದನ್ಯಾರು ನೆನೆಯುವುದೂ ಇಲ್ಲ. ನಮ್ಮ ಕುಟುಂಬದ ಹಿರಿಯರ ಯಶೋಗಾಥೆಗಳನ್ನ ಸ್ಮರಿಸಲು ಪಕ್ಕದ ಮನೆಯವರು ಹೇಳಬೇಕೆ? ನಾವೆಲ್ಲ ಕನ್ನಡ ಕುಟುಂಬಿಗಳಲ್ಲವೆ? ಈ ತಳಮೂಲದ ಕಾರ್ಯಕ್ಷಮತೆಯನ್ನು ನಿರ್ಲಕ್ಷಿಸಿ, ಬೇಕಾದದ್ದನ್ನಷ್ಟೇ ವೈಭವೀಕರಿಸುವ ಮತ್ತು ಅದನ್ನು ಸಮರ್ಥಿಸಿಕೊಳ್ಳುವವನ ಸಾಮರ್ಥ್ಯದ ಮೇಲೆ ಇಂದಿನ ಸಂಸ್ಕೃತಿಯ ವ್ಯಾಖ್ಯಾನ ನಿಂತಿದೆ. 'ಕನ್ನಡದ ಜೋಳಿಗೆ' ಅಥವಾ 'ಮಹಾವಿದ್ಯೆಯ ಜೋಳಿಗೆ' ಒಡ್ಡಿದ್ದು ಕೇವಲ ಆ ವ್ಯಕ್ತಿಯ ವೈಯಕ್ತಿಕ

ಸಂಸ್ಕೃತಿಯಲ್ಲ. ಅದೊಂದು ಸಾಮಾನ್ಯೀಕರಣಗೊಂಡ 'ಅಕ್ಷರ ಸಂಸ್ಕೃತಿ'ಯಾಗಿದ್ದರೂ ಇದನ್ನು ಯಾರೂ ಅನುಸರಿಸಲಿಲ್ಲ. ನೌಕರಶಾಹಿ ಸಂಸ್ಕೃತಿಯಿಂದಾಗಿ, ಆಡಳಿತಗಳ ವೈಪರೀತ್ಯದಿಂದಾಗಿ, ಸ್ವತಂತ್ರವಾದ ಮೇಲೆ ಅಥವಾ ಪ್ರತ್ಯೇಕವಾದ ಮೇಲೆ ಕನ್ನಡದ, ಶಿಕ್ಷಣದ ಜವಾಬ್ದಾರಿ ಸರಕಾರದ್ದು ಎಂಬ ಮನೋಭಾವ ಬೆಳೆದು ವೈಯಕ್ತಿಕ ಕೊಡುಗೆಗಳು ಕೇವಲ ಮಾತು, ಭಾಷಣ, ಬರಹ, ವಿಮರ್ಶೆ, ವಿಶ್ಲೇಷಣೆಗಳಿಗೆ ಸೀಮಿತವಾದವು. ಬೇಡು-ಕೊಡುವ ಅಭಿಮಾನಧನ ಸ್ವಭಾವಗಳು ಸಾರ್ವತ್ರಿಕಗೊಳ್ಳಲಿಲ್ಲ. ಅದು ಉತ್ತಮ ಸಂಸ್ಕೃತಿ ಏನಿಸಲಿಲ್ಲ. ಸರಕಾರದ ಸಹಾಯವೇ ಇದೆಯಲ್ಲ... ಸರಕಾರವೇ ಬ್ಯಾಂಕ ಖಾತೆಗಳಿಗೆ ಲಕ್ಷ್ಯ, ಕೋಟಿಗಟ್ಟಲೇ ಸುರಿಯುವಾಗ ಜೋಳಿಗೆ ಒಡ್ಡುವುದೆಲ್ಲಿಂದ ಬಂತು? ಜಾತ್ರೆಗಳಾಗಿವೆ ಸಮ್ಮೇಳನಗಳು! ಇದೂ ಒಂದು ರೀತಿಯ ಸಂಸ್ಕೃತಿಯೇ. ಈ ಸಂಸ್ಕೃತಿಯ ಪರಿವರ್ತನೆಯ ಪರಿಕ್ರಮಣವನ್ನು, ಭಿನ್ನಗೊಂಡ ಸಂಸ್ಕೃತಿಯ ಸ್ಥಿತಿಗತಿಯನ್ನು ಇಲ್ಲಿ ಮನದಟ್ಟು ಮಾಡುವ ಪ್ರಯತ್ನ ಮಾಡಲಾಗಿದೆ.

ಸ್ವಂತಕ್ಕೆ ಭಾರತೀಯರೇ ಆಗಿದ್ದರೂ ವಸಾಹತುಶಾಹಿಗಳ ವೇಷಭೂಷಣ, ಅವುಗಳ ತಯಾರಿಕೆ, ಬೇಕಾದ ಕಚ್ಚಾ ವಸ್ತು, ಮಾತು, ಕಲಿತ ಶಿಕ್ಷಣ, ನಮ್ಮನ್ನ ಮತ್ತು ನಮ್ಮ ಜೀವನವನ್ನು, ಸಮಾಜವನ್ನು, ಸಾಹಿತ್ಯವನ್ನು, ಅದನ್ನು ಗ್ರಹಿಸುವ ರೀತಿಯನ್ನು ಪ್ರತಿಯೊಂದನ್ನೂ (ಆಜ್ಞೆ ಪಾಲನೆಗಿಂತ ಹೆಚ್ಚಾಗಿ ಮರುಳಾಗಿ) ಅನುಸರಿಸಿ, ಅನುಕರಿಸಿ ಬದುಕಿದರು. ಇದರಿಂದಾಗಿ ದೇಹ ಮಾತ್ರ ಭಾರತೀಯನದ್ದು, ಬಟ್ಟೆಬರೆ, ಬದುಕುವ ರೀತಿಗಳೆಲ್ಲ ಪರಕೀಯ; ಇವು ಪರಸ್ಪರ ಒಂದನ್ನೊಂದು ಒಪ್ಪಿ, ಅಪ್ಪಿ, ಅವಲತ್ತುಕೊಂಡೇ ಸಾಗುವುದರಿಂದ ಅವುಗಳು ಒಂದರ ಮೇಲೆ ಇನ್ನೊಂದು ಪರಿಣಾಮ ಬೀರಿವೆ. ಈ ಬಾಹ್ಯ ಮತ್ತು ಆಂತರಿಕ ಪರಿವರ್ತನೆಗಳು ಪರಸ್ಪರ ಒಂದನ್ನೊಂದು ಪ್ರಭಾವಿಸುವ ಪರಿಯನ್ನು ವಿಮರ್ಶಿಸುವ, ವಿಶ್ಲೇಷಿಸುವಲ್ಲಿ ಭಾರತೀಯತೆಯ ಅಥವಾ ಪಾಶ್ಚಾತ್ಯತೆಯ, ಪರವಾಗಿ ಅಥವಾ ವಿರೋಧವಾಗಿ ಹೇಳುವ ಪ್ರಶ್ನೆ ಉದ್ಭವಿಸದು. ನಡೆದದ್ದನ್ನು, ಇದ್ದದ್ದನ್ನು ಹೇಳುತ್ತ ಹೋಗುವುದೇ ಅಂದಿನ ಆ ಸಂಸ್ಕೃತಿಯ ಚಿತ್ರಣದ ಪ್ರಸ್ತುತತೆಯಾಗಿದೆ.

೧.೫. ಟ್ರೇನಿಂಗ್ ಕಾಲೇಜ್: ಇದುವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಪ್ರಸ್ತಾವನೆ:

ಟ್ರೇನಿಂಗ್ ಕಾಲೇಜ್ ಉತ್ತರ ಕರ್ನಾಟಕ ಭಾಗದ ಪ್ರಥಮ ಶಿಕ್ಷಣ ಸಂಸ್ಥೆಯಾದ್ದರಿಂದ ಆ ಕುರಿತು ಅಲ್ಲಲ್ಲಿ, ಆಗಾಗ ಕೆಲವು ಬರಹ, ಲೇಖನ, ಅಧ್ಯಯನಗಳು ನಡೆದಿವೆ. ಮತ್ತು ಸಾಹಿತ್ಯ ಚರಿತ್ರೆಯಲ್ಲಿ ಸಾಂದರ್ಭಿಕವಾಗಿ, ಪ್ರಾಸಂಗಿಕವಾಗಿ ಉಲ್ಲೇಖಗಳನ್ನು ಮಾಡಲಾಗಿದೆ. ಇತಿಹಾಸ ಗೊತ್ತಿಲ್ಲದೆ ಭವಿಷ್ಯ ರೂಪಿಸಲಾಗದು. ಇತಿಹಾಸದ ಹೆಜ್ಜೆ ಮೇಲೆ ಹೆಜ್ಜೆ ಊರಿಯೇ ಅಧ್ಯಯನದ ದಾರಿ ಸಾಗಬೇಕು. ಈ ಮೊದಲು ರಚನೆಗೊಂಡ ಹಲವಾರು ಕೃತಿಗಳು ನಮ್ಮ ಮುಂದಿವೆ. ಈ ಅಧ್ಯಯನಗಳನ್ನು ಎರಡು ರೀತಿಯಲ್ಲಿ ವಿಭಜಿಸಿ ಅವಲೋಕಿಸಬಹುದು: ಒಂದು ಅಂಶಿಕ

ಅಧ್ಯಯನ; ಇನ್ನೊಂದು ಸಮಗ್ರ ಅಧ್ಯಯನ. ಈ ದೃಷ್ಟಿಕೋನದಿಂದ ನೋಡಿದಾಗ ಅಲ್ಲಲ್ಲಿ ವ್ಯಕ್ತಿ ಚಿತ್ರಣಗಳು ಆಂಶಿಕವಾಗಿ ಮೂಡಿಬಂದಿವೆ. ಡೆ.ಚೆನ್ನಬಸಪ್ಪನವರ ಜೀವನ ಮತ್ತು ಸಾಧನೆ ಕುರಿತ ಸಮಗ್ರ ಅಧ್ಯಯನ ಶ್ರೀ ಶಿಗಿಹಳ್ಳಿಯವರ ಸಂಶೋಧನಾ ಪ್ರಬಂದ.

ಒಟ್ಟಂದದಲ್ಲಿ ಟ್ರೇನಿಂಗ್ ಕಾಲೇಜು ಮತ್ತದರ ತೆಕ್ಕೆಯೊಳಗೆ ಒಳಗೊಳುವ ಎಲ್ಲರ, ಎಲ್ಲದರ ಕುರಿತು ಇದುವರೆಗೂ ಮಾಡಿದ ಅಧ್ಯಯನಗಳನ್ನು, ಗ್ರಂಥ, ಪ್ರಬಂಧ ಮತ್ತು ಲೇಖನಗಳನ್ನು ಪ್ರಸ್ತುತ ಪ್ರಬಂಧದ ವಿಷಯದ ನೆಲೆಯಲ್ಲಿ ಒಮ್ಮೆ ಪುನರಾವಲೋಕಿಸಲಾಗಿದೆ. ಅವುಗಳ ತಾತ್ವಿಕ ವಿಶ್ಲೇಷಣೆ ಈ ಮುಂದಿನಂತಿದೆ:

೧. ಡೆ.ಚೆನ್ನಬಸಪ್ಪನವರು ಜೀವನ ಮತ್ತು ಸಾಧನೆ: ಲೇಖಕಕರು ಬಾಳಣ್ಣ ಶಿಗೀಹಳ್ಳಿ.

ಇದು ೧೯೯೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾಧರ ಪಡಿಸಿದ ಮಹಾಪ್ರಬಂಧ. ಶಿಕ್ಷಣ ಚರಿತ್ರೆಯಲ್ಲಿ ಆದ್ಯರು ಎಂದೇ ಪ್ರಸಿದ್ಧರಾದ, ಅದುವರೆಗೂ ಯಾರೂ ಗಮನ ಹರಿಸದಿದ್ದ ಒಬ್ಬ ನಿರ್ಮಾತೃನನ್ನು ಕುರಿತು, ಒಬ್ಬ ಲೇಖಕ, ಸುಧಾರಕ, ಕಾರ್ಯಕರ್ತನ ಜೀವನ ಮತ್ತು ಸಾಧನೆ ಕುರಿತು ಮಾಡಿದ ಸಂಶೋಧನೆ ಇದಾಗಿದೆ.

ಡೆಪ್ಯೂಟಿ ಚೆನ್ನಬಪ್ಪನವರಂತ ಹಿರಿಯ ಸಮಾಜ ಜೀವಿಯನ್ನು ಕುರಿತು ಸಂಶೋಧನೆ ನಡೆಸುವುದಾಗಲಿ, ಸಾಮಗ್ರಿ ಸಂಗ್ರಹಿಸುವುದಾಗಲಿ ಕವಿ, ಕೃತಿ, ಕಲಾವಿದರನ್ನು ಕುರಿತು ನಡೆಸುವ ಸಂಶೋಧನೆಗಿಂತ ತುಂಬ ಕಷ್ಟದ್ದು. ಯಾವುದೇ ಸಮಾಜ, ತನ್ನ ನಾಡಿನ ಕವಿ-ಕಲಾವಿದರನ್ನು ನೆನಪಿಡುವಂತೆ, ಅವರ ಬಗೆಗೆ ಆಸಕ್ತಿಯನ್ನು ತೋರುವಂತೆ, ಶಿಕ್ಷಣ, ವ್ಯಕ್ತಿಗಳನ್ನು ನೆನಪಿನಲ್ಲಿಡುವುದು ಮತ್ತು ಆಸಕ್ತಿಯನ್ನು ತೋರುವುದು ತೀರ ವಿರಳ. ಹಾಗೆ ನಾಡಿಗಾಗಿ ಜೀವ ತೇಯ್ದ ವ್ಯಕ್ತಿಗಳು ಸಮಾಜದ ಮರೆಯಾಗಿ ಹೊಗುವುದೇ ಹೆಚ್ಚು. ಅಂಥ ಚೇತನಗಳ ಋಣವನ್ನು ಉಣ್ಣುತ್ತಿರುವಾಗಲೇ ಅವರನ್ನು ಮರೆತು ಬಿಡುವುದು ನಮ್ಮ ಸಾಮಾಜಿಕ ಸಂರ್ಭದಲ್ಲಿ ಒಂದು ಆಶ್ಚರ್ಯಕರವಾದಂತ ದುರಂತ. ನಮ್ಮ ಜನ ಅಂಥವರ ಬದುಕನ್ನು ಪುರಾಣ ಮಾಡಿಯಾರೇ ಹೊರತು ಚರಿತ್ರೆಯನ್ನಾಗಿ ಸ್ವೀಕರಿಸುವುದಿಲ್ಲಾ. ಇದರಿಂದಾಗಿ ಒಬ್ಬ ಕವಿ, ಕಲಾವಿದನ ಬಗೆಗೆ ದಾಖಲೆಗಳು, ವಿವರಗಳು ಉಳಿದುಕೊಂಡು ಬರುವುದಿಲ್ಲ. ಇಂಥ ಸವಾಲುಗಳನ್ನು ಮುಂದಿಟ್ಟುಕೊಂಡು ಈ ಅಧ್ಯಯನ ಕೈಗೊಳ್ಳಲಾಗಿದೆ.

ಈ ಪ್ರಬಂಧ ಒಟ್ಟು ವಿಷಯವನ್ನು ೧.ಅಧ್ಯಯನದ ಅಗತ್ಯ-ಆಕರ ಸ್ವರೂಪ, ೨.ಸಮಕಾಲೀನ ಪರಿಸರ-ಒಂದು ನೋಟ ೩.ಚೆನ್ನಬಸಪ್ಪನವರ ಜೀವನ ೪.ಚೆನ್ನಬಸಪ್ಪನವರ ಕಾರ್ಯ ಮತ್ತು ಸಾಧನೆ ೫.ಚೆನ್ನ್ನಬಸಪ್ಪನವರ ಬರವಣಿಗೆ,ಅವರು ಕಟ್ಟಿದ ಕನ್ನಡ ಬಳಗ, ೬.ಚೆನ್ನಬಸಪ್ಪನವರನ್ನು ಕುರಿತ ಸಾಹಿತ್ಯ, ೭.ಚೆನ್ನಬಸಪ್ಪನರ ವ್ಯಕ್ತಿತ್ವ-ಧೋರಣೆ-ಹೀಗೆ ಏಳು ಅಧ್ಯಾಯಗಳಲ್ಲಿ ವಿಷಯವನ್ನು ವಿಂಗಡಿಸಿಕೊಂಡು, ಮೂಲ ಸತ್ವದ ಯಾವ ಅಂಶವೂ ನುಸುಳಿಕೊಂಡು ಹೋಗದಂತೆ ತುಂಬ ಕಾಳಜಿ ವಹಿದ್ದಾರೆ. ವಿಷಯ ನಿರೂಪಣೆಯಲ್ಲಿ

ತಾದಾತ್ಮ್ಯವನ್ನು ಸಾಧಿಸಿಯೂ, ಅದರಲ್ಲಿಯೇ ತೇಲಿಹೋಗದೆ ಅದನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತ ಹೋಗಿದ್ದಾರೆ.

ಒಂದನೆಯ ಅಧ್ಯಾಯ ಸವಾಲಾಗುವ ಅನಿವಾರ್ಯತೆ ಮತ್ತು ಅಗತ್ಯತೆಗಳ ಜಾಡು ಹಿಡಿದು ಆಕಾರಗಳನ್ನು ಹುಡುಕಿ, ಜಾಲಾಡಿಸಿದ ಪರಿ ಮತ್ತು ಶೂನ್ಯಗಳ ನಡುವೆ ನಿಂತು, ಗುರಿ ಹೂಡಿದ ಎದೆಗಾರಿಕೆ ಕುರಿತು ಹೇಳುತ್ತಾರೆ ಸಂಶೋಧಕರು.

ವಿಜಯನಗರ ಸಾಮ್ರಾಜ್ಯದ ಪತನಾನಂತರ ಕರ್ನಾಟಕದಲ್ಲಿ ತಲೆದೋರಿದ ಹಲವು ರಾಜಕೀಯ ವಿಪ್ಲವಗಳಿಂದಾಗಿ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ–ಹೀಗೆ ಎಲ್ಲ ರಂಗಗಳಲ್ಲಿಯೂ ವಿಗತಿ ತಲೆದೋರಿ ಇಡೀ ಜನಾಂಗದ ಬದುಕು ಸತ್ವಹೀನವಾಯಿ–ತೆಂಬುದನ್ನು ವಿವರಿಸಿ ಹೇಳುವ ಮೂಲಕ, ಡೆಪ್ಯೂಟಿ ಚೆನ್ನಬಸಪ್ಪನವರು ಸ್ವಯಂಪ್ರೇರಣೆಯಿಂದ ಸಮಾಜದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪೂರ್ವರಂಗವೊಂದು ಹೇಗೆ ನಿರ್ಮಾಣಗೊಂಡಿತ್ತೆಂಬುದನ್ನು ತೋರಿಸಿಕೊಡುವ ಪ್ರಯತ್ನ ಮಾಡಿದ ಬಗೆಯನ್ನು ಇಲ್ಲಿ ಅವಲೋಕಿಸಲಾಗಿದೆ.

ಅಧ್ಯಾಯ ೨ ರಲ್ಲಿ ಡೆ.ಚೆನ್ನಬಸಪ್ಪನವರು ಕನ್ನಡ ನೆಲದ ಕೈಂಕರ್ಯ ಕೈಗೊಳ್ಳಲು ಆಖಾಡಕ್ಕೆ ಇಳಿಯುವ ಮುನ್ನ ಇಲ್ಲಿ ಕ್ಷೇತ್ರ ನಿರ್ಮಾಣವಾಗಿದ್ದರೂ ಯಾವುದೂ ಸಿದ್ಧಸ್ಥಿತಿಯಲ್ಲಿ ಇರಲಿಲ್ಲ ಎಂಬುದನ್ನು ವಿವರಿಸಲಾಗಿದೆ. ಸಮಕಾಲೀನ ಪರಿಸರದ ಆ ಕಾಲದ, ಆ ಸ್ಥಿತಿಯ ಮತ್ತು ಆ ನೆಲದ ಬೇಡಿಕೆ ಏನಿತ್ತು ಮತ್ತು ನಿಜವಾಗಿಯೂ ಕಾರ್ಯಕ್ಷೇತ್ರದಲ್ಲಿ ಏನೂ ನಡೆಯುತ್ತಿತ್ತು ಎಂಬುದನ್ನು ವಿಶ್ಲೇಷಿಸುತ್ತ ಹೋಗುತ್ತಾರೆ.

ತಾಳಿಕೋಟೆ ನಿರ್ಣಾಯಕ ಯುದ್ಧದಲ್ಲಿ (ಕ್ರಿ.ಶ.೧೫೬೫) ವಿಜಯನಗರ ಪತನಾನಂತರ ಕರ್ನಾಟಕ ಹೋಳುಹೋಳಾಗಿ, ತನ್ನೊಳಗೆ ಶಿಥಿಲಗೊಂಡು, ಮರಾಠಾರಾಜ್ಯಶಕ್ತಿ ಪ್ರವೇಶಗೊಳ್ಳಲು ರಾಜಮಾರ್ಗ ನಿರ್ಮಿಸಿ, ಕನ್ನಡಿಗರು ಯಾರ ಒತ್ತಾಯವಿಲ್ಲದೆಯೇ ಮರಾಠಿ ಭಾಷೆ ಸ್ವೀಕರಿಸಿದ್ದನ್ನು ಚರ್ಚಿಸುತ್ತಾ ಹೋಗುತ್ತಾರೆ. ಪರಕೀಯ ಮುಸ್ಲಿಂಸಂಸ್ಕೃತಿಯು ಹೇರುವಿಕೆ ಏನಿಸುತ್ತಿದ್ದರೆ ಮರಾಠಿ ಸ್ವಕೀಯವಾಗಿ ಕನ್ನಡಿಗರ ಅಂಗಳದ ಪ್ರೀತಿಯ ಕೂಸಾದ ಬಗೆಯನ್ನು ಕುರಿತು ವಿಶ್ಲೇಷಿಸುತ್ತಾರೆ. ಮರಾಠಿ ಮತ್ತು ಮುಸ್ಲಿಂ ಆಡಂಬೋಲವಾಗಿದ್ದ ಉತ್ತರಕರ್ನಾಟಕಕ್ಕೆ ಕನ್ನಡ ಪಸರಿಸುವ ಎಡೆಯೇ ಇರಲಿಲ್ಲ. ಪೆಶ್ವೇಯರ ಹಿಡಿತದಲ್ಲಿ ಕರ್ನಾಟಕ ಹರಿದು ಹಂಚಿಹೋಗಿ ಕನ್ನಡಕ್ಕೆ ದುರ್ದೆಶೆ ಆರಂಭಗೊಂಡಿತ್ತು. ಕನ್ನಡ ನಾಡು ಛಿದ್ರಗೊಂಡ ಸಂದರ್ಭದಲ್ಲಿ ಪೋರ್ಚುಗೀಜ, ಡಚ್ಚ, ಇಂಗ್ಲೀಷರು ಒಳ ನುಸುಳಿ–ಸ್ವದೇಶದ ಇಬ್ಬರ ಜಗಳದಲ್ಲಿ ಪರದೇಶಿಯ ಮೂರನೆಯವನಿಗೆ ಇಂಗ್ಲೀಷ ಭಾಷೆಯನ್ನು ಹರಡಲು ಸದಾವಕಾಶ ಒದಗಿಸಿದಂತಾಗಿತ್ತು. ಮರಾಠಿಗಳಿಂದ ಬಿಡುಗಡೆ ಹೊಂದುವ ಕನವರಿಕೆಯಲ್ಲಿ ಬ್ರಿಟಿಷರಿಗೆ ಮನೆ ಹಾಕಿದ್ದು ಕನ್ನಡಿಗರಿಗೆ ಗೊತ್ತಾಗಲೇ ಇಲ್ಲ. 'ನಿಧಾನದ ವಿಷ' ಕುಡಿಸಿದಂತೆ ಬ್ರಿಟಿಷರ ಆಡಳಿತದೊಂದಿಗೆ ಭಾಷೆ, ಸಂಸ್ಕೃತಿ ಹರಡತೊಡಗಿತು.

ಆಡಳಿತ ಬ್ರಿಟಿಷರ ವಶವಾದರೂ ಪೇಶ್ವೆಯರು ಕನಾಟಕದ ನೆಲವನ್ನು ಕಾಯಿಪಲ್ಲೆಯಂತೆ ಹಂಚಿಕೊಂಡು ತಮ್ಮ ಸ್ವಾರ್ಥ ಸಾಧಿಸಿಕೊಂಡರು. ಇವರ ಸ್ವ ಲಾಭದ ಮುಂದೆ ಯಾವ ಭೂಮಿ ಎಲ್ಲಿಗೆ ಸೇರಬೇಕು ಎಂದು ಅವರಿಗೆ ಮಹತ್ವದ್ದಾಗಲೆ ಇಲ್ಲ. ಕನ್ನಡದ ಯಾವುದೋ ಮೂಲೆ ಇನ್ನಾವುದೋ ದಿಕ್ಕಿನವರ ಪಾಲಾಯಿತು. ಮುಂಬಯಿ ಭಾರತದ ಹೆಬ್ಬಾಗಿಲಾದ್ದರಿಂದ ಬ್ರಿಟಿಷರಿಗೆ ಅದು ಕೇಂದ್ರಸ್ಥಳವಾಯಿತು. 'ಮುಂಬಯಿ ಕರ್ನಾಟಕ'ವೆಂದು ಭಾಗವಾದ ಕರ್ನಾಟಕದ ಕೇಂದ್ರಸ್ಥಳ ಪುಣೆ ಆಯಿತು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ದೂರದ ಪುಣೆಗೆ ಹೋಗಬೇಕಾಗಿತ್ತು. ದೂರವಿದ್ದರೂ ಉನ್ನತ ಶಿಕ್ಷಣಾಕಾಂಕ್ಷಿಗಳಾಗಿ ಅಲ್ಲಿಗೆ ಹೋಗಿ ಕಲಿತು, ಮರಳುವಾಗ ಮರಾಠಿಮಯವಾಗಿ ಬಿಡುತ್ತಿದ್ದರು. ವಿದ್ಯೆಯೊಡನೆ ಮರಾಠಿ ಭಾಷೆ ಸಂಸ್ಕೃತಿಗಳನ್ನು ಅಳವಡಿಸಿಕೊಂಡು ಅದರಲ್ಲೆ ಮುಳುಗಿಬಿಡುತ್ತಿದ್ದರು. ಮರಾಠಿ ಕನ್ಯೆಯರನ್ನು ಮದುವೆಯಾಗುವುದು, ಕನ್ನಡ ಭಾಗದ ಕನ್ಯೆಯರಿದ್ದರೆ ಕಡ್ಡಾಯವಾಗಿ ಅವರಿಗೂ ಮರಾಠಿ ಕಲಿಸುವುದೂ ಸರ್ವೇಸಾಮಾನ್ಯವಾಗಿತ್ತು.

೧೮೨೬ರಲ್ಲಿ ಧಾರವಾಡ ಹುಬ್ಬಳ್ಳಿಗಳಲ್ಲಿ ಆರಂಭವಾದ ಎರಡು ಶಾಲೆಗಳೂ ಮರಾಠಿಯಾಗಿದ್ದವು. ಅಷ್ಟೊಂದು ಅಂಧಾನುಕರಣೆ ಹೆಮ್ಮೆಯಿಂದ ತಾಂಡವವಾಡುತ್ತಿತ್ತು. ಉನ್ನತ ವ್ಯಾಸಂಗಕ್ಕೆ ಪೂಣೆಗೆ ಹೋದ ಬ್ರಾಹ್ಮಣ ವಿದ್ಯಾರ್ಥಿಗಳು ಮರಾಠಿ ಅರ್ಥೈಸಿಕೊಳ್ಳಬಲ್ಲವರಾದ್ದರಿಂದ ಅವರು ಮರಾಠಿಗರೊಡನೆ ಹೆಚ್ಚಿನ ಸ್ನೇಹ ಬೆಳೆಸುತ್ತಿದ್ದರು. ಅಲ್ಪಸಂಖ್ಯಾತರಾದ ಲಿಂಗಾಯತರಿಗೆ ಮರಾಠಿ ಸಂಪರ್ಕ ಕಡಿಮೆಯಾದ್ದರಿಂದ ಮತ್ತು ಮರಾಠಿ ಭಾಷೆಯಲ್ಲಿಯ ಲಿಂಗ ಪ್ರತ್ಯಯ ತೊಡಕು ಅವರಿಗೆ ಕಠಿಣವಾದ್ದರಿಂದ ಮರಾಠಿ ಕಲಿಕೆ ಅವರಿಗೆ ಒಲಿಯಲಿಲ್ಲ ಎಂಬ ಹಾವನೂರರ ಹೇಳಿಕೆ ನೋಡಿದರೆ ಇಲ್ಲಿ ಭಾಷಾ ಕಲಿಕೆಯೂ ಜಾತಿಮೂಲವಾಗಿಯೇ ಒಲಿಯುತ್ತಿತ್ತೆಂಬುದು ಸ್ಪಷ್ಟವಾಗುವಾತ್ತದೆ. ಜೊತೆಗೆ ಸ್ಥಳಿಯ ಜನರಲ್ಲಿರುವ ಅಂತಃಕಲಹ, ತಾರತಮ್ಯಗಳೇ ಅವರವರ ಚುರುಕು-ದರಿದ್ರತೆಗಳನ್ನು ನಿರ್ಧರಿಸುವ ಮಾನದಂಡಗಳಾಗಿದ್ದವು. ಮರಾಠಿಯ ಲಿಂಗಪ್ರತ್ಯಯವನ್ನು ಅರ್ಥೈಸಿಕೊಳ್ಳಲಾಗದವರು (ಲಿಂಗಾಯತರು) ಕನ್ನಡಕ್ಕೆ ಸೀಮಿತವಾದರು. ಇಂಥವರು ಕನ್ನಡ ನಾಡಿನ ಉದ್ಧಾರಕ್ಕೆ ಉಳಿಯುವಂತಾಯಿತು. ಮರಾಠಿ ಭಾಷೆಯೊಳಗಿನ ಕಾಠಿಣ್ಯಾಂಶಗಳು ಕನ್ನಡದ ಬೆಳವಣಿಗೆಯನ್ನು ನಿರ್ಧರಿಸುವ ಮಾನದಂಡಗಳಾದದ್ದನ್ನು ಇಲ್ಲಿ ಕಾಣುತ್ತೇವೆ. "ಮರಾಠಿ ಭಾಷೆಯೊಳಗಿನ ತೊಡಕೇ ನಮ್ಮ ಕನ್ನಡವನ್ನು ರಕ್ಷಿಸಿದ ಕೋಟೆಯಾಗಿತ್ತು" ಎಂಬ ಆಲೂರು ವೆಂಕಟರಾಯರ ಹೇಳಿಕೆ(ಕರ್ನಾಟಕದ ವಿಕಾಸತ್ವ-೩೬) ಮರಾಠಿ ಭಾಷೆಯ ಕಾಠಿಣ್ಯತೆಗೆ ಕೃತಜ್ಞತೆ ಸೂಚಿಸುತ್ತದೆಯೇ ಹೊರತು ಮರಾಠಿ ಕಲಿಯಲಾರದ್ದಕ್ಕಾಗಿ ಕನ್ನಡಿಗರಾದವರಿಗಲ್ಲ ಎಂಬುದು ಸ್ಪಷ್ಟವಾಗಿಸುತ್ತದೆ. ಕನ್ನಡಿಗರು ಮತ್ತು ಅವರ ಮಕ್ಕಳು ಮರಾಠಿ ನಾಟಕಗಳನ್ನು ಬಹು ಪರಿಶ್ರಮದಿಂದ ಮಾಡಿ ಪ್ರಶಸ್ತಿಗಿಟ್ಟಿಸಿಕೊಳ್ಳುವ ಪ್ರಯತ್ನಗಳೂ ಕೂಡ ಮರಾಠಿಯತ್ತಲೇ ಒಲವಿರುವುದನ್ನು ಮತ್ತು ಪ್ರವಾಹದೊಂದಿಗೆಯೇ ತೇಲುತ್ತಿರುವುದನ್ನು ಸ್ಪಷ್ಟಪಡಿಸುತ್ತವೆ.

ಇಂಥ ವಿಚಿತ್ರ ತಿರುವಿನಲ್ಲಿ ಪ್ರವೇಶಿಸಿದ ಬ್ರಿಟಿಷರು ಆರಂಭಿಸಿದ್ದೂ ಮತಾಂತರ ಮತ್ತು ಮತಾಂತರಗಳಿಂದ ಕೂಡಿದ ಶಿಕ್ಷಣ ಕ್ರಮವನ್ನು ಎಂಬುದು ಕಾಲಕ್ರಮೇಣ ಕನ್ನಡಿಗರನ್ನೊಳಗೊಂಡಂತೆ ಭಾರತೀಯರಿಗೆಲ್ಲ ಮನವರಿಕೆಯಾಗಿ ಇಂಥ ಶಿಕ್ಷಣ ಕ್ರಮವನ್ನು ವಿರೋಧಿಸುತ್ತ ಅದರಲ್ಲಿಯ ಆಸ್ಥೆ ಕಳೆದುಕೊಂಡರು. ಇದನ್ನ ಸೂಕ್ಷ್ಮವಾಗಿ ಗ್ರಹಿಸಿದ ಬ್ರಿಟಿಷರು ಶಿಕ್ಷಣದಲ್ಲಿ ಅಮೂಲಾಗ್ರ ಬದಲಾವಣೆ ತರಬಯಸಿ ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವುದಾಗಿ ಘೋಷಿಸಿದರೂ ಅದು ತಾತ್ಕಾಲಿಕವಾಗಿ ಅಸಂತುಷ್ಟರಾದ ಭಾರತೀಯರ ಕಣ್ಣೊರೆಸಲು ಮಾಡಿದ್ದಾಗಿತ್ತು. ಏಕೆಂದರೆ ಈ ಹಣ ಇಡೀ ಭಾರತದ ೩/೪ ಭಾಗಕ್ಕೆ ಬೇಕಾಗುವಷ್ಟೇ ಇತ್ತು ಮತ್ತು ಅದೂ ಕೂಡ ನೇರವಾಗಿ ಶಿಕ್ಷಣ ಕೊಡುವುದಕ್ಕಾಗಿರಲಿಲ್ಲ.

೧೮೮೯-೧೮೨೭ ರ ಸುಮಾರಿಗೆ ಇದ್ದ ಮನ್ರೋ ಮತ್ತು ಎಲಿಫಿನಸ್ಟನ ಗವರ್ನರರು ಶಿಕ್ಷಣ ದೇಶಿ ಭಾಷೆಯಲ್ಲಿರಬೇಕೆಂದರು. ಬೇಬರ್‌ನಂಥ ಪಾಲಿಟಿಕಲ್ ಏಜೆಂಟರು ಶಿಕ್ಷಕರಿಗೆ ಸಂಬಳ ಮತ್ತು ಉಚಿತ ಶಿಕ್ಷಣಕ್ಕೆ ಶಿಪಾರಸು ಮಾಡಿದರು. ಹೀಗೆ ತೆವಳುತ್ತ ಸಾಗಿದ ಕನ್ನಡ ಶಿಕ್ಷಣ ಕಲಿಸಲು ಪಠ್ಯಪುಸ್ತಕಗಳಿರಲಿಲ್ಲ; ಕಲಿಸುವ ಒಂದಡದ ಪದ್ಧತಿಗಳಿರಲಿಲ್ಲ.

ಇಂಥ ಕವಲುದಾರಿಯಲ್ಲಿ ಬ್ರಿಟಿಷ ಅಧಿಕಾರಿಗಳು ಹೆಚ್ಚೆಚ್ಚು ಕಾಲ ಭಾರತದಲ್ಲಿ ನೆಲೆನಿಂತಂತೆ ಇಲ್ಲಿಯ ನೆಲ, ಜಲ, ಭಾಷೆ, ಬದುಕುಗಳನ್ನು ಅರ್ಥಮಾಡಿ-ಕೊಳ್ಳತೊಡಗಿದರೇನೋ? ೧೮೬೪ರಲ್ಲಿ ರಸೆಲ್ ಕನ್ನಡ ನೆಲದಲ್ಲಿ ಕನ್ನಡದಲ್ಲಿ ಶಿಕ್ಷಣ ಕೊಡಲು, ಶಾಲೆಗಳ ಅವಶ್ಯಕತೆ ಅರಿತು, ಈಸ್ಟ ಇಂಡಿಯನ್ ಕಂಪನಿಗೆ ಮನವಿ ಮಾಡಿ ಕನ್ನಡ ಶಾಲೆಗಳನ್ನು ತೆರೆದು, ಮೂಲಭೂತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದು ಮತ್ತು ಇದೇ ಕನ್ನಡ ಶಿಕ್ಷಣ ಬೆಳೆಯಲು ಮೊದಲ ಹೆಜ್ಜೆಯಾದುದನ್ನು ಧನಾತ್ಮಕ ನೆಲೆಯಲ್ಲಿ ಚರ್ಚಿಸುತ್ತ ಹೋಗುತ್ತಾರೆ.

ಬ್ರಿಟಿಷರ ಪ್ರವೇಶವಾದ ಮೇಲೆ ಕನ್ನಡದ ಸ್ಥಿತಿ ಇಷ್ಟೆಲ್ಲ ಇದ್ದರೂ ಪೇಶ್ವೆಯರ ಆಡಳಿತಕ್ಕಿಂತ ಮೊದಲು ಕನ್ನಡ ಎಲ್ಲೆಂದರಲ್ಲಿ ತನ್ನತನ ಮೆರೆದಿದ್ದು, ಮೂಸ್ಲಿಂ ಬಹುಮನಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿದ್ದ ಕನ್ನಡ ಪ್ರದೇಶಗಳಲ್ಲಿ ಆಡಳಿತ ಭಾಷೆ ಕನ್ನಡವೇ ಆಗಿತ್ತು. ಇವರ ರಾಜ್ಯ ಸ್ಥಾಪನೆಯಾಗುವ ಪೂರ್ವದಲ್ಲಿ ಸ್ಥಳಿಯ ಭಾಷೆ ಕನ್ನಡವೇ ಆಗಿತ್ತು ಎಂಬ ಕುತೂಹಲಕಾರಿ ಐತಿಹಾಸಿಕ ಸಂಗತಿಗಳನ್ನು ಉಲ್ಲೇಖಿಸುತ್ತ ಹೋಗುತ್ತಾರೆ. ಈ ಎಲ್ಲ ಹಿನ್ನೆಲೆಗಳನ್ನು ಅಧ್ಯಯನದ ದೃಷ್ಟಿಕೋನದಿಂದ ಅವಲೋಕಿಸಲಾಗಿದೆ.

೨. ಕನ್ನಡದ ದೀಪ-ಡೆಪ್ಯೂಟಿ ಚೆನ್ನಬಸಪ್ಪನವರ ಸ್ಮರಣ ಗ್ರಂಥ- ಪ್ರಕಾಶಕರು: ಡೆಪ್ಯೂಟಿ ಚೆನ್ನಬಸಪ್ಪನವರ ಶತಮಾನೋತ್ಸವ ಸಮಿತಿ, ಶಿಕ್ಷಕರ ಕೇಂದ್ರ, ರೊದ್ದ ರಸ್ತೆ, ಧಾರವಾಡ-೫೮೦೦೦೧

ಡೆಪ್ಯೂಟಿ ಚೆನ್ನಬಸಪ್ಪನವರ ಅಭಿಮಾನಿಗಳು ಮತ್ತು ಉತ್ತರೋತ್ತರದಲ್ಲಿ ಅದೇ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ ಹತ್ತು ಹಲವು ಅಧಿಕಾರಿಗಳು, ಸ್ನೇಹಿತರು, ಬಂಧುಬಳಗವೆಲ್ಲ ಸೇರಿ

ಚೆನ್ನಬಸಪ್ಪನವರ ಶತಮಾನ ಆಚರಿಸಿ, ಆ ಸ್ಮರಣೆಗಾಗಿ ಹೊರಡಿಸಿದ ಅಮೂಲ್ಯ ಗ್ರಂಥವಾಗಿದೆ. ಟ್ರೇನಿಂಗ್ ಕಾಲೇಜು ಆರಂಭವಾದಂದಿನಿಂದ ಆರಂಭಿಸಿ ಎಲ್ಲ ಆಯಾಮಗಳಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರನ್ನ ಮತ್ತು ಆಗೀನ ಮುಂಬಯಿ ಕರ್ನಾಟಕದ ಸ್ಥಿತ್ಯಂತರಗಳನ್ನ ಇಲ್ಲಿ ಒಡಮೂಡಿಸಲಾಗಿದೆ. ಶಿಕ್ಷಣ ಇತಿಹಾಸ ತಿಳಿಸುವ ಮತ್ತು ಅದರ ಹೆಜ್ಜೆ ಗುರುತುಗಳನ್ನು ದಾಖಲಿಸಿರುವ ಅಮೂಲ್ಯ ಗ್ರಂಥ ಇದಾಗಿದೆ. ೧೯೮೧ ಡೆಪ್ಯೂಟಿ ಚೆನ್ನಬಸಪ್ಪನವರ ಪುಣ್ಯತಿಥಿ ಶತಮಾನ ವರ್ಷದ ಸ್ಮರಣಾರ್ಥ 'ಡೆಪ್ಯೂಟಿ ಚೆನ್ನಬಸಪ್ಪ ಶತಮಾನೋತ್ಸವ ಸಮಿತಿ'ಯವರು ಹೊರ ತಂದ "ಕನ್ನಡದ ದೀಪ" ಎಂಬ ಹೊತ್ತಿಗೆಯು ಅಂದಿನ ಈ ತರಬೇತಿ ಕೇಂದ್ರದ ಸ್ಥಿತಿಗತಿ ಅರುಹುವ ನಿಟ್ಟಿನಲ್ಲಿ ಹೊಸಹೊಸ ಮತ್ತು ವೈವಿಧ್ಯಮಯ ಲೇಖನಗಳಿದ್ದು ಅಪಾರ ಮಾಹಿತಿಯನ್ನೊಳಗೊಂಡಿದೆ. ಇದರಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳಿದ್ದು, ಭಾಗ-೧: ಡೆಪ್ಯೂಟಿ ಚೆನ್ನಬಸಪ್ಪನವರ ಬಗೆಗೆ ಲೇಖನಗಳು, ಕವನಗಳು, ಭಾಗ-೨: ಕರ್ನಾಟಕ ಶಿಕ್ಷಣ ರಂಗ-೧೯ ನೆಯ ಶತಮಾನ, ಭಾಗ-೩ ಕೆಲವು ಆಧುನಿಕ ಶಿಕ್ಷಣ ಸಮಸ್ಯೆಗಳು, ಭಾಗ-೪: ಮುಂಬಯಿ ಕರ್ನಾಟಕದ ಮೂಲ ಶಿಕ್ಷಣ ಸಂಸ್ಥೆಗಳು. ಹೀಗಿರುವ ನಾಲ್ಕು ಭಾಗಗಳಲ್ಲಿ ಎರಡನೆಯ ಮತ್ತು ನಾಲ್ಕನೆಯ ಭಾಗಗಳು ಮುಂಬಯಿ ಕರ್ನಾಟಕದಲ್ಲಿನ ಶೈಕ್ಷಣಿಕ ಸ್ಥಿತ್ಯಂತರಗಳನ್ನು ಹಂತಹಂತವಾಗಿ ಅರುಹುತ್ತ ಸಾಗುತ್ತವೆ.ಮೂಲ ದಾಖಲೆಗಳನ್ನಾಧರಿಸಿ ಬರೆದಿರುವ ಎಲ್ಲ ಲೇಖನಗಳು ಮೌಲಿಕವಾಗಿದ್ದು ಇದು ಪ್ರಾಥಮಿಕ ಆಕರವಾಗಬಲ್ಲ ಮೌಲಿಕತೆ ಹೊಂದಿದೆ.

೩. ಕನ್ನಡ ಸಾಹಿತ್ಯ ಚರಿತ್ರೆ-ರಂ.ಶ್ರೀ.ಮುಗಳಿ. ಗೀತಾ ಬುಕ್ ಹೌಸ್, ಪ್ರಕಾಶಕರು:ಮೈಸೂರು. ೧೯೫೩

ಪಂಪ, ಬಸವ, ಕುಮಾರವ್ಯಾಸರನ್ನು ಸಾಹಿತ್ಯ ಯುಗ ಪ್ರವರ್ತಕರನ್ನಾಗಿ ಗುರುತಿಸಿ, ಹೊಸಗನ್ನಡ ಸಾಹಿತ್ಯಕ್ಕೆ ಮುದ್ದಣನನ್ನು ಮುಂಗೋಳಿಯಾಗಿಸಿ ಸಾಹಿತ್ಯ ವಿಭಜನೆಗೆ ಗೆರೆ ಕೊರೆದು ಬಿಡುವ ಈ ಕೃತಿ, ಸಾಹಿತ್ಯ ಚರಿತ್ರೆ ಕುರಿತಾದ ಇತಿಹಾಸವನ್ನು ಮುಗುಳಿಯವರು ನೋಡಿದ, ಅಭ್ಯಸಿಸಿದ ರೀತಿಯನ್ನು ಪ್ರದರ್ಶಿಸುತ್ತದೆ.

೪.ಸಾಹಿತ್ಯದ ವಿರಾಟ್ ಸ್ವರೂಪ-ಡಾ.ದ.ರಾ.ಬೇಂದ್ರೆ. ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪

ಸಾಹಿತ್ಯ ಮತ್ತು ವಿಮರ್ಶೆ, ಸಾಹಿತ್ಯ ಮತ್ತು ಸಂಶೋಧನೆಗೆ ಸಂಬಧ ಪಟ್ಟಂತೆ ನಾಲ್ಕು ಭಾಗಗಳಲ್ಲಿ ವಿಭಾಗಗೊಂಡಿರುವ ಈ ಕೃತಿಯಲ್ಲಿ ಭಾಗ ೩ 'ಕರ್ನಾಟಕ ಮಹಾರಾಷ್ಟ್ರ'ದಲ್ಲಿ ನನ್ನ ಅಧ್ಯಯನದ ವಿಷಯಕ್ಕೆ ಹೂರಣವಾಗುವ ಹಲವಾರು ವಿಚಾರಗಳು ಚರ್ಚಿತಗೊಂಡಿವೆ. ಕರ್ನಾಟಕ-ಮಹಾರಾಷ್ಟ್ರಗಳ ಸಾಂಸ್ಕೃತಿಕ ಸಮನ್ವಯ ಕುರಿತು ಹೇಳುತ್ತ ಅದೇ ಉಪ ಶೀರ್ಷಿಕೆಯಡಿಯಲ್ಲಿ 'ಏನೆಂದರೂ ನಾವೆಲ್ಲ ಒಂದೇ' ಎಂದು ಬರೆದು, ವೈರುಧ್ಯವೆನಿಸಿದರೂ ಅಗಾಧವೆನಿಸುವ ಬೇಂದ್ರೇಯವರ ಮನಸ್ಥಿತಿ ಮತ್ತು ವಿಚಾರಗಳು ಹಲವು ಮಾಹಿತಿ ನೀಡುತ್ತವೆ.

೫. ಸಾಹಿತ್ಯ ಸಂಗಮ-ಸ.ಸ.ಮಾಳವಾಡ , ಜಯ ಪ್ರಕಾಶನ, ಧಾರವಾಡ. ೧೯೭೦

ಸಾಹಿತ್ಯದ ಗಂಭೀರ ಅಧ್ಯಯನ ಮತ್ತು ಅಧ್ಯಾತ್ಮಿಕ ಮನೋಭಾವಗಳಿಂದಾಗಿ ಬರಹದ ಶೈಲಿಯಲ್ಲಿ ಸಮತೂಕ ಮತ್ತು ಗಾಂಭೀರ್ಯವನ್ನು ಮೆಳೈಸಿಕೊಂಡಿರುವ ಕೃತಿ ಇದು.ಕರ್ನಾಟಕ, ಸಾಹಿತ್ಯ ಸಂಸ್ಕೃತಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಸಂದರ್ಭಗಳಲ್ಲಿ ರೂಪುಗೊಂಡಿರುವ ಇಲ್ಲಿಯ ಆರವತ್ತು ಲೇಖನಗಳು ಈ ಅಮೂಲ್ಯ ಗ್ರಂಥದ ಆಸ್ತಿ. ವಿದವತ್ಪೂರ್ಣ ಲೇಖನಗಳು ಸಂಶೋಧನಾತ್ಮಕವಾದವುಗಳು. ಇದರಲ್ಲಿ ೧- ಕನ್ನಡ ಸಾಹಿತ್ಯದ ಶತಮಾನಗಳು ೨- ಕವಿಕಾವ್ಯ ದರ್ಶನ ೩-ಹೊಸಗನ್ನಡ ಸಾಹಿತ್ಯ ೪-ಕನ್ನಡ ನುಡಿ ೫-ಹರ್ನಾಟಕ ಸಾಂಸ್ಕೃತಿಕ ಪರಂಪರೆ- ಹೀಗೆ ಐದು ಭಾಗಗಳಿದ್ದು, ಇದೊಂದು ರೀತಿ ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆಯೇ ಆಗಿದೆ. ಸಾಹಿತ್ಯ ಚರಿತ್ರೆಯ ಉಳಿದೆಲ್ಲ ಅಭಿಪ್ರಾಯಗಳನ್ನು ಅವಲೋಕಿಸಿ, ಒಂದು ನಿರ್ದಿಷ್ಟ ಕಾಲಖಂಡವನ್ನು ಇಟ್ಟುಕೊಂಡು ಸಾಹಿತ್ಯ ಚರಿತ್ರೆಯನ್ನು ನಿರೂಪಿಸುವುದು ವ್ಯಾಸಂಗಕ್ಕೆ ಅನುಕೂಲವೆಂಬ ಅಭಿಪ್ರಾಯದ ಮೂಲಕ ಪರೋಕ್ಷವಾಗಿ ಈಗ ಆಗಿರುವ ಅನಿರ್ದಿಷ್ಟತೆಯನ್ನು ಸೂಚಿಸುತ್ತಾರೆ.

ಡೆಪ್ಯೊಟಿ ಚೆನ್ನಬಸಪ್ಪನವರು ಜೀವನ ಮತ್ತು ಸಾಧನೆ ಕುರಿತು ಮೌಲಿಕ ಮಾಹಿತಿಗಳನ್ನು ತಿಳಿಸುತ್ತ, ೧೮೫೬ರಿಂದ ೧೯೦೦ರವರೆಗೆ ಆರವತ್ನಾಲ್ಕು ವರ್ಷ ಅದು ಡೆಪೂಟಿ ಚನ್ನಬಸಪ್ಪ ಯುಗ'ವೆಂದು ಘಂಟಾಘೋಷ ಮಾಡಿ, ಸಾರಿದ ಕೃತಿ ಇದಾಗಿದೆ. ಮೂಲ ವಿಷಯಗಳನ್ನು ಅಧ್ಯಯನಪೂರ್ಣವಾಗಿ ಅವಲೋಕಿಸಿ, ಒಂದು ನಿರ್ಣಾಯಕ ಘಟ್ಟ ತಲುಪುವ ಲೇಖಕರ ವಿಚಾರಗಳು ವಿಶೇಷವೆನಿಸುತ್ತವೆ.

೬.ಹೊಸಗನ್ನಡ ಸಾಹಿತ್ಯದ ಉದಯಕಾಲ-ರಾ.ಯ.ಧಾರವಾಡಕರ.ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೫

ಬಹುಶಃ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡದ ಕುರಿತು, ಅಲ್ಲಿ ನೌಕರಿಗಾಗಿ ಬಂದರೂ ಸ್ವಕರ್ತವ್ಯದ ಅರಿವನ್ನು ಅಲ್ಲಿಯೇ ಪಡೆದು ಕನ್ನಡಕ್ಕಾಗಿ ಶ್ರಮಿಸಿದ ಹಲವಾರು ಮಹನಿಯರ ಮತ್ತು ಸಾಧನೆಗಳ ಪ್ರಥಮ ನೈಜ ಚಿತ್ರಣ ಇಲ್ಲಿದೆ. ಹೊಸಗನ್ನಡ ಸಾಹಿತ್ಯದ ಆರಂಭದಲ್ಲಿ ಶಿಕ್ಷಕರು ಮತ್ತು ಈ ಶೈಕ್ಷಣಿಕ ಸಂಸ್ಥೆ ಕನ್ನಡಕ್ಕಾಗಿ ಮಾಡಿದ ಶತಪ್ರಯತ್ನಗಳನ್ನು ವಿಷದವಾಗಿ ವಿವರಿಸುತ್ತದೆ.

೭.ಧಾರವಾಡ ಮಾರ್ಗದರ್ಶಿ- ಶಂ.ವಾ.ಜತಾರ, ಮನೋಜ ಪಾಟೀಲ. ಅಭಿಜಾತ ಪ್ರಕಾಶನ, ಧಾರವಾಡ. ೧೯೮೫- ಧಾರವಾಡದ ಸಾಂಸ್ಕೃತಿಕ ಲೋಕದ ಸ್ಥೂಲ ಪರಿಚಯವಿದರಲ್ಲಿದೆ.

೮. ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ (೧೮೯೫-೧೯೯೫.)-ಎಸ್.ಬಿ. ಹಳಕಟ್ಟಿ. ಪ್ರಸನ್ನ ಪ್ರಕಾಶನ.- ಗಂಡುಮಕ್ಕಳ ಟ್ರೇನಿಂಗ ಕಾಲೇಜಿನ ಹಿನ್ನೆಲೆಯ ಅರಿವು ಮಾಡಿಕೊಡುತ್ತದೆ. ಒಂದು ಮಾತೃಸಂಸ್ಥೆಯಾಗಿ ಏನೆಲ್ಲ ಜವಾಬ್ದಾರಿಗಳು ಬೆನ್ನೇರುತ್ತವೆ ಎಂಬುದನ್ನಿದು ಅರುಹುತ್ತದೆ.

೯.ರಾ.ಹ.ದೇಶಪಾಂಡೆ- ಕೆ.ಎಸ್.ದೇಶಪಾಂಡೆ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦- ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆ ಮಾಡಿದ ರಾ.ಹ.ದೇಶಪಾಂಡೆಯವರು ಗಂಡುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಸಲ್ಲಿಸಿದ ಸೇವೆಯ ಕುರಿತು ಮಾಹಿತಿ ನೀಡುತ್ತದೆ.

೧೦. ಚಂಪಾ ಸಾಹಿತ್ಯ – ಗೋ–ಕಾಕ್ ಗೋ–ಬ್ಯಾಕ್ (ಗೋಕಾಕ ಚಳುವಳಿ ಕುರಿತಾದ ಬರಹಗಳು) – ಚಂದ್ರಶೇಖರ ಪಾಟೀಲ. ಸಂಕ್ರಮಣ ಪ್ರಕಾಶನ ಬೆಂಗಳೂರು. ೨೦೧೩

ಅಕ್ಟೋಬರ್ ೨೩, ೧೯೮೦ ರಂದು ಗೋಕಾಕ ಅಧ್ಯಕ್ಷತೆಯ ಸಮಿತಿ ಧಾರವಾಡಕ್ಕೆ ಬಂದಾಗ, ಸಮಿತಿಯ ಸಂಸ್ಕೃತ ಮೋಹದ ಬಗೆಗೆ ಆಂತಕಗೊಂಡಿದ್ದ ಅನೇಕರು 'ಗೋ–ಕಾಕ್ ಗೋ–ಬ್ಯಾಕ್' ಎಂದು ಕೂಗಿ ಬಲವಾದ ಪ್ರತಿಭಟನೆ ತೋರಿದ ನಾಟಕೀಯ ದೃಶ್ಯಕ್ಕೆ ಸಾಕ್ಷಿಯಾದದ್ದು ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜ್. 'ಸಾಂಸ್ಥಿಕ ಸಮನ್ವಯ'ವೆಂಬ ನನ್ನ ಅಧ್ಯಯನದ ಉಪ ಅಧ್ಯಾಯಕ್ಕೆ ಸಂಬಂಧಿಸಿದಂತೆ ಇದು ಪೂರಕ ಆಕರವಾಗಿದೆ.

೧೧. ಭಾರತ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆ : ಭಾಗ ೧ – ಐ. ಮಾ. ಮುತ್ತಣ್ಣ ೧೯೮೭–ಶ್ರೀ ಶಕ್ತಿ ಇಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು ೫೭೦೦೧೪ (ದ.ಭಾರತ)

ಕನ್ನಡಕ್ಕೆ ಮತ್ತು ಕನ್ನಡ ಸಾಹಿತ್ಯಕ್ಕೆ ರಸೆಲ್, ಎಲಿಯೆಟ್ ಮುಂತಾದ ಪಾಶ್ಚಾತ್ಯ ಮಹನೀಯರ ಸೇವೆ ಮತ್ತು ಕಾರ್ಯತತ್ಪರತೆಯ ಪರಿಚಯ ಮಾಡಿ ಕೊಡುತ್ತದೆ. **ಪಾಶ್ಚಾತ್ಯ ವಿದ್ವಾಂಸರ ಸೇವೆ** ಮತ್ತು ಅರ್ಪಣೆಗಳ ಪರಿಚಯಿಸುತ್ತ 'ಇತಿಹಾಸ' ಅಧ್ಯಾಯಕ್ಕೆ ಪೂರಕ ಆಕರ ಒದಗಿಸುತ್ತದೆ.

೧೨. ಗ್ಯಾಝೇಟೀಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು ಸಹಿತ ಧಾರವಾಡ, ಬೆಳಗಾವಿ, ವಿಜಾಪೂರ ಮತ್ತು ಕಾನಡಾ ಈ ನಾಲ್ಕು ಜಿಲ್ಲೆಗಳದು. (ಸರಕಾರದವರ ಹುಕುಮಿನಿಂದ ವೆಂಕಟ ರಂಗೋ ಕಟ್ಟೀ ಮಾಜೀ ಪ್ರಿನ್ಸಿಪಾಲ್, ಟ್ರೇನಿಂಗ್ ಕಾಲೇಜ್, ಧಾರವಾಡ ಇವರು ಕನ್ನಡದಲ್ಲಿ ಭಾಷಾಂತರಿಸಿದರು– ಮುಂಬಯಿ: ಗವರ್ನಮೆಂತ ಸೆಂತ್ರಲ್ ಬುಕ್ ಡಿಪೊ. ೧೮೯೩.) ಮೊದಲ ಮರು ಮುದ್ರಣ: ೧೯೮೮, ಏಶಿಯನ್ ಎಜುಕೆಷನಲ್ ಸರ್ವೀಸಸ್, ಸಿ–೨/೧೫,ಎಸ್ ಡಿ.ಎ, ಹೊಸದೆಹಲಿ– ೧೧೦೦೧೬

ವೆಂಕಟ ರಂಗೋ ಕಟ್ಟಿ ಅನುವಾದಿತ ಈ ಗ್ಯಾಝೇಟೀಯರ್ ದಕ್ಷಿಣ ಮಹಾರಾಷ್ಟ್ರವಾಗಿ ಪರಿಗಣಿತವಾದ ಕನ್ನಡ ನಾಡಿನ ಭಾಗಗಳಾದ ಧಾರವಾಡ, ಬೆಳಗಾವಿ, ವಿಜಾಪೂರ ಮತ್ತು ಕಾರವಾರ ಜಿಲ್ಲೆಗಳ ಸಮಗ್ರ ಮಾಹಿತಿ ನೀಡುತ್ತದೆ. ಧಾರವಾಡದ ಅಂದಿನ ಸಮಕಾಲೀನ ಪರಿಸರ, ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತ್ಯಂತರಗಳನ್ನೊಳಗೊಂಡಂತೆ ಟ್ರೇನಿಂಗ್ ಕಾಲೇಜಿನ ಪೂರ್ವಾಪರಗಳನ್ನು ಸಾರಾಸಗಟಾಗಿ ಬಿಚ್ಚಿಡುತ್ತದೆ. ಸಂಸೋಧನಾ ಕಾರ್ಯದಲ್ಲಿ ತೊಡಗುವವರಿಗೆ ಒಂದು ಅಮೂಲ್ಯ ಸಂಪನ್ಮೂಲವಾಗಿದೆ. ಈ ಕಾಲೇಜಿನ ಪ್ರಾಚಾರ್ಯರಾಗಿದ್ದ ವೆಂಕಟ ರಂಗೋ ಕಟ್ಟಿಯವರಿಂದ ಅನುವಾದಿತ ಎನ್ನುವುದೇ ಒಂದು ಮಹಾನ್ ವಿಷಯವಾಗಿಬಿಡುತ್ತದೆ.

೧೩. ಭಾರತದ ಗ್ಯಾಝೇಟೀಯರ್* ಕರ್ನಾಟಕ ರಾಜ್ಯ- ಧಾರವಾಡ ಜಿಲ್ಲೆ (ಪರಿಷ್ಕೃತ ಆವೃತ್ತಿ) ಮುಖ್ಯ ಸಂಪಾದಕರು- ಸೂರ್ಯನಾಥ ಯು. ಕಾಮತ್- ೧೯೯೫

ಈ ಗ್ಯಾಝೇಟೀಯರ್, ದಕ್ಷಿಣ ಮಹಾರಾಷ್ಟ್ರವಾಗಿ ಪರಿಗಣಿತವಾದ ಕನ್ನಡ ನಾಡಿನ ಭಾಗವಾದ ಧಾರವಾಡದ ಒಂದು ಅಮೂಲ್ಯವಾದ ಮಾಹಿತಿ ನೀಡುತ್ತಿದ್ದು, ಜಿಲ್ಲೆಯ ಸರ್ವಾಂಗೀಣ ಪರಿಚಯ ನೀಡುತ್ತದೆ. ಟ್ರೇನಿಂಗ್ ಕಾಲೇಜಿಗೆ ಸಂಬಂಧಿಸಿಧಂತೆ ಹತ್ತು ಹಲವಾರು ಮಾಹಿತಿಗಳನ್ನು ನೀಡಿ ಸಂಶೋಧನ ಮಾರ್ಗದಲ್ಲಿ ವಿಶಿಷ್ಟ ಸಂಪನ್ಮೂಲವಾಗಿದೆ.

೧೪. ಭಾರತದಲ್ಲಿ ಶಿಕ್ಷಣದ ಇತಿಹಾಸ (೧೮೦೦-೧೯೬೫) ಮೂಲ ಲೇಖಕರು: ಸೈಯದ್ ನೂರುಲ್ಲಾ ಮತ್ತು ಜೆ.ಪಿ.ನಾಯಕ್. ಅನುವಾದಕರು: ಆಯ್.ಎಸ್. ಬಿದರಿ, ೧೯೯೭ – ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನೀರ್ದೇಶನಾಯ, ಕ.ವಿ.ವಿ. ಧಾರವಾಡ-೩

ಒಂದುವರೆ ಶತಮಾನದ ಇತಿಹಾಸವನ್ನವಲೋಕಿಸುವ ಮತ್ತು ಅಧೀಕೃತ ದಾಖಲೆಗಳೊಂದಿಗೆ ವಿಷಯ ಅರುಹುವ ಇದು ಪ್ರಾಥಮಿಕ ಆಕರವಾಗುವುದರಲ್ಲಿ ಎರಡು ಮಾತಿಲ್ಲ.

೧೫. ಆಂಗ್ಲರ ಆಡಳಿತದಲ್ಲಿ ಕನ್ನಡ- ಮಹಾದೇವ ಬಣಕಾರ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃತತುಂಗ ರಸ್ತೆ, ಬೆಂಗಳೂರು. ೧೯೮೬

ವಸಾಹತುಶಹಿ ಆಡಳಿತವಿದ್ದರೂ, ಅಧಿಕೃತ ಭೂಮಿ ಮಾತ್ರ ಕನ್ನಡಿಗರದ್ದಾಗಿತ್ತು. ಅದರ ಅರಿವನ್ನು ಹೊಂದಿ ರಾಜ್ಯಭಾರ ಮಾಡಿ, ಕನ್ನಡಕ್ಕೆ ಉಸಿರಾಡಲು ಅವಕಾಶ ಕಲ್ಪಿಸಿಕೊಟ್ಟ ಹಿರಿಮೆಯನ್ನು ಇಲ್ಲಿ ಉಪಕರಿಸಲಾಗಿದೆ.

೧೬.ಗತಕಾಲದ ಧಾರವಾಡ – ಶ್ರೀ ನ.ಹ.ಕಟಗೇರಿ(ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆ –ಪುಷ್ಪ:೩೭, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ–೦೧, ೨೦೦೮

ಇದೊಂದು ಅತ್ಯದ್ಭುತ ಮಾಹಿತಿಗಳನ್ನು ತನ್ನ ಮಡಿಲಲ್ಲಿರಿಸಿಕೊಂಡ ಹೊತ್ತಿಗೆ. ತೀರ ಇತ್ತೀಚೆಗೆ ಅಂದರೆ ೨೦೦೮ ರಲ್ಲಿ ಪ್ರಕಟಗೊಂಡಿದ್ದರೂ ತೀರ ಆರಂಭದ ಮತ್ತು ಅಲಭ್ಯ, ಅಗಾಧ ಮಾಹಿತಿಯನ್ನಿದು ಒಳಗೊಂಡಿದ್ದು, ಸಂಶೋಧನೆಯ ದಾರಿಯಲ್ಲಿದು ಅಂಕಿಸಂಖ್ಯೆ ಸಹಿತ ಅಮೂಲ್ಯ ದಾಖಲೆಗಳನ್ನು ಒದಗಿಸುತ್ತದೆ. ನ. ಹ. ಕಟಗೇರಿಯವರ ಈ ಗ್ರಂಥದ ಮೌಲ್ಯವನ್ನು ಅವಲೋಕಿಸಿದರೆ ಬಹಳ ಹಿಂದೆಯೇ ಇದು ಪ್ರಕಟಗೊಳ್ಳಬೇಕಿತ್ತು ಅನಿಸುವುದುಂಟು. ಕನ್ನಡ ಶಾಲೆಗಳ ಆರಂಭ, ತರಬೇತಿ ಕಾಲೇಜಿನ ಆದಿಮ ಹೆಸರು, ಇವುಗಳನ್ನು ಆರಂಭಿಸಲು ಹೋರಾಡಿದ ಆಂಗ್ಲ ಅಧಿಕಾರಿಗಳು ಮತ್ತವರ ಅವಿರತ, ನಿಸ್ಪೃಹ ಹೋರಾಟ, ಆರಂಭ ಮತ್ತವುಗಳ ನಿರ್ವಹಣೆ ಕುರಿತ ಮಾಹಿತಿ ಸಖದಾಶ್ಚರ್ಯ ಮೂಡಿಸುವಂತಿವೆ. ಆದರೆ ಆಕರ ಮತ್ತು ದಾಖಲೆಗಳ ಮೂಲ ಕುರಿತು ಎಲ್ಲಿಯೂ ಉಸಿರೆತ್ತಿಲ್ಲ.

೧೭. ಚಿತ್ರಕಲಾ ಪ್ರಪಂಚಕ್ಕೆ ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಒಂದು ಕೊಡುಗೆ – ಸಿ.ಸಿ.ಬಾರಕೇರ. ೨೦೦೬

ಟ್ರೇನಿಂಗ್ ಕಾಲೇಜ್, ಸರಕಾರಿ ಚಿತ್ರಕಲಾ ಮಹಾವಿದ್ಯಾಲಯಕ್ಕೆ ಮಾತೃಸಂಸ್ಥೆಯಾಗಿದೆ. ೧೯೫೫ರಲ್ಲಿ ಈಗೀರುವ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್‌ನ ಕಟ್ಟಡದಲ್ಲಿದ್ದ 'ಆಂಗ್ಲೋ ಕರ್ನಾಟಕ'(A.K.High School) ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಸಂಗೀತ ಮತ್ತು ವಾಣಿಜ್ಯ ವಿಷಯಗಳನ್ನು ಬೋಧಿಸಲು ಆರಂಭವಾದದ್ದರ ಒಂದು ಭಾಗವಿದು. ನಂತರ 'ಆಂಗ್ಲ ಕರ್ನಾಟಕ' ಶಾಲೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತದಡಿಯಲ್ಲಿ ಪಾಠಾಭ್ಯಾಸ ಶಾಲೆಯಾಗಿ ಮಾಡಿ ಅದರ ಹೆಸರನ್ನು ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಎಂದು ಬದಲಾಯಿಸಲಾಯಿತು. ಆಗ ಈ ಚಿತ್ರಕಲೆ, ಸಂಗೀತ ಮತ್ತು ವಾಣಿಜ್ಯ ವಿಭಾಗವನ್ನು ಟ್ರೇನಿಂಗ ಕಾಲೇಜಿನ ವ್ಯಾಪ್ತಿಗೆ ವಹಿಸಲಾಯಿತು. ಆಗ ಪ್ರಾಚಾರ್ಯರಾಗಿದ್ದ ಹ.ಗ.ಜೋಶಿಯವರು ಸಂಗೀತ ವಿಭಾಗವನ್ನು ಟ್ರೇನಿಂಗ ಕಾಲೇಜಿಗೆ ಇರಿಸಿ, ಚಿತ್ರಕಲಾ ವಿಭಾಗವನ್ನು ಈಗ ಇರುವ ಕಟ್ಟಡದಲ್ಲಿಯೆ ಸ್ವತಂತ್ರ ಮತ್ತು ಪ್ರತ್ಯೇಕ ತರಗತಿಗಳನ್ನು ನಡೆಸುತ್ತ, ಚಿತ್ರಕಲಾ ಶಾಲೆಯನ್ನಾಗಿ ಮಾಡಿದರು. ತರಬೇತಿ ಕಾಲೇಜಿನ ವಿದ್ಯಾರ್ಥಿಗಳಿಗೂ ಇಲ್ಲಿಯ ಶಿಕ್ಷಕರೇ ಕಲಾಪಾಠ ಹೇಳಿಕೊಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಇದು ಟ್ರೇನಿಂಗ್ ಕಾಲೇಜಿನ ಇತಿಹಾಸವನ್ನು ಅವಲೋಕಿಸುತ್ತದೆ.

೧೮. ಸರ್ ಸಾಹೇಬರು– ಪಾಟೀಲ ಪುಟ್ಟಪ್ಪ, ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ, ೨೦೦೯

೧೯. ಸರ್ ಸಿದ್ದಪ್ಪ ಕಂಬಳಿ–ಸದಾನಂದ ಕನವಳ್ಳಿ, ಪ್ರಸಾರಂಗ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೫

ಕಂಬಳಿಯವರು ಟ್ರೇನಿಂಗ್ ಕಾಲೇಜನ್ನು ಉಳಿಸಿ ಬೆಳೆಸಿದ ರೋಚಕ ಘಟನೆಗಳನ್ನು ಮೇಲಿನ ಎರಡು ಕೃತಿಗಳು ಓದಗಿಸುತ್ತವೆ.

ಪಾಟೀಲ ಪುಟ್ಟಪ್ಪನವರ 'ಸರ್ ಸಾಹೇಬರು' ಮೂಲ ಆಕರಗಳಿಂದ ವಿಷಯ ಸಂಗ್ರಹಿಸಿ ಮತ್ತು ತಮ್ಮ ಅನುಭವಗಳಿಂದ ಹಾಗೂ ಹಿರಿಯರನ್ನು ಸಂದರ್ಶಿಸಿ ಬರೆದ, ಕಂಬಳಿಯವರ ಕುರಿತ ಮೊದಲ ಕೃತಿಯಾಗಿದೆ. ಇದು ೧೯೮೫, ೧೯೯೮, ೨೦೦೯ ಮತ್ತು ೨೦೧೮ ಹೀಗೆ ನಾಲ್ಕು ಮುದ್ರಣ ಕಂಡಿದೆ. ಸರ್ ಸಿದ್ದಪ್ಪ ಕಂಬಳಿಯವರ ಜೀವನ ಚರಿತ್ರೆಯ ಯಶೋಗಾಥೆಯನ್ನು, ವರ್ಷ, ಘಟನಾವಳಿಗಳನ್ನು ಮುಂದಿಟ್ಟುಕೊಂಡು ಒಂದು ಸುದೀರ್ಘ ಕಥೆಯಂತೆ ಹೇಳುತ್ತ ಹೋಗಿದ್ದಾರೆ.

ಸದಾನಂದ ಕನವಳ್ಳಿಯವರ 'ಸರ್ ಸಿದ್ದಪ್ಪ ಕಂಬಳಿ' ಇದು ೨೦೦೭ರಲ್ಲಿಯೇ ಪ್ರಕಟಗೊಂಡ, ೨೦೧೫ಕ್ಕೆ ದ್ವಿತಿಯ ಮುದ್ರಣ ಕಂಡ ಗ್ರಂಥವಿದು. ಒಂದು ಎಂಫಿಲ್ ಪ್ರಬಂಧ, ವಿಧಾನ ಪರಿಷತ್ತಿನ ನಡವಳಿಕೆಗಳ ಝೇರಾಕ್ಸ ಪ್ರತಿ ಮತ್ತು ಸರ್ ಸಾಹೇಬರು– ಪಾಪು ಪುಸ್ತಕ ಈ ಮೂರೂ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ ಎಂದು ಹೇಳಿದ್ದರೂ ಸಾಂದರ್ಭಿಕ ದಾಖಲೆಗಳನ್ನು ಹೆಸರಿಸಿಲ್ಲ. ಸರ್ ಸಾಹೇಬರು ಕೃತಿಗಿಂತ ಹೆಚ್ಚಿನದ್ದೇನನ್ನು ಇದು ತಿಳಿಸುವುದಿಲ್ಲ.

ಇದುವರೆಗೂ ನಡೆದ ಅಧ್ಯಯನಗಳನ್ನು ಅವಲೋಕಿಸಿದಾಗ ಡೆಪ್ಯೂಟಿ ಚೆನ್ನಬಸಪ್ಪನವರನ್ನು ಕುರಿತಾಗಿಯೇ ಬರೆದ ಮುದವೀಡು ಕೃಷ್ಣರಾಯರ "ಕನ್ನಡದ ಹುಲಿ ಚೆನ್ನಬಸಪ್ಪನವರು" ಎಂಬ ಗ್ರಂಥ ಮತ್ತು ಕೆಲವು ಲೇಖನಗಳು ಬಿಡಿಬಿಡಿಯಾಗಿ ಪ್ರಕಟಗೊಂಡಿವೆ. ೧೯೩೦ ರಲ್ಲಿ ಬರೆದ ಸ.ಸ. ಮಾಳವಾಡರ "ಡೆಪ್ಯೂಟಿ ಚೆನ್ನಬಸಪ್ಪ", ೧೯೭೪ ರಲ್ಲಿ ಪ್ರಕಟಿಸಿದ ವೇಂಕಟೇಶ ಸಾಂಗಲಿಯವರ"ಡೆಪ್ಯೂಟಿ ಚೆನ್ನಬಸಪ್ಪ", ೧೯೭೫ ರಲ್ಲಿ ಮ. ಗು. ಹಂದ್ರಾಳರು ಪ್ರಕಟಿಸಿದ "ಡೆಪ್ಯೂಟಿ ಚೆನ್ನಬಸಪ್ಪ"- ಇಂಥ ಚಿಕ್ಕ ಚಿಕ್ಕ ಪುಸ್ತಕಗಳು ಮಾತ್ರ ಹೊರಬಂದಿವೆ. ಶ್ರೀನಿವಾಸ ಹಾವನೂರರ "ಹೊಸಗನ್ನಡ ಅರುಣೋದಯ"(೧೯೭೪), ರಾ ಯ ಧಾರವಾಡಕರರ "ಹೊಸಗನ್ನಡ ಸಾಹಿತ್ಯದ ಉದಯ ಕಾಲ"(೧೯೭೫) ಇಂಥ ಸಂಶೋಧನಾ ಪ್ರಬಂಧಗಳು ಈ ಕನ್ನಡವನ್ನು ಕಟ್ಟುವ ಕಾರ್ಯ ಆರಂಭವಾದದದ್ದು ನೌಕರಿಯ ಯಶಸ್ವಿ ನಿರ್ವಹಣೆಗಾಗಿಯೋ ಅಥವಾ ಉದ್ಯೋಗ ನಿಮಿತ್ಯಕ್ಕೋ ಅಥವಾ ಆಡಳಿತ ನಡೆಸುವವರ ದಬ್ಬಾಳಿಕೆಗೆ ತಗ್ಗಿ ಅನಿವಾರ್ಯಕ್ಕೋ..... ಎನ್ನುವತ್ತ ಸುಳಿವು ನೀಡುತ್ತವೆ.

ಒಟ್ಟಿನಲ್ಲಿ ೧೯೯೯ ರಲ್ಲಿ ಬಾಳಣ್ಣ ಸೀಗಿಹಳ್ಳಿಯವರು ಸಮಗ್ರ ಸಂಶೋಧನಾರ್ಥವಾಗಿ ಸಲ್ಲಿಸಿದ "ಡೆಪ್ಯೂಟಿ ಚೆನ್ನಬಸಪ್ಪನವರು-ಜೀವನ ಮತ್ತು ಸಾಧನೆ" ಎಂಬ ಮಹಾಪ್ರಬಂಧ ವ್ಯಕ್ತಿ ಪ್ರಧಾನವಾಗಿ ಮಾಡಿದ ಪ್ರಥಮ, ಸ್ವತಂತ್ರ ಮತ್ತು ಸಮಗ್ರ ಅಧ್ಯಯನವಾಗಿದೆ. ಇಡೀ ಸಂಸ್ಥೆಯನ್ನು ಕುರಿತು ಈ ವರೆಗೂ ಯಾವುದೇ ಸಮಗ್ರ ಅಧ್ಯಯನಗಳು ನಡೆದಿರುವುದಿಲ್ಲ. ಆದ್ದರಿಂದ ಈ ಹಿನ್ನೆಲೆಯಲ್ಲಿ ಬೆಳಕು ಚೆಲ್ಲುವ ದೃಷ್ಟಿಯಿಂದ ಈ ವಿಷಯವನ್ನು ಅಧ್ಯಯನಕ್ಕೆ ಎತ್ತಿಕೊಳ್ಳಲಾಗಿದೆ.

೧.೬. ಅಧ್ಯಯನದ ಆಕರಗಳು

ಈ ಸಂಶೋಧನಾ ಅಧ್ಯಯನಕ್ಕೆ ಅಗತ್ಯ ಮಾಹಿತಿಯನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಪಡೆಯಲಾಗಿದೆ. ಪ್ರಸ್ತುತ ವಿಷಯದ ಅಧ್ಯಯನದಲ್ಲಿ ಕ್ಷೇತ್ರಿಯ ನೆಲೆಮೂಲಕ್ಕಿಂತ ಕ್ಷೇದ್ರೀಯ ನೆಲೆ ಮೂಲಗಳಿಂದಲೇ ಆಕರಗಳ ಲಭ್ಯತೆ ಅಧಿಕವಾಗಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವಶ್ಯವಿರುವ ಮಾಹಿತಿಯನ್ನು ಪ್ರಾಥಮಿಕ ಮತ್ತು ಪೂರಕ ಮೂಲಗಳಿಂದ ಸಂಗ್ರಹಿಸಲಾಗಿದೆ. ೧೫೦ ವರ್ಷಗಳಷ್ಟು ಹಿಂದಿನ ತಳಮೂಲದ ವಾಸ್ತವ ಅರುಹಲು ನನಗೆ ಲಭಿಸಿದ ಪ್ರಾಥಮಿಕ ಆಕರವೆಂದರೆ ಅಂದಿನ ಪತ್ರಿಕೆಗಳು. ಇವು ಕೇಂದ್ರೀಯ ಮೂಲದಿಂದ ದೊರೆತಿವೆ. ಇನ್ನು ಹಳೆಯ ತಲೆಮಾರಿನ ಜನರನ್ನು ಹೆಚ್ಚೆಂದರೆ ೫೦-೫೫ ವರ್ಷಗಳ (ಒಂದು ತಲೆಮಾರಿನ)ಹಿಂದಿನ ಗತಚರಿತೆ ಹೇಳಬಲ್ಲ ಹಲವಾರು ಹಿರಿಯರನ್ನು ಸಂದರ್ಶಿಸಲಾಗಿದೆ. ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ, ಪ್ರಾಯೋಗಿಕ ಶಾಲೆಯ, ಕೇಂದ್ರೀಯ ಗ್ರಂಥಾಲಯದ, ಕವಿವಿಯ, ಕನ್ನಡ ಅಧ್ಯಯನ ಪೀಠದ, ಕರ್ನಾಟಕ ಮಹಾವಿದ್ಯಾಲಯದ, ಬಾಷೆಲ್ ಮಿಶನ್ ಶಾಲಾ ಗ್ರಂಥಾಲಯ, ಡೆಪ್ಯೂಟಿ ಚೆನ್ನಬಸಪ್ಪ ಪ್ರತಿಷ್ಠಾನ, ಬಾಸೆಲ್ ಮಿಷನ್

ಶಾಲಾ ಗ್ರಂಥಾಲಯ, ಕಿಟೆಲ್ ಕಾಲೇಜ್ ಗ್ರಂಥಾಲಯ, ಧಾರವಾಡ ಜಿಲ್ಲಾಧಿಕಾರಿಗಳವರ ಮನೆಯಲ್ಲಿಯ ಗ್ರಂಥಾಲಯ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ ಧಾರವಾಡ, ಬಾಳಣ್ಣ ಶೀಗಿಹಳ್ಳಿ ಮತ್ತು ಮಾಲಾ ರವೀಂದ್ರ ಕುಲಕರಣಿಯವರ ಮನೆಯೊಳಗಿರುವ ಖಾಸಗಿ ಗ್ರಂಥ ಸಂಗ್ರಹಗಳಿಂದ, 'ಜೀವನ ಶಿಕ್ಷಣ' ಪತ್ರಿಕೆಗಳಿಂದ, ಬೆಂಗಳೂರು ಪುಸ್ತಕ ಮನೆಯಿಂದ, ಸವದತ್ತಿ ಸರಕಾರಿ ಗ್ರಂಥಾಲಯದಿಂದ, ಮೊರಬ ಸರಕಾರಿ ಗ್ರಂಥಾಲಯದಿಂದ ಆಕರ ಸಂಗ್ರಹಿಸಲಾಗಿದೆ. ಅಲ್ಲದೇ ಭಾರತ ಇತಿಹಾಸ ಸಂಶೋಧನ ಮಂಡಳ. ಸದಾಶಿವ ಪೇಟ. ಪೇರು ಗೇಟ ಪುಣೆ, ಜಯಕರ ಮುಖ್ಯ ಗ್ರಂಥಾಲಯ,ಸ ಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ ಪುಣೆ, Directorate of Archives, government of maharastra, 156 sir Cowasjee Jahangeer Readymoney Building (Elphinston college building) Mahatma gandhi road, kala godha, fort, MUMBAI-400032. ಈ ಮುಖ್ಯ ಸ್ಥಳಗಳಿಗೆ ಭೇಟ್ಟಿ ಕೊಟ್ಟು ಅಂದಿನ ದಕ್ಷಿಣ ಮಹಾರಾಷ್ಟ್ರಕ್ಕೆ ಸಂಬಂಧಿಸಿದಂತೆ, ಶಿಕ್ಷಣ ಇಲಾಖೆಯ ದಾಖಲೆಗಳನ್ನು ಶೋಧಿಸಲಾಗಿದೆ. ಪೂರಕ ಮೂಲಗಳಿಗಿಂತ ಪ್ರಾಥಮಿಕ ಮೂಲಗಳಿಂದಲೇ ಹೆಚ್ಚಿನ ಮಾಹಿತಿ ಲಭಿಸುವ ಸನ್ನಿವೇಶದಲ್ಲಿ ಪ್ರಾಥಮಿಕ ಆಕರಗಳಿಂದಲೇ ಈ ಅಧ್ಯಯನ ಗಟ್ಟಿಗೊಳಿಸಲಾಗಿದೆ. ಈ ನಾರ್ಮಲ್ ಕ್ಲಾಸ್ ಸ್ಥಾಪನೆಯ ಪೂರ್ವೋತ್ತರ ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಇತಿಹಾಸ ಮತ್ತು ಸ್ಥಾಪನಾ ನಂತರದ ರಾಜಕೀಯ ಚಳುವಳಿಗಳು, ಸಾಮಾಜಿಕ ಹೋರಾಟಗಳು ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಾದ ಬೆಳವಣಿಗೆಗಳು ಮತ್ತು ಸ್ಥಿತ್ಯಂತರಗಳ ಅಧ್ಯಯನಕ್ಕಾಗಿ ರಾಮಚಂದ್ರ ಪಾಟೀಲ, ಶಿವಶಂಕರ ಹಿರೇಮಠ ಮುಂತಾದ ಅರ್ಹ ವ್ಯಕ್ತಿಗಳನ್ನು ಸಂದರ್ಶಿಸಲಾಗಿದೆ.

ಕೊನೆಟಿಪ್ಪಣಿ :

೧. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ (ಪರಿಷ್ಕೃತ ಆವೃತ್ತಿ)- ೧೯೯೫

೨. ಗ್ಯಾಝೆಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು-ಅನುವಾದ- ವೆಂ.ರಂ.ಕಟ್ಟಿ, ಪುಟ-೪೦೮, ೧೮೯೩

೩. ಡೆಪ್ಯೂಟಿ ಚೆನ್ನಬಸಪ್ಪನವರು-ಜೀವನ ಮತ್ತು ಸಾಧನೆ-ಡಾ. ಬಾಳಣ್ಣ ಸೀಗಿಹಳ್ಳಿ, ಮುನ್ನುಡಿಯಿಂದ -೧೯೯೩, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ

೪. ಸಾಹಿತ್ಯ ಸಂಗಮ- ಸ.ಸ.ಮಾಳವಾಡ, ಪುಟ ೨೩೭ ೧೯೭೦, ಜಯ ಪ್ರಕಾಶನ, ಧಾರವಾಡ-೭

೫. ಸಂಸ್ಕೃತಿ-ವಿಕೃತಿ ಡಾ.ಎಂ.ಎಂ.ಕಲಬುರ್ಗಿ, ಮೊದಲ ಮಾತು, ೨೦೦೬,

೬. An Introduction to Antropological Thought- Machan Jha, pg no-21- 1983,Vikas Publishing House Pvt Ltd E-28, sector-8, NOIDA-201301

ಅಧ್ಯಾಯ : ೨

ಟ್ರೇನಿಂಗ್ ಕಾಲೇಜಿನ ಆರಂಭ ಮತ್ತು ಸಮಕಾಲೀನ ಪರಿಸರ

ಅಧ್ಯಾಯ ೨

ಟ್ರೇನಿಂಗ್ ಕಾಲೇಜಿನ ಆರಂಭ ಮತ್ತು ಸಮಕಾಲೀನ ಪರಿಸರ

ಟ್ರೇನಿಂಗ್ ಕಾಲೇಜ್ 'ನಾರ್ಮಲ್ ಕ್ಲಾಸ್' ಆಗಿ ಆರಂಭವಾದಾಗ ಬ್ರಿಟಿಷರ ಆಡಳಿತ ಉತ್ತುಂಗಾವಸ್ಥೆಯಲ್ಲಿತ್ತು. ತನ್ನತನದ ಅರಿವಿಲ್ಲದ ಹೊತ್ತಿನಲ್ಲಿ ಕರ್ನಾಟಕ ಇಬ್ಭಾಗವಾಗಿ ಕನ್ನಡ ಮಾತನಾಡುವ ಕನ್ನಡಿಗರ ಸ್ಥಾನಮಾನಗಳೂ ಇಬ್ಭಾಗವಾದಂತಾಗಿತ್ತು. ಹೈದರಾಬಾದ ಕರ್ನಾಟಕ ಮತ್ತು ಮುಂಬಯಿ ಕರ್ನಾಟಕಗಳಲ್ಲಿ ಹಂಚಿ ಹೋದ ಹಲವು ಜಾತಿ, ವರ್ಗದ ಜನ ತಮ್ಮ ನೆಲೆ ನಿರ್ಧರಿಸಿಕೊಂಡು ಬದುಕು ಕಟ್ಟಿಕೊಳ್ಳುವುದರಲ್ಲಿ ಕನ್ನಡ, ಮರಾಠಿ, ಇಂಗ್ಲಿಷ ಎಂಬುದರ ಬಗೆಗೆ ಚಿಂತಿಸುವುದು ಮುಖ್ಯವಾಗಲೇ ಇಲ್ಲ. ನೆಲ ಇಬ್ಭಾಗವಾಗಿ ತುಂಡರಿಸುತ್ತಿರುವುದು ಜನರನ್ನು ಆತಂಕದಲ್ಲಿ ದೂಡಿತ್ತು. ಅಲ್ಲದೆ ಕನ್ನಡ ನೆಲದ ಒಟ್ಟು ಸಂದರ್ಭದಲ್ಲಿ ಇಂಗ್ಲಿಷ ಹೇರುವಿಕೆಯ ಅನುಭವ ಆರಂಭದಲ್ಲಿ ಗಮನ ಸೆಳೆಯುವಷ್ಟರಮಟ್ಟಿಗೆ ಸಂವಹನಿಸಲೇ ಇಲ್ಲ. ಬ್ರಿಟಿಷರ ಯಂತ್ರ, ಅಸ್ತ್ರಗಳ ತಂತ್ರಗಾರಿಕೆ ಮತ್ತು ಅಕ್ರಮಶೀಲತೆಗಳಿಂದಾಗಿ ಭಯಭೀತರಾಗಿದ್ದ ಜನ ವಿಚಾರ ಶೂನ್ಯತೆಗೆ ಒಳಗಾಗಿ, ಅಧೀನರಾಗಿ ಬದುಕುವಂತಾಗಿತ್ತು. ಈ ಸಂದರ್ಭ ಹಲವು ವಿಭಿನ್ನ ಪರಿಣಾಮಗಳಿಗೆ ಎಡೆಮಾಡಿತು. ನೆಲೆ, ಅಧಿಕಾರ, ಪ್ರತಿಷ್ಠೆ ಹಾಗೂ ಸ್ವಾರ್ಥಗಳು ರಿಕ್ತ, ವ್ಯತಿರಿಕ್ತ ಪರಿಣಾಮ ಬೀರಿದವು. ಕೆಲವರು ಹೊಟ್ಟೆ ಹೊರೆಯಲು, ನೆಲೆಗಾಗಿ ಹುಡುಕಾಡುತ್ತ ಕಂದಾಯ, ಧಾನ್ಯಗಳ ಸುಲಿಗೆ ಮಾಡುತ್ತಿದ್ದರೆ, ಕೆಲವರು ಮಾನರಕ್ಷಣೆಗಾಗಿ ಸಮಾಜದ ಕೆಳ ಸ್ಥರದಲ್ಲಿ ಬಡಿದಾಡುತ್ತಿದ್ದರು. ಕೆಲವರು ಅಧಿಕಾರಿಗಳ ಕೃಪಾಕಟಾಕ್ಷಕ್ಕೆ, ಅವರು ಹರಿಸುವ ಹಣದ ಹೊಳೆಗೆ ಬೆರಗಾಗಿ ಅವರ ಒಲವು ಗಳಿಸಲು ಕಾಯ್ದುಕುಳಿತವರಾಗಿದ್ದರೆ, ಇನ್ನೂ ಕೆಲವರು ದರ್ಪ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಸರ್ಕಾರದಲ್ಲಿಯ ಉನ್ನತ ಸ್ಥಾನ ಗಿಟ್ಟಿಸಿಕೊಳ್ಳಲು ಆಂಗ್ಲ ವಿದ್ಯೆಗೆ ಒಲಿದವರು. ಬದುಕ ಭದ್ರತೆಗಾಗಿ ವೈಯಕ್ತಿಕ ಹಿತಾಸಕ್ತಿಗಳು ವಿಭಿನ್ನ ಆಯಾಮಗಳಲ್ಲಿ ತೆರೆದುಕೊಂಡು ಸ್ವಾರ್ಥ ಪ್ರಾಧಾನ್ಯವಾದಾಗ ಸಾರ್ವಜನಿಕ ಚಿಂತನೆ, ನಾಡುನುಡಿಯ ಹಿಂಬಿಳಿಕೆ ಕುರಿತು ವಿಚಾರಿಸುವ ಮಾರ್ಗ ಸಂಕುಚಿತವಾಗಿತ್ತು. ಇಂಥ ಸಂಕ್ರಮಣ ಕಾಲದಲ್ಲಿ ನಾರ್ಮಲ್ ಸ್ಕೂಲ್ ಆರಂಭವಾಗುವಾಗಿನ ಭೂಮಿಕೆ ಬಹಳ ಮಹತ್ವದ್ದು. ಆ ಸಮಕಾಲೀನ ಪರಿಸರದ ಹಿನ್ನೋಟದಲ್ಲಿ ಅದರ ಸಿಂಹಾವಲೋಕನ ಮಾಡಲೇಬೇಕಾಗುತ್ತದೆ.

೨.೧. ರಾಜಕೀಯ ಪರಿಸರ :

ಕರ್ನಾಟಕದ ಪ್ರದೇಶಗಳು ರಾಜಕೀಯ ಪ್ರಭುತ್ವದ ಪ್ರಭಾವ, ಪರಿಣಾಮಗಳಿಗೆ ಎದೆಗೊಟ್ಟು ಭೌಗೋಲಿಕವಾಗಿ ಗಡಿಯಲ್ಲಿ ತನ್ನ ಪಾತ್ರ ಬದಲಿಸುವುದರೊಂದಿಗೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹರವುಗಳಲ್ಲಿಯ ಸ್ಥಿತ್ಯಂತರಗಳಿಗೆ ತನ್ನನ್ನು ಒಡ್ಡಿಕೊಂಡಿರುವುದು ಐತಿಹಾಸಿಕ ಸತ್ಯ. 'ಕರ್ನಾಟಕ' ಎಂಬ ಉಲ್ಲೇಖ ವ್ಯಾಸಭಾರತದಲ್ಲಿ ಕರಿಯ ಮಣ್ಣಿನ ನಾಡು, ಎತ್ತರದ ಭೂಮಿ ಇರುವ ನಾಡು, ಶ್ರೀಗಂಧದ ಕಂಪನ್ನುಳ್ಳ ನಾಡು, ಕರುನಾಡು ಎಂದೆಲ್ಲ ವರ್ಣನೆಗೊಂಡಿದೆ.

ಕರ್ನಾಟವನ್ನಾಳಿದ ಪ್ರಥಮ ಕನ್ನಡದ ದೊರೆಗಳೆಂದರೆ ಗಂಗರ ಸಮಕಾಲೀನರಾಧ ಕದಂಬರು. ಕ್ರಿ.ಶ. ೩೨೫ರಿಂದ ಇನ್ನೂರುವ ವರ್ಷ ಸ್ವತಂತ್ರ ರಾಜ್ಯಭಾರ ಮಾಡಿದವರಿವರು. ಕದಂಬ ವಂಶದ ಮಯೂರಶರ್ಮ ಬಾಲ್ಯದಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆಂದು ಕಂಚಿಗೆ ಹೋಗಿದ್ದಾಗ ಅಲ್ಲಿಯ ಪಲ್ಲವರು ಕ್ಷತ್ರಿಯ ಅಹಂಕಾರದಿಂದ ಬ್ರಾಹ್ಮನನಾಗಿದ್ದ ಮಯೂರಶರ್ಮನನ್ನು ಅವಮಾನಿಸಿದಾಗ ಅವನು ಖಡ್ಗ ಹಿಡಿದು, ಕ್ಷಾತ್ರತೇಜ ಮೆರೆದು ಪಲ್ಲವರನ್ನು ಸೋಲಿಸಿದ್ದು ಇತಿಹಾಸದಿಂದ ತಿಳಿದು ಬರುತ್ತದೆ. ಕನ್ನಡ ದೊರೆಗಳ ಈ ರೋಚಕ ವಿಜಯವನ್ನು ಈ ಸಂದರ್ಭದಲ್ಲಿ ಹೇಳುವ ತಾತ್ಪರ್ಯವೆಂದರೆ ಕನ್ನಡಿಗರಿಗಿರುವ ಸ್ವಾಭಿಮಾನದ ಪ್ರಸ್ತಾವ. ಆತ್ಮಾಭಿಮಾನ ಇರುವ ಮಾನವ ಜಾತ್ಯಾತೀತನಾಗಿ, ವಯೋತಿತನಾಗಿ ತನ್ನನ್ನ ತಾನು ರಕ್ಷಿಸಿಕೊಳ್ಳಬಲ್ಲನು. ಮುಖ್ಯವಾದುದೆಂದರೆ ಆ ಕಾಲದಲ್ಲಿಯೂ ವಿದ್ಯಾರ್ಥಿಯಾಗಿ ವಿದ್ಯಾರ್ಜನೆಗಾಗಿ ಪರರಾಜ್ಯ, ಅನ್ಯ ಸಾಮ್ರಾಜ್ಯವೆನಿಸದೆ ಹೋಗಿ ಶಿಕ್ಷಣ ಪಡೆಯುತ್ತಿದ್ದರು ಎಂಬುದು ಇಲ್ಲಿ ಪ್ರಸ್ತುತ. ಇದು ರಾಜವಂಶಸ್ಥರಿಗೆ ಮಾತ್ರ ಸಾಧ್ಯವಿರಬಹುದಾಗಿದ್ದರೂ ಅಂಥ ಒಂದು ರೂಢಿ ಇತ್ತು ಎಂಬುದು ಗಮನಾರ್ಹ ವಿಷಯ. ಇದೇ ಅರಸರ ಕಾಲದ ಹಲ್ಮಿಡಿ ಶಾಸನದಲ್ಲಿಯ ಕನ್ನಡಬರಹ ಕ್ರಿ. ಶ. ೪೫೦ ರಲ್ಲಿಯೇ ಸಮೃದ್ಧಿಗೊಂಡ ಕನ್ನಡ ಲಿಪಿಗೆ ಸಾಕ್ಷಿಯಾಗಿದೆ. ಹೀಗೆ ೨೦೦೦ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ, ಕರ್ನಾಟಕದ ಕೆಚ್ಚೆದೆಯ, ಸ್ವಾಭಿಮಾನಿ ಕನ್ನಡಿಗರ ಕೈಯಿಂದ ಯಾಕೋ ಮೇಲಿಂದ ಮೇಲೆ ಜಾರಿಹೋಗುವ ಪ್ರಸಂಗ, ಪರಿಸ್ಥಿತಿಗಳು ಮೇಲಿಂದ ಮೇಲೆ ಬಂದೆರಗಿರುವುದು ಇತಿಹಾಸ ಪುಟಗಳಲ್ಲಿ ಅಚ್ಚೊತ್ತಿರುವುದು ಸರ್ವವಿಧಿತ.

ಹೀಗೆ ಚರಿತ್ರೆಯಲ್ಲಿ ಗಂಗ ಕದಂಬರಾದಿಯಾಗಿ ಆರಂಭಗೊಂಡು ಬಾದಾಮಿ ಚಾಲುಕ್ಯರು (ಕ್ರಿ.ಶ.೫೦೦-೭೫೦), ರಾಷ್ಟ್ರಕೂಟರು(ಕ್ರಿ.ಶ. ೭೫೦-೯೮೦), ಕಲ್ಯಾಣ ಚಾಲುಕ್ಯರು(ಕ್ರಿ.ಶ.೯೭೦-೧೨೦೦) ಮುಂತಾದ ಅರಸರುಗಳೆಲ್ಲ ಊರಿ ಹೋದ ಹೆಜ್ಜೆಗಳು ಅವರ ಕಾಲದ ಶಾಸನ, ಸಂಸ್ಕೃತಿ ಮತ್ತು ಸಾಹಿತ್ಯಗಳ ಮೂಲಕ ಮತ್ತೂ ಸ್ಪಷ್ಟವಾಗುತ್ತ ಹೋಗುತ್ತವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕನ್ನಡಕ್ಕಿದ್ದ ಉಚ್ಛ್ರಾಯ ಸ್ಥಿತಿಯನ್ನ ವಚನ ಸಾಹಿತ್ಯ ಪುಷ್ಠಿಕರಿಸುತ್ತದೆ.

ಗಂಗ, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳರ ಆಳ್ವಿಕೆಯಲ್ಲಿ ವಿಶಾಲವಾಗಿ ಒಂದಾಗಿದ್ದ ಕನ್ನಡನಾಡು ಕ್ರಿ.ಶ. ೧೨ನೆಯ ಶತಮಾನದ ಅಂತ್ಯಭಾಗದಲ್ಲಿ ಎರಡು ಪ್ರತ್ಯೇಕ ಭಾಗವಾಗಿ ಒಡೆಯಿತು. ದಕ್ಷಿಣ ಭಾಗ ಹೊಯ್ಸಳರ ವಶದಲ್ಲೂ, ಉತ್ತರದ ಭಾಗ ಸೇವುಣರ ವಶದಲ್ಲೂ ಉಳಿದವು. ಹೊಯ್ಸಳ ಸಾಮ್ರಾಜ್ಯದ ಉತ್ತರಾಧಿಕಾರಿಯಾಗಿದ್ದ ಸೋಮೇಶ್ವರ ದುರ್ಬಲನಾದಾಗ ಹೊಯ್ಸಳ ರಾಜ್ಯವನ್ನು ಕ್ರಿ.ಶ. ೧೨೩೫ ರಲ್ಲಿ ವಿಭಾಗೀಕರಣ ಮಾಡಿದನು. ಹಿರಿಯ ಮುಮ್ಮಡಿ ಅರಸನಿಗೆ ದ್ವಾರಸಮುದ್ರ, ಕಿರಿಯ ರಾಮನಾಥನಿಗೆ ಕಣ್ಣಾನೂರು ಹಂಚಿಕೆಯಾದವು. ಅಖಂಡ ಕನ್ನಡ ಭೂಮಿಯ ತುಂಡರಿಕೆ ಇಲ್ಲಿದಂಲೇ ಆರಂಭವಾಯಿತೆನ್ನಬಹುದು. ಅಂತೂ ಕ್ರಿ.ಶ. ೧೦೦೦-೧೨೯೫ ರವರೆಗೆ ಸುಮಾರು ಮೂರು ಶತಮಾನಗಳ ಕಾಲ ಕನ್ನಡನಾಡನ್ನಾಳಿದ ಹೊಯ್ಸಳರು ಕಲೆ, ಸಾಹಿತ್ಯ, ಸಂಸ್ಕೃತಿಗೆ ಅಪಾರ ಕೊಡುಗೆ

ನೀಡಿದರು. ಇವರ ಕಾಲದಲ್ಲಿಯೇ ಕನ್ನಡ ಲಿಪಿಗೆ ಸುಂದರ ರೂಪ ಪ್ರಾಪ್ತವಾಗಿದೆ. ಅಣ್ಣತಮ್ಮಂದಿರ ವೈಮನಸ್ಸುಗಳ ಮಧ್ಯೆ ಪಾಂಡ್ಯರು, ಸೇವುಣರು ಬಲಿಷ್ಠರಾದರು. ನಾಡು ಹರಿದು ಹಂಚಿಕೆಯಾದ ಇದೇ ಸಂದರ್ಭದಲ್ಲೇ ಒಳಜಗಳಗಳು ಲಾಭ ಪಡೆದು ದಾಳಿ ಮಾಡಿದವರೆಂದರೆ ಅನ್ಯ ಧರ್ಮಿಯರಾದ ಬಹಮನಿ ಸುಲ್ತಾನರು. ಅನ್ಯ ಸಂಸ್ಕೃತಿಯ ದಾಳಿಯಿಂದಾಗಿ ಕನ್ನಡ ನೆಲದ ಸಂಸ್ಕೃತಿಯ ಪತನ ಆರಂಭಗೊಂಡಿದ್ದು ಇಲ್ಲಿಯೇ. ನಂತರ ಕ್ರಿ.ಶ. ೧೩೩೬ರಲ್ಲಿ ವಿಜಯನಗರದ ಅರಸರು ಕಂಡ ಅಖಂಡ ರಾಜ್ಯ ಕಟ್ಟುವ ಕನಸು ನನಸಾಗಿ, ಹಂಪಿ ರಾಜದಾನಿಯಾಗಿ ಮೆರೆಯಿತು(ಕ್ರಿ.ಶ.೧೫೬೫ರವರೆಗೆ). ಮುಂದೆ ಆದಿಲ್‌ಷಾಹಿಗಳ ಒಕ್ಕೂಟದ ವಿರುದ್ಧದ ರಕ್ಕಸಗಿ-ತಂಗಡಗಿ ನಿರ್ಣಾಯಕ ಯುದ್ಧದಲ್ಲಿ ಪತನಗೊಂಡ ವಿಜಯನಗರ ಸಾಮ್ರಾಜ್ಯದೊಂದಿಗೆ ಕನ್ನಡದ ಸಂಸ್ಕೃತಿ ಸಂಪೂರ್ಣ ನಾಶ ಹೊಂದಿತು.

ಬಹಮನಿ ಸುಲ್ತಾನರ ಕಾಲದಲ್ಲಿ ಕರ್ನಾಟಕದಲ್ಲಿ ವಿಶೇಷತಃ ಉತ್ತರದ ಜಿಲ್ಲೆಗಳಲ್ಲಿ ಇಸ್ಲಾಂ ಧರ್ಮ ನೆಲೆಯೂರಿತು. ಉರ್ದು ಸಾಹಿತ್ಯ ಬೆಳೆಯಿತು. ಅರವೀಡರು, ಪಾಳೆಯಗಾರರು, ಕೆಳದಿ ನಾಯಕರು, ಮೈಸೂರಿನ ಒಡೆಯರು... ಹೀಗೆ ಕನ್ನಡದ ನೆಲ ಕೈಯಿಂದ ಕೈಗೆ ಎಳೆದಾಡುತ್ತ, ಹಂಚಿಕೆಯಾಗುತ್ತ, ತನ್ನಗಡಿಗಳನ್ನು ಹಿಗ್ಗಿಸುತ್ತ, ಕುಗ್ಗಿಸುತ್ತ ಹರಿದು ಹನ್ನೊಂದು ರೂಪ ಕಂಡಿತ್ತು. ಪಾಳೆಯಗಾರರಿಗೆ ಸಹಕರಿಸುತ್ತಿದ್ದ ಮತ್ತು ಅವಕಾಶ ದೊರೆತಲ್ಲಿ ಅಧಿಕಾರಿಗಳಾಗುತ್ತಿದ್ದ ಮರಾಠರು ಬೆಳೆದು ಕ್ರಿ. ಶ.೧೭೬೫ರಲ್ಲಿ ಹೈದರಾಲಿಯನ್ನು ಸೋಲಿಸಿದರು. ಆಗಲೇ ಕನ್ನಡ ನಾಡಿನಲ್ಲಿ ಮರಾಠರ ಆಳ್ವಿಕೆ ಆರಂಭಗೊಂಡಿತ್ತು. ಹೈದರ ತಮಿಳು ನಾಡಿನೆಡೆಗೆ ಸಾಮ್ರಾಜ್ಯ ವಿಸ್ತರಿಸುವಾಗ ಎದುರಾದವರು ವ್ಯಾಪಾರಕ್ಕೆಂದು ಬಂದ ಬ್ರಿಟಿಷರು. ಇವರು ಮೊದಲ ಮೈಸೂರು ಯುದ್ಧದಲ್ಲಿ ಹೈದರಾಲಿಯಿಂದ ಸೋತು (ಕ್ರಿ. ಶ. ೧೭೬೭-೧೭೬೯) ಒಪ್ಪಂದ ಮಾಡಿಕೊಂಡಂತೆ, ಕ್ರಿ.ಶ. ೧೭೭೧ ರಲ್ಲಿ ಮರಾಠರು ಮೈಸೂರಿನ ಮೇಲೆ ದಾಲಿ ಮಾಡಿದಾಗ ಹೈದರನಿಗೆ ಸಹಕಾರ ನೀಡಲಿಲ್ಲ. ಸೋತ ಹೈದರಾಲಿ ಮರಾಠರ ಸ್ನೇಹ ಬೆಳೆಸಿದನು. ಮತ್ತೆ ಕೊಡಗು, ಚಿತ್ರದುರ್ಗ, ಧಾರವಾಡ, ಬಳ್ಳಾರಿಯ ಬಹುತೇಕ ಭಾಗವನ್ನು ಆಕ್ರಮಿಸಿಕೊಂಡು ಸಾಮ್ರಾಜ್ಯ ವಿಸ್ತರಿಸುತ್ತಲೇ ನಡೆದ ಹೈದರ, ಫ್ರೆಂಚರ ಸ್ನೇಹ ಬೆಳೆಸುವಾಗ ಬ್ರಿಟಿಷರ ವಿರೋಧ ಬೆಳೆದು, ಮಹಾ ಕುತಂತ್ರವನ್ನು ಎದುರಿಸಬೇಕಾಗಿ ಬರುತ್ತದೆ. ಬ್ರಿಟಿಷರು, ನಿಜಾಮರು ಮತ್ತು ಮರಾಠರು ಒಂದಾಗಿ ಹೈದರನ ವಿರುದ್ಧ ಎರಡನೆಯ ಮೈಸೂರು ಯುದ್ಧ ಸಾರಿದ ಸಂದರ್ಭದಲ್ಲಿ ಹೈದರ ಮರಣ ಹೊಂದುತ್ತಾನೆ. ಕ್ರಿ.ಶ. ೧೭೮೨ ರಲ್ಲಿ ಅಧಿಕಾರ ವಹಿಸಿಕೊಂಡ ಹೈದರನ ಮಗ ಟಿಪ್ಪು ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದಂಥವನು. ಬ್ರಿಟಿಷರ ವಿರುದ್ಧ ಹೈದರ ಮತ್ತು ಟಿಪ್ಪು ಸಾರಿದ ಸಮರಗಳಿಂದ ಮತ್ತು ಗಳಿಸಿದ ವಿಜಯಗಳಿಂದಾಗಿ ಮೈಸೂರು ಆಗ ಜಾಗತಿಕ ಕೀರ್ತಿ ಪಡೆದಿತ್ತು. ಮೂರನೆಯ ಮೈಸೂರು ಯುದ್ಧದಲ್ಲಿ ಸೋತ ಟಿಪ್ಪು (೧೭೯೦-೧೭೯೨) ಅಪಾರ ಭೂ ಒಡೆತನ, ಸಂಪತ್ತು ಮತ್ತು ಮಕ್ಕಳ ಮೇಲಿನ ಹಕ್ಕನ್ನು ಕಳೆದುಕೊಂಡನು.

ಗೆದ್ದ ಎದುರಾಳಿಗಳ ನಡುವೆ ಆದ ಸೌಹಾರ್ದಯುತ ಒಪ್ಪಂದದಂತೆ ನಿಜಾಮರು, ಮರಾಠರು ಮತ್ತು ಬ್ರಿಟಿಷರು ಕನ್ನಡ ಭೂಮಿಯನ್ನು ಹಂಚಿಕೊಂಡರು. ಅದುವರೆಗೂ ಹೈದರ

ಮತ್ತು ಟಿಪ್ಪು ಹೋರಾಡಿ ಒಂದುಗೂಡಿಸಿದ್ದ ಕನ್ನಡ ನೆಲದ ಅವಸಾನ ಇಲ್ಲಿಂದ ಹೆಚ್ಚತೊಡಗಿತು. ಹೈದರಾಬಾದ ಕರ್ನಾಟಕ ನಿಜಾಮರ ವಶದಲ್ಲಿದ್ದರೆ, ಸವಣೂರು, ಲಕ್ಷ್ಮೇಶ್ವರ ಮತ್ತು ಕುಂದಗೋಳ, ತುಂಗಭದ್ರಾ ನದಿಯ ಉತ್ತರದ ಕೆಲವು ಭಾಗಗಳು ಇವು ಪೇಶ್ವೆಯರ ವಶವಾದವು. ಮತ್ತು ಪೂರ್ವ-ಪಶ್ಚಿಮ ಘಟ್ಟಗಳ ಆಚೆಯ ಪ್ರದೇಶವನ್ನು ತಾವು ಉಳಿಸಿಕೊಂಡು, ಉಳಿದ ಮೈಸೂರು ಭಾಗವನ್ನು ಒಡೆಯರ ಅಧಿಕಾರಕ್ಕೆ ಬಿಟ್ಟುಕೊಟ್ಟರು. ಹೀಗೆ ಬ್ರಿಟಿಷರ ವಶವಾದ ಉತ್ತರ ಕರ್ನಾಟಕದ ಮೊದಲ ಪ್ರದೇಶವೆಂದರೆ ಟಿಪ್ಪುವಿನ ರಾಜ್ಯ ಭಾಗವಾಗಿದ್ದ ಕಾನಡಾ ಜಿಲ್ಲೆ (ಈಗಿನ ಕಾರವಾರ ಜಿಲ್ಲೆ). ಅಂದರೆ ಈಗೀನ ಕರಾವಳಿ ಜಿಲ್ಲೆಗಳು. 'ಪೂರ್ವ-ಪಶ್ಚಿಮ ಘಟ್ಟಗಳನ್ನು ವಿಭಾಗಿಸಿ ದಕ್ಷಿಣ ವಿಭಾಗ ಮತ್ತು ಉಪವಿಭಾಗ ಎಂದು ಎರಡಾಗಿ ಒಡೆಯಲಾಯಿತು (೧೮೦೧-೦೫). ದಕ್ಷಿಣ ವಿಭಾಗದಲ್ಲಿ ಬಾರಕೂರು, ಬೇಕಲ(ಕಾಸರಗೋಡು), ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳಿದ್ದವು. ಅಮಿನ್‌ದಿವಿ ದ್ವೀಪಸಮೂಹವು ಮಂಗಳೂರು ತಾಲೂಕಿನ ಭಾಗವಾಗಿತ್ತು. 'ದಕ್ಷಿಣ ಕನ್ನಡ' ಎಂಬ ಉಕ್ತಿಯು ಇಲ್ಲಿ ಕೆನರಾ ಮತ್ತು ಸೂಂದಾ ಪ್ರಾಂತ್ಯದ ದಕ್ಷಿಣ ವಿಭಾಗವನ್ನು ಸೂಚಿಸುತ್ತದೆ.'[೧]

ಕ್ರಿ.ಶ. ೧೭೬೧ ರಿಂದ ನೆಪಮಾತ್ರಕ್ಕೆ ರಾಜರಾಗಿದ್ದ ಮೈಸೂರು ಒಡೆಯರಿಗೆ ಕ್ರಿ.ಶ. ೧೮೮೧ ರಲ್ಲಿ ರಾಜ್ಯಾಧಿಕಾರ ದಕ್ಕಿತು. ಅಂದು ಕನ್ನಡ ನೆಲದ ದಕ್ಷಿಣ ಭಾಗದ ಆ ಸೀಮೆಯ ಭಾಗ್ಯದ ಬಾಗಿಲು ತೆರೆಯಿತು. ಆದರೆ ಉತ್ತರ ಭಾಗದವರಿಗೆ ಈ ಅದೃಷ್ಟ ತೆರೆಯಲು ಮತ್ತೇ ಒಂದುವರೆ ಶತಮಾನ ಕಾಯಬೇಕಾಯಿತು. ತುಂಗಭದ್ರಾ ನದಿಯ ಉತ್ತರ ಭಾಗವನ್ನು ಕ್ರಿ.ಶ. ೧೮೧೮ ರವರೆಗೆ ಮರಾಠಾ ಪೇಶ್ವೆಗಳೆ ಆಳಿದರು. ನಂತರ ಅದು 'ದಕ್ಷಿಣ ಮಹಾರಾಷ್ಟ್ರ'ವೆಂದೇ ಸಂಬೋಧಿಸಲ್ಪಟ್ಟಿತು. ಅವರ ಅಧಿಕಾರ ಕೊನೆಗೊಂಡಾಗ ಎಲ್ಲವೂ ಬ್ರಿಟಿಷರ ವಶವಾಗಿ, ಮುಂಬಯಿ ಪ್ರಾಂತ್ಯಕ್ಕೆ ಸೇರಿಸಲ್ಪಟ್ಟಿದ್ದರೂ, ಅಲ್ಲಲ್ಲಿ ಸ್ವತಂತ್ರರಾಗಿಯೇ ಇದ್ದ ಸಂಸ್ಥಾನಿಕರು ಬ್ರಿಟಿಷರ ಅಧಿಕಾರವನ್ನು ಒಪ್ಪಿಕೊಂಡೂ ತಮ್ಮ ಆಡಳಿತವನ್ನು ಮುಂದುವರೆಸಿದ್ದರು. ಸಂಸ್ಥಾನಿಕರೆಲ್ಲ ಪೇಶ್ವೆಯರ ಪ್ರಭಾವದಲ್ಲೇ ಇದ್ದುದರಿಂದ ಮರಾಠಿಯ ಸಾರಥ್ಯವೇ ಮುಂದುವರೆಯಿತು. ಈ ನೆಲದ ಮೂಲವಾಸಿಗಳು ಕನ್ನಡಿಗರಾದರೂ ಪ್ರಭುತ್ವ ಬ್ರಿಟಿಷರದ್ದು, ಆಳ್ವಿಕೆ ಮರಾಠರದ್ದು. ಹೀಗೆ ಕನ್ನಡ ನೆಲ ಮತ್ತು ಸಂಸ್ಕೃತಿ ಇಬ್ಬದಿಗೂ ತನ್ನನ್ನು ಒಡ್ಡಿಕೊಳ್ಳುವ ಅನಿವಾರ್ಯತೆಗೆ ತುತ್ತಾಯಿತು. ಹೀಗೆ ಎರಡೆರಡು ಭಾಷೆ, ಆಡಳಿತಗಳ ಅಡ್ಡಕೊಯ್ತದಲ್ಲಿ ಕನ್ನಡ ಭಾಷೆ, ಆಚರಣೆಗಳು ಚೂರುಚೂರಾದವು. ವ್ಯಾಪಾರಕ್ಕೆಂದು ಬಂದ ಬ್ರಿಟಿಷರು ರಾಜ್ಯ ಸಂಘಟಿಸುವಲ್ಲಿ ಯಾವುದೇ ತತ್ವಸಿದ್ಧಾಂತದ ಮಾದರಿ ಅನುಸರಿಸಿರಲಿಲ್ಲವಾದ್ದರಿಂದ ಕರ್ನಾಟಕ ಹೋಳುಹೋಳಾಯಿತು. ಉತ್ತರ ಕರ್ನಾಟಕ ೨೦ ವಿಭಾಗಗಳಲ್ಲಿ ಹಂಚಿಕೆಯಾಗಿ ಸಮೀಪದ ಊರುಗಳು ದೂರದ ಯಾವ್ಯಾವುದೋ ಸಂಸ್ಥಾನಗಳಿಗೆ ಸೇರಿಹೋಗಿ ಕನ್ನಡಿಗರ ಸ್ಥಿತಿ ಬಿರುಗಾಳಿಗೆ ಸಿಲುಕಿದ ದೋಣಿಯ ಪಯಣಿಗನಂತಾಗಿತ್ತು. ಕರ್ನಾಟಕ ತುಂಡುತುಂಡಾದ ಸ್ಥಿತಿಯನ್ನು ಈ ಮುಂದಿನ ಚಿತ್ರಣದಿಂದ ನಾವು ಸ್ಪಷ್ಟವಾಗಿ ತಿಳಿಯಬಹುದು:

"೧) ಮದ್ರಾಸ ಪ್ರಾಂತ: ದಕ್ಷಿಣ ಕನ್ನಡ, ಬಳ್ಳಾರಿ ಮತ್ತು ನೀಲಗಿರಿ ಜಿಲ್ಲೆಗಳು, ಕೊಳ್ಳೆಗಾಲ, ಹೊಸೂರು ಮತ್ತು ಮಡಕಶಿರಾ ತಾಲೂಕು

೨) ಮುಂಬೈ ಪ್ರಾಂತ: ಉತ್ತರ ಕನ್ನಡ, ಬೆಳಗಾವಿ, ಧಾರವಾಡ,ಸೊಲ್ಲಾಪೂರ, ಮಂಗಳವೇಡ.

೩) ಹೈದರಾಬಾದ ಸಂಸ್ಥಾನ: ಗುಲಬರ್ಗಾ, ಬೀದರ್, ರಾಯಚೂರು ಜಿಲ್ಲೆಗಳು

೪) ಕೊಡಗು

೫) ಕೊಲ್ಲಾಪೂರ ಸಂಸ್ಥಾನ: ರಾಯಭಾಗ, ಕಡಕೋಳ, ಕೋರಗಲ್ಲು

೬) ಸಾಂಗಲಿ ಸಂಸ್ಥಾನ: ತೇರದಾಳ, ಶಹಾಪೂರ, ದೊಡವಾಡ, ಶಿರಹಟ್ಟಿ

೭) ಮಿರಜ ಸಂಸ್ಥಾನ: ಲಕ್ಷ್ಮೇಶ್ವರ

೮) ಕಿರಿ ಮಿರಜ ಸಂಸ್ಥಾನ: ಬುಧಗಾಂವ್, ಗುಡಗೇರಿ

೯) ಕಿರಿ ಕುಂದರವಾಡ ಸಂಸ್ಥಾನ.

೧೦) ಹಿರಿ ಕುಂದರವಾಡ ಸಂಸ್ಥಾನ.

೧೧) ಜಮಖಂಡಿ ಸಂಸ್ಥಾನ: ಕುಂದಗೋಳ, ಜಪ್ಪಲಕಟ್ಟಿ

೧೨) ಮಧೋಳ ಸಂಸ್ಥಾನ.

೧೩) ಜತ್ ಸಂಸ್ಥಾನ.

೧೪) ಅಕ್ಕಲಕೋಟ ಸಂಸ್ಥಾನ.

೧೫) ಔಂದ್ ಸಂಸ್ಥಾನ.

೧೬) ರಾಮದುರ್ಗ ಸಂಸ್ಥಾನ: ಶಿರಸಂಗಿ

೧೭) ಸೋಂಡೂರು ಸಂಸ್ಥಾನ.

೧೮) ಆನೆಗುಂದಿ ಸಂಸ್ಥಾನ.

೧೯) ಸವಣೂರು ಸಂಸ್ಥಾನ.

೨೦) ಬೆಂಗಳೂರು, ಬೆಳಗಾವಿ, ಬಳ್ಳಾರಿ – ಇವು ದಂಡು ಪ್ರದೇಶಗಳು"[೨]

ಮದ್ರಾಸ ಮತ್ತು ಮುಂಬೈ ಬ್ರಿಟಿಷರ, ಹೈದರಾಬಾದ ನಿಜಾಮರ ಹಾಗೂ ಇತರ ಸಂಸ್ಥಾನಗಳಲ್ಲಿ ಸಂಸ್ಥಾನಿಕರ ಆಡಳಿತಕ್ಕೆ ಒಳಗಾಗಿದ್ದ ಕನ್ನಡಿಗರು ಅನಾಥ ಮತ್ತು ಅಸುರಕ್ಷಿತ ಪರಿಸ್ಥಿತಿಯಲ್ಲಿದ್ದರು. ಭಾಷೆ, ಸಂಸ್ಕೃತಿ, ನೆಲ– ಇವು ಮೇಲಿಂದ ಮೇಲೆ ನಡೆಯುವ ಬೇರೆ ಬೇರೆ ಭಾಷೆ, ಸಂಸ್ಕೃತಿಗಳ ಆಡಳಿತ, ದಬ್ಬಾಳಿಕೆ, ದಾಳಿಗಳಿಂದಾಗಿ ತನ್ನ ಗಡಿಯನ್ನು ನಿರ್ಧರಿಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದ ಒಟ್ಟು ಕರ್ನಾಟಕದ ಚಿತ್ರಣ ಹೀಗಿರುವಾಗ ಇನ್ನೂ ಧಾರವಾಡಕ್ಕೆ ಮಾತ್ರ ಸಂಬಂಧಿಸಿದಂತೆ ಈ ದಾಳಿ–ಪ್ರತಿದಾಳಿ, ಆಕ್ರಮಣ–ಅಧೀನ, ಕಸಿ–ಕೊಳ್ಳು ಇವುಗಳ ಹಗ್ಗಜಗ್ಗಾಟದಲ್ಲಿ ಇದರ ಗಡಿ ಇಷ್ಟೇ ಮತ್ತು ಹೀಗೆ ಎಂದು ಗೆರೆ ಕೊರೆದು ತೋರಿಸುವುದು ಅಸಾಧ್ಯವೇ ಆಗಿದೆ. ಬೇರೆ ಸಂಸ್ಕೃತಿಗಳ ಆಡಳಿತ, ದಬ್ಬಾಳಿಕೆಗೆ ಒಳಗಾದಾಗ ಮೂಲಸತ್ವ ಎನ್ನುವುದು ನಿರ್ಮೂಲವಾಗುತ್ತದೆ. ಸ್ಥಳಿಯರು ಆತಂಕದಲ್ಲಿ ದಿನ ದೂಡುತ್ತ ಆಡಳಿತದ ಜಾಡು ಹಿಡಿದು ಅವರ ಮರ್ಜಿ ಅನುಸರಿಸಿ, ಅನುಕರಿಸಿ ಬದುಕುವಂತಾಗುತ್ತದೆ. ಆಗ ಸಂರಚನೆ ಮತ್ತು ಸಂಘಟನೆಗಳು,

ನವನಿರ್ಮಾಣ ಎನ್ನುವುದು ನಿಂತು ಹೋಗುತ್ತದೆ. ಕನ್ನಡದ ಪಾಡೂ ಅದೇ ಆಗಿತ್ತು. ಹೀಗೆ ರಾಜ್ಯ ಪ್ರಭುಗಳ ಸೋಲುಗೆಲುವುಗಳ ಮೇಲೆಯೇ ಆ ಪ್ರದೇಶದ ಭೌಗೋಳಿಕ ಗಡಿಯೂ ನಿರ್ಧಾರವಾಗುತ್ತಿತ್ತು.

ಉತ್ತರ ಕರ್ನಾಟಕದಲ್ಲಿ ರಾಜಕೀಯ ಪರಿಸರ:

ಉತ್ತರ ಕರ್ನಾಟಕದ ಮತ್ತು ಸ್ಥಳೀಯ ಧಾರವಾಡದ ವಿಷಯಕ್ಕೆ ಬಂದರೆ ದಕ್ಷಿಣ ಮಹಾರಾಷ್ಟ್ರವಾದ ಈ ಪ್ರದೇಶದಲ್ಲಿ ಬ್ರಿಟಿಷರ ಪ್ರಭುತ್ವ ಒಪ್ಪಿಕೊಂಡ ಮೇಲೂ ನಡೆಸಿದ ಪಟವರ್ಧನ, ಭಾವೆ ಮತ್ತು ಘೋರ್ಪಡೆ ಮನೆತನದವರು ಹಸಿಮಾಂಸ ಹರಿಯುವ ಹದ್ದುಗಳಂತೆ ಎಳೆದಾಡಿ ಬಂದಷ್ಟನ್ನು ಬಾಚಿಕೊಂಡರು. ಇವರ ಅರ್ಥಕೋಶದಲ್ಲಿ ಗಡಿ, ಮಿತಿ, ಮೇರೆ, ಸೀಮೆ, ಪರಿಧಿ...... ಎಂಬುವೆಲ್ಲ ಅರ್ಥ ಕಳೆದುಕೊಂಡಿದ್ದವು. "ಕೇವಲ ೧೨ ಮೈಲು ಅಂತರದಲ್ಲಿದ್ದ ಲಕ್ಷ್ಮೇಶ್ವರ ಮಿರಜ ಸಂಸ್ಥಾನದ ಅಧಿಪತ್ಯಕ್ಕೆ ಒಳಗಾಗಿದ್ದರೆ, ಶಿರಹಟ್ಟಿ ಸಾಂಗ್ಲಿ ಅಧಿಪತ್ಯಕ್ಕೊಳಪಟ್ಟಿತ್ತು. ಗುಡಗೇರಿ ಕುಂದಗೋಳ ನಡುವಿನ ಅಂತರ ಕೇವಲ ೮ ಮೈಲು. ಗುಡಗೇರಿ ಮಿರಜ ಸಂಸ್ಥಾನಕ್ಕೆ ಸೇರಿದರೆ ಕುಂದಗೋಳ ಜಮಖಂಡಿ ಸಂಸ್ಥಾನಕ್ಕೊಳಪಟ್ಟಿತ್ತು. ಜಮಖಂಡಿ ಪಟವರ್ಧನ ಮನೆತನಕ್ಕೆ ಸೇರಿದರೆ ಹತ್ತಿರವೇ ಇದ್ದ ಮುಧೋಳ ಘೋರ್ಪಡೆ ಮನೆತನಕ್ಕೆ ಸೇರಿತ್ತು. ಅಷ್ಟೇ ಏಕೆ ಹುಬ್ಬಳ್ಳಿಯ ಗಣೇಶ ಪೇಟೆಯ ಭಾಗ ಸಾಂಗಲಿ ಸಂಸ್ಥಾನಕ್ಕೆ ಸೇರಿತ್ತು"[೩] ಇದನ್ನು ನೋಡಿದರೆ ಧಾರವಾಡ ಭಾಗದ ಕನ್ನಡಿಗರಿಗೆ ಅಸ್ಥಿತ್ವ ಎಂಬುದೇ ಇಲ್ಲವಾಗಿತ್ತು.

ಭಾರತದವನ್ನೆಲ್ಲ ಆಕ್ರಮಿಸುತ್ತ ಬ್ರಿಟಿಷರು ತಮ್ಮ ಕರಾಳ ಛಾಯೆಯನ್ನು ಬೀರಿದಂತೆ ಉತ್ತರ ಕರ್ನಾಟಕವನ್ನೂ ಆಕ್ರಮಿಸಿದರು. "೧೮೧೭ ರಲ್ಲಿ ಬಾಜಿರಾವ ಪೇಶ್ವೇ ಮಾಡಿಕೊಂಡ ಪುಣಾ ಒಪ್ಪಂದದಂತೆ ಧಾರವಾಡ ಮತ್ತು ಕುಸುಗಲ್‌ಗಳನ್ನು ಬ್ರಿಟಿಷರ ಸೈನ್ಯದ ವೆಚ್ಚಕ್ಕಾಗಿ ಬಿಟ್ಟುಕೊಟ್ಟನು. ಸರ್ ಥಾಮಸ್ ಮನ್ರೋ ಬಿ. ಫ್ರೀಜ್ಲರನ ಜೊತೆ ಧಾರವಾಡಕ್ಕೆ ಬಂದನು. ಬಾಜಿರಾಯ ಮತ್ತೇ ಬ್ರಿಟಿಷರ ವಿರುದ್ದ ಯುದ್ಧ ಸಾರಲು ಲೆ.ಕ.ಮೇಜರ್ ನೆವಾಲ್ ಧಾರವಾಡ, ಕುಸುಗಲ್ ಮತ್ತು ರಾಣೆಬೆನ್ನೂರಗಳನ್ನೂ ಗೆದ್ದ. ಬಾಜಿರಾವ್ ತಾನು ಬಿಟ್ಟುಕೊಟ್ಟಿದ್ದ ಪ್ರದೇಶಗಳನ್ನು ಮತ್ತೇ ಗೆಲ್ಲಲು ತನ್ನ ಅಧಿಕಾರಿ ಕಾಶೀರಾವ್ ಗೋಖಲೆಗೆ ಆಜ್ಞಾಪಿಸಿದ. ಆದರೆ ಮನ್ರೋನಿಗೆ ಸ್ಥಳಿಯರ ಸಹಕಾರ ಲಭಿಸಿದ್ದರಿಂದ ತನ್ನಲ್ಲಿದ್ದ ಮಿತಬಲದಿಂದಲೇ ಆತ ಜಯಶಾಲಿಯಾದ ಮತ್ತು ಪೇಶ್ವೆಯ ಪ್ರದೇಶದಲ್ಲಿ ೨೫ ಸ್ಥಳಿಯರನ್ನೇ ಅಮಲ್ದಾರರನ್ನಾಗಿ ನೇಮಿಸಿ ಅವರ ಮೂಲಕವೇ ಸೇನೆಯ ಪೇದೆಗಳನ್ನು ಭರ್ತಿಮಾಡಿ, ಮೇ ೧೫ರೊಳಗೆ ಬ್ರಿಟಿಷಧ್ವಜ ಹಾರಿಸುವ ಕೆಲಸವನ್ನು ಮನ್ರೋ ಮಾಡಿ ಮುಗಿಸಿದನು. ಜೂನ್ ೧೫ಕ್ಕೆ ಮನ್ರೋ ಹುಬ್ಬಳ್ಳಿಗೆ ತೆರಳಿದಾಗ ಲೆ.ಕ.ನೆವಾಲ್ ಧಾರವಾಡ ಕೋಟೆಯ ಹೊಣೆ ಹೊತ್ತನು. "ಆಗ ಸಾಂಗಲಿ ಪಟವರ್ಧನರು ತಮ್ಮ ವಶದಲ್ಲಿದ್ದ ಹುಬ್ಬಳ್ಳಿಯನ್ನು ಮನ್ರೋವಿಗೆ ಬಿಟ್ಟುಕೊಟ್ಟರು."[೪]

ಅಂತೂ (ಈಗೀನ) ಧಾರವಾಡ ವ್ಯಾಪ್ತಿಯೊಳಗೆ ಬಂದ ಎಲ್ಲ ಪ್ರದೇಶ ಮತ್ತು ಇತರ ಎಲ್ಲ ಪ್ರದೇಶಗಳನ್ನೊಳಗೊಂಡಂತೆ ಈ ಭಾಗಕ್ಕೆ ಮನ್ರೋ ಕಮೀಷನರ್ ಆಗಿ ಸುಮಾರು ೧೮೧೯ರಲ್ಲಿ ನೇಮಕಗೊಂಡನು. ಆ ನಂತರವೂ "ಧಾರವಾಡ ಇಚಲಕರಂಜಿಯ ಘೋರ್ಪಡೆಗೆ ಜಾಗೀರಾಗಿದ್ದು ಪೇಶ್ವೆಯ ನೇರ ಆಡಳಿತಕ್ಕೆ ಒಳಪಟ್ಟಿತ್ತು."[೫] ಹೀಗಾಗಿ ಮರಾಠಿಯ ಔನ್ನತ್ಯಕ್ಕೆ ಪಾರವೇ ಇರಲಿಲ್ಲ. ಕನ್ನಡ ಇಕ್ಕಳದೊಳಗಿಂದ ಇಣುಕುತ್ತಿತ್ತು.

ಹೀಗೆ ೧೮೧೮ರಲ್ಲಿ ಉತ್ತರ ಕರ್ನಾಟಕ ಭಾಗವನ್ನು ವಶಪಡಿಸಿಕೊಂಡ ನಂತರ ಧಾರವಾಡ ಪರಿಸರದ ಅಂದರೆ 'ಕೃಷ್ಣೆಯ ದಕ್ಷಿಣ'ದ ಈ ಪ್ರದೇಶವನ್ನು 'ಕನ್ನಡ ಪ್ರದೇಶ'ವೆಂದು ಮನಗಂಡ ಮೊದಲ ಬ್ರಿಟಿಷ ಅಧಿಕಾರಿ ಎಂದರೆ ಥಾಮಸ್ ಮನ್ರೋ. ಆಗ ಬಳ್ಳಾರಿ ಕನ್ನಡ ಜಿಲ್ಲೆಯಾಗಿ ಪರಿಗಣಿತವಾದ್ದರಿಂದ, ಬಳ್ಳಾರಿಯ ಜೊತೆಗೆ (ಮದ್ರಾಸ ಪ್ರಾಂತ್ಯದ ಆಧಿಪತ್ಯಕ್ಕೆ) ಧಾರವಾಡ ಪರಿಸರದ ಪ್ರದೇಶವನ್ನು ಸೇರಿಸಬೇಕೆಂದು ಮನ್ರೋ (೧೮೨೬ರಲ್ಲಿ) ಸೂಚಿಸಿದ್ದನು. ಆದರೆ ಈ ಪ್ರದೇಶದಲ್ಲಿ ಕೃಷ್ಣೆಯ ಉತ್ತರಕ್ಕಿರುವ ಮರಾಠಾ ಸಂಸ್ಥಾನಿಕರ ಒಡೆತನದ ಪ್ರದೇಶಗಳು ಇರುವುದರಿಂದ ಹಾಗೂ ಅವರಿಗೆ ಪುಣೆ, ಮುಂಬಯಿಗಳ ಜೊತೆಗೆ ನಿಕಟ ಸಂಪರ್ಕವಿರುವುದರಿಂದ, ಅವರ ಕೊಡುಕೊಳ್ಳುವಿಕೆಗೆ ಮತ್ತು ವಹಿವಾಟಿಗೆ ಮುಂಬಯಿಯೇ ನಿಕಟವರ್ತಿಯಾಗಿರುವ ಕಾರಣಗಳಿಂದಾಗಿ ಧಾರವಾಡವನ್ನು ದೂರದ ಮದ್ರಾಸ ಪ್ರಾಂತ್ಯಕ್ಕೆ ಸೇರಿಸುವುದನ್ನು ಕೈಬಿಟ್ಟು ಮುಂಬಯಿ ಆಧಿಪತ್ಯದಲ್ಲಿಯೇ ಉಳಿಸಿ, "ಕೃಷ್ಣಾನದಿಯ ದಕ್ಷಿಣದ ಮರಾಠಾ ದೇಶ"ವೆಂದು ಕರೆದರು.

ಬೆಳಗಾವಿ, ಬಿಜಾಪೂರ, ಸೊಲ್ಲಾಪೂರ ಜಿಲ್ಲೆಗಳ ಭಾಗಗಳನ್ನು ಒಟ್ಟುಗೂಡಿಸಿ, ಧಾರವಾಡವನ್ನು ಕೇಂದ್ರವಾಗಿರಿಸಿ ೧೮೩೦ರಲ್ಲಿ ಮುಂಬೈ ಪ್ರಾಂತ್ಯದ ಒಂದು ಜಿಲ್ಲೆಯಾಗಿ ಮಾನ್ಯಮಾಡಿದಾಗ ಧಾರವಾಡವೂ ಒಂದು ಅಖಂಡ ಜಿಲ್ಲೆಯಾಯಿತು. ೧೮೩೬ರಲ್ಲಿ ಬೆಳಗಾವಿಯನ್ನು ಪ್ರತ್ಯೇಕಿಸಿ ಸ್ವತಂತ್ರ ಜಿಲ್ಲೆಯಾಗಿ ಮಾಡಲಾಯಿತು. ಮುಂದೆ ನಿಪ್ಪಾಣಿ ದೇಸಾಯಿಯ ಪ್ರದೇಶವನ್ನು ಬೆಳಗಾವಿ ಜಿಲ್ಲೆಗೆ ಸೇರಿಸುವ ಸಂದರ್ಭದಲ್ಲಿ ಅವನಿಗೆ ಸೇರಿದ್ದ ಅಣ್ಣಿಗೇರಿ ಪರಿಸರದ ೧೩ ಗ್ರಾಮಗಳನ್ನು ಧಾರವಾಡ ಜಿಲ್ಲೆಗೆ ಸೇರಿಸಲಾಯಿತು. ಹೀಗೆ ನಾಡಿನ ಗಡಿಗಳ ರೇಖೆಯ ನಿರ್ಣಾಯಕತ್ವದ ಮೇಲೆ ರಾಜಕೀಯ ಅನಿಶ್ಚಿತ ನಿರ್ಧಾರಗಳು, ಒಪ್ಪಂದಗಳು ಅತಂತ್ರತೆಯನ್ನು ಸೃಷ್ಟಿಸಿಬಿಟ್ಟಿದ್ದವು.

೧೮೬೨ರಲ್ಲಿ ಮದ್ರಾಸ ಇಲಾಖೆಗೆ ಸೇರಿಹೋಗಿದ್ದ ಕಾನಡಾ ಜಿಲ್ಲೆಯನ್ನು ಮುಂಬಯಿ ಇಲಾಖೆಗೆ ಸೇರಿಸಿ 'ಉತ್ತರ ಕಾನಡಾ' ಎಂಬ ಹೆಸರು ಕೊಟ್ಟರು.

೧೮೬೪ರಲ್ಲಿ ಸೊಲ್ಲಾಪೂರ ಜಿಲ್ಲೆಗೆ ಸೇರಿದ್ದ ಇಂಡಿ, ಹಿಪ್ಪರಗಿ, ವಿಜಾಪೂರ, ಮನಗೋಳಿ, ಮುದ್ದೇಬಿಹಾಳ ಈ ೫ ತಾಲೂಕುಗಳನ್ನು ಮತ್ತು ಬೆಳಗಾವಿ ಜಿಲ್ಲೆಗೆ ಸೇರಿದ್ದ ಬಾಗಲಕೋಟ, ಬಾದಾಮಿ, ಹುನಗುಂದ ಈ ೩ ತಾಲೂಕುಗಳನ್ನು ಸೇರಿಸಿ ಕಲಾದಗಿ ಜಿಲ್ಲೆಯನ್ನಾಗಿ ಮಾಡಿದರು.

ನಂತರ ೧೮೬೪ರಲ್ಲಿ ಹಿಪ್ಪರಗಿ ತಾಲೂಕಿಗೆ ಸಿಂದಗಿ ಎಂದೂ, ಮನಗೂಳಿ ತಾಲೂಕಿಗೆ ಬಾಗೇವಾಡಿ ಎಂದು ನಾಮಕರಣ ಮಾಡಲಾಯಿತು. ೧೮೮೪ರಲ್ಲಿ ಕಲಾದಗಿಯನ್ನು ಕೈಬಿಟ್ಟು ಬಿಜಾಪೂರನ್ನು ಜಿಲ್ಲೆಯಾಗಿ ಪರಿಗಣಿಸಲಾಯಿತು.

ಹೀಗೆ ಕನ್ನಡ ನಾಡಿನ ಗಡಿರೇಖೆಯ ಕುರಿತ ರಾಜಕೀಯ ನಿರ್ಧಾರ ಕೊನೆಗಾಣಲೇ ಇಲ್ಲ. ಭೌಗೋಳಿಕ ವ್ಯಾಪ್ತಿಗೆ ನಿರ್ಣಾಯಕ ಪರಿಧಿ ಸಿದ್ಧಗೊಳ್ಳಲೇ ಇಲ್ಲ. ರಾಜಕೀಯ ಆಳ್ವಿಕೆಯ ಬದಲಾವಣೆಗಳ ಮೇಲೆ ಅವಲಂಬಿತವಾದ ಗಡಿರೇಖೆಗಳಿಗೆ ತನ್ನದೇಯಾದ ನೆಲೆ, ಗುರುತ್ವ ಎಂಬುದಿರಲಿಲ್ಲ. ರಾಜರು ಮತ್ತು ಅವರ ನಿರ್ಧಾರಗಳು ಬದಲಾದಂತೆ ಗಡಿರೇಖೆಗಳು ಮೈಹೊರಳಿಸಿದ್ದು ಇದರಿಂದ ಸ್ಪಷ್ಟವಾಗುತ್ತದೆ.

೨.೨. ಸಾಮಾಜಿಕ ಪರಿಸರ :

ಬ್ರಿಟಿಷರ ದಾಳಿ ಕ್ರಮೇಣ ವ್ಯಾಪಿಸುತ್ತ, ಇಡೀ ಭಾರತವನ್ನೇ ವಶಪಡಿಸಿಕೊಂಡಾಗ ಮರಾಠಾ ಮತ್ತು ನಿಜಾಮರೊಂದಿಗಿನ ಅವರ ಸಂಬಂಧ ಸೌಹಾರ್ದಯುತವಾಗಿತ್ತು. ಸರಕಾರ ಬ್ರಿಟಿಷರದ್ದಾದರೂ ಉಸ್ತುವಾರಿ ನಿಜಾಮ ಮತ್ತು ಮರಾಠರದ್ದಾಗಿತ್ತು. ಹೀಗಾಗಿ ತ್ರಿಕೋನಗಳ ಮಧ್ಯೆ ಕರ್ನಾಟಕಕ್ಕೆ ತನ್ನತನ ನಿರ್ಧರಿಸಲು ಅಸಾಧ್ಯವಾಗಿತ್ತು. ಈ ಬೇರೆ ಸಂಸ್ಕೃತಿಗಳ ದಾಳಿ ಮತ್ತು ಆಳ್ವಿಕೆಗಳು ಸಮಾಜದ ಮೇಲೆ ಮಿಶ್ರ ಪರಿಣಾಮ ಬೀರಿದವು. ತನ್ನದಲ್ಲದ ಸಂಸ್ಕಾರ, ಆಚರಣೆಗಳು ಕನ್ನಡಿಗರಿಗೆ ಕಡು ಕಷ್ಟವಾಗಿದ್ದರೂ ಆಡಳಿತಗಾರರ ಸಂಸ್ಕೃತಿ, ಭಾಷೆ ರೂಢಿಸಿಕೊಳ್ಳಬೇಕಾಗಿತ್ತು. ಈ ರೀತಿಯ ಪರಸಂಸ್ಕೃತಿಯ ದಾಳಿ ನಾಡಿನ ಎಲ್ಲ ಸ್ಥರಗಳ ಮೇಲೆ ಪರಿಣಾಮ ಬೀರಿತು; ಪ್ರಧಾನವಾಗಿ ಸಾಮಾಜಿಕ ಪರಿಸರದ ಮೇಲೆ ತೀವ್ರ ಪರಿಣಾಮ ಬೀರಿತು.

ಧಾರವಾಡದ ಪರಿಸರದಲ್ಲಿ ಘೋರ್ಪಡೆಗಳ ಆಡಳಿತವಿದ್ದು ಮರಾಠಿ ಭಾಷೆ ಮತ್ತು ಸಂಸ್ಕೃತಿಗಳು ಪ್ರಧಾನವಾಗಿದ್ದವು. ಆಡಳಿತಗಾರರೊಂದಿಗೆ ವ್ಯವಹರಿಸಲು, ಆಡಳಿತದ ಭಾಗವಾಗಿ ಉದ್ಯೋಗಕ್ಕೆ ಸೇರಲು ಮತ್ತು ಸಮಾಜದೊಳಗಿನ ಕೊಡುಕೊಳ್ಳುವಿಕೆಗೆ, ಮರಾಠಿ ಭಾಷೆಯ ಕಲಿಕೆ ಅನಿವಾರ್ಯವಾಗಿತ್ತು. ಭಾಷಾ ಕಲಿಕೆ ಕಾಲಕ್ರಮೇಣ ತನ್ನ ಸಂಸ್ಕೃತಿಯೆಡೆಗೆ ಎಳೆದುಕೊಂಡು ಹೋದಂತೆ ಕನ್ನಡಿಗ ಕ್ರಮೇಣ ಮರಾಠಿಯನ್ನೇ ಒಗ್ಗೂಡಿಸಿಕೊಂಡ ಮತ್ತು ಮರಾಠಿಗನಾಗಿಬಿಟ್ಟಿದ್ದ.

೧೮೧೮ರ ನಂತರ ಧಾರವಾಡ ಭಾಗದಲ್ಲಿ ಒಂದು ಮುಖ್ಯವಾದ ರಾಜಕೀಯ ಬೆಳವಣಿಗೆ ಎಂದರೆ ಕಿತ್ತೂರಿನ ಮಹಾ ಸಂಗ್ರಾಮ. ಕಮಿಷನರ್ ಮನ್ರೋನ ಅನಾರೋಗ್ಯದ ಕಾರಣದಿಂದಾಗಿ ಬಳ್ಳಾರಿಗೆ ತೆರಳಿದಾಗ ಮುಂಬೈಯಲ್ಲಿದ್ದ ಮೌಂಟ್ ಸ್ಟುಅರ್ಟ್ ಎಲ್ಫಿನಸ್ಟನ್‌ನ ಅಧೀನ ಅಧಿಕಾರಿಯಾಗಿದ್ದ ಚಾಪ್ಲಿನ್, 'ದಕ್ಷಿಣ ಮರಾಠಾದೇಶ'ದ ಪ್ರಿನ್ಸಿಪಾಲ್ ಕಲೆಕ್ಟರನಾಗಿ ಬಂದನು. ಹುಬ್ಬಳ್ಳಿಯಲ್ಲಿ ಜ.ಪ್ರಿಜ್ಲರ್ ಹಾಗೂ ಧಾರವಾಡದಲ್ಲಿ ನೆವಾಲ್ ತಮ್ಮ ಸೈನ್ಯಗಳೊಂದಿಗೆ ಆಡಳಿತ

ನೋಡಿಕೊಂಡಿದ್ದರು. ೧೮೭೯ರಲ್ಲಿ ಚಾಪ್ಲಿನ್‌ನ ಸ್ಥಾನದಲ್ಲಿ ಥ್ಯಾಕರೆಯು ಜಿಲ್ಲಾಧಿಕಾರಿಯಾಗಿ ಬಂದನು. ಮನ್ರೋ ಅಧಿಕಾರದಲ್ಲಿದ್ದಾಗ ೧೮೧೮ ಜುಲೈ ೨೮ರಂದು ಸನ್ನದನ್ನು ಕೊಟ್ಟು, ಮನ್ನಿಸಿದ್ದ ಕಿತ್ತೂರಿನ ಸ್ವಾತಂತ್ರ್ಯವನ್ನು ಥ್ಯಾಕರೆ ಬಂದ ಮೇಲೆ ಕಿತ್ತುಕೊಳ್ಳಲು ಪ್ರಯತ್ನಿಸಿದನು. ಆತನು ಪರಕೀಯ ಮನೋಧೋರಣೆ ಹೊಂದಿದ್ದು ಮತ್ತು ಆಡಳಿತ ಕಠೋರತೆಯಿಂದ ಕೂಡಿದ್ದು ಆಡಳಿತದಲ್ಲಿ ಅಸಹಕಾರ ವರ್ತನೆ ತೋರುತ್ತಿದ್ದನು. ೧೮೨೪ರಲ್ಲಿ ಕಿತ್ತೂರು ದೇಸಾಯಿ ಮಲ್ಲಸರ್ಜನು ಮಕ್ಕಳಿಲ್ಲದೆ ದತ್ತು ಪುತ್ರನನ್ನು ಪಡೆದ ನಂತರ ಅನಾರೋಗ್ಯಕ್ಕೆ ತುತ್ತಾಗಿ ಮರಣಹೊಂದಿದನು. ದತ್ತು ಪದ್ಧತಿ ವಿರೋಧಿಸಿದ ಥ್ಯಾಕರೆ ಕಿತ್ತೂರು ಸಂಸ್ಥಾನದ ರಾಜಭಂಡಾರ ವಶಪಡಿಸಿಕೊಂಡು, ಅದಕ್ಕೆ ಬೀಗ ಮುದ್ರೆ ಹಾಕಿ ಕಾವಲಿಟ್ಟನು. ಯಾವ ಒಡಂಬಡಿಕೆಗಳು ಮಾನ್ಯಗೊಂಡು ಕಾರ್ಯರೂಪಕ್ಕೆ ಬಾರದೇ ಇದ್ದಾಗ, ಈ ಅಸಹ್ಯ ವರ್ತನೆಯನ್ನು ಸಹಿಸದ ಮಲ್ಲಸರ್ಜ ದೇಸಾಯಿಯ ಪತ್ನಿ ಚೆನ್ನಮ್ಮಾ ತೀವ್ರವಾಗಿ ಪ್ರತಿಭಟಿಸಿ, ಅಕ್ಟೋಬರ್ ೨೩, ೧೮೨೪ ರಂದು ಮಹಾ ಸಂಗ್ರಾಮವನ್ನೇ ಸಾರಿಬಿಟ್ಟಳು. ತನ್ನ ಒರಟಾದ ನಡವಳಿಕೆಗೆ, ದುಡುಕಿಗೆ ಥ್ಯಾಕರೆ ಬಲಿಯಾದ. ಚೆನ್ನಮ್ಮ ರಾಣಿಯ ಅಂಗರಕ್ಷಕ ಅಮಟೂರು ಬಾಳಪ್ಪನ ಗುಂಡು ಥ್ಯಾಕರೆಯ ಎದೆ ಸೀಳಿದರೆ, ಆತನ ದೇಹವನ್ನು ಉಳಿದ ಸೈನಿಕರ ಖಡ್ಗಗಳು ಚೂರು ಚೂರು ಮಾಡಿದವು. ಥ್ಯಾಕರೆಯೊಂದಿಗೆ ಕ್ಯಾಪ್ಟನ್ ಬ್ಲಾಕ್, ಸ್ಯುಯಲ್ ಲೆಫ್ಟಿನೆಂಟ್, ಡೈಟನ್ ಲೆಫ್ಟಿನೆಂಟ್ ಮುಂತಾದ ಏಳು ಬ್ರಿಟಿಷ್ ಅಧಿಕಾರಿಗಳು ಕೊಲ್ಲಲ್ಪಟ್ಟರು. ಕೆಲವರು ಪರಾರಿಯಾದರು. ಇನ್ನೂ ಕೆಲವರು ಅವಿತುಕೊಂಡು, ಕೈದಿಗಳಾದರು. ಅವರಲ್ಲಿ ಸ್ಟೀವನ್ ಸನ್, ಎಲಿಯೆಟ್ ಮತ್ತು ಶ್ರೀನಿವಾಸರಾವ್(ಭಾರತೀಯ) ಪ್ರಮುಖರು.

ಥ್ಯಾಕರೆಯ ಸಾವು ಪ್ರಿನ್ಸಿಪಾಲ್ ಕಲೆಕ್ಟರ ಆದ ಚಾಪ್ಲಿನ್‌ನಿಗೆ ಬರಸಿಡಿಲು ಬಡಿದಂತಾಗಿತ್ತು. ಆದರೂ ಚಾಪ್ಲಿನ್ ಮತ್ತು ಮುಂಬಯಿಯ ಗವರ್ನರ್ ಮೌಂಟ್‌ಸ್ಟುಅರ್ಟ್ ಎಲ್ಫಿನ್‌ಸ್ಟನ್ ಇವರು ಥ್ಯಾಕರೆಯ ಧೋರಣೆಯನ್ನೇ ಮುಂದುವರಿಸಿ, ಮತ್ತೇ ಕಿತ್ತೂರಿನ ಆಕ್ರಮಣಕ್ಕೆ ಸಿದ್ಧತೆ ನಡೆಸಿದರು. ಇವರು ಮಾಡದ ಸನ್ನಾಹಗಳೇ ಇರಲಿಲ್ಲ. ಆದರೂ ಸೈನ್ಯ ಒಟ್ಟುಗೂಡಿಸುವಲ್ಲಿ ವಿಳಂಬವಾಗುತ್ತಲೇ ಇತ್ತು. ಕೈದಿಗಳಾಗಿದ್ದ 'ಸ್ಟೀವನ್‌ಸನ್ ಮತ್ತು ಎಲಿಯಟ್‌ರನ್ನು ಬಿಡುಗಡೆ ಮಾಡಿದರೆ ಕಿತ್ತೂರಿನ ಅಸ್ತಿತ್ವದ ಬಗೆಗೆ ವಿಚಾರಿಸಬಹುದು' ಎಂಬ ಭರವಸೆ ನೀಡಿದಾಗ, ಆ ಸುಳ್ಳನ್ನೇ ನಂಬಿ ಡಿಸೆಂಬರ್ ೧ ರಂದು ಶ್ರೀನಿವಾಸ ರಾವ್‌ನನ್ನು ಮತ್ತು ಡಿಸೆಂಬರ್ ೨ ರಂದು ಸ್ಟೀವನ್‌ಸನ್ ಮತ್ತು ಎಲಿಯಟ್‌ರನ್ನು ಚೆನ್ನಮ್ಮ ಬಿಡುಗಡೆ ಮಾಡಿದರೂ, ಕಿತ್ತೂರು ಸಂಸ್ಥಾನದ ಅಸ್ಥಿತ್ವದ ಬಗೆಗೆ ಏನನ್ನೂ ಮಾತನಾಡದ ಬ್ರಿಟಿಷರು, ಮೋಸದಿಂದ ಆಕ್ರಮಣ ಮಾಡಿ ಕಿತ್ತೂರು ಕೋಟೆ ಒಡೆಯಲಾರಂಭಿಸುತ್ತಾರೆ. ಡಿಸೆಂಬರ್ ೫, ೧೮೨೪ ರಂದು ಚೆನ್ನಮ್ಮ, ವೀರಮ್ಮರ ಬಂಧನವಾಗಿ, ಜೈಲಿನಲ್ಲಿ ಹಿಂಸೆ ಅನುಭವಿಸಿ, ನಿರಾಹಾರಿಯಾಗಿ ಫೆಬ್ರುವರಿ ೨, ೧೮೨೯ ರಂದು ಸಂಭವಿಸಿದ ಚನ್ನಮ್ಮನ ಮರಣದೊಂದಿಗೆ ಕಿತ್ತೂರು ಸಂಸ್ಥಾನದ ಆಳ್ವಿಕೆ ಕೊನೆಗೊಳ್ಳುತ್ತದೆ. ಕಿತ್ತೂರಿನ ಈ

ಅಧಪತನಕ್ಕೆ ಈಸ್ಟ ಇಂಡಿಯಾ ಕಂಪನಿ ಅಧಿಕಾರಿಗಳ ಭ್ರಷ್ಟಾಚಾರ ಮತ್ತು ಮೋಸವೇ ಕಾರಣವಾಗಿದ್ದದ್ದು ಈಗ ಗತಇತಿಹಾಸ. ಆದರೆ ಈ ಕ್ರಾಂತಿ ಉಂಟುಮಾಡಿದ ಕೋಲಾಹಲ, ಆರ್ಥಿಕ, ರಾಜಕೀಯ ಬಿಕ್ಕಟ್ಟು, ಸಾಮಾಜಿಕ ವಿಪ್ಲವ ರಾಷ್ಟ್ರೀಯ ಇತಿಹಾಸದಲ್ಲಿಯೇ ಮಹತ್ವದ ಮೈಲಿಗಲ್ಲು. ಇದು ಪರಿವರ್ತನೆಯನ್ನೂ ತಂದಿದೆ. ಒಂದು ಕೂದಲೆಳೆಗೂ ಧಕ್ಕೆ ಬಾರದಂತೆ ನೋಡಿಕೊಂಡು, ಕೊಟ್ಟ ಮಾತಿಗೆ ತಪ್ಪದೆ, ತಮ್ಮನ್ನು ಬಿಡುಗಡೆ ಮಾಡಿದ ಕಿತ್ತೂರು ಚನ್ನಮ್ಮನ ಋಣ ತನ್ನ ಮೇಲೆ ಇದ್ದುದಕ್ಕೆ ಕೃತಜ್ಞನಾಗಿದ್ದ ಎಲಿಯಟ್, ಕನ್ನಡದ್ದೇ ಆದ ಈ ಮಣ್ಣಿನ ಋಣವನ್ನು ಪ್ರಥಮ ಕನ್ನಡ ಶಾಲೆಯನ್ನು ಆರಂಭಿಸುವ ಮೂಲಕ ತೀರಿಸುತ್ತಾನೆ.

ಹೀಗೆ ವ್ಯಾಪಾರಕ್ಕೆಂದು ಬಂದವರು ರಾಜ್ಯ ಕಟ್ಟಿ, ಹಾಸುಹೊಕ್ಕಾಗಿದ್ದ ಸ್ಥಳಿಯ ಸಂಬಂಧ ಮತ್ತು ಬಾಹ್ಯ ಸಂಪರ್ಕಗಳನ್ನು ಹಣಕ್ಕಾಗಿ, ನೌಕರಿಗಾಗಿ ಹರಾಜು ಹಾಕಿದರು. ಅಧಿಕಾರದ, ಹಣದ ಆಮೀಷ ಒಡ್ಡಿ ಸಾಮಾಜಿಕ ಸಂಘಟನೆಯನ್ನು ವಿಘಟಿಸಿದರು. ಸಮಾಜದಲ್ಲಿ ಕೊಡುಕೊಳ್ಳುವಿಕೆ ಕೊಂಡು–ಮಾರುವಿಕೆಯಿಂದ ಮೊದಲಾಯಿತು. ಕೌಟುಂಬಿಕ, ಸಾಮಾಜಿಕ ಸಂಬಂಧಗಳು ಸ್ವಾರ್ಥಪ್ರೇರಿತವಾದವು. ಇತ್ತ ಮರಾಠರೊಡನೆ ಹೆಗಲಿಗೆ ಹೆಗಲುಗೊಟ್ಟು ತಗ್ಗಿ ಬಗ್ಗಿ ನಡೆಯುವ ಸ್ಥಳೀಯರ ವಿಧೇಯತೆ ಇಂಗ್ಲೀಷರತ್ತ ಹೊರಳಿತು. ಸ್ಥಳಿಯ ಮನೆಮಾತು, ಶಾಲಾ ಭಾಷೆ ಮರಾಠಿ; ಉನ್ನತ ಶಿಕ್ಷಣ ಇಂಗ್ಲೀಷನಲ್ಲಿ; ಕನ್ನಡವನ್ನು ಹೇಳುಕೇಳುವರಿಲ್ಲದಂತಾಯಿತು. ಈಗಾಗಲೇ ಮರಾಠಿ ಭಾಷೆಯೊಂದಿಗೆ ಸಂಸ್ಕೃತಿಯೂ ಆಳವಾಗಿ ಸೇರಿಕೊಂಡಿದ್ದರೂ ಪರಸ್ಪರ ಸಂಬಂಧ ಸಂಪರ್ಕಗಳು ಅರ್ಥವತ್ತಾಗಿದ್ದವು. ಆದರೆ ಬ್ರಿಟಿಷರ ಆಡಳಿತದಲ್ಲಿ ಸಂಬಂಧಗಳು ಸರಕಾದವು, ಅರ್ಥ ಕಳೆದುಕೊಂಡವು. ವ್ಯವಹಾರ ಮತ್ತು ಆಸ್ತಿಗಳಿಕೆಯೇ ಪ್ರಮುಖ ಜೀವನೋಪಾಯವಾಯಿತು. ಇದಕ್ಕೆ ಮಲ್ಲಪ್ಪ ಶೆಟ್ಟಿ (ಚೆನ್ನಮ್ಮನಿಗೆ ಮೋಸ ಮಾಡಿದವ) ಮತ್ತು ರಾಯಣ್ಣನಿಗೆ ಮೋಸ ಮಾಡಿದ ಖೋದಾನಪುರದ ಲಿಂಗನಗೌಡ ಮತ್ತು ನೇಗಿನಹಾಳದ ವೆಂಕಟಗೌಡ ಇವರುಗಳು ಅತ್ಯಂತಿಕ ಉದಾಹರಣೆಗಳು. ಹೀಗೆ ರಾಜಕೀಯ ಅಕ್ರಮಣಗಳು ಮತ್ತು ಭಾಷಿಕ, ಸಾಂಸ್ಕೃತಿಕ ಹೇರುವಿಕೆಗಳು ಸಾಮಾಜಿಕ ಸ್ಥರದ ಗತಿಯನ್ನು ಜಾಲಾಡಿಬಿಟ್ಟವು.

ಮಹಿಳೆಯರ ಸ್ಥಾನಮಾನ: ಬ್ರಿಟಿಷರ ಆಗಮನಕ್ಕೂ ಮೊದಲು ಧಾರವಾಡ ಜಿಲ್ಲೆಯಲ್ಲಿ ಮನೆಮನೆಯಲ್ಲಿ ಹೆಣ್ಣುಮಕ್ಕಳು ನೂಲುತ್ತಿದ್ದರು ಮತ್ತು ಅವರಿಗೆ ಹೊಲದ ಕೂಲಿಯಷ್ಟೇ ಕೂಲಿ ಸಿಗುತ್ತಿತ್ತು. ಹೆಂಗಸರು ತಮ್ಮ ದುಡಿಮೆಯಿಂದ ಹೊಂದಿದ ಸಾಮಾಜಿಕ ಸ್ಥಾನಮಾನಕ್ಕೆ ಇಂಗ್ಲೆಂಡಿನಲ್ಲಾದ ಕ್ರಾಂತಿಯಿಂದ (೧೮ ನೇ ಶತಮಾನ) ಮತ್ತು ಆಯಾತ ನೀತಿಯಿಂದಾಗಿ ನೂಲುನೇಯುವ ಕಾರ್ಯಕ್ಕೆ ಭಾರಿಹೊಡೆತಬಿದ್ದು ಆರ್ಥಿಕವಾಗಿ ಕುಗ್ಗಿಹೋಗಿ ಪೂರ್ಣವಾಗಿ ಪುರುಷರಿಗೆ ಅಧೀನರಾದರು. ಹತ್ತಿ ಬೆಳೆಗೆ ಮತ್ತು ನೂಲು ನೇಯ್ಗೆಗೆ ಪ್ರಸಿದ್ಧಿ ಪಡೆದ ಧಾರವಾಡ ಜಿಲ್ಲೆ, ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯ ಹೊಡೆತಕ್ಕೆ ತತ್ತರಿಸಿ ಹೋಗಿ ಕೈನೇಯ್ಗೆ ನಿಂತುಹೋಯಿತು. ಮೇಜ್ಞಾತಿಯವರು ಲಾಭಕರವಲ್ಲವೆಂದು ಉದ್ಯೋಗ ಬಿಟ್ಟುಬಿಟ್ಟರೆ, ಕೆಳಜಾತಿಯ

(ಅಸ್ಪೃಶ್ಯ) ಮಹಿಳೆಯರು ನೇಯ್ಗೆಯನ್ನು ಮುಂದುವರಿಸಿದರೂ ಕ್ರಮೇಣ ಅದೂ ನಿಂತು ಹೋಯಿತು. ೧೮೭೬ ರಲ್ಲಿ ಕ್ಷಾಮ ತಲೆದೋರಿದಾಗ ಹೊಟ್ಟೆಪಾಡಿಗಾಗಿ ಸಲಕರಣೆಗಳನ್ನು ಮಾರಿ ಕೂಲಿಗಳಾದರು. ಸಾವಿರಾರು ನೇಕಾರರು ಹಸಿವೆಯಿಂದ ಸತ್ತರು.

ಈ ಸಂದರ್ಭದಲ್ಲಿ ಧಾರವಾಡದಲ್ಲಿ ಅಮೆರಿಕನ್ ಹತ್ತಿ ಬೆಳೆಯುವ ಯತ್ನ ಕಂಪನಿ ಸರ್ಕಾರದಿಂದ ವಿಶೇಷ ಮನ್ನಣೆ ಪಡೆಯಿತು. ಲ್ಯಾಂಕಶಯರ(ಉದ್ದ ನೂಲು ಕತ್ತರಿಸುವ) ಗಿರಣಿಗಳಿಗೆ ಹತ್ತಿಯ ಅವಶ್ಯಕತೆ ಹೆಚ್ಚಾಗತೊಡಗಿತು. ೧೮೮೪ ರ ಗ್ಯಾಝೆಟಿಯರ್ ಪ್ರಕಾರ ೧೮೫೮-೬೦ ರಲ್ಲಿ ೬೦೦ ಹಸ್ತಚಾಲಿತ ಜಿನ್‌ಗಳು ಕಾರ್ಯಾಚರಣೆಯಲ್ಲಿ ತೊಡಗಿದ್ದವು. ಇದೇ ಸಂದರ್ಭದಲ್ಲಿ ನೇಯುವ ಕೆಲಸ ಬಿಟ್ಟಿದ್ದ ಮಹಿಳೆಯರು ಜಿನ್ನಿಂಗ್ ಉದ್ಯಮದಲ್ಲಿ ತೊಡಗಿದರೂ, ಸ್ಥಳೀಯ ಉದ್ಯಮಗಳಿಂದಾದ ನಷ್ಟ, ನಿರುದ್ಯೋಗವನ್ನು ತುಂಬಲಾಗಲಿಲ್ಲ. ಹೀಗಾಗಿ ಸಮಾಜದಲ್ಲಿ ಉಂಟಾದ ಕ್ಲೇಷ ಉಲ್ಬಣಗೊಳ್ಳುತ್ತಲೇ ನಡೆದು ಪರಸ್ಪರ ಸಂಬಂಧಗಳು ಸ್ವಾರ್ಥಪ್ರೇರಿತವಾದವು. ಸಾಮಾಜಿಕ ಸಂರಚನೆ ಛಿದ್ರವಾಗತೊಡಗಿತು. ಹಸಿವು ನಿಗಿಸುವುದೊಂದೇ ಗುರಿಯಾದಾಗ ಸಂಘಟನೆಗಳು ಅರ್ಥ ಕಳೆದುಕೊಂಡವು. ಮೂಢನಂಬಿಕೆಗಳು, ದೈವಿ ಅವಲಂಬನೆಗಳು ಹೆಚ್ಚಾದವು.

ಸಾಂಸ್ಕೃತಿಕ ಪರಿಸರ:

ಒಂದು ಪ್ರದೇಶದ ಜನರ ಸಂಸ್ಕೃತಿ, ರೀತಿ, ನೀತಿ, ಆಚರಣೆಗಳು ಅವರಾಡುವ ಭಾಷೆಯನ್ನವಲಂಭಿಸಿರುತ್ತದೆ. ಆಯಾ ಭಾಷಾ ವಲಯಗಳಲ್ಲಿ ಆಯಾ ಆಚರಣೆಗಳು ರೂಢಿಯಲ್ಲಿರುತ್ತವೆ ಮತ್ತು ಅವು ಆ ಜನರ ಬದುಕಿನ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತವೆ. ಆದರೆ ಒಂದು ಭಾಷೆ ಮೂಕವಾದರೆ ಅಥವಾ ಸತ್ತು ಹೋದರೆ ಆ ಜನರ ಸಂಸ್ಕೃತಿಯೂ ಸತ್ತು ಹೋಗುತ್ತದೆ. ಅದೇರೀತಿಯಲ್ಲಿ ಕರ್ನಾಟಕದಲ್ಲಿ ಅಚ್ಚಗನ್ನಡ ಪ್ರದೇಶಗಳಿದ್ದರೂ ಸ್ವಭಾಷೆಯನ್ನಾಡುವ ಮತ್ತು ಕಲಿಯುವ ಸ್ವಾತಂತ್ರ್ಯವೇ ಇರಲಿಲ್ಲ. 'ಸಾಂಗ್ಲಿ, ಮಿರಜ, ಕುರಂದವಾಡ ಹಾಗೂ ಜಮಖಂಡಿ ಸಂಸ್ಥಾನಗಳು ಚಿತ್ಪಾವನ ಬ್ರಾಹ್ಮಣ ಸಂಸ್ಥಾನಿಕರಿಗೆ ಸೇರಿದ್ದರಿಂದ, ಅವರ ಮಾತೃಭಾಷೆ ಮರಾಠಿಯೇ ಈ ಪ್ರದೇಶದ ಕನ್ನಡಿಗರ ಮೇಲೆ ಹೇರಲ್ಪಟ್ಟಿತ್ತು. ಸವಣೂರೊಂದನ್ನು ಬಿಟ್ಟು ಉಳಿದೆಲ್ಲ ಸಂಸ್ಥಾನಿಕರು ಮರಾಠರಾಗಿದ್ದರಿಂದ ಸಂಸ್ಥಾನಗಳೆಲ್ಲ ಮರಾಠಿಮಯವಾಗಿದ್ದವು. ಇಪ್ಪತ್ತೆರಡು ಹಳ್ಳಿಗಳ ಸಣ್ಣ ಸಂಸ್ಥಾನವಾದ ಸವಣೂರಲ್ಲಿ ಮಾತ್ರ ಕನ್ನಡವಿತ್ತು. ಆ ಸಂಸ್ಥಾನದ ಶಿಕ್ಷಣದ ರೀತಿ-ನೀತಿಗಳೆಲ್ಲ ಧಾರವಾಡ ಜಿಲ್ಲೆಯ ಶಿಕ್ಷಣದ ಧೋರಣೆಯ ಮೇಲೆ ಅವಲಂಬಿತವಾಗಿತ್ತು. ಈ ಸಂಸ್ಥಾನದ ಪ್ರದೇಶಗಳಲ್ಲಿ ಅಂದು ವಾಕ್ ಸ್ವಾತಂತ್ರ್ಯವೇ ಇರುತ್ತಿರಲಿಲ್ಲ. ಹರಿಕೀರ್ತನೆ, ಭಜನೆ, ಪುರಾಣಗಳಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಬೇಕಾದರೆ ಸರ್ಕಾರದ ಅನುಮತಿ ಬೇಕಾಗುತ್ತಿತ್ತು........ ಆದರೆ ಈ ಮರಾಠಿ ಸಂಸ್ಥಾನಿಕರ ಕುಲದೇವರಾದ ಗಣಪತಿ ಉತ್ಸವಕ್ಕೆ ಒಂದು ವಾರದ ರಜೆ.

ಮಹಾರಾಜರಿಗೆ ಗಂಡುಮಗು ಹುಟ್ಟಿದರೆ........ ಶಾಲೆಗಳಿಗೆಲ್ಲ ರಜೆ ಹಾಗೂ ಮಕ್ಕಳ ಬಾಯಿಗೆಲ್ಲ ಮಿಠಾಯಿ[೨] ಹಂಚಲಾಗುತ್ತಿತ್ತು.

ಹೀಗೆ ಸಂಸ್ಕೃತಿವಾಹಿನಿಯಾದ ಭಾಷೆ ಸಂಸ್ಥಾನಿಕರ ಸೆರೆಯಾಳಾಗಿದ್ದಾಗ ಅಲ್ಲಿಯ ಸಂಸ್ಕೃತಿಯೂ ಹೇಗೆ ತಾನೆ ಕನ್ನಡಿಗನದ್ದಾದೀತು? ಅಂಥದ್ದೇ ಪ್ರತಿಕೂಲ ವಾತಾವರಣದಲ್ಲಿ ಕನ್ನಡಿಗರು ಬದುಕುಸವೆಸಿದ್ದು ದುರಾದೃಷ್ಟವಾದರೂ ಸತ್ಯವಾಗಿತ್ತು. ಈ ಸಂಸ್ಥಾನದ ಪ್ರದೇಶಗಳೆಲ್ಲ ಜಿಲ್ಲಾ ಹಂತದಲ್ಲಿ ಬ್ರಿಟಿಷರು ನಡೆಸುವ ಶೈಕ್ಷಣಿಕ ಚಟುವಟಿಕೆಗಳನ್ನು, ಪುಸ್ತಕಗಳನ್ನು ಮಾದರಿಯಾಗಿ ತೆಗೆದುಕೊಳ್ಳಬೇಕಾದ ಪರಿಸ್ಥಿತಿಯನ್ನು ನೋಡಿದರೆ ಸಂಸ್ಥಾನಿಕರು ಪ್ರತ್ಯೇಕ ಶಿಕ್ಷಣ ಕ್ರಮ,ನೀತಿ, ನಿಯಮಗಳ ಬಗೆಗೆ ತಲೆ ಕೆಡಿಸಿಕೊಂಡಿರಲಿಲ್ಲ; ಪ್ರತ್ಯೇಕ ಧೋರಣೆ ಹೊಂದಿರಲಿಲ್ಲ. ಹೀಗಾಗಿ ಸರಕಾರಿ ನೌಕರಿ ಪಡೆಯುವವರಿಗೆ ಮರಾಠಿ ಕಡ್ಡಾಯವಾಗಿ ಬರಲೇಬೇಕಿತ್ತು. ಆರಂಭದಲ್ಲಿ ಕನ್ನಡ ಕಲಿಯಲು ಕನ್ನಡ ಪುಸ್ತಕಗಳಿರಲಿಲ್ಲ. ಮರಾಠಿಯ ಪುಸ್ತಕಗಳನ್ನು ಅನುವಾದಿಸಿ ಕನ್ನಡದಲ್ಲಿ ಅಧ್ಯಯನ ಮಾಡಬೇಕಿತ್ತು. ಇದರಿಂದ ಕನ್ನಡ ನಾಡು ನುಡಿಯ ಸಂಸ್ಕೃತಿ ಬೆಳೆಯುವುದು ಅಸಾಧ್ಯವಾಗಿತ್ತು. ಕೈಬರಹದ ಕಾಗದ, ಮರಾಠಿ ಕಾಗದ ಮತ್ತು ಮೋಡಿಲಿಪಿ ಓದುವಂಥ ಗಾಂವಠಿ ಶಾಲೆಗಳಿದ್ದರೂ ಅವು ವ್ಯವಹಾರಿಕತೆಯನ್ನು ಮಾತ್ರ ಕಲಿಸುತ್ತಿದ್ದವು. ಇದರಿಂದಾಗಿ ಕನ್ನಡಿಗರಿಗೆ ತಮ್ಮತನದ ಅರಿವಿನ ಕಲ್ಪನೆಯೇ ಇಲ್ಲದಂತಾಗಿತ್ತು. ಇದ್ದದ್ದರಲ್ಲಿ 'ಲಿಂಗವಂತರು ಮಾತ್ರ ಕನ್ನಡ ಅಭ್ಯಸಿಸಿತ್ತಿದ್ದರು. The study of Kannada was confined to a few lingayat prists' (ಮ.ಗು.ಹಂದ್ರಾಳ. ಕನ್ನಡದ ದೀಪ, ೧೯೮೨, ಪುಟ ೬೧)ಅದೂ ಕೆಲ ಶ್ರೀಮಂತ ಕುಟುಂಬಗಳಲ್ಲಿ ಮಾತ್ರ. ಹೀಗಾಗಿ ಈ ಜನಾಂಗ ಹೊರ ಲೋಕಕ್ಕೆ ಬೇಗನೆ ತೆರೆದುಕೊಳ್ಳಲಿಲ್ಲ ಮತ್ತು ಬೇಗನೆ ಉನ್ನತ ಮಟ್ಟಕ್ಕೇರಲಿಲ್ಲ. ಅಲ್ಲೊಬ್ಬ ಇಲ್ಲೊಬ್ಬ ಓದಿ ಮುಂದೆ ಬಂದರೆ ಅದೇ ಅಘಾದ ವಿಷಯವಾಗುತ್ತಿತ್ತು. ಅಂಥವರಲ್ಲಿಯೇ ಚನ್ನಬಸಪ್ಪ ಮುಂತಾದವರು ಉದಾಹರಣೆಯಾಗಬಲ್ಲ ಹಂತಕ್ಕೆ ಬಂದಂಥವರು.

೨.೩. ಶೈಕ್ಷಣಿಕ ಪರಿಸರ :

ಭಾರತೀಯ ಶೈಕ್ಷಣಿಕ ಇತಿಹಾಸವನ್ನು ಅವಲೋಕಿಸುವುದಾದರೆ ಅಜ್ಞಾತವಾಗಿರುವ ಹರಪ್ಪಾ ಮೇಹಂಜೋದಾರೋ ಸಂಸ್ಕೃತಿಯ ಮತ್ತು ಸಿಂಧೂ ಕಣಿವೆ ನಾಗರಿಕತೆಯಲ್ಲಿಯ ಬರಹಗಳಿಂದಲೇ ಆರಂಭಿಸಬೇಕಾಗುತ್ತದೆ. ಇದರ ಪೂರ್ಣ ಸ್ಪಷ್ಟ ಚಿತ್ರಣ ಸಿಗುವಲ್ಲಿಯವರೆಗೆ ವೇದಕಾಲಿನ ಶಿಕ್ಷಣವೇ ಪ್ರಥಮ ಹೆಜ್ಜೆಯಾಗುತ್ತದೆ.

ವೇದಗಳ ಅಂತಿಮ ಕಾಲದಲ್ಲಿ ಅಂದರೆ ಸುಮಾರು ೧೦೦೦ ವರ್ಷಗಳ ಹಿಂದೆ ವರ್ಣಾಶ್ರಮ ಧರ್ಮ ಸಿದ್ಧಾಂತದ ಮೇಲೆ ಸಮಾಜದ ಸಂರಚನೆ ಸಿದ್ಧಗೊಂಡಿತ್ತು. ವಿದೇಶದಿಂದ ಬಂದ ಆರ್ಯರು ಭಾರತದ ಮೂಲವಾಸಿಗಳಾದ ದಸ್ಯುಗಳೊಂದಿಗೆ ಹೋರಾಟ ನಡೆಸಿದಾಗ 'ಜಾತಿ ವ್ಯವಸ್ಥೆ' ಮೊತ್ತಮೊದಲು ತಲೆದೋರಿ ವರ್ಣಾಶ್ರಮ ಪದ್ಧತಿಯಲ್ಲಿ ವರ್ಣ–ಜಾತಿ, ಆರ್ಯರು–

ಅನಾರ್ಯರು, ಆರ್ಯವರ್ಣ-ದಾಸವರ್ಣಗಳೆಂದು ವರ್ಗೀಕರಣವಾಗಿ ಸಮಾಜ ವಿಭಜನೆಗೊಂಡಿದ್ದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ.

ಬ್ರಿಟಿಷ ಆಗಮನ ಪೂರ್ವದ ಶಿಕ್ಷಣ :

ಒಂದು ಸಮಾಜದ ಅಥವಾ ರಾಷ್ಟ್ರದ ಸ್ವಾಸ್ಥ್ಯ ಸಂರಚನೆಯನ್ನು ಕಾಪಾಡುವಲ್ಲಿ ಅಲ್ಲಿಯ ಶಿಕ್ಷಣ ಪದ್ಧತಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಶಿಕ್ಷಣ ರಚನೆ ಆ ಸಮಾಜದ ಸ್ವರೂಪವನ್ನಲಂಬಿಸಿದೆ. ಶೈಕ್ಷಣಿಕ ಬೆಳವಣಿಗೆಯಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ, ಪ್ರಾದೇಶಿಕ ವಲಯಗಳು ಪ್ರಮುಖ ನಿರ್ಣಾಯಕ ಬಾಹ್ಯ ಅಂಶಗಳಾದರೆ ಸಾಮಾಜಿಕ ಒಳಸ್ಥರದಲ್ಲಿ ಜಾತಿ, ವರ್ಣ ಮತ್ತು ಲಿಂಗಗಳು ಆಂತರಿಕ ನಿರ್ಣಾಯಕಗಳಾಗಿ ಕಾರ್ಯವೆಸಗಿವೆ. ಇಂದು ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಉಪಕ್ರಮಿಸುತ್ತಿರುವ ನಾವು ಒಟ್ಟು ಶಿಕ್ಷಣ ವ್ಯವಸ್ಥೆಯನ್ನು ಅವಲೋಕಿಸುವಾಗ ಬ್ರಿಟಿಷರ ಆಗಮನದ ನಂತರ ಆಧುನಿಕ ಶಿಕ್ಷಣ ಪದ್ಧತಿ ಆರಂಭವಾಗಿದ್ದರೂ ಆ ಮೊದಲು ಇದ್ದ ಈಡೀ ಜಗತ್ತಿಗೆ ಮಾದರಿಯಾಗಬಲ್ಲ ಆರ್ಯಭಟ, ಚಾಣಕ್ಯರಂಥವರನ್ನು ಹೊಂದಿದ ಪ್ರತಿಭಾನ್ವಿತ ಶಿಕ್ಷಣ ಪರಂಪರೆ, ವ್ಯವಸ್ಥೆ ಮತ್ತು ಪದ್ಧತಿಯನ್ನು ಪ್ರಮುಖವಾಗಿ ಪರಿಗಣಿಸಲೇಬೇಕಾಗುತ್ತದೆ.

ಬ್ರಾಹ್ಮಣರು ಶಿರದಿಂದ, ಕ್ಷತ್ರಿಯರು ಭುಜಗಳಿಂದ, ವೈಶ್ಯರು ಹೊಟ್ಟೆಯಿಂದ ಮತ್ತು ಶೂದ್ರರು ಪಾದಗಳಿಂದ ಅವತರಿಸಿದರೆಂಬ ವರ್ಣವಿಭಜನೆ ಶ್ರೇಣಿಕೃತ ಜಾತಿ ವ್ಯವಸ್ಥೆಯ ನಿದರ್ಶನವಾಗಿದೆ. ಶ್ರೇಣೀಕೃತ ಚಾತುರ್ವರ್ಣಗಳು ವೃತ್ತಿಯಾದಾರಿತವಾಗಿ ವಿಭಜಿತವಾಗಿದ್ದವು. ವರ್ಣವ್ಯವಸ್ಥೆ ಜನ್ಮ ಮತ್ತು ಜನಾಂಗದ ಆಧಾರದ ಮೇಲೆ ರಚನೆಯಾಗಿರದೆ ಅವರವರ ಗುಣಕರ್ಮಗಳಿಗನುಸಾರವಾಗಿ ವಿಭಜನೆಗೊಂಡಿದ್ದು ಇಲ್ಲಿ ಶ್ರಮವಿಭಜನಾ ತತ್ವವನ್ನು ಕಾಣಬಹುದಾಗಿದೆ. ವರ್ಣವನ್ನವಲಂಬಿಸಿ ವೃತ್ತಿಗಳ ಹಂಚಿಕೆಯಾಗಿರುವಲ್ಲಿ ಶಿಕ್ಷಣದ ಹಂಚಿಕೆಯ ಪ್ರಥಮ ನೋಟ ಕಾಣಸಿಗುತ್ತದೆ. ಬ್ರಾಹ್ಮಣರು ಜ್ಞಾನಾರ್ಜನೆ ಮತ್ತು ಧಾರ್ಮಿಕ ವೃತ್ತಿಯನ್ನು ಅವಲಂಬಿಸಿದ್ದುದು ಔಪಚಾರಿಕ ಶಿಕ್ಷಣ ಪಡೆಯುತ್ತಿದ್ದುದನ್ನು ನೋಡಿದರೆ, ಕ್ಷತ್ರಿಯರು ಯುದ್ಧವೃತ್ತಿಯನ್ನು, ವೈಶ್ಯರು ವ್ಯಾಪಾರ ವೃತ್ತಿಯನ್ನು ಹಾಗೂ ಇವನ್ನು ಹೊರತುಪಡಿಸಿದ್ದೆಲ್ಲವನ್ನು ಶೂದ್ರರು ಮಾಡುತ್ತಿದ್ದುದು ವಂಶಪಾರಂಪರ್ಯವಾಗಿ ವಾಹಿನಿಗೊಳ್ಳುವ ಅನೌಪಚಾರಿಕ ಶಿಕ್ಷಣವನ್ನು ತೆರೆದುತೋರುತ್ತದೆ. 'ಸಾಮಾಜಿಕ ವ್ಯವಸ್ಥೆ ಸರಳವಾಗಿದ್ದು ವೃತ್ತಿಬದಲಾವಣೆಗೆ ಅವಕಾಶಗಳಿತ್ತು. ಚಾತುರ್ವರ್ಣ ವ್ಯಸ್ಥೆಯಲ್ಲಿದ್ದರೂ ವರ್ಣವೂ ವಂಶಪಾರಂಪರ್ಯವಾಗಿ ಇರಲಿಲ್ಲ'[2] ವರ್ಣಾಶ್ರಮದಲ್ಲಿ ಶಿಕ್ಷಣ ನಿರ್ಬಂಧಕ್ಕೊಳಪಡದೆ ಮುಕ್ತವಾಗಿದ್ದು 'ಗುರುಕುಲ' ಶಿಕ್ಷಣ ಪದ್ಧತಿ ಜಾರಿಯಲ್ಲಿತ್ತು. ವಿದ್ಯಾರ್ಥಿಯ ಬೌದ್ಧಿಕ ಪ್ರಗತಿಯ ಗುರಿ ಹೊಂದಿದ್ದ ಈ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣಾರ್ಥಿ ಬ್ರಾಹ್ಮಣಗುರುವಿನ ಮನೆಯಲ್ಲಿದ್ದುಕೊಂಡು ಗುರುಸೇವೆ ಮಾಡುತ್ತ ವಿದ್ಯಾರ್ಜನೆ ಮಾಡಿ ಗುರುದಕ್ಷಿಣೆ ಸಲ್ಲಿಸಬೇಕಾಗಿತ್ತು. ವೇದಾಧ್ಯಯನವೇ

ಇವರ ಪಠ್ಯವಸ್ತುವಾಗಿತ್ತು. ಈ ವೃತ್ತಿಯಾಧಾರಿತ ವಿಭಜನೆ ಕಾಲಕ್ರಮದಲ್ಲಿ ಉಂಟಾದ ಸಾಮಾಜಿಕ ಬದಲಾವಣೆಯಲ್ಲಿ ಜಾತಿಯಾಧಾರಿತವಾಗಿ, ಔಪಚಾರಿಕ ಶಿಕ್ಷಣ ಬ್ರಾಹ್ಮಣರಿಗೆ ಮಾತ್ರ ಮೀಸಲಾಯಿತು. ಆದಾಗ್ಯೂ ಅನೌಪಚಾರಿಕ ಶಿಕ್ಷಣ ಉಳಿದ ಜಾತಿಯವರಲ್ಲಿಯೂ ಇತ್ತು ಎಂಬುದಕ್ಕೆ ವೃತ್ತಿಗಳು ಕುಲಕಸುಬುಗಳಾಗಿ ಮುಂದುವರೆದಿರುವುದೇ ಸಾಕ್ಷಿಯಾಗುತ್ತದೆ. ಕ್ಷತ್ರಿಯರು ವೇದ ಅಧ್ಯಯನ ಮಾಡಬಹುದಾಗಿದ್ದರೂ ಮಾಡಿಸುವ ಹಕ್ಕು ಬ್ರಾಹ್ಮಣರದಾಗಿತ್ತು. ಮುಂದುವರೆದಂತೆ ನಿರ್ಧಿಷ್ಟಪಡಿಸಿದ ವರ್ಣಸಿದ್ಧಾಂತದ ಆದರ್ಶ ಕೇವಲ ಸಿದ್ಧಾಂತವಾಗಿಯೇ ಉಳಿದು, ವಾಸ್ತವಜಗತ್ತಿನಲ್ಲಿ ಜಾತಿವ್ಯವಸ್ಥೆಯ ಸಾಂಸ್ಥಿಕ ಅಸಮಾನತೆ ಶಿಕ್ಷಣ ಕ್ಷೇತ್ರದಲ್ಲಿಯೂ ಎದ್ದು ಕಾಣತೊಡಗಿದ್ದನ್ನು ಕಾಣುತ್ತೇವೆ.

ಮಧ್ಯಯುಗದಲ್ಲಿ ಜಟಿಲವಾದ ಜಾತಿ ವ್ಯವಸ್ಥೆಯೊಂದಿಗೆ ಧರ್ಮವನ್ನು ಮೀರದ ಶಿಕ್ಷಣ ಕಾಣಸಿಗುವುದಿಲ್ಲ. ಧರ್ಮ, ಆಧ್ಯಾತ್ಮ, ನೈತಿಕ ಶಿಕ್ಷಣಗಳೇ ನಿಜವಾದ ಶಿಕ್ಷಣವೆಂದು ಪರಿಗಣಿಸಲ್ಪಟ್ಟಿತ್ತು ಮತ್ತು ಬ್ರಾಹ್ಮಣರ ಸ್ವತ್ತಾಗಿತ್ತು. ಹೀಗೆ ಮತಶಾಸ್ತ್ರ ಆಧಾರಿತ ಶಿಕ್ಷಣ ಪ್ರಾಪಂಚಿಕವಾದ ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳನ್ನಾಧರಿಸಿರಲಿಲ್ಲ. ಧರ್ಮದ ಹೆಸರಿನಲ್ಲಿ ವರ್ಣ, ವರ್ಣದ ಹೆಸರಿನಲ್ಲಿ ಜಾತಿಗಳು ತಲೆದೋರಿ ಧರ್ಮಶಕ್ತಿ ನಾಶಗೊಳಿಸಿದವು. ವೃತ್ತಿಗಳು ಜಾತಿಯ ಅಥವಾ ಜಾತಿಗಳು ವೃತ್ತಿಯ ಮಾನದಂಡಗಳಾದವು.

ಕರ್ನಾಟಕವು ಈ ಆಚರಣೆಗಳಿಂದ ಹೊರತಾಗಿರಲಿಲ್ಲ. ಅದೇ ಬ್ರಾಹ್ಮಣ್ಯದ ಅಧಿಪತ್ಯದಲ್ಲಿ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ ಮತ್ತು ದೇವಸ್ಥಾನಗಳು ಮಾನ್ಯತೆ ಪಡೆದ ವಿದ್ಯಾಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ. “ಒಂದು ಗ್ರಾಮದಂತಿರುವ ಅಗ್ರಹಾರ ಪ್ರಮುಖ ವಿದ್ಯಾಕೇಂದ್ರವಾಗಿದ್ದು ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿತ್ತು. ಇಲ್ಲಿನ ನಿವಾಸಿಗಳಾದ ಬ್ರಾಹ್ಮಣರು ವಿವಿಧ ಶಾಸ್ತ್ರಗಳ ಉಚ್ಚ ಅಧ್ಯಯನ, ಅಧ್ಯಾಪನದಲ್ಲಿ ತೊಡಗಿರುತ್ತಿದ್ದರು. ವಿದ್ಯಾಪಾರಂಗತರಾದ ಬ್ರಾಹ್ಮಣರ ನಿವಾಸವೇ ಬ್ರಹ್ಮಪುರಿ. ಇದು ನಗರದ ಒಂದು ಭಾಗವನ್ನು ಮಾತ್ರ ಪ್ರತಿನಿಧಿಸುತ್ತದೆ. ರಾಜ ಮಹಾರಾಜರುಗಳೇ ಭೂದಾನ, ಧನ-ಧಾನ್ಯಗಳನ್ನು ನೀಡಿ ನಡೆಸುತ್ತಿದ್ದುದೇ ಅಗ್ರಹಾರ ಮತ್ತು ಬ್ರಹ್ಮಪುರಿಗಳು. ಘಟಿಕಾಸ್ಥಾನ ಸುದೀರ್ಘ ಪುರಾತನತೆಯನ್ನು ಹೊಂದಿದ ಶಿಕ್ಷಣ ಸಂಸ್ಥೆ. ಇಲ್ಲಿ ವೇದ, ಧರ್ಮಶಾಸ್ತ್ರ, ಮೀಮಾಂಸ ಶಾಸ್ತ್ರಗಳನ್ನು ಕಲಿಸಲಾಗುತ್ತಿತ್ತು. ದೇವಸ್ಥಾನಗಳು ಚಾರಿತ್ರ್ಯಶುದ್ಧಿವುಳ್ಳ ತಪೋನಿಷ್ಠ ಋಷಿಗಳ ಅಧ್ಯಾಪನ ಕೇಂದ್ರಗಳಾಗಿದ್ದವು. ಕೆಲವು ದೇವಸ್ಥಾನಗಳು ಪ್ರಾಥಮಿಕ ಶಿಕ್ಷಣ ಕೇಂದ್ರಗಳಾಗಿದ್ದು, ಇನ್ನೂ ಕೆಲವು ಉಚ್ಚ ಶಿಕ್ಷಣ ಸಂಸ್ಥೆಗಳಾಗಿದ್ದವು. ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಿಕಾಸ್ಥಾನಗಳು ಈ ದೇವಸ್ಥಾನಗಳಿಗೆ ಸೇರುತ್ತಿದ್ದು, ದೇವಸ್ಥಾನಗಳು ಬ್ರಾಹ್ಮಣರಿಗೆ ಸೀಮಿತವಾಗಿ ವಿದ್ಯಾದಾನದ ಪ್ರಥಮ ಸಂಸ್ಥೆಗಳಾಗಿದ್ದವು.”[೮]

ಈ ದೇವಸ್ಥಾನಗಳಿಗೆ ಹೊಂದಿಕೊಂಡಂತೆ ಬೆಳೆದ ಮಠಗಳು ಮಧ್ಯಯುಗದಲ್ಲಿ ಶೈವಮತದ ಉಚ್ಛ್ರಾಯ ಕಾಲದಲ್ಲಿ ಹೆಚ್ಚಿನ ಮಹತ್ವ ಪಡೆದದ್ದನ್ನು ನಾವು ಇತಿಹಾಸಪುಟಗಳಿಂದ ತಿಳಿಯುತ್ತೇವೆ. ಮಠಗಳು ೨೦ನೇ ಶತಮಾನದ ವರೆಗೂ ಮೇಲ್ಜಾತಿಯ ಜನ, ಬಹುಸಂಖ್ಯಾತ ಕೆಳಜಾತಿಯ ಜನರನ್ನು ಧರ್ಮ ಮತ್ತು ಶಿಕ್ಷಣದಿಂದ ನಿಯಂತ್ರಿಸಿದ್ದು ಐತಿಹಾಸಿಕ ಸತ್ಯ. ಈ ಸಂಕ್ರಮಣ ಕಾಲದಲ್ಲಿ ಕೆಳಜಾತಿಯವರು ಶಿಕ್ಷಣದಿಂದ ಮತ್ತು ಸಮಾಜದ ಬದುಕಿನಿಂದ ದೂರಉಳಿದು, ಅದೇ ಪದ್ಧತಿ, ರೀತಿ ಎಂದು ಬದುಕುತ್ತಿದ್ದ ಹೀನಾಯ ಪರಿಸ್ಥಿತಿಯಲ್ಲಿ ಧರ್ಮ ಮತ್ತು ಸಮಾಜದ ಶುದ್ಧೀಕರಣಕ್ಕಾಗಿ ಹುಟ್ಟಿದ್ದು ಶರಣ ಸಂಸ್ಕೃತಿ. ಇದರ ಪ್ರವರ್ತಕನಾಗಿ ಬಸವಣ್ಣ ಮಹಾ ಕ್ರಾಂತಿಯನ್ನೇ ಮಾಡಿದನು. ವೈಚಾರಿಕ ಸ್ವಾತಂತ್ರ್ಯ ಮತ್ತು ವೃತ್ತಿಗೌರವಗಳನ್ನು ಒತ್ತಿ ಹೇಳಿದ ಆತ ಪ್ರಜಾಪ್ರಭುತ್ವದ ಯಶಸ್ಸಿಗೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯ ಸ್ಥಾಪನೆ ಅಗತ್ಯ ಎಂಬುದನ್ನು ಎತ್ತಿ ಹಿಡಿದು, ಅನುಷ್ಠಾನಕ್ಕೆ ತಂದನು. ಬಸವಣ್ಣನ ಕಾಲದಲ್ಲಿ ಮಹಿಳಾ ಸ್ಥಾನಮಾನ, ಶಿಕ್ಷಣಕ್ಕೆ ಪ್ರೋತ್ಸಾಹ ದೊರಕಿತು. ತನ್ನ ಕ್ರಾಂತಿಕಾರಕ ಚಿಂತನೆಗಳನ್ನು ಅನುಭವ ಮಂಟಪ ಸ್ಥಾಪಿಸಿ ಆ ಮೂಲಕ ನಿಷ್ಪಕ್ಷಪಾತವಾಗಿ ಅನುಸಂದಾನಕ್ಕೆ ಅವಕಾಶ ಮಾಡಿಕೊಟ್ಟನು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಶಿಕ್ಷಣ... ಜಾತಿ, ಲಿಂಗ, ವರ್ಗಬೇಧಗಳನ್ನೆಣಿಸದೆ ಜನಸಾಮಾನ್ಯನವರೆಗೂ ಕ್ರಾಂತಿಯಾಗಿ ಹರಿದು ಬಂದುದು. ಏಕಘಟಕರೂಪದ ಸಮಾಜ ಸ್ಥಾಪಿಸಿ ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ...... ಎಂದು ಹೇಳುವ ಮೂಲಕ ಜಾತಿ ವೃತ್ತಿಮೂಲಕವಾಗಿ ಬಂದುದು ಹಾಗೂ ಯಾರಾದರೂ ಓದಬಹುದು, ಓದಿ ಬ್ರಾಹ್ಮಣ್ಯ ಪದವಿ ಪಡೆಯಬಹುದು ಎಂಬುದನ್ನು ಘಂಟಾಘೋಷವಾಗಿ ಸಾರಿ ಹೇಳಿದ ಬಸವಣ್ಣ. ಈ ವೃತ್ತಿ ಗೌರವ ಬೆಳೆಸಿ ಸೌಹಾರ್ದತೆ ಮೂಡಿಸಿದ್ದು, ಸಾಂಘಿಕ ಜೀವನ, ಸಮನ್ವಯತೆ ಬೆಳೆಸಿ ಧರ್ಮಜಿಜ್ಞಾಸೆ, ತತ್ವಾನ್ವೇಷಣೆಗೆ ತೊಡಗಿಸಿದ್ದು ಅನುಭವ ಮಂಟಪದಲ್ಲಿಯೇ. ಇದರಿಂದಾಗಿ ನೂರಾರು ಶರಣರು ವಚನ ರಚನೆಗೆ ತೊಡಗಿ ಮಹಾನ್ ಕರ್ತೃಗಳಾದುದು ಪಕ್ವಗೊಂಡಾದ ನಂತರದ ಮಾತು. ಆದರೆ ಆ ತೀರ ಚಿಕ್ಕಪುಟ್ಟ ವೃತ್ತಿ ಅವಲಂಬಿತ ನೂರಾರು ಶರಣ–ಶರಣೆಯರಿಗೆ ವಚನ ರಚನೆಗೆ ಅನುಭವ ಮಂಟಪ "ಸಾಕ್ಷರ ಕೇಂದ್ರ"ವೂ ಆಗಿತ್ತು ಎಂಬುದರತ್ತ ಗಮನ ಹರಿಸಬೇಕಾಗಿದೆ. ದುಡಿದು ಹೊಟ್ಟೆ ಹೊರೆಯುವ ಮಡಿವಾಳ ಮಾಚಿದೇವ, ಮೋಳಿಗೆಯ ಮಾರಯ್ಯ, ಡೊಹರ ಕಕ್ಕಯ್ಯ, ಆಯ್ದಕ್ಕಿ ಲಕ್ಕಮ್ಮ, ಮಾರಯ್ಯ ಇಂಥವರುಗಳೆಲ್ಲ ವಚನ ರಚಿಸಿದ್ದು, ಬರೆದದ್ದು, ಲಿಪಿಗೆ ಇಳಿಸಿದ್ದು ಹೇಗೆ? ಲಿಪಿಕಾರರನ್ನು ಗೊತ್ತುಪಡಿಸಿ ಬರೆಯಿಸುವ ತಾಕತ್ತು, ವರ್ಚಸ್ಸು ಅವರಿಗೆಲ್ಲಿತ್ತು? ಈ ಹಿನ್ನೆಲೆಯಲ್ಲಿ ಪ್ರಾಯೋಗಿಕವಾಗಿ ನೋಡಿದಾಗ 'ಅನುಭವ ಮಂಟಪ' 'ಅಕ್ಷರ ಮಂಟಪ'ವಾಗಿಯೂ ಕಾರ್ಯ ನಿರ್ವಹಿಸಿದೆ ಎಂಬುದನ್ನು ನಾವು ಒಪ್ಪಲೇಬೇಕಾಗುತ್ತದೆ.

ಈ ಕಾಲದಲ್ಲಿ ಸಮಾಜದಲ್ಲಿ ಹರಿದಾಡಿದ ವಿಚಾರಧಾರೆಗಳು ಶಿಕ್ಷಣ ಮತ್ತು ಸಾಹಿತ್ಯದಲ್ಲಿ ಸಂಚಲನ ಉಂಟುಮಾಡಿದವು. ೧೨ನೇ ಶತಮಾನದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಇದೊಂದು ಕ್ರಾಂತಿಕಾರಕ ಪರಿವರ್ತನೆಯಾಗಿ ಹೊರಹೊಮ್ಮಿತು.

ಈ ಸಾಮಾಜಿಕ ಕ್ರಾಂತಿಯ ನಂತರ ಹಲವಾರು ಐತಿಹಾಸಿಕ ಬದಲಾವಣೆಗಳಾದವು. ದಾಸಸಾಹಿತ್ಯ, ಕೀರ್ತನ ಸಾಹಿತ್ಯ ಹುಟ್ಟಿದವು. ಆದರೂ ಮೂಲದಲ್ಲಿದ್ದಂತೆಯೇ ಶಿಕ್ಷಣ ಮೇಲ್ಜಾತಿಯವರ ಮತ್ತು ಉಳ್ಳವರ ಸೊತಾಗಿತ್ತು. ಮಹಿಳಾ ಶಿಕ್ಷಣಕ್ಕೆ ಬೆಂಬಲ ಮತ್ತು ಪ್ರೋತ್ಸಾಹ ದೊರೆಯಲಿಲ್ಲ. ಶಿಕ್ಷಣ ಕ್ಷೇತ್ರವನ್ನೊಳಗೊಂಡಂತೆ ಎಲ್ಲ ರಂಗಗಳಿಂದಲೂ ಬಹುಪಾಲು ಜನರು ಮೂಢನಂಬಿಕೆಗಳಲ್ಲಿ ಮುಳುಗಿಹೋಗಿ ವಂಚಿತರಾಗಿದ್ದರು. ೧೮ನೇ ಶತಮಾನದ ಕೊನೆಯವರೆಗೂ ಅಂದರೆ ಬ್ರಟಿಷರ ಆಗಮನದ ವರೆಗೂ ಈ ಸಂಪ್ರದಾಯ, ಪದ್ಧತಿ, ಮೂಢನಂಬಿಕೆ, ಗೊಡ್ಡುಆಚರಣೆಗಳು ಸಮಾಜದಲ್ಲಿ ಜಾತಿಯತೆ, ಅಸಮಾನತೆ, ಲಿಂಗತಾರತಮ್ಯ ಮತ್ತು ಬಗೆಹರಿಯದ ಸಮಸ್ಯೆಗಳು ಶಾಶ್ವತವಾಗಿ ಬೇರೂರುವಂತೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಸಾಮಂತರಾಜರುಗಳು ಮತ್ತು ಅವರ ಆಶ್ರಿತರು, ಮೇಲ್ಜಾತಿಯವರು ಮತ್ತು ಉಳ್ಳವರು ಮಾತ್ರ ಶಿಕ್ಷಣದ ಸಂಪರ್ಕಕ್ಕೆ ಬಂದರು. ಏಕಸ್ವಾಮ್ಯದ ಶಿಕ್ಷಣ ಸಮಾಜಿಕ ವಿಚಾರಗಳ ನಿಯಂತ್ರಕವಾಗಿ ಕಾರ್ಯಮಾಡಿತು. ಶಿಕ್ಷಣದ ಪ್ರಭಾವಕ್ಕೊಗಾದವರು ಬಳಸಿದ ಭಾಷೆ, ಬರೆದ ಬರಹಗಳೇ ಈಡೀ ಸಮಾಜದ ಮುಖವಾಣಿಗಳೆಂದು ಬಿಂಬಿತಗೊಂಡಾಗ ವಂಚಿತರಾದವರ ಇತಿ–ಮಿತಿ–ಸ್ಥಿತಿಗತಿಗಳೂ ಮೂಕವಾದವು. ಬರಹ ಮಾಧ್ಯಮದಿಂದಾದರೂ ಮುಂದಿನ ಮತ್ತು ಹೊರಗಿನ ಜನಾಂಗದ ಅರಿವಿಗೆ ಬರಬಹುದಾಗಿದ್ದ ವಂಚಿತ, ನಿರ್ಗತಿಕ ಜೀವದ ಅಸ್ತಿತ್ವ ಇಲ್ಲಿಯೂ ಗಾಢಾಂಧಕಾರಕ್ಕೆ ತಳ್ಳಲ್ಪಟ್ಟಿತು. ಸಮಷ್ಟಿಯ, ಸಂಸ್ಕೃತಿಯ ವರ್ಣನೆ, ವಿವರಣೆಯೊಳಗೆ ನಿರ್ಲಕ್ಷಿತ ಜೀವಗಳ ಅಸ್ತಿತ್ವವೇ ಬಿಟ್ಟು ಹೋಯಿತು. ಸಮಾಜ, ಸಂಸ್ಕೃತಿ, ಸಮಷ್ಟಿ ಎಂದರೆ ತಮ್ಮಿರುವು ಮತ್ತು ತಮ್ಮರಿವು ಮಾತ್ರ ಎಂದು ಮೇಲ್ಜಾತಿಯ ಮೇಲ್ವರ್ಣದ ಜನ ಭಾವಿಸಿಬಿಟ್ಟಿದ್ದರು. ಶಿಕ್ಷಣ ಪಡೆಯುವಲ್ಲಿ ಮುಂಚುಣಿಯಲ್ಲಿದ್ದವರಿಗೆ ರಾಜ, ಸಾಮಂತರಿಂದ ಅಪಾರ ಬೆಂಬಲ ಮತ್ತು ಉದಾರ ನೆರವು ಹರಿದುಬಂದದ್ದಿದೆ. ಆದರೆ ಈ ಉದಾರತೆಯ ಕೃಪೆ ಲಭಿಸಿದ್ದೇಷ್ಟು, ಏಂಥ ಜನರಿಗೆ? ಎಂಬ ಪ್ರಶ್ನೆ ಬಂದಾಗ ಉತ್ತರ ಒಮ್ಮುಖವಾಗುತ್ತದೆ. ಅಂತೂ ಶಿಕ್ಷಣದ ಪ್ರಸಾರ ದೃಷ್ಟಿಯಿಂದ ನೋಡಿದಾಗ, ಸೀಮಿತವಾದ ವರ್ಗಕ್ಕೆ, ಜನಾಂಗಕ್ಕೆ ಸೀಮಿತ ಪಠ್ಯವಸ್ತು ಶಿಕ್ಷಣದ ಹೆಸರಿನಲ್ಲಿ ಅಸ್ತಿತ್ವದಲ್ಲಿತ್ತು. ಶಿಕ್ಷಣ ಸಾರ್ವತ್ರಿಕವಾಗಿ ಇರಲಿಲ್ಲ.

ಬ್ರಿಟಿಷೋತ್ತರ ಕಾಲದಲ್ಲಿ ಶಿಕ್ಷಣ :

ಬ್ರಿಟಿಷರ ಆಗಮನದವರೆಗೂ ಈ ರೀತಿ ಏಕಸ್ವಾಮ್ಯ ಪಡೆದು ಸೀಮಿತವಾಗಿದ್ದ ಶಿಕ್ಷಣ ಮತ್ತು ಶಿಕ್ಷಣ ಪದ್ಧತಿ, ಆಧುನಿಕ ಶಿಕ್ಷಣ ಪದ್ಧತಿಯೊಂದಿಗೆ ಹೊಸ ಆಯಾಮ ಪಡೆಯಿತು. ಭಾರತಕ್ಕೆ ಕಾಲಿಟ್ಟ ವಸಾಹತುಶಾಹಿ ಸರಕಾರದ ಸ್ವಾರ್ಥ ತುಂಬಿದ ವ್ಯಾಪಾರಿ ಮನೋಭಾವದಿಂದಾಗಿ ಆರಂಭದಲ್ಲಿ ಭಾರತೀಯ ಶಿಕ್ಷಣದ ಕಡೆಗೆ ಸಾಕಷ್ಟು ಗಮನಹರಿಸಲಿಲ್ಲ. ಅಲ್ಲದೆ ಭಾರತೀಯರ ಉತ್ಕಟ ಧರ್ಮಪ್ರೇಮ, ಮಿಷನರಿಗಳ ಶಿಕ್ಷಣದ ನೆಪದಲ್ಲಿ ತಮ್ಮನ್ನು ಧರ್ಮಭ್ರಷ್ಟರನ್ನಾಗಿ–ಸುತ್ತಿದ್ದಾರೆಂದು ಭಾರತೀಯರು ಬಂಡೆಳಬಹುದೆಂಬ ಹಿಂಜರಿಕೆಯೂ ಇತ್ತು. ಈ ಎರಡೂ

ಕಾರಣಗಳು ಶಿಕ್ಷಣ ಪ್ರಸಾರದ ಹಿಂಬಿಳಿಕೆಗೆ ಕಾರಣವಾಗಿದ್ದವು. ಆದರೆ ಬ್ರಿಟಿಷ ಪಾರ್ಲಿಮೆಂಟಿನ ಒತ್ತಾಯದಮೆರೆಗೆ ಶಿಕ್ಷಣ ಪ್ರಸಾರ ಆರಂಭವಾಯಿತು.

ವ್ಯಾಪಾರಕ್ಕೆಂದು ಬಂದವರು ಭಾರತೀಯರಿಗೆ ಶಿಕ್ಷಣ ನೀಡಲು ಚಿಂತಿಸಿದ ಎರಡು ಮುಖ್ಯ ಕಾರಣಗಳೆಂದರೆ ಒಂದು: ವ್ಯಾಪಾರ ಆಡಳಿತದಲ್ಲಿ ಸಹಕರಿಸಲು ಸಹಾಯಕರನ್ನು ತಯಾರಿ ಸುವುದು; ಇನ್ನೊಂದು: ಶಿಕ್ಷಣದ ಹೆಸರಲ್ಲಿ ಕ್ರೈಸ್ತಧರ್ಮದ ಪ್ರಚಾರ/ಪ್ರಸಾರ. ವ್ಯವಹಾರಿಕ ಜ್ಞಾನವುಳ್ಳ ಸಹಾಯಕರ ತಯಾರಿಕೆಗೆ ಅವಶ್ಯವಿರುವ ಜ್ಞಾನವನ್ನು ಒದಗಿಸಲು ಬ್ರಿಟಿಷರು ಆಧುನಿಕ ಶಿಕ್ಷಣವನ್ನು ಜಾರಿಗೆ ತಂದರು. ಇದು ಭಾರತಿಯ ಸಂಪ್ರದಾಯ ಪರಂಪರೆಗಳಲ್ಲಿ ಹರಿದು ಬಂದ ಧರ್ಮಶಾಸ್ತ್ರ, ರಾಜವಿದ್ಯೆಯನ್ನು ಒಳಗೊಂಡ ಶಿಕ್ಷಣದಂತಿರದೆ ವ್ಯವಹಾರಕ್ಕೆ ಮತ್ತು ಅನ್ಯಧರ್ಮಕ್ಕೆ ಪೂರಕವಾದ ವಿಚಾರಗಳಿಂದೊಡಗೂಡಿತ್ತು.

ಆರಂಭದಲ್ಲಿ ಭಾರತಿಯ ಸಮಾಜದಲ್ಲಿ ಶಿಕ್ಷಣದ ಬೀಜಬಿತ್ತಿದವುಗಳೆಂದರೆ ಮಿಶನರಿಗಳು. ಕ್ರೈಸ್ತ ಮತ ಪ್ರಚಾರಕ್ಕಾಗಿ ಶಾಲೆಗಳು ಉದ್ಭವಿಸಿದವೋ, ಶಾಲೆಗಳು ತೆರೆದ ಮೇಲೆ ಕ್ರೈಸ್ತ ಧರ್ಮ ಪ್ರಚಾರವಾಯಿತೋ? ಆದರೆ ಎರಡೂ ಸತ್ಯಗಳೇ. "ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದವರು ಹೆಚ್ಚಾಗಿ ಹಿಂದೂ ಸಮಾಜದ ತೀರ ಕೆಳಮಟ್ಟದ ಜನರಾಗಿದ್ದರು. ಅವರು ಸಾಮಾನ್ಯವಾಗಿ ಅಶಿಕ್ಷಿತರಿದ್ದರು: ಮುಕ್ತಿ ಇಲ್ಲವೆ ಮೋಕ್ಷ ಲಭಿಸಬೇಕಾದರೆ ಬಾಯ್ಬಲ್‌ನ್ನು ಓದುವುದು ಅವಶ್ಯವೆಂದು ತಿಳಿಸಲಾಗಿದ್ದುದರಿಂದ ಮತ್ತು ಅದಕ್ಕೆ ಅವಕಾಶ ನೀಡಿದ್ದರಿಂದ, ಈ ಜನ ನಂಬಿ, ಅವರ ಮೆಚ್ಚುಗೆಗೆ ಪಾತ್ರರಾಗಿದ್ದರು. ಇಂಥ ಜನರಿಗೆ ಓದು, ಬರಹ ಕಲಿಸುವುದಕ್ಕಾಗಿ ಮಿಶನರಿಗಳು ಶಾಲೆಗಳನ್ನು ತೆರೆಯಿತು. ಮುದ್ರಣಾಲಯಗಳನ್ನು ಪ್ರಾರಂಭಿಸಬೇಕಾಯಿತು. ಮತಾಂತರ ಹೊಂದಿದವರಿಗೆ ಸಮಾಜದಲ್ಲಿ ಗೌರವಸ್ಥಾನ ಮತ್ತು ಇರುವಿಕೆಯನ್ನು ಕಲ್ಪಿಸಿಕೊಡುವ ಉದ್ದೇಶದಿಂದ ವೃತ್ತಿಮೂಲ ಶಾಲೆಗಳನ್ನೇ ತೆರೆದು, ವೃತ್ತಿ ಶಿಕ್ಷಣ ನೀಡಿ, ಸರಕಾರದಲ್ಲಿ ನೌಕರಿ ಕೊಡಬೇಕಾಯಿತು. ಮತಾಂತರಗೊಳಿಸಿದರೆ ತಮ್ಮ ಕಾರ್ಯ ಮುಗಿಯಲಿಲ್ಲ; ಆರಂಭವಾಯಿತು ಎಂದು ಈ ಮಿಶನರಿಗಳು ತಿಳಿದಿದ್ದವು. ಮತಾಂತರ ಹೊಂದಿದವರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ತಮ್ಮ ಆದ್ಯ ಕರ್ತವ್ಯವೆಂದು ಅರಿಯಬೇಕಾಯಿತು. ಒಟ್ಟಿನಲ್ಲಿ ಶಾಲೆಗಳು ಮತಾಂತರಗೊಳಿಸುವ ಸಾಧನ ಹಾಗೂ ಸಿದ್ದಿಗಳೆಂದು ಜನಜನಿತವಾಗಿದ್ದವು."[೯] ಹೀಗಾಗಿ ಭಾರತದಲ್ಲಿ ಆಧುನಿಕ ಶಿಕ್ಷಣ ಪದ್ಧತಿಯ ಮೂಲ ಪ್ರವರ್ತಕನೆಂಬ ಗೌರವವು ಮಿಶನರಿಗಳಿಗೇ ಸಂದಿದೆ.

೧೮ನೇ ಶತಮಾನದಲ್ಲಿ ಭಾರತದಲ್ಲಿ ಪ್ರಾರಂಭವಾದ ಧರ್ಮಾರ್ಥಶಾಲೆಗಳು (ದಾನ, ಧರ್ಮ, ವಂತಿಗೆಗಳಿಂದ ನಡೆಯುತ್ತಿದ್ದ ಶಾಲೆಗಳು) ಮತ್ತು ಕಾರ್ಯವೈಖರಿ ಕುರಿತು ಎನ್ .ಎನ್. ಲಾ ಎಂಬುವನು "Promotion of Learning in India, by early European settlers"

ಎಂಬ ಗ್ರಂಥದಲ್ಲಿ ವಿವರಿಸುತ್ತಾನೆ. ಕಂಪನಿ ಆಡಳಿತ ಭಾಷೆಯಾಗಿದ್ದ ಪೋರ್ಚುಗೀಸ್ ನಲ್ಲಿ ಶಾಲೆ ಆರಂಭಿಸಿ, ಅದು ಯಶಸ್ಸು ಕಾಣದಿದ್ದಾಗ ಇಂಗ್ಲೀಷ್ ಮಾಧ್ಯಮ ಬಳಸಲಾಯಿತು. ೧೭೧೫ರಲ್ಲಿ ರೆವರೆಂಡ್ ಡಬ್ಲ್ಯು ಸ್ಟೀವನ್‌ಸನ್‌ನು ಮದ್ರಾಸ್‌ದಲ್ಲಿ ಈ ಮಾದರಿಯಲ್ಲಿ ಸೇಂಟ್ ಮೇರಿ ಚಾರಿಟಿ ಶಾಲೆಯನ್ನು ಸ್ಥಾಪಿಸಿದನು. ರೆವರೆಂಡ್ ರಿಚರ್ಡ ಕಾಬ್ ೧೭೧೯ರಲ್ಲಿ ಮುಂಬಯಿಯಲ್ಲಿ, ಚಾಪ್ಲೆನ್ ಬೆಲ್ಲಮಿ ೧೭೨೦-೧೭೩೧ ರ ಮದ್ಯದಲ್ಲಿ ಕಲ್ಕತ್ತೆಯಲ್ಲಿ ಇಂಥದೇ ಧರ್ಮಾರ್ಥ ಶಾಲೆಗಳನ್ನು ಸ್ಥಾಪಿಸಿದರು. ೧೭೮೭ರಲ್ಲಿ ಮದ್ರಾಸದಲ್ಲಿ ಹೆಣ್ಣುಮಕ್ಕಳ ಅನಾಥಾಶ್ರಮ ಒಂದನ್ನು ತೆರೆದು ಅದಕ್ಕೆ 'ಲೇಡಿ ಕಾಂಬೆಲ್ ಶಾಲೆ' ಎಂದು ಹೆಸರಿಡಲ್ಪಟ್ಟಿತು. ಅದೇ ವರ್ಷ ರೇವರೆಂಡ್ ಡಾ ಆಂಡ್ರ್ಯೂಬೆಲ್ ಎಂಬ ಪಾದ್ರಿ ಮದ್ರಾಸ್‌ನಲ್ಲಿ ಪುರುಷರ ಅನಾಥಾಶ್ರಮ ಸ್ಥಾಪಿಸಿದನು. ಮುಂದೆ ಇದೇ ಶಾಲೆಯಾಗಿ ಐತಿಹಾಸಿಕ ಮಹತ್ವ ಪಡೆದಿದೆ. ಏಕೆಂದರೆ ಡಾ. ಬೆಲ್ ಈ ಶಾಲೆಯಲ್ಲಿ 'ಹಿರೇಮಣಿ ಪದ್ಧತಿ' (Monitorial System) ಯನ್ನು ಪ್ರಯೋಗ ಮಾಡಿದನು. ಮುಂದೆ ಈ ಪದ್ಧತಿಯನ್ನೇ ಇಂಗ್ಲೆಂಡಿನಲ್ಲಿ ಪ್ರಯೋಗಿಸಿದನು. ಈ ಧರ್ಮಾರ್ಥಶಾಲೆಗಳಿಗೆ ಈಷ್ಟ ಇಂಡಿಯಾ ಕಂಪನಿಯವರು ಅನೇಕ ವಿಧದಿಂದ ಸಹಾಯ ಸಲ್ಲಿಸುತ್ತಿದ್ದರು. ಅದು ಕೇವಲ ಯುರೋಪಿಯನ್ ಮತ್ತು ಆಂಗ್ಲೋ ಇಂಡಿಯನ್ ಮಕ್ಕಳ ಶಿಕ್ಷಣಕ್ಕೆ ಸೀಮಿತವಾಗಿತ್ತು. ೧೯೬೫ರ ನಂತರ ಅವರ ಧೋರಣೆಯಲ್ಲಿ ಬದಲಾವಣೆ ಕಂಡುಬರುತ್ತದೆ.

ರಾಜಕೀಯವಾಗಿ ಹಿಂದು ಮತ್ತು ಮುಸ್ಲಿಂ ದೊರೆಗಳ ಸ್ಥಾನ ಆಕ್ರಮಿಸಿದ್ದ ಬ್ರಿಟಿಷರು ತಾವು ನಿರಾತಂಕವಾಗಿ ಭಾರತದಲ್ಲಿ ತಳಊರಲು ಭಾರತೀಯರಿಗೆ "ಅಲ್ಪಮಟ್ಟಿಗೆ ಏನಾದರೂ ಮಾಡಬೇಕೆಂದೆನಿಸಿ: ಅ) ಮದರಸಾಗಳನ್ನು ಹಾಗೂ ಪಾಠಶಾಲೆಗಳನ್ನು ಸ್ಥಾಪಿಸಿ, ಬ) ಶ್ರೇಷ್ಠ ಪಂಡಿತರಿಗೆ ಮತ್ತು ಮೌಲಿಗಳಿಗೆ ಗೌರವ ಪದವಿ/ಸಹಾಯಧನವನ್ನು ಕೊಟ್ಟು, ಕ) ಉಚ್ಚ ಧಾರ್ಮಿಕ ಅಭ್ಯಾಸಕ್ಕೆಂದು ಶಿಕ್ಷಣ ಸಂಸ್ಥೆಗಳಿಗೆ ಶಾಶ್ವತ ಆಧಾಯ ಬರುವಂತೆ ಆಸ್ತಿಯನ್ನೇ ನೀಡಿ, ಪ್ರೌಢ ಪ್ರಾಚೀನ ಶೈಲಿಯ ಭಾಷೆಗಳಲ್ಲಿ ಹೆಚ್ಚಿನ ವ್ಯಾಸಂಗಕ್ಕೆ ಉತ್ತೇಜನ ಕೊಡತೊಡಗಿದರು."[೧೦]

ಮೇಲ್ತರಗತಿ ಜನರ ವಿಶ್ವಾಸ ಗಳಿಸಲೆಂದು, ಪ್ರಭಾವಶಾಲಿಗಳಾದವರ ಮಕ್ಕಳಿಗೆ ಶಿಕ್ಷಣ ಕೊಟ್ಟು ಅವರನ್ನು ಸರಕಾರದಲ್ಲಿಯ ಉಚ್ಚಮಟ್ಟದ ಹುದ್ದೆಗಳಿಗೆ ನೇಮಿಸುವುದು ಕಂಪನಿಯವರಿಗೆ ಬೇಕಾಗಿತ್ತು. ಹೀಗೆ ಧರ್ಮಶಾಲೆಗಳಿಗೆ ವ್ಯತಿರಿಕ್ತವಾಗಿ, ವಿಭಿನ್ನ ರೀತಿಯ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದ್ದರಲ್ಲಿ ಕಲ್ಕತ್ತ ಮದರಸಾ ಮತ್ತು ಬನಾರಸ್‌ನ ಸಂಸ್ಕೃತ ಪಾಠಶಾಲೆ ಇವು ಪ್ರಸಿದ್ಧವಾಗಿವೆ. ವಾರನ್ ಹೆಸ್ಟಿಂಗ್ಸ್ ಕಲ್ಕತ್ತೆಯ ಮುಸಲ್ಮಾನರ ಸಮಾಧಾನಕ್ಕಾಗಿ ಮತ್ತು ಅವರ ಶಿಕ್ಷಣ ಹಾಗೂ ಉನ್ನತ ಹುದ್ದೆಗಳ ಲಭ್ಯತೆಯ ಅನುಕೂಲಕ್ಕಾಗಿ ೧೭೮೫ರ ಸುಮಾರಿಗೆ ಕಲ್ಕತ್ತೆಯ ಮದರಸಾ ಸ್ಥಾಪಿಸಿದರೆ, ಬನಾರಸದ ರೆಸಿಡೆಂಟನಾದ ಜೊನಥನ್ ಡಂಕನ್ನನು ೧೭೯೧ರಲ್ಲಿ ಸಂಸ್ಕೃತ ಪಾಠಶಾಲೆ ಆರಂಭಿಸಿದನು. ಅಂತೂ 'ಈ ಎರಡೂ ಸಂಸ್ಥೆಗಳು ಶೈಕ್ಷಣಿಕ ಧೋರಣೆಯ ಹೊಸ ಸ್ವರೂಪದ (Orientalisum) ಉದಯವೆಂದೇ ಹೇಳಬಹುದು'[೧೧]

ಇದೇ ೧೭೭೨ರ ಸುಮಾರಿಗೆ ಈಗಿನ ಕರ್ನಾಟಕದಲ್ಲಿಯೂ ಶಾಲೆಗಳನ್ನು ಆರಂಭಿಸಿದ್ದಿದೆ. ಮದ್ರಾಸಿನಲ್ಲಿ ಶಿಕ್ಷಣದ ಅಗ್ರಗಾಮಿ ಎನಿಸಿದ್ದ ಸ್ಕೂವರ್ಟನು ಮೈಸೂರಿನಲ್ಲಿ ಹೈದರಅಲಿ ಬಹುಮಾನವಾಗಿ ಕೊಟ್ಟ ಹಣದಿಂದ ತಂಜಾವರದಲ್ಲಿ ಇಂಗ್ಲಿಷ್ ಧರ್ಮಾರ್ಥ ಶಾಲೆಯನ್ನು ಸ್ಥಾಪಿಸಿದನು. ತಂಜಾವರ್ ರೆಸಿಡೆಂಟ್ ಜಾನ್ ಸುಲಿವಾನ್ (John Sulivan)ನ ಸಹಾಯ ಸಹಕಾರದಿಂದ ೧೭೮೫ರಲ್ಲಿ ಭಾರತೀಯ ಮಕ್ಕಳ ಆಂಗ್ಲ ಶಿಕ್ಷಣಕ್ಕಾಗಿ ತಂಜಾವರ, ರಾಯಗಡ ಮತ್ತು ಶಿವಗಂಗಾ – ಈ ಮೂರು ಸ್ಥಳಗಳಲ್ಲಿ ಶಾಲೆಗಳನ್ನು ತೆರೆದನು."ಕಂಪನಿಯವರಲ್ಲಿ ಹಾಗೂ ಭಾರತೀಯರಲ್ಲಿ ಪರಸ್ಪರ ತಿಳುವಳಿಕೆಯನ್ನುಂಟುಮಾಡುವಲ್ಲಿ ಹಾಗೂ ಅವರಲ್ಲಿಯ ಎಲ್ಲ ವ್ಯವಹಾರಗಳನ್ನು ಸುಗಮಗೊಳಿಸುವಲ್ಲಿ ಸಹಾಯವಾಗುವವೆಂದು ಸುಲೆವಾನನು ಭಾವಿಸಿದ್ದನು"[೧೨] "ಮಿಶನ್ ಶಾಲೆಗಳು ಶಿಕ್ಷಣ ಮಾಧ್ಯಮವಾಗಿ ಭಾರತೀಯ ಭಾಷೆಗಳನ್ನು ಉಪಯೋಗಿಸಿದ್ದಿದೆ. ಈ ಶಾಲೆಗಳು ಕೇವಲ ಯುರೋಪಿಯನ್ ಮತ್ತುಆಂಗ್ಲೋ–ಇಂಡಿಯನ್ ಮಕ್ಕಳಿಗೆ ಮಾತ್ರ ಶಿಕ್ಷಣ ಕೊಡದೆ ಮತಾಂತರ ಹೊಂದಿದ ಭಾರತೀಯ ಮಕ್ಕಳಿಗೂ ಶಿಕ್ಷಣ ನೀಡುತ್ತಿದ್ದವು ಹಾಗೂ ಆಡಳಿತಗಾರರು ಮತ್ತು ಜನರಲ್ಲಿ ಸಂಪರ್ಕದ ಸಾಧನಕ್ಕಾಗಿ ಇಂಗ್ಲೀಷ ಭಾಷೆಯನ್ನೂ ಕಲಿಸುತ್ತಿದ್ದವು. ಈ ಸ್ಪಷ್ಟವಾದ ವೈಶಿಷ್ಟ್ಯಗಳಿಂದ ಪ್ರಾರಂಭಿಕ ಮಿಶನರಿಗಳ ಶೈಕ್ಷಣಿಕ ಸಾಹಸಕೃತ್ಯವು ಪಾದ್ರಿಗಳ ಸಾಹಸಕ್ಕಿಂತ ಹೆಚ್ಚು ಮಹತ್ವದ್ದೆಂದು ಕಂಡುಬರುವುದು"[೧೩] ಇವುಗಳಿಗೆ ಕಂಪನಿ ಸಹಾನುಭೂತಿ ತೋರುತ್ತಿದ್ದು ಕೆಲವು ಸಂದರ್ಭಗಳಲ್ಲಿ ಧನಸಹಾಯವನ್ನೂ ನೀಡಿದೆ. ಇದರಿಂದ ಭಾರತೀಯ ಶಿಕ್ಷಣಕ್ಕೆ ವಿಶೇಷವಾದ, ಪ್ರತ್ಯೇಕ ಮತ್ತು ನಿರ್ಧಿಷ್ಟವಾದ ಚೌಕಟ್ಟಾಗಲಿ, ಯೋಜನೆಯಾಗಲಿ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. "ಕ್ರಿಶ್ಚಿಯನ್ ಧಾರ್ಮಿಕ ಪಂಥದ ನಾಯಕನಾಗಿದ್ದ ವಿಲ್ಬರ್ ಪೋರ್ಸನು ಭಾರತದಲ್ಲಿ ಧಾರ್ಮಿಕ ಮಾರ್ಗದರ್ಶನದ ಮೂಲಕ ಶಿಕ್ಷಣ ಪ್ರಸಾರ ಮಾಡಲು ಶಿಕ್ಷಕರನ್ನು ಕಳುಹಿಸುವ ಹೊಣೆಯನ್ನು ಈಷ್ಟ ಇಂಡಿಯಾ ಕಂಪನಿಯ ಡಾಯರೆಕ್ಟರ ಮಂಡಳಿ ಹೊತ್ತುಕೊಳ್ಳುವಂತೆ ಒತ್ತಾಯದ ಸೂಚನೆ ಇಟ್ಟನು"[೧೪] ಇದು ಬ್ರಿಟಿಷ್ ಪಾರ್ಲಿಮೆಂಟಿಗೆ ಕಷ್ಟಕರವಾಗಿತ್ತು. ಅಲ್ಲದೇ ಶಿಕ್ಷಣ ಅಭಿವೃದ್ಧಿ ಕುರಿತು ಅದರ ಧೋರಣೆಯು ಬದಲಾಗಿತ್ತು ಹಾಗಾಗಿ ಈ ಸೂಚನೆ ತಿರಸ್ಕೃತವಾಯಿತು.

೧೭೯೨-೯೩ರಲ್ಲಿ ಬ್ರಿಟಿಷ ಪಾರ್ಲಿಮೆಂಟ್ ಭಾರತದಲ್ಲಿ ನೂತನ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಬೇಕೆಂದು ಭಾರತದಲ್ಲಿನ ಈಸ್ಟ ಇಂಡಿಯಾ ಕಂಪನಿ ಅಗ್ರಹಪಡಿಸಿತು. ಅಲ್ಲದೆ ಬಾರತೀಯ ಪ್ರಗತಿಪರ ಚಿಂತಕರ ಆಂಗ್ಲ ಒಲವು ಹೆಚ್ಚತೊಡಗಿತು. ಜೊತೆಜೊತೆಗೆ ಧಾರ್ಮಿಕ ಮತ್ತು ಖಾಸಗಿ ಶಿಕ್ಷಣಸಂಸ್ಥೆಗಳು ಶಿಕ್ಷಣ ಕ್ಷೇತ್ರ ಪ್ರವೇಶಿಸಿದವು. ಈ ಹಿನ್ನೆಲೆಯಲ್ಲಿ ಆಧುನಿಕ ಶಿಕ್ಷಣ ಪದ್ಧತಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಶಿಕ್ಷಣ ಕೊಡುವುದರ ಅವಶ್ಯಕತೆಯನ್ನು ಪೂರೈಸಿದರೂ ನಂತರ ಶಿಕ್ಷಣಮಾಧ್ಯಮದ ಜಿಜ್ಞಾಸೆ ಆರಂಭವಾಯಿತು. ಚಾರ್ಲ್ಸಗ್ರಾಂಟ್ ಆಂಗ್ಲ ಭಾಷಾ ಮಾಧ್ಯಮದಲ್ಲಿಯೇ ಮಿಶನರಿಗಳ ಮೂಲಕ ಶಿಕ್ಷಣ ಕೊಡುವ ಪ್ರಸ್ತಾಪ ಮಾಡಿದನು. ಕಂಪನಿ ಸರಕಾರ ಸಾರ್ವಭೌಮತ್ವ ಪಡೆದ ಬಳಿಕ ಕಂಪನಿಯವರಿಗೆ ಧಾರ್ಮಿಕ ಅಲಿಪ್ತತೆಯಿಂದಿರುವುದು ರಾಜಕೀಯವಾಗಿ ಮಹತ್ವದ್ದು

ಎಂದೆನಿಸಿ ಮೊದಲಿನ ಎಲ್ಲ ಮತಾಂತರ ಕಾರ್ಯಗಳನ್ನು ನಿಲ್ಲಿಸಿ ಮಿಶನರಿಗಳ ಬಗೆಗಿದ್ದ ಸಹಾನುಭೂತಿಯನ್ನು ಕೈಬಿಟ್ಟರು. ಅಲ್ಲಲ್ಲಿ ನಡೆದ ಬಂಡಾಯದಂಥ ಘಟಣೆಗಳಿಂದಾಗಿ ಈ ಅಲಿಪ್ತತೆ ಅನಿವಾರ್ಯವಾಯಿತು.

ಈತ ೧೭೯೨ರಷ್ಟು ಪೂರ್ವದಲ್ಲಿಯೇ ಭಾರತೀಯ ಶಿಕ್ಷಣದ ಭವಿಷತ್ತಿನ ಅಭಿವೃದ್ಧಿಯನ್ನು ಬಹು ನಿಚ್ಚಳವಾಗಿ ಊಹಿಸಿದ್ದು ಅತ್ಯಂತ ಅರ್ಥಗರ್ಭಿತವಾಗಿದೆ. ಇದು ಫಲಕಾರಿಯಾಗದೆ ೧೮೧೧ರ ಅವಧಿಯಲ್ಲಿ ಭಾರತದಲ್ಲಿನ ಶಾಲಾಶಿಕ್ಷಣದ ಪ್ರಸಾರ ವ್ಯವಸ್ಥೆಯೊಂದಿಗೆ ಭಾರತೀಯ ಸಾಹಿತ್ಯ ಮತ್ತು ವಿಜ್ಞಾನ ಶಿಕ್ಷಣದ ಅವನತಿ ಕುರಿತು ಅಸಮಾಧಾನ ತಳೆದ 'ಲಾರ್ಡಮಿಂಟೋ' ಸುಧಾರಣೆಗೆ ಅಗ್ರಹ ಪಡಿಸಿದನು. ಇದೇ ಕಾರಣದಿಂದಾಗಿ ೧೮೧೩ ರಲ್ಲಿ ಚಾರ್ಟರ್ ಕಾಯಿದೆಯನ್ನು ರೂಪಿಸುವ ಅನಿವಾರ್ಯತೆ ಬಂದೊದಗಿ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಚಲನೆ ಆರಂಭವಾಯಿತು. ಮೊದಮೊದಲು ಶಿಕ್ಷಣ ಆರಂಭಿಸಿದಾಗ ಅದು ಸಮಾಜದ ಎಲ್ಲ ಸ್ಥರಗಳಿಗೆ ತಲುಪುತ್ತಿರುವ ಬಗೆಗೆ ತಲೆ ಕೆಡಿಸಿಕೊಂಡಿರದ ಕಂಪನಿಗೆ ಇಷ್ಟೊತ್ತಿಗಾಗಲೇ ಸಮಾಜದಲ್ಲಿ ಉನ್ನತ ಜಾತಿಯವರಿಗೆ ಮತ್ತು ಉಳ್ಳವರಿಗೆ ಮಾತ್ರ ಶಿಕ್ಷಣ ಲಭಿಸುತ್ತಿದ್ದು, ಬಹುಸಂಖ್ಯಾತ ಭಾರತೀಯರು ಶಿಕ್ಷಣದಿಂದ ದೂರವೇ ಉಳಿಯುವಂತಾದದ್ದು ಗಮನಕ್ಕೆ ಬಂದು ೧೮೧೩ರ ಗೊತ್ತುವಳಿಯಲ್ಲಿ ಭಾರತೀಯರೆಲ್ಲರಿಗೂ ಶಿಕ್ಷಣ ದೊರಕಿಸುವಂಥಹ ನಿರ್ಣಯ ಅಂಗೀಕರಿಸಿತು. ೧೮೧೩ರ ಚಾರ್ಟರ ಕಾಯಿದೆಯಂತೆ ಕ್ರಿಶ್ಚಿಯನ್ ಮಿಶನರಿಗಳ ಮೂಲಕ ಆಂಗ್ಲ ಶಿಕ್ಷಣ ಮತ್ತು ೧ಲಕ್ಷ ರೂಪಾಯಿಗಳನ್ನು ಶಿಕ್ಷಣ ಕ್ಷೇತ್ರಕ್ಕೆ ವೆಚ್ಚಮಾಡಲು ನಿರ್ಧರಿಸಿತು. ಮಿಶನರಿಗಳ ಮುಖ್ಯ ಉದ್ದೇಶ ಮತಾಂತರಿಸುವುದೇ ಆಗಿದ್ದರೂ ಅವು ನೀಡುವ ಉತ್ತಮ ಶಿಕ್ಷಣ ಅಲ್ಲಿನ ಚುಂಬಕ ಶಕ್ತಿಯಾಗಿತ್ತು. ಆದರೆ ಶಿಕ್ಷಣದ ಭಾಷಾ ಮಾಧ್ಯಮದ ತೀವ್ರ ಜಿಜ್ಞಾಸೆಯಿಂದಾಗಿ ಚಾರ್ಟರ್ ಕಾಯಿದೆ ಚರ್ಚೆಗೆ ಗ್ರಾಸವಾಯಿತು. ಇದರ ನಿರ್ಧಾರಕ್ಕಾಗಿ ಹತ್ತು ಜನರನ್ನೊಳಗೊಂಡ 'ಜನರಲ್ ಕಮಿಟಿ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್'ನ್ನು ನೇಮಕ ಮಾಡಿತು. ಈ ಬದಲಾದ ಧೋರಣೆಗಳ ಹಣಾಹಣಿಯಲ್ಲಿ ಓರಿಎಂಟಾಲಿಸ್ಟ(Orientalist) ಮತ್ತು ಇಂಗ್ಲಿಷಿಸ್ಟ(Englishist) ಎಂಬ ಎರಡು ಬಣಗಳು ಹುಟ್ಟಿದವು. ಪ್ರಾಚ್ಯ ಸಂಸ್ಕೃತಿಗಳ ಪಂಗಡದ ನಾಯಕರಾದ ಎಚ್. ಓ, ಪ್ರಿನ್ಸೆರ್ಪ ಇತನನ್ನು ಒಳಗೊಂಡಂತೆ ಎಚ್. ಎಚ್. ವಿಲ್ಸನ್ ಮುಂತಾದ ೧೦ ಸದಸ್ಯರುಗಳು- ಶಿಕ್ಷಣವು ಸಂಸ್ಕೃತ, ಅರೆಬಿಕ್ ಭಾಷೆಗಳಲ್ಲಿರಬೇಕೆಂದು ವಾದಿಸಿದರೆ, ಆಂಗ್ಲ ಪಂಗಡದ ಚಾರ್ಲ್ಸ ಟ್ರವೆಲಿಯನ್ ಮುಂತಾದವರು ಮೆಖಾಲೆಯ ಬೆಂಬಲಕ್ಕೆ ಕಾಯುತ್ತಲೇ ಇಂಗ್ಲಿಷ ಮಾಧ್ಯಮದ ಶಿಕ್ಷಣಕ್ಕೆ ಬೇಡಿಕೆ ಇಟ್ಟರು. ೧೮೩೪ರಲ್ಲಿ ಗವರ್ನರ್ ಜನರಲ್ ಕಾರ್ಯಕಾರಿ ಸಮಿತಿಯಲ್ಲಿ ಕಾಯಿದೆ ಶಾಖೆಯ ನ್ಯಾಯಸದಸ್ಯನಾಗಿ ಭಾರತಕ್ಕೆ ಬಂದಿದ್ದ ಲಾರ್ಡ ಥಾಮಸ್ ಬಿ.ಮೆಖಾಲೆ ೧೮೩೫ರಲ್ಲಿ ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಸಮಿತಿಯ ಅಧ್ಯಕ್ಷನಾಗುವವರೆಗೆ ನಿರ್ಣಾಯಕ ಹಂತ ತಲುಪದ ನಿರ್ಧಾರ ೧೮೩೫ರಲ್ಲಿ ನಿರ್ಣಾಯಕ ಘಟ್ಟ ತಲುಪಿತು. ಗವರ್ನರ್ ಜನರಲ್ ಆಗಿದ್ದ ಲಾರ್ಡ ವಿಲಿಯಂ ಬೆಂಟಿಂಕ್ ತನ್ನೆದುರು ಮಂಡಿಸಿದ ಎರಡೂ ಅಭಿಪ್ರಾಯಗಳನ್ನು ಸಾರ್ವಜನಿಕ ಶಿಕ್ಷಣದ ಸಾಮಾನ್ಯ

ಸಮಿತಿಯ ಅಧ್ಯಕ್ಷರಿಗೆ ಒಪ್ಪಿಸಿ ಬಿಟ್ಟನು. ಆಗಲೇ ಹೊರಬಿದ್ದದ್ದು 'ಮೆಖಾಲೆ ಮಿನಿಟ್'. ಭಾರತೀಯರಿಗೆ ಕೊಡುವ ಶಿಕ್ಷಣದ ರೂಪರೇಷೆಗಳನ್ನು ಬರೆದ ಐತೀರ್ಪು ಅಪ್ಪಟ ಬ್ರಿಟಿಷ ಸಾಮ್ರಾಜ್ಯಶಾಹಿ ಆಕ್ರಮಣಕಾರಿ ಧೋರಣೆಯ ಪ್ರತಿಬಿಂಬವಾಗಿ ಭಾರತೀಯರ ದೂರಗಾಮಿ ಭವಿಷತ್ತನ್ನು ನಿರ್ಧರಿಸಿದಂತಿದೆ. ಭಾರತೀಯರಿಗೆ ಇಂಗ್ಲಿಷ ಮಾಧ್ಯಮದಲ್ಲಿಯೇ ಶಿಕ್ಷಣ ಕೊಡುವುದು ಸೂಕ್ತ ಎಂಬ ನಿಲುವು ತಳೆದ ಮೆಖಾಲೆ "ಭಾರತೀಯರ ಸಾರ್ವಜನಿಕ ಮನಸ್ಸು ನಮ್ಮ ಪದ್ಧತಿಯಲ್ಲಿ ಬೆಳೆದು ವಿಕಾಸ ಹೊಂದಿ, ಶ್ರೇಷ್ಠ ಮಟ್ಟದ ಕ್ರಮ ಪದ್ಧತಿಯನ್ನು ಬೇಡುವಂತಾಗಬಹುದು; ಭಾರತೀಯರು ವಿದ್ಯಾವಂತರಾಗಿ ಇಂದಿನ ಆಡಳಿತಕ್ಕಿಂತಲೂ ಉತ್ತಮ ರೀತಿಯ ಆಡಳಿತ ಬೇಡುವ ಶಕ್ತಿ ಸಾಮರ್ಥ್ಯಗಳು ಅವರಲ್ಲಿ ಬೆಳೆಯಬಹುದು; ಪಾಶ್ಚಾತ್ಯ ಪದ್ಧತಿಯಲ್ಲಿ ವಿದ್ಯಾವಂತರಾದ ಭಾರತೀಯರು ಭವಿಷತ್ ಕಾಲದಲ್ಲಿ ಪಾಶ್ಚಾತ್ಯ ರೂಢಿಪರಂಪರೆಗಳನ್ನು ಮೆಚ್ಚಿ ಅಳವಡಿಸಿ ಕೊಳ್ಳುವಂತಾಗಬಹುದು... ಅಂಥ ದಿನ ಬಂದರೆ ಬ್ರಿಟಿಷರ ಇತಿಹಾಸದಲ್ಲಿಯೇ ಅಭಿಮಾನಾಸ್ಪದ ದಿನವಾಗಬಹುದು. ನಮ್ಮ ಸಾಮ್ರಾಜ್ಯ ನಮ್ಮ ಕೈ ಬಿಟ್ಟು ಹೋಗಬಹುದು, ಜಯಶ್ರೀ ಸದಾಕಾಲ ನಮ್ಮನ್ನೇ ವರಿಸಲಿಕ್ಕಿಲ್ಲ; ಆದರೆ ಸದಾಕಾಲವೂ ಜಯದ ಅಮರತ್ವವನ್ನು ಕೊಡುವ ಮತ್ತು ಅಪಜಯವನ್ನು ತಾರದಿರುವ ಕೆಲವು ಸಂಗತಿಗಳಿವೆ. ಅಜ್ಞಾನದ ಮೇಲೆ ಸುಜ್ಞಾನ ಗಳಿಸಿದ ಇಂಥ ಗೆಲುವು ಅನಂತವಾದ ಗೆಲುವು"[೧೫] ಜಾತಿ ಮತ್ತು ಬಣ್ಣದಿಂದ ಭಾರತೀಯರಾಗಿದ್ದುರುಚಿ, ವಿಚಾರ, ಭಾಷೆ ಮತ್ತು ಭಾವದಲ್ಲಿ ಆಂಗ್ಲರೇ ಆಗಿರುವಂಥ ಒಂದು ಭಾರತೀಯ ವರ್ಗವನ್ನು ಸೃಷ್ಟಿಸಲು ತಮ್ಮೆಲ್ಲ ಶಕ್ತಿಯನ್ನು ಒಗ್ಗೂಡಿಸಿ ಶ್ರಮಿಸಿದರು. ರಕ್ತ ಭಾರತೀಯರದ್ದೇ ಆದರೂ ಅದರ ರುಚಿ ಮಾತ್ರ ಬ್ರಿಟಿಷರದ್ದಾಗಬೇಕು(Blood by Indians but teast by britishers) ಎಂಬುದು ಮೆಖಾಲೆ ಬೀಜಾಕ್ಷರ; ಇದು ಇಂದಿಗೂ ಅಳಿಸಲಾಗದ ಬರಹವಾಗಿದೆ. ಅಣುಬಾಂಬ ಮತ್ತು ವೈರಸ್ ದಾಳಿಗಿಂತ ತೀಕ್ಷ್ಣವಾದ ಈ ವಿಚಾರ ಪ್ರಣಾಳಿಕೆಯ ವಿಷಬೀಜ ಇಂದಿಗೂ ಇವತ್ತಿಗೂ ನಿತ್ಯ ಹರಿದ್ವರ್ಣವನ್ನು ಸೃಷ್ಟಿಸುತ್ತಿದೆ. ಇಂಥ ಐತೀರ್ಪನ್ನು ಲಾರ್ಡ ವಿಲಿಯಂ ಬೆಂಟಿಂಕ್ ಒಪ್ಪಿ, ಇದನ್ನು ಸಾರ್ವಜನಿಕ ಶಿಕ್ಷಣ ನೀತಿಯೆಂದು ಘೋಷಿಸಿ ಮುಕ್ತವಾಗಿ ಜಾರಿಗೊಳಿಸಿದನು.ಇದರ ಹಿಂದಿರುವ ತಥ್ಯವೆಂದರೆ ಒಂದು ಕಾಲದಲ್ಲಿ ಇಂಗ್ಲಂಡದೇಶ ಎಂಟುನೂರು ವರ್ಷಗಳ ಕಾಲ ರೋಮನ್ನರ ಅಧೀನದಲ್ಲಿ ಇದ್ದಾಗಿನ 'ರೋಮನಲ್ಲಿದ್ದಾಗ ರೋಮನ್ನನಂತಿರು' ಎಂಬ ಸಂಸ್ಕಾರ. ಆ ಅಸ್ತ್ರವನ್ನೇ ಬ್ರಿಟಿಷರು ಭಾರತೀಯರ ಮೇಲೂ ಬಳಸಿದರು. ಇದರಿಂದ ಭಾರತದಲ್ಲಿಯ ಮಾತೃ ಭಾಷೆಗಳೆಲ್ಲವೂ ನಾಲಿಗೆ ಕಳೆದುಕೊಂಡದ್ದು ಈಗ ಗತ ಇತಿಹಾಸ. ಮದ್ರಾಸ ಮತ್ತು ಬನಾರಸ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡುತ್ತಿರುವಾಗ, ಇಂಗ್ಲಿಷ ಶಾಲೆಗಳ ವಿದ್ಯಾರ್ಥಿಗಳು ಶಿಕ್ಷಣ ಸಲುವಾಗಿ ಶುಲ್ಕ ಕೊಡಲು ಸಿದ್ಧರಿದ್ದ ಸತ್ಯವನ್ನು ಸರ್ವರಲ್ಲೂ ಮನನಿಸಿ ತನ್ನ ವಾದವನ್ನು ಸಮರ್ಥಿಸಿಕೊಂಡ ಮೆಖಾಲೆ ಅಂತೂ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ ರೀತಿಯಲ್ಲಿ ಆಂಗ್ಲೀಯ ಬದಲಾವಣೆಯನ್ನು ತಂದನು. "ಮೆಖಾಲೆಯ ಆಳ ವಿಚಾರಗಳ ಆಳಕ್ಕಿಳಿದು ನೋಡಿದರೆ ಈ ಭಾರತದ ಸಾಮಾಜಿಕ ಮತ್ತು ಶೈಕ್ಷಣಿಕ ವಲಯದಲ್ಲಿ ಒಂದು ಹೊಸ ವರ್ಗವನ್ನೇ ಸೃಷ್ಟಿಸ ಹೊರಟವನಾಗಿ ಕಾಣುತ್ತಾನೆ. ಸಮಾಜದ ಮುಂಚುಣಿಯಲ್ಲಿದ್ದ ಮೇಲ್ಜಾತಿ ಮತ್ತು ಮೇಲ್ವರ್ಗದಲ್ಲಿದ್ದ

ಬ್ರಾಹ್ಮಣರೇ ಈ ವರ್ಗದಲ್ಲಿದ್ದರು. ಇವರನ್ನು 'ಕ್ಲಾಸ್ ಆಫ್ ಇಂಟರಪ್ರಿಟರ್ಸ್' ಎಂದು ಕರೆದನು"[೧೬]- ಅಂತೂ ಈ ಕಾಲದ ಶಿಕ್ಷಣ ಕ್ಷೇತ್ರದಲ್ಲಿ ಮುಂಚುಣಿಯಲ್ಲಿದ್ದವರ ಮೂಗಿಗೆ ತುಪ್ಪ ಹಚ್ಚುವ ಕಾರ್ಯ ನಡೆಯಿತು.

ಲಾರ್ಡ ವಿಲಿಯಂ ಬೆಂಟಿಂಕ್‌ನ ನಂತರ ಬಂದ ಲಾರ್ಡ ಆಕ್ಲೆಂಡ್ ಕೂಡ ಪ್ರಾಚ್ಯ ಸಂಸ್ಕೃತಿ ಪಂಗಡದವರು ವಿನಾಶವಾಗದಂತೆ ಆಂಗ್ಲ ಪಂಗಡದವರಿಗೆ ಆಂಗ್ಲ ಶಿಕ್ಷಣ ಪ್ರಸ್ತಾಪಕ್ಕೆ ಅತ್ಯಂತ ಪ್ರಬಲ ಪ್ರೋತ್ಸಾಹವನ್ನೂ, ಚಾಲನೆಯನ್ನೂ ನೀಡಿದನು.

ಇದಾದ ತರುವಾಯ ದೇಶಾದ್ಯಂತ ಸಮಗ್ರ ಶಿಕ್ಷಣ ಕುರಿತಾಗಿ ೧೮೫೪ರಲ್ಲಿ 'ಚಾರ್ಲ್ಸ್‌ವುಡ್ ಪರಿಪತ್ರ' (The megna charta of English Education in India) ಎಂದು ವರ್ಣಿತಗೊಂಡು ಭಾರತೀಯ ಶಿಕ್ಷಣ ಪದ್ಧತಿಯಲ್ಲೂ ಅಮೂಲಾಗ್ರ ಪರಿವರ್ತನೆಗಳನ್ನುಂಟು ಮಾಡಿತು. ಪ್ರಾಥಮಿಕ ಶಾಲೆಗಳಿಂದ ವಿಶ್ವವಿದ್ಯಾಲಯಗಳವರೆಗಿನ ಎಲ್ಲ ಸಂಸ್ಥೆಗಳಲ್ಲಿ ಏಕಸೂತ್ರತೆಯನ್ನು ರೂಪಿಸಿತು. ಜನಸಾಮಾನ್ಯರ ಶಿಕ್ಷಣಕ್ಕೆ ವಿಶೇಷ ಒತ್ತು ಕೊಡುವುದು. ಪ್ರತಿಯೊಂದು ಪ್ರಾಂತ್ಯದಲ್ಲಿ ಒಂದು ವಿದ್ಯಾಇಲಾಖೆಯನ್ನು ಸ್ಥಾಪಿಸಬೇಕು; ಶಿಕ್ಷಣ ರಂಗದಲ್ಲಿ ಸರಕಾರದ ಜೊತೆಗೆ ಖಾಸಗಿ ಸಂಸ್ಥೆಗಳು ಮುಂದೆ ಬರಬೇಕು. ಅವರಿಗಾಗಿ ಒಂದು 'ಸಹಾಯ ಧನ ಪದ್ಧತಿ' ಜಾರಿಗೆ ಬರಬೇಕು; ಹಿಂದುಳಿದ ಪ್ರದೇಶದಲ್ಲಿ ಸರಕಾರವೇ ಮುಂದೆ ಬಂದು ಶಾಲೆ ತೆರೆಯಬೇಕು; ಸರಕಾರಿ ಮಾಧ್ಯಮಿಕ ಮತ್ತು ಉಚ್ಚಶಿಕ್ಷಣ ಕ್ಷೇತ್ರದಿಂದ ಸರಕಾರ ಕ್ರಮೇಣ ಹಿಂದೆ ಸರಿಯಬೇಕು; ದೇಶಿ ಶಾಲೆಗಳಿಗೆ ಪ್ರೋತ್ಸಾಹ ನೀಡಿ, ಅವೂ ಸರಕಾರದ ಆಡಳಿತಕ್ಕೆ ಒಳಪಡುವಂತೆ ಮಾಡಬೇಕು ಹಾಗೂ ಧಾರ್ಮಿಕ ಶಿಕ್ಷಣದಲ್ಲಿ ಸರಕಾರವೂ ಕೈ ಹಾಕಬಾರದು. ಇಂಥ ಅಭೂತಪೂರ್ವ ನಿರ್ಣಯಗಳನ್ನು ಹೊಂದಿದ ವುಡ್ ವರದಿ ದೇಶಾದ್ಯಂತ ಜಾರಿಯಲ್ಲಿರುವಂತೆ ಕೇಂದ್ರ ಸರಕಾರ ಆಜ್ಞಾಪಿಸಿತು. ಇದರಿಂದ ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮನ್ವಂತರ ಸೃಷ್ಟಿಯಾಯಿತು. ೧-೫-೧೮೫೫ ಕ್ಕೆ 'ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್' ಎಂಬ ಕಚೇರಿ ಕಾರ್ಯಾರಂಭ ಮಾಡಿತು. ಈ ಸಮಯದಲ್ಲಿ ಕ್ಯಾಪ್ಟನ್ ಜಿ.ಎಫ್.ಲಿಸ್ಟರ್ ಎಜ್ಯುಕೇಶನಲ್ ಇನ್ಸಪೆಕ್ಟರ್ ಆಗಿದ್ದನು.

ದೇಶದಲ್ಲಿ ಈ ಎಲ್ಲ ಬೆಳವಣಿಗೆಗಳು ಬ್ರಿಟಿಷ ಪ್ರಣೀತ ಶಿಕ್ಷಣದ ಮೂಸೆಯೊಳಗೆನೇ ಹದಗೊಂಡಂಥವು. ವುಡ್ ವರದಿ ಉನ್ನತ ಶಿಕ್ಷಣಕ್ಕೆ ಒತ್ತು ಕೊಟ್ಟಿತ್ತಾದರೂ ಅದೂ ಕೂಡ ಆಂಗ್ಲಶಿಕ್ಷಣದತ್ತಲೇ ಒಲವುಳ್ಳದ್ದಾಗಿತ್ತು. ಅಂತೂ ಈ ಎಲ್ಲವೂ 'ಕೆಳ ಮುಖ ಸೂಸುವ ಸಿದ್ಧಾಂತ'ವನ್ನು ಎತ್ತಿ ಹಿಡಿದದ್ದಂತೂ ನಿಜ. ೧೮೧೩ರ ಸನದ ಕಾಯಿದೆಯ ತರುವಾಯದ ೪೦ ವರ್ಷಗಳಲ್ಲಿ ನಡೆದ ಘಟನೆಗಳು, ವಾದವಿವಾದಗಳು ಮುಖ್ಯವಾಗಿ ನಾಲ್ಕು ವಿಷಯಗಳ ಸುತ್ತಲೇ ಪರಿಭ್ರಮಿಸುತ್ತಿದ್ದುದು ಸ್ಪಷ್ಟವಾಗುತ್ತದೆ. ಅವೇಂದರೆ: ಶೈಕ್ಷಣಿಕ ಧೋರಣೆಯ ಗೊತ್ತು ಗುರಿಗಳು;

ಶಿಕ್ಷಣದ ಮಾಧ್ಯಮ; ಶೈಕ್ಷಣಿಕ ಸಂಸ್ಥೆಗಳನ್ನು ಸಂಘಟಿಸುವ ನಿಯೋಗಗಳು ಮತ್ತು ಶಿಕ್ಷಣ ಪ್ರಸಾರ ಮಾಡಲು ಅನುಸರಿಸಬೇಕಾದ ಪದ್ಧತಿಗಳು.

ಹೀಗೆ ೧೮೫೭ರಲ್ಲಿ 'ನಾರ್ಮಲ್ ಕ್ಲಾಸ್' ಧಾರವಾಡದಲ್ಲಿ ಆರಂಭಗೊಳ್ಳುವಾಗ ದೇಶದ ಬೇರೆ ಬೇರೆ ಕಡೆಗಳಲ್ಲಿ ಈ ಪ್ರಕ್ರಿಯೆಗಳು ಪ್ರಖರವಾಗಿ ನಡೆದಿದ್ದವು.

ಮುಂಬಯಿ ಇಲಾಖೆಯಲ್ಲಿನ ಸ್ಥಿತ್ಯಂತರಗಳು:

ಈಗ ಉತ್ತರ ಕರ್ನಾಟಕ ಎನಿಸಿರುವ ಈ ಭಾಗದಲ್ಲಿ ೧೮೧೮ರಲ್ಲಿ ಪೇಶ್ವೆಯರ ಆಳ್ವಿಕೆ ಕೊನೆಗೊಂಡಾಗ ಮುಂಬಯಿ ಪ್ರಾಂತ್ಯ ರಚನೆಗೊಂಡು ಧಾರವಾಡದ ಭಾಗ 'ದಕ್ಷಿಣ ಮಹಾರಾಷ್ಟ್ರ' ಎಂದು ಕರೆಯಲ್ಪಟ್ಟಿತು. ಇದಕ್ಕೆ ಜಿಲ್ಲಾಧಿಕಾರಿಯಾಗಿದ್ದ ಮನ್ರೋ ಅನಾರೋಗ್ಯದ ನಿಮಿತ್ಯ ಮದ್ರಾಸಿಗೆ ಮರಳಲು, ಆತನ ಸ್ಥಾನವನ್ನು ಬಳ್ಳಾರಿ ಜಿಲ್ಲಾಧಿಕಾರಿಯಾಗಿದ್ದ ಚಾಪ್ಲಿನ್ ಅಲಂಕರಿಸಿ 'ಪ್ರಿನ್ಸಿಪಾಲ್ ಕಲೆಕ್ಟರನಾಗಿ ನೇಮಕಗೊಂಡನು. ಈತ ಮುಂಬಯಿ ಗವರ್ನರ್ ಮೌಂಟ್ ಸ್ಟುವರ್ಟಎಲ್ಫಿನ್‌ಸ್ಟನ್ ಅಧೀನ ಅಧಿಕಾರಿ.

'ಸು ಕ್ರಿ.ಶ. ೧೮೫೦ ರವರೆಗೆ ಬೋರ್ಡ ಆಫ್ ಎಜುಕೇಶನ್ ಅಂದಾಜಿನ ಪ್ರಕಾರ ನಾಲ್ಕು ಜಿಲ್ಲೆಗಳು ಕೂಡಿ ಒಟ್ಟು ೨೦೮ ಕನ್ನಡ ಮತ್ತು ಮರಾಠಿ ಶಾಲೆಗಳಿದ್ದು, ಇದರಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ ೧೩,೭೮೪ ಇದ್ದಿತೆಂದು ತಿಳಿದು ಬರುತ್ತದೆ.'[೧೭] "೧೮೨೮ರಲ್ಲಿ ಸರ್ ಥಾಮಸ್ ಮನ್ರೋ ಮದ್ರಾಸ್ ಪ್ರಾಂತ್ಯದಲ್ಲಿ ರೂಢಿಯಲ್ಲಿದ್ದ ಶಿಕ್ಷಣಕ್ರಮದ ಅನ್ವೇಷಣೆಯನ್ನು ಮಾಡಲು ಆಜ್ಞಾಪಿಸಿದನು. ಮುಂಬಯಿಯಲ್ಲಿ ಮೌಂಟ್ ಸ್ಟುವರ್ಟ ಎಲ್ಫಿನ್‌ಸ್ಟನ್‌ನು ಇಂಥದ್ದೇ ಅನ್ವೇಷಣೆಯನ್ನು ಮಾಡಿಸಿದನು. ಜಿಲ್ಲಾಧಿಕಾರಿಗಳಿಂದ ಅಂಕಿಅಂಶಗಳನ್ನು ಸಂಗ್ರಹಿಸಿದನು. ಅದರಂತೆ ೧೮೨೯ರಲ್ಲಿ ನ್ಯಾಯಾಂಗ ಇಲಾಖೆಯಿಂದ ಈಡೀ ಮುಂಬಯಿ ಪ್ರಾಂತ್ಯದ ಬಗೆಗೆ ಅಂಕಿಅಂಶಗಳನ್ನು ಸಂಗ್ರಹಿಸಲಾಯಿತು"[೧೮] ಎಂಬುದನ್ನು ಐ.ಎಸ್. ಬಿದರಿಯವರು ಸ್ಪಷ್ಟವಾಗಿ ಹೇಳುತ್ತಾರೆ. ಈ ವರದಿಯ ಸಾರಂಶವನ್ನಾಧರಿಸಿ ಒಂದು ತಿರ್ಮಾಣಕ್ಕೆ ಬರುವುದು ಸಮಂಜಸವಲ್ಲದೇ ಇದ್ದರೂ "ಇತರ ಇನ್ನಾವುದೇ ಮೂಲ ಸಂಗತಿಗಳು ಇಲ್ಲದಿರುವುದರಿಂದ ಇಂಥ ಅನ್ವೇಷಣೆಗಳ ಆಧಾರದಿಂದ ದೇಶಿಯ ಶಿಕ್ಷಣ ಕ್ರಮದ ಬಗೆಗೆ ನಿರ್ಣಯಗಳನ್ನು ಊಹಿಸುವುದು ಅನಿವಾರ್ಯವಾಗುವುದು"[೧೯]. ಗೆಝೆಟೀಯರ ಮತ್ತು ಅನ್ವೇಷಣೆ ವರದಿಗಳಾಧಾರದ ಮೇಲಿಂದ ರಚನೆಗೊಂಡ ಶಿಕ್ಷಣದ ಇತಿಹಾಸ ಕಾಲಾಂತರದಲ್ಲಿ ಕ್ರಮೇಣ ತನ್ನದೇ ದಾಖಲೆಗಳನ್ನು ಸೃಷ್ಟಿಸಿಕೊಂಡಿದೆ.

೨.೪. ಸಾಹಿತ್ಯಿಕ ಪರಿಸರ:

ಕರ್ನಾಟಕದಲ್ಲಿ ೧೯ನೆಯ ಶತಮಾನದಲ್ಲಿ ರಾಜಕೀಯ ಮತ್ತು ಸಾಮಾಜಿಕ ವಿಪ್ಲವಗಳು ಘಟಿಸುವಾಗ ಸಾಹಿತ್ಯಿಕವಾಗಿಯೂ ಹಲವಾರು ಬದಲಾವಣೆಗಳು ಹೊಸ ಚಲನೆಗೆ ಗತಿ ನೀಡಿದವು.

ಬ್ರಿಟಿಷ ಪೂರ್ವ ಸಮಾಜವನ್ನು 'ಆಧುನಿಕ ಪೂರ್ವ ಸಮಾಜ'ವೆಂದು ಕರೆಯಬಹುದಾದರೆ ಈ ಆಧುನಿಕ ಪೂರ್ವ ಸಮಾಜ ಜಾತಿ, ಧರ್ಮ, ಪರಂಪರೆ, ಭೌಗೋಳಿಕ, ಸಾಹಿತ್ಯಿಕ, ಸಾಂಸ್ಕೃತಿಕವಾಗಿ ತನ್ನದೇ ಆದ ಛಾಪಿನೊಳಗೆ, ತನ್ನತನದ ಗುರುತ್ವದೊಳಗೆ ತನ್ನದೇ ಜಾಡು ಹಿಡಿದು ಬಹುಮುಖಿ ಆಯಾಮಗಳನ್ನು ಹೊಂದಿ ಚಲಿಸುತ್ತಿತ್ತು. ಈ ಬಹುಮುಖಿ ಕೋಶಗಳಿಂದೊಡಗೂಡಿ ಒಬ್ಬ ವ್ಯಕಿಯ ಅಥವಾ ವ್ಯಕ್ತಿತ್ವದ ರೂಪ ನಿರ್ಮಾಣಗೊಳ್ಳುತ್ತಿತ್ತು. ಬಹುಮುಖಿ ವ್ಯಕ್ತಿತ್ವಕ್ಕೆ, ವೈವಿಧ್ಯತೆ, ವೈಶಿಷ್ಟ್ಯತೆ ಇತ್ತು. ಎಲ್ಲವನ್ನೂ ಎಲ್ಲರೂ ಒಪ್ಪಿಕೊಂಡು ಬದುಕುವ ಪರಸ್ಪರಾವಲಂಬಿತ ಜೀವ ಜಗತ್ತು ಅದಾಗಿತ್ತು. ಜೀವ ಜಗತ್ತು ಸಮಾಜದ ಚಲಕಗಳಾಗಿ, ಭಾವಜಗತ್ತು ಸಂಸ್ಕೃತಿಯ ಚಲಕಗಳಾಗಿ ಸಮಾಜವನ್ನು ಮುನ್ನಡೆಸಿದ್ದವು. ಕಲೆ, ಸಾಹಿತ್ಯಗಳು ಜೀವಿಯ ಭಾವಜಗತ್ತನ್ನು ರಸಪೂರ್ಣಗೊಳಿಸಿ ಬದುಕು ಮುನ್ನಡೆಗೆ ಪುನಶ್ಚೇತನ ತುಂಬುತ್ತಿದ್ದವು.

ಎಲ್ಲರೂ ಎಲ್ಲವನ್ನೂ ಸಹಿಸದಿದ್ದರೂ, ಸಹಿಸಿಕೊಳ್ಳಬೇಕಾಗುವ ನಿಯಮ ಸೃಷ್ಠಿಯಾಗಿ ಅದು ಬದುಕಿನ ವಿಧಿನಿಯಮವಾಗಿ ಸ್ವೀಕರಿಸಿ, ಬದುಕು ನೆಲೆಗೊಳ್ಳುತ್ತಿತ್ತು. ಮೇಲು-ಕೀಳು, ಉಚ್ಚ-ನೀಚ, ಬಡವ-ಶ್ರೀಮಂತ ಇಂಥ ಅಂಶಗಳು ಬದುಕು ನೆಲೆಗೊಳ್ಳಲು ನಿರ್ಣಾಯಕವಾಗಿ ಪಾತ್ರವಹಿಸಿವೆ. ಇವುಗಳಲ್ಲಿ ಅಕ್ಷರಸ್ಥ-ಅನಕ್ಷರಸ್ಥ, ಪಂಡಿತ-ಪಾಮರ ಇವು ವಿಧಿಲಿಖಿತದ ಕೊಡುಗೆಗಳೆಂದು ಬಗೆದು, ಒಪ್ಪಿಕೊಂಡು ಜನ, ಜೀವನ ನಡೆಸಿದ್ದಿದೆ.

ಯಾವಾಗ ಆಧುನಿಕೋತ್ತರ ಸಮಾಜ ರಾಷ್ಟ್ರೀಯತೆ ಪ್ರಜ್ಞೆಯ ಜಾಗೃತಿಯೊಂದಿಗೆ ಸಮಾಜದಲ್ಲಿ ನೆಲೆ ಊರಿದ್ದ ಬಹುಮುಖತ್ವವನ್ನು ಪ್ರಶ್ನಿಸಿ, ಕೊಳಕಾಗಿ, ತಟಸ್ಥವಾಗಿ ನಿಂತ ನೀರಿನಂಥ ವಿಷವರ್ತುಲ ಮತ್ತು ಅದೇ ಜೀವಜಲವೆಂದು ನಂಬಿ, ನೆಲೆಗೊಂಡದ್ದರ ವಿರುದ್ಧ ಪ್ರಶ್ನೆಗಳನ್ನು ಹುಟ್ಟು ಹಾಕತೊಡಗಿತೋ ಬಹುಮುಖಿ ಸಮಾಜ ಒಮ್ಮುಖ ಚಲನೆಯಿಂದ ಬಿಡಿಸಿಕೊಂಡು, ಅಸಂಖ್ಯ ಮುಖಗಳ ಬಹುಶೃತ ಸಂಚಲನೆಗೆ ಮುನ್ನುಡಿ ಬರೆಯಿತು. ಸಮಾಜದ ಪ್ರತಿಯೊಂದು ಸ್ಥರ, ಹಂತ, ವರ್ಗ, ವಲಯ, ಕ್ಷೇತ್ರಗಳಲ್ಲಿ ಅಕ್ಷರ ಮತ್ತು ಹಣ ಇವು ಹೊಸ ಸಂಚಲನೆಯನ್ನುಂಟು ಮಾಡಿದವು. ಡಿ.ಎನ್.ಆರ್. ಹೇಳುವಂತೆ 'ಭಾಷೆ, ಧರ್ಮ, ಸಂಸ್ಕೃತಿ ನೆಲೆಗಳಲ್ಲಿ ಜನಾಂಗವೊಂದರ ನೆನಪುಗಳನ್ನು ಆಯುವ ಮತ್ತು ಪುನರ್ ಸಂಘಟಿಸುವ ಒಂದು ಮಹಾನ್ ಪ್ರಕ್ರಿಯೆ ಪ್ರಾರಂಭವಾಯಿತು. ಎಲ್ಲೋ ಬಿಡಿಬಿಡಿಯಾಗಿ ಬೇರೆಬೇರೆ ಚೌಕಟ್ಟು ಮತ್ತು ಹಂದರಗಳಲ್ಲಿ ಮತ್ತು ವ್ಯವಸ್ಥೆಗಳಲ್ಲಿ ಅಡಕವಾಗಿದ್ದ, ಹಾಗೂ ಚದುರಿ ಹೋಗಿದ್ದ ನೆನಪುಗಳನ್ನು ಒಂದು ನಿರ್ದಿಷ್ಠ ಸೂತ್ರಕ್ಕೆ ಪೋಣಿಸಲಾಗುತ್ತದೆ. ಹಳೆ ಆಶಯಗಳನ್ನು ಹೊಸ ಅರ್ಥ ಮತ್ತು ಆಶಯಗಳಿಗೆ ತಕ್ಕಂತೆ ಜೋಡಿಸಿದಾಗ ಹೊಸ ಆಕಾರಗಳು ಹುಟ್ಟುತ್ತವೆ. ಹಳೆಯ ಸಾಂಸ್ಕೃತಿಕ, ಧಾರ್ಮಿಕ ನೆನಪುಗಳು ಹೊಸ ರಾಜಕೀಯ ಉದ್ದೇಶಗಳಿಗೆ ಅನುಗುಣವಾಗಿ ದುಡಿಯುತ್ತದೆ. ಹೀಗಾಗಿ, ಆಧುನಿಕ ಸಮಾಜಗಳ ಎಲ್ಲ ಸಾಂಸ್ಕೃತಿಕ ಐಡೆಂಟಿಟಿಗಳು ನೆನಪುಗಳ ಪುನರ್ ಸಂಘಟನೆಯೇ'. ಈ ಸಾಂಸ್ಕೃತಿಕ ಐಡೆಂಟಿಟಿಯಲ್ಲಿ ಎದ್ದು ಕಾಣುವಂಥದ್ದು ಸಾಹಿತ್ಯಿಕ ಅಭಿವ್ಯಕ್ತಿ. ಇದೂ ಕೂಡ ಹಾಡು, ನೃತ್ಯ, ಕಲೆ, ಹಬ್ಬ, ಉಡುಗೆ, ಅಡುಗೆ, ಆಟ ಮುಂತಾದುವುಗಳಂತೆ ಸಮಾಜ

ಜೀವಿಯ ಜೀವನವಿಹಾರದ ಒಂದು ಸಾಧನ; ಒಂದು ಮಾಧ್ಯಮ. ಆಧುನಿಕ ಪೂರ್ವ ಸಮಾಜದಲ್ಲಿ ನಿರ್ದಿಷ್ಟ ಕೇಂದ್ರೀಕೃತ ಶಕ್ತಿಯಾಗಿ ಸಾಹಿತ್ಯ ರಚನೆ ರಾಜಘೋಷನೆಯೊಂದಿಗೆ ರಾಜಪೋಷನೆ ಮತ್ತು ರಕ್ಷಣೆ ಪಡೆದು ಸಮಾಜದ ಶ್ರೀಸಾಮಾನ್ಯನಿಗೆ 'ಸಿದ್ಧರುಚಿ'ಯಾಗಿ ಉಪದೇಶದ ಮೂಲಕ ಮನೋರಂಜನೆ ಮತ್ತು ತತ್ವಸಿದ್ಧಾಂತಗಳನ್ನು ಅರುಹುತ್ತಿತ್ತು. ಬೌದ್ಧಸಾಹಿತ್ಯ ಮತ್ತು ಶರಣಸಾಹಿತ್ಯದ ಕಾಲದಲ್ಲಿ ಜನ ಸಾಮಾನ್ಯ ಸಾಹಿತ್ಯ ರಚಿಸಿದ ಮತ್ತು ಸಾಹಿತ್ಯದ ತಿರುಳೂ ಆದದ್ದನ್ನು ಬಿಟ್ಟರೆ ಸಾಹಿತ್ಯ ಸಿಂಹಾಸನದ ಮೇಲೆ ಮತ್ತು ರಾಜಬೀದಿಗಳಲ್ಲಿ ಮಾತ್ರ ಸಂಚರಿಸಿದೆ.

ಈಗ ೧೯ನೆಯ ಶತಮಾನದ ಆದಿಯಲ್ಲಿ ಅಂದರೆ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಆರಂಭವಾದಾಗ ತೀವ್ರ ಸಂಚಲನೆ ಉಂಟಾಗಿ ಸಮಾಜದ ಒಳ ಸ್ಥರವನ್ನು ಪ್ರವೇಶಿಸಿದ ಸಂದರ್ಭದಲ್ಲಿ ಬದಲಾದ ಸಾಹಿತ್ಯಿಕ ಸಂಚಲನೆಯ ಗತಿಯನ್ನಿಲ್ಲಿ ಹುಡುಕುವ ಪ್ರಯತ್ನ ಮಾಡುತ್ತಿದ್ದೇವೆ. ಕರ್ನಾಟಕದ ಮೂಲ ಸಂಸ್ಕೃತಿಯ ನೆಲೆಯಿಂದ ವಿಚಾರಿಸುವಾಗ ೧೮ನೆಯ ಶತಮಾನದ ಮಧ್ಯಭಾಗದಿಂದಲೇ ಬ್ರಿಟಿಷರ ರಾಜಕೀಯ ಆಳ್ವಿಕೆ ಆರಂಭವಾಗಿದ್ದರೂ, ಈಡೀ ಕರ್ನಾಟಕದಲ್ಲಿ ಅದರ ಗಂಧಗಾಳಿಯಿಂದ ದೂರವೇ ಉಳಿದು, ಮೂಲಸತ್ವದ ಮಣ್ಣಗುಣದಿಂದಲೇ ರಚಿಸಿದ ಕನ್ನಡಿಗರ ಸಾಹಿತ್ಯ ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜ್ ಅರಂಭವಾಗುವ ಪೂರ್ವದಲ್ಲಿ ಏಷ್ಟಿತ್ತು ಮತ್ತು ಏಷ್ಟರಮಟ್ಟಿಗೆ ಸತ್ವದಿಂದ ಕೂಡಿತ್ತು ಎಂಬುದರ ಸಿಂಹಾವಲೋಕನ ಇಲ್ಲಿದೆ.

ಕ್ರಿ.ಶ. ೧೦೦೦-೧೯೫೪ ರವರೆಗೆ ಸುಮಾರು ಮೂರು ಶತಕಗಳ ಕಾಲ ಕನ್ನಡನಾಡನ್ನಾಳಿದ ಹೊಯ್ಸಳರ ಕಾಲದಲ್ಲಿ ಕನ್ನಡ ಲಿಪಿಗೆ ಒಂದು ಸ್ಪಷ್ಟರೂಪ ಪ್ರಾಪ್ತವಾದುದು ಸರ್ವವಿಧಿತ. ಅಲ್ಲಿಂದ ಶರಣ ಸಾಹಿತ್ಯ, ದಾಸ ಸಾಹಿತ್ಯ, ಸರ್ವಜ್ಞನ ವಚನಗಳು ರಾಜಸ್ಥಾನದಿಂದ ಪೋಷಿಸಲ್ಪಡದಿದ್ದುದಕ್ಕೆ ಅವು ಸರಿಯಾಗಿ ಸಂರಕ್ಷಣೆಗೊಳ್ಳಲಿಲ್ಲ. ಇಂದಿಗೂ ಅವುಗಳ ಮೂಲತ್ವದ ಹುಡುಕಾಟವೇ ಈ ಅಸಂರಕ್ಷಣೆಗೆ ಸಾಗುವಷ್ಟು ಸಾಕ್ಷಿ ಒದಗಿಸುತ್ತದೆ. ಕ್ರಿ.ಶ. ೧೮೦೦ರ ನಂತರದ ಅವಧಿಯಲ್ಲಿ ಲೆಕ್ಕಿಸ ಹೊರಟರೆ ದೇವಚಂದ್ರನ (೧೭೭೦-೧೮೪೦) 'ರಾಜಾವಳಿ ಕಥೆ' ಮತ್ತು 'ರಾಮಕಥಾವತಾರ'ಗಳು ಶಿಷ್ಟ ಕಾವ್ಯಗಳಾಗಿ ತೋರುತ್ತವೆ. ೧೭೯೯ರಲ್ಲಿ ಬ್ರಿಟಿಷರು ಟಿಪ್ಪುವನ್ನು ಸೋಲಿಸಿ ಮೈಸೂರನ್ನು ಒಡೆಯರಿಗೆ ಅಧಿಕೃತವಾಗಿ ಬಿಟ್ಟುಕೊಟ್ಟ ನಂತರ ಅಲ್ಲಿ ಅರಸರೊಡನೆ ಸಾಹಿತ್ಯ-ಸಂಸ್ಕೃತಿಗಳೂ ಸಮೃದ್ಧವಾಗಿ ಬೆಳೆಯತೊಡಗಿದವು. ಇದಕ್ಕೆ ಸಾಕ್ಷಿಯೆಂಬಂತೆ ೧೮೧೧ರಲ್ಲಿ ರಾಜ್ಯಸೂತ್ರ ವಹಿಸಿಕೊಂಡ ಮುಮ್ಮಡಿ ಕೃಷ್ಣರಾಜರು ರಚಿಸಿದರೆನ್ನಲಾದ ಅಪಾರ ಸಾಹಿತ್ಯ ಮುಪ್ಪುರಿಗೊಂಡಿದೆ. 'ಅಖಂಡ ಕಾವೇರಿ ಮಹಾತ್ಮೆ', 'ಸೌಗಂಧಿಕಾ ಪರಿಣಯ', 'ನಳೋಪಾಖ್ಯಾನ' ಮುಂತಾದ ೫೦ ಕೃತಿಗಳು ಈ ಸಂದರ್ಭದಲ್ಲಿಯೇ ರಚನೆಗೊಂಡಿವೆ. ಇವೂ ಕೂಡ ರಾಜಸ್ಥಾನ, ಅವಕಾಶ ಮತ್ತು ಶಾಸ್ತ್ರ-ಸಿದ್ಧಾಂತಗಳ ಸುತ್ತಲೇ ಹೆಣೆದುಕೊಂಡಿವೆ. ಮುಮ್ಮಡಿ ಕೃಷ್ಣರಾಜನ ಆಶ್ರಯದಲ್ಲಿದ್ದ ಕೆಂಪುನಾರಾಯಣನ 'ಮುದ್ರಾಮಂಜೂಷ' (೧೮೨೩) ಕ್ರಾಂತಿಕಾರಿ ಮತ್ತು

ಪ್ರಗತಿಪರ ವಿಚಾರಗಳನ್ನೊಂಡ ಕೃತಿಯಾಗಿ ಆಧುನಿಕ ಸಾಹಿತ್ಯದತ್ತ ಹೆಜ್ಜೆ ಹಾಕಿದೆ. ಮುಮ್ಮಡಿ ಕೃಷ್ಣರಾಜನ ಅಳಿಯ 'ಅಳಿಯಲಿಂಗರಾಜ'(೧೮೨೩-೧೮೭೪) ಈತನೂ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸುಮಾರು ೪೭ ಕೃತಿಗಳನ್ನು ಬರೆದ 'ಉಭಯಕವಿ ವಿಶಾರದ'. ಇವುಗಳಲ್ಲಿ ೩೦ ಕೃತಿಗಳು ಯಕ್ಷಗಾನಗಳೇ ಆಗಿವೆ. ಮೈಸೂರುನಲ್ಲಿದ್ದ ಈ ಸಾಹಿತ್ಯ ರಚನಾಕಾರರು ರಾಜರುಗಳೇ ಎಂಬದು ಕೇಂದ್ರೀಕೃತಗೊಂಡ ಅಧಿಕಾರವನ್ನ ಮತ್ತು ಸಂಪ್ರದಾಯಪ್ರಿಯತೆಯನ್ನು ಎತ್ತಿ ತೋರುತ್ತದೆ. ಆದರೆ ಸಾಹಿತ್ಯಪ್ರಜ್ಞೆ ಮತ್ತು ಸೃಜನಶೀಲತೆ ಎಂಬುದು ಪ್ರಧಾನವಾಗಿ ಗಣಿಸಲ್ಪಟ್ಟಿತ್ತು ಎಂಬುದು ಇಲ್ಲಿ ಗಮನಾರ್ಹ. 'ಕರ್ನಾಟಕದ ಉಳಿದ ಭಾಗಗಳಲ್ಲಿ ಕೂಡ ಹೊಸ ಸಾಹಿತ್ಯ ಹೊರಹೊಮ್ಮುವುದಕ್ಕೆ ವೇಳೆ ಹಿಡಿಯಿತು. ಪರಂಪರೆಯ ಪ್ರಾಬಲ್ಯದಿಂದಾಗಿಯೂ ಹೊಸ ಶಿಕ್ಷಣದ ಮಂದಗತಿಯಿಂದಾಗಿಯೂ ಅಲ್ಲಿಯವರು ಸ್ವತಂತ್ರ ವಿಚಾರಸರಣಿಯನ್ನು ಬೆಳೆಸಿಕೊಳ್ಳಲು ಶಕ್ತರಾಗಲಿಲ್ಲ. ಹೀಗಾಗಿ ಸ್ವದೇಶಾಭಿಮಾನ, ಜನಜೀವನ ವಿಶ್ಲೇಷಣೆ, ಸಾಮಾಜಿಕ ಸುಧಾರಣಾ ಪ್ರಜ್ಞೆ ಮುಂತಾದ ಪುರೋಗಾಮಿ ವಿಚಾರಗಳು ಕನ್ನಡ ಸಾಹಿತ್ಯದಲ್ಲಿ ಬಂಗಾಲಿ, ಮರಾಠಿಗಳಲ್ಲಿಯಂತೆ ಬೇಗ ಕಾಣಿಸಿಕೊಳ್ಳಲಿಲ್ಲ'[೨೦] ಈತನ ನಂತರ ಬರುವ ನಂದಳಿಕೆ ನಾರಣಪ್ಪ (೧೮೬೯-೧೯೦೧) ಈಗ ಉತ್ತರ ಕರ್ನಾಟಕದಲ್ಲಿರುವ, (ಆಗ ಮದ್ರಾಸ ಪ್ರಾಂತ್ಯದಲ್ಲಿದ್ದರೂ) ಕನ್ನಡ ಪ್ರದೇಶದಲ್ಲಿದ್ದ ಉಡುಪಿಯ ನಂದಳಿಕೆ ಗ್ರಾಮದವನು. ಆಧುನಿಕ ಕವಿ ಏನಿಸಿರುವ ಈತ ಬಡಕುಟುಂಬದಲ್ಲಿ ಜನಿಸಿ, ದೈಹಿಕ ಶಿಕ್ಷಕನಾಗಿ ಸೇವೆಗೈಯುತ್ತಲೇ 'ಅದ್ಭುತ ರಾಮಾಯಣ'(ಗದ್ಯ), 'ಶ್ರೀರಾಮ ಪಟ್ಟಾಭೀಷೇಕ'(ವಾರ್ಧಕ) ಮತ್ತು 'ರಾಮಾಶ್ವಮೇಧ' (ಗದ್ಯ) ಎಂಬ ಮೂರುಕೃತಿಗಳನ್ನು ಬರೆದದ್ದು ಬ್ರಾಹ್ಮಣ್ಯ ಸಂಸ್ಕಾರ ಮತ್ತು ಅಧ್ಯಯನಗಳ ಫಲವಾಗಿ ಎಂಬುದು ಎದ್ದು ಕಾಣುತ್ತದೆ. ಆದರೆ ಹಳೆ ಮಂತ್ರವನ್ನು ಹೊಸ ತಂತ್ರದಲ್ಲಿ ಪಠಿಸಿ, ರೀತಿಪ್ರಧಾನವಾದ ಕೃತಿ ರಚನೆಗೆ ನಾಂದಿ ಹಾಡಿದ್ದಾನೆ.

ಹೀಗೆ ಅಖಂಡ ಕರ್ನಾಟಕದಲ್ಲಿಯ ಸಾಹಿತ್ಯ ಪರಿಸರವನ್ನು ಅರಸುತ್ತ ಹೋದರೆ ಕ್ರಿ.ಶ. ೧೮೦೦ರ ನಂತರ ಸಿಗುವ ಇಂಥ ಉದಾಹರಣೆಗಳು ದಕ್ಷಿಣ ಕರ್ನಾಟಕದಲ್ಲಿಯೇ ಅತ್ಯಧಿಕ. ಮುದ್ದಣನ ಸಾಹಿತ್ಯ ಕೃತಿಗಳನ್ನು ಬಿಟ್ಟರೆ ಸ್ಥಳೀಯವಾಗಿ ಕಟ್ಟಿ, ಹಾಡುತ್ತಿದ್ದ ಲಾವಣಿ, ಗೀಗೀ, ದೊಡ್ಡಾಟ, ಬಯಲಾಟ, ನಾಟಕ ಮುಂತಾದ ಜಾನಪದ ಸಾಹಿತ್ಯ ಪ್ರಕಾರಗಳಿಗೇನೂ ಉತ್ತರ ಕರ್ನಾಟಕದಲ್ಲಿ ಕೊರತೆ ಇರಲಿಲ್ಲ. ಬ್ರಿಟಿಷರು ಉತ್ತರ ಕರ್ನಾಟಕ ಪ್ರವೇಶಿಸಿದ ಮೇಲೆ ಸ್ಥಳೀಯ ಜನರ ನಾಡಿಮಿಡಿತ ಪರೀಕ್ಷಿಸಲು ಅಧ್ಯಯನ ಆರಂಭಿಸಿ, ಮಾಡಿದ ಅನುವಾದಗಳು, ರಚನೆಗಳು, ನಿಘಂಟುಗಳೂ ಕೂಡ ಆಂಗ್ಲ ಪ್ರಣೀತ ಸಾಹಿತ್ಯವಾಗಿ ಸೃಷ್ಟಿಗೊಳ್ಳುತ್ತಿತ್ತು. ಬೇರೆ ಭಾಷಾ ಸಾಹಿತ್ಯಗಳಂತೆಯೇ ಕನ್ನಡ ಭಾಷಾಸಾಹಿತ್ಯದಲ್ಲಿಯೂ ಪಾಶ್ಚಿಮಾತ್ಯ ರಿಂದಲೇ ನಸುಕು ಮೂಡಿತು. ಜನಪ್ರದೇಶ, ಸಂಸ್ಕೃತಿಯನ್ನರಿಯಲು ಆರಂಭಿಸಿದ ಭಾಷಾಭ್ಯಾಸದೊಂದಿಗೇ ಕನ್ನಡ ಸಾಹಿತ್ಯದ ಮೊದಲುಗೊಂಡಿತು. ಈ ಹಿನ್ನೆಲೆಯಲ್ಲಿ ೧೮೧೭ರಲ್ಲಿ ವಿಲಿಯಂ ಕ್ಯಾರಿಯ ವ್ಯಾಕರಣ ಕೃತಿ ಪ್ರಥಮವಾಗಿ ಪ್ರಕಟಗೊಂಡಿತೆನ್ನಬಹುದು. ೧೮೨೩ರಲ್ಲಿ ಬೈಬಲ್ ಕನ್ನಡಕ್ಕೆ ಭಾಷಾಂತರಗೊಂಡು

ಪ್ರಕಟವಾಯಿತು. ಕ್ರಿ.ಶ. ೧೮೪೦ರ ವರೆಗೆ ಈ ದೇಶದಲ್ಲಿದ್ದ ನಾಲ್ಕಾರು ಪಾಶ್ಚಾತ್ಯ ಇತಿಹಾಸಕಾರರಲ್ಲಿ ಮೌಂಟ್ ಸ್ಟುವರ್ಟ ಎಲ್ಫಿನ್ಸ್ಟನ್‌ನು ಒಬ್ಬನು. ಈತ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿ ಇದ್ದವನು. ಅವನ ಕೃತಿ 'ಹಿಸ್ಟರಿ ಆಫ್ ಇಂಡಿಯಾ' ೧೩೦೦ ಡೆಮ್ಮಿ ಪುಟಗಳಲ್ಲಿ ೧೮೪೦ರಲ್ಲಿ ಪ್ರಕಟವಾಯಿತು.

ಕರ್ನಾಟಕ ಪ್ರದೇಶದಲ್ಲಿ ಹೊಸ ಶಿಕ್ಷಣ ಮತ್ತು ಆಡಳಿತ ವ್ಯವಸ್ಥೆಗಳು ಜಾರಿಗೊಂಡವು. ಪಾಶ್ಚಾತ್ಯ ಶಿಕ್ಷಣ ಕ್ರಮಗಳ ಫಲವಾಗಿ ಸ್ಥಳೀಯ ಕನ್ನಡದ ಜನರಿಗೆ ಪಾಶ್ಚಾತ್ಯ ಸಾಹಿತ್ಯದ ಸಂಪರ್ಕ ಲಭಿಸಿತು. ಸುಧಾರಣೆ, ಅಭಿವೃದ್ಧಿ, ಜಾಗೃತಿ ಸಂಬಂಧಿ ವಿಚಾರಗಳು, ವಿಷಯಗಳು ಜನರನ್ನು ತಲುಪಿ ಚಿಂತನೆಗೆ ಹಚ್ಚಿದವು. ಜ್ಞಾನವಲಯದಲ್ಲಿ ನಡೆದ ಈ ಎಲ್ಲ ಪ್ರಕ್ರಿಯೆಗಳ ಪರಿಣಾಮವಾಗಿ ಒಂದು ವಿಶೇಷ ವರ್ಗದ ಸೃಷ್ಟಿಯಾಯಿತು ಮತ್ತು ಸಾಹಿತ್ಯವನ್ನು ರಚಿಸಿತು. ಇದರ ಬೆನ್ನಲ್ಲೇ ಇದುವರೆಗೂ ಸಾಹಿತ್ಯ ರಚನೆಯಿಂದ ಮತ್ತು ಸಾಹಿತ್ಯಿಕ ವಸ್ತುವಿಷಯದಿಂದ ದೂರವೇ ಉಳಿದಿದ್ದ ವರ್ಗದ ಜನ ಪ್ರಗತಿಪರ ಚಿಂತಕರಾಗಿ ಹೊರಹೊಮ್ಮತೊಡಗಿದರು.

ಅಂತೂ ದೇಶಾದ್ಯಂತ ಶಾಕುಂತಳ, ಮೇಘಧೂತ, ವೇದ ಉಪನಿಷತ್ತುಗಳಂಥ ಧಾರ್ಮಿಕ ಕೃತಿಗಳ ಅನುವಾದ, ಪರಿಷ್ಕರಣೆಯೊಂದಿಗೆ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಕ್ರಾಂತಿಯೇ ಜರುಗಿತು. ಬೈಬಲಗಳನ್ನು ಮುದ್ರಿಸಲು ಮುದ್ರಣ ಯಂತ್ರ ಭಾರತಕ್ಕೆ ಕಾಲಿರಿಸಿತು. ಇದರಿಂದ ಭಾರತೀಯ ಸಾಹಿತ್ಯಿಕ ಪ್ರಕಟಣೆ ಮತ್ತು ಪ್ರಸಾರ ಸುಲಭವಾಯಿತು. ಹೊಸದಾಗಿ ಆರಂಭಗೊಂಡ ಕನ್ನಡ ಶಾಲೆಗಳಲ್ಲಿ ಅಭ್ಯಸಿಸಲು ಪಠ್ಯಪುಸ್ತಕಗಳಿಲ್ಲದ ಆ ಪಠ್ಯ ವಿಷಯಕ್ಕೆ ಬಂದರೆ ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜ್ ಆರಂಭವಾಗುವ ಪೂರ್ವದಲ್ಲಿ ಎಲಿಯಟನು ನೀಡಿದ ಸೂಚನೆಯಂತೆ 'ಈಸೋಪನ ನೀತಿ ಕಥೆಗಳು', 'ಗಣಿತ ಪುಸ್ತಕ ಪೂರ್ಣಾಂಕ' ಮತ್ತು 'ಶಾಲಾಪದ್ಧತಿ' ಎಂಬ ೩ ಪುಸ್ತಕಗಳು ಬಳ್ಳಾರಿಯ ಮಿಷನ್ ಪ್ರೆಸ್ಸಿನಲ್ಲಿ ಮುದ್ರಿತವಾದ ಮುಂಬಯಿ ರಾಜ್ಯದ ಮೊಟ್ಟಮೊದಲ ಕನ್ನಡ ಪುಸ್ತಕಗಳನ್ನು ಬಿಟ್ಟರೆ ಸ್ವತಂತ್ರ ರಚಿತ ಪಠ್ಯಪುಸ್ತಕಗಳಾವುವೂ ಇರಲಿಲ್ಲ. ಈ ಸಂಧಿಕಾಲದಲ್ಲಿ ಟ್ರೇನಿಂಗ್ ಕಾಲೇಜ್ ಸ್ಥಾಪನೆಗೊಂಡು ಸಾಹಿತ್ಯಿಕ ಕ್ಷೇತ್ರದಲ್ಲಿ ಅಸಾಧಾರಣವಾದ ಸಾಧನೆ ಮಾಡಿದ್ದನ್ನು ಕಾಣುತ್ತೇವೆ. ಈ ಅನುವಾದ, ಪರಿಷ್ಕರಣೆ ಮತ್ತು ಪಠ್ಯಸಾಹಿತ್ಯದಲ್ಲಿಯೇ ಹೊಸಗನ್ನಡ ಸಾಹಿತ್ಯದ ಬೇರುಗಳನ್ನು, ಲಕ್ಷಣಗಳನ್ನು ಕಾಣಬಹುದು ಎಂಬುದನ್ನು ಶ್ರೀನಿವಾಸ ಹಾವನೂರು ಅವರು ಒತ್ತಿ ಹೇಳುತ್ತಾರೆ.

ಹೀಗೆ ಗಂಡು ಮಕ್ಕಳ ಟ್ರೇನಿಂಗ ಕಾಲೇಜು ತನ್ನ ಶೈಶವಾವಸ್ಥೆಯಲ್ಲಿದ್ದಾಗಿನ ಸಮಕಾಲೀನ ಪರಿಸರ ಹತ್ತು ಹಲವು ಆಯಾಮಗಳಿಂದ ತನ್ನದೇಯಾದ ಮೂಸೆಯೊಳಗೆ ತಟಸ್ಥವಾಗಿತ್ತು.

ಕೊನೆ ಟಿಪ್ಪಣಿಗಳು:

೧. ಪ್ರೊಸಿಡಿಂಗ್ಸ ಆಫ್ ದಿ ಬೋರ್ಡ ಆಫ್ ರೆವಿನ್ಯೂ (ಪಿ.ಎಂ.ಬಿ.ಆರ್), ಸಂ.೨೬೮, ಪು.೩೬೬ ೧೧-೧೨-೧೮೦೦,

೨. ಕರ್ನಾಟಕ ರಾಜ್ಯ ಗ್ಯಾಝೆಟಿಯರ್-ಭಾಗ ಒಂದು, ಸಂ-ಸೂರ್ಯನಾಥ ಕಾಮತ-ಪುಟಸಂಖ್ಯೆ-೨೦೩-೨೦೪ ೧೯೮೪,

೩. ಹೊಸಗನ್ನಡ ಸಾಹಿತ್ಯದ ಉದಯಕಾಲ- ರಾ. ಯ. ಧಾರವಾಡಕರ-ಪು.ಸಂಖ್ಯೆ-೭ ೧೯೭೫

೪. ಕ. ರಾ.ಗ್ಯಾಝೆಟಿಯರ್- ಧಾರವಾಡ ಜಿಲ್ಲೆ., ಪುಟಸಂಖ್ಯೆ ೧೦೯-೧೧೦, (ಪರಿಷ್ಕೃತ ಆವೃತ್ತಿ)-೧೯೯೫

೫. ಕ. ರಾ. ಗ್ಯಾಝೆಟಿಯರ್-ಧಾರವಾಡ ಜಿಲ್ಲೆ, ಪುಟ ಸಂಖ್ಯೆ- ೧೧೦ (ಪರಿಷ್ಕೃತ ಆವೃತ್ತಿ) - ೧೯೯೫,

೬. ಕನ್ನಡದ ದೀಪ- ಡೆ.ಚನ್ನಬಸಪ್ಪನವರ ಸಂಸ್ಮರಣ ಗ್ರಂಥ- ಪುಟ ಸಂಖ್ಯೆ- ೨೨೨-೨೨೫, ೧೯೮೨.

೭. ಏನ್ಸಿಯಂಟ್ ಇಂಡಿಯಾ- ಹಿಸ್ಟರಿ ಆಂಡ್ ಕಲ್ಚರ್- ಗೋಖಲೆ ಬಿ ಜಿ-ಪುಟ ಸಂಖ್ಯೆ ೧೧೮-೧೨೦, ೧೯೫೨, ಏಶಿಯಾ ಪಬ್ಲಿಷಿಂಗ್ ಹೌಸ್, ಬಾಂಬೆ

೮. ಕಾಂಟ್ರಿಬ್ಯೂಷನ್ ಆಫ್ ವೀರಶೈವ ಮಠಾಸ್ ಟು ದಿ ಡೆವಲೆಪ್ ಮೆಂಟ್ ಆಫ್ ಏಜ್ಯುಕೇಷನ್ ಇನ್ ಕರ್ನಾಟಕ-ಸಂಶೋಧನ ಪ್ರಬಂಧ, ಪುಟಸಂಖ್ಯೆ-೧೫೬-೧೬೨, ೧೯೪೭, ಮೈಸೂರು.ವಿ.ವಿ, ಮೈಸೂರು

೯. 'ಭಾರತೀಯ ಶಿಕ್ಷಣದ ಇತಿಹಾಸ(೧೮೦೦-೧೯೬೫)'- ಅನು:ಆಯ್.ಎಸ್.ಬಿದರಿ, ಪುಟ ಸಂಖ್ಯೆ ೪೨ ೧೯೭೭

೧೦. 'ಭಾರತೀಯ ಶಿಕ್ಷಣದ ಇತಿಹಾಸ(೧೮೦೦-೧೯೬೫)'-ಅನು:ಆಯ್.ಎಸ್.ಬಿದರಿ, ಪುಟ-೩೮, ೧೯೭೭

೧೧.'ಭಾರತೀಯ ಶಿಕ್ಷಣದ ಇತಿಹಾಸ(೧೮೦೦-೧೯೬೫)'-ಅನು:ಆಯ್.ಎಸ್.ಬಿದರಿ, ಪುಟ-೩೮, ೧೯೭೭

೧೨. Promotion of Learning in India by early European settlers – N.N.Law: Page No. 7-8

೧೩.'ಭಾರತೀಯ ಶಿಕ್ಷಣದ ಇತಿಹಾಸ(೧೮೦೦-೧೯೬೫)'-ಅನು:ಆಯ್.ಎಸ್.ಬಿದರಿ, ಪುಟ-೪೪, ೧೯೭೭

೧೪. ಭಾರತದಲ್ಲಿ ಶಿಕ್ಷಣ-ಜಿ.ಬಿ.ಮೆಂಚ- ಪುಟ ಸಂಖ್ಯೆ-೧೭

೧೫. ಭಾರತದಲ್ಲಿ ಶಿಕ್ಷಣ-ಎ.ಲಕ್ಷ್ಮಣಸ್ವಾಮಿ ಮೂದಲಿಯಾರ್-ಅನು-ಜಿ.ಬಿ.ಮೆಂಚ್- ಪುಟ-೧೮, ೧೯೭೨,

೧೬. ಮಾಡರ್ನ ಇಂಡಿಯಾ-ವಾದ್ವಾನಿ.ಎಂ.ಆರ್ ಮತ್ತು ಎ.ಎ.ಎಲ್.ಡಿಸೋಜಾ-ಪುಟ -೨೩೫, ೧೯೮೦,

೧೭. ಶತಮಾನೋತ್ಸವ ಸ್ಮರಣ ಸಂಚಿಕೆ-ಜೇವೂರ.ಎಸ್.ವಿ,ಪುಟ-೫೭,೧೯೮೩,ಲಿಂಗಾಯತ ಅಭಿವೃದ್ಧಿ ಸಂಸ್ಥೆ,

೧೮. .'ಭಾರತೀಯ ಶಿಕ್ಷಣದ ಇತಿಹಾಸ(೧೮೦೦-೧೯೬೫)'-ಅನು:ಆಯ್.ಎಸ್.ಬಿದರಿ, ಪುಟ-೨, ೧೯೭೭

೧೯. (ಅದೇ)

೨೦. ಹೊಸಗನ್ನಡ ಅರುಣೋದಯ-ಶ್ರೀನಿವಾಸ ಹಾವನೂರ, ಪುಟ-೨೮ (ತಿದ್ದಿ ಬೆಳೆಸಿದ ಎರಡನೆಯ ಆವೃತ್ತಿ)- ೨೦೦೦.

೨೧. (ಅದೇ)

ಅಧ್ಯಾಯ : ೩

ಟ್ರೈನಿಂಗ್ ಕಾಲೇಜಿನ ಪರಿಕಲ್ಪನೆ ಮತ್ತು ಇತಿಹಾಸ

೩.೧. ಟ್ರೈನಿಂಗ್ ಕಾಲೇಜಿನ ಪರಿಕಲ್ಪನೆ: ಶೈಕ್ಷಣಿಕ ರಂಗದ ಅನಿವಾರ್ಯತೆ

೩.೨. ಧಾರವಾಡದ ಟ್ರೈನಿಂಗ್ ಕಾಲೇಜು : ಇತಿಹಾಸ ಮತ್ತು ಪರಂಪರೆ

೩.೩ ಕನ್ನಡ ಶಿಕ್ಷಣ ಜಾಗೃತಿ, ಹೋರಾಟ ಮತ್ತು ಪರಿಣಾಮ

೩.೪ ಹೋರಾಟ ನಿರೂಪಿಸಿದ ಶೈಕ್ಷಣಿಕ ಶಿಸ್ತು

ಅಧ್ಯಾಯ ೩

ಟ್ರೇನಿಂಗ್ ಕಾಲೇಜಿನ ಪರಿಕಲ್ಪನೆ ಮತ್ತು ಇತಿಹಾಸ

೩.೧. ಧಾರವಾಡದ ಟ್ರೇನಿಂಗ್ ಕಾಲೇಜಿನ ಪರಿಕಲ್ಪನೆ: ಶೈಕ್ಷಣಿಕ ರಂಗದ ಅನಿವಾರ್ಯತೆ:

ಏನೂ ಇಲ್ಲದಂಥ ಬರಡು ನೆಲದಲ್ಲಿ ಬೇಕಾದ ಬೆಳೆ ಬೆಳೆಯುವುದು ಮಾಡುವವರ ಸಾಮರ್ಥ್ಯ ಮತ್ತು ನೆಲದ ಗುಣ ಎರಡಕ್ಕೂ ಸವಾಲಾಗಿರುವಂಥದ್ದು. ಪರಾಧೀನ ತಳಹದಿಯ ಮೇಲೆ ಕ್ಷೇತ್ರ ಹದಗೊಳಿಸಿ ಒಂದು ಶಾಲೆಯನ್ನು ತೆರೆದ ನಂತರ ಅದರ ಬೆಳವಣಿಗೆ ಮತ್ತು ಉಳಿಯುವಿಕೆಗಳು ಕೂಡ ಎದುರಿಗೆ ನಿಲ್ಲುವ ದೊಡ್ಡ ಪ್ರಶ್ನೆಗಳೂ ಹೌದು. ಬೆಳವಣಿಗೆಳನ್ನೆಲ್ಲ ಗಮನದಲ್ಲಿರಿಸಿಕೊಂಡೇ ಒಂದು ಮಹತ್ತರ ಕಾರ್ಯಕ್ಕೆ ಕೈ ಹಾಕಬೇಕಾಗುತ್ತದೆ. ಒಂದುನೂರಾ ಅರವತ್ತು ವರ್ಷಗಳಷ್ಟು ಹಿಂದೆ ಒಂದು ತರಬೇತಿ ಶಿಕ್ಷಣ ಸಂಸ್ಥೆಯಂಥದ್ದೊಂದು ಗೂಡುಗಟ್ಟಬೇಕಾದರೆ ಆ ಪರಿಸರದ ಅಗತ್ಯ ಮತ್ತು ಆ ಸಮಕಾಲೀನ ಪರಿಸ್ಥಿತಿಯ ಬೇಡಿಕೆ ಏನಿತ್ತು ಎಂಬುದನ್ನು ವಿಷದವಾಗಿ ಅವಲೋಕಿಸಬೇಕಾಗುತ್ತದೆ.

ಆ ಕಾಲದಲ್ಲಿ ಕನ್ನಡ ನೆಲ ಅಂದುಕೊಂಡದ್ದರ ಅಗತ್ಯ ಬೇಡಿಕೆ, ಅವಶ್ಯಕತೆ ಏನಿತ್ತು? ಪೇಶ್ವೆಯರ ರಾಜ್ಯಭಾರ ಮರಾಠಿಯನ್ನು ಪ್ರತಿಯೊಬ್ಬರ ಪ್ರತಿಷ್ಠೆಯ ಪ್ರಶ್ನೆಯನ್ನಾಗಿಸಿ, ಸಮಾಜದ ಮೇಲ್ಪದರಿನಲ್ಲಿದ್ದವರ ಹೆಮ್ಮೆಯನ್ನಾಗಿಸಿತ್ತು. ಮೇಲ್ವರ್ಗದ ಮತ್ತು ಪುರೋಹಿತಶಾಹಿಗಳ ಮಡಿಲಲ್ಲಿ ಮರಾಠಿ ಅಪರೂಪದ ಕೂಸಾಗಿ ಆರೈಕೆ ಪಡೆದಂಥ ಕಾಲ. ಮರಾಠಿಯ ಉಚ್ಚ್ರಾಯಾವಸ್ಥೆಯಲ್ಲಿ ಬ್ರಿಟಿಷರ ಆಗಮನ ಮತ್ತು ಆಕ್ರಮಣಗಳಿಂದಾಗಿ ಮರಾಠಿ ಕೈಯಲ್ಲಿದ್ದ ಅಸ್ತ್ರ ಕಳಚಿಬಿದ್ದು ವ್ಯವಹಾರಿಕತೆಯ ಬಣ್ಣ ಮತ್ತು ಸಿಹಿಲೇಪಿತ ಹಿಟ್ಟಿನಗುಳಿಗೆಯಂತಿದ್ದ ಆಂಗ್ಲಭಾಷೆ, ಆಡಳಿತದ ಸಾರಥ್ಯ ವಹಿಸಿತ್ತು. ಆಡಳಿತದಲ್ಲಿ ಸರ್ವಾಧಿಕಾರ ಸ್ಥಾಪನೆಗಾಗಿ ಸಮಾಜದಲ್ಲಿಯ ಭಾಷೆ, ಭಾವನೆಗಳು ಮತ್ತು ನಂಬಿಕೆಯ ಮೂಲಗಳನ್ನು ತಿಳಿಯುವುದು ಬ್ರಿಟಿಷರಿಗೆ ಅನಿವಾರ್ಯವಾಗಿತ್ತು. ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ಮತ್ತು ರಾಜಕೀಯ ಭದ್ರಕೋಟೆಗಳ ಒಂದೊಂದೇ ರಹಸ್ಯವನ್ನು ಭೇಧಿಸತೊಡಗಿದರು. ಸಮಾಜದ ಮುಂಚುಣಿಯಲ್ಲಿದ್ದವರ ಸೊತ್ತಾಗಿದ್ದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವಲಯಗಳು; ಇವುಗಳಿಂದಲೇ ನಿರ್ಮಾಣಗೊಳ್ಳುವ ಭಾಷಿಕವಲಯ; ಒಟ್ಟು ವಾಸ್ತವ ಸಮಾಜವನ್ನು ನಿರ್ಧರಿಸುವ (ಮೂಢ)ನಂಬಿಕೆಗಳು; ಇವುಗಳ ಆಂತರ್ಯವನ್ನು ಬ್ರಿಟಿಷರು ಜಾಲಾಡತೊಡಗಿದರು. ಭೌತಿಕವಾಗಿ ಸಮಾಜವನ್ನು ಆಳುವ ವರ್ಗ ಅದೇ ವೇಳೆಯಲ್ಲಿ ಸಮಾಜವನ್ನು ಆಳುವ ಬೌದ್ಧಿಕ ಶಕ್ತಿಯೂ ಆಗಿರುತ್ತದೆ. ಭೌತಿಕ ಉತ್ಪಾದನಾ ಮಾಧ್ಯಮಗಳನ್ನು ವಶದಲ್ಲಿರಿಸಿಕೊಂಡ ವರ್ಗ ಬೌದ್ಧಿಕ ಉತ್ಪಾದನಾ ಮಾಧ್ಯಮಗಳನ್ನೂ ಸಹ ನಿಯಂತ್ರಿಸುತ್ತದೆ. ಬ್ರಿಟಿಷ ಸರಕಾರಕ್ಕೆ ಭಾರತೀಯ ಸಮಾಜದ ಮೂಲ ಬೇರಿನ ಅಂತಸತ್ವ ತಿಳಿದುಕೊಳ್ಳುವುದು ಮುಖ್ಯ ಉದ್ದೇಶವಾಗಿತ್ತಾದರೂ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬ್ರಿಟಿಷ ಅಧಿಕಾರಿಗಳಿಗೆ ಸ್ಥಳಿಯ

ಜನಮನದ ಭಾಷೆ, ಸಂಸ್ಕೃತಿ, ಸಾಹಿತ್ಯ, ಆಚರಣೆಗಳನ್ನು ಮೀರಿ ಅವರ ಭಾವನೆಗಳಿಗೆ ಸ್ಪಂದಿಸುವುದು ಆಡಳಿತದ ಅನಿವಾರ್ಯತೆಯೂ ಆಗಿತ್ತು. ಸ್ಥಳಿಯರ ಸಹಾಯ ಸಹಕಾರಗಳಿಲ್ಲದೆ ಆಡಳಿತ ನಡೆಸುವುದು, ಅಧ್ಯಯನ ಕೈಗೊಳ್ಳುವುದು ಅಸಾಧ್ಯ ಎಂಬುದು ವಿಧಿತವಾಗಿರಲೂ ಸಾಕು. ಹಾಗಾಗಿಯೇ ಕಂಪನಿ ಸರ್ಕಾರದಡಿಯಲ್ಲಿಯೇ ನಿಯಮಿಸಲ್ಪಟ್ಟು ಕಾರ್ಯಪ್ರವೃತ್ತರಾಗಿದ್ದರೂ ಸ್ಥಳಿಯ ಮಣ್ಣಿನ ಮೂಲಗುಣ ಅರಿಯುವುದು ಮತ್ತು ಅದರೊಂದಿಗಿದ್ದೇ ಅದರ ಉಪಯೋಗ ಪಡೆಯುವುದು ಸ್ಥಳೀಯ ಅಧಿಕಾರಿಗಳ ಮೂಲ ಉದ್ದೇಶವಾಗಿತ್ತು. ಈ ಉದ್ದೇಶ ಈಡೇರಿಕೆಗಾಗಿ ಕನ್ನಡ ನೆಲದ, ಕನ್ನಡ ಭಾಷೆಯ ಪರಿಚಯ ಮತ್ತು ಕೂಲಂಕೂಷ ಅಧ್ಯಯನ ಕೈಗೆತ್ತಿಕೊಂಡಿದ್ದರೂ ಅಧಿಕಾರದ ಗದ್ದುಗೆಯಲ್ಲಿದ್ದ ಮರಾಠಾ ಪೇಶ್ವೆಗಳ ವೈರುಧ್ಯ ಕಟ್ಟಿಕೊಳ್ಳುವುದೂ ಅವರಿಗೆ ಬೇಕಿರಲಿಲ್ಲ. ಹಾಗಾಗಿ ಕನ್ನಡ ಶಾಲೆಗಳಲ್ಲಿ ಮರಾಠಿಯನ್ನೂ ಕಲಿಸುವ ಪರಿಪಾಠವನ್ನು ಮುಂದುವರೆಸಿಯೇ ಇದ್ದರು. ಕ್ರಿ.ಶ. ೧೮೧೮ರಿಂದೀಚೆಗೆ ನೋಡಿದರೆ ಮೊದಲು ಮರಾಠಿ ಶಾಲೆಗಳೇ ಸ್ಥಾಪನೆಗೊಂಡಿವೆ. ಅವುಗಳ ಸಂಖ್ಯೆಯೇ ಇದನ್ನು ಧೃಡಪಡಿಸುತ್ತದೆ. ೧೮೮೪ ರ ಧಾರವಾಡ ಜಿಲ್ಲಾ ಗ್ಯಾಝೆಟೀಯರ್, ಮೂರನೇಯ ಆವೃತ್ತಿ-೧೯೫೯ ಪ್ರಕಾರ 'ದಕ್ಷಿಣ ಮಹಾರಾಷ್ಟ್ರದ (ಮುಂಬೈ ಕರ್ನಾಟಕ) ಭಾಗವಾಗಿದ್ದ ಧಾರವಾಡದಲ್ಲಿ ಮರಾಠಿ ಪ್ರಾಬಲ್ಯ ಹೆಚ್ಚಾಗಿದ್ದರಿಂದ ಮರಾಠಿ ಶಾಲೆಗಳ ಸಂಖ್ಯೆಯೂ ಅಧಿಕವಾಗಿತ್ತು. ಕನ್ನಡ ಸಾಲೆಗಳಲ್ಲಿ ಕನ್ನಡ, ಸಂಸ್ಕೃತ, ಮರಾಠಿ ಮತ್ತು ಗಣಿತ ಬೋಧಿಸಲಾಗುತ್ತಿತ್ತು. ಈ ನೆಲದಲ್ಲಿ ಸರ್ಕಾರ ಶಿಕ್ಷಣ ಕ್ಷೇತ್ರ ಪ್ರವೇಶ ಮಾಡಿದ್ದೂ ಕೂಡ ಮರಾಠಿ ಶಾಲೆಗಳ ಆರಂಭದೊಂದಿನೇ ಎಂಬುದು ಕಟುಸತ್ಯ. ೧೮೨೬ರಲ್ಲಿ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಒಂದೊಂದು ಮರಾಠಿ ವರ್ನಾಕ್ಯೂಲರ್ ಶಾಲೆ ಆರಂಭಿಸಿದ 'ಬಾಂಬೆ ನೇಟಿವ್ ಎಜ್ಯುಕೆಷನ್ ಸೊಸೈಟಿ' ಎಂಬ ಅರೆಸರಕಾರಿ ಸಂಸ್ಥೆ ಈ ನೆಲದ ಶಿಕ್ಷಣದಲ್ಲಿ ಸರಕಾರದ ಪ್ರವೇಶವನ್ನು ಅಧಿಕೃತಗೊಳಿಸಿದರೂ ಅದು ಕನ್ನಡದ ಉದ್ಧಾರಕ್ಕಾಗಿಯಂತೂ ಆಗಿರಲಿಲ್ಲ. ಕನ್ನಡದ ಪ್ರದೇಶದಲ್ಲಿ ಪ್ರಭುತ್ವವನ್ನು ನಡೆಸುತ್ತಿದ್ದ ೧೩ ಸಂಸ್ಥಾನಗಳಲ್ಲಿ ಅಕ್ಕಲಕೋಟ, ಕುರಂದವಾಡ(ಕಿರಿ), ಮಿರಜ(ಬುಧಗಾಂವ), ಜತ್ತ, ಮುಧೋಳ, ರಾಮದುರ್ಗ ಮತ್ತು ಸವಣೂರು ಪೂರ್ಣವಾಗಿ ಅಚ್ಚಕನ್ನಡ ಪ್ರದೇಶಗಳಾಗಿದ್ದವು. ಆದರೆ ಸವಣೂರು ಒಂದನ್ನು ಬಿಟ್ಟು ಉಳಿದೆಲ್ಲ ಸಂಸ್ಥಾನಿಕರು ಮರಾಠಿಗರಾದ್ದರಿಂದ, ಆ ಒತ್ತಡದಿಂದ ಸ್ವಾಭಾವಿಕವಾಗಿ ಎಂಬಂತೆ ಮರಾಠಿಯ ಪ್ರಾಬಲ್ಯವೇ ಮೆರೆಯುತ್ತಿತ್ತು. ಈ ಕಾರಣದಿಂದಲೇ ಕನ್ನಡ ನಾಡಿನಲ್ಲಿದ್ದ ಈ ಸಂಸ್ಥಾನಗಳಿಗೆ **'ದಕ್ಷಿಣ ಮಹಾರಾಷ್ಟ್ರ ಸಂಸ್ಥಾನ'** ಪ್ರದೇಶಗಳೆಂದು ಕರೆಯುತ್ತಿದ್ದರು. '೧೮೩೬ರಲ್ಲಿ ಧಾರವಾಡ ಮತ್ತು ಬೆಳಗಾವಿ ಕಲೇಕ್ಟರೇಟ್‌ಗಳಲ್ಲಿ ಕನ್ನಡವು ಅಧಿಕೃತ ಭಾಷೆಯಾಯಿತು. ಅಲ್ಲಿಂದೀಚೆಗೆ ಮಾತ್ರವೇ ಕನ್ನಡ ಶಾಲೆಗಳು ಅಲ್ಲಿ ಪ್ರಾರಂಭವಾದವು. ೧೮೪೦ರಲ್ಲಿ 'ಶಿಕ್ಷಣ ಮಂಡಳಿ'(Board of Education)ಯೊಂದನ್ನು ಸರಕಾರ ರಚಿಸಿತು'.[೧] ೧೮೫೫ರವರೆಗೆ ಈ ಮಂಡಳಿ ಕಾರ್ಯ ನಿರ್ವಹಿಸಿ ನಂತರ ಇದರ ಜವಾಬ್ದಾರಿ ಶಿಕ್ಷಣ ಇಲಾಖೆಗೆ ವರ್ಗಾವಣೆಗೊಂಡಿತು. ಹದಿನೈದು

ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಇದು ಆ ಕಡಿಮೆ ಕಾಲಾವಧಿಯಲ್ಲಿ ಧಾರವಾಡದಲ್ಲಿ ಒಂದು ಆಂಗ್ಲ ಶಾಲೆಯನ್ನು ಹಾಗೂ ಧಾರವಾಡ ಮತ್ತು ಬೆಳಗಾವಿ ಕಲೆಕ್ಟರೇಟ್ ಪ್ರದೇಶಗಳಲ್ಲಿ ಮತ್ತು ಸೊಲ್ಲಾಪೂರದ ಕನ್ನಡ ಭಾಗಗಳಲ್ಲಿ 'ವರ್ನಾಕ್ಯೂಲರ್ ಸ್ಕೂಲ್'ಗಳೆಂಬ ೩೪ ಕನ್ನಡ ಶಾಲೆಗಳನ್ನು ಸ್ಥಾಪಿಸಿದೆ; ಕನ್ನಡದಲ್ಲಿ ಕೆಲವು ಪುಸ್ತಕಗಳನ್ನು ಸಿದ್ಧಗೊಳಿಸಿ ಪ್ರಕಟಿಸಿದೆ. ಕನ್ನಡ ಶಿಕ್ಷಕರನ್ನು ನೇಮಿಸಲು ಪ್ರಯತ್ನಿಸಿದೆ. ಅಲ್ಲದೆ ಬೆಳಗಾವಿಯಲ್ಲಿ ಒಂದು ಗ್ರಂಥಾಲಯ ಮತ್ತು ಧಾರವಾಡದಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿದೆ. ಸ್ಥಳಿಯ ಜನರು ಶಿಕ್ಷಣಕ್ಕಾಗುವ ವೆಚ್ಚದ ಸ್ವಲ್ಪ ಭಾಗವನ್ನು ವಹಿಸಿಕೊಳ್ಳುವ ಒಂದು ಯೋಜನೆಯನ್ನು ೧೮೫೪ರಲ್ಲಿ ತಯಾರಿಸಿದರೂ ೧೮೫೫ರಲ್ಲಿ ಶಿಕ್ಷಣ ಮಂಡಳಿ ರದ್ದಾದ ನಂತರ ಆ ಯೋಜನೆ ಮುಂದುವರೆಯಲಿಲ್ಲ. ಹಾಗಾಗಿ ಆನಂತರ ಈ ಭಾಗದಲ್ಲಿ ಶಾಲೆಗಳನ್ನು ತೆರೆಯಲು ಅಡಚನೆ ಉಂಟಾಯಿತು. ೧೮೫೪-೫೫ರಲ್ಲಿ ಪ್ರಾಂತದ ಕನ್ನಡ ಭಾಗದಲ್ಲಿ ೩೪ ಕನ್ನಡ ಶಾಲೆಗಳಿದ್ದವು. ೧೮೩೫ ರಲ್ಲಿ ಕನ್ನಡ ಪ್ರದೇಶವನ್ನು ಪ್ರವೇಶಿಸಿದ ಲಂಡನ್ ಸೊಸೈಟಿಯು ೭ ಬಾಲಕರ ಕನ್ನಡ ಶಾಲೆಗಳನ್ನು, ೬ ಹೆಣ್ಣುಮಕ್ಕಳ ಶಾಲೆಗಳನ್ನು ಪ್ರಾರಂಭಿಸಿತು. ಬಾಲಕರ ಶಾಲೆಗಳಲ್ಲಿದ್ದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೨೨೧, ಧಾರವಾಡ, ಗದಗು, ಗುಳೇದಗುಡ್ಡ, ಹುಬ್ಬಳ್ಳಿ ಮುಂತಾದ ಸ್ಥಳಗಳಲ್ಲಿ ಬಾಷೆಲ್ ಮಿಷನ್ ಸಂಸ್ಥೆಯು ಶಾಲೆಗಳನ್ನು ಸ್ಥಾಪಿಸಿತು'[೨] ಹೀಗೆ ಸರಕಾರಿ ಮತ್ತು ಖಾಸಗಿ ಶಾಲೆಗಳು ಶಿಕ್ಷಣದ ಮುಂದುವರಿಕೆಗೆ ಅಯೋಮಯ ಶ್ರಮಿಸಿದರೂ ಅದು ಬ್ರಿಟಿಷರ ಮತ್ತು ಮರಾಠರ ಕೃಪೆಯಲ್ಲಿಯೇ ನಡೆದುದರಿಂದ ಕನ್ನಡ ಭಾಷೆ ಮತ್ತು ಶಿಕ್ಷಣ ಅವರ ಮರ್ಜಿಯನ್ನವಲಂಬಿಸಿ ಸಾಗುತ್ತಿದ್ದವು.

ಇದೇ ಸಂದರ್ಭ ದೇಶಾದ್ಯಂತ ಸಮಗ್ರಶಿಕ್ಷಣದ ಕುರಿತಾದ ಹೊಸ ಗಾಳಿ ಬೀಸಿತು. ೧೮೫೪ರ ವುಡ್ ವರದಿ ಪ್ರಕಾರ ಶಿಕ್ಷಣದಲ್ಲಿ ನುರಿತ, ಪರಿಣಾಮಕಾರಿ ಶಿಕ್ಷಕರನ್ನು ತಯಾರಿಸಲು ತರಬೇತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿತು. ಶಿಕ್ಷಕರ ತರಬೇತಿಗಾಗಿ ನೀಡಿದ ಪ್ರಾಧಾನ್ಯತೆಯೇ ಈ ಟ್ರೇನಿಂಗ್ ಕಾಲೇಜಿನ ಉದಯಕ್ಕೆ ನಾಂದಿಯಾಯಿತು. ಅದುವರೆಗೂ ಬೋಧಿಸುವ ಶಿಕ್ಷಕರಿಗಾಗಲಿ, ವಿಷಯಕ್ಕಾಗಲಿ ಯಾವುದೇ ನಿರ್ದಿಷ್ಟ ಚೌಕಟ್ಟಾಗಲಿ, ಕ್ರಮವಾಗಲಿ ಇರಲಿಲ್ಲ. ೧೮೩೧ ರಲ್ಲಿ ವಾಲ್ಟೆರ್ ಇಲಿಯಟ್ ಪ್ರಥಮವಾಗಿ ಸ್ಥಾಪಿಸಿದ ಶಾಲೆಯೊಂದರಲ್ಲಿ ಬೋಧಿಸಲು ಪಠ್ಯಕ್ರಮ ಇರದಿರುವುದನ್ನು ಕಂಡು ಬ್ರಿಟಿಷ ಸರಕಾರಕ್ಕೆ ಕನ್ನಡ ಪಠ್ಯಪುಸ್ತಕಗಳ ಮುದ್ರಣಕ್ಕಾಗಿ ಸೂಚನೆ ನೀಡಿದನು. ಅದು ಸ್ವೀಕೃತವಾಗಿ ಮೊಟ್ಟಮೊದಲಿಗೆ ಮೂರು ಪುಸ್ತಕಗಳು ಸಿದ್ಧವಾಗಿದ್ದು ನಿಜ. ಮುಂಬಯಿ ಸರಕಾರ ಕ್ರಿ.ಶ. ೧೮೩೫ರಲ್ಲಿ 'ಸದರ್ನ ಮರಾಠಾ' ಪ್ರದೇಶದ (ಮುಂಬಯಿ ಕರ್ನಾಟಕ) ಜನರ ಭಾಷೆ ಕನ್ನಡವಾದ್ದರಿಂದ ಅಲ್ಲಿ ಕನ್ನಡದಲ್ಲಿಯೇ ಆಡಳಿತ ಮತ್ತು ಶಿಕ್ಷಣ ಪ್ರಕ್ರಿಯೆ ನಡೆಯಬೇಕು ಎಂಬ ಮಹತ್ವಪೂರ್ಣ ನಿರ್ಣಯವನ್ನು ಮುಂಬಯಿ ಸರಕಾರ ಕೈಗೊಂಡಿದ್ದರಿಂದ ಕನ್ನಡ ಶಾಲೆಗಳ ಸಂಖ್ಯೆ ಹೆಚ್ಚತೊಡಗಿತು. '೧೮೪೨ರಲ್ಲಿ ರೋಣದಲ್ಲಿ ಎರಡು ಸ್ಥಳೀಯ ಶಾಲೆಗಳು ಇದ್ದುವೆಂದು, ಅವುಗಳಲ್ಲಿ ಒಟ್ಟು ಆರವತ್ತು ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಅವರಿಗೆ ದಶಾಜ್ಞೆಗಳು(ಟೆನ್

ಕಮಾಂಡೆಂಟ್‌ಟ್ಸ ಕಂಟಸ್ಥವಾಗಿದ್ದುವೆಂದು ಬೆಳಗಾವಿಯ ಕಲೆಕ್ಟರ್ ಟನ್ಸೆಂಡ್ ವರದಿ ಮಾಡಿದ್ದ'ನ್ನು ೧೯೯೫ರಲ್ಲಿ ಪ್ರಕಟಗೊಂಡ ಧಾರವಾಡ ಜಿಲ್ಲಾ ಗ್ಯಾಝೆಟಿಯರ್ ಪರಿಷ್ಕೃತ ಆವೃತ್ತಿ (ಪುಟ-೬೯೨) ಉಲ್ಲೇಖಿಸುತ್ತದೆ. '೧೮೪೮ರಲ್ಲಿ ಧಾರವಾಡದಲ್ಲಿ ಇಂಗ್ಲಿಷ ಶಾಲೆಯನ್ನು ಸ್ಥಾಪಿಸಲಾಯಿತು. ೧೮೫೫ರಲ್ಲಿ ಶಿಕ್ಷಣ ಇಲಾಖೆ ರೂಪುಗೊಂಡಿತು. ಅದೇ ವರ್ಷ ಧಾರವಾಡದಲ್ಲಿ ೧೨ ಕನ್ನಡ ಶಾಲೆಗಳಿದ್ದವು. ಅವುಗಳಲ್ಲಿ ೧೩೪೧ ಮಕ್ಕಳು ವ್ಯಾಸಂಗ ಮಾಡುತ್ತಿದ್ದರು'[೩] '೧-೫-೧೮೫೫ಕ್ಕೆ 'ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸಟ್ರಕ್ಷನ್' ಎಂಬ ಕಚೇರಿ ಆರಂಭವಾಗಿ ಶಿಕ್ಷಣ ಇಲಾಖೆಗೆ ನಾಂದಿಯಾಯಿತು. ಆಗ ದಕ್ಷಿಣ ಭಾಗದ ಎಜ್ಯುಕೆಷನಲ್ ಇನ್ಸಪೆಕ್ಟರ್ ಆಗಿದ್ದ ಕ್ಯಾಪ್ಟನ್ ಜೆ. ಎಫ್. ಲಿಸ್ಟರ್ ಅವರ ಧೋರಣೆಯಂತೆ ಶಾಲೆಗಳನ್ನು ತೆರೆಯುವುದಕ್ಕೆ ಮೊದಲು ಶಿಕ್ಷಕರ ತರಬೇತಿ ಸಂಸ್ಥೆಯನ್ನು ಆರಂಭಿಸುವ ಅಗತ್ಯವಿತ್ತು'[೪] ಎಲ್ಲ ಶಾಲೆಗಳಲ್ಲಿ ತರಬೇತಿ ಪಡೆದ ಶಿಕ್ಷಕರಿರಬೇಕೆಂಬ ಒತ್ತಾಶೆ ಇತ್ತು; ಶಾಲೆಗಳಲ್ಲಿ ಅಭ್ಯಸಿಸುವ ಮಕ್ಕಳ ಕಲಿಕೆ ಮತ್ತು ಬೋಧಿಸುವ ಶಿಕ್ಷಕರ ವೃತ್ತಿಪರತೆಯನ್ನು ಹೆಚ್ಚಿಸಬೇಕಾಗಿತ್ತು; ಪಠ್ಯಕ್ರಮ ರೂಪಿಸಿ ಕ್ರಮಾಗತ ಕಲಿಕೆಯನ್ನು ಅನುಷ್ಠಾನಗೊಳಿಸಬೇಕಿತ್ತು; ಈ ಎಲ್ಲದಕ್ಕೆ ನಿರ್ಧರಿತ ಪಠ್ಯವಸ್ತು ಮತ್ತು ತರಬೇತಿ ಹೊಂದಿದ ಶಿಕ್ಷಕರ ಅವಶ್ಯಕತೆ ಇತ್ತು. ಈ ಆಶಯದ ಸಾಕಾರಕ್ಕೆ ತರಬೇತಿ ನೀಡಲು ಒಂದು ಸಂಸ್ಥೆ ಮತ್ತು ಪಠ್ಯವಸ್ತು ನಿರ್ಣಯಿಸಲು ಒಂದು ನಿರ್ಣಾಯಕ ಸಮಿತಿ– ಇವುಗಳ ಸ್ಥಾಪನೆಯ ಅನಿವಾರ್ಯ ಅಗತ್ಯತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ ವುಡ್ ವರದಿಯ(೧೮೫೪) ಶಿಫಾರಸಿನಂತೆ ಸರಕಾರ ಶಿಕ್ಷಕ ತರಬೇತಿ ಶಾಲೆಯೊಂದನ್ನು ತೆರೆಯಲು ನಿರ್ಧರಿಸಿತು. ೧೮೫೫ರಲ್ಲಿ 'ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ' ಆರಂಭವಾದ ಮೇಲೆ ದಕ್ಷಿಣಭಾಗದ ಆಕ್ಟಿಂಗ ಎಜ್ಯುಕೆಷನಲ್ ಇನ್ಸಪೆಕ್ಟರರಾದ ಕ್ಯಾಪ್ಟನ್ ಜೆ.ಎಫ್. ಲಿಸ್ಟರ ಅವರು ೨೭ ಫೆಬ್ರುವರಿ ೧೮೫೬ರಲ್ಲಿ ಆಶಿಸಿದ್ದು ಹೀಗೆ: "And there can not, I think be a doubt, that until we have a better set of teachers, there will be very little real use in rapidly extending our vernacular schools. What we want is more Normal schools and candidates teachers classes"[೫] ತರಬೇತಿ ಹೊಂದಿದ ಶಿಕ್ಷಕರ ಸಮೂಹವೊಂದು ತಯಾರಾಗುವವರೆಗೂ ಶಾಲೆಗಳ ಕ್ಷಿಪ್ರ ಬೆಳವಣಿಗೆ ಅಸಾಧ್ಯವಾಗುವುದೆಂಬ ಅವರ ಈ ಆಶಯದಂತೆ ಶಿಕ್ಷಕ ತರಬೇತಿ ಶಾಲೆಯೊಂದು ತಲೆ ಎತ್ತಿತು. ಹೀಗೆನ್ನುವಾಗ ನಮ್ಮ ಕಣ್ಮುಂದೆ ಬರುವುದು ಒಂದು ಕಟ್ಟಡ, ಒಂದಷ್ಟು ಶಿಕ್ಷಕರು ಮತ್ತು ವಿದ್ಯಾರ್ಥಿಗಳು; ಆದರೆ ಈ ತರಬೇತಿ ಕಾಲೇಜಿನ ಹುಟ್ಟಿನ ವೃಂತಾತವೇ ಬೇರೆಯಾಗಿದೆ. "ಈ ಕಾಲೇಜು ಧಾರವಾಡದಲ್ಲಿಯೇ ಉದಯವಾಯಿತೆಂಬ ಬಗೆಗೆ ಶ್ರೀ ವೆಂಕಟ ರಂಗೋ ಕಟ್ಟಿಯವರು ಈ ಕೆಳಗಿನಂತೆ ಬರೆದಿದ್ದಾರೆ: ಮೊದಲು ೧೮೫೫ರಲ್ಲಿ ೩ರೂಗಳ ಶಿಷ್ಯವೇತನದ ಮೇಲೆ ಧಾರವಾಡದ ಕನ್ನಡ ಸಾಲೆಯ ಶಿಕ್ಷಕರ ಮೇಲ್ವಿಚಾರಣೆಯ ಕೆಳಗೆ ೧೦ ವಿದ್ಯಾರ್ಥಿಗಳನ್ನು ಆರಿಸಿದರು. ಅಷ್ಟೇ ವೇತನದಿಂದ ೧೮೫೬ರಲ್ಲಿ ೧೦ ವಿದ್ಯಾರ್ಥಿಗಳನ್ನು ಹೆಚ್ಚಿಗೆ ತೆಗೆದುಕೊಂಡರು.

ಅದನ್ನು ೧೮೬೧ರ ಜನೇವರಿ ತಿಂಗಳಲ್ಲಿ ಬೆಳಗಾಂವಿಗೆ ಸ್ಥಳಾಂತರಿಸಿ ವಿದ್ಯಾರ್ಥಿಗಳ ಸಂಖ್ಯೆಯನ್ನು ೧೨ಕ್ಕೆ ಇಳಿಸಿ ಅವರ ವೇತನವನ್ನು ೩ ರೂಪಾಯಿಗಳಿಂದ ೫ ರೂಪಾಯಿಗಳಿಗೆ ಏರಿಸಿದರು."[೬] ಇದರ ಮೂಲ ಉಲ್ಲೇಖ ಎಲ್ಲಿಯೂ ಅಲಭ್ಯ.

ಈ ಉಲ್ಲೇಖ ನಾರ್ಮಲ್ ಶಾಲೆ ಆರಂಭವಾದ ಸಮಯದ ಅನಿಶ್ಚಿತತೆಗೆ ಮತ್ತಷ್ಟು ಪುಷ್ಟಿ ನೀಡುತ್ತದೆ. ಈ ಹೇಳಿಕೆಯಿಂದ (೧) 'ನಾರ್ಮಲ್ ಕ್ಲಾಸ್' ಎಂಬುದು ನಾರ್ಮಲ್ ಕ್ಲಾಸ್ ಎಂದು ಆರಂಭವಾಗದೆ ಧಾರವಾಡದ ಕನ್ನಡ ಸಾಲೆ (?)ಯಲ್ಲಿಯೇ (೨)೧೦ ವಿದ್ಯಾರ್ಥಿಗಳೊಂದಿಗೆ (೩)ಕನ್ನಡ ಸಾಲೆಯ ಶಿಕ್ಷಕರ(?) ಮೇಲ್ವಿಚಾರಣೆಯ ಕೆಳಗೆ (೪)ಹೊಸದೊಂದು ಭಾಗವಾಗಿ ಆರಂಭಗೊಂಡು, ೧೮೬೧ರವರೆಗೆ ಮುಂದುವರೆದು, (೫)೧೮೬೧ರಲ್ಲಿ ಬೆಳಗಾವಿಗೆ ಸ್ಥಳಾಂತರಗೊಳ್ಳುವುದರೊಂದಿಗೆ ಪ್ರತ್ಯೇಕ ರಚನೆಗೊಂಡು, 'ನಾರ್ಮಲ್ ಕ್ಲಾಸ್' ಆಗಿ, ಬೆಳೆಯುತ್ತ ಸಾಗಿರುವಂಥ ಸತ್ಯದ ಮೂಲ ಇಲ್ಲಿ ಅಡಗಿರುವುದು ಗೋಚರವಾಗುತ್ತದೆ. ಇದರಿಂದ ಮೇಲೆ ಹೇಳಿರುವ ನಾಲ್ಕು ಅಂಶಗಳು ಹೊಸಬೆಳಕಿಗೆ ಒಡ್ಡಿಕೊಳ್ಳುತ್ತವೆ. ಹೀಗೆ ಈ ತರಬೇತಿ ಸಂಸ್ಥೆಯ ಜಾಡು ಹಿಡಿದು ಮೂಲ ಅರಸಿದಾಗ, ತಳಮೂಲದಲ್ಲಿ ಅದು ಹೀಗೆ 'ಧಾರವಾಡದಲ್ಲಿ, ಒಂದು ಕನ್ನಡ ಸಾಲೆಯಲ್ಲಿ ಒಂದು ಭಾಗವಾಗಿ, ೧೮೫೬ರಲ್ಲಿ' ಆರಂಭ ಆಗಿರುವುದರಿಂದ ಅದು 'ಧಾರವಾಡದಲ್ಲಿ' ಮತ್ತು '೧೮೫೬ರಲ್ಲಿ'ಯೇ ಹುಟ್ಟಿದ್ದು ಹಾಗೂ ಇದು ಹುಟ್ಟುವಾಗ ಹೀಗೆ 'ಟ್ರೇನಿಂಗ ಕಾಲೇಜು' ಅಥವಾ ಸಂಸ್ಥೆ ಎಂದೆಲ್ಲ ಹೆಸರಿಟ್ಟುಕೊಂಡು, ವಿದ್ಯುಕ್ತವಾಗಿ ಹುಟ್ಟಿದ್ದಲ್ಲ ಎಂಬ ಸಂಗತಿಗಳನ್ನು ಒಪ್ಪಲೇಬೇಕಾಗುತ್ತದೆ.

ಇದಲ್ಲದೆ ೩ ನವಂಬರ ೧೮೯೦ರಂದು ಸಾಯಂಕಾಲ ಆಲಿಜಾಬಹಾದ್ದೂರ ಸವಣೂರ ನವಾಬ ಸಾಹೇಬರ ಅಧ್ಯಕ್ಷತೆಯಲ್ಲಿ ಮತ್ತು ಮೆ.ಸಿವಿಲ್ ಸರ್ಜನ್, ಮೆ. ಎಜ್ಯಕೇಶನ ಇನ್ಸಪೆಕ್ಟರ. ದಕ್ಷಿಣಭಾಗ, ಮೆ. ತ್ರಿಮಲರಾವ ಇನಾಮದಾರ(?) ಮುಂತಾದವರ ಉಪಸ್ಥಿತಿಯಲ್ಲಿ ಜರುಗಿದ ಧಾರವಾಡದ ಟ್ರೇನಿಂಗ ಕಾಲೇಜಿನ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಸರ್ಟಿಫೀಕೆಟ ಕೊಡುವ ಸಮಾರಂಭದಲ್ಲಿ ಪ್ರಿನ್ಸಿಪಾಲರಾಗಿದ್ದ ರಾವಜೀ ಬಾಳಾಜೀ ಕರಂದೀಕರರು ಮೊದಲು ಮಾತನಾಡುತ್ತಾರೆ. ಈಡೀ ಕಾಲೇಜಿನ ಇತಿಹಾಸವನ್ನೇ ಮೆಲುಕು ಹಾಕಿದಂತಿರುವ ಈ ಭಾಷಣದ ಸಾರಾಂಶದಲ್ಲಿ ಕಾಲೇಜಿನ ಕುರಿತು ಹಲವಾರು ವಿಷಯಗಳ ಕುರಿತು ಬೆಳಕು ಚೆಲ್ಲುತ್ತದೆ: "ಈ ಕಾಲೇಜವು ಸನ್ ೧೮೫೬ನೇ ಇಸವಿಯಲ್ಲಿ 'ನಾರ್ಮಲ್ ಕ್ಲಾಸ್'ವೆಂಬ ಹೆಸರಿನಿಂದ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿತು. ಮುಂದೆ ಸನ್ ೧೮೬೦ನೇ ಇಸವಿಯಲ್ಲಿ ಅದು ಮೆ. ಎಜುಕೇಶನಲ್ ಇನ್ಸಪೆಕ್ಟರರ ಸದರ ಸ್ಟೇಷನವಾದ ಬೆಳಗಾವಿಗೆ ಒಯ್ಯಲ್ಪಟ್ಟಿತು. ಸನ್೧೮೬೪ನೇ ಇಸವಿಯಲ್ಲಿ ವಿದ್ಯಾಖಾತೆಯ ಅಧಿಕಾರಿಗಳು ಕಾಲೇಜದ ಗೌರವವನ್ನೂ ಮಹತ್ವವನ್ನೂ ಲಕ್ಷಿಸಿ ಅದರಲ್ಲಿದ್ದ ಮಾಸ್ತರಜನರ ಸಂಬಳಗಳನ್ನು ಹೆಚ್ಚು ಮಾಡಿ ಅದರ ಸ್ಥಿತಿಯನ್ನು ಸುಧಾರಿಸಿದರು ಮತ್ತು ೧೮೭೦ನೇ ವರ್ಷದಲ್ಲಿ ಇದಕ್ಕೆ ಪ್ರ್ಯಾಕ್ಟಿಸಿಂಗ ಸ್ಕೂಲನ್ನು ಜೋಡಿಸಿದರು. ಧಾರವಾಡ ಪಟ್ಟಣವು ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಪ್ರಾಂತ್ಯದ ಮಧ್ಯ ಸ್ಥಳವಾಗಿರುವುದರಿಂದ ಇಂಥ ವಿದ್ಯಾಲಯವು ಇಲ್ಲಿಯೇ

ಇರತಕ್ಕದ್ದುಚಿತವೆಂದು ಗ್ರಹಿಸಿ ಈ ಜಿಲ್ಲೆಯ ಆಗಿನ ಹೆಸರಾಂತ ಕಲೆಕ್ಟರ ಮೆ. ರಾಬರ್ಟಸನ್ ಸಾಹೇಬರು ಬಹು ಶ್ರಮಬಟ್ಟು ೫೦,೦೦೦ ರೂಪಾಯಿಗಳನ್ನು ವರ್ಗಣಿಯಿಂದ ಕೂಡಿಸಿ ಈ ಭವ್ಯವಾದ ಇಮಾರತಿಯನ್ನು ಕಟ್ಟಿಸಿದರು; ಮತ್ತು ಸನ್ ೧೮೭೫ನೇ ಇಸವಿಯಲ್ಲಿ ಕಾಲೇಜವನ್ನು ಬೆಳಗಾವಿಯಿಂದ ಧಾರವಾಡಕ್ಕೆ ತಿರುಗಿ ತರಿಸಿದರು......"[೭]. ಈ ಮಹತ್ತರವಾದ ನುಡಿಗಳು ಟ್ರೇನಿಂಗ ಕಾಲೇಜಿನ ಇತಿಹಾಸ ಬರೆಯಲು ಹತ್ತು ಹಲವು ಮಹತ್ವದ ದಾಖಲೆಗಳನ್ನು ಒದಗಿಸಿ ಕೊಡುತ್ತವೆ. ಇದರ ಪ್ರಕಾರ ಈ ಕಾಲೇಜಿನ ಮೂಲಸ್ವರೂಪವಾದ 'ನಾರ್ಮಲ್ ಕ್ಲಾಸ್' ೧೮೫೬ರಲ್ಲಿ ಆರಂಭವಾಯಿತು. ಕರಂದೀಕರರೇ ಪ್ರಿನ್ಸಿಪಾಲರಾಗಿದ್ದಂಥಹ ತರುವಾಯದ ಅವಧಿ ಅಂದರೆ ೧೮೯೫ರಲ್ಲಿ ನಡೆದ ಮತ್ತೊಂದು 'ಕಾಲೇಜಿನ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಸರ್ಟಿಫೀಕೆಟ ಕೊಡುವ ಸಮಾರಂಭ'ದಲ್ಲಿ ಲೋಕಪ್ರಿಯ ಕಲೆಕ್ಟರರಾದ ಮೆ॥ ಮ್ಯೂರ ಅವರ ಅಧ್ಯಕ್ಷತೆಯಲ್ಲಿ, ಯುರೋಪಿಯನ್ ಕಾಮದಾರರು, ಮುನಸೂಫ, ಮಾಮಲೇದಾರ, ವಕೀಲ ಮುಂತಾದವರ ಉಪಸ್ಥಿತಿಯಲ್ಲಿ ಕರಂದೀಕರರು ಮಾತನಾಡಿ ಮತ್ತೇ ಕೆಲವು ಪ್ರಥಮವೆನಿಸುವ ವಿಚಾರಗಳನ್ನು, ಆ ಸಾಲಿನ ಸಾಧಾರಣ ದಾಖಲಾತಿ, ನಿಯಮ ಹಾಗೂ ಫಲಿತಾಂಶವನ್ನೂ ತಿಳಿಸುತ್ತಾ: "ಈ ಕಾಲೇಜವು ೧೮೫೬ ನೇ ಇಸವಿಯಲ್ಲಿ ಒಂದು ಕ್ಲಾಸದ ರೂಪದಿಂದ ಮಾತ್ರ ಇತ್ತು. ಸನ್ ೧೮೭೦ರಿಂದ ೧೮೮೦ರವರೆಗೆ ಹತ್ತು ವರ್ಷದಲ್ಲಿ ಈ ಸಂಸ್ಥೆಯು ಕ್ರಮಶಃ ಬೆಳೆದು ಕಾಲೇಜವೆಂಬ ಹೆಸರಿಗೆ ಒಪ್ಪಹತ್ತಿತು. ಅಂದಿನಿಂದ ಸರಕಾರದವರ ಸಹಾಯ, ಕಾಮದಾರ ಜನರ ಉದ್ಯೋಗ ಮತ್ತು ಜನರ ಉತ್ತೇಜನಗಳಿಂದ ಇದರ ಉತ್ತರೋತ್ತರ ಉತ್ಕರ್ಷವಾಗಹತ್ತಿತು. ಮುಂಬಯಿ ಇಲಾಖೆಯಲ್ಲಿರುವ ಯಾವತ್ತು ಕಾಲೇಜುಗಳಲ್ಲಿ ಇಮಾರತಿ ಮತ್ತು ಬೇರೆತರದ ಅನುಕೂಲಗಳಿಗಾಗಿ ನಮ್ಮ ಕಾಲೇಜದ ನಂಬರು ೧ನೇದಿರುತ್ತದೆಂಬದು ಹೇಳಲಿಕ್ಕೆ ನಾನು ಅಭಿಮಾನ ಪಡುತ್ತೇನೆ...."[೮] ಎಂದಿದ್ದಾರೆ. ಅಂದರೆ ಶಾಲೆಯ, ಕೇವಲ ಒಂದು ಭಾಗವಾಗಿ, ಒಂದು ಕ್ಲಾಸ್ ಆಗಿ ಹುಟ್ಟು ಪಡೆದದ್ದನ್ನ ಮತ್ತು ಬಾಂಬೆ ಕರ್ನಾಟಕದಲ್ಲಿಯೇ ಭೌತಿಕವಾಗಿ ಮತ್ತು ಗುಣಾತ್ಮಕವಾಗಿ ಉನ್ನತ ಸ್ಥಾನಮಾನಕ್ಕೇರಿ, ಪ್ರಗತಿ ಹೊಂದಿರುವುದರ ಎರಡೂ ಸ್ಥಿತಿಗಳನ್ನ ನಾವು ಒಪ್ಪಲೇ ಬೇಕಾಗುತ್ತದೆ.

೩.೨. ಧಾರವಾಡದ ಟ್ರೈನಿಂಗ್ ಕಾಲೇಜು : ಇತಿಹಾಸ ಮತ್ತು ಪರಂಪರೆ

ಮೇಲಿನ ಹೇಳಿಕೆಯ ಆಧಾರದ ಮೇಲೆ ಅಂತೂ ೧೮೫೬ ಫೆಬ್ರುವರಿಯಲ್ಲಿ "ನಾರ್ಮಲ್ ಕ್ಲಾಸ್"(ನಾನಾಗಿಲ್ ಕ್ಸಾಲ್)[*೧] ಎಂಬ ಹೆಸರಿನಿಂದ ತರಬೇತಿ ಶಾಲೆ ಆರಂಭವಾಯಿತು. ಇಂದಿನ

---

*೧– "ಗತಕಾಲದ ಧಾರವಾಡ" ಲೇ–ನ.ಹ.ಕಟಗೇರಿ, ಕರ್ನಾಟಕ ಇತಿಹಾಸ ಸಂಶೋಧನ ಮಂಡಳ– ಧಾರವಾಡ–೦೧, (ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆ ಪ್ರಕಟಣೆ) ೨೦೦೭–೦೮, ಪುಟ ಸಂಖ್ಯೆ–೧೫ ರಲ್ಲಿ "೧೮೫೬ ರಲ್ಲಿ ಶಿಕ್ಷಕರ ತರಬೇತಿಗಾಗಿ **'ನಾನಾಗಿಲ್ ಕ್ಸಾಲ್'**ಎಂಬ ಸಂಸ್ಥೆ ಪ್ರಾರಂಭವಾಗಿ ಶಿಕ್ಷಣದ ಅಭಿವೃದ್ಧಿಗೆ ನಾಂದಿಹಾಡಿತು" ಎಂದಿದ್ದಾರೆ. ಆದರೆ **'ನಾನಾಗಿಲ್ ಕ್ಸಾಲ್'**ಎಂಬ ಉಲ್ಲೇಖವನ್ನು ಈ ಪುಸ್ತಕದಲ್ಲಿ ಹೊರತುಪಡಿಸಿದರೆ ಬೇರೊಂದೆಡೆ ಎಲ್ಲಿಯೂ ಕಂಡುಬರುವುದಿಲ್ಲ.

ಉತ್ತರ ಕರ್ನಾಟಕ ಭಾಗದ ಜ್ಞಾನದಾಹಿಗಳ ದಾಹ ನೀಗಿಸುತ್ತ ಧಾರವಾಡದಲ್ಲಿ 'ವಿದ್ಯಾಕಾಶಿ'ಯ ಉಗಮಸ್ಥಾನವಾಯಿತು. 'ನಾರ್ಮಲ್ ಕ್ಲಾಸ್'- ೧೮೫೭ರಲ್ಲಿ ಆರಂಭವಾದಾಗ ಉತ್ತರ ಕರ್ನಾಟಕದಲ್ಲಿ ಶಿಕ್ಷಕರ ತರಬೇತಿ ಇನ್ನೂ ಕಣ್ಬಿಡುವ ಕೂಸು. ಇದೇ ಸಂದರ್ಭದಲ್ಲಿ ಚನ್ನಬಸಪ್ಪನವರು ಈ ನಾರ್ಮಲ್ ಕ್ಲಾಸ್‌ನ ಮುಖ್ಯಸ್ಥರಾಗಿದ್ದ ಬಗೆಗೆ ಯಾವುದೇ ಉಲ್ಲೇಖಾರ್ಹ ಸ್ಪಷ್ಟ, ಖಚಿತ ದಾಖಲೆಗಳು ಲಭಿಸುವುದಿಲ್ಲ.


'ನಾರ್ಮಲ್ ಸ್ಕೂಲ್'ನ ಮುಖ್ಯಸ್ಥರಾಗಿ ಶ್ರೀ ಚನ್ನಬಸಪ್ಪ ಧಾರವಾಡ

ಈ ತರಬೇತಿ ಶಾಲೆಯ ಮುಖ್ಯಸ್ಥರು ಶ್ರೀ ಚನ್ನಬಸಪ್ಪ ಧಾರವಾಡ ಇವರೇ ಆಗಿದ್ದರೆಂದು ಹೇಳುವ ಹಲವು ಉಲ್ಲೇಖಗಳು ಹಲವಾರು ಇತ್ತೀಚಿನ ಕೃತಿಗಳಲ್ಲಿ ಲಭಿಸುತ್ತವೆ. ೧೯೩೦ರಲ್ಲಿಪ್ರಕಟಿತ ಫ. ಗು. ಹಳಕಟ್ಟಿ 'ಕೈಲಾಸವಾಸಿ ಚನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಚರಿತ್ರೆಯು' ಎಂಬ ಕೃತಿಯ ಪುಟ ಸಂಖ್ಯೆ ೯ರಲ್ಲಿ, ೧೯೭೩ರಲ್ಲಿ ಪ್ರಕಟಿತ ಸ.ಸ. ಮಾಳವಾಡರ 'ಡೆಪುಟಿ ಚನ್ನಬಸಪ್ಪ' ಕೃತಿಯ ಪುಟ-೨೬ರಲ್ಲಿ, ೧೯೭೭ರಲ್ಲಿ ಪ್ರಕಟಿತ ಮ.ಗು.ಹಂದ್ರಾಳರ 'ಡೆಪ್ಯುಟಿ ಚನ್ನಬಸಪ್ಪನವರು' ಕೃತಿಯ ಪುಟ-೧೭ರಲ್ಲಿ, ೧೯೮೯ರಲ್ಲಿ ಪ್ರಕಟಿತ ಆರ್. ಎನ್. ಕರಡಿಯವರ 'ಕನ್ನಡದ ಶಕಪುರುಷ ಡೆಪುಟಿ ಚನ್ನಬಸಪ್ಪನವರು' ಕೃತಿಯ ಪುಟ ಸಂಖ್ಯೆ ೧೦ರಲ್ಲಿ ಹಾಗೂ ೧೯೯೦ರಲ್ಲಿ ಪ್ರಕಟಿತ ವಿದ್ವಾನ್ ಜಿ. ವಿ. ಶಿವಸ್ವಾಮಿಯವರ 'ಶಿಕ್ಷಣ ಯೋಗಿ ಚನ್ನಬಸಪ್ಪನವರು' ಕೃತಿಯ ಪುಟಸಂಖ್ಯೆ ೨೧ರಲ್ಲಿ ಚನ್ನಬಸಪ್ಪನವರು ೧೯೫೬ರಲ್ಲಿ ಆರಂಭವಾದ 'ನಾರ್ಮಲ್ ಸ್ಕೂಲಿ'ನ ಮುಖ್ಯಸ್ಥರಾದರೆಂಬ ಉಲ್ಲೇಖಗಳೇ ಇವೆ. ಆದರೆ ೧೯೭೪ರಲ್ಲಿ ಪ್ರಕಟಿತ ಶ್ರೀನಿವಾಸ ಹಾವನೂರ ಅವರ 'ಹೊಸಗನ್ನಡದ ಅರುಣೋದಯ' ಕೃತಿಯ ಪುಟ ಸಂಖ್ಯೆ ೮೨ರಲ್ಲಿ "ಕ್ರಿ.ಶ. ೧೮೫೬ರಿಂದ ೧೮೬೧ರವರೆಗೆ 'ನಾರ್ಮಲ್ ಸ್ಕೂಲಿ'ನಲ್ಲಿ ಅಧ್ಯಾಪಕನಾಗಿದ್ದ ಚನ್ನಬಸಪ್ಪ ಮತ್ತು ಆ ಮುಂದಿನ ಮೂರು ವರ್ಷ ಅಧ್ಯಾಪಕನಾಗಿದ್ದ ವೆಂ. ರಂ. ಕಟ್ಟಿ ಇವರಿಬ್ಬರೂ ಪರಿಸ್ಥಿತಿಯನ್ನು ಸುಧಾರಿಸಲು ಶ್ರಮಿಸಿದರು. ಆ ಸಮಯದಲ್ಲೇ ರಸೆಲ್ ವಿದ್ಯಾಧಿಕಾರಿಯಾಗಿ ಬಂದುದು(ಕ್ರಿ. ಶ.೧೮೬೪) ಮತ್ತು ಅದೇ ವರುಷವೇ ಚನ್ನಬಸಪ್ಪ ಈ ಟ್ರೇನಿಂಗ್ ಸ್ಕೂಲಿನ ಪ್ರಿನ್ಸಿಪಾಲನಾದದ್ದು ಒಂದು ಅಪೂರ್ವಯೋಗಾ ಯೋಗವಾಗಿ ಪರಿಣಮಿಸಿತು' ಎಂಬ ಹೇಳಿಕೆ ಸತ್ಯಕ್ಕೆ ಹತ್ತಿರವೆನಿಸುತ್ತದೆ. ಆದರೆ ಶ್ರೀ ಬಾಳಣ್ಣ ಶಿಗೀಹಳ್ಳಿಯವರ ಸಂಶೋಧನಾ ಪ್ರಬಂಧ 'ಡೆಪ್ಯೂಟಿ ಚನ್ನಬಸಪ್ಪನವರು-ಜೀವನ ಮತ್ತು ಸಾಧನೆ'ಯಪುಟ ಸಂಖ್ಯೆ ೫೩ರಲ್ಲಿ '...ಅಂಚೆ ಖಾತೆಯನ್ನು ತ್ಯಜಿಸಿದ ಚನ್ನಬಸಪ್ಪನವರು ಧಾರವಾಡದಲ್ಲಿ ಆರಂಭವಾಗಿದ್ದ (೧೮೫೬ ಫೆಬ್ರುವರಿ) ನಾರ್ಮಲ್‌ಸ್ಕೂಲಿನ ಪ್ರಿನ್ಸಿಪಾಲರೆಂದು ಸೇವೆ ಸಲ್ಲಿಸಲು ೧೮೬೧ರಲ್ಲಿ ನೇಮಣೂಕಿ ಹೊಂದಿದರು' ಎಂಬ ಹೇಳಿಕೆ ಗೊಂದಲಕ್ಕೆ ತಳ್ಳುತ್ತದೆ. ಈ ಅಭಿಪ್ರಾಯಗಳನ್ನಾಧರಿಸಿದರೆ ಚನ್ನಬಸಪ್ಪನವರ 'ನಾರ್ಮಲ್ ಸ್ಕೂಲಿ'ನ ಪ್ರವೇಶ ಮತ್ತು ವೃತ್ತಿಯ ಆರಂಭದ ಕಾಲಘಟ್ಟದ ಕುರಿತು ಒಂದು ನಿರ್ಣಯಕ್ಕೆ ಬರುವುದು ಸಂದಿಗ್ಧವಾಗುತ್ತದೆ.

ಚನ್ನಬಸಪ್ಪನವರ ನೌಕರಿ ಕುರಿತು ಶ್ರೀ ಶಿಂತ್ರಿಬಸಪ್ಪನವರು ಬರೆಯುತ್ತ "ಧಾರವಾಡದಲ್ಲಿ ಸನ್ ೧೮೫೬ರಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ 'ನಾರ್ಮಲ್ ಕ್ಲಾಸ್'(Normal Class)ಎಂಬ ಹೆಸರಿನ ಸಂಸ್ಥೆಯ ಹೆಡ್‌ಮಾಸ್ತರರೆಂದು ನೇಮಣೂಕಿಯಾಯಿತೆಂಬಂತೆ ತೋರುತ್ತಿದೆ."[೯] ಲಿಂಗೈಕ್ಯ ಡೆಪ್ಯೂಟಿಚನ್ನಬಸಪ್ಪನವರು (ಟ್ರೇನಿಂಗ್ ಕಾಲೇಜದ ಪ್ರಪ್ರಥಮ ಪ್ರಿನ್ಸಿಪಾಲರು)-ಶ್ರೀ ಶಿಂತ್ರಿ ಬಸಪ್ಪನವರು. ಪುಟ ಸಂಖ್ಯೆ- ೨೬) ಎಂದಿರುವುದು ಅವರಿಗೂ ನೇಮಕಾತಿಯ ದಿನಾಂಕದ ಖಚಿತತೆ ಬಗೆಗೆ ಅನುಮಾನ ಇರುವುದನ್ನು ತೋರಿಸುತ್ತದೆ.

೧೩-೧-೧೯೫೫ರಂದು ಅಂದರೆ ಚನ್ನಬಸಪ್ಪನವರು ತೀರಿ ೭೫ ವರ್ಷಗಳ ನಂತರ ಧಾರವಾಡದ ಗಂಡುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ, ಡೆಪ್ಯೂಟಿ ಚನ್ನಬಸಪ್ಪನವರ ಭಾವಚಿತ್ರದ ಅನಾವರಣ ನಡೆದಿದೆ. ಈ ಸಂದರ್ಭದಲ್ಲಿ ಹಲವಾರು ಮಹನಿಯರು ಕಳುಹಿಸಿದ ಶುಭ ಸಂದೇಶಗಳಲ್ಲಿಯೂ 'ಪ್ರಥಮ ಪ್ರಿನ್ಸಿಪಾಲರು'ಎಂದು ಸಂಬೋಧಿಸಿದ ದಾಖಲೆಗಳು ಸಿಗುತ್ತವೆ. ಫ.ಗು.ಹಳಕಟ್ಟಿಯವರು'....ಆಗ "ನಾರ್ಮಲ್ ಸ್ಕೂಲ್"ವೆಂದು ಕರೆಯಲ್ಪಟ್ಟ ಈ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಮೂಲ ಗುರುಗಳಾಗಿದ್ದರು...' ಎಂಬ ಹೇಳಿಕೆಯಲ್ಲಿ, ಬಿ. ಶಿವಮೂರ್ತಿ ಶಾಸ್ತ್ರಿ, ಸಂಪಾದಕರು, ಶರಣ ಸಾಹಿತ್ಯ, ಬೆಂಗಳೂರು ಇವರು '....ತಮ್ಮ ನಿರ್ಮಲ ಜೀವನದಿಂದ ತಮ್ಮ ಮೇಲ್ಮಟ್ಟದ ಅಧಿಕಾರಿಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದವರೂ, ಪರಮ ಉದಾರಿಗಳೂ, ಕರ್ಮಯೋಗಿಗಳೂ, ಧಾರವಾಡದ ಟ್ರೇನಿಂಗ ಕಾಲೇಜದ ಮೊದಲನೆಯ ಪ್ರಿನ್ಸಿಪಾಲರೂ ಆದ ಕೈ. ವಾ. ಡೆಪ್ಯೂಟಿ ಚೆನ್ನಬಸಪ್ಪನವರ ಭಾವಚಿತ್ರವು ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ದಿವ್ಯತಮ ಜೀವನ ಸ್ಫೂರ್ತಿಯನ್ನು ಉಂಟು ಮಾಡಲಿ' ಎಂಬ ಹೇಳಿಕೆಯಲ್ಲಿ ಮತ್ತು ಸರದಾರ ದಿವಾನ ಬಹಾದ್ದೂರ ಎಸ್.ಜೆ.ದೇಶಮುಖ (ಅಲಮೇಲ) ವಿಜಯಪುರ ಇವರು ತಮ್ಮ ಸಂದೇಶದಲ್ಲಿ 'ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಪ್ರಥಮ ಪ್ರಿನ್ಸಿಪಾಲರೆಂದು ನೇಮಕ ಹೊಂದಿ ಸುಮಾರು ಒಂದು ಶತಮಾನದನಂತರ ವಿಲಂಬವಾಗಿಯಾದರೂ ಸಾರ್ವಜನಿಕವಾಗಿ ಅವರ ಜೀವನ-ಕಾರ್ಯವನ್ನು ನಾವು ಸ್ತುತಿಸುತ್ತಿದ್ದೇವೆ....' ಎಂಬ ಹೇಳಿಕೆಯಲ್ಲಿ ಹಾಗೂ ಆರ್ ಎಸ್ ಮಹಾಂತಶೆಟ್ಟಿ, ಚೇರಮನ್, ವ್ಯವಸ್ಥಾಪಕ ಮಂಡಳ, ಕೆ.ಎಲ್.ಇ. ಸೊಸೈಟಿ, ಬೆಳಗಾಂವ ಇವರ 'ಧಾರವಾಡದ ಗಂಡುಮಕ್ಕಳ ಟ್ರೇನಿಂಗ ಕಾಲೇಜದ ಪ್ರಥಮ ಪ್ರಿನ್ಸಿಪಾಲರಾದ ಕೈ.ವಾ. ಡೈಪೂಟಿ ಚನ್ನಬಸಪ್ಪನವರ ಹೆಸರು ಕನ್ನಡ ನಾಡಿನಲ್ಲಿ ಮನೆಮಾತಾಗಿದೆ.....'[೧೦](ಕನ್ನಡ ಪ್ರಾಥಮಿಕ ಶಿಕ್ಷಣ-೧೯೫೫ ಫೆಬ್ರುವರಿ, ಸಂ-೯ಳ, ಸಂ-೯, ಪುಟ ೮) ಎಂಬ ಈ ನಾಲ್ಕೂ ಹೇಳಿಕೆಗಳು ಮತ್ತು ಶ್ರೀ ಶಿಂತ್ರಿ ಬಸಪ್ಪನವರು ಬರೆದ 'ಲಿಂಗೈಕ್ಯ ಡೆಪ್ಯೂಟಿ ಚನ್ನಬಸಪ್ಪನವರು(ಟ್ರೇನಿಂಗ ಕಾಲೇಜದ ಪ್ರಥಮ ಪ್ರಿನ್ಸಿಪಾಲರು)' ಎಂಬ ಲೇಖನದ ಶೀರ್ಷಿಕೆಯೇ ಡೆಪ್ಯೂಟಿ ಚನ್ನಬಸಪ್ಪನವರೇ ಪ್ರಥಮ ಪ್ರಿನ್ಸಿಪಾಲರಾಗಿದ್ದರು ಎಂಬುದನ್ನ ಸಾರಿಬಿಡುತ್ತದೆ. ೧೯೫೫ರ ಕರ್ನಾಟಕ ರಾಜ್ಯ ಗ್ಯಾಝೆಟಿಯರ್ ಧಾರವಾಡ ಜಿಲ್ಲೆ, ಪರಿಷ್ಕೃತ ಆವೃತ್ತಿಯೂ ಇದನ್ನೇ ಹೇಳುತ್ತದೆ.

ಆದರೆ "ನಾನು ೧೮೬೪ರ ಜಾನೇವರಿ ತಿಂಗಳ ೨೧ರಂದು ಇಲ್ಲಿ ಹಾಜರ ಆದಾಗ ೧೨ ಮತ್ತು ೧೪ ಜನ ವಿದ್ಯಾರ್ಥಿಗಳ ಎರಡು ವರ್ಗಗಳಿದ್ದವು. ಇವರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು ಕೊಂಕಣಿಗಳಾಗಿದ್ದು ಅವರಲ್ಲಿ ಕೆಲವರು ಒಂದು ವರ್ಷದವರೆಗೆ ಶಾಲೆಯಲ್ಲಿದ್ದರೂ ಮೊದಲಿನ ೯ ಅಂಕಿಗಳನ್ನು ಎಣಿಸಲು ಸಹ ಬಾರದಿರುವುದು ನನಗೆ ಆಶ್ಚರ್ಯಕರವಾಗಿ ತೋರಿತು.[೧೧]. ಹೀಗೆಂದು ಶ್ರೀ ಎಸ್ ಪಿ ಪಾಟೀಲರು ತಮ್ಮ ಲೇಖನದಲ್ಲಿ ಉಲ್ಲೇಖಿಸುತ್ತಾರೆ. ಆದರೆ ಯಾವ ಮೂಲದಿಂದ ಈ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆಂಬ ಆಧಾರ ಇಲ್ಲ. (ಇದರ ಮೂಲ ಉಲ್ಲೇಖ ಎಲ್ಲಿಯೂ ಅಲಭ್ಯ) ಆಡಳಿತ ಮತ್ತು ದಾಖಲಾತಿ ಕುರಿತು ಚನ್ನಬಸಪ್ಪನವರೇ ಹೇಳಿದ ಈ ಹೇಳಿಕೆಯನ್ನಾಧರಿಸಿದರೆ ೧೮೬೪ರಲ್ಲಿ ನಾರ್ಮಲ್ ಸ್ಕೂಲಿಗೆ ಮುಖ್ಯಸ್ಥರಾಗಿ ಬಂದಿದ್ದರೆಂಬುದು ಸ್ಪಷ್ಟವಾಗುತ್ತದೆ. ಆದರೆ ೧೯೫೬ರಿಂದ ೧೯೬೪ರವರೆಗೆ ಯಾರಿದ್ದರು? ಎಂಬುದಕ್ಕೆ ಎಲ್ಲಿಯೂ ದಾಖಲೆಗಳು ಲಭ್ಯವಿಲ್ಲ. ಗಮನ ಸೆಳೆಯುವವಿಷಯವೆಂದರೆ 'ನಾರ್ಮಲ್ ಸ್ಕೂಲಿ'ಗೂ 'ಪ್ರಿನ್ಸಿಪಾಲ್' ಎನ್ನುವ ವೃತ್ತಿನಾಮ ಇತ್ತೇ? ಎಂಬುದು. ನಮ್ಮ ಇವತ್ತಿನ ಪರಿಪಾಠದಂತೆ ಕಾಲೇಜುಗಳಿಗೆ 'ಪ್ರಿನ್ಸಿಪಾಲ್'ಎನ್ನುವ ವೃತ್ತಿನಾಮ ಇರುವುದು ಸಹಜ. ಅದೇನೆ ಇರಲಿ ಚನ್ನಬಸಪ್ಪನವರ ಹೆಸರಿನೊಂದಿಗೆ ಈ ವೃತ್ತಿನಾಮ ಯಾವ ಲೇಖನ ಅಥವಾ ನೋಟಿಸು ಇತ್ಯಾದಿಗಳಿಗೆ ಇರುವುದು ಕಾಣುವುದಿಲ್ಲ. ೧೮೬೪, ಅವರು ಮುಖ್ಯಸ್ಥರಾಗಿದ್ದ ಆ ಅವಧಿಯಲ್ಲಿ 'ಜ್ಞಾನ ಬೋಧಕ' ಪತ್ರಿಕೆ ಆರಂಭವಾಗಿತ್ತಾದರೂ ಅವೀಗ ದುರ್ಲಭ. ಮಠಪತ್ರಿಕೆ ಎಪ್ರೀಲ್ ೧೮೬೩ ಮಠ ಪತ್ರಿಕೆ ಆರಂಭವಾದ ವರ್ಷ. ಚನ್ನಬಸಪ್ಪ ಡೆಪ್ಯೂಟಿಯಾದದ್ದು ೧೯೬೩ರ ಮೇ ನಂತರದ ಅವಧಿಯಲ್ಲಿ. ಪುಸ್ತಕ ೧, ಸಂಚಿಕೆ ೨, ಬೆಳಗಾವ– ತಾರೀಖು ೧ಮೇ, ೧೮೬೩ರ ಪುಟ ೫೨ರಿಂದ ೫೮ರಲ್ಲಿ "(*If Studying and Teaching)* ವಿದ್ಯಾಭ್ಯಾಸ ಮಾಡುವದನು ಮತ್ತು ಮಾಡಿಸುವುದನು ಕುರಿತು–" ಎಂಬ ಲೇಖನದ ಕೆಳಗೆ ಪ್ರಿನ್ಸಿಪಾಲರ ವೃತ್ತಿನಾಮವೇ ಇದೆ ಆದರೆ ಪ್ರಿನ್ಸಿಪಾಲರ ಹೆಸರಿಲ್ಲ:



ಈ ಅವಧಿಯಲ್ಲಿದ್ದ ಪ್ರಿನ್ಸಿಪಾಲರು ಯಾರೆಂದು ತಿಳಿಯಲು ದಾಖಲೆಗಳಾವುವೂ ಇಲ್ಲವಾದರೂ ವೆಂಕಟರಂಗೋ ಅವರಿಗಿಂತ ಮೊದಲಿದ್ದವರೆಂದರೆ ಚನ್ನಬಸಪ್ಪನವರು. ಅಲ್ಲದೆ ಇವರ ಹೊರತಾಗಿ ಮತ್ಯಾರಾದರೂ ಇದ್ದರೆನ್ನುವುದಕ್ಕೂ ಆಧಾರವಿಲ್ಲ. ೧೮೫೬ ರಿಂದ ೧೮೬೪ರವರೆಗೆ ಯಾರು ಈ ನಾರ್ಮಲ್ ಕ್ಲಾಸ್ ಮತ್ತು ಸ್ಕೂಲಿನ ಮುಖ್ಯಸ್ಥರಿದ್ದರು ಎಂಬುದು ಮತ್ತು ಧಾರವಾಡದ ಯಾವ ಶಾಲೆಯ ಭಾಗವಾಗಿ ನಾರ್ಮಲ್ ಕ್ಲಾಸ್ ಆರಂಭವಾಯಿತು? ಸ್ಥಳ ಯಾವುದು? ಎನ್ನುವುದರ ದಾಖಲೆ ಕಾಲಗರ್ಭದಲ್ಲಿ ಹೂತುಹೋಗಿದೆ. ಹಾಗಾಗಿ ೧೯೬೪ರಿಂದ

ಚನ್ನಬಸಪ್ಪನವರೇ ಹೆಡ್ ಮಾಸ್ತರರು ಎನ್ನುವ ಸಂಭವನೀಯತೆಯೇ ಅಧಿಕವಾಗುತ್ತದೆ; ಮತ್ತು ಅವರೇ ಪ್ರಥಮ ಮುಖ್ಯಸ್ಥರು ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಪುಣೆಯ ಭಾರತ ಇತಿಹಾಸ ಸಂಶೋಧನ ಮಂಡಳದಲ್ಲಿರುವ ೧೮೮೪ರ ಒಂದು ಗ್ಯಾಝೆಟಿಯರ್ ನಲ್ಲಿ ೧೮೫೫-೫೬ರಲ್ಲಿ ಧಾರವಾಡದಲ್ಲಿ ಒಂದು ಟ್ರೇನಿಂಗ ಕಾಲೇಜ ಮತ್ತು ೯ ಜನ ವಿದ್ಯಾರ್ಥಿಗಳಿದ್ದ ಮಾಹಿತಿ ಕೋಷ್ಟಕ ಲಭಿಸುತ್ತದೆ.

…, two Parsis, and one a Native Christian. … Hindus, sixty-six or 4·19


The following tables, prepared from special returns furnished by the Educational Department, show in detail the number of schools and pupils, the school fees, and the cost to Government:

Dhárwár School Return, 1855-56, 1865-66, and 1882-83.


Class.	Schools.			Pupils. Hindus.		
	1855-56.	1865-66.	1882-83.	1855-56.	1865-66.	1882-83.
Government.						
Training College...	1	...	1	9	...	94
High School	...	...	1	...	...	104
Anglo-vernacular Schools ...	1	1	10	50	90	431
Vernacular Schools	12	48	341	1235	3845	25,470
Industrial School	...	...	1	...	...	84
Police and Jail Schools... ...	...	...	2	...	...	80
Aided.						
English	...	...	2	...	...	70
Vernacular	...	...	13	...	...	339
Inspected.						
English	...	...	2	...	...	97
Vernacular	...	...	10	...	...	1252
Total ...	14	49	392	1294	3935	28,001

(GAZETTEER of the BOMBAY PRESIDENCY, VOLUME- XXII, DHARWAR -1884)[೧೨] ಇದು ೧೮೫೬ರಲ್ಲಿ ಕಾಲೇಜಿನ ಆರಂಭದ ಪರಿಕಲ್ಪನೆ ಮಾಡಿಕೊಡುತ್ತದೆ.


ವೆಂಕಟರಂಗೋ ಕಟ್ಟಿಯವರು ಪ್ರಿನ್ಸಿಪಾಲರಾಗುವ ಹೊತ್ತಿಗೆ ಮಠಪತ್ರಿಕೆ ಆರಂಭವಾಗಿತ್ತು. 'ಮಠಪತ್ರಿಕೆ ಪುಸ್ತಕ-೨ ಸಂಚಿಕೆ-೪, ಬೆಳಗಾವಿ ಅಗಷ್ಟ-೧೮೬೬ ಇಸವಿ' ಪುಟ ಸಂಖ್ಯೆ ೧೦೭ ಮತ್ತು ೧೦೮ ರಲ್ಲಿ ಮಾಡಿದ ಒಂದು 'ಇಸ್ತಿಹಾರನಾಮೆ (Notification)ಯ ಕೆಳಗೆ ಇರುವ ಅವರ ಅದೇ ಹೆಸರು ಮತ್ತು ವೃತ್ತಿನಾಮ ಇಂತಿದೆ:



ಇದರೊಂದಿಗೆ 'ಮಠಪತ್ರಿಕೆ ಪುಸ್ತಕ-೨ ಸಂಚಿಕೆ-೧೦, ಬೆಳಗಾವಿ ಮಾಹೆ ಫೆಬುವರಿ-೧೮೬೭' ಪುಟ ಸಂಖ್ಯೆ ೨೯೬ ರಿಂದ ೩೦೦ ರಲ್ಲಿ ಇರುವ ಒಂದು 'ಪ್ರಕಟಣೆ [(ಮೆ.ಇ.ಇ. ದೊರೆಗಳವರ ಅಪ್ಪಣೆಯಿಂದ)' ಮಾಡಿದ ಶಾರೀರಿಕ ಶಿಕ್ಷಣ ಮತ್ತು ಕಸರತ್ತು ಕುರಿತಾಗಿ ಮಿಸ್ ಮೇರಿ ಕಾರ್ಪೆಂಟರರವರ ಅಭಿಪ್ರಾಯದ ಅನುವಾದವನ್ನು ಮತ್ತು ಅಲೆಗ್ಸಾಂಡರ್ ಗ್ರ್ಯಾಂಟ್, ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್ಸಟ್ರಕ್ಷನ್ ಹಾಗೂ ಡಬ್ಲು.ಎ. ರಸೆಲ್. ಎಜ್ಯುಕೇಷನ್ ಇನ್ಸಪೆಕ್ಟರ್, ದಕ್ಷಿಣ ಭಾಗ ಇವರ ಮುಚ್ಚಳಿಕೆ ಪತ್ರಗಳೊಂದಿಗಿರುವ ಪ್ರಕಟಣೆಯ] ಕೊನೆಗೆ ಹೆಸರು ಮತ್ತು ಮತ್ತೊಂದು ರೀತಿಯ ವೃತ್ತಿನಾಮವಿದೆ:



'ನಾರ್ಮಲ್ ಸ್ಕೂಲ' 'ಟ್ರೆನಿಂಗ ಸ್ಕೂಲ' ಎರಡೂ ಒಂದೇ ತರಬೇತಿ ಶಾಲೆಗಿರುವ ಹೆಸರುಗಳು; ಜೊತೆಗೆ ನಾರ್ಮಲ್ ಶಾಲೆ ಅಥವಾ ಟ್ರೇನಿಂಗ್ ಶಾಲೆಯ ಮುಖ್ಯಸ್ಥರನ್ನು ಹೆಡ್ ಮಾಸ್ತರ ಇಲ್ಲವೆ ಪ್ರಿನ್ಸಿಪಾಲ್ ಎಂದು ಎರಡೂ ವೃತ್ತಿನಾಮಗಳಿಂದ ಕರೆಯುವ ವಾಡಿಕೆ ಇದ್ದದು ಖಚಿತವಾಯಿತಷ್ಟೇ. ಹಾಗೀರುವಾಗ 'ಪ್ರಿನ್ಸಿಪಾಲ್' ಅಥವಾ 'ಹೆಡಮಾಸ್ತರ' ಎಂಬ ಇದೇ ವೃತ್ತಿನಾಮ ಮೊದಲೂ ಕೂಡ ಇದ್ದೇ ಇತ್ತು ಎಂಬುದು ಕೂಡ ಖಚಿತವೇ. ವೆಂಕಟರಂಗೋ ಅವರು ಮೊದಲು 'ಎಡಿಟರ್' ಆಗಿದ್ದವರು, ಚನ್ನಬಸಪ್ಪನವರ ತರುವಾಯ 'ಪ್ರಿನ್ಸಿಪಾಲ್' ಎನ್ನುವ ಅಧಿಕಾರವನ್ನು ವಹಿಸಿಕೊಂಡವರು. ಆದ್ದರಿಂದ 'ಹೆಡ್ ಮಾಸ್ತರ' ಅಥವಾ 'ಪ್ರಿನ್ಸಿಪಾಲ್' ವೃತ್ತಿನಾಮದಲ್ಲಿ ಚನ್ನಬಸಪ್ಪನವರು ಇದ್ದಿರುವುದು ಖಚಿತವಾಗುತ್ತದೆ. ಆದರೆ ಯಾವ ದಿನಾಂಕದಿಂದ ಎಂಬುದೇ ಯಕ್ಷಪ್ರಶ್ನೆ. ಅವರೇ ಉಲ್ಲೇಖಿಸಿದಂತೆ **'ನಾನು ೧೮೬೪ರ ಜಾನೇವರಿ ತಿಂಗಳ ೨೧ರಂದು ಇಲ್ಲಿ ಹಾಜರ ಆದಾಗ ೧೨ ಮತ್ತು ೧೪ ಜನ ವಿದ್ಯಾರ್ಥಿಗಳ ಎರಡು ವರ್ಗಗಳಿದ್ದವು......'**ಎಂಬ, ಹೇಳಿಕೆಯ ಮೆರೆಗೆ ಇವರು ೧೮೬೪ರಲ್ಲಿ ನಾರ್ಮಲ್ ಸ್ಕೂಲಿಗೆ ಹಾಜರಾದರೆಂಬ ನಿರ್ಧಾರಕ್ಕೆ ಬರಬೇಕಾಗುತ್ತದೆ. ಅಲ್ಲದೇ ೧೯೬೫ ಮತ್ತು ೧೯೬೬ರಲ್ಲಿ ಬೆಳಗಾವಿ ಭಾಗದಲ್ಲಿದ್ದ ಶಾಲೆಗಳ ಮತ್ತು ನಾರ್ಮಲ್ ಶಾಲೆಯ ಚಿತ್ರಣ ಸ್ಪಷ್ಟವಾಗಿ ಈ ಮುಂದಿನ ದಾಖಲೆಯಿಂದ ಗೋಚರಿಸುತ್ತದೆ ಮತ್ತು ಚನ್ನಬಸಪ್ಪನವರ ಮೇಲಿನ ಹೇಳಿಕೆಗೆ ಪುಷ್ಟಿಯೂ ದೊರೆಯುತ್ತದೆ.



ಶಾಲೆಗಳೂ, ವಿದ್ಯಾರ್ಥಿಗಳೂ
ಕಳೆದ ೨ ವರ್ಷಗಳಲ್ಲಿ

	ಸನ್ ೧೮೬೩।೬೪		ಸನ್ ೧೮೬೪।೬೫	
	ಶಾ	ವಿದ್ಯಾ	ಶಾಂ	ವಿಂ
ಇಂಗ್ರಜಿ	೪	೭೪೬	೪	೩೫೭
ದೇಶಭಾಷೆಯ	೧೨೩	೯೫೭೪	೧೬೩	೧೨೩೭೫
ನಾರ್ಮಲಶಾಲೆ	೧	೩೯	೧	೪೭

[೧೩](ಮಠಪತ್ರಿಕೆಯ ಪುಸ್ತಕ೨ ಸಂಚಿಕೆ೧ ಬೆಳಗಾವ, ಮಾಹೆ ಮೇ೧೮೬೬೦, ಪುಟ ೧೩)

ಬೆಳಗಾವಿಗೆ ಸ್ಥಳಾಂತರ:

ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರ ಸ್ಟೇಶನ (ಮುಖ್ಯಸ್ಥಳ) ಬೆಳಗಾವಿ ಎನ್ನುವ ಮುಖ್ಯ ಕಾರಣಕ್ಕೆ ೧೮೬೦ರಲ್ಲಿ ಬೆಳಗಾವಿಗೆ ಸ್ಥಳಾಂತರಿಸಲ್ಪಟ್ಟಿತು. ಆದರೆ ಯಾವ ಸ್ಥಳಕ್ಕೆ ಎನ್ನುವುದು ಎಲ್ಲಿಯೂ ದಾಖಲಾಗಿಲ್ಲ. ಆದಾಗ್ಯೂ "೧೮೭೦ರಲ್ಲಿ ಕಾಲೇಜಕ್ಕೆ ಜೋಡಿಸಲ್ಪಟ್ಟ ಪ್ರಾಕ್ಟಿಸಿಂಗ ಸ್ಕೂಲಿನ ಮೇಲ್ವಿಚಾರಣೆಗಾಗಿ ಮತ್ತೊಬ್ಬ ಶಿಕ್ಷಕನನ್ನು ನೇಮಿಸಿದರು. ಮುಂದೆ ಕೆಲವು ದಿವಸಗಳಲ್ಲಿ ತಾಲೀಮ ಹಾಗೂ ಡ್ರಾಯಿಂಗ ಈ ವಿಷಯಗಳನ್ನು ಕಲಿಸುವದರ ಸಲುವಾಗಿ ಬೇರೆ ಶಿಕ್ಷಕರು ನೇಮಿಸಲ್ಪಟ್ಟರು. **ಇಲ್ಲಿಯವರೆಗೆ ಕಿಲ್ಲೇದಲ್ಲಿದ್ದ ಕಾಲೇಜು ಊರೊಳಗಿನ ಒಂದು ಇಮಾರತಿಗೆ ಸ್ಥಳಾಂತರಿಸಲ್ಪಟ್ಟಿತು. ಶಿಕ್ಷಕರ ಸಂಖ್ಯೆ ಹೆಚ್ಚಾದುದರಿಂದಲೂ, ಕಾಲೇಜಕ್ಕೆ ಊರೊಳಗೆ ಇಮಾರತಿ ಸಿಕ್ಕದ್ದರಿಂದಲೂ ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ ಹೆಚ್ಚು ಅನುಕೂಲವಾಯಿತು"**[೧೪] ಎಂಬ ಹೇಳಿಕೆಯಲ್ಲಿ ಕಾಲೇಜು ೧೮೭೦ರವರೆಗೆ ಬೆಳಗಾವಿ ಕಿಲ್ಲೆದಲ್ಲಿತ್ತೆಂಬುದು ಮತ್ತು ನಂತರ ಅದು ಬೆಳಗಾವಿ ನಗರದೊಳಗಿನ ಒಂದು(?) ಕಟ್ಟಡಕ್ಕೆ ಸ್ಥಳಾಂತರವಾಯಿತೆಂಬುದು ಸ್ಪಷ್ಟವಾಗುತ್ತದೆ. ಮುಂದೆ ೧೮೭೧ ಮತ್ತು ನಂತರದ ಅವಧಿಯಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಬೋಧಿಸಲೆಂದು ಒಬ್ಬ ಉರ್ದು ಶಿಕ್ಷಕನನ್ನು ನೇಮಿಸಿದ್ದರಿಂದ ಉರ್ದು ಮಕ್ಕಳಿಗೆ ಹೆಚ್ಚಿನ ಶಿಕ್ಷಣಕ್ಕಾಗಿ ಅವಕಾಶ ಲಭಿಸಿತು. ಅಲ್ಲದೆ ಇದೇ ಹೊತ್ತಿನಲ್ಲಿ ಕಾಲೇಜಿನಿಂದ ಎರಡು ರಾತ್ರಿ ಶಾಲೆಗಳನ್ನು ನಡೆಸಲ್ಪಡುತ್ತಿದ್ದವು.(ಅದೇ)

೧೮೬೧ನೆಯ ಜನೇವರಿ ೭ ರಿಂದ ವರ್ಗಗಳು ಆರಂಭವಾದವು. ಧಾರವಾಡದಲ್ಲಿದ್ದಾಗ ೧೦ ವಿದ್ಯಾರ್ಥಿಗಳಿಂದ ಆರಂಭವಾಗಿ, ಅದು ೨೦ ಕ್ಕೇರಿತ್ತು. ೧೮೬೧ರಲ್ಲಿ ಬೆಳಗಾವಿಗೆ ಸ್ಥಳಾಂತರಿಸಿದಾಗ ವಿದ್ಯಾರ್ಥಿಗಳ ಸಂಖ್ಯೆ ೧೨ ಕ್ಕೆ ಇಳಿಯಿತು. ಆಗ ಈಗಾಗಲೇ ಕೊಡುತ್ತಿದ್ದ ೩ ರೂಪಾಯಿ ವಿದ್ಯಾರ್ಥಿವೇತನವನ್ನು ೫ ರೂಪಾಯಿಗಳಿಗೆ ಹೆಚ್ಚಿಸಲಾಯಿತು. ಹೀಗೆ ೧೨ಕ್ಕೆ

ಇಳಿಯಲ್ಪಟ್ಟ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ ಶಿಕ್ಷಕರಾಗಿ ಕೆಲಸ ಮಾಡುವವರಿಗೂ ನಾರ್ಮಲ್ ಸ್ಕೂಲಿನಲ್ಲಿ ಪ್ರವೇಶ ದೊರೆಯುವುದೆಂದು ಪ್ರಸಿದ್ಧಮಾಡಿದರು. ಇನ್ಸಪೆಕ್ಟರ್ ಮತ್ತು ಡೆಪ್ಯೂಟಿ ಇನ್ಸಪೆಕ್ಟರ್‌ರೂ ಹಳ್ಳಿಹಳ್ಳಿಗಳಲ್ಲಿ ಪ್ರವಾಸ ಮಾಡುವಾಗ ಯೋಗ್ಯಕಂಡ ಲಿಂಗಾಯತ ಅಭ್ಯರ್ಥಿಗಳನ್ನು ವಿದ್ಯಾರ್ಥಿವೇತನ, ಊಟ, ವಸತಿ ಕಲ್ಪಿಸುವ ಸೌಲಭ್ಯಗಳನ್ನರುಹಿ ಕಾಲೇಜಿಗೆ ಕಳುಹಿಸತೊಡಗಿದರು. ಇದು ಒಬ್ಬ ಸರಕಾರಿ ನೌಕರನ ಖಾಸಗಿ ಪ್ರಯತ್ನವಾಗಿತ್ತು. ಸಮುದಾಯ ಪಕ್ಷಪಾತವೆನಿಸಿದರೂ ಶಿಕ್ಷಣಾಭಿವೃದ್ಧಿಯ ಕಾರ್ಯವೂ ಆಗಿತ್ತು. ೧೮೬೩ರಲ್ಲಿ ನಾರ್ಮಲ್ ಸ್ಕೂಲಿನಲ್ಲಿ ಕಲಿಯುವ ಅವಧಿ ಎರಡು ವರ್ಷಗಳಿಗೇರಿ, ಎರಡು ವರ್ಗಗಳಾದವು. ಒಂದನೆಯ ವರ್ಗದಲ್ಲಿ ೬ತಿಂಗಳ ಅಭ್ಯಾಸ ಮುಗಿಯಿಸಿದವರು ಹಳ್ಳಿಗಳಿಗೆ ಶಿಕ್ಷಕರಾಗಿ ಹೋಗುತ್ತಿದ್ದರು. ಎರಡನೆಯ ವರ್ಗದಲ್ಲಿ ಪ್ರತಿಭಾವಂತ, ಕುಶಲಮತಿ ಮಕ್ಕಳು ೧೮ ತಿಂಗಳವರೆಗಿದ್ದು ಗಣಿತ, ವಿಜ್ಞಾನ, ಇತಿಹಾಸ, ಭೂಗೋಲ, ಸಂಸ್ಕೃತ ಅಧ್ಯಯನ ಮಾಡಬೇಕಾಗುತ್ತಿತ್ತು. ಇಂಥವರು ದೊಡ್ಡದೊಡ್ಡ ಊರುಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಲು ತೆರಳಬೇಕಾಗುತ್ತಿತ್ತು. ಕ್ರಮೇಣ ಮೂರು ವರ್ಗಗಳಾದವು. ಶಿಕ್ಷಕರಾಗಿ ಸೇವೆ ಸಲ್ಲಿಸಲು ಬಯಸುವವರು ಶಿಕ್ಷಣ ಪದ್ಧತಿಯನ್ನು ಕಲಿಯಬೇಕಾಗುತ್ತಿತ್ತು'. ಎಂಬ ವಿಷಯಗಳೂ ತಿಳಿದು ಬರುತ್ತವೆ.

'ಪತ್ರಿಕೆ' ಆರಂಭ:

೧೮೬೧ರಲ್ಲಿ 'ಕನ್ನಡ ಜ್ಞಾನಬೋಧಕ' ಎಂಬ ಹೆಸರಿನಿಂದ ಶಿಕ್ಷಕರಿಗಾಗಿಯೇ ಆರಂಭಿಸಲಾದ ಪತ್ರಿಕೆ ಕೆಲವು ನಿಲುಗಡೆಗಳಿಂದಾಗಿ, ಏಪ್ರೀಲ್ ೧೮೬೫ರಲ್ಲಿ 'ಮಠಪತ್ರಿಕೆ'ಯಾಗಿ ಆರಂಭವಾಯಿತು. ಮಠ(ಶಾಲೆ)ಗಳಿಗೋಸ್ಕರವಾಗಿಯೇ ತಿಂಗಳಿಗೊಂದಾವೃತ್ತಿಯಂತೆ (ಮಾಸಿಕ) 'ಮಠಪತ್ರಿಕೆ'ಯನ್ನು ಛಾಪಿಸಬೇಕೆಂದು ಮೆಹರಬಾನ ಲಿಟಲ ಸಾಹೇಬ ಬಹದ್ದೂರ ಎಜ್ಯುಕೆಶನಲ್ ಇನ್ಸಪೆಕ್ಟರ್ ಇವರು ಮೆಹರಬಾನ ಹರ್ವಡ್ ಸಾಹೇಬ ಬಹದ್ದೂರ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸಟ್ರಕ್ಷನ್ ಇವರಿಗೆ ಬರೆದು ಅನುಮತಿ ಕೇಳಿದ್ದರು. ಈ ಸೊಗಸಾಲೋಚನೆಯನ್ನು ಮೆಚ್ಚಿ ಅನುಮತಿ ನೀಡಿದ್ದರಿಂದ ಏಪ್ರೀಲ್ ತಿಂಗಳಲ್ಲಿ 'ಮಠಪತ್ರಿಕೆ' ಪ್ರಕಟಣೆ ಆರಂಭವಾಯಿತು.[*೨]

'ಡೆಪ್ಯೂಟಿ ಇನ್ಸಪೆಕ್ಟರ್ ಆಗಿ ಶ್ರೀ ಚನ್ನಬಸಪ್ಪ ಧಾರವಾಡ'

ಮುಂಬಯಿಯ ಎಲ್ಫಿನ್ಸ್ಟನ್ ಕಾಲೇಜಿನಲ್ಲಿರುವ ಮಹಾರಾಷ್ಟ್ರದ ಪತ್ರಾಗಾರ ಇಲಾಖೆಯಲ್ಲಿ, ಅಫೀಲಿಯೇಶನ್ ಕಡತಗಳ ನೋಂದಣಿಪಟ್ಟಿ ಇರುವ ರಜಿಸ್ಟರನ ಪುಟ ೧೭೬, ಅನುಕ್ರಮ.ಸಂಖ್ಯೆ-

---

*೨ ವಿವರಗಳಿಗಾಗಿ ಅಧ್ಯಾಯ ೫ನ್ನು ನೋಡಿರಿ.

೧೩ ರಲ್ಲಿ[೧೫] "1861-79E.D. compilation list no 1 and 2" - Appontments-Appointment of Chennabasappa Basalingappa Dharwadkar as D.E.I Belgaum sub division" ಎಂದು ಹಸ್ತಾಕ್ಷರದಿಂದ ಬರೆದ ವಿಷಯ, ಇದು ಚನ್ನಬಸಪ್ಪನವರು ಡೆಪ್ಯೂಟಿಯಾಗಿ ನೇಮಕಾತಿಯಾದ ಬಗೆಗಿನ ವಿಷಯವನ್ನೊಳಗೊಂಡ ಕಡತವಾಗಿದ್ದು, ಅದರ ಮುಂದೆ (destroyed) ಎಂದು ಕೆಂಪು ಮಸಿಯಿಂದ ಬರೆಯಲಾಗಿದೆ. ಅಂದರೆ ಅದು ಹಾಳಾಗಿದೆ. ಆದರೆ ಮಠ ಪತ್ರಿಕೆ ಇದಕ್ಕೆ ಅಧಿಕೃತ ದಾಖಲೆ ಒದಗಿಸುತ್ತದೆ. ಮೂರು ದಾಖಲೆಗಳ ಪ್ರಕಾರ ಡೆಪ್ಯೂಟಿ ಇನ್ಸಪೆಕ್ಟರ್ ಆಗಿ ಶ್ರೀ ಚನ್ನಬಸಪ್ಪ ಧಾರವಾಡ ಅವರು ಅಧಿಕಾರ ವಹಿಸಿಕೊಂಡರು. ಆ ಮೂರು ದಾಖಲೆಗಳೇಂದರೆ: **ಒಂದು: ೧೮೬೫ರ ಎಪ್ರೀಲ್** (ಪ್ರಥಮ ಸಂಚಿಕೆ) ಪುಸ್ತಕ ೧, ಸಂ-೧ರ ಪುಟ ೧೨ ರಲ್ಲಿ 'ಇಸ್ತಿಯಾರನಾಮೆ' ಕೆಳಗೆ ಅದನ್ನು ಪ್ರಕಟಿಸಿದವರು "ಈ. ಎಚ್ಚ. ಲಿಟಲ ಎಜ್ಯಕೇಶನಲ ಇನಸ್‌ಪೆಕ್ಟರ್ ಪ್ರಾಂತ ಕರ್ನಾಟಕ, **೧೩ನೇ ಮೇ ೧೮೬೫ನೆ** ಇಸವಿ" ಎಂದಿದೆ. **ಎರಡು:** 'ಮಠಪತ್ರಿಕೆ ಪುಸ್ತಕ ೧,ಸಂಚಿಕೆ ೧೩ ಬೆಳಗಾವ. ಮಾಹೆ ಅಪ್ರೇಲ **೧೮೬೬**' ರಲ್ಲಿ ಪ್ರಕಟಗೊಂಡ ಪುಟ ೯ರಿಂದ ೧೯ ರವರೆಗಿರುವ (*Education in the southern Division in the year 1865/66*)'ಸಂನ ೧೮೬೫/೬೬ನೇ ವರ್ಷದಲ್ಲಿ ಈ ದಕ್ಷಿಣಭಾಗದಲ್ಲಿ ನಡೆದ ವಿದ್ಯಾಭಿವೃದ್ಧಿಯ ಮುಖ್ಯ ಸಂಗತಿಗಳು' ಎಂಬ ವರದಿ/ಲೇಖನದಲ್ಲಿ (ವರದಿಗಾರರ ಹೆಸರಿಲ್ಲ) "ಈ ದಕ್ಷಿಣ ಭಾಗದಲ್ಲಿ ಬೆಳಗಾವಿ, ಧಾರವಾಡ, ಕಲಾದಗಿ, ಕಾನಡಾ ಈ ಪ್ರಕಾರ ನಾಲ್ಕು ಜಿಲ್ಲೆಗಳುಂಟು. ಮೆಹರಬಾನ ರಸೆಲ ದೊರೆಗಳವರು **ಮೇ ತಿಂಗಳಲ್ಲಿ** ಈಗ ಈ ಜಿಲ್ಲೆಯ ಫಸ್ಟಅಶಿಸ್ಟಾಂಟ ಕಲೆಕಟರರಾದ ಲಿಟಲ ದೊರೆಗಳವರಿಂದ ಚಾರ್ಜ ತೆಗೆದುಕೊಂಡರು." ಎಂಬ ಉಲ್ಲೇಖವಿದೆ. **ಮೂರು:೧ ಜೂನ್**, ೧೮೬೫ರ ಪುಸ್ತಕ ೧, ಸಂಚಿಕೆ ೩ ರ 'ಇಸ್ತಿಯಾರನಾಮೆ'ಯ ಕೆಳಗೆ ಅದನ್ನು ಪ್ರಕಟಿಸಿದವರು 'ಡಬ್ಲ್ಯು.ಎ.ರಸೆಲ್, ಇ.ಇ. ದಕ್ಷಿಣಭಾಗ, ಮುಕ್ಕಾಂ ಬೆಳಗಾವ, **ತಾರೀಖು ೩೦ನೆ ಮೇ ಸಂನ-೧೮೬೫** ಇಸವಿ' ಎಂಬ ಹೆಸರು ಮತ್ತು ವೃತ್ತಿನಾಮ ಇದೆ. ಅಂದರೆ ೧೩ ಮೇ ೧೮೬೫ಕ್ಕೆ ಲಿಟಲ್ ಇದ್ದರು ೩೦ ಮೇ ೧೮೬೫ ರಷ್ಟೊತ್ತಿಗೆ ರಸೆಲ್ ಬಂದಿದ್ದರು. ಹಾಗಾಗಿ ೧೮೬೫ರ ಮೇ ತಿಂಗಳ ೧೪ ರಿಂದ ೩೦ರೊಳಗಿನ ಆ ೧೫ ದಿನಗಳ ಅವಧಿಯಲ್ಲಿ ರಸೆಲ್ ಅವರು ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ಬಂದುದು ಸ್ಪಷ್ಟ. ಅವರು ಬಂದ ಮೇಲೆ ಚನ್ನಬಸಪ್ಪನವರನ್ನು 'ಡೆಪ್ಯೂಟಿ' ಎಂದು ನೇಮಿಸಿದರು ಎಂಬ ವಿಚಾರವೂ ಇದೇ 'ಮಠಪತ್ರಿಕೆ ಪುಸ್ತಕ ೨, ಸಂಚಿಕೆ೧ ಬೆಳಗಾವ. ಮಾಹೆ ಮೇ ೧೮೬೬'* ³ ರಲ್ಲಿ ಪ್ರಕಟಗೊಂಡ ಪುಟ ೯ರಿಂದ ೧೯ರವರೆಗಿನ (*Education in the southern Division in the year 1865/66*)'ಸಂನ ೧೮೬೫/೬೬ನೇ ವರ್ಷದಲ್ಲಿ ಈ ದಕ್ಷಿಣಭಾಗದಲ್ಲಿ ನಡೆದ ವಿದ್ಯಾಭಿವೃದ್ಧಿಯ ಮುಖ್ಯ ಸಂಗತಿಗಳು'ಎಂಬ ವರದಿ/ಲೇಖನದ ಪುಟ

---

*೩-ಮಠಪತ್ರಿಕೆಯ ಪುಸ್ತಕ೨ ಸಂಚಿಕೆ ೧ ಬೆಳಗಾವ, ಮಾಹೆ ಮೇ ೧೮೬೬ರ ಆರಂಭದ ೧ ಮತ್ತು ೨ ನೆಯ ಪುಟಗಳು ಇಲ್ಲ.

೧೧ರಲ್ಲಿರುವ, ಈ ಮುಂದೆ ಹೇಳಲಾದ ಸ್ವಾರಸ್ಯಮಯ ವಿಚಾರದಿಂದ ಖಚಿತಗೊಳ್ಳುತ್ತದೆ. "......ದೇಶ ಭಾಷೆಯ ಶಾಲೆಗಳಲ್ಲಿ ವಿದ್ಯಾಭ್ಯಾಸವು- ರಸೆಲದೊರೆಗಳು ಬಂದಂದಿನಿಂದ ಮಹಾರಾಷ್ಟ್ರ ಗುಜರಾತ ಪ್ರಾಂತಗಳಲ್ಲಿ ಆಯಾದೇಶ ಭಾಷೆಗಳು ಹ್ಯಾಗೆ ಅಭಿವೃದ್ಧಿಯಾಗಿರುತ್ತವೇಯೋ, ಅದೇ ಮೇರಿಗೆ ಈ ಭಾಗದಲ್ಲಿ ಕರ್ಣಾಟಕಭಾಷೆ ಯಾಗಬೇಕೆಂಬದಾಗಿ ಅವರು ಬಹುಯತ್ನ ಪಡುತ್ತಿದ್ದಾರೆ. ಈ ಉದ್ದೇಶವು ಕೈಗೂಡಬೇಕಾಗಿ ಅವರು ಮಾಡಿದ ಉಪಾಯಗಳು ಯೇನೇಂದರೆ ರಾವಸಾಹೇಬ ಮಹಾದೇವ ವಾಸುದೇವ ಬರ್ವೆ ಇವರು ಘನತೆಯುಳ್ಳವರಾಗಿ ಈ ಜಿಲ್ಲೆಯ ಡಿಪುಟೀಕಲೆಕ್ಟರರ ಕೆಲಸಕ್ಕೆ ನೇಮಿಸಲ್ಪಟ್ಟದ್ದರಿಂದ ಅವರ ಸ್ಥಳದಲ್ಲಿ ಈ ಜಿಲ್ಲೆಯ ಡಿಪುಟಇನಸ್ಪೆಕ್ಟರ ಕೆಲಸಕ್ಕೆ ಚನಬಸಪ್ಪಣ್ಣನವರ ಯೋಜನೆಯಾಯಿತು. ಇವರು ಮೂಲತಃ ಧಾರವಾಡದವರಾಗಿ ಜಾತಿಯಿಂದ ಲಿಂಗವಂತರಾದ್ದರಿಂದ ಇವರು ಕನ್ನಡಭಾಷೆಯ ಪೂರ್ಣ ಅಭಿಮಾನಿಗಳಾಗಿರುತ್ತಾರೆಂದು ನಾವು ಹೇಳುವ ಪ್ರಯೋಜನವಿಲ್ಲ."* ೪ **ಇದರಿಂದ ೧೮೬೫ರಲ್ಲಿ ಮೇ ತಿಂಗಳ ನಂತರದ ಅವಧಿಯಲ್ಲಿ 'ಡೆಪ್ಯೂಟಿ ಎಜ್ಯುಕೆಷನಲ್ ಇನ್ಸಪೆಕ್ಟರ್'ರೆಂದು ನಿಯೋಜನೆಗೊಂಡಿರುವುದು ಸ್ಪಷ್ಟವಾಗುತ್ತದೆ.** ಮಠ ಪತ್ರಿಕೆಯ ಪುಸ್ತಕ ೧ ಸಂಚಿಕೆ ೧೧ ಬೆಳಗಾವ-ಫೆಬ್ರೂಆರಿ ೧೮೬೬ ಪುಟ ೨೬೦, ಈ ದಾಖಲೆಯ ಪ್ರಕಾರ 'ತಾ. ೧೬ನೆ ಮಾಹೆ ಜನವರಿ ಸಂನ೧೮೬೬ ಯ್ಸಿಸವಿ' ಯಂದು ಶ್ರೀ ಚನ್ನಬಸಪ್ಪ ಧಾರವಾಡ ಡೆಪ್ಯೂಟಿ ಇನಸಪೆಕ್ಟರ ಬೆಳಗಾಂವ. ಎಂದು ಸಹಿ ಮಾಡಿರುವುದು 'ಡೆಪ್ಯೂಟಿ ಎಜ್ಯುಕೆಷನಲ್ ಇನ್ಸಪೆಕ್ಟರ್' ಆದ ಮೇಲಿನ ಲಿಖಿತ ದಾಖಲೆಯಾಗಿದೆ ಮತ್ತು ಅಧಿಕೃತ ದಾಖಲೆಯೂ ಆಗಿದೆ. (ಇದಲ್ಲದೆ ಈ ಉಲ್ಲೇಖದಿಂದ ಇನ್ನೂ ಹಲವಾರು ವಿಷಯಗಳು ತಿಳಿದು ಬರುತ್ತವೆ: ಅವೆಂದರೆ ೧-ಲಿಂಗವಂತರೇ ಕನ್ನಡದ ಪೋಷಕರೂ ಮತ್ತು ರಕ್ಷಕರೂ ಆಗಿದ್ದರು. ೨-ಸಮಾಜದ ಮುಂಚುಣಿಯಲ್ಲಿದ್ದ ಲಿಂಗವಂತರು ಮಾತ್ರ ಕನ್ನಡದ ಕಾಳಜಿ ಇದ್ದವರಾಗಿದ್ದರು. ೩-ಸಮಾಜದ ಮುಂಚುಣಿಯಲ್ಲಿ ಮತ್ತು ಪರದೆಯ ಮುಂದೆ ಇದ್ದವರ ಪ್ರಸ್ತಾಪ ಮಾತ್ರ ಕಾಣುತ್ತಿರುವುದು. ಈ ಮೂರು ವಿಚಾರಗಳನ್ನು ಇದೇ ಅಧ್ಯಾಯದ ೩.೩ ರಲ್ಲಿ ವಿಶ್ಲೇಷಿಸಲಾಗಿದೆ). ಇಲಾಖೆಯ, ಟ್ರೇನಿಂಗ ಕಾಲೇಜಿನ ಶಿಕ್ಷಕರ ಪರೀಕ್ಷೆಗಳ ಮತ್ತು ನೇಮಣೂಕಿಗಳ ಪ್ರಕಟಣೆ ಮುಂತಾದುವೆಲ್ಲ ಡೆಪ್ಯೂಟಿ ಇನ್ಸಪೆಕ್ಟರರ ಜವಾಬ್ದಾರಿಯಾಗಿತ್ತಾದ್ದರಿಂದ ಟ್ರೇನಿಂಗ ಕಾಲೇಜು ಮತ್ತು ಪತ್ರಿಕೆಯೊಡನೆ ಡೆಪ್ಯೂಟಿಯವರ ಸಂಪರ್ಕ ಇದ್ದೇ ಇತ್ತು. ಆಗ ಪತ್ರಿಕೆ ಇಲಾಖೆಯ ಪತ್ರಿಕೆಯಾಗಿ ಪ್ರಕಟಗೊಳ್ಳುತ್ತಿತ್ತು.

೧೮೬೮ರಲ್ಲಿ ಚಿತ್ರದುರ್ಗದ ಮಹಾಲಿಂಗಸ್ವಾಮಿಗಳು ಗಣಾರಾಧನೆಗೆ ಮಾಡುತ್ತಿದ್ದ ವೆಚ್ಚವನ್ನು ನೋಡಿ, ಆಶ್ಚರ್ಯಚಕಿತರಾದ ಚನ್ನಬಸಪ್ಪ ಕುಪಿತಗೊಂಡು, ಸ್ವಾಮಿಜಿ ದರ್ಶನಕ್ಕೆ ಹೋಗದಿರುವುದು, ಅಲ್ಲಿಯ ಮುಖಂಡರಿಂದ ಸ್ವಾಮೀಜಿ ಬರಹೇಳಿದಾಗ, ತನ್ನ ಮಾತು ನಡೆಸಿ

*೪ ನೋಡಿ ಅನುಬಂಧ ೧

ಕೊಡಬೇಕು ಎಂಬ ಶರತ್ತಿನ ಮೇಲೆ ಭೇಟಿಯಾಗಿ, ಲಿಂಗಾಯತ ವಿದ್ಯಾರ್ಥಿಗಳಿಗೆ ಬೋರ್ಡಿಂಗ ಸ್ಥಾಪಿಸಲು ಪ್ರತಿ ತಿಂಗಳೂ ೩೦೦.ರೂ ಕೊಡುವ ಕರಾರಾಗುತ್ತದೆ. ಅದೇ ರೀತಿಯಲ್ಲಿ ಲಿಂಗಾಯತ ಮಕ್ಕಳ ಬೋರ್ಡಿಂಗ ಕೆಲಕಾಲ ಚನ್ನಾಗಿಯೇ ನಡೆಯುತ್ತದೆ. ಸ್ವಾಮಿಜಿಯವರಿಂದ ಬರುತ್ತಿದ್ದ ಹಣ ನಡುನಡುವೆ ನಿಂತು ಹೋದಾಗ, ಚನ್ನಬಸಪ್ಪ ತಮ್ಮ ಸ್ವಂತ ಹಣದಿಂದ ಬೋರ್ಡಿಂಗ ನಡೆಸುತ್ತಾರೆ. ಮುಂದೆ ಸ್ವಾಮಿಜಿ ನಿಧನರಾದ ಮೇಲೆ ಬರುವ ಹಣ ಸಂಪೂರ್ಣ ನಿಂತು ಹೋಗುತ್ತದೆ. ಆಗ ಚನ್ನಬಸಪ್ಪನವರು ತಮ್ಮ ಹೆಂಡತಿಯ ಮೈಮೇಲಿನ ವಡವೆಗಳನ್ನು ಮಾರಿ, ಸಾಲಸೋಲ ಮಾಡಿ ಬೋರ್ಡಿಂಗ ನಡೆಸಿದ್ದು ಒಂದು ಮಹಾತ್ಯಾಗವೇ ಆಗಿದೆ. ಬಹುಶಃ ಅಂದೂ ಕೂಡ ಸಮಾಜದ ಏಳ್ಗೆ ಹೀಗೆ ಜಾತಿ ಮೂಲವಾಗಿಯೇ ಸಾಗಿತ್ತೇನೊ? ಹೀಗೇ ತೆರೆದುಕೊಂಡು ಭವ್ಯವಾಗಿಯೇ ಜಾತ್ಯಾಭಿಮಾನ ನಡೆದಿದೆ.

ಜೂನ ೧೮೮೯ರ ಪು ೫ ಸಂಚಿಕೆ ೩ರ ಪುಟ ೯೪ರಲ್ಲಿ **'ಚನ್ನಬಸಪ್ಪ ಡಿ.ಬಿ. ಡಿ.ಎ.ಇ. ಧಾರವಾಡ'** ಎಂದು ಮೊದಲ ಬಾರಿಗೆ ಕಣ್ಣಿಗೆ ಬೀಳುತ್ತದೆ. ಜೂನ್ ೧೮೮೯ಕ್ಕೆ ಚನ್ನಬಸಪ್ಪನವರು ಧಾರವಾಡಕ್ಕೆ ವರ್ಗಾವಣೆ ಹೊಂದಿ ಬಂದುಬಿಟ್ಟಿದ್ದಾರೆ.


ಟ್ರೇನಿಂಗ್ ಕಾಲೇಜಿನ ಎರಡನೆಯ ಮುಖ್ಯಸ್ಥ/ಹೆಡ್ ಮಾಸ್ತರರಾಗಿ ವೆಂಕಟರಂಗೋ ಕಟ್ಟಿ:

ಮೊದಲಿನ ಕೆಲವು ಆವೃತ್ತಿಗಳಲ್ಲಿ ಕೇವಲ 'ಎಡಿಟರ್' ಎಂದಿದೆ. (ಮಠಪತ್ರಿಕೆ ಪುಸ್ತಕ೨ ಸಂಚಿಕೆ ೧*೫ ಬೆಳಗಾವ, ಮಾಹೆ **ಮೇ ೧೮೬೬ರ** ಪುಟ ೩೨ರಲ್ಲಿ ಇರುವ 'ನೋಟಿಸಿ'ನ ಕೊನೆಗೆ 'ವೆಂಕಟರಂಗೋ ಎಡಿಟರ್' ಎಂದಿದೆ). ಮೇಲೆ ತಿಳಿಸಿದಂತೆ 'ಮಠಪತ್ರಿಕೆ ಪುಸ್ತಕ–೨ ಸಂಚಿಕೆ–೪, ಬೆಳಗಾವಿ **ಅಗಷ್ಟ–೧೮೬೬'** ಮತ್ತು 'ಮಠಪತ್ರಿಕೆ ಪುಸ್ತಕ–೨ ಸಂಚಿಕೆ–೧೦, ಬೆಳಗಾವಿ ಮಾಹೆ **ಫೆಬ್ರುವರಿ–೧೮೬೭'** ಈ ಎರಡೂ ಉಲ್ಲೇಖಗಳ ಪ್ರಕಾರ ವೆಂಕಟರಂಗೋ ಕಟ್ಟಿಯವರು ಅಗಷ್ಟ–೧೮೬೬ರಲ್ಲಿ ಪ್ರಿನ್ಸಿಪಾಲರಾಗಿ ಅಧಿಕಾರ ವಹಿಸಿಕೊಂಡದ್ದು ದೃಢಪಡುತ್ತದೆ. ಮಠಪತ್ರಿಕೆಗಳ ಈ ದಾಖಲೆಗಳ ಪ್ರಕಾರ ಜನೇವರಿ ೧೮೬೬ರಲ್ಲಿ ಚನ್ನಬಸಪ್ಪ ಡೆಪ್ಯೂಟಿ ಆಗಿದ್ದಾರೆ; ಅಗಷ್ಟ ೧೮೬೬ರಲ್ಲಿ ವೆಂಕಟರಂಗೋ ಪ್ರಿನ್ಸಿಪಾಲರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಎಲ್ಲಿಯೂ ಆಕ್ಟಿಂಗ್ ಪ್ರಿನ್ಸಿಪಾಲರೆಂದು ಅಥವಾ ಫಾರ್ ಸಹಿ ಮಾಡಿದ್ದಾಗಲಿ ಇಲ್ಲ. ಆದ್ದರಿಂದ ಇವರು ಪ್ರಿನ್ಸಿಪಾಲರಾದ ಅವಧಿ ನಿಖರವಾಗಿದೆ. (ಆದರೆ ಆರಂಭದಲ್ಲಿ ಪತ್ರಿಕೆಯ ಸಂಪಾದಕರಾದ ಬಗೆಗೆ ನಿಶ್ಚಿತ ದಾಖಲೆ ಸಿಗುವುದಿಲ್ಲವಾದರೂ ೧೮೬೧ರಲ್ಲಿ 'ಜ್ಞಾನ ಬೋಧಕ'ದ ಸಂಪಾದಕರಾಗಿದ್ದು, ಪತ್ರಿಕಾ ಸಂಪಾದನಾ ಚತುರತೆ ಮತ್ತು ಪ್ರಬುದ್ಧತೆ ಹೊಂದಿದ ಕಟ್ಟಿಯವರು ನಂತರದ ಅವಧಿಯಲ್ಲಿ ಸಂಪಾದಕತ್ವವನ್ನು ಸಮರ್ಥವಾಗಿ ನಿರ್ವಹಿಸಿದ್ದರು ಎನ್ನುವುದರಲ್ಲಿ ಸಂದೇಹವೇ ಇಲ್ಲ.)

---

*೫ ಮಠಪತ್ರಿಕೆಯ ಪುಸ್ತಕ೨ ಸಂಚಿಕೆ೧ ಬೆಳಗಾವ, ಮಾಹೆ ಮೇ೧೮೬೬ರ ಆರಂಭದ ೧ ಮತ್ತು ೨ನೆಯ ಪುಟಗಳು ಇಲ್ಲ.

ಮುಂದೆ ಮರುವರ್ಷ ಸಪಟಂಬರ ೧೮೬೭ರಲ್ಲಿ ಭುಜಂಗರಾಯರು ಆಕ್ಟಿಂಗ್ ಪ್ರಿನ್ಸಿಪಾಲರಾಗಿದ್ದಕ್ಕೆ ಮಠಪತ್ರಿಕೆ ಪು ೩ ಸಂಪುಟ ೬ ಬೆಳಗಾವಿ ಸಪಟಂಬರ ೧೮೬೭ ಪುಟ ೨೦೪-೨೦೬ ರಲ್ಲಿ 'ಪ್ರಸಿದ್ಧ ಪತ್ರಿಕೆ' ಎಂಬ ಶೀರೋನಾಮೆ ಇರುವ ಪ್ರಕಟಣೆಯಡಿಯಲ್ಲಿ ಮತ್ತು ಅಲ್ಲಿಯೇ ಪುಟ ೨೦೮ರಲ್ಲಿ ಒಂದೇ ರೀತಿಯಲ್ಲಿರುವ ೨ ದಾಖಲೆಗಳು ಸಿಗುತ್ತವೆ:




ಆದ್ದರಿಂದ ಸಪ್ಟಂಬರ್ ೧೮೬೭ರಷ್ಟೊತ್ತಿಗೆ ವೆಂಕಟರಂಗೋ ಅವರು ಪ್ರಿನ್ಸಿಪಾಲ್ ಹುದ್ದೆಯಿಂದ ಬದಲಾವಣೆಗೊಂಡಿರುವುದು ಮತ್ತು ಭುಜಂಗರಾಯರು ಪ್ರಭಾರ ಪ್ರಿನ್ಸಿಪಾಲ್ ರಾಗಿರುವುದು ಸ್ಪಷ್ಟವಾಗುತ್ತದೆ. ಈ ಬದಲಾವಣೆ ಕುರಿತು ಪತ್ರಿಕೆಯಲ್ಲಿ ಯಾವುದೇ ಹೇಳಿಕೆ ಇಲ್ಲ. ಅಗಷ್ಟ ೧೮೬೬ರಿಂದ ಸಪ್ಟಂಬರ್ ೧೮೬೭ರವರೆಗೆ ವೆಂಕಟ ರಂಗೋ ಕಟ್ಟಿಯವರು ಎರಡನೆಯ ಪ್ರಿನ್ಸಿಪಾಲರಾಗಿದ್ದದ್ದು ಖಚಿತಗೊಳ್ಳುತ್ತದೆ. ಮತ್ತೇ ಮಠಪತ್ರಿಕೆ ಪ ೫, ಸಂಪುಟ ೬ ಬೆಳಗಾವೀ ಸಪಟಂಬರ ೧೮೬೯ ಪುಟ ೧೯ಲ್ಲಿ ಕೆಲವು ಸ್ಕೂಲ ಮಾಸ್ತರರಿಗೆ ತಂತಮ್ಮ ಗ್ರಾಮ ವರ್ಣನೆ ರೀಪೋರ್ಟಗಳನ್ನು ಕಳುಹಿಸದಿರುವ ಕುರಿತು ಹೇಳುವ ನೋಟಿಸಿಗೆ **'ತಾ॥ ೧ ಮಾಹೆ ಸಪ್ಟೆಂಬರ ಸನ್ ೧೮೬೯ನೇ ಇಸವಿ. ಸಹಿ ವೆಂಕಟರಂಗೋ ಕನ್ನಡ ಟ್ರಾನ್ಸ್‌ಲೇಟರ್'** ಎಂದಿದೆ. ಈ ಅವಧಿಯಲ್ಲಿಯೂ ಕಟ್ಟಿಯವರು ಟ್ರಾನ್ಸಲೇಟರರಾಗಿ, ಭುಜಂಗರಾಯರು ಪ್ರಭಾರ/ಆಕ್ಟಿಂಗ್ ಪ್ರಿನ್ಸಿಪಾಲ್‌ರಾಗಿಯೇ ಮುಂದುವರೆದಿದ್ದಿದೆ. ೧೮೭೭ ಮಾರ್ಚನಲ್ಲಿ ವೆಂಕಟ ರಂಗೋ ಅವರು ಮುಂಬಯಿಯ ಒರಿಎಂಟಲ್ ಟ್ರಾನ್ಸಲೇಟರ್‌ರ ಕಚೇರಿಯಲ್ಲಿ ಸಧ್ಯಕ್ಕೆ ಕಾಯದೆಯ ಭಾಷಾಂತರಕಾರರಾಗಿ ನೇಮಿಸಲ್ಪಡುತ್ತಾರೆ. ಇವರ ಚಾರ್ಜ ಮತ್ತೇ ಚಿಂತಾಮಣಿ ಪೇಠಕರ ಇವರಿಗೆ ಆಕ್ಟಿಂಗ್ ಚಾರ್ಜ ನೀಡಲಾಗುತ್ತದೆ.[೧೬]

ಇಲ್ಲಿ ಆರಂಭಿಕ ದಾಖಲೆಗಳ ವಿಷಯದಲ್ಲಿ ಗಮನಿಸಬೇಕಾದ ಒಂದು ಸಂಗತಿ ಎಂದರೆ ಆಳರಸರೇ ಆಡಳಿತಕಾರರು ಮತ್ತು ಉನ್ನತ ಅಧಿಕಾರಿವರ್ಗದವರು ಆಗಿದ್ದಾಗ, ಇಲಾಖೆಯ ಪ್ರತಿಯೊಂದು ಸಂಗತಿಗಳು ಅವರ ವಿವೇಚನೆಗೆ ಹಾಯ್ದೇ ಬರುತ್ತಿರುವಾಗ ಸಂಬಂಧಿಸಿದ ಎಲ್ಲ ಸುತ್ತೋಲೆ, ಜಾಹಿರಾತು, ಇಲಾಖೆಯ ಸರ್ವ ಮಾಹಿತಿಗಳು ಅವರ ಹೆಸರಿನಿಂದಲೇ ಅಚ್ಚಾಗಬೇಕು; ಮತ್ತು ಪತ್ರಿಕೆಯ ಕಾರ್ಯಭಾರವೂ ಅವರದ್ದೇ; ಆರಂಭದಲ್ಲಿ ಇಲಾಖೆಯ ಎಲ್ಲವೂ ಅವರ ಅಧಿನಾಯಕತ್ವದ ಹೆಸರಿನಲ್ಲಿಯೇ ಪ್ರಕಟಗೊಳ್ಳಬೇಕು; ಪ್ರಕಟಗೊಂಡಿವೆ. ಪ್ರಿನ್ಸಿಪಾಲರಾಗಲಿ, ಪತ್ರಿಕೆಯ ಸಂಪಾದಕರಾಗಲಿ ಅಲ್ಲಿ ಗೌಣ. ಕ್ರಮೇಣ, ಚನ್ನಬಸಪ್ಪನವರು ಡೆಪ್ಯೂಟಿ ಆದ ನಂತರ ಅವಧಿಯಲ್ಲಿ ನೌಕರರ, ಸೇವಕರ, ಬರೆದವರ ಹೆಸರಲ್ಲಿ ಇಲಾಖೆಯ, ಪತ್ರಿಕೆಯ ಸುತ್ತೋಲೆಗಳು, ಲೇಖನಗಳು ಇತ್ಯಾದಿ ಪ್ರಕಟಗೊಂಡಿವೆ. ಆರಂಭದಲ್ಲಿ ಆಗಿಹೋದ ಮಹನೀಯರ ಮತ್ತವರ ಬರಹಗಳ ಕುರಿತು

ಆದಿಮ ಮಾಹಿತಿ ಸಮಯಾಗರ್ಭದಲ್ಲಿ ನಿಗೂಢವಾಗಿದೆ. ಸಿಕ್ಕ ದಾಖಲೆಗಳಿಂದಲೇ ಸಂಶೋಧನೆ ಹೆಚ್ಚಿಸಿಕೊಳ್ಳಬೇಕಾಗಿದೆ.

'ನಾರ್ಮಲ್ ಶಾಲೆ' 'ಟ್ರೇನಿಂಗ್ ಕಾಲೇಜ್' ಆದದ್ದು:

ಮಠಪತ್ರಿಕೆಯ ಪುಸ್ತಕ ೨, ಸಂಚಿಕೆ ೬, ಅಕ್ಟೋಬರ್-೧೮೬೬, ಪುಟ ೧೭೩ರ "(*Educational Intelligence*)ವಿದ್ಯ ಖಾತೆಯ ವರ್ತಮಾನಗಳು"ಎಂಬ ಶೀರ್ಷಿಕೆಯಡಿ ಬೇರೆ ಬೇರೆಯದ್ದೇ ಏಳು ಪ್ರಕಟಣೆಗಳಲ್ಲಿರುವ ನಾಲ್ಕನೆಯ ಚಿಕ್ಕ ಪ್ರಕಟಣೆ ಈ ಮುಂದಿನಂತಿದೆ :




ಈ ಆಧಾರದಿಂದ ಸಪ್ಟೆಂಬರ್ ೧೮೬೬ ರಿಂದ 'ನಾರ್ಮಲ್ ಶಾಲೆ'ಗೆ 'ಟ್ರೇನಿಂಗ್ ಕಾಲೇಜ್' ಎಂಬ ಹಾಗೂ ಅದರ ಮುಖ್ಯಸ್ಥರಿಗೆ(ಈ ಮೊದಲೂ ಕೆಲವು ಕಡೆಗೆ ಪ್ರಿನ್ಸಿಪಾಲ ಎಂಬ ಉಲ್ಲೇಖಗಳು ಇವೆಯಾದರೂ) ಅಧಿಕೃತವಾಗಿ 'ಪ್ರಿನ್ಸಿಪಾಲ' ಎಂಬ ವೃತ್ತಿನಾಮಗಳು ಮೆಹರಬಾನ ಇನಸ್ಪೆಕ್ಟರ್ ದೊರೆಯಾದ ರಸೆಲ್ ತಮ್ಮ ಮೇಲಾಧಿಕಾರಿಗಳ ಸಮ್ಮತಿ ಪಡೆದು ವಿಧಿತಗೊಳಿಸಿದರು ಎಂಬುದು ಖಚಿತಗೊಳ್ಳುತ್ತದೆ.

ಟ್ರೇನಿಂಗ ಕಾಲೇಜಿನ ಪರಿಪಾಠ:

೧೮೬೭ರ ಮೇ ತಿಂಗಳಿನಲ್ಲಿ ಇಲಾಖೆಯಿಂದ ಘೋಷಣೆಯಾದಂತೆ ಅನ್‌ಟ್ರೇನ್ಡ ಮಾಸ್ತರರು ಕಡ್ಡಾಯವಾಗಿ ಟ್ರೇನಿಂಗ್ ಕಾಲೇಜಿನ ಪರೀಕ್ಷೆಯಲ್ಲಿ ಪಾಸಾಗಲಿಕ್ಕೇ ಬೇಕಿತ್ತು. "ಟ್ರೇನಿಂಗ್ ಸಾಲೆಯಲ್ಲಿ ವಿದ್ಯಾರ್ಥಿತ್ವ ಪಡೆದು ಅಭ್ಯಾಸ ಮಾಡಬಯಸುವ ಉಮೇದುವಾರರು ಟ್ರೇನಿಂಗ್ ಸಾಲೆಯಲ್ಲಿ ಅಥವಾ ಅವರು ಯಾವ ಜಿಲ್ಲೆಯವರಾಗಿರುವರೋ ಆ ಜಿಲ್ಲೆಯ ಡಪ್ಯೂಟಿ ಇನ್ಸಪೆಕ್ಟರ ಕಡೆಗೆ ಹೋಗಿ- ಕನ್ನಡದಲ್ಲಿಯೂ ಮರಾಠಿಯಲ್ಲಿಯೂ ಓದೋಣ ಮತ್ತು (ಅದರ) ಅರ್ಥ ಹೇಳಿಕೊಡೋಣ; ಬರಿಯೋಣ- ಹೇಳಿದ ವಿಷಯ ಕನ್ನಡದಲ್ಲಿಯೂ ಮತ್ತು ಮರಾಠಿಯಲ್ಲಿಯೂ

ಬರಿಯೋಣ; ಗಣಿತ–ಸಮಪ್ರಮಾಣ, ವ್ಯವಹಾರಿ ಮತ್ತು ದಶಾಂಶ ಅಪೂರ್ಣಾಂಕ; ಈ ವಿಷಯಗಳಲ್ಲಿ ಪರೀಕ್ಷೆ ಬರೆಯಬೇಕು ಮತ್ತು ಆ ಉಮೇದುವಾರರು ೧೮ ವರ್ಷ ವಯಸ್ಸಿಗಿಂತ ಚಿಕ್ಕವರಾಗಿರಬಾರದು ಮತ್ತು ದೃಢಕಾಯರಾಗಿರಬೇಕು. ಸರಕಾರಿ ಸಾಲಿಗಳಲ್ಲಿಯ ಚಿಕ್ಕ ಬೋಧಕರು, ಅಸಿಸ್ಟಂಟರೂ ಬಂದರೆ ವಾಸಿ. ಈ ರೀತಿಯ ನಿರ್ಬಂಧದ ಮೇಲೆ ಅವರಿಂದ ಕರಾರು ಬರೆಯಿಸಿಕೊಂಡು, ತಿಂಗಳಿಗಾರು ರೂಪಾಯಿ ಸಂಬಳ ನೀಡುವ ವ್ಯವಸ್ಥೆಯನ್ನೂ ಮಾಡುತ್ತಿದ್ದರು. ಪ್ರವೇಶ ಪಡೆದಾಗಿನಿಂದ ಈ ನಿಯಮ ಅನ್ವಯವಾಗುತ್ತಿತ್ತು. ವಿದ್ಯಾರ್ಥಿಗಳು ತಮ್ಮ ಮಟ್ಟಮೀರಿ ಅಧ್ಯಯನ ಮಾಡಬೇಕಾಗುತ್ತಿತ್ತು. ಯಾರು ಪರೀಕ್ಷೆಯಲ್ಲಿ ಪಾಸಾಗದೇ ಉಳಿಯುವರೋ ಅಂಥವರು ಕಳುಹಿಸಿದಲ್ಲಿ ಹೋಗಿ ಒಂದು ವರ್ಷ ಕಾರ್ಯ ನಡೆಸಬೇಕಿತ್ತು. ಅವರಿಗೆ ಆದಷ್ಟೂ ಊರಿಗೆ ಸಮೀಪವಿರುವಂತೆ ಅನುಕೂಲ ಕಲ್ಪಿಸಲಾಗುತ್ತಿತ್ತು. ಎರಡನೆಯ ಮತ್ತು ಮೂರನೆಯ ಷಣ್ಮಾಸಿಕ ಪರೀಕ್ಷೆ ಆದ ಬಳಿಕ ವಿದ್ಯಾರ್ಥಿಗಳೂ, ಪಂತರುಗಳಿದ್ದವರೂ ಎಲ್ಲರೂ ಪಂತರುಗಳಾಗಿ ಸೇವೆ ತೆಗೆದುಕೊಳ್ಳಲಾಗುತ್ತಿತ್ತು. ಅಂಥವರಿಗೆ ಸಂಬಳದಲ್ಲಿ ಹೆಚ್ಚಳವಾಗುತ್ತಿತ್ತು".[೧೭] ಎಜ್ಯುಕೆಷನ್ ಇನ್ಸಪೆಕ್ಟರ್ ರಸೆಲ್‌ರ ಈ ಪ್ರಕಟಣೆ ಹೀಗೆಂದು ೧೮೬೫–೬೬ರ ಸಾಲಿನಲ್ಲಿ ಇದ್ದಿರುವ ಪ್ರವೇಶ ಪರೀಕ್ಷೆ ಮತ್ತು ನಿಬಂಧನೆಗಳ ಕುರಿತು ತಿಳಿಸುವುದರ ಜೊತೆಗೆ ಕನ್ನಡದೊಡನೆ ಮರಾಠಿಯೂ ಕಲಿತಿರಬೇಕಾದ ಮತ್ತು ಕಲಿಯಲೇಬೇಕಾದಂಥ ವಿಷಯವಾಗಿತ್ತು ಎಂಬುದು ನಿಚ್ಚಳವಾಗುತ್ತದೆ. ಇದಕ್ಕೆ ಪುಷ್ಠಿ ಕೊಡುವ ಇನ್ನೊಂದು ಮುಖ್ಯ ಅಂಶ ಈ ಮುಂದಿನ ಪ್ರಕಟಣೆಯಲ್ಲಿಯೂ ಇದೆ. ಈ ಒಂದೇ ಪ್ರಕಟಣೆ ಹಲವಾರು ವಿಷಯಗಳನ್ನು ಬಿಚ್ಚಿಡುವುದರಿಂದ ಅದರ ಪ್ರತಿಯನ್ನು ಇಲ್ಲಿ ನೇರವಾಗಿ ಅಚ್ಚಿಸುವುದೇ ಸೂಕ್ತ ಎನಿಸುತ್ತದೆ


Normal Students ready for employment

(೩೧೦)

ಹೆಸರು	[illegible]	ಜಾತಿ	ವಯಸ್ಸು	[illegible]	[illegible]	ಷರಾ
೧ ಕೃಷ್ಣಾಜೀ [illegible]	[illegible]	ಬ್ರಾಹ್ಮಣ	೧೫	೧೫೩	೧	ಮುಖ್ಯಮಾಸ್ತರ [illegible]
೨ [illegible]	ನರಗುಂದ	"	"	೧೪೭	"	"
೩ ಕೃಷ್ಣಾಜೀ [illegible]	ಶಿರಸಂಗಿ	"	೧೭	೧೩೧	"	"
೪ [illegible]	ಬೆಳಗಾವಿ	"	"	೧೩೦	"	ಅಕ್ಷರ, [illegible]
೫ [illegible]	[illegible]	"	"	೨೫	೨	"
೬ [illegible]	[illegible]	"	೧೫	೧೧೯	೧	ಮುಖ್ಯಮಾಸ್ತರ [illegible]
೭ [illegible]	[illegible]	ಲಿಂಗಾಯತ	"	೧೧೭	"	"

(೩೧೧)

೮ [illegible]	[illegible]	ಲಿಂಗಾಯತ	೧೫	೧೧೧	೧	[illegible]
೧೦ [illegible]	"	"	"	೧೦೭	"	[illegible]
೧೧ [illegible]	[illegible]	ಬ್ರಾ	೧೯	೯೧	೨	"
೧೨ [illegible]	[illegible]	ಬ್ರಾ	"	[illegible]	೧	ಮುಖ್ಯಮಾಸ್ತರ
೧೩ [illegible]	ನರಗುಂದ	"	"	[illegible]	೨	[illegible]
೧೪ [illegible]	[illegible]	ಲಿಂಗಾಯತ	"	೫೫	"	"
೧೫ [illegible]	"	ಜೈನ	೧೫	೪೭	"	"
೧೬ [illegible]	"	ಮರಾಠಾ	"	೨೫	"	"

ಮೊದಲನೇ ವರ್ಗದವರ ಅಭ್ಯಾಸವು- ಕನ್ನಡ, [illegible]

(೩೧೨)

[illegible]

ಎರಡನೇ ವರ್ಗದವರ ಅಭ್ಯಾಸವು- ಕನ್ನಡ [illegible]

---

೧೮ (ಮಠಪತ್ರಿಕೆ ಪು-೧ ಸಂ ೧೧ ಫೆಬ್ರುವರಿ ೧೮೭೭, ಪುಟ ಸಂಖ್ಯೆ- ೩೧೯-೩೧೨)

ಇಲ್ಲಿ ಕೊಟ್ಟಿರುವ ವಿದ್ಯಾರ್ಥಿಗಳ ಹೆಸರು, ಊರು, ಜಾತಿ, ವಯಸ್ಸು, ಪಡೆದ ಅಂಕ, ವರ್ಗ ಮತ್ತು ಶಿಫಾರಸ್ಸುಗಳ ಸಂಪೂರ್ಣವಾದ ಮಾಹಿತಿ ಪಟ್ಟಿಯನ್ನು ನೋಡಿದಾಗ ತಿಳಿದುಬರುವ ಅಂಶಗಳೆಂದರೆ: ೧-ಒಂದನೆಯ ಮತ್ತು ಎರಡನೆಯ ತರಗತಿಗಳಲ್ಲಿರುವಾಗ ಅವರನ್ನು ಶಿಕ್ಷಕರಾಗಿ ನಿಯಮಿಸುವ ರೂಢಿ ಇದ್ದದ್ದು ದೃಢಪಡುತ್ತದೆ ೨- ಎಲ್ಲಿ ನಿಯಮಿಸಬಹುದು ೩-ಯಾವ ವೃಂದದಲ್ಲಿ ನೇಮಕ ಮಾಡಬಹುದು ೪- ಯಾವ ಯಾವ ವರ್ಗಕ್ಕೆ ಏನೇನು ಪಠ್ಯಕ್ರಮ (ಸುರುಳಿಯಾಕಾರದಲ್ಲಿ ಮಂದುವರೆಯುವ ರೀತಿ) ೫- ಜಾತಿವಾರು ಈ ಪಟ್ಟಿ ಇರುವುದರಿಂದ ಯಾವ ಯಾವ ಜಾತಿಯ ಏಷ್ಟೆಷ್ಟು ವಿದ್ಯಾರ್ಥಿಗಳಿ ದ್ದರು? ೬-ಅವರ ಊರುಗಳು ಯವ್ಯಾವು? ಎಲ್ಲದರ ಅಂಕಿಸಂಖ್ಯೆಗಳು ಸಿಗುತ್ತವೆ. ಎಲ್ಲವೂ ಸ್ಪಷ್ಟವಾಗಿ, ವಿವರವಾಗಿ ಇರುವುದು ಇಂದಿಗೂ ಮಾದರಿ ಎನ್ನವಂತಿದೆ. ಇಲ್ಲಿ ಅವಲೋಕಿಸಬೇಕಾದ ವಿಷಯವೆಂದರೆ ಮೊದಲನೆಯ ವರ್ಗಕ್ಕೆ 'ಕನ್ನಡ, ಮಹಾರಾಷ್ಟ್ರ ಓದೋಣ, ಬರೆಯೋಣ ಮತ್ತು ಎರಡೂ ವ್ಯಾಕರಣಗಳು' ಎಂಬುದು ಮರಾಠಿಯನ್ನು ೧೮೬೬ರಲ್ಲಿ ಎಲ್ಲ ಸಾಲೆಗಳಲ್ಲಿ ಕಡ್ಡಾಯವಾಗಿ ಕಲಿಸಲೇ ಬೇಕಾದ ಅನಿವಾರ್ಯತೆಯನ್ನು ಸ್ಪಷ್ಟವಾಗಿ ಹೇಳಲಾಗಿದೆ.

"ಟ್ರೇನಿಂಗ ಕಾಲೇಜದಲ್ಲಿ ವಿದ್ಯಾರ್ಥಿಗಳನ್ನು ಈಗ ೬ ತಿಂಗಳಿಗಿಂತ ಹೆಚ್ಚು ನಿಲ್ಲಗೊಡಿಸದೆ ಇದದ್ದರಿಂದ ಅವರ ಅಭ್ಯಾಸವು ಯೇನು ಆಗುವುದಿಲ್ಲ. ವಿದ್ಯಾರ್ಥಿಗಳು ಶಾಲೆಯಲ್ಲಿ ಬಂದು ಸ್ವಲ್ಪ ಅಭ್ಯಾಸಕ್ರಮ ಆರಂಭಿಸುವಷ್ಠರಲ್ಲಿಯೇ ಅವರು ಕೆಲಸಕ್ಕೆ ನೇಮಿಸಲ್ಪಡುತ್ತಾರೆ. ಇದರಿಂದ ಪ್ರಾಂತದೊಳಗಿನ ಶಾಲೆಗಳ ಸ್ಥಿತಿಯನ್ನು ಯೆಷ್ಠಮಾತ್ರವೂ ತಿದ್ದಕೊಡದ್ದಲ್ಲದೆ, ಟ್ರೇನಿಂಗಕಾಲೇಜದ ಖರ್ಚೆಲ್ಲ ನಿಷ್ಫಲವಾಗುವುದು ಎಂಬ ಸಂಗತಿಯನ್ನು ಅವರು ಲಕ್ಷಿಸುವರೆಂದು ಕೋರುತ್ತೇವೆ". ಮಠಪತ್ರಿಕೆ ಪು-೨, ಸಂ ೭ ೧೮೬೬ ಪುಟ-೨೧೫ರಲ್ಲಿ ಟ್ರೇನಿಂಗ್ ಕಾಲೇಜಿನಲ್ಲಿಯ ಪಠ್ಯಕ್ರಮದ ಕುರಿತು ಡೈರೆಕ್ಟರ್ ದೊರೆಗಳಿಗೆ ಮಾಡಿದ ಕೋರಿಕೆ ಇದು. ಈ ಕೋರಿಕೆಯ ಕೆಳಗೆ ಮರಾಠಿಯಲ್ಲೊಂದು ಸರಕ್ಯೂಲರ್ ಇದ್ದು ಅದರ ಕೆಳಗೆ ರಸೆಲ್‌ರ ಸಹಿ ಇದೆ. (ಅದಕ್ಕೆ ಮುಂದೆಲ್ಲೂ ಮೇಲಾಧಿಕಾರಿಗಳ ಪ್ರತಿಕ್ರಿಯೆ ಇಲ್ಲ) ೬ ತಿಂಗಳಿಗೆ ವಿದ್ಯಾರ್ಥಿಗಳು ಶಾಲೆಯಲ್ಲಿ ಪಠ್ಯಕ್ರಮಕ್ಕೆ ಹೊಂದಿಕೊಳ್ಳುವುದರಲ್ಲೇ ಕಳೆಯುತ್ತದೆ. ಕಲಿಕೆ ಪೂರ್ಣ ಆಗದ ಸ್ಥಿತಿಯಲ್ಲಿಯೇ ಅವರನ್ನು ಕೆಲಸಕ್ಕೆಂದು ನಿಯಮಿಸುವುದರಿಂದ ಬೌದ್ಧಿಕ ಬೆಳವಣಿಗೆ ಇರದ ಅವರಿಂದ ಶಾಲೆಗಳ ಪ್ರಗತಿಯಾಗದೆ ದ್ವಿಗುಣ ಹಾನಿಯಾಗುವುದರತ್ತ ಡೈರೆಕ್ಟರ್ ದೊರೆಗಳ ಗಮನ ಸೆಳೆಯಲಾಗಿದೆ. ಇದು ಶಿಕ್ಷಕರಿಗಿದ್ದ ವಿವೇಚನಾ ಶಕ್ತಿ ಮತ್ತು ಬದಲಾವಣೆ ಬೇಕೆಂಬ ಆಶಯವನ್ನು ಹಾಗೂ ಬೇಡಿಕೆಗೆ ಧ್ವನಿ ಎತ್ತುತ್ತಿರುವುದನ್ನು ತೋರುತ್ತದೆ.

ಶಾರೀರಿಕ ಶಿಕ್ಷಣ ಮತ್ತು ಕಸರತ್ತು ಕುರಿತಾಗಿ ಮಿಸ್ ಮೇರಿ ಕಾರ್ಪೆಂಟರರವರ ಒತ್ತಾಸೆಮೆರೆಗೆ ಪಠ್ಯಕ್ರಮದಲ್ಲಿ ಶಾರೀರಿಕ ಶಿಕ್ಷಣ ಮತ್ತು ಕಸರತ್ತು ಇವುಗಳನ್ನು ಅಳವಡಿಸಬಹುದೇ?

ಅದರ ಸಾಧಕ ಬಾಧಕಗಳೇನು? ಎಂಬುದನ್ನು ಅಲೆಗ್ಝಾಂಡರ್ ಗ್ರ್ಯಾಂಟ್, ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್ಸಟ್ರಕ್ಷನ್ ಇವರು ಡಬ್ಲು. ಎ. ರಸೆಲ್. ಎಜ್ಯುಕೇಷನ್ ಇನ್ಸಪೆಕ್ಟರ್, ದಕ್ಷಿಣ ಭಾಗ ಇವರಿಗೆ ಬರೆದು ಕೇಳಿದ್ದನ್ನು ಮರಳಿ ಡಿ.ಇ.ಯವರು (ಮೆ.ಇ.ಇ. ದೊರೆಗಳವರ ಅಪ್ಪಣೆಯಿಂದ)' ಪ್ರಕಟಣೆಯ ಮೂಲಕ ಶಿಕ್ಷಕರ ಅಭಿಪ್ರಾಯವನ್ನು ಕೇಳಿದ್ದಾರೆ.[೯] (ಮಠಪತ್ರಿಕೆ ಪುಸ್ತಕ-೨ ಸಂಚಿಕೆ-೧೦, ಬೆಳಗಾವಿ ಮಾಹೆ ಫೆಬ್ರುವರಿ-೧೮೬೭ ಪುಟ ಸಂಖ್ಯೆ ೨೯೬-೩೦೦)

ಇದನ್ನು ನೋಡಿದರೆ ಒಂದು ಹೊಸ ಪರಿಕಲ್ಪನೆಯ ಅನುಷ್ಠಾನಕ್ಕೆ ಬದಲಾವಣೆ-ಗೊಳ್ಳಬೇಕಾದ ಕ್ಷೇತ್ರದಿಂದಲೇ, ಮೂಲಬೇರಿನಿಂದಲೇ ಮಾಹಿತಿ ಪಡೆಯುತ್ತಿದ್ದದ್ದು ಸ್ಪಷ್ಟವಾಗುತ್ತದೆ. ಶಾರೀರಿಕ ಶಿಕ್ಷಣ ಮತ್ತು ಕಸರತ್ತು ಮಿಸ್ ಮೇರಿ ಕಾರ್ಪೆಂಟರರವರ ಪರಿಕಲ್ಪನೆ ಎಂಬುದು ಮತ್ತು ಇದು ವೆಂಕಟರಂಗೋ ಅವರ ಅಧಿಕಾರವಧಿಯಲ್ಲಿ ಆಗಿರುವಂಥದ್ದು.

ಮಠಪತ್ರಿಕೆ ಪು-೩, ಸಂ-೧ ಏಪ್ರೇಲ ೧೮೬೭ ಪುಟ-೨೫ ರಲಿ "*Educational Intelligence* ವಿದ್ಯಖಾತೆಯ ವರ್ತಮಾನಗಳು" ಎಂಬ ವರದಿಯಲ್ಲಿ ಏಳು ಬೇರೆ ಬೇರೆ ವರ್ತಮಾನಗಳಿವೆ:*[೬] ಇವುಗಳಲ್ಲಿ ೧, ೨, ೫, ೬ ಮತ್ತು ೭ ಇವು ಮಹತ್ವದ ವಿಷಯಗಳನ್ನರುಹುತ್ತವೆ: ೧-'ಟ್ರೇನಿಂಗ್ ಕಾಲೇಜಿಗೆಹೊಸ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲು ನಡೆದ ಪ್ರವೇಶಪರೀಕ್ಷೆಗೆ ಒಟ್ಟು ೯೦ ಉಮೇದುವಾರರು ಕುಳಿತಿದ್ದು, ಅದರಲ್ಲಿ ಅಲ್ಪವಯಸ್ಸಿನ ಮತ್ತು ಶುದ್ಧ ಬರೆಯಲು ಬರದೆ ಇದ್ದ ಕಾರಣ ೪೩ ಉಮೇದುವಾರರನ್ನು ತೆಗೆಯಲ್ಪಟ್ಟು, ಕೇವಲ ೪೭ ಉಮೇದುವಾರರ ಪರೀಕ್ಷೆ ಕೊನೆತನಕ ಆಯಿತು. ಇಲ್ಲ ಹಿಂದಿನ ಪರೀಕ್ಷೆಗೆ ಕುಳಿತ ಅಭ್ಯರ್ಥಿಗಳಿಗಿಂತ ಪ್ರತಿಭಾವಂತ ಅಭ್ಯರ್ಥಿಗಳು ಇದ್ದರೂ ಬರಹ ಶುದ್ಧ ಇಲ್ಲದಿರುವ ಬಗೆಗೆ ಅಸಮಾಧಾನ ವ್ಯಕ್ತವಾಗಿದೆ. ಇದರಿಂದ ೧೮೬೭ರಲ್ಲಿಯೂ ಟ್ರೇನಿಂಗ್ ಕಾಲೇಜಿಗೆ ಹೊಸ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವದಕ್ಕೋಸ್ಕರ ಪ್ರವೇಶ ನಡೆಯುತ್ತಿತ್ತು ಎಂಬ ವಿಷಯ ಸ್ಪಷ್ಟವಾಗುತ್ತದೆ. ಇದರೊಂದಿಗೆ ೨- "ಈ ದಕ್ಷಿಣ ಭಾಗದಲ್ಲಿ ಒಬ್ಬ ಟ್ರಾನ್ಸಲೇಟರ್‌ರನ್ನು ನೇಮಿಸುವ ಸಲುವಾಗಿ ಸರಕಾರದವರು ಮಾಹೆ ೨೦೦ ರೂಪಾಯಿ ತಲಬಿನ ಸಾಂಕ್ಶನ್ ಕೊಟ್ಟರೆಂದು ಕೇಳುತ್ತೇವೆ" ಈಗಾಗಲೇ ಟ್ರಾನ್ಸಲೇಟರ್ ಕಾರ್ಯವನ್ನು ಗಂಗಾಧರ ತುರಮರಿಯವರು ಮಾಡುತ್ತಿದ್ದರಾದರೂ ಟ್ರಾನ್ಸಲೇಶನ್‌ಗಾಗಿ ಸ್ವತಂತ್ರ ಹುದ್ದೆಯನ್ನೇ ನೀಡುವ ಈ ವಿಚಾರ ಆಗಿನ ಟ್ರಾನ್ಸಲೇಟರ್‌ರ ಅಗತ್ಯತೆಯನ್ನು ಮತ್ತು ಸರಕಾರ ಈ ವಿಷಯಕ್ಕೆ ಸ್ಪಂದಿಸಿದ್ದನ್ನು ಬಿಂಬಿಸುತ್ತದೆ. ೫- "ಬೆಳಗಾವಿಯ ಡಿ. ಇನ್ಸಪೆಕ್ಟರ್‌ರಾದ ರಾ.ರಾ. ಚನ್ನಬಸಪ್ಪನವರಿಗೆ ಧಾರವಾಡ ಜಿಲ್ಲೆಗೆ ಬದಲೀ ಆಗುವದುಂಟೆಂದು ವರ್ತಮಾನವದೆ". ಇದು ಆಗೀನ ಕಾಲದಲ್ಲಿ ಆಗುವ

---

*೬ ನೋಡಿ ಅನುಬಂಧ ೨

ವರ್ಗಾವಣೆಗಳ ಮುಮ್ಮಾಹಿತಿ ಎಲ್ಲರಿಗೂ ಸಿಗುತ್ತಿತ್ತು ಮತ್ತು ಚನ್ನಬಸಪ್ಪನವರಿಗೆ ಆಗಲಿರುವ ವರ್ಗಾವಣೆಯ ನಿಖರ ಮಾಹಿತಿಯ ದಾಖಲೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ೬-ರಾ.ರಾ. ಕನ್ನಡ ಟ್ರಾನ್ಸಲೇಟರರಾದ ಗಂಗಾಧರಯ್ಯನವರು ಮಹಾರಾಷ್ಟ್ರ 'ನವನೀತ'ದಂಥ ಒಂದು **ಕನ್ನಡ ಕವಿತಾ ಸಂಗ್ರಹ** ತಯಾರು ಮಾಡಿದ್ದಾರೆ. ಅದು ಕನ್ನಡ ಭಾಷಾ ಸುಧಾರಣೆಗೆ ಬಹು ಉಪಯುಕ್ತವಾದ್ದರಿಂದ ತೀವ್ರವಾಗಿ ಅದನ್ನು ಛಾಪಿಸಲ್ಪಡುವುದೆಂದು ಕೋರುತ್ತೇನೆ. ೭-ಬೆಳಗಾವಿ ಛಾಪ್ಖಾನೆಯವರು ಒಂದು ಮುದ್ರಣಾಲಯವನ್ನು ತೆರೆಯಲು ಸರಕಾರದಿಂದ ೨೦೦೦ ಸಾವಿರ ರೂಪಾಯಿ ಸಾಲ ಕೊಡಿಸಬೇಕಾಗಿ ಡೈರೆಕ್ಟರ್ ಗ್ರ್ಯಾಂಟವರಿಗೆ ಕೇಳಿಕೊಡಂತೆಯೇ ಅವರು ಅದಕ್ಕೆ ಒಪ್ಪಿದ್ದಾಗ್ಯೂ ಛಾಪಖಾನೆಯವರಿಗೆ ಕನ್ನಡದ ಅಚ್ಚುಗಳನ್ನು ದೊರಕಿಸಲು ವಿಶ್ವಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ ಎಂಬ ವಿಷಯಕ್ಕೆ ಖೇದ ವ್ಯಕ್ತಪಡಿಸುವ ಈ ವಿಷಯ ಇಲ್ಲಿ ಪ್ರಕಟಗೊಂಡಿರುವುದು ಆರಂಭದ ದಿನಗಳಲ್ಲಿದ್ದ ಮುದ್ರಣಾಲಯಗಳ ಕೊರತೆ ಮತ್ತು ತಾಂತ್ರಿಕ ಸಮಸ್ಯೆಯ ವಾಸ್ತವ ಚಿತ್ರಣವನ್ನು ತೋರುತ್ತದೆ.

ಈ ಮೊದಲಿನ ಡೈರೆಕ್ಟರ್‌ರಾದ ಸರ್ ಅಲೆಝ್ಸಾಂಡರ್ ಗ್ರ್ಯಾಂಟ್ ಅವರಿಗೆ ಈ ತರಬೇತಿ ಕಾಲೇಜುಗಳಲ್ಲಿ ಇಂಗ್ಲಿಷ ಅಭ್ಯಾಸವನ್ನು ಮಾಡಿಸುವುದು ಅವಶ್ಯವಾಗಿ ತೋರಿ, ಬದಲಾವಣೆ ಮಾಡಿದಂತೆಯೇ ೧೮೬೯ರಲ್ಲಿ ಆಕ್ಟಿಂಗ ಡೈರೆಕ್ಟರ್ ಆಗಿ ಬಂದ ವಾಡಿಂಗಟನ್ ಕರ್ನಲ್ ಅವರು ಟ್ರೇನಿಂಗ್ ಕಾಲೇಜಿಗೆ ಸಂಬಂಧಿಸಿದ ಕಾಯಿದೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದರು ಎಂಬುದು ಶಿಕ್ಷಣ ಇತಿಹಾಸದಿಂದ ತಿಳಿದು ಬರುತ್ತದೆ. ಇದಕ್ಕೆ ೧೮೬೯ರ ಜನೇವರಿಯಲ್ಲಿ ಪ್ರಕಟಗೊಂಡ ನಿಯಮಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಟ್ರೇನಿಂಗ ಕಾಲೇಜಿನಲ್ಲಿ ಕಲಿಯಬೇಕಾದ ವರ್ಷಗಳು, ಪಠ್ಯವಸ್ತು, ವಿಷಯಗಳು, ಯಾರು ಬರೆದ ಯಾವ ಪುಸ್ತಕ, ಎಷ್ಟು ಅಧ್ಯಾಯ/ಆಶ್ವಾಸ/ಪುಟಗಳು, ಮೂರೂ ವರ್ಷದ ಅಭ್ಯಾಸ ಕ್ರಮಗಳು, ಪರೀಕ್ಷೆಗಳು, ಅಂಕಗಳು, ಶೇಕಡಾವಾರು, ಎಷ್ಟು ಅಂಕ ಪಡೆದರೆ ಯಾವ ವರ್ಗ, ಯಾವ ವೃಂದದಲ್ಲಿ ನೇಮಕಾತಿ ಮತ್ತು ಎಷ್ಟು ಪಗಾರ ಇತ್ಯಾದಿ ಕುರಿತು ಅಮೂಲಾಗ್ರ ನಿಯಮ ನಿರೂಪಣೆಯಾಗಿ ಪುಟ ೧೩ರಿಂದ ೨೪ರವರೆಗೆ ಸುಧೀರ್ಘವಾಗಿ ಪ್ರಕಟಗೊಂಡಿರುವುದು ಕಂಡುಬರುತ್ತದೆ. ಅದನ್ನು ಸಂಪಾದಿಸಿ ಬರೆಯುವುದಕ್ಕಿಂತ ನೇರವಾಗಿ ಪ್ರಕಟಿಸುವುದೇ ಸೂಕ್ತ ಮತ್ತು ಸಮಂಜಸ ಎನಿಸುತ್ತದೆ:[೨೦]

—0—

DHARWAR TRAINING COLLEGE PROVISIONAL CODE.

ಧಾರವಾಡ ಟ್ರೇನಿಂಗ ಕಾಲೇಜದ ನಿಯಮಗಳು.

ಧಾರವಾಡ ಟ್ರೇನಿಂಗ ಕಾಲೇಜದ ವ್ಯವಸ್ಥೆಗಾಗಿ ಈ ಕೆಳ ನಿಯಮಗಳು ವಿದ್ಯಾಖಾತೆಯ ಅಧಿಕಾರಿಗಳಿಗೆ ಜನಹಿ

ಗುಪಯೋಗಕ್ಕಾಗಿ ಪ್ರಸಿದ್ಧಿಸಲ್ಪಟ್ಟಿವೆ.

ಟಿ. ಹಾರಿಂಗಟನ್, ಕರ್ನಲ್

ಅಕ್ಟಿಂಗ ಡಾಯರೆಕ್ಟರ.

ಜೂನ್, ತಾ. ೨ನೇ ಅಕ್ಟೋಬರ ಸನ್ ೧೮೭೮

ಧಾರವಾಡ ಟ್ರೇನಿಂಗ ಕಾಲೇಜಕ್ಕೆ

ಸಂಬಂಧಿಸಿದ ಪ್ರಾಂತಿಕ ನಿಯಮಗಳ ಸಂಗ್ರಹವು.

೧ ದೇಶ ಭಾಷೆಯಲ್ಲಿ ಶಿಕ್ಷಣದ ಕೆಲಸ ನಡಿಸತಕ್ಕಂಥ ಮಾಸ್ತರರನ್ನೂ ಅಸಿಸ್ಟಾಂಟ ಮಾಸ್ತರರನ್ನೂ ವಿದ್ಯೆ ಕಲಿಸಿ ಯಾರು ಮಾಡುವದಕ್ಕೋಸ್ಕರವಾಗಿ ಧಾರವಾಡದ ಟ್ರೇನಿಂ ಕಾಲೇಜವು ಇಡಲ್ಪಟ್ಟಿದೆ.

೨ ಶಿಕ್ಷಕಿಯ ಕೆಲಸಕ್ಕಾಗಿ ವಿದ್ಯೆ ಕಲಿಸಲ್ಪಡುವಂಥ ಕೆಲವು ಜನ ವಿದ್ಯಾರ್ಥಿಗಳಿಗೆ ಸಂಬಳವು ಅಥವಾ ಹೊಟ್ಟೆ ಪೋಷಕ್ಕಾಗಿ ವೇತನಾಂಶವು ಕೊಡಲ್ಪಡುವದು. ಈ ಸಂಬಳವು ಯೋಗ್ಯ ವರ್ಷದವರೆಗೆ ನಡೆಯುವದು, ಇದರಲ್ಲಿ ಮೂರು ವರ್ಗಗಳು ಮಾಡಲ್ಪಡುವವು.

೮ ರೂಪಾಯಿಯ ಸಂಬಳವು, ೩ನೇ ವರ್ಷದ ವಿದ್ಯಾರ್ಥಿಗಳಿಗಾಗಿ.

೭, ೬ ರೂಪಾಯಿಗಳ ಸಂಬಳಗಳು, ೨ನೇ ವರ್ಷದ ವಿದ್ಯಾರ್ಥಿಗಳಿಗಾಗಿ.

೬ ರೂಪಾಯಿಯ ಸಂಬಳವು, ೧ನೇ ವರ್ಷದ ವಿದ್ಯಾರ್ಥಿಗಳಿಗಾಗಿ.

ಕೆಲವರು ಮಾಫೀ ವಿದ್ಯಾರ್ಥಿಗಳು ಸಹ ತಕ್ಕೊಳ್ಳಲ್ಪಡುವರು.

೩ ಈ ಕಾಲೇಜದಲ್ಲಿ ನಡೆಯುವ ಶಿಕ್ಷಣದಲ್ಲಿ ಮೂರು ಬೇರೆ ಬೇರೆ ಕ್ರಮಗಳು ಮಾಡಲ್ಪಡುವವು. ಪ್ರತಿ ವರ್ಷ

ವರ್ಷದ ಕಡೆಯಲ್ಲಿ ಸಮಾಪ್ತಿಯ ಪರೀಕ್ಷೆಯಾಗುವದು. ಕಾಲೇಜದಲ್ಲಿ ನಿಕೃಷ್ಟ ಪಕ್ಷಕ್ಕೆ ಯೆರಡು ವರ್ಷ ನಿಂ ತಲಿತ ಹೊರ್ತು ಯಾರಿಗೂ ಮಾಸ್ತರರ ಅಥವಾ ಅಸಿಸ್ಟಾಂಟ ಮಾಸ್ತರರ ಕೆಲಸದ ಲಾಯಖಿಯು ಕೊಡಲ್ಪಡಲಿಕ್ಕಿಲ್ಲ.

೪ ಯೆರಡನೇ ಮೂರನೇ ವರ್ಷಗಳ ಕಡೆಯಲ್ಲಿ ಯಥಾ ಕ್ರಮವಾಗಿ ಶಿಕ್ಷಕಿಯ ಕೆಲಸದ ಲಾಯಖಿಯನ್ನು ಸಂಪಾದಿಸಿದಂಥ ವಿದ್ಯಾರ್ಥಿಗಳ ಹೆಸರುಗಳು ಅವರವರ ಗುಣಗಳ ಕ್ರಮದಂತೆ ಯೊಂದು ಪಟ್ಟಿಯಲ್ಲಿ ಬರಿಯಲ್ಪಡುವವು. ಆ ಹೆಸರುಗಳಲ್ಲಿ ಯೊಂದನೇ ವರ್ಗವೆಂತಲೂ ಯೆರಡನೇ ವರ್ಗವೆಂತಲೂ ಯೆರಡು ಭಾಗಗಳು ಮಾಡಲ್ಪಟ್ಟು, ಇವರ ವರ್ಗದವರಿಗೆ ಕೆಳಗೆ ಬರೆದಂತೆ ಕಾಯಿಮ ಸಂಬಳಗಳ ಹಕ್ಕು ಕೊಡುವಂಥ ಸರ್ಟೀಫಿಕೇಟುಗಳು ಕೊಡಲ್ಪಡುವವು.

ಮೂರನೇ ವರ್ಷದವರು	೧ನೇ ವರ್ಗ, ೨೫ ರುಪಾಯಿ.
	೨ನೇ ವರ್ಗ, ೨೦ ರೂಪಾಯಿ.
ಎರಡನೇ ವರ್ಷದವರು	೧ನೇ ವರ್ಗ, ೧೫ ರೂಪಾಯಿ.
	೨ನೇ ವರ್ಗ, ೧೨ ರೂಪಾಯಿ.

೬ ಪರೀಕ್ಷೆಯಲ್ಲಿ ಇಳಿದ ವಿದ್ಯಾರ್ಥಿಗಳು ಪಟ್ಟಿಯಲ್ಲಿ ಅವರವರ ಹೆಸರುಗಳ ಕ್ರಮವಿದ್ದಂತೆ ತೆರವಿದ್ದಂಥ ಮಾಸ್ತರರ ಕೆಲಸಗಳನ್ನಾಗಲಿ ಅಸಿಸ್ಟಾಂಟ ಮಾಸ್ತರರ ಕೆಲಸಗಳನ್ನಾಗಲಿ ತಮ್ಮ ಇಚ್ಛೆಯಂತೆ ಸ್ವೀಕರಿಸಬಹುದು. ಆದರೆ ಸ್ಥಳಗಳು ತೆರವಿದ್ದ ಹೊರ್ತು ಅವರಿಗೆ ಕೆಲಸ ಕೊಡಲಿಕ್ಕೆ ಈ ಖಾತೆಯ ಅಧಿಕಾರಿಗಳು ಜವಾಬದಾರರಾಗುವದಿಲ್ಲೆಂದು ಅವರು ತಿಳಿಯತಕ್ಕದ್ದು.

ಕಾಲೇಜದಲ್ಲಿ ವಿದ್ಯಾರ್ಥಿಗಳನ್ನು ತಕ್ಕೊಳ್ಳುವದು.

೭ ಪ್ರತಿವರ್ಷ ನವೆಂಬರ ತಿಂಗಳಿನಲ್ಲಿ ವಿದ್ಯಾರ್ಥಿಗಳನ್ನು ಕಾಲೇಜದಲ್ಲಿ ತಕ್ಕೊಳ್ಳುವರು. ಆದರೆ ಈ ಪೂರ್ವದಲ್ಲಿ ಗುತ್ತಿದ್ದಂತೆ ಪ್ರವೇಶ ಪರೀಕ್ಷೆಯು ಇನ್ನು ಮುಂದೆ ಆಗಲಿಕ್ಕಿಲ್ಲ. ೬ನೇ ಯತ್ತೆಯ ಮುಲಕೀ ಪರೀಕ್ಷೆಯಲ್ಲಿ ಹಿಂದಿನ ೧೮ ತಿಂಗಳುಗಳೊಳಗೆ ಇಳಿದಂಥ ಉಮೇದವಾರರಲ್ಲಿ ಯಾರಲ್ಲಿಕ್ಕೂ ಹೆಚ್ಚಿನ ಗುಣಗಳನ್ನು ಪಡೆದಂಥವರಿಗೆ ತೆರವಿದ್ದಂಥ ಸಂಬಳಸ್ಥಳಗಳು ಅವರವರ ಗುಣಗಳ ಕ್ರಮದಂತೆ ದೊರೆಯುವವು.

ಅಭ್ಯಾಸದ ಕ್ರಮಗಳು—೧ನೇ ವರ್ಷ

೮ ಮೊದಲನೇ ವರ್ಷದಲ್ಲಿ ದೇಶಭಾಷೆಯ ಶಾಲೆಗಳ ೧ನೇ ಯತ್ತೆಯಿಂದ ೬ನೇ ಯತ್ತೆಯ ವರೆಗೆ ಯಾವತ್ತು ವಿಷಯಗಳ ಪುನರಾವರ್ತನವು ಪೂರ್ಣವಾಗಿ ಮಾಡಲ್ಪಡುವದು. ಈ ವರ್ಷದ ಕಡೆಯಲ್ಲಿ ೬ನೇ ಯತ್ತೆಯಂತೆಯೂ ಕೆಳಗೆ ಬರೆದ ವಿಷಯಗಳಲ್ಲಿಯೂ ಪರೀಕ್ಷೆಯಾಗುವದು.

ಗುಣಗಳು

೧ ಸಂಸ್ಕೃತ ರೂಪಾವಳಿ, ಸಂಧಿನಿಯಮಗಳು, ಮೊದಲನೇ ಪುಸ್ತಕ ಸಂಪೂರ್ಣ....... ೫೦

೨ ಶಿಕ್ಷಣ ಪದ್ಧತಿಯ ಸಾಧಾರಣ ನಿಯಮಗಳು, ಮತ್ತೂ ಫೌಲರನ ಪುಸ್ತಕದ ಮೊದಲಿನ ೨೯ ಪುಟಗಳಲ್ಲಿ ಇರುವ ನಿಯಮಗಳು.

ಲೇಖೀ ಪರೀಕ್ಷೆ ೫೦

ಬಾಯಿಮಾತಿನ ಪರೀಕ್ಷೆ....... ....೫೦

೩ ಪದಾರ್ಥವಿಜ್ಞಾನದ ಮೂಲತತ್ವಗಳು ೬ನೇ

ಪುಸ್ತಕದಲ್ಲಿ ಇದ್ದ ಪುಟ್ಟಿಗೆ, ಮತ್ತು
ಕೇರೋಪಂತರ ಪದಾರ್ಥವಿಜ್ಞಾನದ
೬೮ ಪುಟಗಳಲ್ಲಿ ಇರುವ ವಿಷಯಗಳು........೫೦

೪ ಕಸರತ್ತು.... ....೨೫

೫ ಚಿತ್ರ ತೆಗಿಯುವ ವಿದ್ಯದ ಮೂಲತತ್ವಗಳು.... ....೫೦

೯ ದೇಶಭಾಷೆಯ ಶಾಲೆಗಳ ೧ನೇ ಯತ್ತೆಯಿಂದ ೫ನೇ ಯತ್ತೆಯ ವರೆಗೆ ಯಾವತ್ತು ವಿಷಯಗಳನ್ನು ಕಲಿಸ ತಕ್ಕಂಥ ಮಾಸ್ತರರನ್ನು ತಯಾರು ಮಾಡುವದಕ್ಕಾಗಿ ೨ನೇ ವರ್ಷದ ಅಭ್ಯಾಸ ಕ್ರಮವು ನೇಮಿಸಲ್ಪಟ್ಟಿದೆ. ಈ ವರ್ಷದ ಕಡೆಯಲ್ಲಿ ೬ನೇ ಯತ್ತೆಯ ವಿಷಯಗಳಲ್ಲದೆ ಕೆಳಗಿನ ವಿಷಯಗಳಲ್ಲಿ ಸಹ ಪರೀಕ್ಷೆಯು ತಕ್ಕೊಳ್ಳಲ್ಪಡುವದು—

ಗುಣಗಳು

೧ ಸಿದ್ಧಾಂತ, ೨ನೇ ಬುಕ್ಕು { ೬ನೇ ಯತ್ತೆಯ ೧ನೇ ಸದರಿನ ಗುಣಗಳ ವಿಭಾಗಳು—
- ಅಂಕಗಣಿತ ೬೫
- ಸಿದ್ಧಾಂತ ೫೦
- ಜಮಾಖರ್ಚು ೨೫

೨ ಸಂಸ್ಕೃತ, ವಾಲ್ಮೀಕಿ ರಾಮಾಯಣದ ೨೫೦ ಶ್ಲೋಕಗಳು, ಮತ್ತು ೨ನೇ ಪುಸ್ತಕದ (ಕನ್ನಡ ಭಾಷಾಂತರ) ಮೊದಲಿನ ೧೨ ಪಾಠಗಳು ... .೫೦

೮ ನಮೂನೆಗಳು,-ರಿಪೋರ್ಟುಗಳು, ಶಿಕ್ಷಣ ಪದ್ಧತಿ, ಫೌಲರರ ಪುಸ್ತಕದೊಳಗಿನ ನಿಯಮಗಳೆಲ್ಲ
ಲೇಖೀಪರೀಕ್ಷೆ.... ....೧೦೦
ಬಾಯಿಮಾತಿನ ಪರೀಕ್ಷೆ.... ... ...೧೦೦

೪ ಪ್ರಾಕೃತಿಕ ಭೂಗೋಲ ಮೂಲತತ್ವಗಳು, ಭುಜಂಗರಾಯರ ಪ್ರಾಕೃತಿಕ ಭೂಗೋಲದ ಮೊದಲಿನ ೨೬೨ ಪುಟಗಳಲ್ಲಿ ಇದ್ದಂತೆ.... ....೫೦

೫ ಪದಾರ್ಥವಿಜ್ಞಾನ, ಪ್ರವಾಹಿ, ವಾಯುರೂಪ ಪದಾರ್ಥಗಳ ಧರ್ಮಗಳು, ಕೇರೋಪಂತರ ಪದಾರ್ಥ ವಿಜ್ಞಾನದ ೧೦೨ನೇ ಪುಟದ ವರೆಗೆ ... .೫೦

೬ ಕನ್ನಡ ವಾಕ್ಯಗ್ರಂಥಗಳ ಹೊರತು ಜೈಮಿನಿಯೊಳಗಿನ ೧೫೦ ಪದ್ಯಗಳು ಮತ್ತು ವ್ಯಾಕರಣ.... ....೧೦೦

೭ ಚಿತ್ರವಿದ್ಯ—ಫ್ರೀಹ್ಯಾಂಡ, ಪರಸ್ಪೆಕ್ಟಿವ, ಸ್ಥಾನಗಳು ನಕಾಶಗಳು.... ....೫೦

೮ ಕಸರತ್ತು.... ....೨೫

೩ನೇ ವರ್ಷದ ಅಭ್ಯಾಸಕ್ರಮ.

೧೦ ದೇಶಭಾಷೆಯ ಶಾಲೆಗಳ ಆರೂ ಯತ್ತೆಗಳನ್ನು ದಕ್ಷತೆಯಿಂದ ಕಲಿಸತಕ್ಕಂಥ ಮಾಸ್ತರರನ್ನು ತಯಾರು ಮಾಡುವದಕ್ಕಾಗಿ ಮೂರನೇ ವರ್ಷದ ಅಭ್ಯಾಸಕ್ರಮವು ನೇಮಿಸಲ್ಪಟ್ಟಿದೆ.

ಪಡುವದು.

ಗುಣಗಳು

೧ ಗಣಿತ {
- ಅಂಕಗಣಿತ ಸಂಪೂರ್ಣ.... ....೫೦
- ಬೀಜಗಣಿತ ವರ್ಗಸಮೀಕರಣದ ವರೆಗೆ.... ....೫೦
- ಸಿದ್ಧಾಂತ ೬ ಬುಕ್ಕುಗಳು.... ೫೦

೨ ದೇಶಭಾಷೆಕವಿತೆ { ರಾಜಶೇಖರ ೨ನೇಆಶ್ವಾಸ, ಜೈಮಿನಿ ೫೦ ಶ್ಲೋಕಗಳು, ರಾಮಾಯಣ ೧೫೦ಶ್ಲೋ. } ೧೦೦

ಇದಲ್ಲದೆ ಕನ್ನಡ ವ್ಯಾಕರಣ, ಕವಿತಾ ಪದ್ಧತಿ, ನಿಬಂಧ ಬರಿಯೋಣ ಇವುಗಳಲ್ಲಿ ಪೂರ್ಣಜ್ಞಾನವಿರಬೇಕು.

೩ ಇತಿಹಾಸ—ಹಿಂದುಸ್ಥಾನದ ಇತಿಹಾಸ, ಹಿಂದುಸ್ಥಾನದಲ್ಲಿಯೂ ಅದರ ಪರದೇಶಗಳಲ್ಲಿಯೂ ನಡೆಯುವ ಕಾರಭಾರ, ರಾಜಕೀಯ ಪದ್ಧತಿಗಳ ವಿವರ.... ....೭೫

೪ ಭೂಗೋಲ— ಪ್ರಾಕೃತಿಕ, ರಾಜಕೀಯ ಭೂಗೋಲಗಳ ಸಾಧಾರಣ ಜ್ಞಾನ,— ಏಷಿಯಾಖಂಡದ ಯಾವದೊಂದು ಭಾಗದ ನಕಾಶವನ್ನು ಅಕ್ಷಾಂಶ ರೇಖಾಂಶ ಸಹಿತವಾಗಿ ಸ್ಮರಣದಿಂದ ತೆಗೆಯುವದು......೭೫

೫ ಪದಾರ್ಥ ವಿಜ್ಞಾನ, ಜ್ಯೋತಿಷದ ಮೂಲತತ್ವಗಳು— ಕೇರೋಪಂತರ ಪದಾರ್ಥವಿಜ್ಞಾನದ ಮೊದಲಿನ ೨೫೨ ಪುಟಗ

ಳಲ್ಲಿ ಇದ್ದಂತೆಯೂ, ಭುಜಂಗರಾಯರ ಪ್ರಾಕೃತಿಕ ಭೂಗೋಲದಲ್ಲಿ ಇದ್ದಂತೆಯೂ.... ....೧

೬ ಸಂಸ್ಕೃತ— ರಘುವಂಶದ ೩ ಸರ್ಗಗಳು, ಮತ್ತು ೩ನೇ ಪುಸ್ತಕದ ೨೦ ಪಾಠಗಳು. ೫

೭ ಶಾಲಾವ್ಯವಸ್ಥೆಯೂ ಶಿಕ್ಷಣ ಪದ್ಧತಿಯೂ ಹಿಂದಾಗಿನ ನಮೂನೆ ರಿಪೋರ್ಟುಗಳ ಪೂರ್ಣಜ್ಞಾನವು, ಮತ್ತು ಶಿಕ್ಷಣ ಪದ್ಧತಿಯ ವಿಶೇಷ ಜ್ಞಾನವು, ಫೌಲರರ ಪುಸ್ತಕ ಸಮಗ್ರ
ಲೇಖೀ ಪರೀಕ್ಷೆ.... ... .೧೮
ಬಾಯಿಮಾತಿನ ಪರೀಕ್ಷೆ.... ....೧೦

೮ ಚಿತ್ರವಿದ್ಯ ಫ್ರೀಹ್ಯಾಂಡ, ಪರಸ್ಪೆಕ್ಟಿವ, ಪ್ಲಾನ ಎಸ್ಟಿಮೇಟುಗಳು, ಶಾಲಾ ಗೃಹದ ರಚನೆ.... ....೫

೯ ಕಸರತ್ತು.... ... .೨

ಪರೀಕ್ಷೆಗಳು.

ವರ್ಷದೊಳಗೆ ಯೆರಡು ಟರ್ಮುಗಳಂದರೆ ವಿಭಾಗಗಳು ಮಾಡಲ್ಪಟ್ಟಿವೆ. ಮೊದಲನೇ ಟರ್ಮು ಕಾರ್ತಿಕ ಶುದ್ಧ ಪ್ರತಿಪದೆಯಿಂದ ಆರಂಭವಾಗಿ ತಾ. ೨೫ನೇ ಎಪ್ರೀಲಿಗೆ ಮುಗಿಯುತ್ತದೆ. ಎರಡನೇ ಟರ್ಮು ಜೂನ ೧ನೇ ತಾರೀಖಿನಿಂದ ಆರಂಭವಾಗಿ ಆಶ್ವಿನ ವದ್ಯ ಏಕಾದಶಿಗೆ ಮುಗಿಯುತ್ತದೆ. ಪ್ರತಿವರ್ಷ ಮೊದಲನೇ ಟರ್ಮಿನ ಕಡೆಯಲ್ಲಿ ಟರ್ಮಿನಲ್ ಎಗ್ಝಾಮಿನೇಶನ್ ಎಂಬ ಪರೀಕ್ಷೆಯಾಗುವದು. ಈ ಪರೀಕ್ಷೆಯ

೨೧

ಪ್ರಿನ್ಸಿಪಾಲರು ಇತರ ಮಾಸ್ತರರು ಕೂಡಿ ತಕ್ಕೊಳ್ಳುವರು. ಇನೇ ಆ ಮೊದಲನೇ ಟರ್ಮಿನಲ್ಲಿ ನಡೆದ ಅಭ್ಯಾಸವು ಪರೀಕ್ಷಿಸಲ್ಪಡುವದು. ಈ ಪರೀಕ್ಷೆಯಲ್ಲಿ ಪಾಸ್ ಆಗದಂಥ ಸಂಬಳ ತಕ್ಕೊಳುವ ವಿದ್ಯಾರ್ಥಿಗಳು ಮೆ॥ ಇನ್ಸ್ಪೆಕ್ಟರರ ವಿವೇಕಾನುಸಾರವಾಗಿ ತಮ್ಮ ಸಂಬಳವನ್ನು ಕಳಕೊಳ್ಳುವರು.

೧೩ ಪ್ರತಿವರ್ಷ ಯೆರಡನೇ ಟರ್ಮಿನ ಕಡೆಯಲ್ಲಿ ಸರ್ಟಿಫಿಕೇಟಿನ ಪರೀಕ್ಷೆಯಾಗುವದು. ಈ ಪರೀಕ್ಷೆಯನ್ನು ಮೆ॥ ಎಜ್ಯುಕೇಶನಲ್ ಇನ್ಸ್ಪೆಕ್ಟರರು ಪ್ರಿನ್ಸಿಪಾಲರ ಮತ್ತು ಪ್ರೊಫೆಸರಗಳ ಹೆಚ್ಚು ಜನರುಗಳ ಡೆಪ್ಯುಟೀ ಇನ್ಸ್ಪೆಕ್ಟರರ ಸಹಾಯದಿಂದ ತಕ್ಕೊಳ್ಳುವರು. ಎರಡನೇ ಮೂರನೇ ವರ್ಷಗಳ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಪ್ರಶ್ನಪತ್ರಿಗಳು ಕೊಡಲ್ಪಡುವವು.

೧೪ ಸನ್ ೧೮೭೧ನೇ ವರ್ಷದ ಜನವರಿಯ ೧ನೇ ತಾರೀಖು ಪೂರ್ವದಲ್ಲಿ ನೌಕರಿಯಲ್ಲಿ ಸೇರಿದಂಥ ಅನ್‌ಟ್ರೇನ್ಡ ಮಾಸ್ತರರನ್ನೂ ಅಸಿಸ್ಟಾಂಟ ಮಾಸ್ತರರನ್ನೂ ಮೆ॥ ಇನಸ್ಪೆಕ್ಟರರ ಅಪ್ಪಣೆ ಪಡೆದು ಪರೀಕ್ಷೆಯಲ್ಲಿ ತಕ್ಕೊಳ್ಳಬಹುದು. ಆದರೆ ಸದರೀ ತಾರೀಖಿನ ತರುವಾಯ ನೌಕರಿಯನ್ನು ಹಿಡಿದಂಥ ಮಾಸ್ತರರಾಗಲಿ ಅಸಿಸ್ಟಾಂಟ ಮಾಸ್ತರರಾಗಲಿ ನಿಶ್ಚಯ ಪಕ್ಷಕ್ಕೆ ಯೆರಡು ವರ್ಷ ಕಾಲೇಜದಲ್ಲಿ ನಿಂತು ಅಭ್ಯಾಸ ಮಾಡಿದ ಹೊರ್ತು ಅವರನ್ನು ಟ್ರೇನಿಂಗ ಕಾಲೇಜದ ಯಾವದೊಂದು ಪರೀಕ್ಷೆಯಲ್ಲಿ ತಕ್ಕೊಳ್ಳಲಾಗದು. ಅಂಥಾ ಮಾಸ್ತರರಾಗಲಿ ಅಸಿಸ್ಟಾಂಟ ಮಾಸ್ತರರಾಗಲಿ ತಾವು ಯೆರಡನೇ ವರ್ಷದ ಮುಲಕೀ ಪರೀಕ್ಷೆಯಲ್ಲಿ ಇಳಿದ ಬಗ್ಗೆ ಪ್ರಿನ್ಸಿಪಾಲರನ್ನು ಮನಗಾಣಿಸಿದ ಹೊರ್ತು ಅವರನ್ನು ಟ್ರೇನಿಂಗ ಕಾಲೇಜದಲ್ಲಿ ತಕ್ಕೊಳ್ಳಲಾಗದು.

೨೨

೧೫ ಮೊದಲನೇ ವರ್ಷದ ಕಡೆಯಲ್ಲಿ ಆಗುವ ಪರೀಕ್ಷೆಯಲ್ಲಿ ಇಳಿಯದ ವಿದ್ಯಾರ್ಥಿಗಳನ್ನು ಮೆ॥ ಇನ್ಸ್ಪೆಕ್ಟರರ ತಮ್ಮ ವಿವೇಕಾನುಸಾರವಾಗಿ ತೆಗೆಯಬಹುದು.

ನೌಕರಿಗಾಗಿ ವರ್ಗೀಕರಣವು

೧೬ ಯೆರಡನೇ ಮೂರನೇ ವರ್ಷಗಳ ವಿದ್ಯಾರ್ಥಿಗಳು ಪಡೆದ ಗುಣಗಳ ಕ್ರಮದಂತೆ ಅವರ ಹೆಸರುಗಳು ಯೆರಡು ಬೇರೆ ಬೇರೆ ಪಟ್ಟಿಗಳಲ್ಲಿ ಬರಿಯಲ್ಪಡುವವು. ೧೦೦ಕ್ಕೆ ೬೦ರಂತೆ ಗುಣಗಳನ್ನು ಪಡೆದವರು ಪ್ರತಿಯೊಂದು ಪಟ್ಟಿಯಲ್ಲಿ ಮೊದಲನೇ ವರ್ಗದವರಾಗುವರು. ೧೦೦ಕ್ಕೆ ೩೩ರಿಂದ ೬೦ ರ ವರೆಗೆ ಗುಣಗಳನ್ನು ಪಡೆದವರು ೨ನೇ ವರ್ಗದವರಾಗುವರು. ಈ ಪ್ರಕಾರ ವರ್ಗೀಕರಣದೊಳಗೆ ಬಂದಂಥ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಇಳಿದರೆಂದು ಯೆಣಿಸಲ್ಪಡುವರು. ವರ್ಗೀಕರಣದೊಳಗೆ ಬಾರದಂಥ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಇಳಿಯಲಿಲ್ಲೆಂದು ಯೆಣಿಸಲ್ಪಡುವರು. ಅವರಿಗೆ ಮೆ॥ ಇನ್ಸ್ಪೆಕ್ಟರರು ತಮ್ಮ ವಿವೇಕಾನುಸಾರವಾಗಿ ಪುನಃ ಅಭ್ಯಾಸ ಮಾಡಲಿಕ್ಕಾಗಲಿ ಕಾಲೇಜದಿಂದ ಹೊರಟು ಹೋಗಲಿಕ್ಕಾಗಲಿ ಅಪ್ಪಣೆ ಕೊಡಬಹುದು. ಯಾವದೊಂದು ವಿಷಯದೊಳಗೆ ೧೦೦ರಲ್ಲಿ ೩೦ಕ್ಕಿಂತ ಕಡಿಮೆ ಗುಣಗಳನ್ನು ಪಡೆದಂಥ ವಿದ್ಯಾರ್ಥಿಯನ್ನು ಯಾವ ವರ್ಗದೊಳಗೂ ಸೇರಿಸಲಾಗದು.

ವರ್ಗೀಕೃತರಾದ ವಿದ್ಯಾರ್ಥಿಗಳಿಗೆ ಕೆಳಗೆ ತೋರಿಸಿದ ನಮೂನೆಯಂತೆ ೧ನೇ, ೨ನೇ ವರ್ಗಗಳ ಸರ್ಟಿಫಿಕೇಟುಗಳು ಕೊಡಲ್ಪಡುವವು. ಅವುಗಳಿಗೆ ಮೆ॥ ಇನ್ಸ್ಪೆಕ್ಟರರೂ ಪ್ರಿನ್ಸಿಪಾಲರೂ ಸಹಿ ಮಾಡುವರು. ಆ ವಿದ್ಯಾರ್ಥಿಗಳು ತೆರವಿದ

೨೩

...ಗಳನ್ನು ೬ನೇ ನಿಯಮದಂತೆ ತಮ್ಮ ವಿವೇಕಾನುಸಾರವಾಗಿ ಸ್ವೀಕರಿಸಬಹುದು ಆದರೆ ೩ನೇ ವರ್ಷದ ವಿದ್ಯಾರ್ಥಿಗಳಿಗೆ ... ಕ್ಕೆ ಮೊದಲು ನಡಿಸಲ್ಪಡುವದು.

೧೭ ಎರಡನೇ ವರ್ಷದ ಪರೀಕ್ಷೆಯಲ್ಲಿ ಇಳಿದಂಥ ವಿದ್ಯಾರ್ಥಿಗಳಿಗೆ ಮೆ॥ ಇನ್ಸ್ಪೆಕ್ಟರರು ಅಪ್ಪಣೆ ಕೊಟ್ಟರೆ ಮಾತ್ರ ಅವರು ೩ನೇ ವರ್ಷದ ಅಭ್ಯಾಸ ಕ್ರಮವನ್ನು ಆರಂಭ ಮಾಡಬಹುದು. ದೇಶಭಾಷೆಯ ಮೇಲ್ತರದ ಶಾಲೆಗಳ ಮಾಸ್ತರರ ಕೆಲಸವನ್ನು ಪಡೆಯಲಿಕ್ಕೆ ೩ನೇ ವರ್ಷದ ವಿದ್ಯಾರ್ಥಿಗಳಿಗೆ ಯೆಷ್ಟುಮಾತ್ರವೂ ಹಕ್ಕು ಇರುವದಿಲ್ಲ.

೧೮ ದಕ್ಷಿಣಭಾಗಕ್ಕಾಗಿ ಹೊಸ ನಿಯಮಗಳು ಮಂಜೂರಾಗುವ ವರೆಗೆ, ಈ ಭಾಗದೊಳಗಿನ ಯಾವತ್ತು ಟ್ರೇನ್ಡ ಮಾಸ್ತರರಿಗೂ ಅಸಿಸ್ಟಾಂಟ ಮಾಸ್ತರರಿಗೂ ಅವರ ಸಂಬಳಗಳೂ ನೇಮಣೂಕುಗಳೂ ಮಧ್ಯಭಾಗದ ಮಾಸ್ತರರಿಗಾಗಿ ಮಾಡಿದ ಸ್ಟ್ಯಾಂಡರ್ಡ ನಿಯಮಗಳ ೯ನೇ ಕಲಮಿನಂತೆ ದೊರೆಯುವವು.

ಕಾಲೇಜದೊಳಗಿನ ರೀತಿ ಮರ್ಯಾದೆಗಳೂ,
ಸುಟಿಗಳೂ, ರಜೆಗಳೂ, ಇತ್ಯಾದಿ.

೧೯ ಈ ವಿಷಯಗಳ ಸಂಬಂಧದಿಂದ ಪೆ॥ ಡಾಯರೆಕ್ಟರ ಸಾಹೇಬರು ಆಗಾಗ್ಗೆ ಮಂಜೂರು ಮಾಡಿದಂಥ ನಿಯಮಗಳು ಟ್ರೇನಿಂಗಕಾಲೇಜಿನ ನಿಯಮಗಳೆಂದು ಯೆಣಿಸಲ್ಪಡುವವು.

ಸರ್ಟಿಫಿಕೇಟು.

ನಾವು ಸರ್ಟಿಫಿಕೇಟು ಕೊಡುವದೇನೆಂದರೆ, * * * ಇವನು ಧಾರವಾಡ ಟ್ರೇನಿಂಗಕಾಲೇಜದಲ್ಲಿ *ನೇ ವರ್ಷದ ಅಭ್ಯಾಸಕ್ರಮವನ್ನು ಮುಗಿಸಿದರಿಂದ ಸನ್ ೧೮ ನೇ ವರ್ಷದ

೨೪

* * ತಿಂಗಳಿನಲ್ಲಿ ಸರ್ಟಿಫಿಕೇಟಿನ ಪರೀಕ್ಷೆಯಲ್ಲಿ ತಕ್ಕೊಳ್ಳಲ್ಪಟ್ಟನು. ಇವನು ಯಾವತ್ತು ಗುಣಗಳಲ್ಲಿ ೧೦೦ಕ್ಕೆ * ತೆಯೂ, ಪ್ರತಿಯೊಂದು ವಿಷಯದ ಗುಣಗಳಲ್ಲಿ ನಿಶ್ಚಯ ಪಕ್ಷಕ್ಕೆ ೧೦೦ರಲ್ಲಿ ೩೦ ಗುಣಗಳನ್ನೂ ಪಡೆದದರಿಂದ ಇವನು * ನೇ ವರ್ಗದೊಳಗೆ ಸೇರಿಸಲ್ಪಟ್ಟಿರುತ್ತಾನೆ; ಮತ್ತು ಇವನು ಆ ಕಾರಣದಿಂದ * ರೂಪಾಯಿಗಳಿಗೂ ನೇಮಣೂಕಿ ಹಕ್ಕುದಾರನಾಗಿರುತ್ತಾನೆ.

ಎಜು. ಇನ್ಸ್ಪೆಕ್ಟರ ದಕ್ಷಿಣಭಾಗ

ಪ್ರಿನ್ಸಿಪಾಲ ಟ್ರೇನಿಂಗ ಕಾಲೇಜದ ಧಾರವಾಡ.

—o—

ಈ ರೀತಿ ತರಬೇತಿಯ ಪ್ರವೇಶ ಪ್ರಕ್ರಿಯೆ, ವಿದ್ಯಾರ್ಥಿ ವೇತನ, ಮೂರೂ ವರ್ಷದ ಅಭ್ಯಾಸ ಕ್ರಮಗಳು, ನೇಮಕಾತಿ ಪರೀಕ್ಷೆಗಳು ಮತ್ತು ವೇತನದವರೆಗಿನ ಆದ್ಯಂತ ನಿಯಮಾವಳಿಗಳು ವಿಷದವಾಗಿ ಪ್ರಪ್ರಥಮವಾಗಿ ತಿಳಿದು ಬರುತ್ತವೆ. ಅಭ್ಯಾಸಕ್ಕಾಗಿ **ಭುಜಂಗರಾಯರ** ಪ್ರಾಕೃತಿಕ ಭುಗೋಲ, ಅಂಕಗಣಿತ, ಬೀಜಗಣಿತಕ್ಕೆ ಸಿದ್ಧಾಂತ ೧ ರಿಂದ ೬ ಬುಕ್ಕುಗಳು(?), **ಕೇರೋಪಂಥರ** ಪದಾರ್ಥ ವಿಜ್ಞಾನ, ಪೌಲನ ಶೈಕ್ಷಣಿಕ ಪದ್ಧತಿ, ಜೈಮಿನಿ ಭಾರತ, ರಾಜಶೇಖರ ವಿಳಾಸ, ಸಂಸ್ಕೃತದಲ್ಲಿ ರಘುವಂಶ ಮತ್ತು ವಾಲ್ಮೀಕಿ ರಾಮಾಯಣ ಮುಂತಾದ ಪುಸ್ತಕಗಳು ಪಠ್ಯಗಳಾಗಿ ಅಧ್ಯಯನಕ್ಕಿದ್ದುದು ಸ್ಪಷ್ಟವಾಗುತ್ತದೆ. ಇದರ ಪ್ರಕಾರ ವರ್ಷದಲ್ಲಿ ಎರಡು ಹಂತಗಳು; ಮೊದಲ ಅರ್ಧವರ್ಷದ ನಂತರ ಟರ್ಮಿನಲ್ ಪರೀಕ್ಷೆ; ಇದರಲ್ಲಿ ಫೇಲಾದವರು ಸಂಬಳ(ವಿದ್ಯಾರ್ಥಿವೇತನ) ಕಳೆದುಕೊಳ್ಳುವರು. ಎರಡನೆಯ ಅರ್ಧವರ್ಷದ ನಂತರ ಸರ್ಟಿಫೀಕೆಟ್ ಪರೀಕ್ಷೆ; ಇದನ್ನು ಪ್ರಿನ್ಸಿಪಾಲರು, ಎ.ಇ, ಡಿ,ಎ.ಇಯವರ ಸಹಾಯದಿಂದ ಮಾಡುವರು. ಪ್ರಥಮ ವರ್ಷ ೨೭೫, ದ್ವಿತಿಯ ವರ್ಷ ೬೭೫ ಮತ್ತು ತೃತಿಯ ವರ್ಷ ೮೨೫ ಅಂಕಗಳ ಪರೀಕ್ಷೆ; ಎರಡು ಮತ್ತು ಮೂರನೆಯ ವರ್ಷದ ವಿದ್ಯಾರ್ಥಿಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಲಾಗುವುದು. ೧೦೦ಕ್ಕೆ ೬೦%ಕ್ಕಿಂತ ಹೆಚ್ಚು ಗುಣಗಳನ್ನು ಪಡೆದವರು ಪ್ರಥಮ ವರ್ಗ, ೩೩% ದಿಂದ ೬೦% ರವರೆಗೆ ಗುಣಗಳನ್ನು ಪಡೆದವರೆಲ್ಲ ದ್ವಿತಿಯ ವರ್ಗ; ಉಳಿದವರು ನಪಾಸ; ಮುಂದಿನ ದಾರಿ ಅವರ ವಿವೇಕಕ್ಕೆ ಬಿಟ್ಟದ್ದು. ಸರ್ಟಿಫೀಕೆಟಗಳಿಗೆ ಪ್ರಿನ್ಸಿಪಾಲರು ಮತ್ತು ಎ.ಇ. ಇವರು ಸಹಿ ಮಾಡುವರು. ಮೂರನೆಯ ವರ್ಷ ಪಾಸಾದ ವಿದ್ಯಾರ್ಥಿಗಳು ತೆರವಿದ್ದ ಸ್ಥಳಗಳನ್ನು ಅಯ್ಕೆ ಮಾಡಿಕೊಳ್ಳಬಹುದಾಗಿತ್ತು. ಹೀಗೆ ಇದೂವರೆಗೂ ಒಂದು ಚೌಕಟ್ಟಿನಲ್ಲಿ ನಿರೂಪಿತವಾಗದ ರೂಪುರೇಷೆಗಳು ಬಹು ಕಠಿಣವಾಗಿ ಮತ್ತು ಖಚಿತವಾಗಿ ನಿರೂಪಿತಗೊಂಡಿರುವುದು ದಿಟ್ಟ ಹೆಜ್ಜೆಯಾಗಿ ಕಾಣುತ್ತದೆ. ಮುಂದೆ ೧೮೯೫ರಲ್ಲಿ (ರೊದ್ದ ಶ್ರೀನಿವಾಸ ರಾಯರು ಡಿ.ಎ.ಇ. ಆಗಿದ್ದಾಗ) 'ಟ್ರೇನಿಂಗ ಕಾಲೇಜದಲ್ಲಿ ನಿಂತು ಅಭ್ಯಾಸ ಮಾಡಿ ೧ನೇ ಅಥವಾ ಎರಡನೆಯ ವರ್ಷದ ಸರ್ಟಿಫೀಕೆಟನ್ನು ಪಡೆದಂಥ ಮಾಸ್ತರರು ಶಾಲಾಖಾತೆಯಲ್ಲಿ ಎರಡು ವರ್ಷ ಉತ್ತಮ ರೀತಿಯಿಂದ ಕೆಲಸ ಮಾಡಿದ್ದರೆ ಅಂಥವರಿಗೆ ೨ನೆಯ ಇಲ್ಲವೇ ೩ನೆಯ ವರ್ಷದ ಸರ್ಟಿಫೀಕೆಟ ಪರೀಕ್ಷೆಗೆ ಹೊರಗಿನಿಂದ ಕೂಡ್ರಲು ಅನುಮತಿಯನ್ನು ಕೊಡುವ ವಿಚಾರವಾಗಿ ಆದೇಶ ಹೊರಡಿಸುವ ಪ್ರಕ್ರಿಯೆ ಕೂಡ ನಡೆಯುತ್ತದೆ.[೨೧]

ಇದೇ ವರ್ಷದ ಡಿಸೆಂಬರನ ಪುಸ್ತಕ ೫ ಸಂಚಿಕೆ ೮ ಪುಟ ೨೬೨ ತಮ್ಮ ಪುಸ್ತಕಗಳಾದ "**'ಶಬ್ದಮಂಜರಿ'** ೫೮೮ ಪತ್ರಗಳ(ಪುಟಗಳ) ಪುಸ್ತಕ ಮತ್ತು **'ಕವಿತಾ ಪದ್ಧತಿ'** ಪುಸ್ತಕಗಳು ಮುದ್ರಿಸಲ್ಪಟ್ಟಿದ್ದು ಮಾರಾಟಕ್ಕೆ ಸಿದ್ಧವಾಗಿವೆ" ಈ ಬಗೆಗೆ ಕೊಟ್ಟ ನೋಟಿಸಿನ ಕೆಳಗೆ "ತಾ॥೩೦ ನವಂಬರ ಸನ್ ೧೮೯೯ ಸಹಿ ಗಂಗಾಧರ ಮಡಿವಾಳೇಶ್ವರ ಟ್ರಾ. ಎ. ಬೆಳಗಾಂವ." ಎಂದಿರುವುದು ಗಂಗಾಧರ ಮಡಿವಾಳೇಶ್ವರರು ಟ್ರಾನ್ಸಲೇಟರ್ ಮತ್ತು ಎಡಿಟರ್ ಎರಡೂ ಆಗಿದ್ದರು ಮತ್ತು

ವೆಂಕಟರಂಗೋ ಕಟ್ಟಿ ಟ್ರಾನ್ಸಲೇಟರ್ ಮಾತ್ರ ಆಗಿದ್ದರು ಎಂಬುದಕ್ಕೆ ಸಾಕ್ಷಿ. ಹಾಗಾಗಿ ಇಬ್ಬರೂ ಟ್ರಾನ್ಸಲೇಟಿಂಗ ಕಾರ್ಯವನ್ನು ಮಾಡಿದ್ದಾರೆ ಎಂಬುದು ಖಚಿತವಾಗುತ್ತದೆ. (ಈ ಟ್ರಾ.ಎ.- ಎನ್ನುವುದು ಟ್ರಾನ್ಸಲೇಟರ್ ಮತ್ತು ಎಡಿಟರ್-ಎಂಬುದನ್ನು ಸೂಚಿಸುತ್ತದೆ) ಗಂಗಾಧರ ಮಡಿವಾಳೇಶ್ವರ ತುರಮರಿಯವರು ಟ್ರಾನ್ಸಲೇಟರರಾಗಿ ಮತ್ತು ಮಾಸ್ತರರಾಗಿಯೂ ೩೦ ರೂಪಾಯಿಯ ಹೆಚ್ಚಿನ ಸಂಬಳ ಪಡೆದು ಬೆಳಗಾವಿಯಲ್ಲಿ ಸೇವೆ ಸಲ್ಲಿಸಿರುವುದು ಇದರಿಂದ ತಿಳಿದು ಬರುತ್ತದೆ. ೧೮೭೪ರಲ್ಲಿ ಟ್ರಾನ್ಸಲೇಟಿಂಗ ಆಫೀಸು ಧಾರವಾಡದಲ್ಲಿತ್ತು[೨] ಆದಾಗ್ಯೂ ಬೆಳಗಾವಿಯಲ್ಲಿದ್ದೇ ಟ್ರಾನ್ಸಲೇಟಿಂಗ ಕಾರ್ಯ ಮಾಡಿದ್ದಾರೆ ತುರಮರಿಯವರು. ಇಷ್ಟು ದಿನ ಬೆಳಗಾವಿಯಲ್ಲಿ ಕನ್ನಡ ಟ್ರಾನ್ಸಲೇಟರರ ಸಹಾಯಕ (ಮುದ್ದತನೀಸ)ರಾಗಿದ್ದ ಗಂಗಧರ ಮಡಿವಾಳೇಶ್ವರ ತುರಮರಿ ಇವರಿಗೆ ೧೮೭೫ ಅಕ್ಟೋಬರದಲ್ಲಿ ಧಾರವಾಡದ ಟ್ರಾನ್ಸಲೇಟಿಂಗ ಕಚೇರಿಗೆ ವರ್ಗವಾಗುತ್ತದೆ. ಇದೇ ಸಮಯದಲ್ಲಿ 'ಭಾಷಾದರ್ಪಣ' ಎಂಬ ವ್ಯಾಕರಣ ಪುಸ್ತಕವನ್ನು ಇವರು ಬರೆಯುತ್ತಾರೆ. ಇದು ಮುಗಿಯುವವರೆಗೂ ನಿರಂತರವಾಗಿ ಪತ್ರಿಕೆಯಲ್ಲಿ ಪ್ರಕಟವಾಗಿದೆ.

೧೮೭೦ನೇ ಇಸ್ವಿಯಲ್ಲಿ ಟ್ರೇನಿಂಗ ಕಾಲೇಜಿಗೆ ಪ್ರ್ಯಾಕ್ಟಿಸಿಂಗಸ್ಕೂಲನ್ನು ಜೋಡಿಸಿದರು. ಇದು ಪ್ರಾಯೋಗಿಕ ಪಾಠಗಳ ನೀಡುವಿಕೆಯ ಅಭ್ಯಾಸಕ್ಕೆ ಅತ್ಯವಶ್ಯವಾದುದಾಗಿತ್ತು. ಇದೇ ವರ್ಷ ೧೮೭೦ರಲ್ಲಿ ತರಬೇತಿ ಕಾಲೇಜಿಗೆ ಬಂದು ತರಬೇತಿ ಪಡೆಯಲಿಚ್ಛಿಸದ (ಅಂಟ್ರೇನ್ಡ) ಶಿಕ್ಷಕರು ಇನ್ಸಪೆಕ್ಟರ್ ದೊರೆಗಳು ತೆಗೆದುಕೊಳ್ಳುವ ಸರ್ಟೀಫೀಕೆಟ್ ಪರೀಕ್ಷೆ ಪಾಸಾಗಿ, ಸರ್ಟಿಫೀಕೆಟ್‌ನ್ನು ಪಡೆಯುವುದು ಅನಿವಾರ್ಯವಾಗಿತ್ತು. ಇಲ್ಲಿ ಉತ್ತಮ ಮತ್ತು ಮಧ್ಯಮ ಎಂದು ಎರಡು ರೀತಿಯ ಸರ್ಟಿಫೀಕೆಟ್ ಪರೀಕ್ಷೆಗಳಿರುತ್ತಿದ್ದವು. ಈ ಪರೀಕ್ಷೆಗಳೆರಡಕ್ಕೂ ಅದರದ್ದೇ ಆದ ಎಲ್ಲ ವಿಷಯಗಳ ತಾತ್ವಿಕ ಪಠ್ಯಕ್ರಮ, ನಕ್ಷೆ ಬಿಡಿಸುವಿಕೆ, ಪ್ರಯೋಗ, ಚಿತ್ರ ಬಿಡಿಸುವಿಕೆ ಮತ್ತು ಪ್ರಾಯೋಗಿಕ ಪಾಠಗಳ ನೀಡುವಿಕೆಯ ಪಠ್ಯಕ್ರಮ ಇರುತ್ತಿತ್ತು. ಈ ಉತ್ತಮ ಮತ್ತು ಮಧ್ಯಮ ಪರೀಕ್ಷೆಯಲ್ಲಿ ೭೦ಕ್ಕಿಂತ ಹೆಚ್ಚು ಅಂಕ ಪಡೆದವರು ಪ್ರಥಮ ಪ್ರತಿಯ ಸರ್ಟಿಫೀಕೆಟ್ ಹಾಗೂ ೩೦ ರಿಂದ ೭೦ರವರೆಗೆ ಅಂಕ ಪಡೆದವರು ಎರಡನೆಯ ಪ್ರತಿಯ ಸರ್ಟಿಫೀಕೆಟ್ ಪಡೆಯುತ್ತಿದ್ದರು. ಇಂಥವರಿಗೆ

ಉತ್ತಮ- ಪ್ರಥಮ ಪ್ರತಿಯ ಸರ್ಟಿಫೀಕೆಟ್ ಪಡೆದವರಿಗೆ ೨೫ರೂಪಾಯಿ ಸಂಬಳ

ಎರಡನೆಯ ಪ್ರತಿಯ ಸರ್ಟಿಫೀಕೆಟ್ ಪಡೆದವರಿಗೆ ೨೦ರೂಪಾಯಿ ಸಂಬಳ

ಮಧ್ಯಮ- ಪ್ರಥಮ ಪ್ರತಿಯ ಸರ್ಟಿಫೀಕೆಟ್ ಪಡೆದವರಿಗೆ ೧೫ರೂಪಾಯಿ ಸಂಬಳ

ಎರಡನೆಯ ಪ್ರತಿಯ ಸರ್ಟಿಫೀಕೆಟ್ ಪಡೆದವರಿಗೆ ೧೦ರೂಪಾಯಿ ಸಂಬಳ.

ಪಠ್ಯಕ್ರಮಕ್ಕೆ ಸಂಬಂಧಿಸಿದ ಪುಸ್ತಕಗಳು ಸರಕಾರಿ ಮುದ್ರಣಾಲಯದಲ್ಲಿ ಸಿಗುತ್ತಿದ್ದವು ಅಥವಾ ತಂತಮ್ಮ ಜಿಲ್ಲೆಯ ಡೆಪ್ಯೂಟಿ ಇನ್ಸಪೆಕ್ಟರಿಂದ ತರಿಸಿಕೊಳ್ಳಬಹುದಿತ್ತು.[೩] ಹೀಗೆ ತರಬೇತಿ

ಶಾಲೆಗೆ ಹೋಗಿ ತರಬೇತಿ ಪಡೆಯದಿದ್ದವರು ಸರ್ಟಿಫೀಕೆಟ್ ಪರೀಕ್ಷೆ ಪಾಸಾಗುವ ಅನುಕೂಲ ಮತ್ತು ನಿಯಮಗಳು ಇರುತ್ತಿದ್ದವು. 'ಸ್ಟ್ಯಾಂಡರ್ಡ'(ತರಗತಿ) ಎಂಬುದಕ್ಕೆ 'ಮರ್ಯಾದೆ' ಹಾಗೂ 'ಪಾಸಾದವರಿಗೆ' ಎಂಬುದಕ್ಕೆ 'ಇಳಿದವರಿಗೆ' ಎಂದು ಬಳಕೆಯ ರೂಢಿ ಆವಾಗ ಇದ್ದದ್ದು "ಅದರಲ್ಲಿ ನಾಲ್ಕನೆಯ ಮರ್ಯಾದೆಯಂತೆ ಇಳಿದವರೊಳಗಿಂದ ಬೇಕಾದಷ್ಟು ಜನರು ಆರಿಸಿ ತೆಗೆದುಕೊಳ್ಳಲ್ಪಡುವರು"[೨೪]

ಟ್ರೇನಿಂಗ್ ಕಾಲೇಜಿನ ಬಹುಪಾಲು ಸರಕ್ಯೂಲರಗಳು ಮತ್ತು ನೋಟಿಸುಗಳನ್ನು ಶಿಕ್ಷಣ ಇಲಾಖೆಯ ಡೈರೆಕ್ಟರಾದ ರಸೆಲ್ ಅವರೇ ಹೊರಡಿಸಿದ್ದಾರೆ. ರಸೆಲ್ ಎಜ್ಯಕೇಶನಲ್ ಇನ್ಸಪೆಕ್ಟರ್ ಆಗಿ ಮೇ ೧೮೭೧ರವರೆಗೆ ಇದ್ದರು. ಜೂನ್ ೨೬ ೧೮೭೧ಕ್ಕೆ ಬಿ.ಕೆ.ಹುಯಿಲಗೋಳ ಇವರು ಪ್ರಭಾರ ವಹಿಸಿ, ಪರವಾಗಿ ಸಹಿ ಮಾಡಿದ್ದಾರೆ. ಮುಂದೆ ಜುಲೈ ೨೫ ೧೮೭೧ಕ್ಕೆ ಆರ್. ಈ. ಕ್ಯಾಂಡಿ ಎಜ್ಯಕೇಶನಲ್ ಇನ್ಸಪೆಕ್ಟರ್ ಸಹಿ ಮಾಡಿದ್ದಾರೆ.[೨೫] ಮತ್ತೇ ೧೮ ಅಗಸ್ಟ ೧೮೭೧ಕ್ಕೆ ಬಿ.ಕೆ. ಹುಯಿಲಗೋಳ ಇವರು ಪ್ರಭಾರ ವಹಿಸಿ, ಪರವಾಗಿ ಸಹಿ ಮಾಡಿದ್ದಾರೆ. ಮತ್ತೇ ೧೮/೧೦/೧೮೭೧ ಕ್ಕೆ ಆರ್. ಈ. ಕ್ಯಾಂಡಿ ಎಜ್ಯಕೇಶನಲ್ ಇನ್ಸಪೆಕ್ಟರ್ ಆಗಿ ಪ್ರಭಾರ ವಹಿಸಿಕೊಂಡಿದ್ದಾರೆ. ಜನೇವರಿ ೧೮೭೩ ರ ಪತ್ರಿಕೆಯ ಪುಟ ೨೨೬ರಲ್ಲಿ ಭುಜಂಗರಾವ ಎಚ್ ಹುಯಿಲಗೋಳರು ನೀಡಿದ ಒಂದು ಪ್ರಕಟಣೆ 'ಟ್ರೇನಿಂಗ ಕಾಲೇಜದ ಸರ್ಟಿಫೀಕೆಟದ ಪರೀಕ್ಷೆ'ಯಲ್ಲಿ ಅನುಕ್ರಮವಾಗಿ ಪಡೆದ ಅಂಕಗಳನ್ನು ತಿಳಿಸಲಾಗಿದೆ. ಭುಜಂಗರಾವ ಎಚ್ ಹುಯಿಲಗೋಳರು ಪ್ರಿನ್ಸಿಪಾಲರಾಗಿದ್ದ ವೇಳೆಯಲ್ಲಿ ಶ್ರೀನಿವಾಸ ರಾಮಚಂದ್ರ ಸವದಿಯವರು ವಾಯ್ಸ ಪ್ರಿನ್ಸಿಪಾಲರಾಗಿದ್ದರು. ಶ್ರೀನಿವಾಸ ರಾಮಚಂದ್ರ ಸವದಿಯವರು ೬ ಜೂನ್ ೧೮೭೩ರಲ್ಲಿ ಪ್ರಭಾರ ವಹಿಸಿಕೊಂಡಿದ್ದಾರೆ. ಹೀಗೆ ಹಲವಾರು ಬಾರಿ ನಡೆದಿರುವುದನ್ನು ನೋಡಿದರೆ (ಧೀರ್ಘಾವಧಿ) ರಜೆ ಮೇಲೆ ಹೋದಾಗ ಪ್ರಭಾರ ಕೊಡುವ ಪದ್ಧತಿ ಆರಂಭದಿಂದಲೂ ಇದ್ದದ್ದು ಕಂಡುಬರುತ್ತದೆ.

೨೭ ಮೇ ೧೮೭೧ರಲ್ಲಿ ವೆಂಕಟ ರಂಗೋ ಕಟ್ಟಿಯವರು 'ಸವಾಯಿ ಮಾಧವರಾಯನ ನಾಟಕ' ಎಂಬ ಪುಸ್ತಕ ಬರೆದು ಪ್ರಕಟಿಸಿರುವ ಬಗೆಗೆ, ೧೨೦ ಪುಟಗಳ ಪುಸ್ತಕದ ಕ್ರಯ ಒಂದು ರೂಪಾಯಿ ಎಂದು ಹೇಳಿರುವ ಅವರದ್ದೇ ಪ್ರಕಟಣೆ[೨೬] (ಮಠಪತ್ರಿಕೆ ಪುಸ್ತಕ-೭ ಸಂಚಿಕೆ-೨, ಬೆಳಗಾವಿ ಮಾಹೆ ಜುಲಾಯಿ-೧೮೭೧ ಪುಟ ಸಂಖ್ಯೆ ೫೫-೫೬)ನೋಡಿದರೆ ಈ ಪುಸ್ತಕವನ್ನು ೧೮೭೧ರ ಮೇನಲ್ಲಿ ಬರೆದುದಾಗಿ ಖಚಿತವಾಗುತ್ತದೆ. ೧೮೭೧ರ ಸಪ್ಟಂಬರ್‌ದಲ್ಲಿ 'ಸವಾಯಿ ಮಾಧವರಾಯನ ನಾಟಕ'ದೊಂದಿಗೆ 'ನರತನವು' ಎಂಬ ಪುಸ್ತಕಗಳನ್ನು ಮಹಾರಾಷ್ಟ್ರ(ಮರಾಠಿ) ಭಾಷೆಯಲ್ಲಿ ರಚಿಸಿ ಸುಂದರವಾಗಿ ಅಚ್ಚುಹಾಕಿಸಿರುವ ಬಗೆಗೆ ಮತ್ತು 'ನರತನವು' ಪುಸ್ತಕದ ಕ್ರಯ ೧೦ಅಣೆ ಆಗಿದ್ದು, ಪುಸ್ತಕ ಪಡೆಯಲು ಬೆಳಗಾವಿ ಸಮಾಚಾರದ ಅಚ್ಚುಕೂಟದ ಮ್ಯಾನೇಜರ್ ಅವರನ್ನು ಸಂಪರ್ಕಿಸಲು ಪ್ರಕಟಣೆ ನೀಡಲಾಗಿದೆ.[೨೭] (ಮಠಪತ್ರಿಕೆ ಪುಸ್ತಕ-೭ ಸಂಚಿಕೆ-೬, ಬೆಳಗಾವಿ

ಮಾಹೆ ಸಪ್ಟಂಬರ್-೧೮೭೧ ಪುಟ ಸಂಖ್ಯೆ ೧೯೧-೧೯೨)ಇದರಿಂದ 'ಸವಾಯಿ ಮಾಧವರಾಯನ ನಾಟಕ' ಮತ್ತು 'ನರತನವು' ಈ ಎರಡು ಪುಸ್ತಕಗಳು ೧೮೭೧ರ ಸಪ್ಟಂಬರ್ ಅಷ್ಟೊತ್ತಿಗೆ ಮರಾಠಿಯಲ್ಲಿಯೂ ಅನುವಾದಗೊಂಡಿದ್ದವು ಎಂಬುದು ನಿಖರವಾಗಿ ತಿಳಿದು ಬರುತ್ತದೆ.

ಇದೇ ೧೮೭೧ರ ಸರಿಸುಮಾರಿಗೆ ಶಾಂತವೀರ ರಾಚಿದೇವ ಕಿತ್ತೂರ ಇವರು ಟ್ರೇನಿಂಗ್ ಕಾಲೇಜಿನಲ್ಲಿ ಶಿಕ್ಷಕರಾಗಿದ್ದು 'ಶಾಂತವೀರ ರಾಚದೇವ ಕೃತಕರ್ನಾಟಕ ವ್ಯಾಖ್ಯಾನಗಳು' ಮತ್ತು 'ಚಂಪೂ ರಾಮಾಯಣೆ ಸವ್ಯಾಖ್ಯಾನೆ ಬಾಲಕಾಂಡಃ' (Champu Ramayen and Champu Bharat with commentaries in canarese By Mr|| Shantaviraya) ಕೃತಿಗಳ ಅರ್ಥಸಹಿತ ವ್ಯಾಖ್ಯಾನ ಶಾಲಾ ಪತ್ರಕದಲ್ಲಿ ಬರೆದಿದ್ದಾರೆ. ಇದು 'ಶಾಂತವೀರ ರಾಚಯ್ಯ ಕಿತ್ತೂರ ಟ್ರೇನಿಂಗ್ ಕಾಲೇಜ್' ಎಂಬ ಹೆಸರಿನಿಂದ ಪ್ರಕಟವಾಗಿದೆ. ದೊಂಡೋ ನರಸಿಂಹ ಮುಳಬಾಗಲ ೧೮೬೬ರಲ್ಲಿ ನಾರ್ಮಲ್ ಸ್ಕೂಲಿನ ವಿದ್ಯಾರ್ಥಿಯಾಗಿದ್ದವರು ೧೯೭೨-೭೩ರ ಸುಮಾರಿಗೆ ಕಾಗಿನೆಲ್ಲಿಯಲ್ಲಿ ಶಾಲಾ ಶಿಕ್ಷಕರಾಗಿದ್ದರು. ಭೋಜ ಮತ್ತು ಬದನಗೋಡ ಶಾಲಾಮಾಸ್ತರರು ಕೇಳಿದ ಪದ್ಯಾರ್ಥಗಳಿಗೆ ವಿವರಣೆ ನೀಡುವುದರೊಂದಿಗೆ ಅವರ 'ವರ್ಷಾಕಾಲದ ವರ್ಣನೆ' ಅರ್ಥಸಹಿತ ತಾತ್ಪರ್ಯ ಮತ್ತು 'ಸಂಸ್ಕೃತ ಹೊಸಕವಿತೆಯು'(A new sanscrit composition) ಮುಂತಾದ ಲೇಖನಗಳು ಸಪ್ಟಂಬರ ೧೮೭೨ ರಿಂದ ಅಂಕಣ ರೂಪದಲ್ಲಿ ಪ್ರಕಟವಾಗಿವೆ.

೧೮೭೩ ಏಪ್ರೀಲ್‌ನಿಂದ ವಿದ್ಯಾ ಇಲಾಖೆಯಲ್ಲಿ ಮುಲ್ಕಿ ಪರೀಕ್ಷೆಯನ್ನು ಎಜ್ಯುಕೆಷನ್ ಇನ್ಸಪೆಕ್ಟರಾದ ಜೆ. ಎಫ್. ಫ್ಲೀಟ್ ಅವರು ಸಾರಿದ್ದಾರೆ. ಮೇಟ್ರಿಕುಲೇಷನ್ ಪರೀಕ್ಷೇಯು ಮಹತ್ವ ಪಡೆದು, ಬಾಂಬೆ ವಿಶ್ವವಿದ್ಯಾಲಯಕ್ಕೇ ಹೋಗಿ ಪರೀಕ್ಷೆ ಬರೆದು ಬರಬೇಕಾಗುತ್ತಿತ್ತು. ಇದು ಬಾಂಬೆ ಯುನಿವರ್ಸಿಟಿಯ ಪ್ರವೇಶ ಪರೀಕ್ಷೆಯಾಗಿತ್ತು.

'ದಕ್ಷಿಣ ಭಾಗದ ಎಜುಕೆಶನಲ್ ಇನ್ಸಪೆಕ್ಟರಾಗಿದ್ದ ರಸೆಲ್‌ರು ಸ್ಥಾಪಿಸಿದ್ದ 'ವರ್ಥಪ್ರಾಯಿಜ್' ರೂಪಾಯಿ ೧೦೦೦ಗಾಗಿ ಹಳಗನ್ನಡ ಪರೀಕ್ಷೆ ತೆಗೆದುಕೊಳ್ಳುವ ಸರಕಾರದ ಸೆಕ್ರೆಟರಿ ಸಿ.ಗೊನ್ಯೂ (C. Gonue) ಅವರಿಂದಪ್ರಕಟಗೊಂಡಿರುವುದ ನೋಡಿದರೆ ಶಿಕ್ಷಕರಿಗೆ ಹಳಗನ್ನಡದ ರೂಢಿ ಮತ್ತು ರುಚಿ ಎರಡನ್ನೂ ರಸೆಲ್ ತೋರಿಸಿದ್ದರು'.[೨೮] ಆ ವರ್ಥಪ್ರಾಯ್ಜನ ಹಣವನ್ನು ಲೋಕಲ್ ಫಂಡಿಗೆ ಜಮಾ ತೆಗೆದುಕೊಂಡು, ನಂತರ ನೀಡುವ ಬಗೆಗೆ ಸರಕಾರದ ಸೆಕ್ರೆಟರಿ ಸಿ.ಗೊನ್ಯೂ (C. Gonue) ಅವರ ಆದೇಶ ಹಳಗನ್ನಡಕ್ಕೆ ನೀಡಿರುವ ಮಹತ್ವವನ್ನು ಒತ್ತಿ ಹೇಳುತ್ತದೆ. ಕ್ರಮೇಣ **ರಸೆಲ್‌ರು ಸ್ಥಾಪಿಸಿದ್ದ 'ವರ್ಥಪ್ರಾಯಿಜ್' ಗಾಗಿ ಹಳಗನ್ನಡ ಅಧ್ಯಯನ ಮಾಡಿ ಪರೀಕ್ಷೆ ತೆಗೆದುಕೊಳ್ಳುವವರ ಸಂಖ್ಯೆ ತೀರ ಕಡಿಮೆಯಾಗಿತ್ತು.** ೧೮೭೩ರ ಅಕ್ಟೋಬರನಲ್ಲಿ ಈ ಪರೀಕ್ಷೆಯನ್ನು ಶಿಗ್ಗಿ ಶಾಲೆಯ ಹೆಡ್ ಮಾಸ್ತರ ವಿಷ್ಣು ಪರಶುರಾಮ ಹೈಸಕರ ಮತ್ತು ಟ್ರೇನಿಂಗ ಕಾಲೇಜಿನ

ವಿದ್ಯಾರ್ಥಿ ರಾಮಚಂದ್ರ ಬಾಬಾಚಾರ್ಯ ಜೋಶಿ ಈ ಇಬ್ಬರು ಉಮೇದುವಾರರು ಬರೆದಿದ್ದು ೨೧೫ಕ್ಕೆ ಅನುಕ್ರಮವಾಗಿ ೧೧೫ ಮತ್ತು ೯೬.೫ ಅಂಕ ಪಡೆದಿದ್ದು, ಯಾರೂ ಈ ಇನಾಮಿಗೆ ಪಾತ್ರರಾಗದ ಸ್ವಾರಸ್ಯಕರ ವಿಷಯ ತಿಳಿದು ಬರುತ್ತದೆ.[೨೯]

೧೮೭೬ರಲ್ಲಿ ವರ್ಥ ಪ್ರಾಯ್ಝಿಗಾಗಿ ಯಾರೂ ಉಮೇದುವಾರರು ಬಾರದೆ ಇದದ್ದದ್ದಕ್ಕೆ ಪರೀಕ್ಷೆ ನಡೆಯಲೇ ಇಲ್ಲ.ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆ ಮತ್ತು ಸರ್ಟಿಫೀಕೆಟ್ ಪರೀಕ್ಷೆಗಳು ನಿರಂತರವಾಗಿ ನಡೆದೇ ಇದ್ದವು. ೧೮೭೪ರ ಮಾರ್ಚ ಶಾಲಾಪತ್ರಕ ಪುಟ ೫೬೪ರಲ್ಲಿ 'ಕನ್ನಡ ಭಾಷಾ ಪ್ರಾಬಲ್ಯಕ್ಕೆ ಮೂಲವಾದ ಮುಖ್ಯ ಸಂಗತಿಗಳ ಕುರಿತು' ಒಂದು ಪತ್ರವ್ಯವಹಾರ ಅಂದರೆ ಇಲಾಖೆಯ ಸದಭಿಪ್ರಾಯ ಇದೆ.[೩೦](ಶಾಲಾ ಪತ್ರಕ ಪುಸ್ತಕ-೯ಸಂಚಿಕೆ-೧೨ ಮಾರ್ಚ-೧೮೭೩ ಪುಟ ಸಂಖ್ಯೆ ೫೬೪-೫೬೮) ಎಜುಕೆಷನ್ ಇನ್ಸಪೆಕ್ಟರ್, ಡೆಪ್ಯೂಟಿ ಇನ್ಸಪೆಕ್ಟರ್, ಟ್ರೇನಿಂಗ್ ಕಾಲೇಜಿನ ಶಿಕ್ಷಕರು ಮತ್ತು ಟ್ರಾನ್ಸಲೇಟರರು ಎಲ್ಲರೂ ಈ ಕನ್ನಡ ಭಾಷೆಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವವುದನ್ನು ಸಾದ್ಯಂತವಾಗಿ ಇಲ್ಲಿ ನೆನೆಯಲಾಗಿದೆ ಮತ್ತು ರಸೆಲ್‌ರ ಪರಿಶ್ರಮ, ಪ್ರೋತ್ಸಾಹಗಳನ್ನು ಪದ್ಯರೂಪದಲ್ಲಿ ವರ್ಣಿಸಲಾಗಿದೆ, ಹಾಡಿ ಹೊಗಳಲಾಗಿದೆ.*೭

ಷಡಕ್ಷರದೇವಕೃತ 'ರಾಜಶೇಖರವಿಳಾಸ' ಲೋಕೋತ್ತರ ಕಾವ್ಯಕ್ಕೆ ಗದಗ ತಾಲೂಕಿನ ಮುಂಡರಗಿಯ ಶ್ರೀ ಅನ್ನದಾನಿ ಬಸಲಿಂಗಾರ್ಯ ಮಂಗಳ ಅರಳೇಲೆಮಠ ಇವರು ಆರು ರೀತಿಯಲ್ಲಿ ಟೀಕಾರ್ಥಗಳನ್ನು ಬರೆದು ಪ್ರಕಟಿಸಿದ್ದೂ ಕೂಡ ಇದೇ ಸಂದರ್ಭದಲ್ಲಿಯೇ ಎಂಬುದು ಗಮನಾರ್ಹ.[೩೧](ಶಾಲಾ ಪತ್ರಕ ಪುಸ್ತಕ-೧೦ರ ಸಂಚಿಕೆ-೩ ಜೂನ-೧೮೭೪ ಪುಟ ಸಂಖ್ಯೆ ೭೦-೭೨)ರಸೆಲ್ಲರು ಕನ್ನಡ ಪಠ್ಯ ಪುಸ್ತಕಗಳನ್ನು ಪ್ರಕಟಿಸಿದ್ದಲ್ಲದೆ ಕಾಲಕಾಲಕ್ಕೆ ಅವುಗಳ ಪರಿಷ್ಕರಣೆಯನ್ನೂ ಮಾಡಿದ್ದಾರೆ. ಕವಿತೆಯ ಮತ್ತು ಓದುವ ಪುಸ್ತಕಗಳನ್ನು ಶುದ್ಧಮಾಡುವ ಕಾರ್ಯ ನಡೆಸಿರುವುದಾಗಿ ಮತ್ತು ಮೊದಲಿನ ಕವಿತಾಪುಸ್ತಕ ತೆಗೆದು ಹಾಕುವುದಾಗಿ, ಮತ್ತೊಂದು ಸಿದ್ಧವಾಗುವವರೆಗೆ ಓದುವ(ಗದ್ಯ) ಪುಸ್ತಕದಿಂದೇ ಪದ್ಯಗಳನ್ನಾಯ್ದು ಕಲಿಸಲು ಸಲಹೆ ನೀಡುತ್ತ ಬೆಂಬಿಡದೆ ಅನುಪಾಲನೆ ಮಾಡುತ್ತಿದ್ದರು.[೩೨] (ಶಾಲಾ ಪತ್ರಕ ಪುಸ್ತಕ-೧೦ರ ಸಂಚಿಕೆ-೪ಜುಲೈ-೧೮೭೪ ಪುಟ ಸಂಖ್ಯೆ ೮೧-೮೨) ಆ ಕಾಲದಲ್ಲಿ ಟ್ರೇನಿಂಗ್ ಕಾಲೇಜಿನ ಪ್ರವೇಶ ಪರೀಕ್ಷೆ ಮತ್ತು ಸರ್ಟಿಫೀಕೆಟ್ ಪರೀಕ್ಷೆಗಳನ್ನು ಶಿಕ್ಷಣ ಇಲಾಖೆಯ ಎಜುಕೇಷನಲ್ ಇನ್ಸಪೆಕ್ಟರ್ ನಡೆಸುತ್ತಿದ್ದರು ಮತ್ತು ಬೆಳಗಾವಿ ವಿಭಾಗದ ಶಾಲೆಗಳಿಗೆ ಬೇಕಾಗುವ ಪುಸ್ತಕಗಳ ರಚನೆ, ಅನುವಾದ, ವ್ಯಾಖ್ಯಾನ, ಟೀಕೆ, ಮುದ್ರಣ, ಮಾರಾಟ ತರಬೇತಿ ಕಾಲೇಜಿನವರು ಮಾಡುತ್ತಿದ್ದರು. ಇಂಥ ಹಲವಾರು ವಿಭಿನ್ನ

---

*೭ ನೋಡಿ ಅನುಬಂಧ ೩

ವೈಶಿಷ್ಟ್ಯಗಳ ಕೇಂದ್ರಬಿಂದುವಾಗಿ ಶಿಕ್ಷಣ ಇಲಾಖೆ, ಅದರ ಸಾರಥಿಯಾಗಿ ರಸೆಲ್ಲರು ಶಿಕ್ಷಣಕ್ಷೇತ್ರವನ್ನು ಮುನ್ನಡೆಸುತ್ತಿದ್ದರು. ಪುಣೆಯ ದಕ್ಷಿಣ ಪ್ರಾಯ್ಜ ಕಮಿಟಿಯವರು ಪ್ರತಿ ವರ್ಷ ಕನ್ನಡ, ಗುಜರಾತ ಮತ್ತು ಮಹಾರಾಷ್ಟ್ರ ಭಾಷೆಗಳಲ್ಲಿ ಹೊಸ ನಿಬಂಧಗಳನ್ನು ಮತ್ತು ಕವಿತೆಗಳನ್ನು ರಚಿಸುವವರಿಗೆ ನಾಲ್ಕಾನ್ನಲ್ಕ ನೂರು ರೂಪಾಯಿ ಕೊಡ ಮಾಡುತ್ತಿದ್ದದ್ದು ಈಗ ಒಂದೆರಡು ವರ್ಷಗಳಿಂದ ನಿಂತು ಹೋಗಿದ್ದು, ಈ ಬಾರಿ ಮುಂಬಯಿಯ ಇಂಗ್ಲಿಷ ಶಾಲಾ ಪತ್ರಕದಲ್ಲಿ ಬಂಗಾಲದಲ್ಲಿ ನಿಬಂಧವನ್ನು ರಚಿಸುವವರಿಗೆ ೪೦೦ ರೂಪಾಯಿಯ ಇನಾಮು ಘೋಷಿಸಿದ್ದು, ಕನ್ನಡವನ್ನು ಕೈ ಬಿಟ್ಟಿದ್ದು ಏಕೆಂದು ತಿಳಿದು ಬರಲಿಲ್ಲ. ಮೆ. ಡೈರೆಕ್ಟರ ಸಾಹೇಬರು ವಿಚಾರಿಸುವರೆಂದು ಕೋರಿಕೊಂಡು, ರಸೆಲ್ಲರು ಸಲ್ಲಿಸಿದ ಕೋರಿಕೆಯು[೩೩] ಕನ್ನಡದ ಬೆಂಗಾವಲಾಗಿ ಮಾಡಿದ ಕಾರ್ಯಕ್ಕೆ ಸಾಕ್ಷಿಯಾಗುತ್ತದೆ.

ಟ್ರೇನಿಂಗ ಕಾಲೇಜ್ ಮರಳಿ ಧಾರವಾಡಕ್ಕೆ ಸ್ಥಳಾಂತರ:

ಧಾರವಾಡದಲ್ಲಿ ಟ್ರೇನಿಂಗ ಕಾಲೇಜ ಮತ್ತು ಹೈಸ್ಕೂಲು ಕಟ್ಟಲು ೨೫ ಎಕರೆ, ಎರಡು ಗುಂಟೆ ಜಾಗವನ್ನು ಒಟ್ಟು ೭೫೧೫/– ರೂಪಯಿಗಳಿಗೆ, ಸವಣೂರು ನವಾಬರಿಂದ ಖರೀದಿಸಿ ಸ್ಥಳ ನಿಗದಿ ಮಾಡಲಾಗುತ್ತದೆ. 'ಧಾರವಾಡದಲ್ಲಿ ಹಾಯಸ್ಕೂಲ ಮತ್ತು ಟ್ರೇನಿಂಗ ಕಾಲೇಜಗಳಿಗಾಗಿ ಎರಡು ಹೊಸ ಶಾಲಾಗೃಹಗಳನ್ನು ಕಟ್ಟುವ ಕೆಲಸವು ಮೂರು ವರ್ಷಗಳಿಂದ ನಡೆದಿದ್ದು, ಈಗ ಎರಡು ಗೃಹಗಳು ಸಿದ್ಧವಾಗಿ, ಹೋದ ತಿಂಗಳಲ್ಲಿ, **ರಾಬರ್ಟಸನ್ ಮತ್ತು ರಸೆಲ್ಲರ** ಉಪಸ್ಥಿತಿಯಲ್ಲಿ ಸ್ಕೂಲು ಸ್ಥಳಾಂತರಗೊಂಡಿದೆ. ಟೇನಿಂಗ ಕಾಲೇಜ ಇದೇ (ಅಕ್ಟೋಬರ)ತಿಂಗಳಲ್ಲಿ ಸ್ಥಳಾಂತರ ಹೊಂದುತ್ತಿರುವುದಾಗಿ ವಿದ್ಯಾ ಇಲಾಖೆಯ ವೃತ್ತಾಂತದಿಂದ ತಿಳಿದು ಬರುತ್ತದೆ'[೩೪] ಆದರೆ ಮತ್ತೇ ಡಿಸೆಂಬರ ೧೮೭೪ರಲ್ಲಿ 'ಇನ್ನೂ ಒಂದು ವರ್ಷ ಟ್ರೇನಿಂಗ್ ಕಾಲೇಜ್ ಧಾರವಾಡಕ್ಕೆ ಸ್ಥಳಾಂತರವಾಗುವುದಿಲ್ಲ' ಎಂಬ ಸುದ್ದಿ ತಿಳಿದು ಬರುತ್ತದೆ.[೩೫] ಮತ್ತೇ ಎಜ್ಯುಕೆಷನ್ ಇನ್ಸಪೆಕ್ಟರ ಬೆಳಗಾವಿಗೆ ಬಂದಿರುವ ಮತ್ತು ಟ್ರೇನಿಂಗ ಕಾಲೇಜ್ ಧಾರವಾಡಕ್ಕೆ ಸ್ಥಳಾಂತರಗೊಂಡಿರುವ ವಿಷಯವನ್ನು ಅಂದಿನ ಶಾಲಾ ಪತ್ರಕದ ಪ್ರಥಮ ಪುಟದಲ್ಲಿ ಪ್ರಥಮ ಸುದ್ದಿಯಾಗಿ ಪ್ರಕಟಿಸಲಾಗಿದೆ. ಮೇ ೧೮೭೫ ರಲ್ಲಿ ಟ್ರೇನಿಂಗ ಕಾಲೇಜ್ ಜೂನ್ ೧ನೇ ತಾರೀಖು ನಿಶ್ಚಯವಾಗಿ ಧಾರವಾಡಕ್ಕೆ ಬರುವುದು ಎಂದು ಹೇಳಿದಂತೆ **ಜೂನ್ ೧, ೧೮೭೫ರಂದು ಟ್ರೇನಿಂಗ ಕಾಲೇಜ್ ಧಾರವಾಡಕ್ಕೆ ಸ್ಥಳಾಂತರಗೊಂಡಿದೆ.** ಆದರೆ ವಿದ್ಯಾರ್ಥಿಗಳಿಗೆ ಶಾಲಾಗೃಹದಲ್ಲಿ ಉಳಿದುಕೊಳ್ಳಲು ಆದೇಶವಿಲ್ಲದ್ದರಿಂದ, ಮನೆಗಳು ಸಿಗದೇ ಇದ್ದದ್ದರಿಂದ ಪರದಾಡುವಂತಾಗಿತ್ತು.[೩೬] ಕಟ್ಟಡದ ಅಪೇಕ್ಷಿತ ಅಲಭ್ಯತೆಯಿಂದಾಗಿ ಸ್ಥಳಾಂತರ ತಡವಾಗುತ್ತಲೇ ಇತ್ತು. ಈ ಪ್ರಸಂಗವನ್ನು ಡಿಸೆಂಬರ, ೧೮೯೦ರಲ್ಲಿ ರಾವಜೀ ಬಾಳಾಜೀ ಕರಂದೀಕರ, ಪ್ರಿನ್ಸಿಪಾಲರಾಗಿದ್ದಾಗ ಕಾಲೇಜಿನ ಸರ್ಟೀಫೀಕೆಟ್ ವಿತರಣಾ ಸಮಾರಂಭದಲ್ಲಿ ಅತೀ ಕಳಕಳಿಯಿಂದ ಹೀಗೆ ನೆನೆಯುತ್ತಾರೆ: "......ಧಾರವಾಡ ಪಟ್ಟಣವು

ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಪ್ರಾಂತ್ಯದ ಮಧ್ಯ ಸ್ಥಳವಾಗಿರುವುದರಿಂದ ಇಂಥ ವಿದ್ಯಾಲಯವು ಇಲ್ಲಿಯೇ ಇರತಕ್ಕದ್ದುಚಿತವೆಂದು ಗ್ರಹಿಸಿ ಈ ಜಿಲ್ಲೆಯ ಆಗಿನ ಹೆಸರಾದ ಕಲೆಕ್ಟರ ಮೆ. ರಾಬರ್ಟಸನ್ ಸಾಹೇಬರು ಬಹು ಶ್ರಮಬಟ್ಟು ೫೦,೦೦೦ ರೂಪಾಯಿಗಳನ್ನು ವರ್ಗಣಿಯಿಂದ ಕೂಡಿಸಿ ಈ ಭವ್ಯವಾದ ಇಮಾರತಿಯನ್ನು ಕಟ್ಟಿಸಿದರು; ಮತ್ತು ಸನ್ ೧೮೭೫ನೇ ಇಸವಿಯಲ್ಲಿ ಕಾಲೇಜವನ್ನು ಬೆಳಗಾವಿಯಿಂದ ಧಾರವಾಡಕ್ಕೆ ತಿರುಗಿ ತರಿಸಿದರು....”[೩೭] ಇದಕ್ಕೆ ಪೂರಕವಾಗಿ ಮುಂಬಯಿಯ ಪತ್ರಾಗಾರದಲ್ಲಿ ದೊರೆತ ದಾಖಲೆ ನಿಖರ ಸಾಕ್ಷಿ ನೀಡುತ್ತದೆ : P.W.D. (General) volume- 403/ 1868-1889: ಇದೊಂದು ದಾಖಲೆಗಳ ಬೃಹತ್ ಪುಸ್ತಕ. ಇದರ ಪುಟ ಸಂಖ್ಯೆ S-9 ನಿಂದ ಆರಂಭಿಸಿ S-443ರವರೆಗೆ, ೧೮೬೯ರಲ್ಲಿ ಟ್ರೇನಿಂಗ ಕಾಲೇಜನ್ನು ಬೆಳಗಾವಿಯಿಂದ ಧಾರವಾಡಕ್ಕೆ ಸ್ಥಳಾಂತರಿಸಲು, ಯೋಜನೆಯನ್ನು ತಯಾರಿಸಿದ ಮತ್ತು ಸರಕಾರದ ಗಮನಕ್ಕೆ ತಂದ ಮಿ. ರಾಬರ್ಟಸನ್ ಇವರ ಕಾರ್ಯಪ್ರವೃತ್ತಿಯನ್ನು ಶ್ಲಾಘಿಸುತ್ತ, ಟ್ರೇನಿಂಗ ಕಾಲೇಜಿನ ಹೊಸ ಕಟ್ಟಡದ ಕಾರ್ಯಾರಂಭಕ್ಕಾಗಿ ಪ್ರಸ್ತಾವನೆ ಮತ್ತು ಅಂದಾಜು ವೆಚ್ಚವನ್ನು ಸಲ್ಲಿಸಲು ಸರಕಾರ ಕೇಳಿದೆ. ಸರಕಾರಕ್ಕೆ ಸಲ್ಲಿಸಿದ ಎಲ್ಲ ಪ್ರಸ್ತಾವನೆ ಮತ್ತು ಅಂದಾಜು ವೆಚ್ಚಗಳು ಈ ಕಡತದಲ್ಲಿ ಸಿಗುತ್ತವೆ:

P.W.D (Gen) vol. 403/ 1868-89

S-9

No. 469.

EDUCATIONAL DEPARTMENT.

Bombay Castle, 4th September 1869.

The Director of Public Instruction, No. 1779, dated the 19th August 1869.

Submits a report by the Collector of Dharwar of a very important Educational undertaking by the people of that District, who have subscribed a sum of 48,000 Rupees, besides the endowment of some Scholarships, in order to make Dharwar by the establishment there of a High School and Training College, the centre of Canarese education, secondary and primary.

Recommends the establishment of a High School under a Native Graduate, and the usual proportion of subsidy to the cost of School and College-buildings.

Submits that the acknowledgment of Government are due to Mr. Robertson for the care and energy with which his proposals have been matured.

RESOLUTION.—This effort on the part of the people of the Dharwar district is very creditable to that community, and should His Excellency in Council thinks receive all the support and encouragement that it is in the power of Government to give. The proposals of the Director of Public Instruction are judicious, and may all be approved of with the exception of the suggestion for the removal of the Training College from Belgaum to Dharwar. This calls for further enquiry, and the opinion of the Belgaum authorities should be obtained by the Director of Public Instruction, and forwarded to Government before the propriety of this change is decided upon. The Director of Public Instruction approves of the measure but gives no reasons, and he might be called upon to supply the omission. His Excellency in Council concludes that it will be necessary to obtain the sanction of the Government of India to the additional outlay that is requested, and this may be at once applied for, and all necessary steps taken to cause the establishment of the High School at Dharwar and the erection of the building to be proceeded with as speedily as possible.


The thanks of Government should be conveyed to Mr. Robertson for his action in this matter.

The Public Works Department should be requested to favor the Educational Department with its opinion on the Plan and Estimate.

Secretary to Government.


To,

THE DIRECTOR OF PUBLIC INSTRUCTION.
THE PUBLIC WORKS DEPARTMENT OF THE SECRETARIAT. (With the Plan and Estimate.)
THE ACCOUNTANT GENERAL, BOMBAY. (With copy of the letter to the Government of India.)
THE GOVERNMENT OF INDIA. (By letter.)


1870

Transfer from the Educational Departt d/ 28th March 1870

Of letter from the Director of Public Instruction requesting loan of the plan & estimate of the training college lately built at Ahmedabad, as he proposes to utilize them for a building of the same kind at Dharwar.


No. 464 of 1870. P.W.D.

28th March 1870

P.F.

Super Eng. N.D.

Who should send to the Director of P.I. the plan & estimate he requires.

25/3

ಈ ಮೇಲೆ ಹೇಳಿದಂತೆ, ಅಹಮದಾಬಾದನಲ್ಲಿರುವ ಟ್ರೇನಿಂಗ ಕಾಲೇಜಿನಂತೆಯೇ ಧಾರವಾಡದಲ್ಲಿಯೂ ಕಟ್ಟಡ ನಿರ್ಮಿಸಲು, ಕಡತ ಮಂಡನಾ ಟಿಪ್ಪಣಿಗಳೊಂದಿಗೆ ಒಂಭತ್ತು ಪುಟಗಳಲ್ಲಿ ಈ ಮುಂದಿನಂತೆ ಅಂದಾಜು ವೆಚ್ಚದ ಘೋಷ್ವಾರೆಯನ್ನು ಮಂಡಿಸಲಾಗಿದೆ. ವರ್ಗ ಕೋಣೆಗಳಿಗೆ ೧೦೦೧೮/-, ವಿದ್ಯಾರ್ಥಿಗಳ ಕೆಳಮಹಡಿಗೆ ೧೦,೯೫೫.೭೩, ವಿದ್ಯಾರ್ಥಿಗಳ ಮೇಲ್ಮಹಡಿಗೆ ೯೩೭೮/-, ಊಟದ ಕೋಣೆಗೆ ೩೨೦೬, ಶಿಕ್ಷಕರ ವಸತಿ ನಿಲಯಗಳಿಗೆ ೪೧೨೮/-, ಸೇವಕರ ವಸತಿ ನಿಲಯಗಳಿಗೆ ೨೩೦೦/-, ಮುಖ್ಯಸ್ಥರ ವೈಯಕ್ತಿಕ ಕಟ್ಟಡಕ್ಕೆ ೧೦೪೨/-, ಕಂಪೌಂಡ ಗೋಡೆಗೆ ೧೨೯೯/- ಹೀಗೆ ಒಟ್ಟು ಅಂದಾಜು ವೆಚ್ಚ ರೂ.೫೨,೦೯೭/-ರ ಪ್ರಸ್ತಾವನೆ ನೀಡಲಾಗಿದೆ. ಅದನ್ನು ದಕ್ಷಿಣ ವಿಭಾಗದ ಸುಪರಿಟೆಂಡಿಂಗ ಇಂಜನೀಯರರಿಗೆ

ಕಳುಹಿಸಲಾಗಿದೆ. ಅದು ಕಾಲಕಾಲಕ್ಕೆ, ಅಷ್ಟಷ್ಟೇ ಮಂಜೂರಾದ ಮತ್ತು ಕಾಲಕಾಲಕ್ಕೆ, ಅಷ್ಟಷ್ಟೇ ಖರ್ಚಾದ ಎಲ್ಲ ವಿವರಗಳು ಈ ಕಡತದಲ್ಲಿ ಸಿಗುತ್ತವೆ.

ಈ ಎಲ್ಲ ಕಾರ್ಯಚಟುವಟಿಕೆಗಳ ಪತ್ರವ್ಯವಹಾರಗಳು ೨೩-೧೨-೧೮೭೦ ರಲ್ಲಿ W.A.BAKER, Captain, R.E, ೧೫-೧೦-೧೮೭೫ ರಲ್ಲಿ E.L.MARRYAT, Captain, R.E, ೨-೬-೧೮೮೦ರಲ್ಲಿ C.J. MERRIMAN, Colonel, R.E, ೧೦-೧೧-೧೮೮೪ ರಲ್ಲಿ WALTER. C. HUGHES, C.E, ಇವರೆಲ್ಲರೂ ಸರಕಾರದ ಅಧೀನ ಕಾರ್ಯದರ್ಶಿಗಳಾಗಿದ್ದಾಗ ನಡೆದಿವೆ. ಇದೊಂದು ಅಮೂಲ್ಯ ದಾಖಲೆ.

ಟ್ರೇನಿಂಗ ಕಾಲೇಜ್ ಧಾರವಾಡಕ್ಕೆ ಸ್ಥಳಾಂತರಗೊಂಡಾಗ ಭುಜಂಗರಾವ. ಎಚ್. ಹುಯಿಲಗೋಳರು ಪ್ರಿನ್ಸಿಪಾಲರಾಗಿದ್ದರು. ಕಾಲೇಜಿನಲ್ಲಿ ಫಸ್ಟ ಅಸಿಸ್ಟಂಟ, ಸೆಕೆಂಡ್ ಅಸಿಸ್ಟಂಟ ಎಂದು ಹುದ್ದೆಗಳಿದ್ದವು. ಇದರೊಂದಿಗೆಯೇ **ಎರಡು ವರ್ಷದ ಹಿಂದೆ ೧೮೭೫ರಲ್ಲಿಯೇ ಸ್ವತಂತ್ರವಾಗಿದ್ದ ಟ್ರಾನ್ಸಲೇಟರ್ ಕಚೇರಿಯೂ ಧಾರವಾಡಕ್ಕೆ ಬಂದಿತ್ತು**. ಟ್ರಾನ್ಸಲೆಟರ್ ಆಗಿ ವೆಂಕಟ ರಂಗೋ ಕಟ್ಟಿ ಮತ್ತು ಮತ್ತು ಅಸಿಸ್ಟಂಟ್ ಟ್ರಾನ್ಸಲೆಟರ್ ಆಗಿ ಗಂಗಾಧರ ಮಡಿವಾಳೇಶ್ವರರು ಇದ್ದರು. ಟ್ರಾನ್ಸಲೆಟರ್ ವೆಂಕಟ ರಂಗೋ ಕಟ್ಟಿಯವರು ಧಾರವಾಡದಲ್ಲಿಯ ಟ್ರಾನ್ಸಲೇಟಿಂಗ ಕಚೇರಿಯಲ್ಲಿದ್ದು ಕಾರ್ಯ ನಿರ್ವಹಿಸಿದರೆ, ಗಂಗಾಧರ ಮಡಿವಾಳೇಶ್ವರರು ಬೆಳಗಾವಿಯಲ್ಲಿದ್ದು ಅಸಿಸ್ಟಂಟ್ ಮಾಸ್ತರ ಕೆಲಸದೊಂದಿಗೆ ಅನುವಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಟ್ರಾನ್ಸಲೆಟರ್ ವೆಂಕಟ ರಂಗೋ ಕಟ್ಟಿಯವರು ಒಂದು ವರ್ಷದ ಫೇರ್ಲೋ(ಅರ್ಧ ಪಗಾರದ ಖಾಸಗಿ ರಜೆ) ರಜೆ ಮೇಲೆ ತೆರಳಿದಾಗ ಅವರ ಪ್ರಭಾರವನ್ನು ಬೆಳಗಾವಿಯ ಡೆಪ್ಯೂಟಿ ಎಜ್ಯುಕೆಷನ್ ಇನ್ಸಪೆಕ್ಟರರಾದ ಪಾಂಡುರಂಗ ಚಿಂತಾಮಣಿ ಪೇಟಕರ ಇವರಿಗೆ ವಹಿಸಿದ್ದು ಅವರು ಧಾರವಾಡಕ್ಕೆ ಬಂದು ಚಾರ್ಜ ತೆಗೆದುಕೊಂಡರು. ಅವರ ಸ್ಥಳಕ್ಕೆ ಧಾರವಾಡದ ಅಸಿಸ್ಟಂಟ್ ಇನ್ಸಪೆಕ್ಟರರಾದ ಅಪ್ಪಾಜಿ ಬಾಬೂರಾವ ದಿವೇಕರ ಇವರನ್ನು ನೇಮಿಸಿ, ಅವರ ಕೆಲಸಕ್ಕೆ ಧಾರವಾಡದ ಹೈಸ್ಕೂಲಿಗೆ ಹೊಸದಾಗಿ ಬಂದ ರಾವಜಿ ಬಾಳಾಜಿ ಕರಂದೀಕರ ಎಂಬುವರನ್ನು ನೇಮಿಸಿದ್ದು,[೩೮] ಈ ಸರಣಿ ಚಾರ್ಜಗಳು ಕೌತುಕ ಹುಟ್ಟಿಸುತ್ತವೆ.

ಪತ್ರಿಕೆಯ ಸಂಪಾದಕರ ವಿಚಾರ ಕುರಿತಂತೆ ಇಲ್ಲಿವರೆಗೂ ಯಾವೂದೇ ಸ್ಪಷ್ಟತೆ ಕಂಡುಬರದೇ ಇದ್ದದ್ದು, ಜೂನ್ ೨೫ ೧೮೭೬(ಪುಟ ೩೬೦)ರಲ್ಲಿ ಶ್ರೀ ಪಿ ವಿ ಚಿಂತಾಮನಪೇಟಕರ ಅವರು ಚಾರ್ಜನಲ್ಲಿ ಇದ್ದಾಗ **'ಕನ್ನಡ ಶಾಲಾ ಪತ್ರಕದ ಎಡಿಟರ್ ಮತ್ತು ಕನ್ನಡ ಟ್ರಾನ್ಸಲೇಟರ್'** ಎಂದು ಬರೆದ ವೃತ್ತಿನಾಮದಿಂದಾಗಿ ಈ ಪತ್ರಿಕೆಯ ಎಡಿಟರ್ ಹುದ್ದೆ ಪ್ರತ್ಯೇಕವಾಗಿತ್ತು. ಕನ್ನಡದ ಟ್ರಾನ್ಸಲೇಟರರಾಗಿದ್ದವರೇ ಎಡಿಟರ್‌ರೂ ಆಗಿದ್ದರು ಎಂಬುದು ಹಾಗೂ ಕಾಲೇಜಿನ ಪ್ರಿನ್ಸಿಪಾಲರೇ ಪತ್ರಿಕೆಯ ಸಂಪಾದಕರಾಗಿರಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮತ್ತು ತಾ॥೩೦ ನವಂಬರ

ಸನ್ ೧೮೬೯ರಲ್ಲಿ ಗಂಗಾಧರ ಮಡಿವಾಳೇಶ್ವರ ತುರಮರಿಯವರು ಬರೆದ 'ಟ್ರಾವ' ಎಂಬುದು ಅರ್ಥವಿಸ್ತಾರಗೊಳ್ಳುತ್ತದೆ. ಆದರೆ ಪತ್ರಿಕೆಯ ಪ್ರಕಟಣೆಗೆ ಎಜ್ಯುಕೇಷನ್ ಇನ್ಸಪೆಕ್ಟರರು, ಡೆಪ್ಯೂಟಿ ಎಜ್ಯುಕೇಷನ್ ಇನ್ಸಪೆಕ್ಟರರು, ಪ್ರಿನ್ಸಿಪಾಲರು, ಟ್ರಾನ್ಸಲೇಟರರು, ಕನ್ನಡ ಕಾವ್ಯಪಂಡಿತರು ಇವರೆಲ್ಲರ ಒಮ್ಮತ, ಒಗ್ಗಟ್ಟು, ಸಹಕಾರ, ಸಹಯೋಗದೊಂದಿಗೇ ನಡೆಯುತ್ತಿತ್ತು ಎಂಬುದರಲ್ಲಿ ಎರಡು ಮಾತಿಲ್ಲ.

ಇನ್ನೊಂದು ಪ್ರಮುಖ ದಾಖಲೆ ಎಂದರೆ ಶಾಲಾ ಪತ್ರಕ ೨೫/೩ ಮಾರ್ಚ, ೧೮೯೦ ಪುಟ ೭೨ರಲ್ಲಿ 'R B Karandikar **ವ್ಯವಸ್ಥಾಪಕ ಸಂಪಾದಕ, ಶಾಲಾ ಪತ್ರಕ'** ಎಂದಿದೆ. ಏಕೆಂದರೆ ಈ ಅವಧಿಯಲ್ಲಿ **ಕರಂದೀಕರರು ಪ್ರಿನ್ಸಿಪಾಲರೂ** ಆಗಿದ್ದರು. ಆದ್ದರಿಂದ ಈ ಉಲ್ಲೇಖದ ಆಧಾರವನ್ನವಲಂಬಿಸಿ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರು ವ್ಯವಸ್ಥಾಪಕ ಸಂಪಾದಕರಾಗಿ ಕಾರ್ಯ ನಿರ್ವಹಿಸುವ ಪರಿಪಾಠ ಇಲ್ಲಿಂದಲೇ ಆರಂಭವಾಗಿದೆ.

ಮೇಟ್ರೀಕ್ಯುಲೇಶನ್ ಪರೀಕ್ಷೆ ನಂತರ ಟ್ರೇನಿಂಗ ಕಾಲೇಜ ಪ್ರವೇಶ ಪರೀಕ್ಷೆ ಮತ್ತು ಸರ್ಟಿಫೀಕೆಟ್ ಪರೀಕ್ಷೆಗಳ ಬರೆಯುವುದು ಕಡ್ಡಾಯವಾದ ಮೇಲೆ ಅನಿವಾರ್ಯತೆಯೇ ಅಗತ್ಯವೂ ಅಗಿ ಪರಿಣಮಿಸಿತು. ಕಾಲೇಜಿನಿಂದ ಬಂದವರಿಗೆ ಹೆಚ್ಚಿನ ಸಂಬಳ ನಿಗದಿಯಾಗುತ್ತಿತ್ತು. ೧೮೭೬ ಫೆಬ್ರುವರಿ ೨೨ರಂದು ಸರ್ಟಿಫೀಕೆಟ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ 'ಸರ್ಟಿಫೀಕೆಟ ಕೊಡುವ ಸಮಾರಂಭ' ಆರಂಭಗೊಂಡಿದೆ. ಅಂದಿನ ಆ ಸಮಾರಂಭಕ್ಕೆ 'ಧಾರವಾಡದ ಜಡ್ಜ ಅಧ್ಯಕ್ಷರಾಗಿದ್ದು ವಿದ್ಯಾ, ನ್ಯಾಯ, ಪೋಲಿಸ ಮತ್ತು ಮುಲ್ಕೀ ಇಲಾಖೆಗಳಿಂದ ದೊಡ್ಡ ಗೃಹಸ್ಥರು ಬಂದಿದ್ದರು. ವಾಯ್ಸಪ್ರಿನ್ಸಿಪಾಲರಾದ ಅಣ್ಣಾರಾವ ಸವದಿ ಕಾಲೇಜಿನ ವರದಿ ವಾಚನ ಮಾಡಿದ ಮೇಲೆ ಕೆಲವು ವಿದ್ಯಾರ್ಥಿಗಳಿಂದ ಸಂಸ್ಕೃತ, ಮರಾಠಿ, ಹಿಂದುಸ್ಥಾನಿ ಮೊದಲಾದ ಕವಿತೆಗಳನ್ನು, ನಾಟಕದೊಳಗಿನ ಭಾಷಣಗಳನ್ನು ಹೇಳಿಸಲಾಯಿತು. ನಂತರ ಅಧ್ಯಕ್ಷರು ನಾಲ್ಕು ಉಪದೇಶ ಮಾತಾಡಿ, ಸರ್ಟಿಫೀಕೆಟಗಳನ್ನೂ, ಪ್ರಾಕ್ಟಿಸಿಂಗ ಸ್ಕೂಲಿನವರಿಗೆ ಪುಸ್ತಕಗಳನ್ನು ಹಂಚಿ, ೫.೪೫ಕ್ಕೆ ಕಾರ್ಯಕ್ರಮ ಮುಕ್ತಾಯಗೊಂಡಿದೆ.'[೩೯] ಹೀಗೆ ಪ್ರತಿ ವರ್ಷ ಒಂದೊಂದೇ ಅಭಿವೃದ್ಧಿಪರ ಬದಲಾವಣೆಗಳು ಅಳವಡಿಕೆಯಾಗುತ್ತ ನಡೆದಿರುವುದು ಕಂಡುಬರುತ್ತದೆ. ೧೮೭೬ರಷ್ಟೊತ್ತಿಗೆ ಟ್ರೇನಿಂಗ ಆದವರು ಬೇಕಾದಷ್ಟು ಜನ ಸಿಗುವಂತಾಯಿತು. ಅದ್ದರಿಂದ ಡಾಯರೆಕ್ಟರ ಸಾಹೇಬರ ಅಪ್ಪಣೆಯಂತೆ ಟ್ರೇನಿಂಗ ಕಾಲೇಜ್ ಪ್ರವೇಶ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ ಕೊಡುವ ಬಕ್ಷಿಸನ್ನು ನಿಲ್ಲಿಸಲಾಯಿತು. ಇದರೊಂದಿಗೆ ೨೪ ಮಾರ್ಚ ೧೮೭೬ರಲ್ಲಿ ಟ್ರೇನಿಂಗ ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಂದ ಬರೆಯಿಸಿಕೊಳ್ಳುತ್ತಿದ್ದ ಮುಚ್ಚಳಿಕೆ ಪತ್ರವನ್ನು ಕೈಬಿಡಲಾಯಿತು. ಆದರೆ ಟ್ರೇನಿಂಗ ಪಡೆದವರಿಗೆ ನೌಕರಿ ಕೊಡುವಲ್ಲಿ ಆದ್ಯತೆ ಕೊಡುವುದಾಗಿ, ಇದು ಪ್ರಸ್ತುತ ಕಲಿಯುತ್ತಿರುವ ಮತ್ತು ಮುಂದೆ ಬರುವ ಉಮೇದುವಾರರಿಗೆ ತಿಳಿಸಬೇಕಾಗಿ (ಅನ್ವಯಿಸುವುದಾಗಿ) ಘೋಷಿಸಲಾಯಿತು[೪೦] ಇದೇ ವರ್ಷದಲ್ಲಿ 'ಐದು ವರ್ಷ ಹೆಡಮಾಸ್ತರರಾಗಿ ಸೇವೆ ಮಾಡಿದ ಅನ್ ಟ್ರೇನ್ಡ ಮಾಸ್ತರರಿಗೆ,

ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರು ಅಥವಾ ಡೆಪ್ಯೂಟಿ ಇನ್ಸಪೆಕ್ಟರರು ಶಿಫಾರಸು ಮಾಡಿದರೆ ಅಂಥವರು ಟ್ರೇನಿಂಗ ಕಾಲೇಜಿಗೆ ಹೋಗಬೇಕಿಲ್ಲ; ಇದು ಅಂಥವರಿಗೆ ಗ್ರೇಸ್ ಮಾರ್ಕ್ಸಆಗಿದೆ' ಎಂದು ವಿನಾಯಿತಿ ನೀಡಲಾಯಿತು.[೪೧]

ಡೆಪ್ಯೂಟಿ ಚನ್ನಬಸಪ್ಪನವರು ಮೇ ೧೮೭೬ರಲ್ಲಿ ಮೂರು ತಿಂಗಳ ಹಕ್ಕಿನ ರಜೆ ತೆಗೆದುಕೊಂಡಿರುವುದು, ಅವರ ಚಾರ್ಜನ್ನು ಪಾಂಡುರಂಗ ವೆಂಕಟೇಶ ಚಿಂತಾಮಣ ಪೇಟಕರ ಇವರಿಗೆ ನೀಡಲಾಗಿದೆ.[೪೨] ೧೮೭೭ ಏಪ್ರೀಲ್ ನಲ್ಲಿ ರಸೆಲ್‌ರು ಚನ್ನಬಸಪ್ಪನವರಿಗೆ ಚಾರ್ಜ ಕೊಟ್ಟಿದ್ದಾರೆ. ಮತ್ತೇ ಶಾ.ಪ. ೧೩, ಸಂ.೪ ಪುಟ ೭೭ ರಲ್ಲಿದ್ದಂತೆ ರಸೆಲ್‌ರ ಸ್ಥಳಕ್ಕೆ ಪುಣೆಯ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ರಾ.ಸಾ. ಸೀತಾರಾಮ ಚಿಂತಾಮಣಿ ಪಟವರ್ಧನ ಇವರು ಮೊಕರಾಗಿ(ಬಿಡುಗಡೆ) ಬಂದು ಚಾರ್ಜ ತಕ್ಕೊಂಡು ಕಾರ್ಯಾರಂಭ ಮಾಡಿದರು ಎಂದಿದೆ. ಹೀಗೆ ಮೇಲಿಂದ ಮೇಲೆ ರಸೆಲ್‌ರ ಕಾರ್ಯಭಾರ ಹಸ್ತಾಂತರಗೊಂಡಿದೆ.

ಜಗನ್ನಾಥ ಶ್ರೀಧರ ಗೋಖಲೆ, ಮು: ಬಮ್ಮನಹಳ್ಳಿ, ತಾ:ಹಾನಗಲ್ ಜಿ: ಧಾರವಾಡ ಎಂಬೊಬ್ಬ ಮಾಸ್ತರರು ಎಲ್ಲ ಶಾಲೆಗಳಲ್ಲಿ ಒಂದೇರೀತಿಯ ಪಠ್ಯಕ್ರಮ ಇರದಿರುವ ಕುರಿತು ಬರೆಯುತ್ತ– 'ಏಕಪ್ರಕಾರದ ಪಠ್ಯಕ್ರಮ ಇಲ್ಲದಿದ್ದರೆ ವರ್ಗವಾಗಿ ಬಂದ ಮಾಸ್ತರನು ಕಲಿಸುವ ಕ್ರಮ, ಮೊದಲಿನವನು ಇಟ್ಟ ಕ್ರಮದಂತಿರದೆ, ವಿದ್ಯಾರ್ಥಿಗಳಿಗೂ ಮಾಸ್ತರರಿಗೂ ತೊಂದರೆಯಾಗುತ್ತದೆ; ಆದ್ದರಿಂದ ಒಂದೇ ಪ್ರಕಾರ ಕಲಿಸುವ ಪದ್ಧತಿ ಪ್ರಸಿದ್ಧಿಯಾಗಬೇಕು; ಇಂಥ ಪದ್ಧತಿ ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಸಾಧಾರಣವಾಗಿ ಗೊತ್ತಿರಬಹುದು. ಆದರೆ ಎಲ್ಲ ಮಾಸ್ತರರು, ಅಸಿಸ್ಟಂಟರು ಟ್ರೇನ್ಡ ಆಗಿಲ್ಲ' ಎಂಬ ಬಗೆಗೆ ಚರ್ಚಿಸುತ್ತ, ಏಕಪಠ್ಯಕ್ರಮ ಹೇಗಿರಬೇಕೆಂಬುದಕ್ಕೆ ಸವಿವರವಾಗಿ, ಚಟುವಟಿಕಾಯುಕ್ತವಾಗಿರುವ ಮತ್ತು ೬ ಪುಟಗಳ ಸುಧೀರ್ಘವಾದ ಮಾದರಿಯೊಂದನ್ನು ನೀಡುತ್ತಾರೆ.[೪೩] ಆರಂಭಿಕ ಹಂತದ ಈ ಶಿಕ್ಷಣ ರೀತಿಯಲ್ಲಿ ಕಲಿಸುವ ವಿಷಯ ಮತ್ತು ಬೋಧನಾಪದ್ಧತಿಗಳ ನಿಶ್ಚಿತತೆ ಇಲ್ಲದಿರುವುದು, ಶಾಲೆಗಳಲ್ಲಿ ಹಾಗೋಂದು ಬೋಧಿಸುವ ಪಠ್ಯಪದ್ಧತಿಗಳು ವ್ಯವಸ್ಥಿತವಾಗಿ ಇಲ್ಲದಿರುವುದು, ಅದರ ರಚನೆ ಮತ್ತು ನಿಖರತೆಯ ಸಕತ್ ಅವಶ್ಯಕತೆ ಇರುವುದನ್ನು ನಾವಿಲ್ಲಿ ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಟ್ರೇನಿಂಗ ಕಾಲೇಜಿನಲ್ಲಿ ಅನುಸರಿಸುವ ಮತ್ತು ಬೋಧಿಸುವ ಪಠ್ಯಪದ್ಧತಿಗಳು ಮತ್ತದರ ಮಹತ್ವ ಬೆಳಕಿಗೆ ಬರುತ್ತದೆ. ಆದರೆ ತಕ್ಷಣ ಮುಂದಿನ ತಿಂಗಳಲ್ಲಿಯೇ ಅಂದರೆ ಜುಲೈ ೧೮೭೬ ಇಲಾಖೆಯಲ್ಲಿ ಈ ಬಗೆಗೆ ನಾಲ್ಕೂ ಜಿಲ್ಲೆಯ ಡೆಪ್ಯೂಟಿ ಇನ್ಸಪೆಕ್ಟರರನ್ನು ಸಭೆ ಕರೆದು, ಚರ್ಚೆ ನಡೆಸಿ, ಆರು ಇಯತ್ತೆಗಳೊಂದಿಗೆ ಏಳನೆಯ ಇಯತ್ತೆಯನ್ನ ಅರಂಭಿಸುವ, ಆರನೆಯ ಇಯತ್ತೆಗೆ ಬದಲು ಏಳನೆಯ ಇಯತ್ತೆಗೆ ಮುಲ್ಕಿ ಪರೀಕ್ಷೆ ತೆಗೆದುಕೊಳ್ಳುವ, ಗಣಿತದಲ್ಲಿ ಕಲಿಯುವ ವಿಷಯ ಭಾಗ ಹೆಚ್ಚಿಸುವ, ದೊಡ್ಡ ಊರುಗಳಲ್ಲಿಯ ಶಾಲೆಗಳಿಗೆ ಏಳು ವರ್ಗಗಳು, ಸಣ್ಣ ಊರುಗಳಲ್ಲಿಯ ಶಾಲೆಗಳಿಗೆ ನಾಲ್ಕೇ

ವರ್ಗಗಳು, ಹಳ್ಳಿ ಶಾಲೆಗಳಲ್ಲಿ ಹಳ್ಳಿಗಳಲ್ಲಿ ಉಪಯೋಗವಾಗುವ ಬರಹ, ಬರೆದ ಕಾಗದ ಓದೋಣ ಮತ್ತು ಬಾಯಿಲೆಕ್ಕ ಮುಂತಾದ ಮಹತ್ತರ ಬದಲಾವಣೆಗಳಾದವು. ನೌಕರಿ ಖಾಯಂಕ್ಕಾಗಿ ಸರ್ಟಿಫೀಕೆಟ್ ಪರೀಕ್ಷೆ ಇಲ್ಲವೇ ಮುಲ್ಕಿ ಪರೀಕ್ಷೆ ಪಾಸಾಗಲೇಬೇಕೆಂಬುದು ಕಡ್ಡಾಯವಾಯಿತು. ಟ್ರೇನಿಂಗ್ ಕಾಲೇಜಿನ ಪರೀಕ್ಷೆಗೆ ಇರುವ ವಿಷಯಗಳೆಂದರೆ– ಬೀಜಗಣಿತ, ಸಿದ್ಧಾಂತ, ಇತಿಹಾಸ, ಜಮಾಖರ್ಚು, ಪ್ರಾಕೃತಿಕ ಭೂಗೋಲ, ಸಂಸ್ಕೃತ, ಶಿಕ್ಷಣ ಪದ್ಧತಿ, ಕವಿತೆ, ನಿಬಂಧ; ಸರ್ಟಿಫೀಕೆಟ್ ಪರೀಕ್ಷೆಗಾಗಿ ಮೊದಲನೆಯ ವರ್ಷಕ್ಕೆ ಮತ್ತು ಎರಡನೆಯ ವರ್ಷಕ್ಕೆ–ಅಂಕಗಣಿತ, ಭೂಗೋಲ, ಬೀಜಗಣಿತ, ಸಿದ್ಧಾಂತ, ಪ್ರಾಕೃತಿಕ ಜ್ಯೋತಿಷ್ಯ, ಕವಿತೆ, ವ್ಯಾಕರಣ, ನಿಬಂಧ, ಇತಿಹಾಸ, ಭೂಗೋಲ, ಸಂಸ್ಕೃತ, ಜಮಾಖರ್ಚು, ಶಿಕ್ಷಣ ಪದ್ಧತಿ ಈ ವಿಷಯಗಳ ಮೇಲೆ ಬೇರೆ ಬೇರೆ ಪ್ರಶ್ನೆಗಳನ್ನು ಕೊಡುತ್ತಿದ್ದರು.

ರಾ. ರಾ. ವೆಂಕಟ ರಂಗೋ ಕಟ್ಟಿ ಇವರು ತಮ್ಮ ಟ್ರಾನ್ಸಲೇಟರ ಆಫೀಸನ ಚಾರ್ಜನ್ನು ಹೋದ ತಿಂಗಳನ ೨೨ ನೇ ತಾರೀಖಿನಲ್ಲಿ ತಕ್ಕೊಂಡದರಿಂದ, ಅವರ ಸ್ಥಳದಲ್ಲಿ ಮೊದಲು ಕೆಲಸ ಮಾಡುತ್ತಿದ್ದ ರಾ. ರಾ. ಪಾಂಡುರಂಗ ವೆಂಕಟೇಶ ಚಿಂತಾಮಣಿ ಪೇಟ್ಕರ ಇವರು ಮಿ. ರಸೆಲ್ ದೊರೆಗಳು ತಿರುಗಿ ಬರುವ ವರೆಗೆ ರಾ. ರಾ. ಚನಬಸಪ್ಪನವರ ಸ್ಥಳದಲ್ಲಿ ಧಾರವಾಡಜಿಲ್ಲೆಯ ಡಿ. ಇ. ಕೆಲಸಕ್ಕೆ ಆಕ್ಟಿಂಗ ಪ್ರಕಾರ ನೇಮಿಸಲ್ಪಟ್ಟಿದ್ದಾರೆ. ರಸೆಲ್ ದೊರೆಗಳು ಬಂದ ಬಳಿಕ ಚನಬಸಪ್ಪನವರು ತಮ್ಮ ಧಾರವಾಡದ ಸ್ಥಳಕ್ಕೆ ಹೋಗಿ, ಪಾಂಡುರಂಗ ರಾಯರು ತಮ್ಮ ಬೆಳಗಾವಿಯ ಸ್ಥಳಕ್ಕೆ ಹೋಗುವರೆಂದು ತೋರುತ್ತದೆ. ಆದರೆ ಇನ್ನು ಕೆಲವು ದೊಡ್ಡ ದೊಡ್ಡ ಬದ್ಲಿ ಕ[illegible]ವೆಗಳಾಗತಕ್ಕವಿರುತ್ತವೆಂದು ಕೇಳುತ್ತೇವೆ.

ವೆಂಕಟ ರಂಗೋ ಕಟ್ಟಿಯವರು ಮುಂಬಯಿಯ ಓರಿಯೆಂಟಲ್ ಟ್ರಾನ್ಸಲೇಟರ್‌ರೆಂದು ಕಚೇರಿಯಲ್ಲಿ ಕಾಯದೆಯ ಟ್ರಾನ್ಸಲೇಟರರೆಂದು ಸಧ್ಯಕ್ಕೆ ನೇಮಿಸಲ್ಪಟ್ಟು, ಅವರ ಸ್ಥಳಕ್ಕೆ ಪಾಂಡುರಂಗ ವೆಂಕಟೇಶ ಚಿಂತಾಮಣಿ ಪೇಟ್ಕರ ಇವರು ಚಾರ್ಜ ತೆಗೆದುಕೊಳ್ಳುವರೆಂಬ ವರ್ತಮಾನ ತಿಳಿಯುತ್ತದೆ.[೪೪]


೧೮೭೮ರ ಜುಲೈನ ನಂತರದ ಅವಧಿಯಲ್ಲಿ ಟ್ರೇನಿಂಗ ಕಾಲೇಜಿಗೆ ಪ್ರವೇಶ ಪರೀಕ್ಷೆ ತೆಗೆದುಕೊಳ್ಳದೆ, ಮುಲ್ಕಿ ಪರೀಕ್ಷೆಯೇ ಪ್ರವೇಶ ಪರೀಕ್ಷೆಯಾಗಿ ಪರಿಗಣಿಸಿದೆ. ಆರೋಗ್ಯದಿಂದ ಸಧೃಢವಾದ ಮತ್ತು ೧೮ ವರ್ಷ ತುಂಬಿದವರು, ಅನುಮೋದಿಸಿದ ಸರ್ಟಿಫೀಕೆಟ ಮತ್ತು ಮುಲ್ಕಿ

ಸರ್ಟಿಫೀಕೆಟನೊಂದಿಗೆ ಅರ್ಜಿ ಹಾಕಿದರೆ, ಅವರು ಪಡೆದ ಅಂಕಗಳಾಧಾರದ ಮೇಲಿಂದ ರೂಪಾಯಿ ೬ ಮತ್ತು ೭ ರಂತೆ ಸಂಬಳ ದೊರಕಿ ಆತ ಪಗಾರೀ ವಿದ್ಯಾರ್ಥಿ ಎನಿಸುತ್ತಿದ್ದನು.[೪೫] ಟ್ರೇನಿಂಗ ಕಾಲೇಜಿನ ವ್ಹಾಯಿಸ ಪ್ರಿನಿಪಾಲರಾದ ಶ್ರೀನಿವಾಸ ರಾಮಚಂದ್ರ ಸವದಿಯವರು ಇದೇ ವೇಳೆಯಲ್ಲಿ ಮುಂಬಯಿಯ ಅಸಿಸ್ಟಂಟ ಕನ್ನಡ ಟ್ರಾನ್ಸಲೇಟರ ಹುದ್ದೆಗಾಗಿ ಇನ್ಸಪೆಕ್ಟರರಿಂದ ಶಿಫಾರಸುಗೊಳ್ಳುತ್ತಾರೆ ಮತ್ತು ಅಲ್ಲಿಗೆ ಹೋಗಿ ಕಾರ್ಯಾರಂಭಿಸಿ, ಅಲ್ಲಿಯೇ ಉಳಿದಾಗ, ಇಲ್ಲಿ ಅವರ ಸ್ಥಳಕ್ಕೆ ಟ್ರೇನಿಂಗ ಕಾಲೇಜಿನ ಗಣಿತ ಶಿಕ್ಷಕರಾದ ಸುಬ್ಬರಾವ ಯಾತಗಿರ, ಇವರು ಕಾರ್ಯ ನಿರ್ವಹಿಸುತ್ತಾರೆ. ೧೮೭೭ ಜುಲೈನಲ್ಲಿ ಶ್ರೀನಿವಾಸ ರಾಮಚಂದ್ರ ಸವದಿಯವರು ಟ್ರೇನಿಂಗ ಕಾಲೇಜಿನ ವ್ಹಾಯಿಸ ಪ್ರಿನಿಪಾಲ ಸ್ಥಾನಕ್ಕೆ ಮರಳಿ ಹಾಜರಾಗುತ್ತಾರೆ ಮತ್ತು 'ನಮ್ಮ ಅವಸ್ಥೆ ಹೀಗಾಗುವುದಕ್ಕೆ ಕಾರಣವೇನು' ಎಂಬ ಪುಸ್ತಕ ಪ್ರಕಟಿಸುತ್ತಾರೆ.[೪೬]

ಅಲ್ಲದೇ ಅನ್ಟ್ರೇನ್ಡ ಶಿಕ್ಷಕರು ಟ್ರೇನಿಂಗ ಕಾಲೇಜಿನ ತರಬೇತಿ ಪಡೆಯದಿದ್ದರೆ ಅಂಥವರಿಗೆ ಬಡ್ತಿ ಇಲ್ಲ ಎಂಬ ಆದೇಶವು ೧೮೮೦ರಲ್ಲಿ ಹೊರಟಿತು. ಹೀಗೆ ಟ್ರೇನಿಂಗಿನ ಮಹತ್ವ, ಬೇಡಿಕೆ ಹೆಚ್ಚಾಗುತ್ತ ಹೊರಟಿತು. ೧೮೮೦ ಮಾರ್ಚನಲ್ಲಿ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಭುಜಂಗರಾವ ಹುಯಿಲಗೋಳ ಇವರ ವೇತನ ಹೆಚ್ಚಳವಾದ ಬಗೆಗೆ **ಶಿವಾಜಿ ಯಜ್ಞೇಶ್ವರ ವಾಜಪೇಯಿ** ಎನ್ನುವ ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿ ಶಾಲಾಪತ್ರಕದಲ್ಲಿ ಪ್ರಕಟಿಸಿ, ಈ ಸುವಾರ್ತೆಗಾಗಿ ಅತ್ಯಾನಂದ ವ್ಯಕ್ತಪಡಿಸಿದ್ದು ಅಚ್ಚರಿ ಮೂಡಿಸುತ್ತದೆ.

ಅಗಸ್ಟ ೧೮೮೦ರಲ್ಲಿ ಚನ್ನಬಸಪ್ಪನವರಿಗೆ ಜ್ವರ ಬಂದು, ಹೊಟ್ಟೆಯ ಸಮಸ್ಯೆಯಾಗಿ ಬಳಲಿದ ಸಮಾಚಾರವಿದೆ. ಸಪ್ಟಂಬರದಲ್ಲಿ ಚನ್ನಬಸಪ್ಪನವರು ರಜೆ ಹಾಕಿದ್ದರಿಂದ ಶ್ರೀನಿವಾಸ ಕೋನೇರ ರೊದ್ದ ಇವರು ಚಾರ್ಜ ತೆಗೆದುಕೊಳ್ಳುತ್ತಾರೆ. ಆದರೆ ಚನ್ನಬಸಪ್ಪನವರು ರಜೆ ಮುಗಿಯುವ ಮೊದಲೇ ಹಾಜರಾಗಿ, ಮತ್ತೇ ಆರೋಗ್ಯ ಹದಗೆಟ್ಟದ್ದರಿಂದ ೧೮೮೦ ನವೆಂಬರನಲ್ಲಿ ಚನ್ನಬಸಪ್ಪನವರು ೪೦ ದಿನಗಳ ರಜೆ ಹಾಕಿದಾಗ ಇವರ ಚಾರ್ಜನ್ನ ರೊದ್ದ ಶ್ರೀನಿವಾಸರಾಯರು ತೆಗೆದುಕೊಳ್ಳುತ್ತಾರೆ. ೧೮೮೧ ಜನೇವರಿ ೪ನೆಯ ತಾರೀಖಿನಂದು **ಚನ್ನಬಸಪ್ಪನವರು ವಿಧಿವಶರಾದ ವಾರ್ತೆ ಶಾಲಾಪತ್ರಕದ ಜಾನೇವಾರಿ ೧೮೮೧ ಪುಟ ೪-೫ರಲ್ಲಿ ಪ್ರಕಟಗೊಂಡಿದೆ.**

—o—


ನಾವು ಅತ್ಯಂತ ಶೋಕದಿಂದ ತಿಳಿಯಪಡಿಸುವದೇನೆಂದರೆ,
ಈ ಶಾಲೆಗಳ ಇವೇ ಕಾಲೇಜಿನಲ್ಲಿ ರಾವಸಾಹೇಬ ಚನ್ನಬಸಪ್ಪ,
ಪ್ಪನವರು ಮರಣ ಹೊಂದಿದರು. ಅವರಿಗೆ ಈಗ ಒಂದು
ವರ್ಷಗಳಿಂದ ಜ್ವರವು ಆಗಾಗ್ಗ ಬರುತ್ತಿತ್ತು. ಕಡೆಯಲ್ಲಿ
ಆ ಜ್ವರವು ಧಾತುಗತವಾಗಿ ಮರಣಕ್ಕೆ ಕಾರಣವಾಯಿತು.
ವಿದ್ವತ್ತೆ, ಉದ್ಯೋಗ, ಧೈರ್ಯ, ಅಭಿಮಾನ, ಮುಂತಾದ ಸ
ದ್ಗುಣಗಳು ಇವರಲ್ಲಿ ಹೆಚ್ಚಾಗಿದ್ದವು ಇವರ [illegible]

ಗದಿಂದ ವಿದ್ಯಾ ಖಾತೆಯೊಳಗಂದೊಂದು ಬೆಲೆಯುಳ್ಳ ರತ್ನ ವೇ ಹೋಯಿತೆಂದು ಪೋಟಿ ನಾವು ಕಡು ಖಿನ್ನರಾಗುತ್ತೇವೆ. ಇವರ ಹೆಸರಿನಿಂದ ಯೆನಾದರೂ ಸ್ಮಾರಕಕೃತ್ಯ ಮಾಡುವ ಉದ್ಯೋಗವನ್ನು ಇವರ ಸ್ನೇಹಿತರು ಮುಂದಕ್ಕಾದ ಹಾಕು ನಡಿಸಿದ್ದಾರೆ.

—*—

ಚನಬಸಪ್ಪಣ್ಣನವರ ಮರಣದಮೂಲಕವಾಗಿ, ರಾ. ಸಾ. ರಾಮಚಂದ್ರ ಅಣ್ಣಾಜೀ ಸಹಾಯಿರ, ಇವರನ್ನು ಧಾರವಾಡ ಡಿ. ಇ. ಕೆಲಸಕ್ಕೆ, ರಾ. ಸಾ. ರಾಮಜೀ ಬಾಳಾಜೀ ಕರಂದೀಕರ, ಇವರನ್ನು ಕಲಾದಗಿಯ ಡಿ. ಇ. ಕೆಲಸಕ್ಕೆ, ರಾ. ಸಾ. ರಾಮಚಂದ್ರ ವಿನಾಯಕ ಭಾನಪ, ಇವರನ್ನು ಬೆಳಗಾವಿಯ ಡಿ. ಇ. ಕೆಲಸಕ್ಕೆ, ರಾ. ರಾ. ಶ್ರೀನಿವಾಸ ಕೋವೇರ ದೇಷ್ಟ, ಇವರನ್ನು ಕಾನಡಾದ ಡಿ. ಇ. ಕೆಲಸಕ್ಕೆ ನೇಮಿಸಿದ ಸುದ್ದಿ ಯುಂಟೆಂದು ಬೆಳಗಾವ ಸಮಾಚಾರ ಪತ್ರವು ತಿಳಿಸುತ್ತದೆ.

—*—

ಅದುವರೆಗೂ ಪೂರ್ವನಿಯೋಜಿತವಾಗಿ ಮತ್ತು ಸಂಘಟನಾತ್ಮಕ ಒತ್ತಿಲ್ಲದೆ ಕೇವಲ ಚನ್ನಬಸಪ್ಪನವರ ಪ್ರಥಮ ಸಾರಥ್ಯದಲ್ಲಿ ಸದ್ದಿಲ್ಲದೆ ಮುಂದುವರೆಯುತ್ತಿದ್ದ ಕನ್ನಡದ ರಥ ಗಕ್ಕನೆ ನಿಂತಂತಾದದ್ದು ಅವರ ಹಿಂಬಾಲಕರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದು ಮೇಲಿನ ಈ (ವೆಂಕಟ ರಂಗೋ ಕಟ್ಟಿಯವರ) ಉಲ್ಲೇಖದಿಂದ ಸ್ಪಷ್ಟವಾಗುತ್ತದೆ. ಅಮೂಲ್ಯ ರತ್ನವೇ ಕಳೆದುಹೋದಂತಾಗಿ, ಎಲ್ಲರಲ್ಲಿ ಖಿನ್ನತೆಯನ್ನುಂಟು ಮಾಡಿತ್ತೆಂದರೆ ಅದು ಮಾಡಿದ ಆಘಾತ, ಪರಿಣಾಮ ಎಷ್ಟು ತೀವ್ರವಾಗಿತ್ತು, ಎಷ್ಟು ತೀಕ್ಷ್ಣವಾಗಿತ್ತು ಎಂಬುದು ಅವರಿಲ್ಲದ ಕೊರತೆಯ ಖಾಲಿತನವನ್ನು ಎತ್ತಿ ತೋರುತ್ತದೆ. ಈ ಗಾಯತುಂಬಲು ಅವರ ಸ್ಮಾರಕವನ್ನು ಮಾಡಬೇಕೆಂದು ಅವರ ಸ್ನೇಹಿತರ ಬಳಗ ವಿಚಾರಿಸಿದ್ದು, ತಲತಲಾಂತರದವರೆಗೂ ಉಳಿಯಬೇಕಾದ, ಉಳಿಯಬಲ್ಲ ಒಬ್ಬ ಮಹಾಮಾನವನ ಮಿಗೆಯಗಲದ ವ್ಯಕ್ತಿತ್ವವನ್ನು ಸಾರಿಸಾರಿ ಹೇಳುತ್ತದೆ. ಶಿಕ್ಷಣ ಇಲಾಖೆಯಲ್ಲಿ, ಅವರ ಸಂಗಡಿಗರಲ್ಲಿ ಮಾತ್ರವಲ್ಲದೆ, ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳಲ್ಲಿಯೂ ಈ ಖಾಲಿತನ ಎಲ್ಲೆಂದರಲ್ಲಿ ಕಾಡುತ್ತಿತ್ತು. ಇದಕ್ಕೆ ಇವರ ಮರಣೋತ್ತರವಾಗಿ ಶಿವಾಜೀ ಯಜ್ಞೇಶ್ವರ ವಾಜಪೇಯಿ ಎನ್ನುವ ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿ "ಶೋಕಾರ್ಥಗೀತ"ವೆಂಬ ೪೦ ಕವಿತೆಗಳ ಸಂಗ್ರಹವನ್ನು ರಚಿಸಿ, ಅದರಲ್ಲಿ ಚನ್ನಬಸಪ್ಪನವರ ಮರಣದ ಶೋಕವನ್ನು ಬಹು ಮನೋವೇದಕವಾಗಿ ಚಿತ್ರಿಸಿದ್ದು ಸಾಕ್ಷಿಯಾಗಿ ನಿಲ್ಲುತ್ತದೆ. ಈ ಸಂಗ್ರಹ ಈಗ ಲಭ್ಯವಿಲ್ಲ. ಈ ಸಂಗ್ರಹವನ್ನು ಎಲ್ಲ ಶಿಕ್ಷಕರು ಓದಬಹುದು ಎಂಬ ವಿನಂತಿಯೊಂದು ಇದೇ ೧೮೮೧ ಜನೇವರಿ ಪತ್ರಿಕೆಯ ಪುಟ ೬ರಲ್ಲಿ ಪ್ರಕಟಗೊಂಡಿದೆ. ಆದರೆ ಆ ಕೃತಿ ಎಲ್ಲಿಯೂ ಲಭ್ಯವಿಲ್ಲ. ಇಲ್ಲಿಗೆ ಟ್ರೇನಿಂಗ ಕಾಲೇಜಿನ ಪ್ರಪ್ರಥಮ ಅಧ್ಯಾಯ ಕೊನೆಗೊಂಡಿತು.

ಆಗ ಯಾವುದೇ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಪಡೆಯಲು ಕನಿಷ್ಠ ವಿದ್ಯಾರ್ಹತೆ ಇಂಥದ್ದೇ ಆಗಿರಬೇಕೆಂಬ ಕಟ್ಟುಕರಾರುಗಳೇನೂ ಇರಲಿಲ್ಲ. ಇದಕ್ಕೆ ಉದಾಹರಣೆ ಎಂದರೆ ೧೮೭೯ರ ಜುಲೈನಲ್ಲಿ ಟ್ರೇನಿಂಗ ಕಾಲೇಜಿನ ಗಣಿತ ಶಿಕ್ಷಕರಾದ ಸುಬ್ಬರಾವ ಯಾತಗಿರ ಎಂಬುವರು ಎರಡು ವರ್ಷದ ರಜೆ ತೆಗೆದುಕೊಂಡು ಪುಣೆಯ ಇಂಜನಿಯರಿಂಗ ಕಾಲೇಜಿನಲ್ಲಿ ಅಭ್ಯಾಸ ಮಾಡಲು ತೆರಳಿ, ಮತ್ತೇ ೧೮೮೨ರ ನವಂಬರನಲ್ಲಿ ಮರಳಿ ಬಂದು ಚಾರ್ಜ ತೆಗೆದುಕೊಂಡುದು, ಅನುಕೂಲತೆಗಳು ಅಂದೂ ಇದ್ದ ಬಗೆಗೆ ಅಚ್ಚರಿ ಮೂಡಿಸುತ್ತದೆ.[೪೭] ಇದೇ ವರ್ಷ ಟ್ರೇನಿಂಗ ಕಾಲೇಜಿನಲ್ಲಿ ಸಂಸ್ಕೃತ ಶಿಕ್ಷಕರಾಗಿದ್ದ ರಾಮಚಂದ್ರ ಶಾಸ್ತ್ರೀ ನರೇಗಲ್ ಇವರು ತೀರಿಕೊಂಡಿದ್ದರಿಂದ ಅವರ ಸ್ಥಳಕ್ಕೆ ಮತ್ತೊಬ್ಬ ಶಿಕ್ಷಕರನ್ನು ನೇಮಿಸುವ ವಿಚಾರ ಓದುವಾಗ ಟ್ರೇನಿಂಗ ಕಾಲೇಜಿನಲ್ಲಿ ಸಂಸ್ಕೃತವನ್ನು ಇನ್ನೂ ಬೋಧಿಸುತ್ತಿದ್ದರು ಎಂಬುದು ಗೊತ್ತಾಗುತ್ತದೆ.

೧೮೮೫ ಜೂನನಲ್ಲಿ (ಶಾ.ಪ. ೧೮೮೫, ೨೦/೬, ಜೂನ ಪುಟ ೧೨೧–೧೨೪ರಲ್ಲಿ) ಡೈರೆಕ್ಟರ ದೊರೆಗಳು ಪ್ರತಿ ವರ್ಷ ಮಳೆಗಾಲದಲ್ಲಿ, ವಿದ್ಯಾಭಿವೃದ್ಧಿ ಮಾರ್ಗಗಳನ್ನು ಆಲೋಚಿಸುವಂಥ ಸಭೆಗಳು ನಡೆಯುತ್ತಿರಬೇಕೆಂಬ ತಿರ್ಮಾಣ ಮಾಡುತ್ತಾರೆ. ಮತ್ತು ಅದರಂತೆ 'ಉತ್ತರ, ಈಶಾನ್ಯ, ದಕ್ಷಿಣ ಮತ್ತು ಮಧ್ಯ ಭಾಗಗಳ ಇನ್ಸಪೆಕ್ಟರಗಳು ತಮ್ಮತಮ್ಮ ಪ್ರಧಾನಸ್ಥಳಗಳಲ್ಲಿ ಶಿಕ್ಷಣ ಇಲಾಖೆಯ ಮುಖ್ಯಸ್ಥರ ಸಭೆಕರೆದು ವಿದ್ಯಾಭಿವೃದ್ಧಿಗೆ ಏನೇನು ಸುಧಾರಣೆಗಳನ್ನು ಮಾಡಬಹುದು ಎಂಬ ಬಗೆಗೆ ಒಂದು ಪಟ್ಟಿ ಮಾಡಿಕೊಂಡು, ಅದನ್ನು ಬಹು ಸಮ್ಮತಿಯಿಂದ ಅಂಗೀಕರಿಸಿದ ಸಂಗತಿಗಳ ಅಂತಿಮಗೊಳಿಸಿ ಬರೆದುಕೊಂಡು, ಅವನ್ನು ಪುಣೆಯಲ್ಲಿ ಡೈರೆಕ್ಟರ ದೊರೆಗಳ ಸಮ್ಮುಖದಲ್ಲಿ ನಡೆಯುವ ಮುಖ್ಯ ಸಭೆಯಲ್ಲಿ ವಿಚಾರ ವಿನಿಮಯಮಾಡಿ ಠರಾವು ಮಾಡತಕ್ಕದ್ದು ಮತ್ತು ಆ ಠರಾವಿನಂತೆಯೇ ಮುಂದೆ ಎಲ್ಲ ಕಡೆಗೂ ಕಾರ್ಯಗಳು ನಡೆಯಬೇಕು. ಇದರಿಂದ ಎಲ್ಲ ಭಾಗಗಳಲ್ಲಿ ಒಂದೇ ಪ್ರಕಾರದ ವ್ಯವಸ್ಥೆ ನೆಲೆಗೊಂಡು, ಹೊಸ ಸುಧಾರಣೆಗಳು ನಾಲ್ಕೂ ಭಾಗಗಳಲ್ಲಿ ಸರಿಯಾಗಿ ಆಗುವವು' ಎಂಬ ಮಹತ್ವದ ನಿರ್ಣಯ ಕೈಗೊಳ್ಳುತ್ತಾರೆ. ಮತ್ತು ಜೂನ ೨೯ರಂದೇ ಕೋಲ್ಹಾಪೂರದ ಡಿ.ಎ.ಇ.ಯವರನ್ನೂ ಒಳಗೊಂಡಂತೆ ಐದೂ ಜಿಲ್ಲೆಗಳ ಮುಖ್ಯಸ್ಥರನ್ನೆಲ್ಲ ಸಭೆ ಕರೆದು ಅನುಷ್ಠಾನವನ್ನೂ ಮಾಡುತ್ತಾರೆ.

ಅಲ್ಲದೆ ೧೮೮೯ರ ಹೊತ್ತಿಗೆ ನೇಮಕಾತಿಯ ವಯಸ್ಸು ೨೫ ಮತ್ತು ಅದಕ್ಕಿಂತ ಹೆಚ್ಚಿಗೆ ಎಂದು ನಿರ್ಧಾರವಾಗಿದೆ ಮತ್ತು ಟ್ರೇನಿಂಗ ಕಾಲೇಜಿನಲ್ಲಿ ಬಡಗಿ, ಕಮ್ಮಾರ ವಿದ್ಯೆಗಳನ್ನು ಕಲಿಸುವ ಶಿಕ್ಷಕರನ್ನು ನೇಮಿಸಿ, ಆ ವಿಷಯಗಳನ್ನೂ ಕಲಿಸಬೇಕೆಂಬ ನಿರ್ಧಾರಕ್ಕೆ ಬರಲಾಯಿತು.[೪೮] ಮತ್ತು ತತ್ಕಾಲದಲ್ಲಿಯೇ ಮೇ ತಿಂಗಳಲ್ಲಿ ಆ ಪ್ರಕಾರ ಶಿಕ್ಷಕರ ನೇಮಕ ಮಾಡಿ, ಜೂನ ತಿಂಗಳಲ್ಲಿ ತರಗತಿಗಳನ್ನು ನಡೆಸಲು ಪ್ರಾರಂಭ ಕೂಡ ಮಾಡಲಾಯಿತು. ಕಾಲೇಜಿನ ಎಲ್ಲ ವಿಷಯಗಳಲ್ಲಿ ಷಣ್ಮಾಷಿಕ, ವಾರ್ಷಿಕ ಪರೀಕ್ಷೆಗಳು ನಡೆಯ ತೊಡಗಿದ್ದವು. ಟ್ರೇನಿಂಗ್ ಕಾಲೇಜಿನಲ್ಲಿ ಮೂರು

ವರ್ಷದ ತರಗತಿಗಳಿಗೆ, ಎಲ್ಲ ವಿಷಯಗಳಲ್ಲಿ ನಡೆಯುವ ಷಾಣ್ಮಾಸಿಕ, ವಾರ್ಷಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಶಾಲಾಪತ್ರಕದಲ್ಲಿ ಕಾಲಕಾಲಕ್ಕೆ, ಎಡೆಬಿಡದೆ ಪ್ರಕಟಿಸಲಾಗಿದೆ. ೧೮೯೦ರಲ್ಲಿ ಈ ಪರೀಕ್ಷೆಗಳನ್ನು ಯಾಯಾವ ವಿಷಯದಲ್ಲಿ ಯಾರುಯಾರು ತೆಗೆದುಕೊಳ್ಳುವವರು ಎಂಬ ವಿಷಯ ಹಂಚಿಕೆಯನ್ನೂ ಪ್ರಕಟಿಸಲಾಗಿದೆ. ಹಾಗೆಯೇ ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆ '೨ನೇ ಅಥವಾ ೩ನೇ ಗ್ರೇಡಿನ ಮುಲ್ಕಿ ಸರ್ಟಿಫೀಕೆಟ್ ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ಐದುಘೂಟು ಎತ್ತರಿದ್ದವರೂ, ಹದಿನೇಳರ ಮೇಲೆ ಇಪ್ಪತ್ತೆರಡರ ಒಳಗೆ ವಯಸ್ಸುಳ್ಳವರೂ ಇರಬೇಕು, ಇಂಥವರು ಮುಲ್ಕಿ ಸರ್ಟಿಫೀಕೆಟನ್ನೂ, ವಯಸ್ಸಿನ ದಾಖಲೆಯನ್ನೂ ತರಬೇಕು. ಪರೀಕ್ಷೆಗೆ ಬಂದವರು ವಿದ್ಯಾರ್ಥಿಗಳೇ ಇರಲಿ, ಅಸಿಸ್ಟಂಟರೇ ಇರಲಿ ಉತ್ತಮ ರೀತಿಯಿಂದ ಪಾಸಾದ ನೂರು ಜನರನ್ನು ಪಗಾರಿ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳಲಾಗುವುದು' ಎಂಬ ಕಟ್ಟಳೆ ಕರಾರುಗಳೊಂದಿಗೆ ಮುಂದುವರೆದುಕೊಂಡು ಬರುತ್ತಿತ್ತು. ಡೆಪ್ಯೂಟಿಯಾಗಿದ್ದ ರೊದ್ದ ಶ್ರೀನಿವಾಸರಾಯರ ಆರೋಗ್ಯದಲ್ಲಿ ಏರುಪೇರು ಸಂಭವಿಸಿದ್ದೂ ಇದೇ ಕಾಲಘಟ್ಟದಲ್ಲಿಯೇ.

೨೩/೫/೧೮೮೯ ರಂದು 'ಕನ್ನಡ ಗಣಿತ ವಿದ್ಯೆ' ಎಂಬ ಪುಸ್ತಕ ಮಾರಾಟಕ್ಕಿದ್ದುದರ ಬಗೆಗೆ ಬರೆಯುತ್ತ 'ರಾಮಚಂದ್ರ ಬಾಳಕೃಷ್ಣ ಬೋಶೆ ಹೆಡ್ ಮಾಸ್ತರ, ಬೆಳಗಾಂವ ಕನ್ನಡ ಸಾಲಿ ನಂಬರ ೧' ಇವರು ತಮ್ಮ ವಿಳಾಸಕ್ಕೆ ಸಂಪರ್ಕಿಸಲು ತಿಳಿಸಿದ್ದಾರೆ. ಇಲ್ಲಿಯ ವಿಶೇಷವೆಂದರೆ 'ಇದರಲ್ಲಿ ರಾವಸಾಹೇಬ ಚನ್ನಬಸಪ್ಪ ಅಣ್ಣಾ ಮಾಜಿ ಡಿ.ಎ.ಇ.ಸಾ. ಇವರು ರಚಿಸಿದ ಅಂಕಗಣಿತ ಭಾಗ ೨ ನೇದರೊಳಗಿನ ಎಲ್ಲ ಪ್ರ ಶ(?) ಸಮುದಾಯಗಳು, ಆರವತ್ತು ಮುಲ್ಕೀ ಪರೀಕ್ಷೆಯ ಉದಾಹರಣೆಗಳು ಮತ್ತು ಬೇರೆ ಕೆಲವು ಉದಾಹರಣೆಗಳು ಕೂಡಿ ೪೦೨ ಉದಾಹರಣೆಗಳನ್ನು ಸುಲಭವಾಗಿ ಬಿಡಿಸಿರುತ್ತದೆ' ಎಂದು ಹೇಳಿಕೊಂಡಿದ್ದಾರೆ.[೯] ಅಂದರೆ ಈ ಪುಸ್ತಕದ ದೊರೆತರೆ ಇದರಲ್ಲಿಯ ಒಂದು ಭಾಗವಾಗಿ 'ಡೆಪ್ಯೂಟಿ ಚನ್ನಬಸಪ್ಪನವರ ಅಂಕಗಣಿತ ಭಾಗ-೨' ಈ ಪುಸ್ತಕ ನಮಗೆ ದೊರೆಯುತ್ತದೆ ಎಂಬುದು ವಿಧಿತವಾಗುತ್ತದೆ.

ವೆಂಕಟರಂಗೋ ಕಟ್ಟಿಯವರು ೧೮೮೬ರ ಅಕ್ಟೋಬರದಲ್ಲಿ, ೩೦೦ ರೂಪಾಯಿಯ ವೇತನದೊಂದಿಗೆ, ಮತ್ತೇ ಪ್ರಿನ್ಸಿಪಾಲರಾಗಿ ನೇಮಕಗೊಂಡಿರುವುದು ಅವರಿಗೆ ಸಂದ ಘನತೆ ಮತ್ತು ಗೌರವ ಎನ್ನಬಹುದು. ಅದರಲ್ಲಿ "ಇವರು ಇಪ್ಪತ್ತು ವರ್ಷದ ಪೂರ್ವದಲ್ಲಿಯೂ ಅದೇ ಕಾಲೇಜದ ಪ್ರಿನ್ಸಿಪಾಲರಾಗಿದ್ದರು. ಆದರೆ ಆಗಿನ ಸಂಬಳವು ೧೫೦ ರೂಪಾಯಿ ಇತ್ತು" ಎಂದು ಹೇಳುತ್ತದೆ. ಹೀಗೆ ಟ್ರೇನಿಂಗ ಕಾಲೇಜಿಗೆ ಪ್ರಾಚಾರ್ಯರಾಗಿ ನೇಮಕಗೊಂಡ ಮತ್ತು ಅಲ್ಲಿ ಅಮೂಲ್ಯ, ಅವಿಸ್ಮರಣೀಯ ಸೇವೆ ಸಲ್ಲಿಸಿದ ದಾಖಲೆಗಳನ್ನು ನಾವು ಕಾಣುತ್ತೇವೆ. ಪ್ರಿನಿಪಾಲರಾಗಿದ್ದ ಕರಂದೀಕರರು ಟ್ರಾನ್ಸಲೇಟಿಂಗ ಹುದ್ದೆಗೆ ಬದಲಾವಣೆಗೊಂಡಿದ್ದಾರೆ. ಶಾಲಾ ಪತ್ರಕವು ೨೧, ಸಂಚಿಕೆ ೧೦, ಅಗಟಂಬರ ೧೮೮೬ರ ಪು ೨೨೨ ಇದಕ್ಕೆ ಸಾಕ್ಷಿಯಾಗುತ್ತದೆ:

(೨೨೨)

ಅವರಿಗೆ ಹೋಗತಕ್ಕದ್ದಾಗಿದ್ದಾರೆ.

---- ೦ ----

ಸುಮಾರು ಇಪ್ಪತ್ತು ವರ್ಷ ಹಿಂದೇನವರಾಗಿ ಕನ್ನಡ ಟ್ರಾನ್ಸಲೇಟರ ಕೆಲಸ ಮಾಡುತ್ತಿದ್ದ ರಾ. ಸಾ. ವೆಂಕಟರಂಗೋ ಕಟ್ಟೀ ಅವರನ್ನು ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರ ಕೆಲಸಕ್ಕೆ ೩೦೦ ರೂಪಾಯಿ ಸಂಬಳವಾಗಿ ನೇಮಿಸಿದರು. ಅವರು ೨೦ ವರ್ಷದ ಪ್ರಾರಂಭದಲ್ಲಿಯೂ ಅದೇ ಕಾಲೇಜದ ಪ್ರಿನ್ಸಿಪಾಲರಾಗಿದ್ದರು. ಆದರೆ ಆಗಿನ ಸಂಬಳವು ೧೫೦ರೂಪಾಯಿ ಇತ್ತು

---- ೦ * ೦ ----

ಈ ವರ್ಷದಲ್ಲಿ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರಾಗಿದ್ದ ರಾ. ಸಾ. ರಾಮಜೀ ಬಾಳಾಜೀ ಕರಂದೀಕರ ಇವರನ್ನು ಟ್ರಾನ್ಸಲೇಟರ ಕೆಲಸಕ್ಕೆ ನೇಮಿಸಿದರು. ಆದರೆ ಇವರ ನೇಮಣೂಕ. ಹೀಗ ಮತ್ತೊಂದು ಕೆಲಸಕ್ಕೆ ಆಗತಕ್ಕದ್ದಿರುತ್ತದಂತಲೂ, ಟ್ರಾನ್ಸಲೇಟರರ ಸ್ಥಳವು ಕಮ್ಮಿ ಆಗತಕ್ಕದ್ದಿರುತ್ತದಂತಲೂ ಕೇಳುತ್ತೇವೆ.

---- ೧ ----

ಆದರೆ ಕಟ್ಟಿಯವರ ಹುದ್ದೆ ಬದಲಾವಣೆಯೊಂದಿಗೆ, ಟ್ರಾನ್ಸಲೇಟರ ಹುದ್ದೆಯೂ ನಿಂತು ಹೋಗುವಂಥ ಸುದ್ದಿ ದುರಾದೃಷ್ಟವೇ. ಬಹುಶಃ ಕಟ್ಟಿಯವರ ಟ್ರಾನ್ಸಲೇಟಿಂಗ್ ಕಾರ್ಯಕ್ಕೆ ತೊಡಗಿದ ಆಸುಪಾಸಿನಲ್ಲೇ ಆರಂಭವಾದ ಹುದ್ದೆ ಇಷ್ಟು ಬೇಗ ಹೀಗೆ ನಿಂತು ಹೋಗುವುದು, ಬಹುಭಾಷಾವಿಶಾರದರು ಹೆಚ್ಚಾದರೆಂತಲೋ? ಭಾಷಾಂತರದ ಅವಶ್ಯಕತೆ ಇಲ್ಲವೆಂದೋ? ಅಂತೂ ಹುದ್ದೆ ಇಲ್ಲವಾಗಿದೆ. ಕರಂದೀಕರರು ೨೪-೧-೧೮೮೭ಕ್ಕಾಗಲೇ ಡಿ.ಎ.ಇ. ಧಾರವಾಡ ಆಗಿ ನೇಮಣೂಕಿ ಹೊಂದಿದ್ದಾರೆ.

೧೮೮೭ರ ಜೂನ ತಿಂಗಳಿಗೆ ವಿಕ್ಟೋರಿಯಾ ಮಹಾರಾಣಿಯಾಗಿ ೫೦ ವರ್ಷಗಳಾದವು. ಆದ್ದರಿಂದ ಪಂಚಾದಶ ವರ್ಷ ಸಾಮ್ರಾಜ್ಯೋತ್ಸವವು ವಿಜೃಂಬಣೆಯಿಂದ ಎಲ್ಲೆಡೆ ನಡೆಯುತ್ತದೆ. ಹಿಂದೆ ರಸೆಲ್, ರಾಬರ್ಟಸನ್ ಇವರನ್ನು ಹೊಗಳಿ, ಹಾಡಿ, ಹರಸಿದಂತೆಯೇ ವಿಕ್ಟೋರಿಯಾ ಮಹಾರಾಣಿಯ ಗುಣಗಾನವೂ ಬಹುವೃತ್ತಗಳಲ್ಲಿ ವರ್ಣಿಸಲಾಗಿದೆ. ಆಳರಸರನ್ನು ಹಾಡಿ, ಹೊಗಳಿ, ಹರಸುವುದು ಮತ್ತು ಸಂತೃಪ್ತಿಪಡಿಸುವುದು ನಮ್ಮ ಪೂರ್ವಪಾರಂಪರಿಕ ಪದ್ಧತಿಯಲ್ಲವೆ? ಅನಿವಾರ್ಯವೂ ಹೌದು.

ಇದೇ ವರ್ಷವೇ 'ನೌಕರಿ ಸೇರ ಬಯಸುವವರಿಗಾಗಿ ಹೊಸ ಪರೀಕ್ಷೆ' 'ಫಾಯನಲ್ ಸ್ಕೂಲ್ ಎಕ್ಝಾಮಿನೇಷನ್' ಎಂಬ ಹೆಸರಿನಿಂದ ಆರಂಭವಾಗುತ್ತದೆ. ಮ್ಯಾಟ್ರಿಕ್ಯುಲೇಷನ್ ಮುಗಿದನಂತರ 'ನೌಕರಿಗಾಗಿ ಪ್ರವೇಶ ಪರೀಕ್ಷೆ'ಯಾಗಿ ಈ ಪರೀಕ್ಷೆ ಹುಟ್ಟಿಕೊಂಡಿದೆ. ಆದರೆ ೧೮೮೮ರಲ್ಲಿ ಈಗಾಗಲೇ ನೌಕರಿಯಲ್ಲಿರುವ ಶಿಕ್ಷಕರು ಅಹವಾಲ ತೊಡಿಕೊಂಡಿದ್ದಾರೆ. ಏಳೆಂಟು ವರ್ಷ ಸೇವೆಯಾದವರು ಮತ್ತು ಈ ಪ್ರವೇಶ ಪರೀಕ್ಷೆ ಪಾಸಾದವರನ್ನೂ ಒಂದೇ ಎಂದು

ಬಗೆಯುವುದು, ಒಂದೇ ರೀತಿಯ ಸಂಬಳ ನಿಗದಿಗೊಳಿಸಿವುದು ಎಷ್ಟು ಸರಿ? ಎಂಬ ಮನೋಗತವನ್ನು 'ಗುರುರಾವ ಬಳವಂತ ಕೃಷ್ಣಗಿರಿಕರ, ಶಾಲಾ ಮಾಸ್ತರ-ಬಾಳಂಬಿಡ, ತಾ-ಹಾನಗಲ್, ಜಿಲ್ಲಾ- ಧಾರವಾಡ' ಈತನು ತೋಡಿಕೊಂಡಿದ್ದಾನೆ. ಇದರಿಂದ ಸೇವೆಯಲ್ಲಿದ್ದ ಶಿಕ್ಷಕರಿಗೂ ತಮ್ಮ ಸ್ಥಾನಮಾನದ ಅರಿವು ಮೂಡತೊಡಗಿದ್ದು ಗಮನ ಸೆಳೆಯುತ್ತದೆ. ಇದು ಒಂದು ಸಂಕ್ರಾಂತಿಯೇ ಸರಿ.

೧೮೮೮ರ ಡಿಸೆಂಬರ ೩೧ನೇ ತಾರೀಖು ಮುಂಬಯಿಯ ಗವರ್ನರರಾದ ಲಾರ್ಡ ರೇ ದೊರೆಗಳು ಟ್ರೇನಿಂಗ ಕಾಲೇಜಿಗೆ ಭೇಟಿ ಕೊಟ್ಟು ಕೂಲಂಕೂಷವಾಗಿ ಪರಿಶೀಲಿಸಿ, ಖುಷಿ ಪಟ್ಟು ಹೊಗಳಿ ಹೋಗುತ್ತಾರೆ. ವಿದ್ಯಾರ್ಥಿಗಳು ಈ ಸಂದರ್ಭದಲ್ಲಿಯೂ ಅವರ ಕುರಿತು ಹಾಡುರಚಿಸಿ ಹಾಡಿದ್ದಿದೆ.

ಆದರೆ ಶಾಲಾ ಪತ್ರಕ ಪು ೨೪, ಸಂ ೧೨ ಡಿಸೆಂಬರ ೧೮೮೯ ಪು ೨೭೦ ರಲ್ಲಿ ವೆಂಕಟ ರಂಗೋ ಕಟ್ಟಿಯವರು ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆಗೆ ರಾಜಿನಾಮೆ ಕೊಟ್ಟದ್ದರಿಂದ ಅವರ ಚಾರ್ಜನ್ನು ಜನೇವರಿ ೧, ೧೮೯೦ರಂದು ರಾವಜೀ ಬಾಳಾಜೀ ಕರಂದೀಕರರು ತೆಗೆದುಕೊಳ್ಳಲಿದ್ದಾರೆ ಎಂಬ ಸುದ್ದಿ ಪ್ರಕಟಗೊಂಡಿದೆ. ಇದು ವಿದ್ಯಾವರ್ಧಕ ಸಂಘದಲ್ಲಿ ನಡೆದ ಮರಾಠಿ ಕನ್ನಡದ ಕುರಿತ ಹೇಳಿಕೆಗಳ ವೈರುಧ್ಯಮಯ ಗ್ರಹಿಕೆಯಿಂದಾದ ಅಘಟಿತವಿದು.

ಲಿ॥ಗಂಗಾಧರ ಮಡಿವಾಳೇಶ್ವರ ತುರಮರಿಯವರ **'ಶಬ್ದಮಂಜರಿ'**ಯು ೨೮ ಎಪ್ರೀಲ್ ೧೮೯೦ರಲ್ಲಿ ಚನ್ನವೀರಪ್ಪ ಪಕೀರಪ್ಪ, ಪ್ರೊಪರೆಟರ, ಕರ್ನಾಟಕ ಬುಕ್ ಡೀಪೋ ಇವರಿಂದ ಮರುಮುದ್ರಣವಾಗಿದೆ. ಇದರ ಪ್ರತಿಗಳು ದುರ್ಲಭವಾಗಿದ್ದು, ಮೊದಲಿಗಿಂತಲೂ ಒಳ್ಳೆ ದಪ್ಪ ಕಾಗದ ಹಾಕಿ, ಸುವಾಚ್ಯ ಮೊಳೆಗಳಿಂದ ಛಾಪಿಸಿ, ಮತ್ತೇ ೫೦೦೦ ಶಬ್ದಗಳನ್ನೂ, ಶಬ್ದವ್ಯುತ್ಪತ್ತಿಯನ್ನೂ ಹೆಚ್ಚಿಗೆ ಹಾಕಿ ತಯಾರು ಮಾಡಿರುವುದರಿಂದ, ಅದರ ಬೆಲೆ ೮ ರೂಪಾಯಿ ಎಂದು ನಿಗದಿ ಮಾಡಲಾಗಿದೆ.[೫೦] ಮುಂದೆ ಅಕ್ಟೋಬರ ೧೮೯೦ರಲ್ಲಿ ಈ ಪುಸ್ತಕವನ್ನು ಶಾಲೆಗಳ ಗ್ರಂಥಾಲಯಗಳಿಗೆ ಖರೀದಿಸಲು ಡಿ.ಪಿ.ಐ. ಅವರಿಂದ ಮಂಜೂರಿ ಕೂಡ ದೊರೆತಿದೆ. ಇದೇ ಸಂದರ್ಭದಲ್ಲಿಯೇ ದೋಂಡೋ ನರಸಿಂಹ ಮುಳಬಾಗಲ, ಅ.ಮಾಸ್ತರ ಟ್ರೇನಿಂಗ ಕಾಲೇಜ, ಧಾರವಾಡ ಅವರ **'ಕನ್ನಡ ಕೈಪಿಡಿ'** ೨೭೬ ಪುಟಗಳ ರಾಯಲ್ ಪ್ರತಿಯ ಬೆಲೆ ೮ ರೂಪಾಯಿ ಇರುವ ಕುರಿತು ಮಾಹಿತಿ ೩೧/೩/೧೮೯೦ರ ಎಪ್ರೀಲ್‌ನಲ್ಲಿ ಪ್ರಕಟಗೊಂಡಿದೆ.

'ವಿದ್ಯಾ ಸುಧಾರಣಾ ವೃತ್ತಾಂತಗಳು' ಎನ್ನುವ ವರದಿಯನ್ವಯ ಡೈರೆಕ್ಟರ ಆಫ್ ಪಬ್ಲಿಕ ಇನ್ಸಟ್ರಕ್ಶನ್ ದೊರೆಗಳು ತಮ್ಮ ಸನ್ ೧೮೯೦ ಇಸ್ವಿಯ ಆಗಸ್ಟ ತಿಂಗಳ ೨೫ನೇ ತಾರೀಖಿನ ೩೨೬೧ ನಂಬರದ ಹುಕುಮಿನಲ್ಲಿ ಧಾರವಾಡ ಟ್ರೇನಿಂಗ ಕಾಲೇಜದ ಕಾಯದೆಯ ೧೮ನೇ ಕಲಮಿಗೆ ಹೊಸ

ನಿಯಮವನ್ನು ಜೋಡಿಸಿದ್ದಾರೆ:-' ಎಂದಿದೆ. ಈ ಹೊಸ ನಿಯಮ ಏನೆಂದರೆ 'ಯುನಿವರ್ಸಿಟಿ ಸ್ಕೂಲ್ ಪಾಯನಲ್ ಪರೀಕ್ಷೆಯಲ್ಲಿ ಅಥವಾ ಮ್ಯಾಟ್ರೀಕ್ಯುಲೇಶನ್ ಪರೀಕ್ಷೆಯಲ್ಲಿ ಇಳಿದ(ಪಾಸಾದ) ಶಿಕ್ಷಕರನ್ನು ಎಜ್ಯುಕೇಶನ ಇನ್ಸಪೆಕ್ಟರರವರ ಅಪ್ಪಣೆಮೆರೆಗೆ ಎರಡನೇ ವರ್ಷದ ಸರ್ಟಿಫೀಕೆಟ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಎರಡನೇ ವರ್ಷದ ಅವಧಿಗೆ ನೇಮಿಸಿದ ಯಾವತ್ತೂ ವಿಷಯಗಳಲ್ಲಿಯೇ ಅವರ ಪರೀಕ್ಷೆಯಾಗುತ್ತದೆ ಮತ್ತು ಅವರಿಗೆ ಯಾವ ವಿಷಯಗಳಿಂದಲೂ ವಿನಾಯಿತಿ ಇರುವುದಿಲ್ಲ. ಎರಡನೇ ವರ್ಷದ ಸರ್ಟಿಫೀಕೆಟ ಪರೀಕ್ಷೆ ಇಳಿದ ಬಳಿಕ ಅವರನ್ನು ಮೂರನೆಯ ವರ್ಷದ ತರಗತಿಯಲ್ಲಿ ಅಭ್ಯಾಸ ಮಾಡಲು ಅನುಮತಿಸಬಹುದು.'[೫೧] ಹೀಗೆ ಕಾಲಕ್ರಮೇಣ ಒಂದೊಂದೇ ಬದಲಾವಣೆಗಳಾಗುತ್ತ ಸುಧಾರಣೆಯ ಹಾದಿ ಹಿಡಿದ ಟ್ರೇನಿಂಗ ಕಾಲೇಜಿನ ಇತಿಹಾಸ ನಮ್ಮ ಮುಂದೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ಉತ್ತರ ಕರ್ನಾಟಕದ ಏಕೈಕ ಜ್ಞಾನದೇಗುಲವಾದ ಕಾಲೇಜನ್ನು ಮುಚ್ಚಬೇಕಾದ ಸಂದರ್ಭಗಳು ಕೆಲವು ಬಾರಿ ಬಂದಪ್ಪಳಿಸಿವೆ. ಆದರೆ ೧೮೯೦ರಲ್ಲಿ ಪ್ರಿನ್ಸಿಪಾಲರಾಗಿದ್ದ ರಾವಜೀ ಬಾಳಾಜೀ ಕರಂದೀಕರರು ಸರ್ಟಿಫೀಕೆಟ್ ವಿತರಣಾ ಸಮಾರಂಭದಲ್ಲಿ ಮಾಡಿದ ಭಾಷಣದ ವಿಷಯ, ಹೊಸ ಅಘಾತಕಾರಿ ವಿಷಯವೊಂದನ್ನು ತಿಳಿಸುತ್ತದೆ: "ಆದರೆ ಹಿಂದಿನ ಎರಡು ಮೂರು ವರ್ಷಗಳ ಲಾಗಾಯಿತು ಕಾಲೇಜದಲ್ಲಿ ಕಲಿತು ಮೇಲ್ತರದ ಸರ್ಟಿಫೀಕೆಟಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಆ ಹೊತ್ತಿಗೆ ಸ್ಥಳಗಳು ಸಿಗದ್ದರಿಂದ ಎಷ್ಟೋ ಟ್ರೇನ್ಡ ಜನರು ಕೈಮುಚ್ಚಿಕೊಂಡು ಮನೆಯಲ್ಲಿ ಕೂಡ್ರಬೇಕಾಗಿತ್ತು; ಇಂಥ ಸ್ಥಿತಿಯನ್ನು ಕಂಡು ಕಾಲೇಜವನ್ನು ತೆಗೆದು ಈ ಇಮಾರತಿಯನ್ನು ಹುಚ್ಚರ ಆಶ್ರಮವನ್ನೂ ಆಸ್ಪತ್ರಿಯನ್ನೂ ಮಾಡಬೇಕೆಂದು ಆಲೋಚನೆಯು, ಅದೇಮೇರೆಗೆ ಪತ್ರವ್ಯವಹಾರವು ನಡೆದಿತ್ತು. ಅಷ್ಟರಲ್ಲಿ ನಮ್ಮ ಸುದೈವದಿಂದ ಸನ್ ೧೮೭೮ನೇ ಇಸವಿಯಲ್ಲಿ ರಾವಬಹಾದ್ದೂರ ಪಟವರ್ಧನ ಸಾಹೇಬರವರು ಆಕ್ಟಿಂಗ ಇನ್ಸಪೆಕ್ಟರರಾಗಿ ಇಲ್ಲಿಗೆ ಬಂದು ನಡೆದಿರುವ ಆಲೋಚನೆಯನ್ನು ನೋಡಿ ದಕ್ಷಿಣ ಭಾಗದ ದುರ್ದೈವಕ್ಕೆ ಕಳವಳಗೊಂಡು ಈ ಕಾಲೇಜವನ್ನು ತೆಗೆದು ಹಾಕುವದು ಸರಿಯಲ್ಲವೆಂತಲೂ ದಕ್ಷಿಣ ಭಾಗದಲ್ಲಿ ಟ್ರೇನ್ಡ ಜನರ ಅವಶ್ಯಕತೆಯು ಬಹಳವಾಗಿರುತ್ತದೆಂತಲೂ ಸಿದ್ಧಮಾಡಿಕೊಟ್ಟದ್ದಲ್ಲದೆ, ಇದ್ದ ಹಣದಲ್ಲಿಯೇ ಕೆಲಸವಿಲ್ಲದೆ ಕೂತಿರುವ ಟ್ರೇನ್ಡ ಜನರನ್ನು ದಕ್ಷಿಣಭಾಗದಲ್ಲಿ ಕೆಲಸಕ್ಕೆ ಹಚ್ಚಬಹುದೆಂತಲೂ ಮೇಲಧಿಕಾರಿಗಳಿಗೆ ಮನಗಾಣಿಸಿಕೊಟ್ಟು ಈ ಕಾಲೇಜವನ್ನು ಸ್ಥಿರಗೊಳಿಸಿದರು..... ಕಂಠಕ್ಕೆ ಪ್ರಾಣ ಬಂದಂಥಹ ಈ ಕಾಲೇಜಕ್ಕೆ ಮೆ. ಪಟವರ್ಧನ ಸಾಹೇಬರು ಅಮೃತಸಂಜೀವಿನಿ ಗುಳಿಗೆಗಳನ್ನು ಕೊಟ್ಟು ಬದುಕಿಸಿಕೊಡದ್ದರಿಂದ ಈ ಸಮಾರಂಭವನ್ನು ಈ ಹೊತ್ತು ನಾವು ಕಂಡೆವು.....ಅವರ ಉಪಕಾರವನ್ನು ನಾವೆಲ್ಲರು ನೆನಿಸುವುದು ತಕ್ಕದ್ದಾಗಿರುತ್ತದೆ. ಕಾಲೇಜವು ಸ್ಥಾಪನವಾದಾರಭ್ಯ ಈ ಹೊತ್ತಿನವರೆಗೆ ಪಾಸಾದ ಟ್ರೇನ್ಡ ಜನರ ಸಂಖ್ಯೆ ೭೬೮ ಇರುತ್ತದೆ. ನಡಿದ(ಪ್ರಸ್ತುತ) ವರ್ಷದಲ್ಲಿ ನೇಕನಾಮದಾರ ಗವರ್ನರ ಸಾ॥ ರು ಈ ಪಟ್ಟಣಕ್ಕೆ ಬಂದಾಗ್ಗೆ ಕಾಲೇಜದ ವ್ಯವಸ್ಥೆಯನ್ನು ನೋಡಿ

ಸಮಾಧಾನ ಪಟ್ಟರು. ಅವರ ಆಗಮನದ ಸಂಧಿಗೆ ನಮ್ಮ ಜಿಲ್ಲೆಯ ಕಲೆಕ್ಟರ ಮೆ. ವುಯಿಂಟ ಸಾ॥ ರವರ ಪ್ರೋತ್ಸಾಹನದಿಂದ ಒಂದು ವರ್ಕ್‌ಷಾಪ್ಪವು ಸ್ಥಾಪಿಸಲ್ಪಟ್ಟಿತು. ಆ ಸಾ॥ ರೇ ಈ ವರ್ಕ್‌ಷಾಪ್ಪದ ಮೂಲ ಉತ್ಪಾದಕರು; ಅವರು ಹಚ್ಚಿದ ಸಸಿಯು ಮೆ. ಕ್ರಾಲಿಬೋವೆ ಸಾ॥ರವರ ದಯಾದೃಷ್ಟಿಯಿಂದ ಬೆಳೆಯುತ್ತಲಿದೆ. ವರ್ಕಶಾಪ್ಪದಲ್ಲಿ ಕಮ್ಮಾರ ಬಡಿಗರ ಕೆಲಸಗಳನ್ನು ಕಲಿಸುವ ಎರಡು ವರ್ಗಗಳುಂಟು, ಅವುಗಳಲ್ಲಿ ಸದ್ಯಕ್ಕೆ ೨೫ ಜನ ವಿದ್ಯಾರ್ಥಿಗಳು ಕಲಿಯುತ್ತಾರೆ. ಅವರು ಮಾಡಿದ ಕೆಲಸವು ತಮ್ಮೆಲ್ಲರ ಕಣ್ಣಿಗೆ ಹಾಕುವ ಸಲುವಾಗಿ ಇಲ್ಲಿ ಇಟ್ಟಿದೆ. ಈ ವರ್ಷ ಪರೀಕ್ಷೆಗೆ ನಿಂತ ೭೫ ಹುಡುಗರಲ್ಲಿ ೬೯ ಜನ ವಿದ್ಯಾರ್ಥಿಗಳು ಪಾಸಾಗಿರುತ್ತಾರೆ."[೫೨] ಈ ಇತಿವೃತ್ತ ನೋಡಿದರೆ '೧೮೯೦ ಡಿಸೆಂಬರದ ಹಿಂದಿನ ಎರಡು ಮೂರು ವರ್ಷ' ಎಂದರೆ ೧೮೭೭-೭೮ ಎಂದಾಯಿತು. ಈ ವರ್ಷಗಳಲ್ಲಿ ಕಾಲೇಜು ಮುಚ್ಚಿಕಾಕಿ, ಈ ಕಟ್ಟಡದಲ್ಲಿ ಮಾನಸಿಕ ಆಸ್ಪತ್ರೆ ತೆರೆಯುವ ಸಂಬಂಧ ನಡೆದ ವಿಚಾರ ಒಂದು ಸಲ ಸ್ಥಂಬಿಭೂತರನ್ನಾಗಿಸುತ್ತದೆ. ಈಗ ೧೨೬ ವರ್ಷಗಳ ಹಿಂದೆಯೂ ಕಾಲೇಜು ಕಲಿತು ನಿರುದ್ಯೋಗಿಗಳಾಗಿ ಮನೆಯಲ್ಲಿ ಖಾಲಿ ಕುಳಿತುಕೊಳ್ಳುವ 'ಶಿಕ್ಷಣ ಸೃಷ್ಟಿಸಿದ ನಿರುದ್ಯೋಗ'ಸ್ಥಿತಿ ಉಂಟಾಗಿತ್ತು. ಪರಿಣಾಮವಾಗಿ ಈ ಕಾಲೇಜಿಗೂ ಕಂಟಕ ಎದುರಾಗಿತ್ತು ಎಂಬುದು ಆಶ್ಚರ್ಯ ಹುಟ್ಟಿಸುತ್ತದೆ. ಆದರೆ ಕರಂದೀಕರರೇ ಹೇಳಿದಂತೆ ಸೀತಾರಾಮ ಚಿಂತಾಮಣಿ ಪಟವರ್ಧನರು ಸಂಜೀವಿನಿ ಸದೃಶ್ಯರಾಗಿ ಬಂದುದು ಇಂದಿಗೂ ನಮ್ಮೆಲ್ಲರ ಭಾಗ್ಯವೇ ಆಗಿದೆ. ಈ ಕಾಲೇಜಿನ ಉಳಿಯುವಿಕೆಗಾಗಿ, ಈ ಭಾಗದಲ್ಲಿ ಕಾಲೇಜಿನ ಅಗತ್ಯ ಮತ್ತು ಹಣದ ಹೊಂದಾಣಿಕೆ ಮಾಡುವ ತಂತ್ರಗಳನ್ನು ಅರುಹಿ, ಈ ಕಾಲೇಜನ್ನು ಉಳಿಸಿ, ತಮ್ಮ ಹೋರಾಟದಲ್ಲಿ ಗೆದ್ದುದು ಕಾಲೇಜಿಗೆ ನೀಡಿದ ಮರುಜನ್ಮವೇ ಸರಿ. ದಕ್ಷಿಣ ಭಾಗದ ಆಕ್ಟಿಂಗ ಇನ್ಸಪೆಕ್ಟರರಾಗಿದ್ದ(ಇಲಾಖೆಯ ಅಧಿಕಾರಿಯಾಗಿ) ಸೀತಾರಾಮ ಚಿಂತಾಮಣಿ ಪಟವರ್ಧನರು ಈ ಭಾಗದ ಜ್ಞಾನನಾಡಿಯನ್ನು ಉಳಿಸಿ ಪ್ರಾತಃಸ್ಮರಣೀಯರಾಗಿದ್ದಾರೆ.

ಇಂಥದ್ದೇ ಕುತ್ತು ೧೯೨೦ರಲ್ಲಿಯೂ ಬಂದೊದಗಿದ್ದನ್ನು Directorate of Archives, government of maharastra, 156 sir Cowasjee Jahangeer Readymoney Building (Elphinston college building) Mahatma gandhi road, kala godha, fort, MUMBAI-400032 ಇಲ್ಲಿ ದೊರೆತ ಈ ಮುಂದಿನ ದಾಖಲೆ ತಿಳಿಸುತ್ತದೆ:-

Education Department no- 408, 1920 ಈ ಕಡತದ ಪ್ರಕಾರ

Government of Bombay –Educational Deartment–order no- 1887

Bombay Castle – 28th April 1920

J C Ker

Acting Secretary to the government

ಈ ಉಲ್ಲೇಖದ ಪತ್ರದ ಪ್ರಕಾರ ಅರಣ್ಯಶಾಲೆ ತೆರೆಯಲು, ಟ್ರೇನಿಂಗ ಕಾಲೇಜಿನ ಪಶ್ಚಿಮಕ್ಕಿರುವ ಭಾಗ (west wing)ವನ್ನು ತಮ್ಮ ವಶಕ್ಕೆ ಪಡೆಯಲು ಅನುಮತಿ ಕೋರಿದ್ದಾರೆ. ೬ ಜೂನ್ ೧೯೨೦ ರಂದು ಶ್ರೀ ಆರ್. ಎಮ್. ಮಹಿಷಿ, ಪ್ರಿನ್ಸಿಪಾಲರು, ನಿರ್ಬಂಧಗಳೊಂದಿಗೆ ಅನುಮತಿಯನ್ನು ನೀಡಿದ್ದಾರೆ.

ಮುಖ್ಯವಾದ ಇನ್ನೊಂದು ವಿಷಯವೆಂದರೆ ವರ್ಕಶಾಪ್ ಎನ್ನುವ ಹೆಸರಿನಲ್ಲಿ ವೃತ್ತಿ ಶಿಕ್ಷಣ ಅಂದರೆ ಬಡಿಗತನ, ಕಮ್ಮಾರಿಕೆ ಶಿಕ್ಷಣ ಆರಂಭಿಸಿದ್ದು; ೧೮೯೦ರಲ್ಲಿ, ಅಂದರೆ ೧೨೬ ವರ್ಷಗಳ ಹಿಂದೆ ನಮ್ಮ ಜಿಲ್ಲೆಯ ಕಲೆಕ್ಟರರಾದ ಮೆ. ವುಯಿಂಟ (ವಿಂಟ) ಸಾ॥ರವರ ಪ್ರೋತ್ಸಾಹದಿಂದ ಟ್ರೇನಿಂಗ ಕಾಲೇಜಿನಲ್ಲಿ ಆರಂಭವಾದದ್ದು ಈ ವೃತ್ತಿ ಶಿಕ್ಷಣ ಎಂಬ ವಿಷಯ ರೋಚಕವೆನಿಸುತ್ತದೆ. '೧೨ ಏಪ್ರೀಲ್ ೧೮೯೧ರಂದು ಟ್ರೇನಿಂಗ ಕಾಲೇಜಿಗೆ ಭೇಟಿ ನೀಡಿದ ಅಂದಿನ ಗವರ್ನರ ಹ್ಯಾರಿಸ್ ಅವರು ಕಾಲೇಜಿನ ಸುವ್ಯವಸ್ಥೆ ಕಂಡು ಅನಂದಯುಕ್ತರಾದರು. ಈ ವೃತ್ತಿ ಶಿಕ್ಷಣದ ಪರಿಕರಗಳು ೨೦೦೭ ರವರೆಗೂ ಈ ಬಡಿಗ, ಕಮ್ಮಾರಿಕೆ ಶಿಕ್ಷಣದ ಎಲ್ಲ ಪರಿಕರಗಳು ಉಪಯೋಗಿಸದಿದ್ದರೂ ಗಟ್ಟಿಮುಟ್ಟಾಗಿ ಮೂಲಾವಸ್ಥೆಯಲ್ಲಿದ್ದದ್ದನ್ನು (ಅವುಗಳ ಚಾರ್ಜ ನಾನೇ ತೆಗೆದುಕೊಳ್ಳ ಬೇಕಾಗಿತ್ತಾದ್ದರಿಂದ) ನಾನೇ ಕಣ್ಣಾರೆ ಕಂಡಿದ್ದೇನೆ. ಕಾಲೇಜಿನಲ್ಲಿ ನಡೆಯುತ್ತಿದ್ದ ತಾಲೀಮು ಮತ್ತು ಶಾರೀರಿಕ ಶಿಕ್ಷಣವನ್ನು ಕಂಡು ಉತ್ತೇಜಿತರಾಗಿ ೧೫೦ ರೂಪಾಯಿಗಳನ್ನು ಕೊಟ್ಟು ಉತ್ತಮ ರೀತಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಬಕ್ಷಿಸು ಕೊಡಲು ಹೇಳಿದರು. ಮುಂದೆ ೧೦ ಅಕ್ಟೋಬರ, ೧೮೯೨ರಲ್ಲಿ ಈ ಬಕ್ಷಿಸು ಕೊಡುವ ಸಮಾರಂಭವು ವಿಜೃಂಬಣೆಯಿಂದ ನಡೆಯಿತು. ಇದಕ್ಕೆ 'ಮಿಸೆಸ್. ಕ್ರಾಲಿಬೋವ್ಹೇ ಕಲೆಕ್ಟರ್ ಸಾಹೇಬರು, ಅಸಿಸ್ಟಂಟ್ ಕಲೆಕ್ಟರ್, ಡಿಸ್ಟ್ರಿಕ್ಟ ಮತ್ತು ರೇಲ್ವೆ ಖಾತೆಯ ಸುಪ್ರಿಂಟೆಂಡೆಂಟರು, ಡಾಕ್ಟರರು ಮುಂತಾದ ಯುರೋಪಿಯನ್ ಅಧಿಕಾರಸ್ಥರು ಮತ್ತು ಎ.ಇ, ಡಿ.ಎ.ಇ ಹಾಗೂ ಜಾಹಾಗೀರದಾರರು, ದೇಸಾಯರು, ಸಾವಿರಾರು ಜನ ಪ್ರೇಕ್ಷಕರು ಮುಂತಾದವರೆಲ್ಲ ಸೇರಿದ್ದ ಈ ಸಮಾರಂಭದಲ್ಲಿ ತಾಲೀಮ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳು ಮಾಡಿ ತೋರಿಸಿದ ಕೌತುಕದ ಕಸರತ್ತುಗಳನ್ನು ಸ್ಥಂಬಿಭೂತರಾಗಿ, ತದೇಕ ಚಿತ್ತದಿಂದ ನೋಡಿ ನೆರೆದ ಯಾವತ್ತು ಜನರು ಆನಂದದಿಂದ ಚಕಿತರಾಗುತ್ತಾರೆ' ಇದರಿಂದ ಅಂದು ಶಾರೀರಿಕ ಶಿಕ್ಷಣ ಏಷ್ಟು ಉತ್ತುಂಗಕ್ಕೇರಿತ್ತು, ಮಹತ್ವ ಪಡೆದಿತ್ತು ಎಂಬುದು ಗಮನಕ್ಕೆ ಬರುತ್ತದೆ.

೧೮೯೨ರ ಡಿಸೆಂಬರದಲ್ಲಿ ವಿಲಿಯಂ ಅಲೆನ್ ರಸೆಲ್‌ರು ಕಾಲಾಧೀನರಾದರು. ಕನ್ನಡ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿ, ಕನ್ನಡತ್ವವನ್ನು ಬೆಳೆಸಿದ ಮೇರುವ್ಯಕ್ತಿತ್ವ ಕಾಲನಲ್ಲಿ ಕರಗಿ ಹೋದರೂ ಇಂದಿಗೂ ಪ್ರಾತಃಸ್ಮರಣಿಯರಾಗಿದ್ದಾರೆ. ಅವರು ಹಳಗನ್ನಡ ಮತ್ತು ಕನ್ನಡವನ್ನು ಉಳಿಸಿ ಬೆಳೆಸಲು ನೀಡಿದ ವರ್ಥಪ್ರಾಯಿಜ ಅವರ ಮೇರು ವ್ಯಕ್ತಿತ್ವದ ದ್ಯೋತಕವಾಗಿತ್ತು.

'ಕಾಲೇಜಿಗೆ ಪುನರ್ ಜನ್ಮ ನೀಡಿ, ಅದರ ಶ್ರೇಯೋಭಿವೃದ್ಧಿಗೆ ಎ.ಇ. ಆಗಿದ್ದುಕೊಂಡೇ ಹೋರಾಡಿದ **ಸೀತಾರಾಮ ವಿಶ್ವನಾಥ ಪಟವರ್ಧನ** ಅವರು ೧೮೯೪ರ ಸಪ್ಟಂಬರ ೨೪ನೇ ತಾರೀಖಿನಿಂದ ವರಾಡ ಪ್ರಾಂತದ ಡಾಯರೆಕ್ಟರ್ ಆಗಿ ಖಾಯಂಗೊಳ್ಳುವ ಮೂಲಕ ಧಾರವಾಡವನ್ನು ತೊರೆಯುತ್ತಾರೆ. ಅವರ ಸ್ಥಳದಲ್ಲಿ ಬಳವಂತ ರಾಮಚಂದ್ರ ಸಹಸ್ರಬುದ್ಧೆಯವರು ಖಾಯಂಗೊಳ್ಳುತ್ತಾರೆ' (ಶಾಲಾಪತ್ರಕ ೨೮ ಸಂ೧೨, ಪುಟ ೨೬೭)

ಇದೇ ಸುಮಾರಿಗೆ ವೆಂಕಟ ರಂಗೋ ಕಟ್ಟಿಯವರಿಂದ ಕನ್ನಡಕ್ಕೆ ಅನುವಾದಿತಗೊಂಡ **'ಇಂಪಿರಿಯಲ್ ಗ್ಯಾಝೇಟಿಯರ್'ಗಳು** ಸರಕಾರಿ ಬುಕ್ ಡೀಪೊಗಳಲ್ಲಿ ೧೮೯೪ರ ಎಪ್ರೀಲ ತಿಂಗಳಿನಿಂದ ಮಾರಾಟಕ್ಕೆ ಬಂದಿವೆ. ಅಲ್ಲಿಂದ ಪತ್ರಿಕೆಯಲ್ಲಿ ಪ್ರತಿ ತಿಂಗಳೂ ಗೆಝೆಟಿಯರನ ಅವತರಣಿಕೆಗಳು ಪ್ರಕಟಗೊಳ್ಳುತ್ತ ಬಂದಿವೆ. ಇದೇ ತಿಂಗಳ ೧೧ನೇ ತಾರೀಖಿಗೆ ಮಿ. ವಿಂಗೆಟ್ಸ, ಕಲೆಕ್ಟರರು ಕಾಲೇಜಿಗೆ ಭೇಟಿನೀಡಿ ಪಟವರ್ಧನರು ಮಾಜಿ ಎ.ಇ ಮತ್ತು ಪ್ರಸ್ತುತ ಕರಂದೀಕರರ ಸತತ ಪರಿಶ್ರಮದಿಂದಾಗಿ ಕಾಲೇಜು ಊರ್ಜಿತಾವಸ್ಥೆಗೆ ಬಂದಿದೆ. ಕಾಲೇಜಿನ ಕಟ್ಟಡ, ಸ್ಥಿತಿಗತಿ, ಸ್ವಚ್ಚತೆ ಮತ್ತು ತಾಲೀಮು ಕುರಿತು ಬಹಳವಾಗಿ ಹೊಗಳಿದ್ದಾರೆ. ಮುಂದೆ ಪಟವರ್ಧನರ ಕಾರ್ಯವೈಖರಿ ಕುರಿತು ಲೇಖನಗಳು ಸರಣಿಯಲ್ಲಿ ಪ್ರಕಟಗೊಂಡಿವೆ. ಅದರಲ್ಲಿ '೧೮೮೩ರಲ್ಲಿ ಪ್ರ್ಯಾಕ್ಟಿಸಿಂಗ ಸ್ಕೂಲ್ ಬಂದಾಗಿದ್ದದ್ದನ್ನ ಮತ್ತು ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳು ಊರೊಳಗಿನ ದೂರದ ಶಾಲೆಗಳಿಗೆ ಹೋಗಿ ಕಲಿಸಬೇಕಾಗುತ್ತಿದ್ದದ್ದನ್ನು ನೋಡಿ ಪುನಃ ಆ ಶಾಲೆಯನ್ನು ಸ್ಥಾಪಿಸಿ, ಲೋಕಲ್ ಬೋರ್ಡ ಶಾಲೆಗಳೊಳಗಿನ ಅನುಭವಿ ಶಿಕ್ಷಕರನ್ನು ನೇಮಿಸಿ ಊರ್ಜಿತಗೊಳಿಸಿದರು' ಎಂಬ ವರದಿ ಹೊಸದೊಂದು ವಿಷಯದ ಮೇಲೆ ಬೆಳಕು ಚೆಲ್ಲುತ್ತದೆ. ಅಲ್ಲದೆ 'ಇವರ ಆಡಳಿತದಲ್ಲಿ ದ್ರವ್ಯ ಸಹಾಯಗೊಂಡು ಪ್ರಕಟಗೊಂಡ ಪುಸ್ತಕಗಳು' ಹಲವಾರು. ಅವುಗಳಲ್ಲಿ


ಕೃರ್ತ್ಯ	ಗ್ರಂಥಗಳು	ದ್ರವ್ಯಸಹಾಯ
೧. ಮುಳಬಾಗಲಕೃತ	ವೇಣಿಸಂಹಾರನಾಟಕ	ರೂ.೨೬೦
೨. ಮುಳಬಾಗಲಕೃತ	ಮೃಚ್ಛಕಟಿಕ	ರೂ.೫೦೦
೩. ವಿನಾಯಕರಾವ ಜೋಸಿ ಕೃತ	ಅರ್ಥಸಾಸ್ತ್ರ	ರೂ.೫೦೦
೪. ಮುಳಬಾಗಲಕೃತ	ಛಂದಸ್ಸಾರ	ರೂ.೬೦
೫. ಹಳಟ್ಟೀಕೃತ	ಸಿದ್ಧಾಂತ	ರೂ.೩೦೦
೬. ಹೂಲಿಕೃತ	ಜಮಾಖರ್ಚು	(ಪ್ರೆಸ್ಸಿನಲ್ಲಿ ಅದೆ)

ಹೀಗೆ ಕೃತಿಗಳ ಪ್ರಕಟಣೆಯಲ್ಲಿ, ನಿಂತು ಹೋದ ಕಾರ್ಯಕ್ರಮಗಳನ್ನು ಪುನಃ ಸ್ಥಾಪಿಸುವಲ್ಲಿ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಪಟವರ್ಧನ ಇವರು ಸಿದ್ಧ ಹಸ್ತರಾಗಿದ್ದರು. ಹಳಕಟ್ಟಿಯವರ 'ಸಿಕಂದರನ ಚರಿತ್ರೆ' ಕೂಡ ೧೮೯೪ರ ಮೇಯಲ್ಲಿ ಪ್ರಕಟಗೊಂಡಿದೆ.

೧೮೬೫ರಲ್ಲಿ ಫೆಬ್ರುವರಿ ೧ನೆಯ ತಾರೀಖಿಗೆ ಸ್ತ್ರೀಶಿಕ್ಷಣ ವಿದ್ಯಾಲಯವು ಸ್ಥಾಪನೆಗೊಳ್ಳುತ್ತದೆ. ಇದರ ಕುರಿತು ೧೮೮೯ ಜೂನ ೩೫/೫ರ ಪತ್ರಿಕೆಯಲ್ಲಿ ಸವಿವರವಾಗಿ ವರದಿಯನ್ನು ಕೊಡಲಾಗಿದೆ. ಮಾಜಿ ಕಲೆಕ್ಟರರಾದ ಮ್ಯೂರ ಸಾಹೇಬರ, ರಾ. ಪಟವರ್ಧನ ಮತ್ತು ರಾ. ಸಹಸ್ರಬುದ್ಧೆ ಇವರ ಪರಿಶ್ರಮದಿಂದ ಈ ವಿದ್ಯಾಲಯ ಅಸ್ತಿತ್ವಕ್ಕೆ ಬಂದಿದ್ದು ಪ್ರತಿ ವರ್ಷವೂ ಅಂದರೆ ಇದೂವರೆಗೂ ಮೂರು ಪ್ರವೇಶ ಪರೀಕ್ಷೆಗಳು, ಎರಡು ವಾರ್ಷಿಕ ಪರೀಕ್ಷೆಗಳು ನಡೆದದ್ದನ್ನೂ, ಅದರ ಫಲಾಫಲಗಳನ್ನು ಸಕಾರಣ ತಿಳಿಸಲಾಗಿದೆ. ಇದರ ಪರೀಕ್ಷೆಯನ್ನೂ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರು ಮತ್ತು ನಾಲ್ಕೂ ಜಿಲ್ಲೆಗಳ ಡಿ.ಎ.ಇ.ಗಳು ಸೇರಿ ಮಾಡುತ್ತಿದ್ದರು. ಈ ವಿದ್ಯಾಲಯದ ವ್ಯವಸ್ಥೆ ನೋಡಿಕೊಳ್ಳಲು ಒಂದು ಕಮಿಟಿ ನೇಮಕವಾಗಿರುತ್ತದೆ. ಅದರಲ್ಲಿ ೧– ಎ.ಇ, ೨–ಪ್ರಿನ್ಸಿಪಾಲರು, ೩–ಡೆ.ಎ.ಇ,೪– ವೆಂಕಟ ರಂಗೋ ಕಟ್ಟಿ, ೫–ರಾಮರಾವ ದೇಸಾಯಿ, ೬–ರಾಮರಾವ ಮಾಳಾಪೂರ, ೭–ಅಂತಾಜಿಪಂತ ಜೋಗಳೇಕರ, ೮–ಗದಿಗಯ್ಯಾ ವಿಭೂತಿ, ೯–ಹಸನಸಾಬ ಖತೀಬ; ಹೀಗೆ ಒಂಭತ್ತು ಜನ ಸದಸ್ಯರಿದ್ದು ಅದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು.

ಅಂತೂ ಟ್ರೇನಿಂಗ ಕಾಲೇಜಿನಲ್ಲಿ ಪ್ರವೇಶಪರೀಕ್ಷೆಗಳು, ಸರ್ಟಿಫೀಕೆಟ ಪರೀಕ್ಷೆಗಳು, ಷಣ್ಮಾಸಿಕ, ವಾರ್ಷಿಕ ಪರೀಕ್ಷೆಗಳು, ವರ್ಥ ಪ್ರಾಯ್ಜಗಾಗಿ ಪರೀಕ್ಷೆಗಳು ಎಡೆಬಿಡದೆ ನಿರಂತರ ನಡೆಯುತ್ತಿದ್ದವು. ಅವುಗಳಿಗೆ ಸಂಬಂಧಿಸಿದ ೧,೨,೩ ವರ್ಷವಾರು ಪ್ರಶ್ನೆಪತ್ರಿಕೆಗಳು ಸತತವಾಗಿ ಶಾಲಾ ಪತ್ರಕದಲ್ಲಿ ಕ್ರಮವಾಗಿ ಅಚ್ಚಾಗುತ್ತಲೇ ಬಂದಿವೆ.

ಕರಂದೀಕರರೇ ಪ್ರಿನ್ಸಿಪಾಲರಾಗಿದ್ದ ತರುವಾಯದ ಅವಧಿ ಎಂದರೆ ೧೮೬೫ರಲ್ಲಿ ನಡೆದ ಮತ್ತೊಂದು ‘ಕಾಲೇಜಿನ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಸರ್ಟಿಫೀಕೆಟ ಕೊಡುವ ಸಮಾರಂಭ’ದಲ್ಲಿ ಲೋಕಪ್ರಿಯ ಕಲೆಕ್ಟರರಾದ ಮೆ॥ಮ್ಯೂರ ಅವರ ಅಧ್ಯಕ್ಷತೆಯಲ್ಲಿ, ಯುರೋಪಿಯನ್ ಕಾಮದಾರರು, ಮುನಸೂಫ, ಮಾಮಲೇದಾರ, ವಕೀಲ ಮುಂತಾದವರ ಉಪಸ್ಥಿತಿಯಲ್ಲಿ ಕರಂದೀಕರರು ಮಾತನಾಡಿ ‘........ಕಾಲೇಜದಲ್ಲಿ ೩ನೇ ವರ್ಷದವರು ೧೧ ಮಂದಿ, ೨ನೇ ವರ್ಷದವರು ೩೦ ಮಂದಿ ಮತ್ತು ೧ನೇ ವರ್ಷದವರು ೬೦ ಮಂದಿ ಈ ಪ್ರಕಾರ ೧೦೦ ಮಂದಿ ವಿದ್ಯಾರ್ಥಿಗಳನ್ನು ಇಡಬೇಕೆಂದು ಸಾಧಾರಣ ನಿಯಮವಿದ್ದಂತೆ ಸದ್ಯಕ್ಕೆ ಕಾಲೇಜದಲ್ಲಿ ೯೨ ವಿದ್ಯಾರ್ಥಿಗಳಿದ್ದು ಪರೀಕ್ಷೆಯ ಪರಿಣಾಮವು ಕೆಳಗೆ ಬರೆದಂತೆ ಇರುತ್ತದೆ:[೫೩]



— ೨೬೮ —

...ಬೇಕೆಂದು ಸಾಧಾರಣ ನಿಯಮವಿದ್ದಂತೆ ಸದ್ಯಕ್ಕೆ ಕಾಲೇಜದಲ್ಲಿ ೯೨ ವಿದ್ಯಾರ್ಥಿಗಳಿದ್ದು ಪರೀಕ್ಷೆಯ ಪರಿಣಾಮವು ಕೆಳಗೆ ಬರೆದಂತೆ ಇರುತ್ತದೆ.

ವರ್ಗ.	ರಜಿಸ್ಟರ ಮೇಲಿನ ಸಂಖ್ಯೆ.	ಪರೀಕ್ಷೆಗೆ ನಿಂತ ವಿದ್ಯಾರ್ಥಿಗಳ ಸಂಖ್ಯೆ.	ಪಾಸಾದವರ ಸಂಖ್ಯೆ.
೩ ನೇ ವರ್ಷ.	೧೧	೧೦	೯
೨ ನೇ ವರ್ಷ.	೩೦	೨೯	೨೬
೧ ನೇ ವರ್ಷ.	೫೧	೪೯	೪೬
	೯೨	೮೮	೮೧

'ಕಳೆದ ವರ್ಷ ೧೧೨ ವಿದ್ಯಾರ್ಥಿಗಳು ಪರೀಕ್ಷೆಗೆ ನಿಂತು ಅವರಲ್ಲಿ ೧೦೬ ಮಂದಿ ಪಾಸಾಗಿದ್ದರು. ಈ ವರ್ಷ ೮೮ ವಿದ್ಯಾರ್ಥಿಗಳು ಪರೀಕ್ಷೆಗೆ ನಿಂತು ೮೧ ಮಂದಿ ಪಾಸಾಗಿರುವರು. ಎರಡೂ ವರ್ಷ ಪಾಸಾದವರ ಶೇಕಡಾ ಪ್ರಮಾಣವು ಸಾಧಾರಣವಾಗಿ ಅಷ್ಟೇ ಇರುತ್ತದೆ. ಮೂರನೇ ವರ್ಷದಲ್ಲಿ ಪಾಸಾದ ೯ ಮಂದಿಯಲ್ಲಿ ೧ನೇ ವರ್ಗದಲ್ಲಿ ಅಂದರೆ ೧೦೦ಕ್ಕೆ ೬೦ ಮತ್ತು ಹೆಚ್ಚಿಗೆ ಗುಣ ಪಡಿದವರು ೫ ಮಂದಿ, ಮತ್ತು ೨ನೇ ವರ್ಗದಲ್ಲಿ ಅಂದರೆ ೧೦೦ಕ್ಕೆ ೪೦ಕ್ಕಿಂತ ಹೆಚ್ಚಿಗೆ ಗುಣ ಪಡಿದವರು ನಾಲ್ವರು ಉಂಟು. ಅದರಂತೆ ೨ನೇ ವರ್ಷದಲ್ಲಿ ಪಾಸಾದ ೨೬ ಜನರಲ್ಲಿ ಅರ್ಧ ೧ನೇ ವರ್ಗದಲ್ಲಿ ಪಾಸಾದವರೂ ಅರ್ಧ ೨ನೇ ವರ್ಗದಲ್ಲಿ ಪಾಸಾದವರೂ ಉಂಟು.'

'ಪರೀಕ್ಷೆಯಲ್ಲಿ ಒಟ್ಟಿಗೆ ಪಾಸಾದ ೮೧ ಜನರಲ್ಲಿ ೨ನೇ ವರ್ಷದ ೯ ಜನರನ್ನು ಮೂರನೇ ವರ್ಷದ ಅಭ್ಯಾಸಕ್ಕಾಗಿಯೂ ೧ನೇ ವರ್ಷದ ೨೬ ಜನರನ್ನು ಎರಡನೇ ವರ್ಷದ ಅಭ್ಯಾಸಕ್ಕಾಗಿಯೂ ಇಟ್ಟುಕೊಂಡಿರುತ್ತದೆ; ಉಳಿದ

— ೨೬೯ —

[illegible] ಹಾಕಿಕೊತ್ತು ಸರ್ಟಿಫಿಕೇಟು ಕೊಡು[illegible] [illegible] ಕಾಲೇಜದ [illegible] ರೂಪಾಯಿ ಇರುತ್ತದೆ. ಆದರಿಂದ ಪ್ರತಿಯೊಬ್ಬ [illegible]ಯಂತೆ [illegible]ಗಾಗಿ ಈ ವರ್ಷ ೪೦೦ ರೂಪಾಯಿ [illegible] ಮಾಡಿದಂತೆ ಆಯಿತು.'

'ಈ ಕಾಲೇಜಕ್ಕೆ ಒಂದು ವರ್ಕಶಾಪ ಜೋಡಿಸಿದ್ದು, [illegible]ದರಲ್ಲಿ ೨೯ ವಿದ್ಯಾರ್ಥಿಗಳು ಬಡಿಗ ಕೆಲಸವನ್ನು ೧೫ ವಿದ್ಯಾರ್ಥಿಗಳು ಕಮ್ಮಾರ ಕೆಲಸವನ್ನು ಕಲಿಯುತ್ತಾರೆ. ಡ್ರಾಯಿಂಗ ಕಲಿಯುವವರು ೪೮ ಮಂದಿಯುಂಟು. ಸ ೧೮೯೪ನೇ ಇಸವಿಯಲ್ಲಿ ಆದ ಕಲಾಕೌಶಲ್ಯದ ಪರೀಕ್ಷೆಯಲ್ಲಿ ಇಬ್ಬರು ಈ ಕಾಲೇಜದಿಂದ ಪಾಸಾಗಿರುವರು. ಕಾಲೇಜಕ್ಕೆ ಒಂದು ಗಾಯನ ಕ್ಲಾಸವನ್ನು ಸಹ ಜೋಡಿಸಿರುತ್ತದೆ. ಆದರೆ ಗಾಯನ ಕಲಿಸುವ ಡ್ರಾಯಿಂಗ ಮಾಸ್ತರರಿಗೆ ಸಾಕಷ್ಟು ವೇಳೆ ದೊರಿಯದ್ದರಿಂದ ಅದರಲ್ಲಿ ಕೆಲಸವು ಆಗತಕ್ಕಷ್ಟು ಚನ್ನಾಗಿ ಆಗುವದಿಲ್ಲ. ಅದರೂ ಕವಿತಾ ಮುಂತಾದವುಗಳನ್ನು ಸುಸ್ವರದಿಂದ ಅನ್ನುವ ಕೆಲಸವು ಕೆಲವಂಶದಿಂದ ಚನ್ನಾಗಿ ಸಾಧಿಸಲ್ಪಡುತ್ತಿರುತ್ತದೆಂದೆನ್ನಬಹುದು. ಉತ್ತಮ ವಾಚನ ಮತ್ತು ಸುಸ್ವರದಿಂದ ಕವಿತೆಗಳನ್ನು ಅನ್ನುವದು ಇವೆರಡು ಮಾಸ್ತರರ ಪ್ರಥಮ ಕರ್ತವ್ಯಗಳಲ್ಲಿ ಎಣಿಸಲ್ಪಡುವವು. ಈ ಕೆಲಸಗಳನ್ನು ನಮ್ಮ ಜನರು ತಕ್ಕಮಟ್ಟಿಗೆ ಸರಿಯಾಗಿ ಮಾಡಲಿಕ್ಕೆ ಶಕ್ಯರಾಗಿರುತ್ತಾರೆಂದು ನಾನು ಸಂತೋಷದಿಂದ ತಿಳಿಸುತ್ತೇನೆ.'

ಪ್ರ್ಯಾಕ್ಟಿಸಿಂಗಸ್ಕೂಲ—ಇದು ಕಾಲೇಜದ ಒಂದು ಮಹತ್ವದ ಅಂಗವಿರುತ್ತದೆ. ಈ ಶಾಲೆಯ ಹೆಡ ಮಾಸ್ತರರಾದ ಮಿ. ನಾರ್ಝರೆ ಇವರ ಪರಿಶ್ರಮದಿಂದ ಇದು ದಿನ ದಿನಕ್ಕೆ ಬೆ

ಈ ಪಾಸಾದವರಲ್ಲಿ ೧ನೆಯ ವರ್ಷದವರನ್ನು ಎರಡನೆಯ ಅಭ್ಯಾಸಕ್ಕಾಗಿ ಮತ್ತು ಎರಡನೆಯ ವರ್ಷದವರನ್ನು ಮೂರನೆಯ ವರ್ಷದ ಅಭ್ಯಾಸಕ್ಕಾಗಿ ಮುಂದುವರೆಸಿದ್ದು, ಪ್ರಸ್ತುತ ವರ್ಷದಲ್ಲಿ ಒಟ್ಟು ಖರ್ಚು ೩೯೩೧೬ ರೂಪಾಯಿಗಳು; ತಲೆಗೆ ೪೦೦ ರೂಪಾಯಿ ಖರ್ಚು ಆದದ್ದನ್ನ ಹೇಳುತ್ತ ಕಾಲೇಜಿನ ಸ್ಥಾನಮಾನ ಎಲ್ಲಿದೆ(ತ್ತು) ಎಂಬುದರ ಕಡೆಗೆ ಗಮನ ಸೆಳೆಯುತ್ತಾರೆ. ಜೊತೆಗೆ 'ಕಾಲೇಜಿಗೆ ಒಂದು ವರ್ಕಶಾಪ್ ಜೋಡಿಸಿದ್ದು, ಅದರಲ್ಲಿ ೨೯ ವಿದ್ಯಾರ್ಥಿಗಳು ಬಡಿಗ, ೧೫ ವಿದ್ಯಾರ್ಥಿಗಳು ಕಮ್ಮಾರ ಮತ್ತು ೪೮ ವಿದ್ಯಾರ್ಥಿಗಳು ಡ್ರಾಯಿಂಗ ಕಲಿಯುತ್ತಾರೆ. ಈ ಕಾಲೇಜಕ್ಕೆ ಒಂದು ಗಾಯನ ಕ್ಲಾಸನ್ನು ಸಹ ಜೋಡಿಸಿರುವ ಆದರೆ ಡ್ರಾಯಿಂಗ ಕಲಿಸುವ ಮಾಸ್ತರರಿಗೆ ಸಾಕಷ್ಟು ವೇಳೆ ದೊರಿಯದ್ದರಿಂದ ಅದರಲ್ಲಿ ಕೆಲಸವು ಆಗತಕ್ಕಷ್ಟು ಚನ್ನಾಗಿ ಆಗುವುದಿಲ್ಲ...... ಪ್ರಾಕ್ಟಿಸಿಂಗ ಸ್ಕೂಲು, ಕಾಲೇಜಿನ ಮಹತ್ವದ ಅಂಗವಾಗಿದ್ದು ಆ ಶಾಲೆಯ ಹೆಡ್ ಮಾಸ್ತರರಾದ ಮಿ. ನಾರ್ಝರೆ ಇವರ ಪರಿಶ್ರಮದಿಂದ ಅದು ಬೆಳೆಯುತ್ತಿದ್ದು, ಮುಲ್ಕಿ ಪರೀಕ್ಷೆಯಲ್ಲಿ ೨೦ ಜನರಲ್ಲಿ ೧೧ ಮಂದಿ ಪಾಸಾಗಿದ್ದಾರೆ.... ಗರಡಿ ಸಾಧಕದ ದೆಶಿಯಿಂದಲೂ ಕಾಲೇಜದ ಸುಸ್ಥಿತಿಯ ದೆಶೆಯಿಂದಲೂ ಡಾಕ್ಟರ ಮೆಲಕಾನ್ ಮತ್ತು ಡಾಕ್ಟರ ಡೆವಿಡಸನ್ ಇವರ ಆರೈಕೆಯಿಂದಲೂ ವಿದ್ಯಾರ್ಥಿಗಳ ಆರೋಗ್ಯವು ಸರಸಾಗಿರುವುದು...' ಇಲ್ಲಿ ೧೮೯೪ರಲ್ಲಿ ಕಲಾ ಕೌಶಲ್ಯ ತರಗತಿಯನ್ನು ಆರಂಭಿಸಿದಂತೆ ೧೮೯೫ರಲ್ಲಿ ಗಾಯನ ತರಗತಿ ಆರಂಭಿಸಲಾಗಿದೆ.[೫೪]

೧೮೯೯ರ ಹೊತ್ತಿಗೆ ಔದ್ಯೋಗಿಕ ಶಿಕ್ಷಣವನ್ನು ಶಿಕ್ಷಣ ಪದ್ಧತಿಯಲ್ಲಿ ಪ್ರಾರಂಭದಿಂದಲೇ ಅಂದರೆ ಪ್ರಾಥಮಿಕ ಶಿಕ್ಷಣದಿಂದಲೇ ಸೇರಿಸಬೇಕೆಂಬ ವಿಚಾರ ಆರಂಭವಾಗಿದೆ. ೧೮೯೯-೧೯೦೦ರಲ್ಲಿ ಟ್ರೇನಿಂಗ ಕಾಲೇಜಿನ ೨ನೇ ಮತ್ತು ೩ನೇ ವರ್ಷಗಳ ಸರ್ಟಿಫೀಕೆಟ್ ಪರೀಕ್ಷೆಗಳಿಗಾಗಿ

ಒಂದು ಸುಧೀರ್ಘ ಅಭ್ಯಾಸ ಕ್ರಮ ಶಾ.ಪ. ೩೫/೪ ೧೮೯೯ ಎಪ್ರಿಲನ ಪುಟ ೮೯ರಿಂದ ೯೬ರವರೆಗೆ ಪ್ರಕಟಗೊಂಡಿದೆ. ಇದೂ ಕೂಡ ಪುಸ್ತಕ, ಪುಟ, ಅಧ್ಯಾಯ ಎಲ್ಲವನ್ನೂ ವಿಷದವಾಗಿ ಪ್ರಕಟಿಸಿದೆ. ಇದೇ ಎಪ್ರೀಲ್ ತಿಂಗಳ ಪತ್ರಿಕೆಯ ಪುಟ ೯೮ರಿಂದ ೧೦೫ ವರೆಗೆ ಪ್ರಕಟವಾದ 'ಟ್ರೇನಿಂಗ ಕಾಲೇಜದ ಮತ್ತು ಪ್ರ್ಯಾಕ್ಟಿಸಿಂಗಸ್ಕೂಲಿನ ಬಕ್ಷಿಸ ಕೊಡುವ ಸಮಾರಂಭವೂ ಹಾಗೂ ಕಾಲೇಜಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟ ಉದ್ಯೋಗಶಾಲೆಯ(ವರ್ಕಷಾಪದ) ಪ್ರವೇಶ ಸಮಾರಂಭವೂ' ಎಂಬ ವರದಿಯ ಪ್ರಕಾರ ದಿನಾಂಕ **೨೨ ಮಾರ್ಚ ೧೮೯೯**, ಶನಿವಾರದಂದು ಉದ್ಯೋಗಶಾಲೆಯ ತರಗತಿಗಳಿಗಾಗಿಯೇ ಕಟ್ಟಿದ ಭವ್ಯವಾದ ಕಟ್ಟಡದ ಉದ್ಘಾಟಣೆಯಾಗಿದೆ. ಮೊದಲು ಅದನ್ನು 'ಸ್ಲಾಯಿಡ್ ಹಾಲ್' ಎಂದೂ, ನಂತರ 'ಕ್ರಾಪ್ಟ ಹಾಲ್' ಎಂದೂ ಕರೆಯುತ್ತಿದ್ದರು. ನಂತರ ಇತ್ತೀಚಿನವರೆಗೂ **'ನೇಯ್ಗಿ ಹಾಲ್/S.U.P.W.ಹಾಲ್'** ಎಂದು ಕರೆಯಲ್ಪಡುತ್ತಿರುವ ದೊಡ್ಡ ಹಾಲ್ ಆಗಿದೆ. ಇದು ೧೮೯೯ರ ಮಾರ್ಚನಲ್ಲಿ ಕಟ್ಟಲ್ಪಟ್ಟಿತು ಎಂಬುದು ಶತಸಿದ್ಧವಾಯಿತು. ಅದರ ಪಕ್ಕದಲ್ಲಿ ಹಾಕಿದ ಚಪ್ಪರದಲ್ಲಿ ಕಮ್ಮಾರಿಕೆ ತರಬೇತಿ ಆರಂಭವಾಯಿತು.

ಇದೇ ಸಂದರ್ಭದಲ್ಲಿ ಕಳೆದ ವರ್ಷ ಸಪ್ಟೆಂಬರ ತಿಂಗಳಲ್ಲಿ ಧಾರವಾಡ ಶಹರವನ್ನು ಸುತ್ತಿಕೊಂಡ ಪ್ಲೇಗದ ಹಾವಳಿಗೆ ಬಲಿಯಾದ ಇಬ್ಬರು ಟ್ರೇನಿಂಗ ಕಾಲೇಜದ ಶಿಕ್ಷಕರನ್ನು ಸ್ಮರಿಸಿಕೊಳ್ಳುತ್ತಾರೆ. ಅವರಲ್ಲಿ ಒಬ್ಬರು–**ಕಾಲೇಜಿನ ಕನ್ನಡ ಪಂಡಿತರಾದ ಧೋಂಡೋ ನರಸಿಂಹ ಮುಳಬಾಗಲ** ಎಂಬ ಸುದ್ದಿ ದಂಗು ಬಡಿಸುತ್ತದೆ. ಇನ್ನೊಬ್ಬರು ಕಂಬಾರ ಮಾಸ್ತರನಾದ ಕರಿಮಖಾನರು. ಇವರ ಸಾವಿನಿಂದಾದ ಹಾನಿ ಭರಿಸಲಾರದ ನಷ್ಟವಾಗಿ, ಆ ಖಾಲಿತನ ಅಂದು ಎಲ್ಲರನ್ನೂ ಕಾಡಿದೆ. ದೋಂಡೋ ನರಸಿಂಹ ಮುಳಬಾಗಿಲ ಅವರ ಕಾಲಾನಂತರ ಎರಡು ವರ್ಷ ಕನ್ನಡ ಬೋಧನೆಗಾಗಿ ಅವರ ಸ್ಥಾನವನ್ನು ತುಂಬುವವರು ಯಾರೂ ಇಲ್ಲದಂತಾಗಿ ಕೊನೆಗೆ ಮೈಸೂರಿನಿಂದ ತಿಮ್ಮಪ್ಪಶಾಸ್ತ್ರಿಗಳೆಂಬ ಕನ್ನಡ ಪಂಡಿತರನ್ನು ಕರೆಸಿದ್ದರೂ, ಅವರೂ ಗೃಹಕೃತ್ಯದ ತೊಂದರೆಯಿಂದಾಗಿ ಬಿಟ್ಟು ಹೋಗುತ್ತಾರೆ. ಈ ಕಾರಣದಿಂದಾಗಿ ಮುಂಬೈ ಕರ್ನಾಟಕದಲ್ಲಿ ಭಾಷಾಕೋವಿದರು ಇಲ್ಲದಂತಾಗಿದೆ ಎಂಬ ಖೇದ ವ್ಯಕ್ತವಾಗಿದೆ.

ದಕ್ಷಿಣ ಭಾಗದ ನಾಲ್ಕು ಜಿಲ್ಲೆಗಳಿಗಾಗಿ ಸ್ಥಾಪಿಸಲ್ಪಟ್ಟ ಈ ಕಾಲೇಜಿನಿಂದ ಪ್ರತಿ ವರ್ಷ ಸರಾಸರಿ ೩೫ ಜನ ಟ್ರೇನ್ಡ ವಿದ್ಯಾರ್ಥಿಗಳು ನೌಕರಿಗಾಗಿ ನೇಮಿಸಲ್ಪಡುತ್ತಾರೆ; ಅವರಲ್ಲಿ ೨೦ ಮಂದಿ ಬ್ರಾಹ್ಮಣರು, ೧೧ ಮಂದಿ ಲಿಂಗಾಯತರು, ೧ ರಡ್ಡಿ, ೧ ನಾಡೋರ, ೨ ಮುಸಲ್ಮಾನ, ೧ ವಾಣಿಯು ಇರುತ್ತಾರೆ ಎಂದಿದ್ದಾರೆ. ಬ್ರಾಹ್ಮಣೇತರರಿಗಿಂತ ಇತರ ಜನ ಸಾಕಷ್ಟಿದ್ದರೂ ತಕ್ಕಷ್ಟು ವಿದ್ಯಾರ್ಥಿಗಳು ಕಾಲೇಜಿಗೆ ಬರದಿರುವ ಬಗೆಗೆ ಖೇದವನ್ನೂ ವ್ಯಕ್ತಪಡಿಸುತ್ತಾರೆ. ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಪ್ಲೇಗಿಗಿಂತ ಮೊದಲು ೨೨೩ ಜನ ವಿದ್ಯಾರ್ಥಿಗಳಿದ್ದರು, ಈಗ ೧೫೩ ಜನವಿದ್ಯಾರ್ಥಿಗಳಿದ್ದ ಬಗೆಗೂ ಮಾಹಿತಿ ನೀಡುತ್ತಾರೆ. ಬಂಕಾಪೂರ ಸಾಲೆಯ ಶಿಕ್ಷಕರಾದ ಹ. ಕೃ. ದೇಶಪಾಂಡೆಯವರು ಪ್ಲೇಗಿನ ಸಂದರ್ಭದಲ್ಲಿ ಮಾಡಿದ ಕಾರ್ಯಕ್ಕಾಗಿಯೂ, ವಿದ್ಯಾಖಾತೆಯಲ್ಲಿಯ

ಉತ್ತಮ ಸೇವೆಗಾಗಿಯೂ,ಕಲೆಕ್ಟರರಾದ ಮೆ. ಮ್ಯಾಕನೀಲ್ ಅವರು ಮುಲ್ಕಿ ಖಾತೆಯಲ್ಲಿ ಕಾರಕೂನನ ಕೆಲಸಕ್ಕೆ ನೇಮಿಸುತ್ತಾರೆ. ಔದ್ಯೋಗಿಕ ಶಿಕ್ಷಣ ಆರಂಭಿಸಲು ದುಡಿದ ಕಟ್ಟಿಯವರನ್ನೂ, ಮಾಜಿ ಕಲೆಕ್ಟರರಾದ ಮೆ. ವಿಂಟರರವರ ಆಡಳಿತಾತ್ಮಕ ಉಪಕಾರವನ್ನೂ ಸ್ಮರಿಸಿದ್ದಾರೆ. ಈ ಸಭೆಯಲ್ಲಿ ಉದ್ಯೋಗಶಾಲೆಯ ತರಗತಿಗಳಿಗಾಗಿಯೇ ಕಟ್ಟಿದ ಭವ್ಯವಾದ ಕಟ್ಟಡ ಎದ್ದು ನಿಲ್ಲಲು ಕಾರಣೀಭೂತರಾದ, ದಕ್ಷಿಣ ಭಾಗದ ಆಕ್ಟಿಂಗ ಕಮಿಶನರರೂ ಆದ ಮೆ.ಕ್ಯಾಪೆಲ ದೊರೆಗಳು ಕಟ್ಟಡದ ಪ್ರವೇಶ/ಉದ್ಘಾಟಣೆ ಮಾಡಿದರು ಮತ್ತು ಕಲೆಕ್ಟರರು ಆದ ಮೆ.ಮ್ಯಾಕನೀಲ ಸಾಹೇಬರು ಅಗ್ರಾಸನವನ್ನು ಸ್ವೀಕರಿಸಿದ್ದರು.[೫೫] ಇವೆಲ್ಲ ನಮಗೆ ಅಧಿಕೃತ ದಾಖಲೆಗಳಾಗಿ, ಮೈಲಿಗಲ್ಲುಗಳಾಗಿ ನಿಲ್ಲುತ್ತವೆ. ಎಪ್ರೀಲ ೧೪, ೧೯೦೦ ಕ್ಕೆ ರೊದ್ದ ಶ್ರೀನಿವಾಸರಾಯರು ಪ್ರಿನ್ಸಿಪಾಲರಾಗಿದ್ದಾರೆ. ಡಿಸೆಂಬರ ೧೯,೧೯೦೦ ರಂದು ಅಣ್ಣಾರಾವ ಸೌದಿಯವರು ಕಾಲಾಧೀನರಾದರು. ರೊದ್ದ ಶ್ರೀನಿವಾಸರಾಯರು ಕಾಲೇಜಿನ ಕೆಲವು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸ್ಥಳಗಳ ಪ್ರತ್ಯಕ್ಷಜ್ಞಾನ ಮಾಡಿಕೊಡುವ ಉದ್ದೇಶದಿಂದ ಪುಣೆ, ಮುಂಬಯಿ, ಅಹಮ್ಮದಾಬಾದ, ಬಡೋದಾ, ವಿಜಾಪೂರ ಮುಂತಾದ ಪಟ್ಟಣಗಳಿಗೆ ಪ್ರವಾಸ ಕೈಗೊಂಡಿದ್ದು ಹದಿನಾರು ದಿನಗಳಿಗೆ ತಲೆಗೆ ಹದಿನಾರು ರೂಪಾಯಿ ಖರ್ಚಾಗಿವೆ. ಇದು ಪ್ರಪ್ರಥಮವಾಗಿ, ಹೊಸದೊಂದು ಪರಿಕಲ್ಪನೆಗೆ ಬುನಾದಿ ಹಾಕಿ, ಶಿಕ್ಷಣದಲ್ಲಿ ಹೊಸ ಪರಿಕಲ್ಪನೆಗೆ ಒಡ್ಡಿಕೊಂಡಿರುವುದನ್ನು ತೋರಿಸಿಕೊಡುತ್ತದೆ.

೧೯೦೨ರ ಹೊತ್ತಿಗೆ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಗಿರುವ ಅರ್ಹತೆಯಲ್ಲಿ ಸ್ವಲ್ಪ ಬದಲಾವಣೆಯಾಗಿರುವುದು (ಅಕ್ಟೋಬರ ೩೯/೧೦, ೧೯೦೨ ಪುಟ ೨೩೨) ಕಂಡು ಬರುತ್ತದೆ. 'ಈ ಪರೀಕ್ಷೆಗೆ ಬರುವವರು ೨ನೇ ಅಥವಾ ೩ನೇ ಗ್ರೇಡ ಮುಲ್ಕೀ ಸರ್ಟಿಫೀಕೆಟ ಪಡೆದವರು ಇಲ್ಲವೆ ಯುನಿವರ್ಸಿಟಿ ಪರೀಕ್ಷೆಯಲ್ಲಿ (ಅಂದರೆ ಫಾಯನಲ್, ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕೊಟ್ಟವರು) ಇರಬೇಕು' ಎಂಬ ನಿರ್ಬಂಧ ವಿಧಿಸಲಾಗಿದೆ. ಹೀಗೆ ಕಾಲಗತಿಗನುಗುಣವಾಗಿ ಬದಲಾವಣೆಗಳಾಗುತ್ತಲೇ ಇರುವುದು ಗಮನಕ್ಕೆ ಬರುತ್ತದೆ. ಪ್ರತಿ ವರ್ಷವೂ ನಡೆಯುವಂತೆ 'ವಿದ್ಯಾಭಿಮಾನಿಗಳ ಪರಿಷತ್ತ ಸಭೆ'ಯು ೧೯೦೨ರ ಅಕ್ಟೋಬರ ೧ರಂದು ನಡೆದಿದೆ. ಈ ಸಭೆಯಲ್ಲಿ ಬದಲಾದ ಪಠ್ಯಕ್ರಮ ಮತ್ತು ಅವುಗಳ ನಿರ್ವಹಣೆಯೊಂದಿಗೆ ಇನ್ನೊಂದು ಮಹತ್ವದ ವಿಷಯವೂ ಚರ್ಚೆಗೊಳಪಟ್ಟಿದೆ. ಅದೆಂದರೆ 'ಕ್ರಮಿಕ ಪುಸ್ತಕಗಳ ಸುಧಾರಣೆ' ಮಾಡುವಲ್ಲಿ ಹೆಣ್ಣು ಮಕ್ಕಳಿಗೆ ಬೇರೆ ಮತ್ತು ಗಂಡು ಮಕ್ಕಳಿಗೆ ಬೇರೆ ಪುಸ್ತಕಗಳನ್ನು ಮಾಡಬೇಕು ಎಂದು ಜಠಾರ ಭಾಸ್ಕರರಾಯರು ಮತ್ತು ಯನ್ನಿಮಡಿಸಾಹೇಬರು ವಾದಿಸಿದರೆ, ಅವು ಬೇರೆಬೇರೆಯಾಗಿರುವ ಕಾರಣವಿಲ್ಲವೆಂದು ಮಿ.ರೀಪ ಸಾಹೇಬರ ಪ್ರತಿವಾದವಾಗಿತ್ತು. ಕೊನೆಗೆ ಕರಂದೀಕರರು ೪ ಇಯತ್ತೆಗಳ ಪುಸ್ತಕಗಳು ಒಂದೇ ಆಗಿರಬೇಕು ಮತ್ತು ಅದರಲ್ಲಿ ಕೆಲವು ಪುಟಗಳು ಹೆಣ್ಣುಮಕ್ಕಳಿಗೆ ಸಲ್ಲುವಂಥ ವಿಷಯಗಳುಳ್ಳವಿರಬೇಕು. ಠರಾವಿನಲ್ಲಿ ಬಹುಮತಗೊಂಡದ್ದೆಂದರೆ ಮೊದಲಿನ ನಾಲ್ಕು ಪುಸ್ತಕಗಳು ಒಂದೇ ಆಗಿರಬೇಕು. ೫,೬ನೇ ಪುಸ್ತಕಗಳು ಹೆಣ್ಣು ಮಕ್ಕಳಿಗೆ ಬೇರೆ ಮತ್ತು ಗಂಡು ಮಕ್ಕಳಿಗೆ ಬೇರೆ

ರಚಿಸಬೇಕು ಎಂಬುದು. ಈ ಘಟಾನುಘಟಿಗಳ ಚರ್ಚೆಯನ್ನು ನೋಡಿದರೆ ಭಾರತೀಯ ಮತ್ತು ಪಾಶ್ಚಾತ್ಯರ ಸಾಮಾಜಿಕ ಪರಿಕಲ್ಪನೆಗಳು ಹೇಗೆ ಭಿನ್ನಭಿನ್ನವಾಗಿ, ಶಿಕ್ಷಣದ ಮೇಲೆ ಪರಿಣಾಮ ಬೀರಬಲ್ಲವಾಗಿದ್ದವು ಎಂಬುದು ವಿಷದವಾಗುತ್ತದೆ.

ಜನೇವರಿ ೧, ೧೯೦೩ ರಂದು ರಾಜಕೀಯ ವಲಯದಲ್ಲಿ ಮಹತ್ತರವಾದ ಬದಲಾವಣೆ ಜರುಗಿತು. ಮಹಾರಾಣಿ ವಿಕ್ಟೋರಿಯಾಳ ನಂತರ ಗ್ರೇಟ್ ಬ್ರಿಟನ್ ಐರ್ಲಂಡ್‌ನಲ್ಲಿ ೭ನೇ ಅಲ್ಬರ್ಟ ಎಡ್ವರ್ಡ ಸಿಂಹಾಸನಾರೂಢನಾದ ದಿನವದು. ಸಂಭ್ರಮಾಚರಿಸಲು ಶಾಲೆಗಳಿಗೆ ೧೩ ದಿನಗಳ ರಜೆ ಘೋಷಿಸಲಾಗಿತ್ತು. ಆಳಸರ ಅಧೀನತೆಯಲಿ ಇಂಥವುಗಳಿಗೆ ಒಡ್ಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಇದು ಬಿಂಬಿಸುತ್ತದೆ.

ಪಠ್ಯಕ್ರಮ ಮತ್ತು ಶಿಕ್ಷಕರ ಉದ್ಯೋಗದಲ್ಲಿ ಅಮೂಲಾಗ್ರ ಬದಲಾವಣೆಯಾಗುವುದರ ಅವಶ್ಯಕತೆ ಮನಗಂಡು, ಕಳೆದ ವರ್ಷದಂತೆ ೧೯೦೩ರ ಮಾರ್ಚ ೧೬ ಮತ್ತು ೧೭ರಂದು ರೊದ್ದರಾಯರು ಟ್ರೇನಿಂಗ ಕಾಲೇಜಿನಲ್ಲಿ ದ್ವಿತಿಯ 'ಶಿಕ್ಷಕ ಸಮ್ಮೇಳನ' ಏರ್ಪಡಿಸಿದ್ದರು. ಒಂದನೆಯ ಅ. ಮಾಸ್ತರರಾದ ಕುಲಕರ್ಣಿಯವರು ಮಾತನಾಡಿ 'ಈಗಾಗಲೇ ಶಾಲಾ ಪತ್ರಕದಲ್ಲಿ 'ಶಿಕ್ಷಕರಿಗೆ ಸೂಚನೆಗಳು' ಎಂಬ ಶೀರ್ಷಿಕೆ ಅಡಿಯಲ್ಲಿ ಶಿಕ್ಷಣದ ಹೊಸಪದ್ಧತಿಯ ಕುರಿತು ಪ್ರಕಟಿಸುತ್ತಿರುವಂತೆ, ಆ ತತ್ವಗಳನ್ನು ವಿವರವಾಗಿ ತಿಳಿಸಿ,ಈ ತತ್ವಗಳನ್ನು ಮತ್ತು ಪ್ರಾಯೋಗಿಕ ಪಾಠ ಮಾಡುವ ರೀತಿಯನ್ನು, ಲ್ಯಾಂಡನ್‌ನೆಂಬ ಘನವಿದ್ವಾಂಸನ ಗ್ರಂಥದಿಂದ ತೆಗೆದುಕೊಂಡಿರುವುದಾಗಿ ಹೇಳುತ್ತಾರೆ' ಮತ್ತು ಪ್ರಾಯೋಗಿಕ ಪ್ರಕ್ರಿಯೆಯನ್ನು ನಡೆಸುತ್ತಾರೆ. ಹೊಸ ಬದಲಾವಣೆಗಳಿಗೆ ಮತ್ತು ವಿಚಾರಮಂಥನಕ್ಕೆ ನಾಂದಿಯಾದ ಸಮ್ಮೇಳನ ಇದಾಗಿದೆ.

ಶಿಕ್ಷಣ ಇಲಾಖೆಯಲ್ಲಿ ಮತ್ತೊಂದು ಮಹತ್ತರವಾದ ಬದಲಾವಣೆಯಾಗಿ ಆದೇಶ ಹೊರಬಿಳುತ್ತದೆ. ಅದು: 'ಇನ್ನು ಮುಂದೆ ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳು ಚಿತ್ರಕಲೆಯ ಎರಡನೆಯ ಗ್ರೇಡಿನಲ್ಲಿಯೂ, ಮ್ಯಾನುಅಲ್ ಟ್ರೇನಿಂಗ (ಬಡಿಗತನ, ಕಮ್ಮಾರಿಕೆ)ನಲ್ಲಿಯೂ ಪಾಸಾಗಿ ಸರ್ಟಿಫಿಕೇಟನ್ನು ಪಡೆದರೆ ಅಂಥವರಿಗೆ ಅರಂಭದಿಂದಲೇ ಹೆಚ್ಚು ಸಂಬಳ ಸಿಗುವುದು. ಈಗ ಕೆಲಸದ ಮೇಲಿರುವವರು ಇದನ್ನು ಮನನ ಮಾಡಿಕೊಳ್ಳಬೇಕು' ಎನ್ನುವ ಆದೇಶ ವೃತ್ತಿ ಶಿಕ್ಷಣಕ್ಕೆ, ಬಿಡಿ ಕೈಗಾರಿಕೆಗೆ ಮಹತ್ವ ಕೊಡುತ್ತಿರುವುದನ್ನು ಬಿಂಬಿಸುತ್ತದೆ. ಅಲ್ಲದೇ ಪ್ರತಿ ವರ್ಷ ನಾಲ್ಕು ಇನಾಮುಗಳನ್ನು ಘೋಷಿಸುವ ಮೂಲಕ ಇಂಥ ಶಿಕ್ಷಣಕ್ಕೆ ಒತ್ತು ಕೊಡುತ್ತದೆ. ಒಂದು- ಶಿಕ್ಷಣ ಶಾಸ್ತ್ರ, ಎರಡು- ಶಿಕ್ಷಣಕಲೆಗಾಗಿ, ಇನ್ನೊಂದು- ಚಿತ್ರಕಲೆ, ಬಡಿಗತನದಲ್ಲಿ ಪ್ರಾವೀಣ್ಯತೆಗಾಗಿ, ಮತ್ತೊಂದು- ಟ್ರೇನ್ಡಮಾಸ್ತರನ ಅತಿಕುಶಲತೆಗಾಗಿ; ಆಸಕ್ತಿಯುಳ್ಳವರು ಹಣ ಕಳಿಸಬಹುದೆಂಬ ಪ್ರಕಟಣೆಯೊಂದಿಗೆ ಈ ಇನಾಮು ಆಯಾ ವಿಷಯಗಳಲ್ಲಿ ನೈಪುಣ್ಯತೆ ಗಳಿಸಲು ಉತ್ತೇಜಕವಾಗಿ ಕಾರ್ಯವೆಸಗಿದೆ. ಇದೇ ಸಂದರ್ಭದಲ್ಲಿ ಇಲಾಖೆಯ ಆಕ್ಟಿಂಗ ಗವರ್ನರರಾದ ಸರ್ ಜೇಮ್ಸ ಮಾಂಟೀಥರು ಟ್ರೇನಿಂಗ ಕಾಲೇಜಿಗೆ, ಕೈಗಾರಿಕಾ ತರಗತಿಗೆ, ಅಂಗಸಾಧಕ ತರಗತಿಗೆ, ಪ್ರ್ಯಾಕ್ಟಿಸಿಂಗ

ಸ್ಕೂಲಿಗೆ ಎಲ್ಲವಕ್ಕೂ ಭೇಟಿ ಕೊಟ್ಟು ಸಂತುಷ್ಟಭರಿತರಾಗಿರುವುದಾಗಿ ಜಾಣ ವಿದ್ಯಾರ್ಥಿಗಳಿಗೆ ಕೊಡಲು ೧೫೦ ರೂಪಾಯಿಗಳನ್ನು ನೀಡಿ ಹೋದದ್ದು ಕಾಲೇಜಿನ ಅಸಾಧಾರಣ ಸಾಧನೆಗೆ ಸಾಕ್ಷಿಯಾಗುತ್ತದೆ.

ಕ.ಶಾ.ಪತ್ರಕ. ೧೯೦೪ ಜನೇವರಿ ೪೦/೪ ಪುಟ ೧೧೦ರ 'ಪ್ರಾಥಮಿಕ ಭಾಷಾವಿಷಯ ಶಾಲೆಗಳಲ್ಲಿ ನಡೆಯುವ ಪುಸ್ತಕಗಳನ್ನು ಸುಧಾರಿಸುವುದಕ್ಕೆ ನೇಮಿಸಲ್ಪಟ್ಟ ಕಮಿಟಿಯು.ನೋಟಿಸು' ಇದರ ಪ್ರಕಾರ ೧೯೦೩ ಡಿಸೆಂಬರದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಯನಕ್ಕೆಂದು ಪ್ರಕಟಿಸಿದ ಪುಸ್ತಕಗಳ ಪರಿಶೀಲನೆ ಮತ್ತು ತಿದ್ದುಪಡಿಗಾಗಿ ಒಂದು ಕಮಿಟಿಯನ್ನು ಸರಕಾರವು ನಿಯಮಿಸಿದೆ. ಆ ಕಮಿಟಿಯಲ್ಲಿ ಶಿಕ್ಷಕರು, ಪರೀಕ್ಷಕರು, ಆಯಾ ವಿಷಯ, ಭಾಷಾ ಬಲ್ಲಿದರೊಂದಿಗೆ ಟ್ರೇನಿಂಗ ಕಾಲೇಜುಗಳಲ್ಲಿ ಕೆಲಸ ಮಾಡವವರನ್ನೂ ಸೇರಿಸಲಾಗಿತ್ತು. ಏತದ್ದೇಶಿಯ ಜನರ, ವಿದ್ಯಾಭಿಮಾನಿಗಳ, ವಿದ್ವಾಂಸರ ಅನಿಸಿಕೆ ಅಭಿಪ್ರಾಯಗಳನ್ನೂ ಪಡೆದು ತಿದ್ದುಪಡಿ ಮಾಡಬೇಕೆಂದು ಸರಕಾರದ ಠರಾವಿನಲ್ಲಿ ಹೇಳಿತ್ತು. ಈ ಕಮಿಟಿಯವರು ತಮಗೆ ಅವಶ್ಯಕಂಡಲ್ಲಿ ವಾಚನ ಪುಸ್ತಕದೊಳಗಿನ ಕೆಲವು ಪಾಠಗಳನ್ನು ತಿದ್ದಿ, ಕೆಲವನ್ನು ತೆಗೆದುಹಾಕಿ, ಕೆಲವನ್ನು ಹೊಸದಾಗಿ ಬರೆದು ಸಿದ್ಧಪಡಿಸಬಹುದಾಗಿತ್ತು. ಈ ಪುಸ್ತಕದೊಳಗಿನ ಪಾಠಗಳು ವಿಷಯಾನುಸಾರ ವರ್ಗೀಕರಿಸಲ್ಪಟ್ಟು, ಆಯಾ ಇಯತ್ತೆಗೆ ಸಲ್ಲುವಂತೆ ೧-ಭಾಷಾವಿಷಯ ೨-ಇತಿಹಾಸ ಭೂಗೋಲ ೩-ಸೃಷ್ಟಿಜ್ಞಾನವೂ ವಸ್ತುಪಾಠಗಳು- ಎಂಬ ಮೂರು ಭಾಗಗಳಿಗೆ ಸೇರಿಸಬೇಕಾಗಿತ್ತು. ಹೀಗೆ ಶಿಕ್ಷಣದ ಪಠ್ಯಕ್ರಮ ಮೇಲಿಂದಮೇಲೆ ತಿದ್ದುಪಡಿಗಳಿಗೆ ಒಳಗಾಗುತ್ತಲೇ, ತನ್ನ ಪರಿಧಿಯನ್ನು ವಿಸ್ತರಿಸಿಕೊಳ್ಳುವ, ನಿರ್ಧರಿಸಿಕೊಳ್ಳುವ ಪ್ರಕ್ರಿಯೆಗೆ ಒಳಗಾಗಿದೆ.

೧೯೦೫ ಮಾರ್ಚಲ್ಲಿ ಡೆಪ್ಯೂಟಿ ಇನಸಪೆಕ್ಟರ ಕೆಳಗೆ ಇನ್ನೊಂದು ಅಸಿಸ್ಟಂಟ್ ಡೆಪ್ಯೂಟಿ ಇನಸಪೆಕ್ಟರೆಂಬ ಹೊಸ ಹುದ್ದೆಯನ್ನು ಸೃಷ್ಟಿಸಲಾಯಿತು.

ಎಲ್ಲ ರೀತಿಯ ಪರೀಕ್ಷೆಗಳಲಿ ಮರಾಠಿಯೊಂದು ವಿಷಯವಾಗಿ ಇದ್ದೇ ಇರುವುದನ್ನು ನೋಡಿದರೆ ಮರಾಠಿಯ ಜಂಜಡ ಕನ್ನಡವನ್ನಿನ್ನೂ ಬಿಟ್ಟಿಲ್ಲದಿರುವುದು ಮತ್ತು ಎಲ್ಲರೂ ಅದನ್ನು ಮೇಳೈಸಿಕೊಂಡೇ ಮುಂದೆ ಸಾಗಿರುವುದು ಪರಿಸ್ಥಿಯ ಅನಿವಾರ್ಯತೆಗೆ ಹಿಡಿದ ಕನ್ನಡಿಯಾಗಿದೆ. ಟ್ರೇನಿಂಗ ಕಾಲೇಜಿನ ಪ್ರಾಚಾರ್ಯರೇ ನೋಡಿಕೊಳ್ಳುತ್ತಿದ್ದ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜಿನ ಜವಾಬ್ದಾರಿ, ೧೯೦೯ ಅಕ್ಟೋಬರ ೪ರ ಪ್ರಕಟಣೆಯ ಮೆರೆಗೆ ಲೆಡಿ ಸುಪರಿಂಟೆಂಡೆಂಟ ಎಮ್. ನ್ಯೂಲ್ಯಾಂಡ ನೇಮಕಗೊಂಡಿದ್ದಾರೆ. "ಕಳೆದ ತಿಂಗಳ ಒಂಬತ್ತನೇ ತಾರೀಖಿನ ದಿವಸ ನಮ್ಮ ಇಲಾಖೆಯ ದೊರೆಗಳಾದ/ಡೈರೆಕ್ಟರರಾದ **ಮೆ.ಜಾಯಲ್ಸ** ಸಾಹೇಬರು ಧಾರವಾಡದ ಗಂಡುಮಕ್ಕಳ ಟ್ರೇನಿಂಗ ಕಾಲೇಜಿಗೆ ಭೇಟಿನೀಡಿ, ಈಗಿರುವ ಇಮಾರತು ವಿದ್ಯಾರ್ಥಿಗಳಿಗೆ ಇರಲಿಕ್ಕೆ ಮತ್ತು ಇತರ ಕೆಲಸಗಳಿಗೂ ಸಾಲುವದಿಲ್ಲ ಆದ್ದರಿಂದ ಕಾಲೇಜಿನ ಹೊಂದಿಗಿರುವ **ಜಕಾತಿಯವರ ಬಂಗಲೆಯನ್ನು** ತೆಗೆದುಕೊಳ್ಳುವುದೆಂದು ಗೊತ್ತಾಗಿರುವುದು. ಹಾಗೂ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಕಟ್ಟಡವನ್ನು

ಕಟ್ಟುವ ಸ್ಥಳವನ್ನು ಗೊತ್ತುಪಡಿಸಬೇಕಾಗಿತ್ತು. ಇವೆರಡೂ ಕೆಲಸಗಳನ್ನು ತೀರಿಸಿಕೊಂಡು ಕಾಲೇಜಕ್ಕೆ ಜೋಡಿಸಲ್ಪಟ್ಟ ಹೊಲವನ್ನು ನೋಡಿಕೊಂಡು ಮರಳಿ ಪುಣೆಗೆ ದಯಮಾಡಿಸಿದರು. ಇನ್ನು ತೀವ್ರವೇ ಇಮಾರತು ಕಟ್ಟುವ ಕೆಲಸ ನಡೆಯುವದೆಂದು ತೋರುವುದು"[೫೭] ಈ ವರದಿಯಂತೆ ೯, ಡಿಸೆಂಬರ ೧೯೦೫ ರಂದು ಮತ್ತೊಂದು ಹೊಸ ಕಟ್ಟಡದ ನಿರ್ಮಾಣಕ್ಕಾಗಿ ಯೋಜನೆ ಆರಂಭಿಸಿದ್ದು ತಿಳಿದು ಬರುತ್ತದೆ. ೧೯೦೫-೦೬ ನೆಯ ಸಾಲಿನ ವಿದ್ಯಾಖಾತೆಯ ವರದಿಯಲ್ಲಿ ಈ ಟ್ರೇನಿಂಗ ಕಾಲೇಜಿನ ಪ್ರಾಚಾರ್ಯರಾದ ರೊದ್ದ ಶ್ರೀನಿವಾಸರಾಯರ ಕಾರ್ಯ ವೈಖರಿಯನ್ನು ಮತ್ತು ಅವರ ಕೈಗೆ ಕೈ ಜೋಡಿಸಿ, ಸಹವರ್ತಿಗಳಾಗಿ ಕಾಲೇಜಿನ ಶ್ರೇಯೋಭಿವೃದ್ಧಿಗೆ ದುಡಿಯುತ್ತಿರುವ ಸಹಾಯಕ ಶಿಕ್ಷಕರ ಸಹಕಾರವನ್ನು ಪ್ರಶಂಸಿಸಲಾಗಿದೆ.

ಪ್ರಾಕೃತಿಕ ಅತಿವೃಷ್ಟಿಯೊಂದಿಗೆ ರಾಜಕೀಯ ಬೆಳವಣಿಗೆಗಳೂ ಕೂಡ ಮಗ್ಗುಲು ಹೊರಳಿಸಿದವು. ಇದೂವರೆಗೂ ರಾಜ್ಯಭಾರ ನಡೆಸಿದ್ದ ಕಾನ್ಸರವೇಟಿವ್ ಬಣದ ಬದಲಾಗಿ ಲಿಬರಲ್ ಬಣ ಅಧಿಕಾರ ಕೈಗೆತ್ತಿಕೊಳ್ಳುತ್ತದೆ. ಸರ್ ಕ್ಯಾಂಬೆಲ್ ಬ್ಯಾನರಮನ್ ಎಂಬ ಮುತ್ಸದ್ದಿಯ ಸಾರಥ್ಯದಲ್ಲಿ, ಜಾನ್‌ಮೋರ್ಲೆ ಭಾರತದ ಪ್ರಧಾನನಾಗುತ್ತಾನೆ. ಈ ರಾಜಕೀಯ ಬೆಳವಣಿಗೆ-ಬದಲಾವಣೆಗಳು ಶಿಕ್ಷಣ ಕೇತ್ರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಲ್ಲವಾಗಿರುತ್ತವೆ.

೧೯೦೭ರ ಜೂನ ೨ ಮತ್ತು ಮೂರನೆಯ ತಾರೀಖಿಗೆ, ವಿದ್ಯಾವರ್ಧಕ ಸಂಘದವರಿಂದ, ವಿಕ್ಟೋರಿಯಾ ಥೇಟರನಲ್ಲಿ(?) ನಡೆದ ಕನ್ನಡ ಗ್ರಂಥಕರ್ತರ ಸಮ್ಮೇಳನ ಒಂದು ಮಹತ್ವದ ಸಮ್ಮೇಳನ. ಈ ಸಮ್ಮೇಳನವನ್ನು ಶಿಕ್ಷಣ ಇಲಾಖೆಯ ಪ್ರತಿನಿಧಿಗಳಾಗಿ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ **ರೊದ್ದ ಶ್ರೀನಿವಾಸರಾಯರು,** ಬೆಳಗಾವಿಯ ಡಿ.ಎ.ಇ.ಯವರಾದ **ವಿನಾಯಕರಾವ ಜೋಶಿ**ಯವರು, ಧಾರವಾಡದ ಡಿ.ಎ.ಇ.ಯವರಾದ ಕೆರೂರ ಬಾಬಾಚಾರ್ಯರವರು ಮತ್ತು ಬೆಳಗಾವಿ ಹೈಸ್ಕೂಲ ಹೆಡ್ ಮಾಸ್ತರರಾದ ರಾಮಚಂದ್ರರಾವ ದೇಶಪಾಂಡೆಯವರು ಹಾಗೂ ದಕ್ಷಿಣ ಭಾಗದ ಎ.ಇ.ಯಾದ **ಕರಂದೀಕರ**ರೂ ಸಭೆಯನ್ನಲಂಕರಿಸಿದ್ದರು. ಅಲ್ಲದೇ ನಿವೃತ್ತಿ ಹೊಂದಿದ್ದ **ವೆಂಕಟರಂಗೋ ಕಟ್ಟಿ**ಯವರೂ ಇದರಲ್ಲಿ ಪಾಲ್ಗೊಂಡಿದ್ದರು. ಇಷ್ಟೇ ಅಲ್ಲದೇ ಪ್ರಾಥಮಿಕ ಶಾಲಾ ಶಿಕ್ಷಕರಾದ ಶ್ರೀ **ಸಕ್ಕರಿ**ಯವರೂ ಇದರಲ್ಲಿ ಭಾಗಿಯಾಗಿ, ಅಮೂಲ್ಯವಾದ ಅಭಿಪ್ರಾಯ, ಸಲಹೆ ಸೂಚನೆ ನೀಡಿದ್ದಾರೆ. ಟ್ರೇನಿಂಗ್ ಕಾಲೇಜಿನ ಆರಂಭದಾದಿಯಾಗಿ ಗ್ರಂಥ ರಚನೆಯಲ್ಲಿ ತೊಡಗಿದ್ದ ಮತ್ತು ಅದಕ್ಕೆ ಪ್ರೋತ್ಸಾಹವನ್ನಿತ್ತ ಘನತೆಗೆ ಸಂದ ಶ್ರೇಯಸ್ಸು ಇದು ಎನಬಹುದು.[೫೭]

೧೯೦೮ ಜನೇವರಿಯಲ್ಲಿ ಮುನಸಿಪಾಲ್ಟಿಯವರು ಮಾಡಿದ 'ಮೆಚ್ಚುಗೊಡುವ ಸಮಾರಂಭದಲ್ಲಿ ಅಧ್ಯಕ್ಷ ಸ್ಥಾನವಹಿಸಿ ಮಾತನಾಡುತ್ತ **'ಫೀಮೆಲ್ ನಾರ್ಮಲ್ ಸ್ಕೂಲಿನ ಕಟ್ಟಡ** ಕಟ್ಟಲನುವಾಯಿತು. ಅದನ್ನು ಮುನಸಿಪಾಲ್ಟಿಯವರಿಗೆ ಕೊಡಲು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳ ಬೇಡಿಕೆಯನ್ವಯ ಉಚಿತ ಪ್ರಾಥಮಿಕ ಶಿಕ್ಷಣದ ಮನವಿಯನ್ನು ಸರಕಾರದ ಗಮನಕ್ಕೆ ತರುವುದಾಗಿ' ಡೈರೆಕ್ಟರ ಸೇಲ್ಬೀ ಭರವಸೆ ನೀಡುತ್ತಾರೆ. ಇದನ್ನು ನೋಡಿದರೆ ಮಹಿಳಾ ಶಿಕ್ಷಣದತ್ತ

ಹೆಚ್ಚಿನ ಆಸಕ್ತಿ ಒಲವು ಹೆಚ್ಚುತ್ತಿರುವುದಕ್ಕೆ ಎಲ್ಲೋ ಒಂದಿಷ್ಟು ಆಶಾವಾದ ಚಿಗುರೊಡೆಯುತ್ತದೆ. ಅದೇ ರೀತಿಯಲ್ಲಿ ಕಾಲೇಜದ ಪ್ರಿನ್ಸಿಪಾಲರ, ಡೆಪ್ಯೂಟಿಯವರ, ಅಸಿಸ್ಟಂಟ ಡೆಪ್ಯೂಟಿಯವರ ಮತ್ತು ಉಪ ಶಿಕ್ಷಕರ ಸಂಬಳಗಳನ್ನು ಹೆಚ್ಚಿಸುವ ಮೂಲಕ ಸರಕಾರ ಶಿಕ್ಷಣ ಇಲಾಖೆಯ ಯಾವತ್ತೂ ನೌಕರರಿಗೆ ಉತ್ತೇಜನ ನೀಡಿದೆ.

ಜುಲೈ ೧೯೦೮ರಲ್ಲಿ ರೊದ್ದ ಶ್ರೀನಿವಾಸರಾಯರು ನಿವೃತ್ತಿಯಾಗುತ್ತಾರೆ. ಇವರ ನಂತರ (?) ವಿ.ಬಿ.ಜೋಶಿಯವರು ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿ ಅಧಿಕಾರ ಸ್ವೀಕರಿಸುತ್ತಾರೆ. ಇದೇ ಸಂದರ್ಭದಲ್ಲಿಯೇ ಟ್ರೇನಿಂಗ ಕಾಲೇಜಿನಲ್ಲಿ ಹೊಸದಾಗಿ ಮಂಜೂರಾದ ಅಧ್ಯಾಪಕ ಹುದ್ದೆಗೆ ಗುತ್ತಲ ಶಾಲೆಯ ಮಾಸ್ತರರಾದ ಗಳಗನಾಥ ಅವರನ್ನು ನೇಮಕ ಮಾಡಿ ಎ.ಇ. ದಕ್ಷಿಣ ಭಾಗ ಆದ ಕರಂದೀಕರರು ಅದೇಶ ಹೊರಡಿಸಿದ್ದು, ಗಳಗನಾಥರು ಈಗೀರುವ ಕಾಲೇಜಿನ ಅಧ್ಯಾಪಕರಿಗೆ ಕನ್ನಡ, ಸಂಸ್ಕೃತ ಭಾಷೆಗಳನ್ನು ಕಲಿಸಲು ನೆರವಾಗಬೇಕಾಗಿತ್ತು. ಅಂಥ ಸಾಮರ್ಥ್ಯವಿರುವ ಶಾಲಾ ಮಾಸ್ತರರು ಮೇಲೆ ಬರಲಿ ಎಂಬ ಉದ್ದೇಶದಿಂದ ಮೆ. ಡೈರೆಕ್ಟರ ಸಾಹೇಬರು ಹೀಗೆ ಮಾಡಿರುವುದು ತಿಳಿದು ಬರುತ್ತದೆ. ಇದಲ್ಲದೆ ಕಾಲೇಜಿನಲ್ಲಿ ಕನ್ನಡ ಕಲಿಸುವ ಅಧ್ಯಾಪಕರ ಕೊರತೆಯಾಗಿ ಮೈಸೂರವರ ಮೋರೆ ನೋಡುತ್ತ ನಿಲ್ಲುವ ಪ್ರಸಂಗ ಬರಬಾರದೆಂಬ ಕಾರಣಕ್ಕೆ ಕಾಲೇಜಿನಲ್ಲಿ ಮೂರನೆಯ ವರ್ಷದಲ್ಲಿ ಪಾಸಾದ **ಪೂಜಾರ** ಎಂಬ ವಿದ್ಯಾರ್ಥಿಯನ್ನು ಮೈಸೂರಿಗೆ ಕಳಿಸಿ, ಅಲ್ಲಿ ನಡೆಯುವ ಪಂಡಿತ ಪರೀಕ್ಷೆಗೆ ಅಭ್ಯಾಸ ಮಾಡಲು ತಿಂಗಳಿಗೆ ಹತ್ತು ರೂಪಾಯಿಗಳಂತೆ ಕೊಡುತ್ತಬಂದ ಎ.ಇ. ದಕ್ಷಿಣ ಭಾಗ ಆದ ಕರಂದೀಕರರು ಈ ಕರ್ನಾಟಕದ ಅಭಿಮಾನಕ್ಕೆ ಮತ್ತು ಸುಧಾರಣಾ ಚತುರತೆಯಲ್ಲಿ ಮೇರುಪರ್ವತವಾಗಿ ಕಾಣುತ್ತಾರೆ.

೧೯೦೯ರ ಜುಲೈನಲ್ಲಿ ಟ್ರೇನಿಂಗ ಕಾಲೇಜಿನ ಪ್ರವೇಶಕ್ಕೆ ನೀತಿನಿಯಮಗಳು ಮತ್ತೇ ಬದಲಾಗಿವೆ: 'ಈ ವರೆಗೆ ಮ್ಯಾಟ್ರೀಕ್ಯುಲೇಶನ್ ಮತ್ತು ಸ್ಕೂಲ್ ಫಾಯನಲ್ ಪರೀಕ್ಷೆ ಪಾಸಾದವರನ್ನು ೧ನೇ ವರ್ಗಕ್ಕೇ ತೆಗೆದುಕೊಳ್ಳಲಾಗುತ್ತಿತ್ತು. ಆದರೆ ಇನ್ನೂ ಮುಂದೆ ಮ್ಯಾಟ್ರೀಕ್ಯುಲೇಶನ್ ಮತ್ತು ಸ್ಕೂಲ್ ಫಾಯನಲ್ ಪರೀಕ್ಷೆ ಪಾಸಾದವರನ್ನು ಅವರ ವಯಸ್ಸಿನನ್ವಯ ಇಯತ್ತೆ ಮೀರದೇ ಇದ್ದರೆ ಎ.ಇ. ಅವರ ಪರವಾನಗಿಯಿಂದ ನೇರವಾಗಿ ಎರಡನೆ ವರ್ಗಕ್ಕೆ ಸೇರಿಸಿಕೊಳ್ಳಲಾಗುವುದು' ಎಂಬ ಮತ್ತೊಂದು ಬದಲಾವಣೆ ಆಗಿರುವುದು ಹೊಸ ಬೆಳವಣಿಗೆಯಾಗುತ್ತದೆ. ೧೬-೬-೧೯೧೦ ಕ್ಕೆ ಶ್ರೀ ವಿ ಬಿ ಜೋಶಿಯವರು ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು.

೧೯೧೭ರಜೂನ್ ಸಂ.೫೩, ಸಂ.೬ರ ಪುಟ ೩೦ರಲ್ಲಿ- ಡೈರೆಕ್ಟರರ ಆದೇಶ ಸಂಖ್ಯೆ ೧೯೯೬/ತಾರೀಖು೨೧ನೇ ಮೇ ೧೯೧೭ರ ಮೆರೆಗೆ... 'ವರ್ನಾಕ್ಯೂಲರ್ ಫಾಯನಲ್ (ಮುಲ್ಕಿ-ದೇಶ ಭಾಷೆಯ ೭ ನೆಯ ಇಯತ್ತೆಯ ಎಲ್ಲ ವಿಷಯಗಳಲ್ಲಿ) ಪರೀಕ್ಷೆಯಲ್ಲಿ ನೂರಕ್ಕೆ ೪೫ರಂತೆ ಗುಣಗಳನ್ನು ದೊರಕಿಸಿದ ಉಮೇದುವಾರರಿಗೆ ಮಾತ್ರ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿ ದೊರೆಯುವುದು. ಮುಸಲ್ಮಾನ, ಕೀಳು ಮುಂತಾದ ಹಿಂದುಳಿದ

ಜಾತಿಯವರಿಗೆ ಈ ನಿಯಮವು ಲಾಗೂ ಇರುವುದಿಲ್ಲ. ಪರೀಕ್ಷೆಗೆ ಕೂಡ್ರಲು ಪರವಾನಗಿಯ ಬಗ್ಗೆ ಮಾಡತಕ್ಕ ಅರ್ಜಿಗಳನ್ನು ಆಯಾ ಜಿಲ್ಲೆಯ ಡೆ. ಎ. ಇ. ರ ಮುಖಾಂತರ ಕಳಿಸತಕ್ಕದ್ದು.

D.T.College for Men
15-6-1917 | R. S. Kulakarni
Principal.'

ಎಂದಿದೆ. ಇದರಿಂದಾಗಿ ೧೯೧೭ರಿಂದ ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆಗೆ ಕೂಡ್ರಲಿಕ್ಕೆ ಮತ್ತೇ ನಿಯಮಗಳು ಬದಲಾದದ್ದು ವಿಧಿತವಾಗುತ್ತದೆ. ಜೊತೆಗೆ ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದವರಿಗೆ ವಿನಾಯಿತಿ ದೊರೆಯುತ್ತಿದ್ದುದೂ ಕೂಡ ಇಲ್ಲಿ ಸ್ಪಷ್ಟವಾಗುತ್ತದೆ. ಅಲ್ಲದೆ ಈ ಪರೀಕ್ಷೆಯನ್ನು ಹೊರಗಿನಿಂದ ಕುಳಿತುಕೊಳ್ಳಲು ಅವಕಾಶವಿದ್ದು ಸಾಕಷ್ಟು ಜನ ಹೊರಗಿನಿಂದ ಪರೀಕ್ಷೆ ಬರೆದು ಪಾಸಾಗಿದ್ದಾರೆ.

೧೯೧೨ರಲ್ಲಿ ಟ್ರೇನಿಂಗ ಕಾಲೇಜಿನಲ್ಲಿ ಕರಕುಶಲ ಶಿಕ್ಷಣ ಅಂದರೆ ಅಂದು ಅದು 'ಹಸ್ತಶಿಕ್ಷಣ' ಎಂಬ ಹೆಸರಿನಿಂದ ಆರಂಭವಾದ ಬಗೆಗೆ ಸ್ಪಷ್ಟ ಚಿತ್ರಣ ದೊರಕುತ್ತದೆ. ಶಾಲಾ ಪತ್ರಕ ಸಂ ೪೮, ಸಂ ೫, ಮೇ ೧೯೧೨ ರ ಪುಟ ೯ರಲ್ಲಿ (ಇಲ್ಲಿ ಪುಟಗಳ ಸಂಖ್ಯೆ ಕತ್ತರಿಸಿ ಹೋಗಿರುವುದರಿಂದ ಒಂದು ಸಂಚಿಕೆಗೆ ೩೨ ಪುಟಗಳಂತೆ ಎಣಿಸಿ ಹೇಳಲಾಗಿದೆ) ಈ ಬಗೆಗೆ ನೀಡಿದ ಹೇಳಿಕೆ ಇದೆ:

" ಮ್ಯಾನ್ಯುಅಲ್ ಟ್ರೇನಿಂಗ " ಅಥವಾ ಹಸ್ತಶಿಕ್ಷಣ.

ಹೊಸ ಶಿಕ್ಷಣ ಪದ್ಧತಿಯ ಪ್ರಕಾರ ಬಾಲಕರಿಗೆ ಸರ್ವಾಂಗಪೂರ್ಣವಾದ ಶಿಕ್ಷಣವು ದೊರೆಯಬೇಕಾದರೆ, ಅವರಿಗೆ ಮಾನಸಿಕ ಶಿಕ್ಷಣದಷ್ಟೆ ಹಸ್ತಶಿಕ್ಷಣವು ದೊರೆಯುವದೂ ಅವಶ್ಯವಾದ ಸಂಗತಿಯಾಗಿರುತ್ತದೆಂದು ಈಗ ಬಹುಶಃ ಯಾವತ್ತು ಶಿಕ್ಷಣಶಾಸ್ತ್ರಜ್ಞರು ಒಪ್ಪಿಕೊಳ್ಳುತ್ತಾರೆ. ಈ ತತ್ವವನ್ನನುಸರಿಸಿ ಈಗ ಕೆಲವು ಕಡೆಯಲ್ಲಿ ಹಸ್ತಶಿಕ್ಷಣದ ಶಾಲೆಗಳೂ ವರ್ಗಗಳೂ ಸ್ಥಾಪಿಸಲ್ಪಡುತ್ತಲಿವೆ. ಅದರಂತೆ ಧಾರವಾಡ ಟ್ರೇನಿಂಗ ಕಾಲೇಜದಲ್ಲಿಯೂ, ಕೆಲವು ಲೋಕಲ್‌ಬೋರ್ಡ ಶಾಲೆಗಳಲ್ಲಿಯೂ ವಿದ್ಯಾರ್ಥಿಗಳಿಗೆ ಹಸ್ತಶಿಕ್ಷಣವನ್ನು ಕೊಡುವ ವ್ಯವಸ್ಥೆಯು ಮಾಡಲ್ಪಟ್ಟದೆ. ಆದರೆ ಈ ಶಾಲೆಗಳಲ್ಲಿಯೂ ವರ್ಗಗಳಲ್ಲಿಯೂ ಈ ಶಿಕ್ಷಣವು ಸರಿಯಾಗಿ ಸಾಗಬೇಕಾದರೆ ಶಿಕ್ಷಕರೂ ವಿದ್ಯಾರ್ಥಿಗಳೂ ಹಲವು ಮುಖ್ಯ ಸಂಗತಿಗಳನ್ನು ಚೆನ್ನಾಗಿ ಲಕ್ಷ್ಯದಲ್ಲಿಡಬೇಕಾಗುತ್ತದೆ. ಈ ಸಂಗತಿಗಳನ್ನು ಹೇಳುವಂಥ ಪುಸ್ತಕವು ಇದುವರೆಗೆ ಕನ್ನಡದಲ್ಲಿ ಆಗಿರುವದಿಲ್ಲ. ಆದ್ದರಿಂದ, ಈ ವಿಷಯದಲ್ಲಿ ಇಲ್ಲಿ ಹಲವು ಸೂಚನೆಗಳನ್ನು ಹೇಳುತ್ತೇವೆ. ಇವುಗಳಿಂದ ಮ್ಯಾನ್ಯುಅಲ್ ಟ್ರೇನಿಂಗದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ತಕ್ಕಮಟ್ಟಿಗೆ ಉಪಯೋಗವಾದೀತೆಂದು ಎಣಿಸುತ್ತೇವೆ.

ಹಸ್ತಶಿಕ್ಷಣವು ಅನೇಕ ವಿಧವಾಗಿರುವದು. ಕಾಗದ, ರಟ್ಟು, ಅರಲು, ಕಟ್ಟಿಗೆ ಮುಂತಾದ ಅನೇಕ ಪದಾರ್ಥಗಳಿಂದ ಉಪಯುಕ್ತ ವಸ್ತುಗಳನ್ನೂ ಚಂದದ ಬಡವೆಗಳನ್ನೂ ಮಾಡುವದಕ್ಕೆ ಕಲಿಸುವದು ಹಸ್ತಶಿಕ್ಷಣದಲ್ಲಿ ಬರುತ್ತದೆ.

ಆದರೆ ಅವುಗಳಲ್ಲಿ ಸಾಧಾರಣ ದೊಡ್ಡ ಹುಡುಗರ ಹಸ್ತಶಿಕ್ಷಣಕ್ಕೆ ಕಟ್ಟಿಗೆಯದೇ ವಿಶೇಷವಾಗಿ ಉಪಯುಕ್ತವಾದ್ದರಿಂದ ಇಲ್ಲಿ ಕಟ್ಟಿಗೆಯ ಸಂಬಂಧದ ಹಸ್ತಶಿಕ್ಷಣದ ಸೂಚನೆಗಳನ್ನು ಮಾತ್ರ ಬರೆಯುತ್ತೇವೆ:—

ಹೀಗೆ ಹೇಳುತ್ತ ಮುಂದುವರೆದು ೧ನೆಯ ಅಧ್ಯಾಯದಲ್ಲಿ 'ಕಟ್ಟಿಗೆಯ ಕೆಲಸದ ಹತ್ಯಾರಗಳು' ಎಂಬ ಬರಹದಲ್ಲಿ ೪೬ ರೀತಿಯ ಬಡಿಗತನದ ಸಾಮಾನುಗಳ ಇಂಗ್ಲಿಷ– ಕನ್ನಡ

ಹೆಸರುಗಳು ಮತ್ತು ಉಪಯೋಗ ಹಾಗೂ ೨೧ ರೀತಿಯ ಕಮ್ಮಾರಿಕೆಯ ಸಾಮಾನುಗಳ ಇಂಗ್ಲಿಷ-ಕನ್ನಡ ಹೆಸರುಗಳು ಮತ್ತು ಉಪಯೋಗಗಳ ಪಟ್ಟಿಯನ್ನೇ ಹತ್ತು ಪುಟಗಳುದ್ದಕ್ಕೂ ಕೊಡಲಾಗಿದೆ. ೨ನೆಯ ಅಧ್ಯಾಯದಲ್ಲಿ ಕಾರ್ಯ ಕೈಗೊಳ್ಳುವ ಪದ್ಧತಿ(methodology)ಯ ವಿಷದವಾದ ೩ ಪುಟದ ಮಾಹಿತಿ ತಿಳಿಸಲಾಗಿದೆ. ೩ನೆಯ ಅಧ್ಯಾಯದಲ್ಲಿ 'ಉಜ್ಜುಗೊರಡು' ಈ ವಿಷಯವಾಗಿ ಸವಿಸ್ತಾರವಾದ ೪ ಪುಟದ ಮಾಹಿತಿ ನೀಡಲಾಗಿದೆ. ಇಲ್ಲಿ ಮಾಡುವ ಪದ್ಧತಿ ಕುರಿತು ಹೇಳುವಾಗ ಹೇಗೆ ನಿಂತು, ಕೈಗಳನ್ನು ಹೇಗೆ ಹಿಡಿದು ಮಾಡಬೇಕು, ಯಾವ ರೀತಿ ಮಾಡಿದರೆ ಕಾರ್ಯ ಸರಳವಾಗುವುದು ಎಂಬ ಬಗೆಗೆ ಬಹಳ ಸರಳವಾದ ಆಸಕ್ತಿಯುತವಾದ ಮಾಹಿತಿ ಇದೆ. ಇದೇ ಮಾಹಿತಿ ಮುಂದೆವರಿದು ಜೂನ್ ತಿಂಗಳ ೪೮-೬ ನೆಯ ಸಂಚಿಕೆಯ ಪುಟ ೯ರಿಂದ ೧೯ರವರೆಗೆ- ಅಧ್ಯಾಯ ೪ 'ಕರಗಸ', ೫ನೆಯ ಅಧ್ಯಾಯ 'ಕೂಲುಗಳೂ, ಹುಗಿಲುಗಳೂ', ೬ನೆಯ ಅಧ್ಯಾಯ 'ಕಟ್ಟಿಗೆಯ ಅಳತೆ', ಮತ್ತು ಕೊರೆಯುವುದು, ೭ನೆಯ ಅಧ್ಯಾಯ 'ಕಂಬಾರಿಕೆಯ ಬಗ್ಗೆ ಕೆಲವು ಸೂಚನೆಗಳು'- ಹೀಗೆ ನಾಲ್ಕು ಅಧ್ಯಾಯಗಳಲ್ಲಿಯ ಮಾಹಿತಿಯ ಕೆಳಗೆ ಎನ್.ಎಸ್.ಪಾಂಡೆ. ಮ್ಯಾನುಅಲ್ ಟ್ರೇನಿಂಗದ ಶಿಕ್ಷಕ, ಟ್ರೇನಿಂಗ ಕಾಲೇಜ, ಧಾರವಾಡ. ಎಂಬ ಹೆಸರಿನೊಂದಿಗೆ ಪ್ರಕಟವಾಗಿದೆ. ಇದರಿಂದಾಗಿ 'ಕರಕುಶಲ ಶಿಕ್ಷಣ' ೧೯೧೨ ರಿಂದಲೇ ಆರಂಭವಾದ ಅಧಿಕೃತ ಮಾಹಿತಿ ದೊರೆಯುತ್ತದೆ. ಮುಂದೆ ಇದಕ್ಕೆ ಸಂಬಂಧಿಸಿದ ಪಠ್ಯಕ್ರಮ ತಿದ್ದುಪಡಿ ಹೊಂದುತ್ತ ೧೯೨೧ರಷ್ಟೊತ್ತಿಗೆ ಬೆಳೆದು, ಟ್ರೇನಿಂಗ ಕಾಲೇಜಿನ ಒಂದು ಐಚ್ಛಿಕ ವಿಷಯವಾಗಿ ಇದು ಮುಂದುವರೆದಿದೆ.

ಶಾಲಾ ಪತ್ರಕ ಸಂ ೪೮, ಸಂ ೭ ಜುಲೈ ೧೯೧೨ರಲ್ಲಿಯ ಲೇಖನ ಹೇಳುವಂತೆ 'ಧಾರವಾಡದ ಟ್ರೇನಿಂಗ ಕಾಲೇಜಿನಲ್ಲಿ ಜರುಗಿದ ಮಹತ್ವದ ಸಂಗತಿಗಳಲ್ಲಿ ೧೯೧೨ನೇ ಇಸವಿಯ ಜೂನ ತಿಂಗಳ ೩ರಿಂದ ೮ನೆಯ ತಾರೀಖಿನವರೆಗೆ ಜರುಗಿದ ಪ್ರದರ್ಶನವು ಒಂದಾಗಿದೆ' ಎಂಬ ಮೊದಲ ವಾಕ್ಯದೊಡನೆ ಆರಂಭವಾಗುವ ವಿವರ ಬಹು ಮಹತ್ವದ ಸಂಗತಿಯನ್ನೇ ಅರುಹುತ್ತದೆ. ಕಾಲೇಜಿನ ವತಿಯಿಂದ ಒಂದು(೧ ರಿಂದ ೩ನೆಯ ಪುಟದವರೆಗೆ) ಮತ್ತು ಇಬ್ಬರು ಎರಡನೆಯ ವರ್ಷದ ವಿದ್ಯಾರ್ಥಿಗಳಾದ ಬಾ.ದೇ.ಜೋಶಿ ಮತ್ತು ಸ.ಅ.ಕಿತ್ತೂರ ಬರೆದ ಇನ್ನೊಂದು (ಪುಟ ೧೭ ರಿಂದ ೨೭ ರವರೆಗೆ)- ಹೀಗೆ ಎರಡು ಲೇಖನಗಳು ಈ ಪ್ರದರ್ಶನದ ವಿವರ ನೀಡುತ್ತವೆ. ಮೇ ತಿಂಗಳ ರಜೆ ಮುಗಿಸಿ ಬರುವುದರೊಳಗೆ ಸಂಪೂರ್ಣ ತಯಾರಿಯಾಗಿ, ಪ್ರದರ್ಶನವೊಂದೇ ಬಾಕಿ ಉಳಿದಂತಾಗಿತ್ತು. ಷಾಣ್ಮಾಸಿಕ ಪರೀಕ್ಷೆ ಮುಗಿದು, ರಜೆ ಬಿಟ್ಟ ತಕ್ಷಣ ಕೆಲಕೆಲವು ಜಾಣರಾದ ವಿದ್ಯಾರ್ಥಿಗಳನ್ನು ಆರಿಸಿ ಕಾಲೇಜಿನಲ್ಲಿಯೇ ಪ್ರದರ್ಶನದ ನಿಮಿತ್ಯ ಉಳಿಸಿಕೊಂಡು, ಇತಿಹಾಸ, ಭೂಗೋಲ ಮತ್ತು ವಿಜ್ಞಾನ ಪ್ರದರ್ಶನಕ್ಕೆ ಮಾಡಿಕೊಂಡ ಮುಂತಯಾರಿ, ಪ್ರತಿಯೊಂದು ವಸ್ತುಗಳನ್ನು ಪರ್ಯಾಲೋಚಿಸಿ, ಬೇರೆ ಬೇರೆ ಕಡೆಗಳಿಂದ ಅವಶ್ಯಕ ಮತ್ತು ತಮ್ಮಲ್ಲಿ ಇಲ್ಲದಿದ್ದ ಸಾಮಾನುಗಳನ್ನು ತರಿಸಿದ ರೀತಿ, ಬೆಳಗಾವ, ಧಾರವಾಡ ಹೈಸ್ಕೂಲುಗಳಿಂದ, ಕೆಲವು

ಸದ್ಗೃಹಸ್ಥರಿಂದ ಮತ್ತು ಪುಣೆಯ ಫರ್ಗ್ಯೂಸನ್ ಕಾಲೇಜಿನಿಂದ ರಸಾಯನಶಾಸ್ತ್ರದ ಪ್ರೋಫೆಸರರಾದ ಮ. ರಾ. ಕಾಸಿಟಕರರವರನ್ನು ಅಲ್ಲಿಯ ಪ್ರಯೋಗ ಶಾಲೆಯಲ್ಲಿದ್ದ ಅತ್ಯಪೂರ್ವ ಪದಾರ್ಥಗಳೊಂದಿಗೆ ಪ್ರದರ್ಶನಕ್ಕೆ ಬರಲು ಆಮಂತ್ರಣ ನೀಡಿ ಕರೆಯಿಸಿದ ರೀತಿ ಎಲ್ಲವನ್ನೂ ಈ ಲೇಖನ ವರ್ಣಿಸುತ್ತದೆ. ಈ ಪ್ರದರ್ಶನ ಈಗ ಸಿಸ್ಲೇಪ(SISLEP- State Institute of School Leadership and Educational panning) ರಾಜ್ಯ ಶಾಲಾ ನಾಯಕತ್ವ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಸಂಸ್ಥೆಯ ಕಚೇರಿ ನಡೆಸುತ್ತಿರುವ ಕಟ್ಟಡದಲ್ಲಿ ಮತ್ತು ಅದರ ಪಕ್ಕದಲ್ಲಿರುವ ವಿಜ್ಞಾನ ಪ್ರಯೋಗಾಲಯದ ಕಟ್ಟಡದಲ್ಲಿ ಭಾರಿ ವಿಜೃಂಭಣೆಯಿಂದ ನೇರವೇರಿದ್ದು ಈ ಲೇಖನದಿಂದ ತಿಳಿದು ಬರುತ್ತದೆ. ಪ್ರದರ್ಶನದಲ್ಲಿ ಶಾಸ್ತ್ರೀಯ ಪ್ರಯೋಗಗಳ ಶಾಖೆ ಮತ್ತು ವಸ್ತುಪ್ರದರ್ಶನಗಳ ಶಾಖೆ ಎಂದು ಎರಡು ಶಾಖೆಗಳಿದ್ದು, ಶಾಸ್ತ್ರೀಯ ಪ್ರಯೋಗಗಳ ಶಾಖೆಯಲ್ಲಿ ಪ್ರಾಥಮಿಕ ಶಾಲೆಗಳ ಕ್ರಮಿಕ ಪುಸ್ತಕಗಳಲ್ಲಿ ಬಂದ ಪ್ರಯೋಗಗಳನ್ನು ಮತ್ತು ರಸಾಯನಶಾಸ್ತ್ರ, ವಿದ್ಯುತ್‌ಶ್ಶಾಸ್ತ್ರ ಮುಂತಾದ ಶಾಸ್ತ್ರಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ಮಾಡಿ ತೋರಿಸಲಾಗಿದೆ. ವಸ್ತುಪ್ರದರ್ಶನ ಶಾಖೆಯಲ್ಲಿ ಶಾರೀರ ಶಾಸ್ತ್ರ, ವನಸ್ಪತಿ ಶಾಸ್ತ್ರ, ಭೂಗರ್ಭಶಾಸ್ತ್ರ ಸಂಬಂಧಿ ವಸ್ತುಗಳು ಅಲ್ಲದೆ ಕಿಂಡರ ಗಾರ್ಟನದ ಹಾಗೂ ವಿದ್ಯಾರ್ಥಿಗಳ ಹಸ್ತಶಿಕ್ಷಣ(ಕರಕುಶಲ ಕೈಗಾರಿಕೆ) ಅನೇಕ ಮಾದರಿಗಳೂ, ಇತಿಹಾಸ ಭೂಗೋಲಗಳಿಗೆ ಸಂಬಂಧಿಸಿದ ನೂರಾರು ನಕಾಶೆಗಳು ಇಡಲ್ಪಟ್ಟಿದ್ದವು. ಇದು ಜೂನ್ ೩ರಂದು ಪಂಚಮ ಜಾರ್ಜ ಬಾದಶಹಾರ ಜನ್ಮವಾದ ಶುಭದಿನದಂದು ಆರಂಭವಾಗಿ, ಒಂದು ವಾರಾದ್ಯಾಂತ ಬೆಳಿಗ್ಗೆ ೭ರಿಂದ ರಾತ್ರಿ ೧೦ ಗಂಟೆಯ ವರೆಗೆ ನಡೆದಿದೆ. ಮೊದಲ ಮೂರು ದಿನ ಬೇರೆ ಬೇರೆ ತಾಲೂಕುಗಳ ಟ್ರೇನ್ಡ ಮಾಸ್ತರರಿಗೂ, ನಂತರದ ಎರಡು ದಿನ ಊರೊಳಗಿನ ಸದ್ಗೃಹಸ್ತರಿಗೂ ಮತ್ತು ಕೊನೆಯ ಒಂದು ದಿನ ಫೀಮೆಲ್ ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿನಿಯರಿಗೆ, ಶಾಲಾ ಅಧ್ಯಾಪಿಕೆಯರಿಗೆ ಮತ್ತು ಉಳಿದೆಲ್ಲ ಮಹಿಳೆಯರಿಗೆ ತೋರಿಸಲಾಗುವುದೆಂದು ಮೊದಲೇ ನೋಟಿಸು ಕೊಟ್ಟಂತೆ ಪ್ರದರ್ಶನ ನಡೆದಿದೆ. ಈ ಒಂದು ಶಾಲಾ ಶಿಕ್ಷಕರಿಗೆ ಪಗಾರಿ ರಜೆ ಕೊಟ್ಟು ಪ್ರದರ್ಶನದಲ್ಲಿ ಸ್ವಯಂಸೇವಕರಾಗಿ ಭಾಗಿಯಾಗಲು ವ್ಯವಸ್ಥೆ ಮಾಡಲಾಗಿತ್ತು. ಈ ಅವಧಿಯಲ್ಲಿ ಟ್ರೇನಿಂಗ ಕಾಲೇಜಿನ ಪ್ರಾಚಾರ್ಯರು ವಿ.ಭಾ. ಜೋಶಿಯವರಿದ್ದರು. ಕೇವಲ ಈ ಲೇಖನ ಓದುವಾಗ ಅಬ್ಬಾ! ಎನಿಸುವಂತಿರುವ ಈ ಪ್ರದರ್ಶನ ವಾಸ್ತವದಲ್ಲಿ ಹೇಗಿದ್ದೀತು? ಕಲ್ಪನಾತೀತ! ಇಂಥ ಅಘಾದಗಳ ಮಾಲಿಕೆ ಈ ಟ್ರೇನಿಂಗ ಕಾಲೇಜ್.

ಮ. ಪ್ರ. ಪೂಜಾರರ ಲೇಖನಗಳಂತೂ ಅತೀ ಮಹತ್ವದ್ದಾಗಿ ಕಾಣುತ್ತವೆ. ೧೯೧೪ ಮಾರ್ಚ ಪು ೫೦, ಸಂ ೩, ಪುಟ ೯ರಲ್ಲಿಯ 'ಯುದ್ಧವು ಜನಾಂಗದ ಅವನತಿಯ ಮುಖ್ಯ ಕಾರಣ' ಎಂಬ ಲೇಖನ ಮ.ಪ್ರ. ಪೂಜಾರರ ವೈವಿಧ್ಯಮಯ ಜ್ಞಾನ ಸಂಪತ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ೧೯೧೩ ಅಕ್ಟೋಬರ ಪು ೪೯, ಸಂ ೧೧, ಪುಟ ಸಂಖ್ಯೆ ೯ರಿಂದ ೧೯ ರಲ್ಲಿರುವ ಪೂಜಾರರು ಬರೆದ ಲೇಖನ 'ಮಹಾಲಕ್ಷ್ಮಿ' ವಸ್ತು ವೈಶಿಷ್ಟ್ಯದಿಂದಾಗಿ ವಿಶೇಷವೆನಿಸುತ್ತದೆ. ೧೯೧೪ ಎಪ್ರೀಲ್ ಪು ೫೦,

ಸಂ ೪, ಪುಟ ೧೮-೨೪ ರಲ್ಲಿಯ 'ವನಸ್ಪತಿಗಳು ಸಜೀವಗಳೆಂಬ ವಿಷಯದಲ್ಲಿ ಪ್ರಾಚೀನರ ವಿಚಾರವು' ಮತ್ತು ಇದೇ ಸಂಚಿಕೆಯ ಪುರ್ಟ ರಿಂದ ೧೩ರಲ್ಲಿಯ 'ಕನ್ನಡ ಭಾಷೆಯ ವಿಶೇಷ ವಿಷಯಗಳು' ಎಂಬ ಲೇಖನಗಳು ವೈಜ್ಞಾನಿಕವಾಗಿ ಸಂಶೋಧನಾತ್ಮಕವಾಗಿರುವುದು. ೧೯೧೪ ಜೂನ ಪು ೫೦, ಸಂ ೬, ಪುಟ೫ ರೊಂದ ೮ ರವರೆಗಿರುವ ಲೇಖನ 'ಸನ್ಯಾಸವು ಜನಾಂಗದ ಅವನತಿಯ ಒಂದು ಕಾರಣ' ಇದು ಸೃಜನಶೀಲ ಮತ್ತು ಚಿಂತನಪರ ಮನಸ್ಸಿಗೆ ಹಿಡಿದ ಕನ್ನಡಿಯಂತಿದೆ. ೧೯೧೪ ಅಗಸ್ಟ, ಪು ೫೦, ಸಂ ೮, ಪುಟ ೯-೧೫ ರಲ್ಲಿರುವ ಲೇಖನ 'ಪ್ರಕೃತಿಯ ವರ್ಣವೈಚಿತ್ರ್ಯವು' (೨೪-೬-೧೯೧೪ ಬುಧುವಾರ ದಿವಸ ಟ್ರೇನಿಂಗ ಕಾಲೇಜದಲ್ಲಿ ಉಪನ್ಯಾಸ ಮಾಡಿದ್ದು)' ಎಂಬ ಈ ಲೇಖನವೂ ಮ ಪ್ರ ಪೂಜಾರರ ಸಂಶೋಧನಾತ್ಮಕ, ಪ್ರಗತಿಪರ ಆಲೋಚನಾ ಮನೋಭಾವದ ಪ್ರತೀಕವಾಗಿದೆ.

ತ. ನಾ. ಅಮ್ಮಿನಭಾವಿಯವರ ಹಲವಾರು ಲೇಖನಗಳು ಪ್ರಾಥಮಿಕ ಶಿಕ್ಷಣದ ಕಲಿಕೆ ಮತ್ತು ಬೋಧನೆಗೆ ಮತ್ತು ಪ್ರತಿಭೆಯ ಗಳಿಕೆಗೆ ಸಹಾಯವಾಗುವಂಥವಾಗಿವೆ.

ಮತ್ತೊಂದು ವಿಶೇಷವೆಂದರೆ ಆರ್ ನರಸಿಂಹಾಚಾರ್ಯರ 'ಕರ್ನಾಟಕ ಕವಿ ಚರಿತ್ರೆ' ಪುಸ್ತಕವನ್ನು ಟ್ರೇನಿಂಗ ಕಾಲೇಜುಗಳಲ್ಲಿ ಅಧ್ಯಯನಕ್ಕೆ ಉಪಯೋಗಿಸಿದ್ದ ಮಾಹಿತಿ ಕೊಡುವ ೧೯೧೭ ಮಾರ್ಚ ಸಂ.೫೩, ಸಂ.೩ ಪುಟ ೨೬ ರಲ್ಲಿಯ ಎ.ಎಲ್. ಕೋವರ್ಟನ್, ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸಟ್ರಕ್ಷನ್‌ರವರ ಈ ಪ್ರಕಟಣೆ:

ಜಾಹೀರಾತು.

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರ ಮಾಡಿದಂಥ ಈ ಕೆಳಗಿನ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿರುತ್ತದೆ.

ಅ. ನಂಬರು.	ಪುಸ್ತಕದ ಹೆಸರು.	[illegible]	ಯಾವದರ ಬಗ್ಗೆ ಮಂಜೂರ ಮಾಡಿರುತ್ತದೆ.	ಬೆಲೆ.			ಶೆರಾ.
				ರು.	ಆ.	ಪೈ.	
೧	ಆರ್. ನರಸಿಂಹಾಚಾರ ಎಮ್. ಏ. ಬೆಂಗಳೂರ. 'ಕರ್ನಾಟಕ ಕವಿಚರಿತ್ರೆ' ಅಥವಾ 'ಲಾಯಿಪ್ಜ ಆಫ್ ಕನ್ನಡ ಪೋಎಟ್ಸ ವ್ಹಾಲ್ಯೂಮ ೧.' ಆರ್. ನರಸಿಂಹಾಚಾರ ಮತ್ತು ಎಸ್. ಜೀ. ನರಸಿಂಹಾಚಾರ ಇವರು ಬರೆದದ್ದು.	ಕನ್ನಡ.	ಕನ್ನಡ ಟ್ರೇನಿಂಗ ಕಾಲೇಜುಗಳಲ್ಲಿ ಉಪಯೋಗಿಸುವದಕ್ಕೆ.	೩	೦	೦	
೨	ಅಬ್ದುಲ್ ಕಾದಿರ ಇಬ್ರಾಹಿಮಜಿ, ಪೂನಾ ಸಿಟಿ. [illegible]	ಉರ್ದು.	ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ.	೧	೦	೦	

ಅಂದರೆ ಈಗ ಸ್ನಾತಕೋತ್ತರ ತರಗತಿಗಳಿಗೆ ಅಧ್ಯಯನಕ್ಕಿಟ್ಟಿರುವ ಆರ್ ನರಸಿಂಹಾಚಾರ್ಯರ 'ಕರ್ನಾಟಕ ಕವಿ ಚರಿತ್ರೆ' ೧೯೧೭ರಲ್ಲಿ ಟ್ರೇನಿಂಗ ಕಾಲೇಜಿನಲ್ಲಿ ಅದಾಗಲೇ ಅಧ್ಯಯನಗೊಳ್ಳುತ್ತಿತ್ತು ಎಂಬುದು ಸೋಜಿಗದ ಸಂಗತಿಯೇ ಜೊತೆಗೆ ಅಂಥ ಮೇಧಾವಿಗಳು ಅಂದು ಕಲಿತು ಕಲಿಸಬಲ್ಲ ಮನೋದಾರ್ಢ್ಯವನ್ನು ಹೊಂದಿದ್ದರು ಎಂಬುದನ್ನಿದು ಬಿಂಬಿಸುತ್ತದೆ.

ಕರ್ನಾಟಕ ಮಹಾವಿದ್ಯಾಲಯ: ೧೯೧೭

೧೯೨೪ರಲ್ಲಿ ನಡೆದ ಕರ್ನಾಟಕ ಕಾಲೇಜಿನ ಸಮ್ಮೇಳನದಲ್ಲಿ, ಮುಂಬೈ ಇಲಾಖೆಯ ಕಮಿಶ್ನರ್‌ರಾದ ಮೆ.ಮೌಂಟಫರ್ಡ ಅವರ ಸಮ್ಮುಖದಲ್ಲಿ, ಕಳೆದ ವರ್ಷದ ಬೆಳವಣಿಗೆಯನ್ನು ಕುರಿತು, ಪ್ರಿನ್ಸಿಪಾಲರಾದ ಹ್ಯಾಮಿಲ್ ಸಾಹೇಬರು ಮಾತನಾಡುತ್ತ 'ಕಾಲೇಜವು ೧೯೧೭ರಲ್ಲಿ ಪ್ರಾರಂಭವಾದಾಗ ೧೫೮ ಜನ ವಿದ್ಯಾರ್ಥಿಗಳಿದ್ದರು. ಈಗ ಆ ಸಂಖ್ಯೆಯು ಮುಮ್ಮಡಿಯಾಗಿ ೪೫೩ ಆದದ್ದು ಸಂತೋಷದ ಸಂಗತಿಯಾಗಿದೆ... ಬಿ.ಎ. ಪರೀಕ್ಷೆಯಲ್ಲಿ 'ಪಾವಟೆ' ಎಂಬ ವಿದ್ಯಾರ್ಥಿಯು ಮೊದಲನೇ ತರಗತಿಯಲ್ಲಿ ಪಾಸಾಗಿದ್ದಾನೆ. ಹೀಗೆ ಕಾಲೇಜದ ಅಭಿವೃದ್ಧಿಯು ಒತ್ತರದಿಂದ ನಡೆದಿದೆ. ಈಗಿದ್ದ ಅರಮನೆಯಂಥ ಮಂದಿರವು ಕಾಲೇಜಕ್ಕೆ ಸರ ಜಾರ್ಜ ಲಾಯಿಡ ಅವರ ಅನುಗ್ರಹದಿಂದ ೧೯೨೦ ನೇ ಇಸವಿಯಲ್ಲಿ ದೊರಕಿತು. ಸರ ಜಾರ್ಜ ಲಾಯಿಡ್, ದಿ. ಬ. ರೊದ್ದ ಮತ್ತು ರಾ. ಬ. ಅರಟಾಳ ಇವರು ಈ ಕಾಲೇಜದ ಸ್ಥಾಪಕರು. ವಿದ್ಯಾರ್ಥಿಗಳಿಗೆ ಉಳಿದ ಕಾಲೇಜುಗಳಿಗಿಂತ ಹೆಚ್ಚು ಶಿಷ್ಯವೃತ್ತಿಗಳು ಇರುವುದು ಈ ಕಾಲೇಜದ ಅಭಿವೃದ್ಧಿಗೆ ಅನುಕೂಲವಾದ ಸಂಗತಿಯಾಗಿದೆ. ಕಾಲೇಜದ ಸ್ಥಾಪಕರಾದ ಮೇಲೆ ಹೇಳಿದ ಮೂವರ ಭಾವ ಚಿತ್ರಗಳನ್ನು ವಾಚನಾಲಯದಲ್ಲಿ ಹಾಕಿಡುವುದು ವಿದ್ಯಾರ್ಥಿಗಳಿಗೆ ಸ್ಫೂರ್ತಿಯನ್ನುಂಟು ಮಾಡುವ ವಿಷಯವೆಂದು ತಿಳಿದು ಆ ಸದ್ಗೃಹಸ್ಥರಿಗೆ ವಿನಂತಿ ಮಾಡಿಕೊಳ್ಳಲು ಅವರೆಲ್ಲರೂ ತಮ್ಮ ಭಾವಚಿತ್ರಗಳನ್ನು ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ...'[೫೮] ಮುಂತಾಗಿ ವಿಷಯಗಳು ಪ್ರಸ್ತಾಪವಾಗುವಲ್ಲಿ ಕೃತಜ್ಞತಾಭಾವ ಮತ್ತು ಧನ್ಯತೆ ಇದೆ. ರೊದ್ದರಾಯರು ಕರ್ನಾಟಕ ಕಾಲೇಜ ಸ್ಥಾಪಿಸಿದಾಗ ಡಿ.ಸಿ.ಪಾವಟೆ ಇನ್ನೂ ವಿದ್ಯಾರ್ಥಿ. ಮುಂದೆ ಈ ಪಾವಟೆಯ ಸಾರಥ್ಯದಲ್ಲಿ ಒಂದು ವಿಶ್ವವಿದ್ಯಾಲಯವೇ ಸಾಗಿದ್ದು, ರೊದ್ದರಾಯರ ಪರಿಶ್ರಮದ ಪರಮಫಲವೇ ಆಗಿದೆ.

೧೯೧೯ರಲ್ಲಿ 'ಈಗೀರುವ ಟ್ರೇನಿಂಗ ಕಾಲೇಜಗಳಿಂದಲೂ ಟ್ರೇನಿಂಗ ಸ್ಕೂಲ ಗಳಿಂದಲೂ ಪ್ರತಿ ವರ್ಷ ೯೫೦ ಟ್ರೇಂಡ ಶಿಕ್ಷಕರು ಹೊರಬೀಳುತ್ತಿರುವರು. ಆದರೆ ನೌಕರಿ ಬಿಟ್ಟು ಹೋಗುವ, ಪೆನ್‌ಶನ್ ತೆಗೆದುಕೊಳ್ಳುವ ಹಾಗೂ ಮರಣ ಹೊಂದುವ ಟ್ರೇಂಡಶಿಕ್ಷಕರ ಸಂಖ್ಯೆಯು ಸರಾಸರಿ ಪ್ರತಿವರ್ಷ ೨೨೫೦ ಇರುವುದು. ಆದರೆ ಪ್ರತಿವರ್ಷ ಬೇಕಾಗುವ ಸಂಖ್ಯೆಗಿಂತ ಇದು ೧೩೦೦ ಕಡಿಮೆ ಇರುವುದು. ಈ ಕೊರತೆಯನ್ನು ಪೂರೈಸುವುದು ಈಗಿದ್ದ ಶಿಕ್ಷಣಾಲಯಗಳಿಂದ

ಆಗದಿರುವುದರಿಂದ ಸರಕಾರದವರು ಇಲಾಖೆಯ ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರತಿವರ್ಷ ೫೦ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಟ್ಟು ೧ನೇ ವರ್ಷದ ಟ್ರೇಂಡ ಶಿಕ್ಷಕರನ್ನಾಗಿ ಮಾಡುವ ೨೬ ಟ್ರೇನಿಂಗ ಸ್ಕೂಲಗಳನ್ನು ಸ್ಥಾಪಿಸುವಂತೆ ಗೊತ್ತು ಮಾಡಿದ್ದಾರೆ. ಈ ಎಲ್ಲ ಸ್ಕೂಲುಗಳು ೪ ವರ್ಷದ ಅವಧಿಯಲ್ಲಿ ಅಸ್ತಿತ್ವದಲ್ಲಿ ಬರಲಿಕ್ಕೆಬೇಕು. ಈ ನಿಯಮಕ್ಕನುಸರಿಸಿ ಸರಕಾರದವರು ಮಿ. ವಕೀಲರೆಂಬುವರನ್ನು ಡಿಸೆಂಬರ ೧೯೧೮ರಿಂದ “ಇನಸ್ಪೆಕ್ಟರ ಆಫ್ ಟ್ರೇನಿಂಗ ಸ್ಕೂಲ್ಸ” ಎಂಬ ಅಧಿಕಾರಿಯನ್ನು ನೇಮಿಸಿರುವರು. ಅವರು ಕಳೇದ ಜಾನೇವರಿ ತಿಂಗಳಲ್ಲಿ ೪ ಟ್ರೇನಿಂಗ ಸ್ಕೂಲಗಳನ್ನು ಸ್ಥಾಪಿಸಿದರು. ದಕ್ಷಿಣ ಭಾಗದಲ್ಲಿ ಈ ತರದ ಟ್ರೇನಿಂಗ ಸ್ಕೂಲು ವಿಜಾಪೂರದಲ್ಲಿ ಸ್ಥಾಪಿತವಾಗಿರುವುದು’ ಈ ಮಾಹಿತಿಯು ‘ಮುಂಬಯಿ ಇಲಾಖೆಯಲ್ಲಿ ೧೯೧೭-೧೯೧೮ರಲ್ಲಾದ ಪ್ರಾಥಮಿಕ ಶಿಕ್ಷಣದ ಪ್ರಗತಿಯು’ ಎಂಬ ವರದಿಯಿಂದ ತಿಳಿಯುತ್ತದೆ.[೫೯] ಈ ವರದಿಯ ಪ್ರಕಾರ ೧೯೧೯ರಲ್ಲಿಯೇ ಶಿಕ್ಷಕರ ಕೊರತೆ ಉಂಟಾಗಿದೆ ಮತ್ತು ಅದನ್ನು ನೀಗಲು ಎಲ್ಲ ಜಿಲ್ಲೆಗಳಲ್ಲಿಯೂ ಟ್ರೇನಿಂಗ ಸ್ಕೂಲುಗಳನ್ನು ತೆರೆಯುವ ಪ್ರಸ್ತಾವವಾಗಿದೆ. ಅಂದರೆ ೧೯ನೆಯ ಶತಮಾನದಾರಂಭದಲ್ಲಿ, ಶಿಕ್ಷಣದ ಮಹತ್ವ ಮತ್ತು ನೌಕರಿಯ ಅನಿವಾರ್ಯತೆ ಮನದಟ್ಟಾದ ಆ ಸಂದರ್ಭದಲ್ಲಿ ಇಡೀ ಭಾಗದಲ್ಲಿ ಇದ್ದ ಒಂದೇ ಟ್ರೇನಿಂಗ ಕಾಲೇಜೆಂದರೆ ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜ ಎನ್ನುವುದು ಇದರಿಂದ ವಿಧಿತವಾಗುತ್ತದೆ.

ಜುಲೈ ತಿಂಗಳಲ್ಲಿ ಪುಣೆಯಲ್ಲಿ ನಡೆದ ಕಾನ್ಫರೆನ್ಸನಲ್ಲಿ, ೧೯೧೯ರ ಡಿಸೆಂಬರನಲ್ಲಿ ನಡೆಯಬೇಕಾಗಿದ್ದ ಧಾರವಾಡದ ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆಯನ್ನು ರದ್ದು ಮಾಡಲು ಅನುಮತಿಯನ್ನು ನೀಡಲಾಗಿದೆ. ಇನ್ನುಮುಂದೆ ಎಜ್ಯುಕೇಷನ್ ಇನ್ಸಪೆಕ್ಟರ ದಕ್ಷಿಣ ಭಾಗ ಇವರ ಅಪ್ಪಣೆಯ ಮೇರೆಗೆ ಡೆಪ್ಯೂಟಿ ಎಜ್ಯುಕೇಷನ್ ಇನ್ಸಪೆಕ್ಟರಗಳು ಸರಕ್ಯೂಲರ್ ಹೊರಡಿಸಿತಿಳಿಸುವರು. ಅರ್ಧದಷ್ಟು ಅಂಟ್ರೇಂಡ ಶಿಕ್ಷಕರನ್ನು ಇನ್ನರ್ಧ ವಿದ್ಯಾರ್ಥಿ ದೆಸೆಯಲ್ಲಿರುವವರನ್ನು ಅವರ ವರ್ನಾಕ್ಯೂಲರ ಪರೀಕ್ಷೆಯಲ್ಲಿ ದೊರೆತ ಗುಣಗಳ ಆಧಾರದ ಮೇಲಿಂದ ಆಯ್ಕೆಮಾಡಿಕೊಳ್ಳುವ ಪ್ರಕ್ರಿಯೆ ೧೯೧೯ರಿಂದ ಆರಂಭವಾಗಿದೆ. (ಶಾಲಾ ಪತ್ರಕ, ೧೯೧೯ ಅಕ್ಟೋಬರ, ಪುಟ ೨/೩)

ಟ್ರೇನಿಂಗ ಕಾಲೇಜಿನಲ್ಲಿ ನಡೆಯುವ ಪ್ರವೇಶ ಪರೀಕ್ಷೆ ಮೊದಲ್ಗೊಂಡು, ಹೊರಗಿನಿಂದ ಕುಳಿತುಕೊಳ್ಳುವ ಪರೀಕ್ಷೆ, ಸ್ಕಾಲರಶಿಪ್ ಪರೀಕ್ಷೆಗಳು ಮುಂತಾದುವುಗಳಿಗೆ ಅರ್ಜಿಯನ್ನು ಡೆಪೂಟಿ ಇನ್ಸಪೆಕ್ಟರ ಕಚೇರಿಗೇ ಕಳುಹಿಸಬೇಕಾಗುತ್ತಿತ್ತು ಮತ್ತು ಶಿಕ್ಷಕರಿಗಾಗಿ ಅದರ ಪ್ರಕಟಣೆಯನ್ನು ಡೆಪೂಟಿ ಇನ್ಸಪೆಕ್ಟರ ಕಚೇರಿಯಿಂದಲೇ ಕೊಡಲಾಗುತ್ತಿತ್ತು. ಏಕೆಂದರೆ ಜಿಲ್ಲೆಯ ಶಿಕ್ಷಣದ ಮುಖ್ಯ ಕಚೇರಿ ಅದೇ ಆಗಿತ್ತು. ಇದನ್ನು ನೋಡಿದರೆ ಇಲಾಖೆಯ ಪ್ರತಿಯೊಂದು ಪ್ರಕ್ರಿಯೆಗಳನ್ನು, ಡೆಪೂಟಿ ಇನ್ಸಪೆಕ್ಟರ ಕಚೇರಿ ಮತ್ತು ಟ್ರೇನಿಂಗ ಕಾಲೇಜು ಏಷ್ಟೊಂದು ಹಾಸು ಹೊಕ್ಕಾಗಿ ಕಾರ್ಯ ನಿರ್ವಹಿಸಿವೆ ಎಂಬುದು ತಿಳಿದು ಬರುತ್ತದೆ.

'ದಕ್ಷಿಣ ಭಾಗದಲ್ಲಿ ಧಾರವಾಡ, ಹುಬ್ಬಳ್ಳಿ, ಗದಗ, ವಿಜಾಪುರ ಮುನಿಸಿಪಾಲಟಿಗಳು ೧೯೨೫ನೇ ಎಪ್ರೀಲ್ ತಿಂಗಳದಿಂದ ಸ್ಥಾನಿಕ ಅಧಿಕಾರ ಸಂಘ' (ಲೋಕಲ್ ಅಥಾರಿಟಿ) ಗಳೆಂದು ಪ್ರಸಿದ್ಧವಾಗಿವೆ. ದಕ್ಷಿಣ ಭಾಗದ ಜಿಲ್ಲಾ ಲೋಕಲ್ ಬೋರ್ಡುಗಳಲ್ಲಿ ಹೊಸ ಚುಣಾವಣೆ ಬಹುಶಃ ಅಕ್ಟೋಬರದಲ್ಲಿ ಆಗಬಹುದು ಮತ್ತು ಪ್ರಾಥಮಿಕ ಶಿಕ್ಷಣವು ಬೋರ್ಡುಗಳ ಕಡೆಗೆ ೧೯೨೬ರ ಜನೇವರಿ ತಿಂಗಳಲ್ಲಿ ಹೋಗುವುದು ಖಚಿತವಾಗಿದೆ' (ಶಾಲಾ ಪತ್ರಕ ೧೯೨೫, ಫೆಬ್ರುವರಿ ಸಂ೬೧, ಸಂ೧೧ ಪುಟ೨-೩) ಎಂಬ ಹೇಳಿಕೆಯಿಂದ ಪ್ರಾಥಮಿಕ ಶಾಲೆಗಳು ಜಿಲ್ಲಾ ಲೋಕಲ್ ಬೋರ್ಡಗಳಿಗೆ ಒಪ್ಪಿಸುತ್ತಿರುವುದು ಖಚಿತವಾಗುತ್ತದೆ. ೧೯೨೬ರ ಮಾರ್ಚ ಆರಂಭದಿಂದ ಪ್ರಾಥಮಿಕ ಶಿಕ್ಷಣವು ಜಿಲ್ಲಾ ಲೋಕಲ್ ಬೋರ್ಡುಗಳಿಗೆ ಒಪ್ಪಿಸಲಾಗಿದೆ. ಮಂಡಳಿಗೆ ಅಧ್ಯಕ್ಷರಾಗಿ ಹೊಸಮನಿಯವರು, ಉಪಾಧ್ಯಕ್ಷರಾಗಿ ನಲವಡಿಯವರು ಮತ್ತು ೧೨ ಜನ ಸದಸ್ಯರುಗಳು ಜನರಿಂದ ಆಯ್ಕೆಗೊಂಡಿದ್ದಾರೆ.

೧೯೨೫ರಲ್ಲಿ ಮುಂಬಯಿ ಇಲಾಖೆಯ ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀ ಭಾಸ್ಕರರಾವ ವಿಠೋಜಿರಾವ ಜಾಧವ ಇವರು ಕರ್ನಾಟಕ ಕಾಲೇಜಿಗೆ ರೊದ್ದರಾಯರ ಮತ್ತು ಅರಟಾಳ ಇವರ ತೈಲ ಚಿತ್ರಗಳ ಮತ್ತು ಶಾಸ್ತ್ರೀಯ ಶಾಖೆಯ ಅನಾವರಣ ಮಾಡವುದಕ್ಕಾಗಿ ಆಗಮಿಸಿದ ಆ ಸಂದರ್ಭದಲ್ಲಿ ಮಾತನಾಡಿದ ವಯೋವೃದ್ಧರಾದ ರೊದ್ದರಾಯರು 'ನೀವು ನನ್ನ ತಲೆ ಮೇಲೆ ಬಂಗಾರದ ಕೀರಿಟವನ್ನು ಹಾಕಿದಂತಾಯಿತು. ಆದರೆ ಆ ಕೀರಿಟಕ್ಕೆ ವಜ್ರವೈಡೂರ್ಯಗಳನ್ನು ಹಚ್ಚತಕ್ಕದ್ದದೆ. ನಾನು ಸಾಯುವುದರೊಳಗೆ ಇಲ್ಲಿ ಸಂಪೂರ್ಣವಾದ ಸಾಯನ್ಸ (ಬಿ.ಎಸ್‌ಸಿ.) ಕೋರ್ಸ ಪ್ರಾರಂಭವಾಗುವಂತೆ ಮಾಡುವೆನು. ಅದಕ್ಕಾಗಿ ೫ ವರ್ಷಗಳ ಅವಧಿಯಲ್ಲಿ ೧ಲಕ್ಷ ರೂಗಳನ್ನು ಕೂಡಿಸಿ ಸರಕಾರಕ್ಕೆ ಕೊಡುವೆನು. ಮತ್ತು ಸರಕಾರದವರು ಬಿ.ಎಸ್‌ಸಿ. ವರ್ಗವನ್ನು ಸಂಪೂರ್ಣವಾಗಿ ಇಡಲಿಕ್ಕೆ ಒಪ್ಪಿದರೆ ಇದೇ ವರ್ಷವೇ ೨೫ಸಾವಿರ ರೂ. ಕೂಡಿಸಿ ಕೊಡುವೆನು. ಮತ್ತು ನಾನೊಬ್ಬನೇ ಇದಕ್ಕಾಗಿ ೫೦೦ ರೂ ಕೊಡುವೆನು. ನಾನು ಬಹಳ ಮಾತನಾಡಬಲ್ಲೆನಾದರೂ ಅಡ್ಡಾಡಲಾರೆನು. ಕಾರಣ ಹೊರಸಿನ ಮೇಲಾದರೂ ಬಿದ್ದುಕೊಂಡು ಊರುರು ಮನೆಮನೆ ತಿರುಗಿ ನಾನು ಹೇಳಿದಷ್ಟು ಹಣವನ್ನು ಕೂಡಿಸುವೆನು' ಎಂಬ ಅಭಿದಾನವನ್ನು ಅಂಥ ಇಳಿ ವಯಸ್ಸಿನಲ್ಲೂ ಮಾಡುತ್ತಾರೆ. ಆಗ ಹ್ಯಾಂಪಟನ್ ಅವರು ಪ್ರಾಚಾರ್ಯರಾಗಿದ್ದರು.[೬೦] ಇದಲ್ಲದೆ ೧೯೨೫ರಲ್ಲಿ ರೊದ್ದರಾಯರು ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರೂ ಆಗಿದ್ದರು. (ಕನ್ನಡ ಶಾಲಾ ಪತ್ರಕ, ೧೯೨೫ ಅಗಸ್ಟ/ಸಪ್ಟಂಬರ, ಸಂ೬೨, ಸಂ ೫/೬, ಪುಟ ೩೮)

'ಟ್ರೇನಿಂಗಸ್ಕೂಲಿನ ಇನಾಮಿನ ಸಮಾರಂಭ'ದ ಭಾಷಣದಲ್ಲಿ ಈ ಸ್ಕೂಲಿನ ಹೆ.ಮಾಸ್ತರರಾದ ಹನುಮಂತರಾವ ದೇಶಪಾಂಡೆಯವರು ಮಾತನಾಡುತ್ತ 'ನನಗೆ ಟ್ರೇ.ಕಾ.ದ ಪರಿಚಯವು ೧೮೯೪ರಿಂದ ಇರುವುದು. ಅಂದಿನಿಂದ ಸೂಕ್ಷ್ಮ ಅವಲೋಕನ ಮಾಡಿದ್ದೆನೆ. ಈಗ ಈ ಸಂಸ್ಥೆಯು

ಚಿಕ್ಕದಾಗಿದ್ದರೂ ಅವಶ್ಯ ಸುಧಾರಣೆಗಳನ್ನು ಮಾಡುತ್ತಿದ್ದೇನೆ.... ಉಳಿದ ಭಾಗಗಳಲ್ಲಿಯ ಟ್ರೇ.ಕಾ.ಗಳು ಯಥಾಸ್ಥಿತವಾಗಿ ನಡೆದಾಗ ಈ ಭಾಗದ ಟ್ರೇ. ಕಾ.ವು ಸಂಕ್ಷಿಪ್ತರೂಪವನ್ನು ಹೊಂದಿದ್ದು ಇಲ್ಲಿಯವರ ದುರ್ಭಾಗ್ಯವು. ೧೯೨೪-೨೫ ಈ ಎರಡು ವರ್ಷಗಳ ಅವಧಿಯು ಟ್ರೇ.ಕಾ.ದ ಇತಿಹಾಸದಲ್ಲಿ ಸಂಖ್ಯೆಯ ದೃಷ್ಟಿಯಿಂದ ಕನಿಷ್ಠಕಾಲವು..... ಈ ವರ್ಷ ಇದ್ದ ೩೦ ವಿದ್ಯಾರ್ಥಿಗಳಲ್ಲಿ ಅವರ ವರ್ಗೀಕರಣವು ಧಾರವಾಡ ೧೨, ಮುನ್ಸಿಪಾಲ್ಟಿ ೨, ಬೆಳಗಾವ ೧೦, ವಿಜಾಪೂರ ೧. ಈ ಜನರಲ್ಲಿ ೭ ಬ್ರಾಹ್ಮಣರು, ೨ ಪಂಚಾಳರು, ೧೦ ಲಿಂಗವಂತರು, ೨ ಮರಾಠಾ, ೨ ಬೇಡರು, ೨ ಮುಸಲ್ಮಾನ, ೧ ತಳವಾರ, ೨ ಕುರುಬರು, ೧ ರೆಡ್ಡಿ, ೨ ಅಸ್ಪ್ರಶ್ಯ ವರ್ಗದವರು ಇದ್ದರು. ಇವರೆಲ್ಲರ ಊಟದ ವ್ಯವಸ್ಥೆಗಾಗಿ ಬ್ರಾಹ್ಮಣ, ಲಿಂಗವಂತ, ಮುಸಲ್ಮಾನ ಹೀಗೆ ಮೂರು ಬೇರೆ ಬೇರೆ ಬೋರ್ಡಿಂಗುಗಳು ಇರುವವು....'[೬೧] ಮುಂತಾದ ವಿಷಯಗಳನ್ನು ಪ್ರಸ್ತಾಪಿಸುತ್ತಾರೆ. ಈ ಹೇಳಿಕೆಯನ್ನಾಧರಿಸಿ ಕಲಿಯುವ ಮಕ್ಕಳ ಸಂಖ್ಯೆ ಕಡಿಮೆಯಾದ್ದರಿಂದ ಕಾಲೇಜು ಸ್ಕೂಲಾಗಿ ಸಂಕ್ಷಿಪ್ತತೆ ಹೊಂದಿತು ಎಂಬುದು ಸ್ಪಷ್ಟ. ಜೊತೆಗೆ ಮೂರು ಬೋರ್ಡಿಂಗುಗಳು ಜಾತಿ ಆಚರಣೆಯನ್ನು ಸ್ಪಷ್ಟಪಡಿಸುವ ಜೀವಂತ ಸಾಕ್ಷಿಯಾಗಿವೆ.

'ಟ್ರೇನಿಂಗ ಸ್ಕೂಲ್? ಸಂಸ್ಥೆಯನ್ನು ನೋಡಲಿಕ್ಕೆ ಬಂದದ್ದು' ಎಂಬ ವರದಿಯ ಪ್ರಕಾರ ಅಗಸ್ಟ ಮತ್ತು ಸಪ್ಟಂಬರ ತಿಂಗಳ ಮೂರನೆಯ ವಾರದಲ್ಲಿ ಧಾರವಾಡ, ಬೆಳಗಾವಿ, ವಿಜಾಪುರ ಜಿಲ್ಲೆಗಳ ಎಂಟುಜನ(ಹೆಸರುಗಳಿವೆ) ಇನಸ್ಪೆಕ್ಟಿಂಗ್ ಅಮಲ್ದಾರರು **ಟ್ರೇನಿಂಗ ಸ್ಕೂಲ್** ಸಂಸ್ಥೆಯನ್ನು ನೋಡಲು ಬಂದು, ಮೂರು ದಿನಗಳ ಕಾಲ ಅವಲೋಕನ ಮಾಡಿದ್ದಾರೆ.[೬೨] ಮತ್ತೇ ೧೯೨೭ರ ಜನೇವರಿ ೧೭, ೧೮, ೧೯ ನೆಯ ತಾರೀಖಿಗೆ **ಟ್ರೇನಿಂಗ ಸ್ಕೂಲು,** ಪ್ರಾಕ್ಟಿಸಿಂಗ ಸ್ಕೂಲಗಳನ್ನು ನಾಲ್ಕೂ ಜಿಲ್ಲೆಗಳ ಮೊದಲಿನ ಇನ್ಸಪೆಕ್ಟರುಗಳು (ಹೆಸರುಗಳಿವೆ) ನೋಡಲಿಕ್ಕೆ ಬಂದಿದ್ದಾರೆ. ಅದರ ಸಾರಾಂಶವೆನೆಂದರೆ 'ಇದರಿಂದ ಪರಸ್ಪರ ವಿಚಾರ ವಿನಿಮಯಕ್ಕೂ, ಹಳ್ಳಿಯ ಸಾಲೆಗಳಲ್ಲಿ ಎಂಥ ಸುಧಾರಣೆಗಳನ್ನು ಮಾಡಬಹುದು, ಹಳ್ಳಿಯ ಮೇಲ್ತರದ ಸಾಲೆಗಳಲ್ಲಿ ಇನ್ನೂ ಏನು ಸುಧಾರಣೆ ಮಾಡಬಹುದೆಂಬುದಕ್ಕೆ ತುಂಬಾ ಅನುಕೂಲ' ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ರಿಟ್ರೇನಿಂಗ: ೧೯೨೬ ಅಕ್ಟೋಬರ್‌ನಲ್ಲಿ ಟ್ರೇನಿಂಗ ಕಾಲೇಜಿನ ವರ್ಷಾರಂಭವನ್ನು ಇದುವರೆಗೂ ನಡೆದು ಬಂದತೆ ಡಿಶೆಂಬರದ ಬದಲಾಗಿ ಜೂನ ತಿಂಗಳಲ್ಲಿ ಮಾಡಬೇಕೆಂದು ನಿರ್ಣಯಿಸಿದ್ದರಿಂದ, ಡಿಸೆಂಬರದಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ನಿಲ್ಲಿಸಲಾಗಿದೆ. ಈ ಕಾರಣದಿಂದಾಗಿ ಡಿಶೆಂಬರ ೧೯೨೬ರಿಂದ ಎಪ್ರೀಲ್ ೧೯೨೭ರವರೆಗೆ ೪ ತಿಂಗಳು, ದಕ್ಷಿಣ ಭಾಗದೊಳಗಿನ ೩೫ ಜನ ೨ನೆಯ ವರ್ಷದ ಶಿಕ್ಷಕರಿಗೆ 'ರಿಟ್ರೇನಿಂಗ' ಕೊಡಬೇಕೆಂದು ಯೋಜಿಸಿಕೊಳ್ಳಲಾಗಿದೆ. ಅದರಂತೆ ರಿಟ್ರೇನಿಂಗಿಗೆ ಬರುವವರು ೩೫ ವರ್ಷ

ವಯಸ್ಸಿನೊಳಗಿನವರಿರಬೇಕು, ೧೦-೧೨ ವರ್ಷ ಸೇವೆ ಸಲ್ಲಿಸಿರಬೇಕು, ಎಂಬೆಲ್ಲ ನೀತಿ ನಿಯಮಾವಳಿಗಳನ್ನು ಮಾಡಿಕೊಂಡು, ೪ ಜಿಲ್ಲೆಯ ಲೋಕಲ್ ಬೋರ್ಡ ಮತ್ತು ಮುನ್ಸಿಪಾರ್ಟಿಗಳಿಂದ ಕೆಳಗಿನಂತೆ ಶಿಕ್ಷಕರನ್ನು ನಿಯೋಜಿಸಲು ತಿಳಿಸಲಾಗಿದೆ

ಧಾರವಾಡ ಜಿಲ್ಲೆ- ೯, ಧಾರವಾಡ ಮುನ್ಸಿಪಾರ್ಟಿ -೨

ಬೆಳಗಾವಿ ಜಿಲ್ಲೆ -೯, ಹುಬ್ಬಳ್ಳಿ ಮುನ್ಸಿಪಾರ್ಟಿ-೩

ಬಿಜಾಪುರ ಜಿಲ್ಲೆ -೪, ವಿಜಾಪುರ ಮುನ್ಸಿಪಾರ್ಟಿ - ೨,

ಕಾರವಾರ ಜಿಲ್ಲೆ -೨, ಗದಗ ಮುನ್ಸಿಪಾರ್ಟಿ-೩, ಬಾಗಲಕೋಟ ಮುನ್ಸಿಪಾರ್ಟಿ-೧.

ಈ ರಿಟ್ರೇನಿಂಗಿಗೆ ಧಾರವಾಡ ಜಿಲ್ಲೆಯ ಬೋರ್ಡು ಒಪ್ಪಿಗೆ ನೀಡದೆ ಇದ್ದರಿಂದ ಉಳಿದ ಜಿಲ್ಲೆಯವರು ಹೆಚ್ಚಿಗೆ ಶಿಕ್ಷಕರನ್ನು ಕಳುಹಿಸಲು ಮನವಿ ಕೂಡ ಮಾಡಿಕೊಂಡಿದೆ. (೧೯೨೬ ಅಕ್ಟೋಬರ್, ಸಂ ೬೩, ಸಂ ೭ ಪುಟ- ೧ ಮತ್ತು೨) ಈ ರಿಟ್ರೇನಿಂಗಿನಲ್ಲಿ ಒಟ್ಟು ೫ ವ್ಯಾಖ್ಯಾನಗಳನ್ನು ಕೊಡಲಾಗಿದೆ.

ವಿಷಯ	ವ್ಯಾಖ್ಯಾನಕಾರರು	ತಾರೀಖು
೧. ಮಾಂಟೆಸರಿಯ ಶಿಕ್ಷಣ ಕ್ರಮ	ಶ್ರೀ ಹನುಮಂತರಾವ ದೇಶಪಾಂಡೆ	೫/೩/೧೯೨೭
೨. ಕನ್ನಡ ವಾಙ್ಮಯ	ಶ್ರೀ ಮ ಪ್ರ ಪೂಜಾರ	೯/೩/೧೯೨೭
೩. ಡೆನ್ಮಾರ್ಕನಲ್ಲಿ ಒಕ್ಕಲತನ ಹಾಗೂ ಸಹಕಾರೀ ಸಂಘಗಳು	ಶ್ರೀ ಶಿ.ಬಿ. ಹೂಲಿ ಅಸಿ.ರೆಜಿಸ್ಟ್ರಾರ, ದ.ಭಾಗ	೧೦/೩/೧೯೨೭
೪. ಸಂಖ್ಯೆಯ ಕಲ್ಪನೆ.	ಶ್ರೀ ಟಿ ಎಮ್ ಪಾಟೀಲ, ಪ್ರೊ.ಕರ್ನಾಟಕ ಕಾಲೇಜ	೧೨/೩/ ೧೯೨೭
೫. ಸಸ್ಯಗಳ ರೋಗಗಳು.	ಮಿ.ಜಿ.ಎಸ್.ಕುಲಕರ್ಣಿ,ಕಾಟನ್ನ ರೀಸರ್ಚ ಆಫೀಸರ್	೧೪/೩/೧೯೨೭

ಈ ವಿಷಯಗಳಲ್ಲಿ ಸವಿಸ್ತಾರವಾದ ವ್ಯಾಖ್ಯಾನಗಳು ನಡೆದಿವೆ.

ಆದರೆ ೧೯೨೭ರ ಎಪ್ರೀಲ, ಮೇ ಅಷ್ಟೊತ್ತಿಗೆ ಒಂದು ಆಘಾತಕಾರಿಸುದ್ದಿ ಹೃದಯ ಸ್ಥಂಭಿಭೂತವಾಗುವಂತೆ ಮಾಡುತ್ತದೆ. ನಂಬಲಸಧ್ಯವಾಗುತ್ತದೆ. ಕಾಲದ ಬೇಡಿಕೆ ಮತ್ತು ಚಾರಿತ್ರಿಕ ಮಹತ್ವ ಏಷ್ಟೇ ಇದ್ದರೂ ಒದಗುವ ಆಪತ್ತುಗಳಿಗೇನೂ ಕಡಿಮೆ ಇರಲಿಲ್ಲ. ಮಕ್ಕಳ ಸಂಖ್ಯೆ ಕಡಿಮೆಯಾಯಿತೆಂಬುದಕ್ಕೆ ಕಾಲೇಜು ಸ್ಕೂಲ್ ಆಗಿ ಕೆಳದರ್ಜೆಗಿಳಿದದ್ದು, ಈಗ ಮುಚ್ಚಿಹೋಗುವ ಭಾರಿ ಆಘಾತವನ್ನು ಎದುರಿಸಬೇಕಾಯಿತು:

ಕನ್ನಡ

ಶಾಲಾಪತ್ರಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಪುಟ ೭೪	ಎಪ್ರಿಲ-ಮೇ ೧೯೩೭.	ಸಂ. ೧-೨.

ಸ್ಫುಟ ವಿಚಾರಗಳು

೧. ಟ್ರೇನಿಂಗ ಸ್ಕೂಲು ಬಂದಾಯಿತು.

ಈ ಸಂಸ್ಥೆಯು ಬೆಳಗಾಂವಿಯಲ್ಲಿ ೧೮೬೧ನೇ ಇಸವಿಯ ಜನವರಿ ೭ನೇ ತಾರೀಖಿನ ದಿವಸ ನಾರ್ಮಲ್ ಸ್ಕೂಲ ಎಂಬ ಅಭಿಧಾನದಿಂದ ಪ್ರಾರಂಭವಾಗಿ ೧೮೬೪ರಲ್ಲಿ ಟ್ರೇನಿಂಗ ಕಾಲೇಜವಾಯಿತು. ಮುಂದೆ ೧೧ ವರ್ಷಗಳ ನಂತರ ಧಾರವಾಡಕ್ಕೆ ಸ್ಥಳಾಂತರ ಮಾಡಲ್ಪಟ್ಟಿತು. ೧೮೭೫ ರಿಂದ ೧೯೩೪ರ ಕೊನೆಯ ವರೆಗೆ ಒಳ್ಳೇ ವೈಭವದಿಂದ ನಡೆದು ೧೦,೦೦೦ ಪ್ರಾಥಮಿಕ ಶಿಕ್ಷಕರನ್ನು ಸಿದ್ಧಪಡಿಸಿತು. ಇಲ್ಲಿಂದ ಹೊರಬಿದ್ದ ಎಷ್ಟೋ ಶಿಕ್ಷಕ ಜನರು ಪ್ರಸಿದ್ಧ ಕನ್ನಡ ಲೇಖಕರೆಂದು ಹೆಸರಾಗಿದ್ದಾರೆ. ಈ ಸಂಸ್ಥೆಗೆ ೧೯೩೪ರಿಂದ ಸಂಕುಚಿತ ಸ್ವರೂಪವುಂಟಾಗಿ ಟ್ರೇನಿಂಗಸ್ಕೂಲಾಗಿತ್ತು. ಈಗ ಸರಕಾರದವರು ಈ ಸಂಸ್ಥೆಯ ಅವಶ್ಯಕತೆಯು ಸದ್ಯಕ್ಕೆ ಇಲ್ಲವೆಂದು ತಿಳಿದು ಅದನ್ನು ತಾತ್ಪೂರ್ತಿಕವಾಗಿ ನಿಲ್ಲಿಸಬೇಕೆಂದು ನಿರ್ಣಯಿಸಿದ್ದಾರೆ. ಹೀಗೆ ೭೬ ವರ್ಷ ಬದುಕಿ ಕರ್ನಾಟಕದಲ್ಲಿ ವಿದ್ಯಾದಾನಕ್ಕೆ ಉತ್ಪತ್ತಿಸ್ಥಾನವೆನಿಸಿದ ಮಹತ್ವದ ಸಂಸ್ಥೆಯನ್ನು ನಿಲ್ಲಿಸಿದ್ದರಿಂದ ಪ್ರತಿಯೊಬ್ಬ ಕನ್ನಡಿಗನಿಗೂ ತನ್ನ ಮನೆತನದ ಹಿರಿಯನು ತೀರಿಕೊಂಡರೆ ಎಷ್ಟು ದುಃಖವಾಗಬೇಕೋ ಅಷ್ಟು ದುಃಖವಾಗಿದೆಯೆಂಬುದು ನಿಃಸಂದೇಹವಾಗಿದೆ. ಈ ಪ್ರಕಾರದ ಶೋಕಮಯವಾದ ಲೇಖವನ್ನು ಬರೆಯುವ ಪ್ರಸಂಗವು ಬಂದಬಕ್ಕಾಗಿ ನಾವು ಎಷ್ಟು ಮಿಡುಕಿದರೂ ತೀರದು. ಟ್ರೇನಿಂಗ ಸ್ಕೂಲನ್ನು ತಾತ್ಪೂರ್ತಿಕವಾಗಿ ನಿಲ್ಲಿಸಿದ್ದರೂ ಇದರ ಉಪಸಂಸ್ಥೆಯಾದ ಪ್ರ್ಯಾಕ್ಟಿಸಿಂಗಸ್ಕೂಲನ್ನು ಮಾತ್ರ ಮೊದಲಿನಂತೆಯೇ ಇಡಬೇಕೆಂದು ನಿಶ್ಚಯವಾಗಿದೆ. ಕರ್ನಾಟಕದ ಮುಂದಾಳುಗಳು [illegible] ಈ ಸಂಸ್ಥೆಯನ್ನು ಪುನರುಜ್ಜೀವನಗೊಳಿ

೨ ಶಾಲಾಪತ್ರಕ.

ಸುವರೆಂದು ನಂಬಿದ್ದೇವೆ. ಈ ಸಂಬಂಧದಿಂದ ಮಿ. ಜೋಗ ಬಂಡೋಪಂತರವರು ಜುಲೈ ೧೮ನೇ ತಾರೀಖಿಗೆ ನೆರೆಯುವ ಕೌನ್ಸಿಲಿನಲ್ಲಿ ಒಂದು ಠರಾವು ತರತಕ್ಕವರಿದ್ದಾರೆಂದು ತಿಳಿಯುತ್ತದೆ. ಅದಕ್ಕೆ ಬಹುಮತವು ದೊರೆತು ಟ್ರೇ. ಕಾಲೇಜವು ಮೊದಲಿನಂತೆ ನಡೆಯಲೆಂದು ಹಾರೈಸುತ್ತೇವೆ.

ಹೀಗೆ ಟ್ರೇನಿಂಗ್ ಸ್ಕೂಲು ಮುಚ್ಚಿ ಹೋಗಿದ್ದು, ಅದು ಯಜಮಾನನ ಸಾವಿನಂತೆ ಭಾಸವಾಗಿದ್ದು ಅತಿಶಯೋಕ್ತಿ ಅಲ್ಲ. ಯಾವ ದಿನಾಂಕದಿಂದ ಮುಚ್ಚಲ್ಪಟ್ಟಿತು ಎಂಬುದು ಇಲ್ಲಿ ಸ್ಪಷ್ಟವಾಗಿಲ್ಲ. ಆದರೂ ೧೯೨೪ ಎಪ್ರೀಲ್‌ನಿಂದ ಟ್ರೇನಿಂಗ ಕಾಲೇಜಿಗೆ ಸಂಕುಚಿತ ಸ್ವರೂಪ ಉಂಟಾಗಿ ಟ್ರೇನಿಂಗ್ ಸ್ಕೂಲಾಗಿತ್ತು ಎಂಬ ವಿಚಾರವೇ ಮನೋವೇದಕವಾಗಿರುವಾಗ, ಈ ನಿರ್ಧಾರ ಬರಸಿಡಿಲಿನಂತೆ ಬಂದೆರಗಿದೆ. ಶಿಕ್ಷಣಾವಶ್ಯಕತೆ ಅತೀಯಾಗಿದ್ದ ಆ ಕಾಲದಲ್ಲಿ ಹೀಗೆ ಕನ್ನಡ ನಾಡಿನ ಹೆಮ್ಮೆ, ಆಳುವ ಸರಕಾರಕ್ಕೇನು ಗೊತ್ತು? ಮುಖ್ಯವಾಗಿ ಇದರ ಉಳಿಕೆ ಆಗಿನ ಆಡಳಿತ ಸರಕಾರದ

ಹೆಗ್ಗುರಿಯಾಗಲಿಲ್ಲ. ಅಲ್ಲಿ ವ್ಯವಹಾರಿಕತೆ ಮತ್ತು ಅವಶ್ಯಕತೆಗಳು ಮುಖ್ಯವಾಗಿದ್ದವು. ಅದಕ್ಕಿಂತ ಹೆಚ್ಚಾಗಿ ನಿರ್ಣಾಯಕರು ಬ್ರಿಟಿಷರಾದ್ದರಿಂದ ಸ್ಥಳಿಯರು ಘಟನಾನಂತರದ ಆಗುಹೋಗುಗಳನ್ನು ಮಾತ್ರ ಪರಾಮರ್ಶಿಸುವ ಅನಿವಾರ್ಯ ಪರಿಸ್ಥಿತಿ ಇದಾಗಿತ್ತು. ಈ ಕಾಲೇಜು ಆರಂಭವಾದ ಹಲವು ವರ್ಷಗಳ ನಂತರದಿಂದ ಇದು ಅಳಿದು ಹೋಗುವ ವಿಪತ್ತುಗಳು ಮೇಲಿಂದ ಮೇಲೆ ಬಂದೊದಗಿವೆ. ಅಧಿಕಾರಿ ವರ್ಗದವರಾದರೂ ಈ ಸಂಸ್ಥೆ ನೆಲೆಯೂರಿ, ಗಟ್ಟಿನೆಲೆಯತ್ತ ಕೊಂಡೊಯ್ಯುವಲ್ಲಿ ಪರದಾಡಿದ್ದು, ಪ್ರಸ್ತುತ ಅದೇ ಅಧಿಕಾರಿಗಳು ವಿಷಾದ ವ್ಯಕ್ತಪಡಿಸುತ್ತಲೇ, ಸ್ಥಾನಬಲದ ನಿರ್ವಹಣೆಗಾಗಿ ಮತ್ತು ಹಿರಿಯ ಸಂಸ್ಥೆಯನ್ನು ಉಳಿಸುವಿಕೆಗಾಗಿ ಹೋರಾಡಿದ್ದಂತು ಹೌದು. ಯಾರನ್ನೂ ಕೇಳದೆ ಸರಕಾರ ತನ್ನಷ್ಟಕ್ಕೆ ನಿರ್ಣಯ ತೆಗೆದುಕೊಂಡು, ನಿಲ್ಲಿಸಿ ಬಿಟ್ಟಿದೆ. ನಮ್ಮ ಕನ್ನಡ ಕಲಿಗಳು, ಕಾಲೇಜಿನ ಆವರಣದಲ್ಲಿಯೇ ಜೀವನದ ಬಹುಭಾಗ ಮತ್ತು ಮುಖ್ಯವಾದ ಭಾಗವನ್ನು ಕಳೆದವರು ಸುಮ್ಮನಿದ್ದಾರೆಯೇ? ಇದನ್ನು ವಿರೋಧಿಸಿ ಸಿ.ಐ.ಇ.(?) ಆಗಿದ್ದ ಶ್ರೀ ರೊದ್ದರಾಯರು ಗವರ್ನರರಿಗೆ ಸುದೀರ್ಘ ಪತ್ರ ಬರೆಯುತ್ತಾರೆ ಮತ್ತು ನೀತಿ ನಿರೂಪಣೆಯಲ್ಲಾದ ದೋಷ ಸರಿಪಡಿಸುವ ಕುರಿತು ಚಿಂತನ ಮಂಥನ ಮಾಡಲು ಅಗ್ರಹಿಸುತ್ತಾರೆ. ಅದಕ್ಕೆ ಸರಕಾರದವರು ನೀಡಿದ ಪ್ರತಿಕ್ರಿಯೆಗಳ ಕುರಿತು ಕನ್ನಡ ಶಾಲಾ ಪತ್ರಕವು ತನ್ನ ಖೇದದೊಂದಿಗೆ ೧೯೨೭ ಜೂನ/ಜುಲೈ ಸಂ ೬೪, ಸಂ ೩-೪, ಪುಟ ೧ ರಿಂದ ೮ ರಲ್ಲಿ ಪ್ರಕಟಿಸಿದೆ.*[೮] ಈ ವಿಷಯವನ್ನು ಶಾಸನಸಭೆಯಲ್ಲಿ, **ಮಿ. ಎಸ್. ಎ. ಸರದೇಸಾಯಿ,** ಎಮ್.ಎಲ್.ಸಿ. (ಬಿಜಾಪೂರ ಜಿಲ್ಲೆ) ಇವರು ಪ್ರಶ್ನಿಸುತ್ತಾರೆ. ಮುಂಬಯಿಯ ಮಹಾರಾಷ್ಟ್ರ ಪತ್ರಾಗಾರದಲ್ಲಿ ದೊರೆತ ದಾಖಲೆಯನ್ವಯ:-

Edu Department L.C 615/1923-30, ಈ ಕಡತದಪುಟ ಸಂಖ್ಯೆ ೪೯ ರಲ್ಲಿ

No.SAS/1Q LEGISLATIVE COUNCIL OFFICE

Council Hall, Poona, 21st June1927.

L.C. 615

21 JUNE 1927

Serial No. 4271 ಈ ಸಂಖ್ಯೆಯ ಪತ್ರವು- N.J.WADIA, Esquire, I.C.S,

---

* ೮ ನೋಡಿ ಅನುಬಂಧ ೪

Secretary to the Bombay Legislative Council ಇವರಿಂದ The Secretary to Serial No. 4271 ಈ ಸಂಖ್ಯೆಯ ಪತ್ರವು– N.J.WADIA, Esquire, I.C.S,Secretary to the Bombay Legislative Council ಇವರಿಂದ The Secretary to Government, Educational Department, Bombay ಇವರಿಗೆ ಬರೆಯಲ್ಪಟ್ಟಿದೆ.

ಮಿ. ಎಸ್. ಎ. ಸರದೇಸಾಯಿ, ಎಮ್.ಎಲ್.ಸಿ. (ಬಿಜಾಪೂರ ಜಿಲ್ಲೆ) ಕೇಳಿದ ಪ್ರಶ್ನೆಯನ್ನು ರವಾನಿಸಿದ್ದಾರೆ.

ಅ) ಧಾರವಾಡದ ತರಬೇತಿ ಕಾಲೇಜ್‌ನ್ನು ಏಕೆ ಮುಚ್ಚಲು ಉದ್ದೇಶಿಸಲಾಗಿದೆ?

ಆ) ಇದೇ ತತ್ವವಿಧಿಗಳನ್ನೇ ಗುಜರಾತ ಮತ್ತು ಮಹಾರಾಷ್ಟ್ರದಲ್ಲಿರುವ ಟ್ರೇನಿಂಗ ಕಾಲೇಜುಗಳಿಗೂ ಅನ್ವಯಿಸಲಾಗಿದೆಯೇ?

ಇ) ಕರ್ನಾಟಕದ ಸಾರ್ವಜನಿಕರಿಂದ ಕಾಲೇಜು ಮುಚ್ಚದಿರಲು ಯಾವುದಾದರೂ ಸೂಚನೆಗಳು ಬಂದಿವೆಯೇ?

ಈ) ಹೌದಾದರೆ ಸರಕಾರ ಏನು ಕ್ರಮ ಕೈಗೊಂಡಿದೆ?

ಉ) ಬಿಜಾಪೂರ, ಧಾರವಾಡ, ಬೆಳಗಾವಿ ಮತ್ತು ಕಾರವಾರ ಹಾಗೂ ಮಹಾರಾಷ್ಟ್ರ ಮತ್ತು ಗುಜರಾತಗಳಲ್ಲಿರುವ ಎಲ್ಲ ಜಿಲ್ಲೆಗಳಲ್ಲಿರುವ ಪ್ರಾಥಮಿಕ ಶಿಕ್ಷಕರ ಮತ್ತು ಪ್ರಾಥಮಿಕ ಶಾಲೆಗಳ ಸಂಖ್ಯೆ ಏಷ್ಟು?

ಇದಕ್ಕೆ ಕಡತದ ಪುಟ ಸಂಖ್ಯೆ ೫೩, ೫೭. ಮತ್ತು ೫೯ ರಲ್ಲಿ ಉತ್ತರವಿದೆ:

Director of Public Instruction, Poona. ಇವರಿಂದ

The Secretary to Government,

Educational Department , Bombay. ಇವರಿಗೆ

L.C. 615, 29 NOV 1927, Serial No. 8479 ಈ ಪತ್ರ ಸಂಖ್ಯೆಯಂತೆ ಉತ್ತರ ನೀಡಲಾಗಿದೆ:

ಅ) ಮತ್ತು ಆ) ಸರಕಾರದ ಗಮನಕ್ಕೆ ತರಲಾಗಿದೆ. ಇ) ಹೌದು

ಈ) ಕೆಲವು ಆಯ್ದ ತರಬೇತಿ ಸಂಸ್ಥೆಗಳಿಂದ ತರಬೇತಿ ಪಡೆದು ಹೊರಹೋಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನಾದರಿಸಿ ಸರಕಾರವು ತರಬೇತಿ ಸಂಸ್ಥೆಯನ್ನು ಮುಚ್ಚಲು ನೀಡಿದ ತಾತ್ಪೂರ್ತಿಕ ಆದೇಶಕ್ಕೆ ತಡೆ ನೀಡಿದೆ. ಉ)→

Information as it stood on 31st March, 1927.

	Name of the District.	Number of trained teachers.	Number of Primary schools (All kinds).
	S. D.		
	Dharwar	1309	836
	Belgaum	834	740
	Bijapur	809	635
	Kanara	499	338
	B. D.		
Maharashtra	Bombay Suburban District	67	87
	Thana	368	360
	Kolaba	394	341
	Ratnagiri	644	743
	Nasik	691	528
	C. D.		
	Poona	851	826
	Satara	899	1044
	Sholapur	627	596
	Ahmednagar	598	826
	East Khandesh	1166	844
	West Khandesh	488	382
	N. D.		
Gujarat	Ahmedabad	1077	546
	Kaira	984	632
	Panch Mahals	340	238
	Broach	565	315
	Surat	869	566

ಮೂರು ರಾಜ್ಯಗಳ ಮಾಹಿತಿಯನ್ನು ತರಿಸಲಾಗಿದೆ. ಈ ಮಾಹಿತಿ ಆಧಾರದಿಂದ ಉತ್ತರ ಕರ್ನಾಟಕದಲ್ಲಿ ನಾಲ್ಕೂ ಜಿಲ್ಲೆಗಳ ನಡುವೆ ಇದ್ದದ್ದು ಇದೊಂದೇ ತರಬೇತಿ ವಿದ್ಯಾಲಯ ಎಂಬುದು ಸಾಬಿತಾಗುತ್ತದೆ. ಈ ಕಾರಣದಿಂದಾಗಿಯೇ ೬ ಜುಲೈ ೧೯೨೭ಕ್ಕೆ ಮಿ. ಎಸ್. ಎ. **ಸರದೇಸಾಯಿ,** ಎಮ್.ಎಲ್.ಸಿ. (ಬಿಜಾಪೂರ ಜಿಲ್ಲೆ) ಇವರ ಕಾಳಜಿಯಿಂದಾಗಿ, ಮಿ. **ವಿ.ಎನ್.ಜೋಗ,** ಎಮ್.ಎಲ್.ಸಿ. ಇವರು ಈ ಮುಂದಿನಂತೆ ಠರಾವು ಮಂಡಿಸಿ ಕಾಲೇಜನ್ನು ಉಳಿಸುತ್ತಾರೆ:

ಈ ಕಡತದ ಪುಟ ಸಂಖ್ಯೆ ೩೯ ರಲ್ಲಿ ಹೀಗೆ ಆಗಾಗ ಬೀಸುವ ದೊನ್ನೆಯನ್ನು ತಪ್ಪಿಸಿಕೊಂಡು ಈವರೆಗೂ ಬದುಕಿ ಬಂದಿರುವಂಥದ್ದು ಈ ಕಾಲೇಜು.

C.C.P.—Hb 8—1500—6-27—E2

No. VNJ/5R

37

LEGISLATIVE COUNCIL OFFICE.

Council Hall, Poona, 6th July 1927.

From

N. J. WADIA, Esquire, I.C.S.,
Secretary to the Bombay Legislative Council ;

To

The Secretary to Government,
Educational *Department, Bombay.*

Sir,

I am directed to forward herewith a resolution (copy below) proposed to be moved by Mr. V. N. Jog *, M.L.C., at the next session of the Legislative Council, and to state that it has been admitted by the Honourable the President.*

I have the honour to be,
Sir,
Your most obedient servant,
N. J. WADIA,
Secretary to the Bombay Legislative Council.

Copy forwarded with compliments to V. N. Jog, Esq., *M.L.C., for information.*

2. The resolution has been admitted in the original *form.*

N. J. WADIA,
Secretary to the Bombay Legislative Council.

Resolution proposed to be moved by Mr. V. N. Jog, M.L.C.

5. This Council recommends to Government that the vernacular (Kanarese) training school at Dharwar be continued and ~~developed~~ developed into a full-fledged training college as before.

ಅಗಸ್ಟ ೧೯೨೭ರ ಪುಟ ತೆರೆಯುತ್ತಿದ್ದಂತೆಯೇ 'ಅಭಿನಂದನ' ಎಂಬ ಶೀರ್ಷಿಕೆ '**ಟ್ರೇನಿಂಗ ಕಾಲೇಜ ಮತ್ತೇ ಆರಂಭವಾಯಿತು**'.... ಎಂದು ಆರಂಭವಾಗುತ್ತದೆ. ಕನ್ನಡದ ಪಿತಾಮಹ ರೊದ್ದರಾಯರ ಭಗೀರಥ ಪ್ರಯತ್ನ ಮತ್ತು ಮಂತ್ರಿಗಳಾಗಿದ್ದ ವಿ.ಎನ್. ಜೋಗ ಅವರ ಸಂಪೂರ್ಣ ಸಹಾನುಭೂತಿ ನಾಲ್ಕೇ ತಿಂಗಳಲ್ಲಿ ಪುನಃ **ಟ್ರೇನಿಂಗ ಸ್ಕೂಲಾಗಿ ಯಾದರೂ**) ಆರಂಭವಾಗುವಂತೆ ಮಾಡುತ್ತವೆ. ಕಂಟಕ ತಪ್ಪಿಸಿಕೊಂಡು ಸಾವಿರ ವರ್ಷ ಬಾಳಿದ '**ಉತ್ತರ ಕರ್ನಾಟಕದ ಅಕ್ಷರದ ಬೇರು ಈ ತರಬೇತಿ ಸಂಸ್ಥೆ**' ಎಂಬುದಕ್ಕೆ ಇದು ಉತ್ತಮ ಉದಾಹರಣೆ. ಮತ್ತೇ ಆರಂಭವಾದುದಕ್ಕೆ ಸಂತೋಷ ಪಡಬೇಕೋ ಇಲ್ಲ ಟ್ರೇನಿಂಗ್ ಸ್ಕೂಲ್ ಆಗಿ ಸಂಕುಚಿತ ಸ್ವರೂಪದಲ್ಲೇ ಇರುವುದರಿಂದ ಖೇದ ಪಡಬೇಕೋ... ಅಂತೂ ಕರಿಕೆಯ ಬೇರಿನಂತೆ ಅದರ ಅಸ್ಮಿತೆ ಮತ್ತು ಅಸ್ತಿತ್ವ ಉಳಿಸಿಕೊಂಡದ್ದೇ ಒಂದು ಮಹತ್ತರ ಸಾಧನೆಯಾಗಿದೆ.

ಮುಂದೆ ಜೂನ ತಿಂಗಳ ಎರಡನೆಯ ವಾರದಲ್ಲಿ ವಿಜಾಪೂರ ಜಿಲ್ಲೆಗೆ ಪ್ರವಾಸಕೈಗೊಂಡು, ಬಾಗಲಕೋಟ, ಕಲಾದಗಿ, ಹೊನವಾಡ, ಕಮತಗಿ, ಇಂಡಿ, ಭತಗುಣಕಿ ಊರುಗಳಲ್ಲಿರುವ ಶಾಲೆಗಳನ್ನು ಪರಿಶೀಲಿಸಿ, ಹಳ್ಳಿಯ ಶಾಲೆಗಳ ಶಿಕ್ಷಣ ಕ್ರಮವನ್ನು ತಿಳಿದುಕೊಂಡು ಬಂದಿದ್ದಾರೆ.

ಜೂನ್ ೨೩ ರಿಂದ ೨೯ರವರೆಗೆ, ಏಳು ದಿನಗಳ ಕಾಲ ಟ್ರೇನಿಂಗ ಕಾಲೇಜಿನಲ್ಲಿ 'ಶಿಕ್ಷಣ ಸಪ್ತಾಹ' ಶಿಕ್ಷಣ ಪ್ರದರ್ಶನ ಅದ್ದೂರಿಯಾಗಿ ನಡೆದಿದೆ. ದಕ್ಷಿಣ ಭಾಗದ ಎಜ್ಯುಕೇಷನ್ ಇನ್ಸಪೆಕ್ಟರರಾದ ಮಿ.ಸದಾರಂಗಾಣಿಯವರ ಉಪಸ್ಥಿತಿಯಲ್ಲಿ, ಕಲೆಕ್ಟರರಾದ ಮಿ.ವೆಬ್ ಸಾಹೇಬರಿಂದ ಪ್ರದರ್ಶನ ಅನಾವರಣಗೊಂಡು, ಒಟ್ಟು ೬ ಕೋಣೆಗಳಲ್ಲಿ, ಭೂಗೋಲ, ಇತಿಹಾಸ, ಕೈಕೆಲಸ, ಪ್ರಕೃತಿ ವಿಮರ್ಶೆ, ವಿಜ್ಞಾನ, ಗಣಿತ ಮತ್ತು ಭಾಷೆ ವಿಷಯಗಳಿಗೆ ಸಂಬಂಧಿಸಿದ ಉಪಕರಣಗಳನ್ನು ಇರಿಸಿ, ಪ್ರಾಯೋಗಿಕ ಚಟುವಟಿಕೆಗಳ ಮೂಲಕ, ಕರ್ನಾಟಕ ಕಾಲೇಜಿನ ಪ್ರೊಫೆಸರರ ಶಾಸ್ತ್ರೀಯ ಪ್ರಯೋಗಗಳು ಇಲ್ಲಿ ಪ್ರದರ್ಶನಗೊಂಡಿವೆ. ಚಿತ್ರಕಲೆ ಮತ್ತು ಮುರಗೋಡದ ಕಸೂತಿ ಸೀರೆಗಳ ಪ್ರದರ್ಶನವೂ ಇಲ್ಲಿ ನಡೆದಿದೆ. ಹೀಗೆ ಒಂದುವಾರದವರೆಗೆ ಆಟ, ಕವಾಯತುಗಳನ್ನು ಏರ್ಪಡಿಸುವುದರೊಂದಿಗೆ ವಿಜೃಂಭಣೆಯಿಂದ ನಭೂತೋ ನಭವಿಷ್ಯತಿ ಎಂಬಂತೆ 'ಶಿಕ್ಷಣ ಸಪ್ತಾಹ' ನಡೆದಿದೆ.

೧೯೩೨ರ ಜುಲೈನಲ್ಲಿ ಸರಕಾರದ ಆಯವ್ಯಯಗಳನ್ನು ಸರಿದೂಗಿಸಲು ಕೈಕೊಳ್ಳಬೇಕಾದ ಕ್ರಮಗಳನ್ನು ಯೋಜಿಸಲು, ನಿಯಮಿಸಿದ 'ಜಿ. ಎ. ಟಾಮಸ್ ಕಮಿಟಿ'ಯು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧ ಪಟ್ಟಂತೆ ಅಧ್ಯಯನ ನಡೆಸಿ ವರದಿ ನೀಡಿತು. ಅದರನ್ವಯ 'ಪ್ರಾಥಮಿಕ ಶಿಕ್ಷಣದ ಖರ್ಚು ಹಿಂದೂಸ್ತಾನದ ಎಲ್ಲ ಪ್ರಾಂತಗಳಿಗಿಂತ ಮುಂಬಯಿ ಇಲಾಖೆಯಲ್ಲೇ ಹೆಚ್ಚಾಗಿದೆಯೆಂಬುದನ್ನು ಯಾರೂ ಮರೆಯಲಾಗದು... ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯನ್ನು ಕುಂದಿಸದೆ ಅದಕ್ಕಾಗುವ ಖರ್ಚನ್ನು ಕಡಿಮೆ ಮಾಡಲೇಬೇಕಾಗಿರುವುದು. ಸರ್ಕಾರದ ಆರ್ಥಿಕ ಸ್ಥಿತಿ ಸುಧಾರಿಸಲು ಈ ಖರ್ಚು ಕಡಿಮೆಯಾಗುವುದು ಅವಶ್ಯವಾದದ್ದು. ಸರಕಾರದ ಖರ್ಚಿಗೂ ಉತ್ಪನ್ನಕ್ಕೂ ಮೀರಿದ ಅಂತರವಿರುವುದು. ಇದನ್ನ ಬಾಯಿಗೂಡಿಸಿ ಜನಸಾಮಾನ್ಯರ ಹಿತವನ್ನು ಸಾಧಿಸಲಿಕ್ಕಾಗಿ ಪ್ರತಿಯೊಂದು ಖಾತೆಯವರೂ ತಮ್ಮ ಪಾಲಿಗೆ ಬರುವ ಕಷ್ಟವನ್ನು ಸಹಿಸಲಿಕ್ಕೆ ಸಿದ್ಧರಾಗಬೇಕಿದೆ...'ಎಂದೆಲ್ಲ ಮುಂತಾಗಿ ಸವಿವರ ವರದಿ ನೀಡಿ, ಶಿಕ್ಷಕರ ವೇತನವನ್ನು ಒಂದು ಹಂತಕ್ಕೆ, ಅಲ್ಪ ಪ್ರಮಾಣದಲ್ಲಿ ಕಡಿಮೆ ಮಾಡಲು, ಇದರಿಂದ ಸರಕಾರಕ್ಕೆ ಪ್ರತಿವರ್ಷ ೨೮ ಲಕ್ಷ ರೂ. ಉಳಿತಾಯವಾಗುವುದಾಗಿ ವರದಿ ನೀಡಿತು. ಭಾರತದ ಉಳಿದೆಲ್ಲ ಪ್ರಾಂತಗಳಲ್ಲಿ ಕರ್ನಾಟಕಕ್ಕಿಂತ ಕಡಿಮೆ ವೇತನವು ಇದ್ದು, ಕರ್ನಾಟಕ ಸರಕಾರವು ನಷ್ಟದಲ್ಲಿರುವ ಕಾರಣ ಈ ಕ್ರಮವನ್ನು ಕೈಗೊಳ್ಳಲಾಗುವುದು ಎಂಬ ವರದಿಯನ್ನು ಟಾಮಸ್ ಕಮಿಟಿಯು ನೀಡಿತು. ಈ ರೀತಿ ವೇತನ ಮತ್ತು ಶಿಕ್ಷಣ ಸಂಸ್ಥೆಗಳನ್ನು ಕಡಿಮೆಗೊಳಿಸುವ ಅಭಿಯಾನ ದೇಶಾದ್ಯಂತ ನಡೆಯಿತು. ಆಗ ಮತ್ತೊಮ್ಮೆ ಟ್ರೇನಿಂಗ ಸ್ಕೂಲಿಗೆ ದುರ್ದೆಸೆ ಒದಗಿ ಬರುತ್ತದೆ. ಇದೇ ಸಂದರ್ಭದಲ್ಲಿ ಮುಂಬಯಿ ಪ್ರಾಂತ್ಯದ ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀ ದಿ.ಬ.ಎಸ್.ಟಿ.ಕಂಬಳಿ ಯವರು ಕರ್ನಾಟಕದ ಶಿಕ್ಷಣ ಮಂತ್ರಿಗಳಾಗಿ ಆಯ್ಕೆಯಾಗುತ್ತಾರೆ. ಆಗ ತಮಗೆ ಮತ್ತು ಶಿಕ್ಷಣ ಇಲಾಖೆಗೆ ಬಂದೊದಗಿದ ಆಪತ್ತನ್ನು

ಜನ, ಮಾನ್ಯ ಮಂತ್ರಿಗಳ ಮುಂದೆ ತೋಡಿಕೊಳ್ಳುತ್ತಾರೆ. ಅಹವಾಲನ್ನು ಬಹಳ ತಾಳ್ಮೆಯಿಂದ ಕೇಳಿ, ತಾನದಕ್ಕೆ ತಕ್ಕ ಕ್ರಮ ಕೈಗೊಳ್ಳುವ ಭರವಸೆ ನೀಡುತ್ತಾರೆ.

ಮೊಂಟೆಗ್ಯೂ ಚೆಮ್ಸಫರ್ಡ ಹೊಸಸುಧಾರಣೆಯು ಅಮಲಿನಲ್ಲಿ ಬಂದು ಬಹು ಕಾಲವಾಗಿ ಮಿಕ್ಕ ಪ್ರಾಂತಗಳ ಅನೇಕರು ಬಹುಕಾಲದಿಂದ ಮಂತ್ರಿಪದಾರೂಢರಾಗಿದ್ದರೂ ಕರ್ನಾಟಕ ಮಾತೆಯ ಪುತ್ರರಿಗೆ ಮಾತ್ರ ಅದು ಒದಗಿಬಂದಿರಲಿಲ್ಲ. ಈಗ ಆ ಯೋಗವು ಬಂದಿದ್ದು ಅದರಲ್ಲಿಯೂ ದಿ. ಬ. ಕಂಬಳಿಯವರಂಥ ಕರ್ತೃತ್ವಶಾಲಿಗಳಾದ ಮಹನೀಯರು ಆ ಪದವಿಯ ಮೇಲೆ ಒಪ್ಪುತ್ತಿರುವದನ್ನು ಕೇಳಿ ಕನ್ನಡಿಗರೆಲ್ಲರೂ ಅತ್ಯಂತ ಅಭಿಮಾನ ತಳೆದಿರುವರೆಂಬದನ್ನು ನಮ್ಮ ವಾಚಕರು ತಿಳಿದಿರುವರು. ಈ ವರ್ಷ ಆ ವೈಭವ ಶಾಲಿಗಳಾದ ಮಹನೀಯರನ್ನೇ ಪ್ರತ್ಯಕ್ಷವಾಗಿ ಕಂಡು ಆನಂದಪಡುವ ಸುಯೋಗವು ಒದಗಿ ಬಂದಿರುವಾಗ ಕನ್ನಡಿಗರೆಲ್ಲರೂ ತ್ರಿಕರಣಪೂರ್ವಕವಾಗಿ ಸ್ವಾಗತವಿತ್ತು ಸನ್ಮಾನಿಸಿ ಆನಂದಮಗ್ನರಾಗಿದ್ದರೆಂದು ಹೇಳಿದರೆ ಆಶ್ಚರ್ಯವೇಕಾಗಬೇಕು !

ಈ ಮಹನೀಯರು ವಿಜಾಪೂರ ಧಾರವಾಡ ಜಿಲ್ಲೆಗಳೊಳಗಿನ ಬಹುತೇಕ ಎಲ್ಲ ದೊಡ್ಡ ಪಟ್ಟಣಗಳಿಗೆ ಹೋಗಿ ತಮ್ಮ ದರ್ಶನಕೊಟ್ಟರು. ಆ ಎಲ್ಲ ನಗರ ಸಭೆಯವರು ಅವರನ್ನು ಅತ್ಯಂತ ಆದರದಿಂದ ಸ್ವಾಗತಮಾಡಿ ಮಾನಪತ್ರಗಳನ್ನು ಅರ್ಪಿಸಿ ಮನ್ನಿಸಿದರು. ಧಾರವಾಡ, ವಿಜಾಪೂರ, ಬಾಗಲಕೋಟೆ, ಗದಗ, ಗುಳೇದಗುಡ್ಡ ಮುಂತಾದ ನಗರ ಸಭೆಗಳವರೂ ಬ್ಯಾಂಕುಗಳೂ ವಿದ್ಯಾವಿಷಯಕ ಸಂಸ್ಥೆಗಳೇ ಮೊದಲಾದ ಸಾರ್ವಜನಿಕ ಸಂಸ್ಥೆಗಳವರೂ ಮಂತ್ರಿವರ್ಯರಿಗೆ ಮಾನಪತ್ರಗಳನ್ನು ಅರ್ಪಿಸಿ ಅವರ ಗುಣ ಗೌರವಗಳನ್ನು ಜನತೆಯ ಮುಂದಿಟ್ಟರುವಂತೆಯೇ ತಮ್ಮ ತಮ್ಮ ಅಡಚಣೆಗಳನ್ನೂ ಬಹು ಆತುರತೆಯಿಂದ ಅವರ ಮುಂದಿಟ್ಟರು.

ನಮ್ಮ ಕರ್ನಾಟಕವು ಮುಂಬಯಿ ಇಲಾಖೆಯ ಮಿಕ್ಕ ಪ್ರಾಂತಗಳಿಗಿಂತಲೂ ಶಿಕ್ಷಣ, ಒಕ್ಕಲತನ, ಉದ್ಯೋಗ ವ್ಯವಸಾಯ ಮುಂತಾದವುಗಳಲ್ಲಿ ತೀರ ಹಿಂದುಳಿದಿರುವದರಿಂದ ಶಿಕ್ಷಣ ಒಕ್ಕಲತನ ಮುಂತಾದ ಮಹತ್ವದ ದೇಶ ಸುಧಾರಣೆಯ ತಳಹದಿಯಾಗಿರುವ ಖಾತೆಗಳ ಸರ್ವಾಧಿಕಾರವನ್ನು ಪಡೆದ ಮಂತ್ರಿಪದದಲ್ಲಿ ಒಪ್ಪುತ್ತಿರುವ ತಮ್ಮಂಥ ಮಹನೀಯರಾದ ಕರ್ನಾಟಕಮಾತೆಯ ಪ್ರೇಮಪುತ್ರರು ನಮ್ಮನ್ನು ಈ ವಿಷಯಗಳಲ್ಲಿ ಮುಂದುವರಿಸಲು ವಿಶ್ವಪ್ರಯತ್ನಪಡಬೇಕೆಂದು ಜನರು ಬಹು ಆಕಾಂಕ್ಷೆಯಿಂದ ಕೇಳಿಕೊಂಡರು. ಕರ್ನಾಟಕ ಕಾಲೇಜಿನಲ್ಲಿ (M. Sc.) ಕ್ಲಾಸನ್ನು ಪ್ರಾರಂಭಿಸುವದು, ಟ್ರೇನಿಂಗ ಕಾಲೇಜದ ಪುನರುದ್ಧಾರ, ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹನೆ

ಶಿಕ್ಷಣ ಮಂತ್ರಿಗಳಾದ ದಿ. ಬ. ಕಂಬಳಿಯವರು ಗಳ

ಬೆಳಗಾವಿಯ ಕಾಲೇಜದ ಸ್ಥಾಪನೆ ಮುಂತಾದ ಮಹತ್ವದ ವಿಷಯಗಳನ್ನು ಮಂತ್ರಿವರ್ಯರ ಮುಂದಿಟ್ಟು ಅವರ ಅಭಯದಾನವನ್ನು ಕೋರಿದರು. ಮಂತ್ರಿವರ್ಯರೂ ಕೂಡ ಆ ಎಲ್ಲ ವಿಚಾರಗಳಿಗೆ ಸಮರ್ಪಕವಾದ ಸಹಾಯ ಸೂಚನೆಗಳನ್ನು ಜನರ ಮುಂದಿಟ್ಟರು. ಟ್ರೇನಿಂಗಕಾಲೇಜದ ಪುನರುದ್ಧಾರದ ವಿಷಯದಲ್ಲಿಯೂ ಸಂಪೂರ್ಣ ಸಹಾನುಭೂತಿಪೂರ್ಣವಾಗಿ ಮಾತಾಡಿ ಅಭಯವನ್ನು ನೀಡಿದರು. ಸರಕಾರವು ಅಪರಿಹಾರ್ಯವಾಗುವ ಹಣದ ಅಡಚಣೆಯಲ್ಲಿರುವದರಿಂದ ಟ್ರೇನಿಂಗ ಕಾಲೇಜನ್ನು ಒಮ್ಮೆಲೆ ಮೊದಲಿನಷ್ಟು ದೊಡ್ಡ ಪ್ರಮಾಣದಿಂದ ನಡೆಯಿಸಲು ಸಾಧ್ಯವಲ್ಲದಿದ್ದರೂ ಟ್ರೇನಿಂಗ ಸ್ಕೂಲು ಎಂಬ ಹೆಸರು ಅಳಿಸಿ ಅದು ಕಾಲೇಜವೆಂಬ ಹೆಸರಿಗೆ ತಕ್ಕದ್ದಾಗುವಂತೆ ಮಾಡಲು ತಮ್ಮಿಂದಾದಷ್ಟು ಪ್ರಯತ್ನಮಾಡುವೆನೆಂದು ಉತ್ತರಕೊಟ್ಟಿರುವರಂತೆ.

ಇದೇಮೇರೆಗೆ ಪ್ರಾಥಮಿಕ ಶಿಕ್ಷಣದ ಶಿಷ್ಟಮಂಡಲವೊಂದು ಮಂತ್ರಿವರ್ಯರ ಮುಂದೆ ಹೋಗಿ ತಮ್ಮ ಸುಖದುಃಖಗಳನ್ನು ಹೇಳಿಕೊಂಡಾಗ ಟ್ರೇನಿಂಗಕಾಲೇಜದ ಉದ್ಧಾರದ ವಿಷಯದಲ್ಲಿ ಸಂಪೂರ್ಣ ಸಹಾನುಭೂತಿಯನ್ನು ತೋರಿ ಶಿಕ್ಷಕರ ಪಗಾರವನ್ನು ಕಡಿಮೆಮಾಡುವ ವಿಷಯದಲ್ಲಿ ಥಾಮಸ್ ಕಮಿಟಿಯವರ ಶಿಫಾರಸಿನಂತೆ ಶಿಕ್ಷಕರ ಪಗಾರದ ದರವು ಕಡಿಮೆಯಾಗದಂತೆ ಮಾಡುವದರಲ್ಲಿಯೂ ತಮ್ಮಿಂದಾಗುವ ಪ್ರಯತ್ನ ಮಾಡುವೆನೆಂದು ನಿರೂಪಿಸಿದರಂತೆ. ಸಾಲೆ ಪರಾಂಜಪೆ ಸ್ಕೇಲಿನಂತೆ ತಮಗೆ ಪಗಾರ ದೊರೆಯಬೇಕೆಂದು ಶಿಕ್ಷಕರು ಕೇಳಿಕೊಂಡದ್ದಕ್ಕೆ ಅಂಥ ಸುಕಾಲವು ಒದಗಿ ಬರಲೆಂದು ಭಗವಂತನನ್ನು ಪ್ರಾರ್ಥಿಸಿಕೊಳ್ಳೋಣವೆಂದರಂತೆ. ಸರಕಾರಕ್ಕೆ ಹಣದ ಅನುಕೂಲತೆಯಿದ್ದಾಗ ಮಿಕ್ಕ ಖಾತೆಗಳ ನೌಕರರ ಪಗಾರದ ಮಾನವನ್ನು ಹೆಚ್ಚಿಸಿದಂತೆ ಪ್ರಾಥಮಿಕ ಶಿಕ್ಷಕರ ಪಗಾರ ಹೆಚ್ಚಿಸದೆ ಇರುವದರಿಂದ (ಶಾಲಾಖಾತೆಯ ಪ್ರಾರಂಭದಿಂದಲೂ ೩ನೆ ವರ್ಷದ ಟ್ರೇಂಡರ ಕೊನೆಯ ಪಗಾರವು ೬೦ ರೂ. ಇರುವದು) ಈಗ ಕಡಿಮೆ ಮಾಡುವದು ಅನ್ಯಾಯವಾಗುವದೆಂಬ ಶಿಕ್ಷಕರ ದೂರನ್ನು ಸಹಾನುಭೂತಿಯಿಂದ ಕೇಳಿಕೊಂಡರಂತೆ.

ಒಟ್ಟಿಗೆ ದಿವಾನಬಹಾದ್ದೂರ ಕಂಬಳಿಯವರ ಆಗಮನದಿಂದ ಅಖಿಲ ಕರ್ನಾಟಕಕ್ಕೇ ಒಂದು ಸುಯೋಗವುಂಟಾಗಿ ಕನ್ನಡಿಗರೆಲ್ಲರೂ ಆನಂದಿತರಾಗಿ ಒಮ್ಮನಸಿನಿಂದ ಅವರನ್ನು ಹಾಡಿ ಹರಿಸಿದರೆಂಬದು ಅತ್ಯಂತ ಆನಂದದ ವಿಷಯವು.

೬೩ (ಕನ್ನಡ ಪ್ರಾಥಮಿಕ ಶಿಕ್ಷಣ ಫೆಬ್ರುವರಿ ೧೯೩೩,ಸಂ-೬೯, ಸಂ ೧೧, ಪುಟ ೧)

ಹೀಗೆ 'ತರಬೇತಿ ಕಾಲೇಜು' ಕೈಯಿಂದ ತಪ್ಪಿ ಹೋಗುವ ಬದಲು (೧೯೨೪ರಿಂದ) 'ತರಬೇತಿ ಶಾಲೆ'ಯಾಗಿಯೇ ಮುನ್ನಡೆದಿತ್ತು. (ಜನೇವರಿ ೧೯೨೪ರಿಂದ ೧೮೩೯ ಸಪ್ಟಂಬರವರೆಗೂ 'ಕನ್ನಡ ಪ್ರಾಥಮಿಕ ಶಿಕ್ಷಣ' ಪತ್ರಿಕೆಗಳ 'ಸಂಪಾದಕ'ರ ಹೆಸರಿರುವಲ್ಲಿ 'ಹೆಡ್ ಮಾಸ್ತರ, ಟ್ರೇನಿಂಗ್ ಸ್ಕೂಲ್' ಎಂದೇ ಉಲ್ಲೇಖಿಸಲಾಗಿದೆ. ಅಲ್ಲದೇ ಜನೇವರಿ ೧೯೨೪ರಿಂದ ಟ್ರೇನಿಂಗ್ ಕಾಲೇಜಿನ ಹೆಸರಿನಿಂದ ಯಾವ ಪ್ರಕಟಣೆಗಳಾಗಲಿ ಅಥವಾ ತಿಳುವಳಿಕೆಗಳಾಗಲಿ ಇಲ್ಲವೇ ಇಲ್ಲ.) ಪ್ರಯತ್ನ ಮತ್ತು ಇಚ್ಛಾಶಕ್ತಿಯಿಂದ ಟ್ರೇನಿಂಗ ಕಾಲೇಜ್‌ನ ತನ್ನ ಅಸ್ತಿತ್ವ ಉಳಿಸಿಕೊಂಡರೂ, ಮೊದಲಿನಂತೆ ೨ ಮತ್ತು ೩ನೆಯ ತರಗತಿಗಳನ್ನೂ ಮತ್ತೇ ಆರಂಭಿಸುವುದಕ್ಕೆ ಹೋರಾಟ ನಿರಂತರವಾಯಿತು.

ಮತ್ತೇ ಇಂಥ 'ತರಬೇತಿ ಶಾಲೆ'ಯ ಪುನರುದ್ಧಾರ ಮಾಡಿ ಮತ್ತೇ 'ಟ್ರೇನಿಂಗ ಕಾಲೇಜ'ನ್ನಾಗಿ ಮಾಡುವುದು ಮುಂತಾದ ನಾಲ್ಕು ವಿಷಯಗಳನ್ನು ಕಂಬಳಿಯವರು ಶಿಕ್ಷಣಮಂತ್ರಿಗಳಾದ ಮೇಲೆ, ಅವರ ಮುಂದೇ ಪ್ರಸ್ತಾಪಿಸಲಾಗಿದೆ. ಕಂಬಳಿಯವರ ಎಡೆಬಿಡದ ತ್ರಿವಿಕ್ರಮನಂಥ ಅನವರತ ಪ್ರಯತ್ನದಿಂದಾಗಿ ೧೯೩೪ ಜೂನ್ ನಲ್ಲಿ ಟ್ರೇನಿಂಗ ಕಾಲೇಜಿನ ೨

ಮತ್ತು ೩ನೆಯ ವರ್ಷದ ತರಗತಿಗಳು ಅವರಿಂದಲೇ ಉದ್ಘಾಟಣೆಗೊಂಡು ಪುನರಾರಂಭಗೊಂಡವು. 'ಶಿಕ್ಷಣ ಮಂತ್ರಿಗಳಾದ ಕಂಬಳಿಯವರು ೧೯೩೪ರಲ್ಲಿ ಗ್ರೀವರನ್ನು ಹೊಸ ಡಿ.ಪಿ.ಐ. ಆಗಿ ನೇಮಿಸಿದರು. ಕರ್ನಾಟಕದಲ್ಲಿ ತರಬೇತಿ ಹೊಂದಿದ ಪ್ರಾಥಮಿಕ ಶಿಕ್ಷಕರ ಪ್ರಮಾಣವೂ ಅಷ್ಟೇ ಇದ್ದರೂ ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ೨ನೆಯ ಮತ್ತು ೩ನೆಯ ವರ್ಷದ ವರ್ಗಗಳನ್ನು ಈ ಕೂಡಲೇ ತೆರೆಯಬೇಕೆಂದು ಆದೇಶಿಸಿದರು. ರಾಜ್ಯದಲ್ಲೆಲ್ಲ ೩ ವರ್ಷದ ವರ್ಗಗಳನ್ನು ಸಂಪೂರ್ಣ ನಿಲ್ಲಿಸಿರುವುದರಿಂದ ಧಾರವಾಡದಲ್ಲಿ ಮಾತ್ರ ಪುನಃ ಪ್ರಾರಂಭಿಸುವುದು ಸರಿಯಲ್ಲವೆಂದು ಗ್ರೀವರ್ ವಾದಿಸಿದರು. ಕರ್ನಾಟಕ್ಕಾಗಿರುವ ಅನ್ಯಾಯವನ್ನು ಈಗಲೇ ಸರಿಪಡಿಸಬೇಕು. ಪುಣೆ ಮತ್ತು ಅಹಮದಾಬಾದ್ ಕಾಲೇಜುಗಳು ಟ್ರೇನಿಂಗ ಕಾಲೇಜುಗಳು ೨ನೆಯ ವರ್ಗಗಳವರೆಗೆ ಮತ್ತು ಧಾರವಾಡದಲ್ಲಿ ೩ನೆಯ ವರ್ಗದವರೆಗೆ ಶಿಕ್ಷಣ ನೀಡಲಿ ಎಂದು ಕಂಬಳಿಯವರು ಆದೇಶ ನೀಡಿದರು'[೬೪] 'ತೆಗೆದುಹಾಕಲ್ಪಟ್ಟ೨ನೆಯ ಮತ್ತು ೩ನೆಯ ವರ್ಷದ ಟ್ರೇನಿಂಗ್ ವರ್ಗಗಳು ಮತ್ತೇ ಆರಂಭವಾದವು. ತರಬೇತಿ ಪಡೆದ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಲು ಸರಕಾರ ನಿರ್ಧರಿಸಿತು. ಸರಕಾರದ ಈ ಧೋರಣೆಯಿಂದ ಧಾರವಾಡದ ಟ್ರೇನಿಂಗ ಕಾಲೇಜಿನ ೩೫ ವಿದ್ಯಾರ್ಥಿಗಳ ಸಂಖ್ಯೆಯನ್ನು ೯೫ಕ್ಕೆ ಏರಿಸಲಾಯಿತು'[೬೫] '೧೯೩೫ ಜೂನ್ ೨೪ರಂದು ಸಂಜೆ ೫ ಗಂಟೆಗೆ ಧಾರವಾಡದ ಟ್ರೇನಿಂಗ ಕಾಲೇಜಿನ ಜನರಲ್ ಹಾಲಿನಲ್ಲಿ ೨ನೆಯ ಮತ್ತು ೩ನೆಯ ವರ್ಷದ ವರ್ಗಗಳ ಪ್ರಾರಂಭೋತ್ಸವವನ್ನು ಸರ್ ಸಿದ್ದಪ್ಪ ಕಂಬಳಿಯವರೇ ಜರುಗಿಸಿದರು. ಕಾಲೇಜಿನ ಹೆಡ್ ಮಾಸ್ತರರಾದ ವೆಂಕಟೇಶ ಮ. ಮಗದಾಳ ಅವರು ಸ್ವಾಗತಿಸಿದರು. ಈ ಸಮಾರಂಭಕ್ಕೆ ದಕ್ಷಿಣ ಭಾಗದ ಕಮಿಶನರ್ ಕ್ಲೇಟನ್ ಐ.ಸಿ.ಎಸ್. ಧಾರವಾಡ, ಕಲೆಕ್ಟರ್ ದೇಸಾಯಿ ಐ.ಸಿ.ಎಸ್, ಕರ್ನಾಟಕ ಕಾಲೇಜ ಪ್ರಿನ್ಸಿಪಾಲ್ ಫ್ಯಾರನ್, ಜಠಾರ, ಆಕ್ಟಿಂಗ ಡಿಸ್ಟ್ರಿಕ್ಟ ಜಡ್ಜ ಕವೀಶ್ವರ, ದಕ್ಷಿಣ ಭಾಗದ ಶಿಕ್ಷಣ ಖಾತೆ ಇನ್ಸಪೆಕ್ಟರ ನೂರುಲ್ಲಾ ಮುಂತಾದವರು ಹಾಜರಿದ್ದರು. ಜೋಗ ವಕೀಲರು ಮತ್ತು ರಾ.ಬ. ಕೊಪ್ಪೀಕರರು ಕಂಬಳಿಯವರ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಕೊಂಡಾಡಿದರು.'[೬೬] ಹೀಗೆ ಮೂರು ವರ್ಗಗಳು ಆರಂಭವಾದ ರೋಚಕ ಮತ್ತು ಸಾಹಸಮಯ ಕಾರ್ಯದ ಸಂಪೂರ್ಣ ಶ್ರೇಯಸ್ಸು ಸಲ್ಲಬೇಕಾದುದು ಶ್ರೀ ಕಂಬಳಿಯವರಿಗೆ.

ತನ್ನತನದ, ಪ್ರಾಂತೀಯ ಮತ್ತು ಕನ್ನಡ ಭಾಷೆ– ಇವುಗಳ ಅಸ್ತಿತ್ವ ಮತ್ತು ಮಹತ್ವ ಅರಿತಿದ್ದ ಶ್ರೀ ಕಂಬಳಿಯವರು ಈ ಸಾಹಸಮಯ ದಿಟ್ಟಹೆಜ್ಜೆಯನ್ನು ತೆಗೆದುಕೊಳ್ಳದೇ ಹೋಗಿದ್ದರೆ ಉತ್ತರ ಕರ್ನಾಟಕದ ಶಿಕ್ಷಣದ ತಾಯಿ ಬೇರು ಈಗ ಎಂಭತ್ತೂರು ವರ್ಷಗಳ ಹಿಂದೆಯೇ ಹೇಳಹೆಸರಿಲ್ಲದಂತಾಗಿ, ಇಡೀ ಉತ್ತರ ಕರ್ನಾಟಕವೇ ಶಿಕ್ಷಣಕ್ಷಾಮ ಎದುರಿಸುತ್ತ, ಅದರಲ್ಲೇ ಬಳಲಬೇಕಾಗುತ್ತಿತ್ತು.

ಹೀಗೆ ಉಳಿದ್ದು ಮಾತ್ರವಲ್ಲ ಸರ್ವಜನ ದಾಸೋಹಿಯಾಗಿ, ನಿಷ್ಪಕ್ಷಪಾತಿಯಾಗಿ ಜ್ಞಾನಪ್ರಸಾರ ಮಾಡುವಂತೆ ಟ್ರೇನಿಂಗ ಕಾಲೇಜನ್ನು ಸರಿದಾರಿಯಲ್ಲಿ ಮತ್ತು ಪ್ರಗತಿಪಥದತ್ತ ಸಾಗುವಂತೆ ಮಾಡಿದ ಮಹನೀಯರೂ ಶ್ರೀ ಕಂಬಳಿಯವರೇ. ಮೊದಲೇ ಬ್ರಾಹ್ಮಣೇತರ ಪಕ್ಷದ ಸದಸ್ಯರು, ಅಧ್ಯಕ್ಷರು ಆಗಿ,

ಜಾತಿಯತೆಯನ್ನು ನೇರವಾಗಿ, ದಿಟ್ಟವಾಗಿ ಖಂಡಿಸಿ, ಬ್ರಾಹ್ಮಣೇತರರಿಗೆ ಪಾರದರ್ಶಕ ನ್ಯಾಯ ಒದಗಿಸುತ್ತಿದ್ದ ಮುತ್ಸದ್ಧಿ, ಶಿಕ್ಷಣದ ಮಾತೃ ಸಂಸ್ಥೆ ಅನ್ವರ್ಥಕವಾಗಿ ಉಳಿಯಲು ಅವಿರತ ಹೋರಾಡಿದ್ದಾರೆ. ಅವರು ೧೯೨೧ರಲ್ಲಿ ಮುಂಬಯಿ ವಿಧಾನ ಪರಿಷತ್ತಿನ ಸದಸ್ಯರಾದಾಗಿನಿಂದಲೂ ಈ ಟ್ರೇನಿಂಗ್ ಕಾಲೇಜಿಗೆ ಕಣ್ಗಾವಲಾಗಿ, ಬೆಂಬಿಡದೆ ಅದರ ಸಾಧಕಬಾಧಕಗಳನ್ನು ಮತ್ತೇ ಮತ್ತೇ ಪ್ರಶ್ನಿಸಿದ್ದಾರೆ, ತಿದ್ದಿದ್ದಾರೆ. ಅಷ್ಟೇ ಅಲ್ಲದೇ ಮುಂಬಯಿ ವಿಧಾನ ಪರಿಷತ್ತಿನಲ್ಲಿಯೂ ಆ ಕುರಿತು ಧ್ವನಿ ಎತ್ತಿದ್ದಾರೆ; ಅಂಥ ಕೆಲವು ದಾಖಲೆಗಳು ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನ ಕಟ್ಟಡದಲ್ಲಿರುವ ಪತ್ರಾಗಾರದಲ್ಲಿ ದೊರೆಯುತ್ತವೆ. ಉದಾ:

೧) Edu Department L.C 257/1921 ಈ ಕಡತದ ಪ್ರಕಾರ:

ಎಮ್.ಎಲ್.ಸಿ.ಯಾಗಿದ್ದ ಶ್ರೀ ಸಿದ್ದಪ್ಪ. ಕಂಬಳಿಯವರು, ದಿನಾಂಕ ೨೨-೨-೧೯೨೧ರಂದು ನಡೆದ ವಿಧಾನಸಭೆಯ ಅಧಿವೇಶನದಲ್ಲಿ ತರಬೇತಿ ಕಾಲೇಜಿನ ಕುರಿತು ಒಂದು ಮಹತ್ವದ ಪ್ರಶ್ನೆ ಎತ್ತಿದ್ದಾರೆ. ಅದು: Question no.4 - **Caste of the studentes admitted to Dharwar Kanarese Training College.** ಅದರ ಮೂಲ ಪ್ರತಿಯನ್ನೇ ಇಲ್ಲಿ ನೀಡಲಾಗಿದೆ:

Edu. Deptt L.C. 257/1921

Question put by Mr. S.T. Kambli, LL.B., M.L.C.

3

4. Will the Government be pleased to state -

Caste of students admitted to Dharwar Kanarese Training College.

(a) whether non-Brahmin candidates who had obtained more marks than some Brahmins were refused admission in the Dharwar Kanarese Training College for men ?

(b) Whether it is a fact that Brahmin candidates who had obtained less number of marks than rejected non-Brahmin candidates were admitted in the 1st year of the Dharwar Kanarese Training College for men in the year 1919-20 ?

(c) Whether this state of things happened in the year 1914-15 ?

True copy,
S. [illegible]
for Superintendent, L.D.

k.

22nd February 1921

Question no.4 put by Mr. L.T.Kambli M.L.C.	Answer given by Government.
4. Will the Government be pleased to state -- (a) whether non-Brahmin candidates who had obtained more marks than some Brahmins were refused admission in the Dharwar Kanarese Training College for men ? Caste of students admitted to Dharwar Kanarese Training College.	Enquiries are being made.
(b) Whether it is a fact that Brahmin candidates who had obtained less number of marks than rejected non-Brahmin candidates were admitted in the 1st year of the Dharwar Kanarese Training College for men in the year 1919-20 ?	
(c) Whether this state of things happened in the year 1914-15 ?	

Secretary to the Government of Bombay,

Educational Department.

Educational Department

Unofficial reference no. 969 dated the 17th February 1921 to the Secretary to the Legislative Council.

ಹೀಗೆ ೧೭-೨-೧೯೨೧ರಂದು ಕೇಳಿದ ಪ್ರಶ್ನೆಗಳು ವಿಧಾನಸಭೆಯಿಂದ ಸರಕಾರದ ಕಾರ್ಯದರ್ಶಿಗೆ, ಅಲ್ಲಿಂದ ಶಿಕ್ಷಣ ಇಲಾಖೆಗೆಕಳುಹಿಸಲ್ಪಟ್ಟಿದೆ. ಇದಕ್ಕೆ ಉತ್ತರ ಶಿಕ್ಷಣ ಪರಿವೀಕ್ಷಕರು, ದಕ್ಷಿಣ ವಿಭಾಗ ಇವರಿಂದ ೮-೪-೧೯೨೧ರಂದು ಶಿಕ್ಷಣ ಇಲಾಖೆಯ ನಿರ್ದೇಶಕರರಾದ ಜೆ.ಸಿ.ಕೊವರ್ಟನ್ ಇವರಿಗೆ, ಶಿಕ್ಷಣ ಇಲಾಖೆಯ ನಿರ್ದೇಶಕರು ಪೂಣಾ ಇವರಿಂದ ೨೦-೪-೧೯೨೧ರಂದು ಸರಕಾರದ ಕಾರ್ಯದರ್ಶಿಗೆ, ಕಾರ್ಯದರ್ಶಿಯಿಂದ ೨೯-೪-೧೯೨೧ರಂದು ವಿದಾನಸಭೆಗೆ ರವಾನಿಸಲಾಗಿದೆ. ನಿವೃತ್ತ ಶಿಕ್ಷಕರ ಸಂಬಂಧಿಕರು, ಸೇವೆಯಲ್ಲಿರುವವರು, ಕೆಟ್ಟ ಮತ್ತು ಅಯಾಚಿತ ವಾತಾವರಣವಿರುವ ಸ್ಥಳಗಳಲ್ಲೂ ಕೆಲಸ ಮಾಡಲು ಒಪ್ಪಿದವರನ್ನು ಮತ್ತು ಯಾರು ತಮ್ಮ ಪತ್ನಿಯರನ್ನು ಹೆಣ್ಣುಮಕ್ಕಳ ತರಬೇತಿ ಸಂಸ್ಥೆಗೆ ಸೇರಿಸಲು ಒಪ್ಪಿರುವವರೋ ಅಂಥವರಿಗೆ ಪ್ರವೇಶ ನೀಡಲಾಗಿದೆ ಎಂಬ ಉತ್ತರ ನೀಡಲಾಗಿದೆ. ಆ ಉತ್ತರದ ರೀತಿ ಹೀಗಿದೆ:

Question no.4 put by Mr. B.T.Kambli, M.L.C.

4. Will the Government be pleased to state –

(a) Whether non-Brahmin candidates who had obtained more marks than some Brahmins were refused admission in the Dharwar Kanarese Training College for men ?

State of Education admitted: to Dharwar Kanarese Training College.

(b) Whether it is a fact that Brahmin candidates who had obtained less number of marks than rejected non-Brahmin candidates were admitted in the 1st year of the Dharwar Kanarese Training College for men in the year 1919-20 ?

(c) Whether this state of things happened in the year 1914-15 ?

Answer given by Government.

(a),(b) The ~~xx~~ answer to these parts is in the affirmative

(c) The answer is in the negative

It may be mentioned that in special cases both Brahmin and Non-Brahmin students getting less marks than some rejected non-Brahmins and Brahmin students respectively are admitted. In 1919-20 five Brahmins and 14 non-Brahmins were given this special treatment and in 1920-21 15 (excluding admissions from Bijapur District for which definite ~~xxxx~~ figure has not been supplied by the Inspector) Brahmins and 52 non-Brahmins obtained this treatment. The special points taken into consideration at the time of making such exceptional admissions are (1) near relationship (son or brother ~~xx~~ to retired or ~~[illegible]~~ [illegible] schoolmasters (2) being actually in service or Vernacular Final passed men for several years (3) special recommendations from local bodies (4) willingness to serve in places with bad or unsuitable climate – men above ghat being ordinarily unwilling to serve below ghat (5) willingness to put their wives in the Female Training College (6)

Question no. 4 put by Mr. S.T. Kambli, M.L.C.	Answer given by Government.
	(6) belonging to backward classes (as many as 28 backward class students being specially admitted for this reason this year) Orders will be given to make these special cases as few as possible in future especially in the case of advanced classes although they cannot be altogether always avoided.

Educational Department.

Forwarded u.o. to the Secretary to the Legislative Council with a request that the above reply may be placed on the Council Table at the ensuing session.

(Sd.) Y. N. Timan

Deputy Secretary to the Government of Bombay
Educational Department.

Unofficial Reference no. 3 dated the 3rd July 1921 to the Secretary to the Legislative Council.

ಇಂಥ ಸೂಕ್ಷ್ಮಗಳನ್ನು ಸಿದ್ದಪ್ಪ ಕಂಬಳಿಯವರು ನಿರಂತರವಾಗಿ ಅವಲೋಕಿಸಿದ್ದಾರೆ. ಆದರೆ ಇಂಥ ಪ್ರಕರಣಗಳಿಂದ ತರಬೇತಿ ಸಂಸ್ಥೆಯೂ ಹೊರತಾಗಿರಲಿಲ್ಲ ಎಂಬುದು ವಿಷಾದನೀಯ. ಇಂಥದ್ದೇ ಹಲವಾರು ಪ್ರಶ್ನೆಗಳು ಶ್ರೀ ಕಂಬಳಿಯವರು ಮೇಲಿಂದ ಮೇಲೇ ಎತ್ತುತ್ತಲೇ ಇದ್ದರು.

• ೨)

Edu Department L.C 615/1923-30, ಈ ಕಡತದಪುಟಸಂಖ್ಯೆ ೩೧ರಲ್ಲಿಯೂ ಇಂಥದ್ದೇ ಪ್ರಶ್ನೆ ಎತ್ತಿದ್ದಾರೆ. L.C 615/4314/F dated **13th August 1925** – ಈ ಪತ್ರಸಂಖ್ಯೆಯನ್ವಯ ಶ್ರೀ ಸಿದ್ದಪ್ಪ ಕಂಬಳಿಯವರು 'ಪುರುಷರ ಟ್ರೇನಿಂಗ ಕಾಲೇಜಿನ ಪ್ರವೇಶಗಳ' ಕುರಿತು ಅ)ಕಳೆದ ಮೂರು ವರ್ಷಗಳಲ್ಲಿ, ಪ್ರತಿ ತರಗತಿಗೂ ಎಷ್ಟು ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆದಿದ್ದಾರೆ. ಆ) ಅವರಲ್ಲಿ ಎಷ್ಟು ಜನ ಬ್ರಾಹ್ಮಣರು ಮತ್ತು ಎಷ್ಟು ಜನ ಬ್ರಾಹ್ಮಣೇತರರು?

ಇದಕ್ಕೆ ದಿನಾಂಕ **16th September 1925** ರಂದು, F.B. Pendarves Lory, Esquire, I.E.S, Director of Public Instruction, Poona, ಇವರು ಬಾಂಬೆ ಸರಕಾರದ ಕಾರ್ಯದರ್ಶಿಗೆ ಮೂರು ವರ್ಷದ ಅಂಕಿಸಂಖ್ಯೆಗಳ ಪಟ್ಟಿಯೊಂದಿಗೆ ಉತ್ತರ ನೀಡಿದ್ದಾರೆ:

35

Statement to accompany D.P.I.'s no. S-49(c)-132-D of September, 1925.

Year	Total number of students admitted.	Of the number shown in col. 2 how many are		Remarks
		Brahmins	Non-Brahmins	
1	2	3	4	5
1922-23				
Ist Year	66	40	26	
IInd "	23	3	20	
IIIrd "	6	1	5	
1923-24				
Ist Year	34	7	27	
1924-25				
Ist Year	30	6	24	

• ೩)

Edu Department L.C 88/1921 ಈ ಕಡತದ ಪ್ರಕಾರ: ೧೪–೭–೧೯೨೧ರಂದು ನಡೆದ ವಿಧಾನಸಭೆಯಲ್ಲಿ ಶ್ರೀ ಸಿದ್ದಪ್ಪ ಕಂಬಳಿ ಇವರಿಂದ 'ಧಾರವಾಡದ ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳ ಜಾತಿ' ಕುರಿತಾಗಿ ಪ್ರಶ್ನೆ ಕೇಳಲಾಗಿದೆ:

ಅ) ತರಬೇತಿ ಕಾಲೇಜಿನಲ್ಲಿರುವ ಒಟ್ಟು ವಿದ್ಯಾರ್ಥಿಗಳೇಷ್ಟು?

ಆ) ಅವರಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳೇಷ್ಟು? ಬ್ರಾಹ್ಮಣರಲ್ಲದ ವಿದ್ಯಾರ್ಥಿಗಳೇಷ್ಟು?

ಇ) ಪ್ರತಿ ತರಗತಿಯಲ್ಲಿಯ ವಿದ್ಯಾರ್ಥಿಗಳೇಷ್ಟು?

ಈ) ಪ್ರತಿ ತರಗತಿಯಲ್ಲಿಯ ಬ್ರಾಹ್ಮಣ ಮತ್ತು ಬ್ರಾಹ್ಮಣರಲ್ಲದ ವಿದ್ಯಾರ್ಥಿಗಳೇಷ್ಟು?

ಉ) ಪ್ರತಿ ತರಗತಿಯಲ್ಲಿಯ ಮಿತ ಸಂಬಳ ಪಡೆಯುವ ವಿದ್ಯಾರ್ಥಿಗಳೇಷ್ಟು?

ಊ)ಅದರಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣರಲ್ಲದ ವಿದ್ಯಾರ್ಥಿಗಳೇಷ್ಟು?

ಇದಕ್ಕೆ ಉತ್ತರವಾಗಿ ಅದೇ ಪ್ರಕ್ರಿಯೆಯಲ್ಲಿ ನಂ.ಎಲ್.ಸಿ/೩೩೦ –೧೯೨೧–೨೨, ಜೆ. ಈ. ಕೊವರ್ಟನ್. ನಿರ್ದೇಶಕರ ಕಚೇರಿ. ಸಾರ್ವಜನಿಕ ಶಿಕ್ಷಣ ಇಲಾಖೆ, ಪೂಣಾ ಇವರಿಂದ ೬–೪–೧೯೨೧ ರಂದು ಅಂಕಿಸಂಖ್ಯೆಗಳ ಒಂದು ಪಟ್ಟಿ ಒದಗಿಸಲಾಗಿದೆ:

Statement showing the caste of students in the Training College for Men, Dharwar.

(a)	(b)		(c)			(d)						(e)			(f)					
			No. in the year.			I		II		III		Stipendiary			Stipendiary students					
															I		II		III	
Total No. of students.	Brahmins	Non-Brahmins	1st	2nd	3rd	Brahmins	Non-Brahmins	Brahmins	Non-Brahmins	Brahmins	Non-Brahmins	I	II	III	Brahmins	Non-Brahmins	Brahmins	Non-Brahmins	Brahmins	Non-Brahmins
British Districts, 464.	173	291	148	162	154	48	100	64	98	61	93	119	120	53	36	61	36	84	18	35
States. 9	4	5	3	4	2	2	0	2	2	.	2									
Total 473	177	296	151	166	156	50	100	66	100	61	95	119	120	53	36	61	36	84	18	35

• ೪)

Edu Department L.C 49/1921-23, Serial no.೨೪೪ ಈ ಕಡತದ ಪ್ರಕಾರ: ೭-೯-೧೯೨೧ ರಂದು ನಡೆದ ವಿಧಾನಸಭೆಯಲ್ಲಿ ಶ್ರೀ ಸಿದ್ದಪ್ಪ ಕಂಬಳಿ ಇವರಿಂದ 'ಧಾರವಾಡದ ಟ್ರೇನಿಂಗ ಕಾಲೇಜಿನ ಪ್ರವೇಶ ಪ್ರಕ್ರಿಯೆ ಬಗೆಗೆ' ಪ್ರಶ್ನೆ ಕೇಳಲಾಗಿದೆ:

ಅ) ವಿವಿಧ ವರ್ಗಗಳ ಪ್ರವೇಶ ಮತ್ತು ಬಡ್ತಿಯನ್ನು ನಿಯಂತ್ರಿಸುವ ಯಾವುದಾದರೂ ನಿಯಮಗಳಿವೆಯೇ?

ಆ) ಇರುವುದಾದರೆ ಅದರ ಪ್ರತಿಯನ್ನು ಸರಕಾರ ವಿಧಾನಸಭೆಯಲ್ಲಿ ಮಂಡಿಸಬಲ್ಲದೆ?

ಇ) ಪ್ರವೇಶ ಮತ್ತು ಬಡ್ತಿಯ ವಿಷಯದಲ್ಲಿ ಪ್ರಾಚಾರ್ಯರು ತಮಗಿರುವ ವಿವೇಚಕ ಅಧಿಕಾರವನ್ನು ಬಳಸಿದ್ದಾರೆಯೇ?

ಈ) ಹೌದಾದರೆ ಅವರ ವಿವೇಚಕ ಅಧಿಕಾರದ ಮಿತಿಗಳೇನು?

ಇದಕ್ಕೆ ಮಿ.ಆರ್.ಪಿ.ಪರಾಂಜಪೆ, ಸರಕಾರದ ಕಾರ್ಯದರ್ಶಿಯವರಿಂದ ಉತ್ತರ ಪಡೆದು ಪ್ರತಿಕ್ರಿಯಿಸುತ್ತ–

ಅ) ಮತ್ತು ಆ) ಟ್ರೇನಿಂಗ ಕಾಲೇಜಿನ ಪ್ರವೇಶ ಪ್ರಕ್ರಿಯೆಯನ್ನು ಸಪ್ಟೆಂಬರ ೧೯೧೯ ರಲ್ಲಿ ಸರಕಾರ ಮಂಜೂರಿಸಿದ, ಇದರೊಂದಿಗಿರುವ ನೀತಿನಿಯಮಗಳನ್ವಯ, ದಕ್ಷಿಣ ವಿಭಾಗದ ಶಿಕ್ಷಣ ಪರಿವೀಕ್ಷಕರು ಮಾಡುತ್ತಾರೆ. ಎರಡನೆಯ ಮತ್ತು ಮೂರನೆಯ ವರ್ಷದ ವಿದ್ಯಾರ್ಥಿಗಳನ್ನು ಅವರ ಯೋಗ್ಯ ಸೇವೆ ಮತ್ತು ಹಿಂದಿನ ತರಗತಿಯಲ್ಲಿ ಪಡೆದ ಅಂಕಗಳು ಮತ್ತು ಕಾರ್ಯವೈಖರಿ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಇದನ್ನು ತರಬೇತಿ ಕಾಲೇಜಿನ ಪ್ರಾಚಾರ್ಯರ ಶಿಫಾರಸ್ಸಿನ ಮೆರೆಗೆ ದಕ್ಷಿಣ ವಿಭಾಗದ ಶಿಕ್ಷಣ ಪರಿವೀಕ್ಷಕರು ಮಾಡುತ್ತಾರೆ. ಈ ನಿರ್ಬಂಧಗಳಿಂದ ಹಿಂದುಳಿದ ವರ್ಗಗಳವರಿಗೆ ವಿನಾಯಿತಿ ಇದೆ. ಇ) ಮತ್ತು ಈ) ಪ್ರವೇಶ ಮತ್ತು ಬಡ್ತಿಯ ವಿಷಯದಲ್ಲಿ ಪ್ರಾಚಾರ್ಯರು ಯಾವುದೇ ವಿವೇಚಕ ಅಧಿಕಾರವನ್ನು ಬಳಸಿರುವುದಿಲ್ಲ– ಎಂಬ ಉತ್ತರ ನೀಡಿದ್ದಾರೆ.

• ೫)

Edu Department L.C 176/1921 ಈ ಕಡತದ ಪ್ರಕಾರ:

Office of the Secretary to the Legislative Council,

Council Hall, Poona

ಇಲ್ಲಿಂದ

Secretary to the Legislative Council of the Governer of Bombay.

ಇವರಿಂದ

Forwarded unofficially to the Educational Department, reference nomber 2755 Dated **16-9-1921**

ಈ ಮೇಲಿನ ಪತ್ರಸಂಖ್ಯೆ ಮತ್ತು ದಿನಾಂಕವಿರುವ ಪತ್ರವೊಂದು ೧೪ ದಿನಗಳ ಒಳಗಾಗಿ ಉತ್ತರಿಸುವಂತೆ ಕೇಳಿ ರವಾನೆಯಾಗಿದೆ. ಈ ಪತ್ರದ ವಿಷಯವೇನೆಂದರೆ **'ಕೆಲವು ವಿದ್ಯಾರ್ಥಿಗಳನ್ನು ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡದಿಂದ ಬಹಿಷ್ಕರಿಸಿರುವುದು'**

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಭೇಟಿ ನೀಡಿದ್ದರೆ?

ಆ) ನಿರ್ದೇಶಕರು ಭೇಟಿಯ ಬಳಿಕ ಕೆಲವು ಬ್ರಾಹ್ಮಣರೇತರ ವಿದ್ಯಾರ್ಥಿಗಳನ್ನು ವಸತಿ ಗೃಹದಿಂದ ಹೊರಹಾಕಲಾಯಿತೇ?

ಇ) ಹೌದಾದರೆ ಎಷ್ಟು ವಿದ್ಯಾರ್ಥಿಗಳು ಹೊರಹಾಕಲ್ಪಟ್ಟರು? ಮತ್ತು ಯಾವ ಕಾರಣಕ್ಕಾಗಿ?

ಈ) ೧೯೨೧ರ ಸಪ್ಟೆಂಬರ ೯ರ, ಧಾರವಾಡದ ಸಾಪ್ತಾಹಿಕ-'ಕರ್ನಾಟಕ ಟೈಮ್ಸ'ನಲ್ಲಿ ಪ್ರಕಟವಾದ ಹೈಕೋರ್ಟನ ಪ್ರತಿಜ್ಞಾಪಾಲಕ ಬಿ.ಎಲ್ ಪಾಟೀಲರ ಸಹಿ ಇರುವ ಪತ್ರವನ್ನು ಸರಕಾರ ಗಮನಿಸಿದೆಯೆ?

ಉ) ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು ಹೊರ ಹಾಕಿದ್ದು ಹೌದಾದರೆ, ಅವರಿಂದ ತೆರವಾದ ಖಾಲಿ ಸ್ಥಳಗಳನ್ನು ಬ್ರಾಹ್ಮಣೇತರ ವಿದ್ಯಾರ್ಥಿಗಳ ಪ್ರವೇಶ ಪಡೆದು ತುಂಬಲಾಗಿದೆಯೆ? ಇಲ್ಲವಾದಲ್ಲಿ ಈ ಖಾಲಿ ಸ್ಥಳಗಳನ್ನು ತುಂಬಲು ಮಾಡಿರುವ ಅವಶ್ಯಕ ಕ್ರಮಗಳೇನು?

ಊ) ಈ ತರಬೇತಿ ಸಂಸ್ಥೆಯ ಪ್ರಾಚಾರ್ಯರೂ ಒಬ್ಬ ಬ್ರಾಹ್ಮಣರೆ?

ಹೀಗೆ ಆರು ಪ್ರಶ್ನೆಗಳನ್ನು ವಿಧಾನಸಭೆಯಲ್ಲಿ ಕೇಳಲಾಗಿದೆ. ಇದು **17-9-1921** ಕ್ಕೆ L.C 176-F ಪತ್ರಸಂಖ್ಯೆ ಪಡೆದು ಶಿಕ್ಷಣ ಇಲಾಖೆಗೆ ರವಾನೆಯಾಗಿದೆ.

ಇದಕ್ಕೆ ಮಾನ್ಯ ಆರ್.ಪಿ. ಪರಾಂಜಪೆಯವರ ಪ್ರತಿಕ್ರಿಯೆಯನ್ನಾಧರಿಸಿ, ದಿನಾಂಕ **೨೮-೯-೧೯೨೧**ರಂದು F.B. Pendarves Lory, Esquire, I.E.S, Ag. Director of Public

Instruction, Poona, ಇವರು The Secretary to the Government, Educational Department, Bombay.

ಇವರಿಗೆ ಉತ್ತರಿಸಿ:

೧-ಅ) ಅಗಸ್ಟ ಕೊನೆವಾರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಭೇಟಿ ನೀಡಿದ್ದರು.

ಆ) ಮತ್ತು ಇ) ನಿರ್ದೇಶಕರ ಭೇಟಿಯ ಬಳಿಕ, ಕಾಲೇಜಿನ ಪ್ರಾಚಾರ್ಯರ ವಿರುದ್ಧ ಇಲ್ಲದ್ದನ್ನು ಹುಟ್ಟಿಸಿ, ಕಲ್ಪಿತ ವಿಷಯವನ್ನು ಬೆರೆಸಿ, ಅನಾಮಿಕ ಪತ್ರವನ್ನು ಬರೆದ ಅಥವಾ ಬರೆಯುವಲ್ಲಿ ಭಾಗಿಯಾದ ಕಾರಣಕ್ಕಾಗಿ ಐದು ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು, ಕಾಲೇಜಿನ ಪ್ರಾಚಾರ್ಯರು ಹೊರಹಾಕಿದ್ದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಆದೇಶದಂತೆ ಐದು ವಿದ್ಯಾರ್ಥಿಗಳ ಪೈಕಿ ನಾಲ್ವರ ಶಿಕ್ಷೆಯನ್ನು ಕ್ಷಮಿಸಲಾಗಿದೆ.

ಈ) ಅದೇದಿನ ಅದೇ ಪತ್ರಿಕೆಯಲ್ಲಿ ಪ್ರಕಟವಾದ ಪತ್ರದ ಅನುವಾದಿತ ಒಂದು ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ಉ) ತೆರವಾದ ಸ್ಥಳಗಳನ್ನು ಇನ್ನೂ ತುಂಬಲಾಗಿಲ್ಲ. ಊ) ಹೌದು.

೨- ಈ ವಿಷಯದಲ್ಲಿ ನಾನು, ನನ್ನ ಗೌಪ್ಯ ಆಧಾರ ಸಂಖ್ಯೆ ೮೮#, ದಿ. ೨೭-೯-೧೯೨೧ರ ವೈಯಕ್ತಿಕ ಪತ್ರ ತರಿಸಿ ನೋಡಲಾಗಿ, ಅದರಲ್ಲಿ ಶಿಕ್ಷಣಾಲಯದಿಂದ ಹೊರಹಾಕಲ್ಪಟ್ಟ ವಿದ್ಯಾರ್ಥಿಗಳ ಕುರಿತಾದ ಯಾವುದೇ ಆದೇಶ ಇಲ್ಲ.

೩- ಇನ್ನೂ ಮಿ. ಪಾಟೀಲರ ಪತ್ರದ ವಿಷಯ, ಅನಾಮಿಕ ಪತ್ರವನ್ನು ಬರೆದ ಅಥವಾ ಬರೆಯುವಲ್ಲಿ ಭಾಗಿಯಾದ ಕಾರಣಕ್ಕಾಗಿ ಐದು ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು, ಹೊರಹಾಕಿದ್ದರ ಕುರಿತಂತೆ, ಕಾಲೇಜಿನ ಒಳಹೊರಗೆ ಎರಡೂಬದಿಗೂ ನಿಶ್ಚಿತವಾಗಿ ಕೇಳಿ ಬರುತ್ತಿರುವುದೇನೆಂದರೆ, ಆ ಐವರು ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಶಿಕ್ಷೆಯಾಗಿದ್ದು ಅನಾಮಿಕ ಪತ್ರ ಬರೆದದ್ದಕ್ಕಲ್ಲ; ಧಾರವಾಡದ ಪ್ರಥಮ ಸಂದರ್ಶನಕ್ಕೆ ನಿರ್ದೇಶಕರು ಆಗಮಿಸಿದ ಸಂದರ್ಭದಲ್ಲಿ ಮಿ. ಪಾಟೀಲರೊಡಗೂಡಿ, ಭೇಟಿಯಾಗಲು ಹೋದದ್ದಕ್ಕೆ ಎನ್ನುವ ಸುದ್ದಿ. ಪ್ರಾಚಾರ್ಯರು ಇದನ್ನು ಸಾರಾಸಗಟಾಗಿ ತಳ್ಳಿ ಹಾಕಿದ್ದಾರೆ. ಮತ್ತು ನನಗೆ ಚೆನ್ನಾಗಿ ನೆನಪಿರುವಂತೆ ಕಾಲೇಜಿನ ಯಾವ ವಿದ್ಯಾರ್ಥಿಗಳೂ ಮಿ. ಪಾಟೀಲರೊಂದಿಗಾಗಲಿ ಅಥವಾ ಪ್ರತ್ಯೇಕವಾಗಿಯಾಗಲಿ ನನ್ನನು ಭೇಟಿಯಾಗಿಲ್ಲ ಎಂಬ ಉತ್ತರ ನೀಡಿದ್ದಾರೆ.

ಈ ಘಟನೆಗೂ ಮತ್ತು ಶ್ರೀಮತಿ ಪಾರ್ವತಿದೇವಿ ಬಿ ಪಾಟೀಲ ಇವರ ಎಂಫಿಲ್ ಸಂಪ್ರಬಂಧ 'ಆನಂದಕವಿ: ಬದುಕು-ಬರಹ'ದ ಪುಟ ೮ರಲ್ಲಿ ಉಲ್ಲೇಖಿಸಿರುವ ಒಂದು ಘಟನೆಗೂ ಥಳಕು ಹಾಕಿಕೊಳ್ಳುತ್ತದೆ. 'ಆನಂದಕವಿ(ವೀರಯ್ಯ ಮಡಿವಾಳಯ್ಯ ಕುಲಕರ್ಣಿ) ೨೫-೦೯-೧೯೧೩ ರಿಂದ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಬೇರೆಬೇರೆ ಹನ್ನೊಂದು ಸ್ಥಳಗಳಲ್ಲಿ ವೃತ್ತಿಯನ್ನು ನಿರ್ವಹಿಸುತ್ತಿರುವಾಗ ಅವರಿಗೆ ಧಾರವಾಡದ ಗಂಡು ಮಕ್ಕಳ ತರಬೇತಿ ಕಾಲೇಜಿನಲ್ಲಿ ಮೂರು

ವರ್ಷಗಳ ಸೇವಾನಿರತ ವೃತ್ತಿ ತರಬೇತಿ ಪಡೆಯಬೇಕೆಂಬ ಇಲಾಖಾ ನಿಯಮದಂತೆ ತರಬೇತಿಗೆ ತೆರಳುತ್ತಾರೆ. ಆದರೆ ಈ ತರಬೇತಿಯನ್ನು ಎರಡೇ ವರ್ಷಕ್ಕೆ ಮೊಟಕುಗೊಳಿಸುತ್ತಾರೆ. ಕಾರಣ ಆ ಸಂದರ್ಭದಲ್ಲಿ ಧಾರವಾಡದಲ್ಲಿ ನಡೆದ ಬ್ರಾಹ್ಮಣ ಸಮಾಜದ ಸಭೆಗೆ ಹೋದರೆಂಬ ಕಾರಣಕ್ಕೆ ಐದಾರು ಹುಡುಗರನ್ನು ಕಾಲೇಜಿನಿಂದ ಹೊರ ಹಾಕಿದ್ದರು. ಆನಂದ ಕವಿಗಿಲ್ಲದ ತರಬೇತಿ ತಮಗೇಕೆ ಎಂಬು ಉಳಿದ ಸಹಪಾಠಿಗಳೂ ಹೊರಹೋದರು'.ಪಾರ್ವತಿ ಉಲ್ಲೇಖಿಸಿರುವ ಪತ್ರಾಗಾರದ ದಾಖಲೆಗಳಲ್ಲಿ ಹೆಸರಿಲ್ಲ; ಪಾರ್ವತಿ ವರ್ಷವನ್ನು ಉಲ್ಲೇಖಿಸಿಲ್ಲ. ಆದರೆ ಈ ಘಟನೆಗೂ ಕಂಬಳಿಯವರು ಕೇಳಿರುವ ಪ್ರಶ್ನೋತ್ತರದ ಪತ್ರ ವ್ಯವಹಾರದಲ್ಲಿ ಹೇಳಿರುವ ಉತ್ತರಗಳಿಗೂ ಸಂಬಂಧವಿದೆ. ಕಾಲೇಜಿನಿಂದ ಹೊರ ಹಾಕಿದ ವಿದ್ಯಾರ್ಥಿ ಮತ್ತು ಕ್ಷಮಾಪಣೆಗೊಳಗಾಗದ ಒಬ್ಬ ವಿದ್ಯಾರ್ಥಿ ಎಂದರೆ ಆತ ವೀರಯ್ಯನೇ. ನೇರ, ನಿಷ್ಠುರ ಮತ್ತು ಕ್ರಾಂತಿಕಾರಿ ಮನೋಭಾವದ ಈತನಿಗೆ ಈ ರೀತಿ ಘಟಿಸಿರುವುದೂ ಸತ್ಯವೆನಿಸುತ್ತದೆ.

- ೬) ೧೯೨೨ ರಲ್ಲಿ ಮತ್ತೊಂದು ಘಟಣೆ

1922

File No. ೫.ಆ 322

Edu
DEPARTMENT

7 BRANCH

Subject:-- *Training college, Dharwar*

Restricted Students Examination

(Qn.: Kamble mr S.T. M.L.C)

File No. ೫.ಆ 322

7 ______________________________

→ ಈ ಕಡತ ೨೮ ಜನೇವರಿ ೧೯೨೨ ರಂದು, ಅನಧಿಕೃತ ಆಧಾರ ಸಂಖ್ಯೆ ೧೪೧– L ನಿಂದ ಶಿಕ್ಷಣ ಇಲಾಖೆಗೆ ಮುಂದಿನ ಅವಶ್ಯಕ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

Rusticated students: Dharwad Training College.

Mr. S.T. Kambli, M.L.C. (Dharwar District) asked :-

1. (a) Is it a fact that the rusticated students of he Dharwad Training Collage are ordered to be specially examined?

(b) If so, was the special examination held? And with what results?

(c) How many candidates were appeared and how many were successful?

(d) What is the averege percentage of successful to unsuccessful candidates in the annual examinations of the said college based on the figures of last two years?

→ ತತಕ್ಷಣದಲ್ಲಿ ಮೊದಲ (ಎ) ಪ್ರಶ್ನೆಗೆ 'yes' ಎನ್ನುವ ಉತ್ತರ ಶಿಕ್ಷಣ ಇಲಾಖೆಯಿಂದ ಬಂದಿದ್ದು –The answer to part (a) is 'yes' (vide government telegram to D.P.I. no. 592- F dated the 8th December 1921) ಉಳಿದ ಪ್ರಶ್ನೆಗಳಿಗೆ ಶಿಕ್ಷಣ ಇಲಾಖೆಯ ನಿರ್ದೇಶಕರಿಂದ ಉತ್ತರ ನಿರೀಕ್ಷಿಸಲಾಗಿದೆ.

→ ನಂತರ 24 ಎಪ್ರೀಲ್ 1922ನೆಯ ದಿನಾಂಕದ No Lc/c – 54 Post Box No. 52, Poona . Post Box no.52, Poona - ಈ ಸಂಖ್ಯೆಯ ಪತ್ರ ದಾಖಲೆಯ ಪ್ರಕಾರ

F. B. Pendraves Lory, Esquire, I. E. S.
Ag. Director of Public Instruction, Poona. ಇವರಿಂದ

The Secretary to Government,
Educational Department , Bombay.

ಇವರಿಗೆ ಮೇಲೆ ಕೇಳಿದ ಉಳಿದ ಮೂರು ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆ:

(b and c)-The examination of rusticated studentes was held from 4th to 17th January,1922. 53 students passed the examination out of 54.

(d) -The averege percentage of successful candidates based on the results of the annual examinations for 1920 and 1922 is roughly 98.

→ ಇದನ್ನು ಮುಂದಿನ ಅಧೀವೇಶನದಲ್ಲಿ ಮಂಡಿಸಲಾಗುವುದು ಎಂಬುದಾಗಿ ಸರಕಾರದ ಕಾರ್ಯದರ್ಶಿ ೨೨ ಮೇ ೧೯೨೨ ರಂದು ಪ್ರತಿಕ್ರಿಯಿಸಿದ್ದಾರೆ.

ಹೀಗೆ ತರಬೇತಿ ಕಾಲೇಜಿನಲ್ಲಿ ನಡೆಯುವ ಪ್ರತಿಯೊಂದು ವಿದ್ಯಮಾನಗಳನ್ನು ಎಮ್.ಎಲ್.ಸಿ.ಯಾಗಿದ್ದ ಶ್ರೀ ಸಿದ್ದಪ್ಪ. ಕಂಬಳಿಯವರು ಬಹು ಕಾಳಜಿಯಿಂದ ಸೂಕ್ಷ್ಮವಾಗಿ ಮತ್ತು ತೀಕ್ಷ್ಣವಾಗಿ ಅವಲೋಕಿಸುತ್ತಿದ್ದರು ಮತ್ತು ಅದನ್ನು ಒಂದು ನಿರ್ಧಾರಾತ್ಮಕ ಮತ್ತು ಸಕಾರಾತ್ಮಕ ನಿಲುವಿಗೆ ತರುವವರೆಗೂ ಬಿಡುತ್ತಿರಲಿಲ್ಲ ಎಂಬುದಕ್ಕೆ ಈ ಆರು ಉದಾಹರಣೆಗಳು ಸಾಕ್ಷಿಯಾಗಿವೆ. ಡೆಪ್ಯೂಟಿ ಚನ್ನಬಸಪ್ಪ, ಗಂಗಾಧರ ಮಡಿವಾಳೇಶ್ವರ ತುರಮರಿ, ವೆಂಕಟರಂಗೋ ಕಟ್ಟಿ, ಭುಜಂಗರಾಯರು, ರೊದ್ದ ಶ್ರೀನಿವಾಸರಾಯರು ಮುಂತಾದ ಮಹನೀಯರೆಲ್ಲ ಬಿಡದೆ ನೀರುಣಿಸಿ ಶೈಕ್ಷಣಿಕ ಹೆಮ್ಮರ ಬೆಳೆಸಿದ್ದಾರೆ ನಿಜ. ಆದರೆ ಆ ಹೆಮ್ಮರ ಫಲಪ್ರದವಾಗಿ ಬೆಳೆಯುವಂತೆ, ಬೇರಿಗೆ ಹುಳ ಹತ್ತದಂತೆ ಮತ್ತು ಸರ್ವರಿಗೂ ಸಮಾನವಾಗಿ ನೆರಳು ಕೊಡುವಂತೆ ನೋಡಿಕೊಂಡವರು ಶ್ರೀ ಕಂಬಳಿಯವರು. ಅವರ ಅಧಿಕಾರ ಮತ್ತು ಪ್ರಯತ್ನ ಇಲ್ಲದೇ ಹೋಗಿದ್ದರೆ ಟ್ರೇನಿಂಗ ಕಾಲೇಜೇ ಇರುತ್ತಿರಲಿಲ್ಲ. ಮುಂಬಯಿ ಪತ್ರಾಗಾರದಲ್ಲಿ ನನಗೆ ದೊರಕಿದ್ದು ಕೇವಲ ಕೆಲವು ಉದಾಹರಣೆಗಳು ಮಾತ್ರ. ಅವರ ಮಂತ್ರಿ ಪದವಿಯ ಏಳುವರೆ ವರ್ಷದ ಅವಧಿಯಲ್ಲಿ ಇಂಥ ಅದೇಷ್ಟು ಘಟನೆಗಳು ಸಂಭವಿಸಿರಲಿಕ್ಕಿಲ್ಲ? ಇನ್ನೂ ಹೆಕ್ಕಿ ನೋಡುವ ಅವಶ್ಯಕತೆ ಇದೆ. ಇಂಥ ಹಲವಾರು ಶೈಕ್ಷಣಿಕ ಸಂಸ್ಥೆಗಳನ್ನು ಉಳಿಸಿ, ಬೆಳೆಯುವಂತೆ ಮಾಡಿದ, ಅಲ್ಲಿ ಸೇವೆ ಸಲ್ಲಿಸಿರುವ ಮತ್ತು ಸಲ್ಲಿಸುತ್ತಿರುವ ನಮ್ಮೆಲ್ಲರಿಗೆ ಎದೆಗೆ ಎರಡಕ್ಷರ ಬಿತ್ತಿ, ಹೊಟ್ಟೆಗೆ ಎರಡು ತುತ್ತುಣಿಸಿದ ಘನಶ್ರೇಯಸ್ಸು, ಯಜಮಾನಿಕೆ ಶ್ರೀಯುತ ಕಂಬಳಿಯವರಿಗೆ ಸಲ್ಲುತ್ತದೆ.

ಮುಂದೆ ೩ನೆಯ ವರ್ಗವನ್ನು ಕೈಬಿಟ್ಟು ಕೇವಲ ಎರಡು ವರ್ಗಗಳನ್ನು ಮಾತ್ರ ಉಳಿಸಿಕೊಂಡದ್ದು, ಅಂದಿನಿಂದ ಈವರೆಗೂ ಅದೇ ಪದ್ಧತಿ ಜಾರಿಯಲ್ಲಿರುವುದು ಇವು ನಂತರದ ಬೆಳವಣಿಗೆಗಳು. ೧೦೦ಕ್ಕೆ ೫೦ರಷ್ಟು ೧ನೆಯ ವರ್ಷದವರು, ೨೦ರಷ್ಟು ೨ನೆಯ ವರ್ಷದವರು, ೧೦ರಷ್ಟು ಮೂರನೆಯ ವರ್ಷದವರು, ಈ ರೀತಿಯಲ್ಲಿ ಟ್ರೇನ್ಡ ಶಿಕ್ಷಕರ ಪ್ರಮಾಣವನ್ನು ಏರಿಸಬೇಕೆಂಬ ತತ್ವದ ಮೇಲೆ ಸರಕಾರದವರು ಅಲೋಚಿಸಿ ಕ್ರಮ ಕೈಗೊಂಡಿದ್ದಾರೆ. ಮುಂದೆ ಇದರಂತೆಯೇ ಪ್ರವೇಶ ತೆಗೆದುಕೊಳ್ಳಲಾಗಿದೆ. ಆದರೆ ದೇಶಿಯ ಸಂಸ್ಥಾನಗಳಿಂದ ಬರುವ ವಿದ್ಯಾರ್ಥಿಗಳಿಗೆ ೨೫೦ ರೂ. ಫೀ ತೆಗೆದುಕೊಳ್ಳಲು ಸರಕಾರ ನಿರ್ಧರಿಸಿದ ಕಾರಣ ಸಂಸ್ಥಾನಗಳಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆ ಸಂಪೂರ್ಣ ಇಳಿಮುಖವಾಗಿಬಿಟ್ಟಿದೆ. ಆದರೆ ೧೯೩೮ ನವೆಂಬರದಲ್ಲಿ ಮುಂಬಯಿ ಸರಕಾರದವರು ಲೋಕಲ್ ಬೋರ್ಡ ಅಧ್ಯಕ್ಷರಾದ ಶ್ರೀ ಎಸ್.ಎಸ್. ಮೋರೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಮಾಡಿ, ಶ್ರೀ ಹಳಕಟ್ಟಿ, ಶ್ರೀ ಎಸ್. ಸಿ. ನಂದೀಮಠ, ಶ್ರೀಮತಿ ಕೃಷ್ಣಾಬಾಯಿ ಪಣಜೀಕರ ಇವರ ಸದಸ್ಯತ್ವದಲ್ಲಿ, ಒಂದು ಪ್ರಶ್ನೆಮಾಲಿಕೆಯನ್ನು ತಯಾರಿಸಿ, ಪರಿಣಿತರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಒಂದು ವರದಿಯನ್ನು ಪ್ರಸ್ತುತ ಪಡಿಸಿದರು. ಅದರ ಪ್ರಕಾರ 'ಮೂರು ವರ್ಷದ ಟ್ರೇನಿಂಗ್ ಅವಧಿ ಇನ್ನು ಮುಂದುವರೆಸಕೂಡದು; ಶಿಕ್ಷಕರು ಕೇವಲ ಹೆಚ್ಚಿನ ತರಗತಿಯ ಸರ್ಟಿಫೀಕೆಟನ್ನು ಹೊಂದಿದ ಮಾತ್ರಕ್ಕೆ ಹೆಚ್ಚಿನ ವೇತನಕ್ಕೆ ಅರ್ಹರಾಗಲಾರರು; ಎರಡೇ ವರ್ಷದ ಟ್ರೇನಿಂಗ ಹೊಂದುವಂತೆ ಒಂದು ಯೋಜನೆಯನ್ನು ತಯಾರಿಸಬೇಕು; ಬಾಲಕ ಮತ್ತು ಬಾಲಕಿಯರಿಗೆ ಸಾಮಾನ್ಯ ಮುಲ್ಕಿ ಪರೀಕ್ಷೆ ಜಾರಿಯಲ್ಲಿ ತರಬೇಕು; ಟ್ರೇನಿಂಗ ಸಂಸ್ಥೆಗೆ

ಬರುವ ವಿದ್ಯಾರ್ಥಿಗಳು ವಸತಿಗೃಹಗಳಲ್ಲಿಯೇ ಇರಬೇಕು ಎಂಬ ನಿಯಮ ತೆಗೆದು ಹಾಕಬೇಕು; ಸಹಶಿಕ್ಷಣ ನೀಡಬೇಕು ಮತ್ತು ಮಿಶ್ರ ಶಿಕ್ಷಕ ವರ್ಗವಿರಬೇಕು; ಹೀಗೆ ಮೂರನೆಯ ವರ್ಷದ ತರಬೇತಿ ನಿಲ್ಲಿಸಿದಾಗ ಆಗುವ ಉಳಿತಾಯವನ್ನು ಒಂದು ಮತ್ತು ಎರಡನೆಯ ವರ್ಷದ ತರಬೇತಿಗೆ ಹೆಚ್ಚು ವಿದ್ಯಾರ್ಥಿಗಳು ಬರುವಂತೆ ಮಾಡಿ ಅಲ್ಲಿ ಉಪಯೋಗಿಸಿಕೊಳ್ಳಬಹುದು. ಈಗಾಗಲೇ ಒಂದು ವರ್ಷ ತರಬೇತಿ ಹೊಂದಿದವರು ಈಗ ಎರಡನೆಯ ವರ್ಷದ ತರಬೇತಿ ಪಡೆಯುವುದು ಕಡ್ಡಾಯ; ೪೦ ವರ್ಷ ಮೇಲ್ಪಟ್ಟವರಿಗೆ ಈ ವರ್ಷದ ತರಬೇತಿಯ ಬದಲು ಮೂರು ತಿಂಗಳ ತರಬೇತಿ ಸಾಕು;' ಮುಂತಾದ ಬದಲಾವಣೆಗಳು ತರಬೇತಿ ಶಿಕ್ಷಣದಲ್ಲಿ ಜಾರಿಯಾದವು. ಇದೇ ಸಮಯದಲ್ಲಿ ಪ್ರಸ್ತುತ ಮುಂಬಯಿ ವಿದ್ಯಾಖಾತೆಯ ಮಂತ್ರಿಗಳೂ ಮತ್ತು ಮುಖ್ಯ ಮಂತ್ರಿಗಳೂ ಆದ ಬಾಳಾಸಾಹೇಬ ಗಂಗಾಧರರಾವ ಖೇರ ಇವರು ೬-೧೨-೧೯೩೮ರಂದು ತರಬೇತಿ ಸಂಸ್ಥೆಗೆ ಭೇಟ್ಟಿ ಕೊಟ್ಟು ಪ್ರಗತಿಯನ್ನು ವೀಕ್ಷಿಸುತ್ತಾರೆ.

ಹೀಗೆ ಗಟ್ಟಿಯಾಗಿ ಬೇರೂರಿದ ಮೇಲೆ ಟ್ರೇನಿಂಗ ಕಾಲೇಜು ಹಂತಹಂತವಾಗಿ ಬೆಳೆಯುತ್ತ ಹೋಯಿತು. **ಜೂನ್ ೧, ೧೯೪೧ ರಿಂದ ಟ್ರೇನಿಂಗ ಸ್ಕೂಲು ಕಾಲೇಜಾಗಿ**, ಸಾಮಾನ್ಯ ಶಿಕ್ಷಕ ವರ್ಗಕ್ಕೆ ಸೇರಿದ ಈ ಕಾಲೇಜಿನ ಮುಖ್ಯ ಶಿಕ್ಷಕ ಹುದ್ದೆ, ಮುಂಬಯಿ ಎಜ್ಯುಕೇಷನ್ ಸರ್ವಿಸಿಸ್‌ಗೆ ಸೇರಿದ **ದ್ವಿತಿಯ ದರ್ಜೆಯ ಅಧಿಕಾರಿಯ ಹುದ್ದೆಯಾಗಿ** ಉನ್ನತೀಕರಣಗೊಂಡಿತು.

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮುದಿಮುನ್, ಬಿ. ಎ.

ಂಪುಟ ೮೦	ಜೂನ್ ೧೯೪೧	ವರ್ಷ ೧೩. ಸಂ. ೩

ವಿದ್ಯಾಖಾತೆಯೊಳಗಿನ ಪ್ರಚಲಿತ ವಿಷಯಂಗಳು

ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಸ್ಕೂಲು ಟ್ರೇನಿಂಗ್ ಕಾಲೇಜವಾಯಿತು

ಇದೇ ವರ್ಷದ ಜೂನ್ ೧ನೆಯ ತಾರೀಖಿನಿಂದ ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಸ್ಕೂಲಿನ ಹೆಸರನ್ನು ಟ್ರೇನಿಂಗ್ ಕಾಲೇಜವೆಂದೂ, ಹೆಡ್ ಮಾಸ್ತರರ ಪದವಿಯನ್ನು 'ಪ್ರಿನ್ಸಿಪಾಲ' ಎಂದೂ ಬದಲಿಸಬೇಕೆಂದು ಸರಕಾರದವರು ನಿರ್ಣಯಿಸಿದಾರೆ. ಇಷ್ಟು ದಿವಸಗಳವರೆಗೆ ಹೆಡ್ ಮಾಸ್ತರರು ಮುಂಬಯಿ ಸಬಾರ್ಡಿನೇಟ ಸರ್ವಿಸಿನೊಳಗಿನ ಸಾಮಾನ್ಯ ಶಿಕ್ಷಕರ ತರಗತಿಗೆ ಸೇರಿದವರಾಗಿದ್ದರು. ಈಗ ಪ್ರಿನ್ಸಿಪಾಲರು ಮುಂಬಯಿ ಎಜ್ಯುಕೇಶನಲ್ ಸರ್ವಿಸಿನ ಎರಡನೆಯ ತರಗತಿಯ ಆಫೀಸರರಾಗಿರುವರು.

೧೯೩೪ ನೆಯ ಇಸ್ವಿಯಿಂದ ಕಳೆದು ಹೋದ ಸ್ಥಾನಮಾನಗಳು ಈಗ ಈ ಸಂಸ್ಥೆಗೆ ಮರಳಿ ಬಂದಂತಾದವು.

ಇದಕ್ಕೆ ಕಾರವಾರದ ಎಡ್ಮಿನಿಸ್ಟ್ರೇಟಿವ್ ಆಫೀಸರರಾಗಿದ್ದ ಶ್ರೀ **ಎಚ್. ಎಸ್. ತೋರಗಲ್** ಇವರು ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲ ಹುದ್ದೆಯನ್ನು ವಹಿಸಿಕೊಂಡಿದ್ದಾರೆ. ಜುಲೈನಲ್ಲಿ ಎಸ್ ಜಿ ಬೈಚವಾಳರು ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿಗಳ 'ಶಿಕ್ಷಣ' ವಿಷಯದ ವ್ಯಾಪಕ ದೃಷ್ಟಿಯಿಂದ ಅಭ್ಯಾಸ ಪತ್ರಿಕೆಯನ್ನು ಸಿದ್ಧಗೊಳಿಸಿದ್ದಾರೆ.[೬೭]

ಗ್ರಾಮ ಸುಧಾರಣೆಗಾಗಿ, ರೈತರ ಮಾರ್ಗದರ್ಶನಕ್ಕಾಗಿ ಪ್ರಗತಿಪರ ವಿಚಾರಗಳು ನಡೆದಿವೆ. ೧೯೩೨ರಿಂದ ಬೇಸಿಗೆ ಸೂಟಿಯಲ್ಲಿ 'ಶಿಕ್ಷಣ ಯೋಜನೆ'ಯನ್ನು ಆರಂಭಿಸಿ, ಬೇರೆ ಬೇರೆ ವಿಷಯಗಳಲ್ಲಿ, ಪರಿಣಿತರನ್ನು ಕರೆಯಿಸಿ, ಬೋಧನೋಕರಣ ಸಹಿತವಾಗಿ ಒಂದು ವಾರಪೂರ್ತಿ ಪಾಠ ಮಾಡಿಸಿ ತೋರಿಸಲಾಗುತ್ತಿತ್ತು. ಪ್ರತಿವರ್ಷವೂ ಈ ಕಾರ್ಯಕ್ರಮ ಬಹು ವಿಜೃಂಭಣೆಯಿಂದ ಸಾಗಿದೆ. ೧೯೩೬ ಮೇನಲ್ಲಿ ರೈತರ ಮತ್ತು ಗ್ರಾಮದ ಸುಧಾರಣೆಗಾಗಿ ೧೫-೫-೧೯೩೬ ರಿಂದ ೨೫-೫-೧೯೩೬ ರವರೆಗೆ ತರಬೇತಿಯನ್ನು ಸರಕಾರವೇ ಹಮ್ಮಿಕೊಂಡಿದೆ. ಧಾರವಾಡದ ಕಲೆಕ್ಟರರಾದ ಬಿ.ಎಲ್. ಪಾಟೀಲ ಇವರ ಸೂಚನೆಯ ಮೇರೆಗೆ ಅದು ಟ್ರೇನಿಂಗ ಕಾಲೇಜಿನ ಆವರಣದಲ್ಲಿಯೇ ನಡೆದಿದೆ. ಹತ್ತು ದಿನಗಳ ಪರ್ಯಂತ ಸುತ್ತಲಿನ ಗ್ರಾಮದ ರೈತರೆಲ್ಲ ಸೇರಿ ಇದರ ಲಾಭ ಪಡೆದಿದ್ದಾರೆ. ('ಗ್ರಾಮ ಸುಧಾರಣೆಗಾಗಿ ತೆರೆದ ಟ್ರೇನಿಂಗ್ ಕ್ಲಾಸು' ಎಂಬ ಶೀರ್ಷಿಕೆಯಡಿ ಕ.ಪ್ರಾ.ಶಿ. ೧೯೩೬ ಮೇ/ಜೂನ್, ಸಂ೭೩, ಸಂ೨/೩, ಪುಟ ೩೯)

ವರ್ಧಾ ಅಧ್ಯಾಪನ ಕೇಂದ್ರ:

೧೯೩೭ಅಕ್ಟೋಬರ್‌ನಲ್ಲಿ ಮಹಾತ್ಮ ಗಾಂಧೀಯವರು **'ವರ್ಧಾ'** ಎಂಬಲ್ಲಿ ಸಭೆ ಕರೆದು ಕೈಗಾರಿಕೆ/ಕೈಕಸಬು ಪ್ರಧಾನವಾದ ಹೊಸ ಶಿಕ್ಷಣ ಯೋಜನೆಯೊಂದಕ್ಕೆ ಕರೆ ನೀಡಿದರು. ಬ್ರಿಟಿಷರು ನೀಡುತ್ತಿದ್ದ ನಿರಾಧಾರದ, ಉದಾಸೀನದ ಶಿಕ್ಷಣಕ್ಕೆ ಸೆಡ್ಡು ಹೊಡೆದದ್ದು ಈ ಗಾಂಧೀಪ್ರಣೀತ ವರ್ಧಾಶಿಕ್ಷಣ ಯೋಜನೆ. ಡಾ. ಝುಕೀರ ಹುಸೇನರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು ಒಂದು ತಿಂಗಳಲ್ಲಿಯೇ ತನ್ನ ವರದಿಯನ್ನು ಒಪ್ಪಿಸಿತು. ದೋಷರಹಿತ, ಸ್ವಾವಲಂಬಿ ತತ್ವಪ್ರಧಾನ ಶಿಕ್ಷಣಕ್ಕೆ ವೃತ್ತಿಮೂಲ ಶಿಕ್ಷಣವು ಅವಶ್ಯಕ. ಕೈಗಾರಿಕೆ, ಮಾತೃಭಾಷೆ, ಗಣಿತ, ಸಾಮಾಜಿಕ ವಿಷಯಗಳ, ಶಾಸ್ತ್ರ, ಗಾಯನ, ಹಿಂದುಸ್ತಾನಿಭಾಷೆ ಮೊದಲಾದ ವಿಷಯಗಳು ಈ ಪಠ್ಯಕ್ರಮದಲ್ಲಿ ಇರಬೇಕು. ಕೈಗಾರಿಕೆ ಕರಕೌಶಲ್ಯದಲ್ಲಿ ನೂಲುವುದು, ನೇಯುವುದು, ಬಡಗಿತನ, ಒಕ್ಕಲುತನ, ತರಕಾರಿ, ಹಣ್ಣು ಬೆಳೆಯುವುದು (ಬಾನಿಗಳಲ್ಲಿ ಬೇಸಾಯ), ಚರ್ಮಗಾರಿಕೆ, ಇದರೊಂದಿಗೆ ಪರಿಸ್ಥಿತಿ ಅನುಸಾರ ಬೇರೆಬೇರೆ ವ್ಯವಸಾಯವನ್ನು ಅನುಸರಿಸಬಹುದು. ಇವುಗಳೊಂದಿಗೆ ಅರಳೆ ಹಿಂಜುವುದು, ಕದರಿನಿಂದ ನೂಲುವುದು ಇವು ತಕ್ಕಮಟ್ಟಿಗೆ ಬರಲೇಬೇಕು. ಒಕ್ಕಲತನದ ಜ್ಞಾನವೂ ಇರಲೇಬೇಕು. ಸಾಮಾನ್ಯ ವಿಷಯ ಜ್ಞಾನದೊಂದಿಗೆ ವೃತ್ತಿಮೂಲ ಶಿಕ್ಷಣವು ಸ್ವಾವಲಂಬನೆಯನ್ನು ಬೆಳೆಸಬಲ್ಲದು ಮತ್ತು ಈ ಶಿಕ್ಷಣ ಸಂಸ್ಥೆಗಳು ವಸತಿಗೃಹಗಳೊಂದಿಗೆ ಸಂಲಗ್ನವಾಗಿರಬೇಕು ಎಂಬುದು ಅದರ ಸಾರಂಶವಾಗಿತ್ತು. ೧೯೩೯ರ ಹೊತ್ತಿಗೆ ಈ ಯೋಜನೆಗೆ ಒಂದು ಪೂರ್ಣರೂಪ ಮೂಡಿತು. ಧಾರವಡದಲ್ಲಿಯೂ ೧೯೩೯ರಲ್ಲಿ ವಿದ್ಯುಕ್ತವಾಗಿ ಆರಂಭ ವಾಯಿತು. ಹಳ್ಳಿಗಳಲ್ಲಿಯ ಕಲಿಕಾರ್ಥಿಗಳನ್ನು ಗುರಿಯಾಗಿಟ್ಟುಕೊಂಡು "ನಮ್ಮ ಹಳ್ಳಿಗಳಲ್ಲಿನ ನಿರುತ್ಸಾಹವು ಹೋಗಿ ಉತ್ಸಾಹವುಂಟಾಗಬೇಕು. ದಾರಿದ್ರ್ಯದ ಸ್ಥಳದಲ್ಲಿ ಅನ್ನವು ನಿರ್ಮಾಣವಾಗಬೇಕು. ನಿರುದ್ಯೋಗದ

ಎಡೆಯಲ್ಲಿ ಉದ್ಯೋಗ ಬೇರೂರಬೇಕು" ಎಂಬ ತಳಹದಿಯೇ ಗಾಂಧೀ ತತ್ವವಾಗಿತ್ತು. ಇದೊಂದು ಮೂಲ ಉದ್ಯೋಗಾಧಾರಿತ, ಸ್ವರಾಜ್ಯವನ್ನು ಅಶೋತ್ತರ ಹೊಂದಿದ, ಸರ್ವೋದಯ ಸಮಾಜದ ನಿರ್ಮಾಣವೇ ಈ ವರ್ಧಾ ಶಿಕ್ಷಣ ಯೋಜನೆಯ ಹೆಗ್ಗುರಿಯಾಗಿತ್ತು. ಈ ಶಿಕ್ಷಣ ಕ್ರಮವು ಕೇವಲ ಉದ್ಯೋಗಮಯವಾಗಿ ಇರುವುದೆಂದು ತಿಳಿಯುವ ಅವಕಾಶವೇ ಇಲ್ಲದಂತೆ ನೈಸರ್ಗಿಕ ವಾತಾವರಣದಲ್ಲಿ, ಸಹಜ ಸಂದರ್ಭ ಒದಗಿದಾಗ ಆಕಾಶದೊಳಗಿನ ಅದ್ಭುತ ಚಮತ್ಕಾರಗಳನ್ನು, ಋತುಮಾನಕ್ಕನುಸಾರವಾಗಿ ಗಿಡ-ಮರ, ಪಶು-ಪಕ್ಷಿ ಹಾಗೂ ಮನುಷ್ಯರ ಮೇಲಾಗುವ ಪರಿಣಾಮಗಳನ್ನು ನಿರೀಕ್ಷಣೆ, ಪರೀಕ್ಷಣೆ ಮಾಡಲು ಅನುವು ಮಾಡುಕೊಡುತ್ತದೆ. ಹೀಗೆ ವಿವಿಧೋನ್ಮುಖ ಚಟುವಟಿಕೆಗಳಿಂದ ಕೂಡಿರುವುದರಿಂದ, ಶಿಕ್ಷಣವು ಏಕಮುಖಿಯಾಗದೆ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಮೂರೂ ಕ್ರಮಗಳ ಮೂಲಕ ಬೋಧನೆ ಸಾಗುತ್ತಿತ್ತು.

ಅದರಂತೆ ವರ್ಧಾ ಶಿಕ್ಷಣ ಯೋಜನೆಯ ಗೌರವ ಕಾರ್ಯದರ್ಶಿಗಳಾದ ಶ್ರೀ. ಆರ್ಯ ನಾಯಕಂ ಅವರನ್ನು ಧಾರವಾಡ ಮುನ್ಸಿಪಲ್ ಬೋರ್ಡಿನವರು ಪ್ರಾಥಮಿಕ ಶಾಲೆಗೆಂದು ಕಟ್ಟಿಸಿದ ಭವ್ಯ ಕಟ್ಟಡದ ಉದ್ಘಾಟಣೆಗೆ ಕರೆಯಿಸಿದಾಗ, ವರ್ಧಾ ಶಿಕ್ಷಣ ಯೋಜನೆಯ ಕುರಿತು ಒಂದು ಪ್ರವಚನ ಮಾಡಿ, ಪರಿಚಯ ನೀಡಿದರು. ಆಗ ಸಾಕಷ್ಟು ವಿರೋಧ, ಆಕ್ಷೇಪಣೆ, ಅಭಿಪ್ರಾಯಗಳು ಬಂದವು. ಅವರಿಗೆ ಹಸ್ತವ್ಯವಸಾಯದ ಮತ್ತು ಸಂಪರ್ಕ ಭಾಷೆಯ ಮಹತ್ವ ತಿಳಿಸಿ, ಉಪಜೀವನದ ಮಾರ್ಗ ಆಗುವುದಾಗಿ ತಿಳಿಹೇಳಿ ಸಮಾಧಾನ ಪಡಿಸಿದರು.

ಈ ಯೋಜನೆಯ ಸಮಿತಿಯವರು ಜೂನ್ ತಿಂಗಳಲ್ಲಿ ಬೇರೆಬೇರೆ ಪ್ರಾಂತ್ಯಗಳಿಂದ ಪರಿಣಿತರನ್ನು ಕರೆಯಿಸಿ, ೧೫ ದಿನಗಳ ಕಾಲ, ಭಾಷಾನುಸಾರ ಭಾಗಕ್ಕೊಬ್ಬರಂತೆ, ಮುಂಬಯಿ ಪ್ರಾಂತ್ಯದಿಂದ ಒಟ್ಟು ೫ಜನ ಶಿಕ್ಷಕರು ಈ ಯೋಜನೆಯ ವಿಷಯವಾಗಿ ತರಬೇತಿ ಪಡೆದು ಬರುತ್ತಾರೆ. ಕರ್ನಾಟಕದಿಂದ ಧಾರವಾಡದ ಟ್ರೇನಿಂಗ ಸ್ಕೂಲಿನ ಶಿಕ್ಷಕರಾದ ಶ್ರೀ ಕೊಪ್ಪಳ ಗುಂಡೇರಾಯರು ಈ ತರಬೇತಿಯನ್ನು ಪಡೆದು ಬರುತ್ತಾರೆ. ಆದಷ್ಟು ಶೀಘ್ರದಲ್ಲಿಯೇ ಈ ವರ್ಗಗಳು ಆರಂಭವಾಗುವ ಕುರಿತು ಮತ್ತು ಅದಕ್ಕಾಗಿ ಶಿಕ್ಷಕರು ಸಿದ್ಧತೆ ಮಾಡಿಕೊಳ್ಳಬೇಕಾಗಿ ಸೂಚನೆ ಹೊರಡಿಸಲಾಗುತ್ತದೆ. ಈ ಕುರಿತಾದ ಚಾಲನಾ ಪ್ರಕ್ರಿಯೆಗಳು ಹಗ್ಗಜಗ್ಗಾಟದಲ್ಲಿ ಭರದಿಂದಲೇ ಸಾಗಿವೆ.

ವರ್ಧಾ ಶಿಕ್ಷಣ ಯೋಜನೆಯಲ್ಲಿಯ ಮೂರು ವೈಶಿಷ್ಟ್ಯಗಳೆಂದರೆ ಮಾತೃಭಾಷೆಯಲ್ಲಿಯೇ ಸಾಮಾನ್ಯ ಶಿಕ್ಷಣ, ಹಸ್ತ ವ್ಯವಸಾಯ (ಕೈಕಸುಬು) ಶಿಕ್ಷಣದ ಕೇಂದ್ರಬಿಂದು ಮತ್ತು ಪ್ರಾಂತ್ಯ ಪ್ರಾಂತ್ಯಗಳ ಬಳಕೆ ಸುಗಮಗೊಳಿಸಲು ಹಿಂದುಸ್ತಾನಿ ಭಾಷೆಯ ಕಲಿಕೆ. ೧೯೩೭ರಲ್ಲಿ ಆರಂಭವಾದ ಈ ಯೋಜನೆಯ ಪರಿಕಲ್ಪನೆ ೧೯೩೯ರಲ್ಲಿ ಈ ವಿಶೇಷತೆಗಳೊಂದಿಗೆ ತನ್ನ ಪ್ರಯೋಗವನ್ನು ಒಂಭತ್ತು ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಆರಂಭಿಸಿತು. ೧೯೩೯ರ ಕಾಂಗ್ರೆಸ್ ಮಂತ್ರಿಮಂಡಳ

ರಾಜೀನಾಮೆ ಕೊಟ್ಟಾಗ ಈ ವರ್ಧಾ ಶಿಕ್ಷಣ ಯೋಜನೆ ದಿಕ್ಕೆಟ್ಟು, ಅನಾದರಕ್ಕೆ ಪಾತ್ರವಾಯಿತು. ಆದರೆ ಇದರ ಬೆಂಬಲಿಗರು ದೃಢನಿಶ್ಚಯ, ಛಲ ಬಿಡದ ವಿಕ್ರಮನಂತೆ ತಮ್ಮ ಪ್ರಯತ್ನ ಬಿಡದೆ ಸಾಗಿಸಿದರು. ಕೆಲ ವರ್ಷಗಳ ಅಜ್ಞಾತವಾಸ ಅನುಭವಿಸಿದರೂ, ಕೊನೆಗೆ ಗೆಲುವು ಸಾಧಿಸಿತು. ಹೀಗೆ ಅದರ ಪ್ರಯೋಗಾವಸ್ಥೆ, ಪ್ರತಿಕೂಲಗಳನ್ನು ಮೀರಿ ಫಲ ನೀಡಲು ಮತ್ತು ಮುಖ್ಯವಾಹಿನಿಗೆ ಬರಲು ಹತ್ತು ಹಲವು ವರ್ಷಗಳೇ ಬೇಕಾದವು. ಕೇಂದ್ರದ ಸಾರ್ಜಂಟ ಕಮಿಟಿಯವರು ಪೂರ್ಣ ಪರಿಶೀಲಿಸಿ, ವಿಧಿತವಾದ ಮೇಲೆ ಮಾನ್ಯತೆ ನೀಡಿದರು. ಇದು ಹಳ್ಳಿಗಳಿಂದ ಕೂಡಿದ ಭಾರತದ ಏಳ್ಗೆಯ ದ್ಯೋತಕವಾಗಿತ್ತು. ಆಹಾರ, ಆಶ್ರಯ ಮತ್ತು ಆಚ್ಛಾದನ ಸಿಗುವಂತೆ ಮಾಡುವದೇ ಇದರ ಧ್ಯೇಯವಾಗಿತ್ತು. ಈ ಕುರಿತು ಬದಲಾದ ಸವಿವರವಾದ ಪಠ್ಯಕ್ರಮ ಬಿಡುಗಡೆಯಾಗಿದೆ. ಈ ಎಲ್ಲ ಬೆಳವಣಿಗೆಗಳು 'ಇಂಗ್ಲಂಡನಲ್ಲಿ ಬ್ರಿಟನ್ನವು ಯಾವಾಗಲೂ ಸಾಮ್ರಾಜ್ಯವನ್ನಾಳಬೇಕು; ಎಲ್ಲ ಸಮುದ್ರಗಳ ಒಡೆತನವು ತನ್ನ ಕೈಯಲ್ಲಿರಬೇಕು' ಎಂದು ದಿನಾ ಮುಂಜಾನೆ ವಿದ್ಯಾರ್ಥಿಗಳಿಂದ ಹೇಳಿಸುವಂತೆ ನಮ್ಮಲ್ಲಿಯೂ ದಿನಾ ಮುಂಜಾನೆ ವಿದ್ಯಾರ್ಥಿಗಳಿಂದ 'ಹಿಂದುಸ್ತಾನವು ಸ್ವತಂತ್ರವಾಗಲಿಕ್ಕೇ ಬೇಕು; ರಾಜಾ ಪ್ರತ್ಯಕ್ಷ ದೇವತಃ ಅಲ್ಲ ರಾಜಾ ಪ್ರತ್ಯಕ್ಷ ಸೇವಕಃ' ಎಂದು ದಿನಾಲೂ ಹೇಳಿಸಬೇಕೆಂಬ ಮನೋಭೂಮಿಕೆ ಸಿದ್ಧಗೊಂಡಿರುವುದು ಪರಿಜ್ಞಾನಪೂರಕವಾಗಿ, ಪರೋಕ್ಷವಾಗಿ ಬ್ರಿಟಿಷರ ಆಡಳಿತಕ್ಕೆ ತಣ್ಣನೆ ಎದ್ದ ವಿರೋಧದ ಪ್ರತಿಬಿಂಬವೇ ಆಗಿದೆ. ಇದೇ ೧೯೪೦ರ ಮೇ ತಿಂಗಳಿನಲ್ಲಿ ಮ. ಪ್ರ. ಪೂಜಾರರು ಟ್ರೇನಿಂಗ ಕಾಲೇಜಿನ ಕನ್ನಡ ಪಂಡಿತ ಶಿಕ್ಷಕನ ಪದವಿಯಿಂದ ನಿವೃತ್ತರಾದರು.

ಆದರೆ ಈ ಯೋಜನೆಯನ್ನು ಸಾಲೆಯಲ್ಲಿ ಆರಂಭಿಸಲು ಹೆಚ್ಚು ಹಣ ಮತ್ತು ಸೌಲಭ್ಯಗಳು ಬೇಕು ಎಂಬುದೊಂದು ದೊಡ್ಡ ಸಮಸ್ಯೆಯಾಯಿತು. ಸಾಕಷ್ಟು ದೊಡ್ಡ ಕಟ್ಟಡ ಮತ್ತು ಒಕ್ಕಲುತನಕ್ಕೆ ಭೂಮಿ ಇರಲಿಲ್ಲ. ಆದಾಗ್ಯೂ ಶ್ರೀ ಎಲ್.ಆರ್.ದೇಸಾಯಿ, ಸ್ಪೆಶಲ್ ಆಫೀಸರ್ ಫಾರ್ ಬೇಸಿಕ್ ಎಜ್ಯೂಕೇಶನ್, ಬಾಂಬೆ ಪ್ರೆಸಿಡೆನ್ಸಿ ಇವರ ಮಾರ್ಗದರ್ಶನದಲ್ಲಿ ಮೊದಲಿದ್ದ ಪಠ್ಯಕ್ರಮದೊಂದಿಗೆ ನೂಲು ನೇಯ್ಗೆ ಮುಂತಾದವುಗಳನ್ನು ಸಮ್ಮಿಳಿತಗೊಳಿಸಿ ಹೇಗೆ ಕಲಿಸುವುದು ಎಂಬುದನ್ನು ಲೇಖನಗಳ ಮೂಲಕ ಹೇಳಿಕೊಡಲಾಗಿದೆ. ೧೯೪೨ರ ಡಿಸೆಂಬರನಲ್ಲಿ ವರ್ಧಾ ಶಿಕ್ಷಣ ಕೇಂದ್ರಕ್ಕೆ ಪರಿಶೀಲನಾ ತಂಡವೊಂದು ಭೆಟ್ಟಿ ನೀಡಿ ಪರಿಶೀಲನೆ ಮಾಡುತ್ತದೆ. ೧೯೪೬ರಲ್ಲಿ ಅಂದರೆ ಮೂಲ ಶಿಕ್ಷಣ ಕೇಂದ್ರ(ಬಿಟಿಸಿ)ವು ಈಗ ಪಿಯುಸಿ ಬೋರ್ಡಿನ ಉಪನಿರ್ದೇಶಕರಿರುವ ಕಟ್ಟಡದಲ್ಲಿ ಸ್ಥಾಪನೆಯಾಯಿತು. ಆರು ವರ್ಷಗಳ ನಂತರ ಒಂದನೆಯ ವರ್ಷದ ಇನ್ನೊಂದು ವರ್ಗವನ್ನು ಸೇರಿಸಲಾಗಿದೆ. ಇದುವರೆಗೂ ಕೇವಲ ಎರಡನೆಯ ವರ್ಷದ ಒಂದೇ ವರ್ಗ ಇತ್ತು. ಈ ತರಗತಿಗೆ ಪ್ರಾಥಮಿಕಶಾಲಾ ಪ್ರಮಾಣಪತ್ರ ಪಡೆದವರನ್ನು ಆಯ್ಕೆಮಾಡಿಕೊಂಡು ಈ ತರಗತಿ ಪ್ರಾರಂಭಿಸಿದೆ.

೧೯೪೧ ಜುಲೈನಲ್ಲಿ ಎಸ್ ಜಿ ಬೈಚವಾಳರು ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿಗಳ 'ಶಿಕ್ಷಣ' ವಿಷಯದ ವ್ಯಾಪಕ ದೃಷ್ಟಿಯಿಂದ, ಸವಿಸ್ತಾರವಾದ ಅಭ್ಯಾಸ ಪತ್ರಿಕೆಯನ್ನು ಸಿದ್ಧಗೊಳಿಸಿದ್ದಾರೆ. ೧೯೪೩ ಡಿಸೆಂಬರದಲ್ಲಿ ಸಾರ್ಜಂಟ ವರದಿಯನ್ವಯ ರಾಷ್ಟ್ರೀಯ ಶಿಕ್ಷಣದ ಪುನರ್ಘಟನೆ ಆರಂಭವಾಗಿದೆ. ತರಬೇತಿ ಶಿಕ್ಷಣದಲ್ಲಿ ಆದ ಬದಲಾವಣೆ ಎಂದರೆ ತರಬೇತಿ ಹೊಂದುವ ಅವಧಿ ಎರಡು ಅಥವಾ ಮೂರು ವರ್ಷ ಮತ್ತು ಅವಧಿ ಎಲ್ಲರಿಗೂ ಅನ್ವಯಿಸುವುದು ಹಾಗೂ ತರಬೇತಿ ಹೊಂದಿದ ಶಿಕ್ಷಕ-ಶಿಕ್ಷಕಿಯರ ಸಂಖ್ಯೆಯಲ್ಲಿ ಹೆಚ್ಚಳ ಮಾಡುವುದು ಎಂಬ ಘೋಷಣೆ.

ರಾಜಕೀಯ ಕ್ಷೇತ್ರದಲ್ಲಿ ತೀವ್ರತರವಾದ ಸ್ಥಿತ್ಯಂತರಗಳು, ಬದಲಾವಣೆಗಳು ನಡೆದಂಥ ಸಮಯ. ಬೆಳಗಾವಿಯಲ್ಲಿ ಸ್ಥಾಪಿತವಾದ ವರ್ಧಾ ಅಧ್ಯಾಪನ ಕೇಂದ್ರವು ಧಾರವಾಡಕ್ಕೆ ಸ್ಥಳಾಂತರವಾಗಿ, ಧಾರವಾಡದಲ್ಲಿ ೧೯೪೮ರ ಜೂನನಲ್ಲಿ ಪದವೀಧರ ಮೂಲಶಿಕ್ಷಣ ಕೇಂದ್ರ ಸ್ಥಾಪಿಸಿದೆ. ಅದುವರೆಗೆ BTC-Basic Training Center ಇದ್ದದ್ದು GBTC- Graduate Basic Training Center ಆಯಿತು. ಇದಕ್ಕೆ ಶ್ರೀ ಕೆ.ಬಿ. ತೇರಗಾಂವಕರ ಇವರನ್ನು ಪ್ರಿನ್ಸಿಪಾಲರಾಗಿ ನೇಮಿಸಿದೆ. ವರ್ಧಾ ಶಿಕ್ಷಣ ಯೋಜನೆ ಆರಂಭವಾದಾಗ ಪ್ರಥಮ ಗುಂಪಿನ ಸದಸ್ಯನಾಗಿ ತಾನು ತರಬೇತಿ ಪಡೆದ ಅನುಭವವನ್ನು ಬಿ.ಟಿ. ಪದವಿ ಪಡೆದಿದ್ದ ಶ್ರೀ ವಿರೇಶ. ಹೀರೇಮಠ ಎನ್ನುವವರು ೧೯೪೮ರ 'ಜೀವನ ಶಿಕ್ಷಣ' ಪತ್ರಿಕೆಯ ಮೂಲಕ ಹಂಚಿಕೊಳ್ಳುತ್ತಾರೆ. ಈ ಆಧಾರದ ಮೇಲಿಂದ ಧಾರವಾಡದ ಟ್ರೇನಿಂಗ ಕಾಲೇಜಿನಲ್ಲಿ ಈ 'ಪದವೀಧರ ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರ' ಸ್ಥಾಪನೆಯಾಗಿ, ತರಬೇತಿ ಹೊಂದಿದ ಪದವೀಧರರಿಗೆ ವರ್ಧಾ ಯೋಜನೆಯ ಶಿಕ್ಷಣವನ್ನು (ಸೇವಾಗ್ರಾಮ ಪದ್ಧತಿಯಲ್ಲಿ) ಕೊಡುವ ಯೋಜನೆ ಆರಂಭವಾದುದು ೧೯೪೫ ಜುಲೈ ೧ರಿಂದ ಎಂಬುದು ತಿಳಿದು ಬರುತ್ತದೆ. 'ಅಲ್ಲಿಯ ಹೊಸ ಮುಖ್ಯ ಅಧ್ಯಾಪಕರು ಯಾವ ಅಧಿಕಾರ-ಶೀವಿಯಿಂದಲೂ ಅಲ್ಲಿ ನಮ್ಮನ್ನು ಸ್ವಾಗತಿಸಲಿಲ್ಲ. ಅಧಿಕಾರ ವಾಣಿಯಿಂದ ಸುಗ್ರೀವಾಜ್ಞೆ ಹೊರಡಿಸಲಿಲ್ಲ. ಮೌನದಿಂದ ಮಾಡುತ್ತ ಕಲಿಯುವುದೇ ರಾಷ್ಟ್ರೀಯ ಶಿಕ್ಷಣದ ಗುರಿ ಎಂದೂ, ಪ್ರತ್ಯಕ್ಷ ಅನುಭವವೇ ಅದರ ಸಾರವೆಂದೂ, ಕೃತಿ ಮೂಲಕವಾಗಿ ಹಾಗೂ ಪ್ರಾಸಂಗಿಕವಾಗಿ ಪಡೆಯುವ ಅನುಭವವೇ ಜ್ಞಾನವೆಂದೂ ತಿಳಿ ಹೇಳಿ ಈ ಹೊಸ ಕೇಂದ್ರವು "ವಿಚಾರ ಹಾಗೂ ಅನುಭವ ವಿನಿಮಯ ಸಂಸ್ಥೆ" ಎಂದು ಹೇಳಿದರು.... ಈ ಹೊಸ ಶಿಕ್ಷಣದ ಸಂಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಪದ್ಧತಿಯಿಂದ ಬೇರೆಬೇರೆ ಖಾತೆಗಳನ್ನು ನಿರ್ಮಿಸಿ ವಿವಿಧ ಮಂತ್ರಿಗಳ ಆಯ್ಕೆ ಮಾಡಿಕೊಂಡೆವು......'ಹೀಗೆ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ.

೧೯೪೯ ಫೆಬ್ರುವರಿಯಲ್ಲಿ 'ಪ್ರಾಥಮಿಕ, ಮಾಧ್ಯಮಿಕ ಹಾಗೂ ಮೂಲಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ ಅಭ್ಯಾಸ ಪತ್ರಿಕೆಯು' ಪ್ರಕಟವಾಗಿದೆ. ಇದರಲ್ಲಿ ವಿದ್ಯಾರ್ಥಿಗಳನ್ನು ಪ್ರಾಥಮಿಕದಿಂದ ಮಾಧ್ಯಮಿಕಕ್ಕೆ ಮತ್ತು ಮಾಧ್ಯಮಿಕದಿಂದ ಪ್ರಾಥಮಿಕಕ್ಕೆ

ವರ್ಗಾಯಿಸಲು ಆಸ್ಪದವಿರುವಂತೆ ಮತ್ತು ಒಳತಿರುಳು ತದ್ರೂಪವಾಗಿದ್ದು, ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಲು ಅವಕಾಶವಿರುವಂತೆ ಅಭ್ಯಾಸ ಪತ್ರಿಕೆಯ ರೂಪುರೇಷೆಗಳನ್ನು ತಯಾರಿಸಲಾಗಿದೆ. ಇದರಲ್ಲಿ 'ಮೂಲೋದ್ಯೋಗ'ವು ಮಹತ್ವದ ವಿಷಯವಾಗಿ ಪರಿಗಣಿಸಲ್ಪಟ್ಟಿತು. ಹೀಗೆ ಉದ್ಯೋಗ ಪ್ರಧಾನ ಜೀವನ ಶಿಕ್ಷಣ ತತ್ವಗಳಲ್ಲಿ ವರ್ಧಾ ಅಧ್ಯಾಪನಾ ಕೇಂದ್ರವು ಲೀನವಾಯಿತು.

ಅಗಸ್ಟ ೧೯೭೫ರಲ್ಲಿ ಸೇವಾ ನಿವೃತ್ತಿ ಹೊಂದಲಿದ್ದ ಶ್ರೀ ಹ ಗ ಜೋಶಿಯವರು ಮಾರ್ಚ ೧೯೭೫ ಸಂ.೧೧೧ ಸಂಚಿಕೆ ೩ ರ ಜೀವನ ಶಿಕ್ಷಣ ಪತ್ರಿಕೆಯ ಸಂಪಾದಕೀಯ 'ನಾವ್ ಬರ್ತೇವಿನ್'ದಲ್ಲಿ ತಮ್ಮ ಸೇವಾ ಇತಿಹಾಸ ಕುರಿತು ಬರೆಯುತ್ತ ವರ್ಧಾಅಧ್ಯಾಪನ ಕೇಂದ್ರಕ್ಕೆ ಹಾಜರಾದದ್ದು ಮುಂತಾದುವನ್ನು ನೆನೆಸಿಕೊಳ್ಳುತ್ತಾರೆ. '೧೯೪೬ನೆಯ ಇಸ್ವಿಯ ನವೆಂಬರ ತಿಂಗಳಲ್ಲಿ, ಸರಕಾರದ ನನ್ನ ಪ್ರಥಮ ಸೇವೆ ಈ ಸಂಸ್ಥೆಯಲ್ಲಿ ಪ್ರಾರಂಭವಾಯಿತು. ೧೯೪೭ರಲ್ಲಿ ನಾನು ಬಿಡುಗಡೆಯಾಗಿ ಬೆಳಗಾವಿಗೆ ಬಿ.ಟಿ. ತರಬೇತಿಗೆ ಹೋದೆನು. ಜೀವನಶಿಕ್ಷಣ ತರಬೇತಿಯನ್ನು ಪಡೆದು ಮರಳಿದ ನಂತರ ೧೯೪೮ನೆಯ ಜುಲೈ ೧ನೆಯ ತಾರೀಖಿಗೆ ಇದೇ ಸಂಸ್ಥೆಯ ಆವಾರದಲ್ಲಿದ್ದ ವರ್ಧಾ ಅಧ್ಯಾಪನ ಕೇಂದ್ರಕ್ಕೆ ನನ್ನ ನೇಮಣೂಕಿ ಆಯ್ತು.' ಎಂದು ಹೇಳುವಲ್ಲಿ ಇಲ್ಲಿಯ ಆವರಣದಲ್ಲಿ ವರ್ಧಾ ಅಧ್ಯಾಪನ ಕೇಂದ್ರ ಇದ್ದ ಬಗೆಗೆ ಮತ್ತು ಅಲ್ಲಿ ಸೇವೆ ಸಲ್ಲಿಸಿದ ಬಗೆಗೆ ಖಚಿತ ಮಾಹಿತಿ ಸಿಗುತ್ತದೆ.

ಧಾರವಾಡದ ಪದವೀಧರ ಜೀವನ ಶಿಕ್ಷಣ ಕೇಂದ್ರದಲ್ಲಿ ಕರ್ನಾಟಕದ ಎಲ್ಲ ೫ ಸರಕಾರಿ ಮತ್ತು ೧೩ ಖಾಸಗಿ ತರಬೇತಿ ಸಂಸ್ಥೆಗಳ **ಪ್ರಿನ್ಸಿಪಾಲರಿಗೆ** ಮೂಲ ಶಿಕ್ಷಣದಲ್ಲಿ ೮-೧೦-೧೯೫೦ ರಿಂದ ೬-೧೧-೧೯೫೦ ರವರೆಗೆ, ನಾಲ್ಕು ವಾರಗಳ ತರಬೇತಿಯನ್ನು ನೀಡಲಾಗಿದೆ. ಶಾಲೆಗಳ ಉಸ್ತುವಾರಿಗಾಗಿ ಮೂಲ ಶಿಕ್ಷಣದ ಸ್ಥೂಲ ದರ್ಶನವಾದರೂ ಇವರಿಗೆ ಬೇಕು ಎಂಬ ಉದ್ದೇಶದಿಂದ ಈ ತರಬೇತಿ ಹಮ್ಮಿಕೊಳ್ಳಲಾಗಿತ್ತು. (ಕ.ಪ್ರಾ.ಶಿ. ೧೯೫೦, ನವೆಂಬರ್, ೯೦-೬, ಪುಟ ೨೨-೨೩)

ಈಗ ಪ್ರಸ್ತುತ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ಹಿಂಬದಿಗೆ ಒಂದು ಅಂತಸ್ತಿನ ಕಟ್ಟಡವಿದೆ. ನೆಲಮಹಡಿಯಲ್ಲಿ ಪ್ರಾಥಮಿಕ ಶಾಲೆಯ ತರಗತಿಗಳು ನಡೆಯುತ್ತಿದ್ದು, ಮೇಲಂತಸ್ತಿನಲ್ಲಿ ಗ್ರಂಥಾಲಯವಿದೆ. ಈ ಗ್ರಂಥಲಯವಿರುವ ಅಂತಸ್ತನ್ನೇ ವರ್ಧಾ ಅಧ್ಯಾಪನ ಕೇಂದ್ರವಾಗಿ ಬಳಸಿಕೊಳ್ಳಲಾಗುತ್ತಿತ್ತು ಮತ್ತು ಅದನ್ನು 'ವರ್ಧಾ ಅಧ್ಯಾಪನಾ ಅಟ್ಟ'ವೆಂದು ಕರೆಯುತ್ತಿದ್ದರು ಎಂಬುದನ್ನು ಹಿರಿಯರಾದ ಶ್ರೀ ಶಿವಶಂಕರ ಹೀರೇಮಠ ಮತ್ತು ಶ್ರೀ ರಾಮಚಂದ್ರ ಪಾಟೀಲರು ನೆನೆಸಿಕೊಳ್ಳುತ್ತಾರೆ.

ಈಗಾಗಲೇ ತರಬೇತಿ ಸಂಸ್ಥೆಯಲ್ಲಿ ಮತ್ತು ಶಾಲೆಗಳಲ್ಲಿ ನೂಲುವ ನೇಯುವ ಮೂಲೋದ್ಯೋಗವು ಕಲಿಸಲ್ಪಡುತ್ತಿತ್ತು. ಅದರೊಂದಿಗೆ ನೂಲಿಗೆ ಮತ್ತು ಬಟ್ಟೆಗೆ ಬಣ್ಣ ಹಾಕುವ ಕೌಶಲ್ಯದ ಬೋಧನಾಭ್ಯಾಸ ಶಾಲೆಗಳಲ್ಲಿ ಇರಬೇಕೆಂದು ೧೯೫೫ರಲ್ಲಿ ಚಿಂತಿಸಿದರೂ, ಅದರ ಅಧಿಕ ಖರ್ಚು ಮತ್ತು ಶ್ರಮದಿಂದಾಗಿ ಅದು ಕಷ್ಟವೆನಿಸಿತು. ಹಾಗಾಗಿಯೇ ಮುಂಬಯಿ ಸರಕಾರ ರಾಜ್ಯದಲ್ಲಿ ಪ್ರಯೋಗಾರ್ಥವಾಗಿ ಮೂರು ಕೇಂದ್ರಗಳನ್ನು ಸ್ಥಾಪಿಸಿತು. ಅದರಲ್ಲಿ ಒಂದು ಕೇಂದ್ರ ಧಾರವಾಡದ ಟ್ರೇನಿಂಗ ಕಾಲೇಜಿನಲ್ಲಿ ೧೫-೦೭-೧೯೫೫ ರಂದು ಸ್ಥಾಪಿಸಲ್ಪಟ್ಟಿತು. ಇಲ್ಲಿ ಧಾರವಾಡ ಜಿಲ್ಲೆಯ ಎಲ್ಲ ಮೂಲೋದ್ಯೋಗ ಶಾಲೆಗಳ ನೂಲಿಗೆ ಬಣ್ಣ ಹಾಕಿ ಕೊಡುವ ಯೋಜನೆ ಮಾಡಲಾಯಿತು. (ಕನ್ನಡ ಪ್ರಾಥಮಿಕ ಶಿಕ್ಷಣ, ೧೯೫೫ ಅಗಸ್ಟ, ಪುಟ ೧೫ ಮತ್ತು ೧೬). ೧೯೫೧ರಲ್ಲಿ Basic Training Centerನ ಪ್ರಥಮ ವರ್ಗದ ಅಧಿಕಾರಿಯ ಅಧೀನದಲ್ಲಿ ಕಾರ್ಯ ಪ್ರವೃತ್ತವಾಯಿತು.

ಕರ್ನಾಟಕ ವಿಶ್ವವಿದ್ಯಾಲಯ ಅಸ್ತಿತ್ವ, ಅನುಷ್ಠಾನ

'೧೯೨೦ರಲ್ಲಿ ಸ್ಯಾಡ್ಲರ್ ಸಮಿತಿಯು ಮತ್ತು ೧೯೨೪ರಲ್ಲಿ ಶೆಟಲವಾಡ ಸಮಿತಿಯು ಪ್ರಾದೇಶಿಕ ವಿಶ್ವವಿದ್ಯಾಲಯದ ತತ್ವಕ್ಕೆ ಮಾನ್ಯತೆಯನ್ನಿತ್ತವು. ಮದ್ರಾಸ ಶಾಸನ ಸಭೆಯಲ್ಲಿ ೧೯೨೬ರಲ್ಲಿ ಆಂದ್ರ ವಿಶ್ವವಿದ್ಯಾಲಯದ ಗೊತ್ತುವಳಿ ಮಂಡನೆಯಾದಾಗ, ಬಳ್ಳಾರಿ ಆಂದ್ರಕ್ಕೆ ಜೋಡಿಸಲ್ಪಟ್ಟದ್ದರಿಂದ, ಕನ್ನಡಿಗರು ವಿರೋಧಿಸಿದರು. ಆಗ ಕರ್ನಾಟಕ ವಿಶ್ವವಿದ್ಯಾಲಯದ ಸಮಿತಿಯೊಂದು ರಚನೆಯಾಯಿತು. ಮುಂದೆ ೧೯೪೨ರಲ್ಲಿ ಬೆಳಗಾವಿಯಲ್ಲಿ ನಡೆದ ಸಮ್ಮೇಲನದಲ್ಲಿ ಒಂದು ಸಮಿತಿ ಸ್ಥಾಪಿತವಾಯಿತು. ೧೯೪೩ರಲ್ಲಿ ಧಾರವಾಡದಲ್ಲಿ ಒಂದು ಸಮ್ಮೇಲನ ನಡೆದು, ಅದರಲ್ಲಿಯೂ ಒಂದು ಸಮಿತಿ ಸ್ಥಾಪಿತವಾಯಿತು. ಎರಡೂ ಸಮಿತಿಗಳೂ ಸೇರಿ, ಪ್ರಚಾರ ಕಾರ್ಯ ಕೈಗೊಂಡು, ಪ್ರಶ್ನಾವಲಿಯನ್ನು ಸಿದ್ಧಪಡಿಸಿ ಜನರ ಅಭಿಪ್ರಾಯ ಸಂಗ್ರಹಿಸಿ, ೧೯೪೬ರಲ್ಲಿ ಒಂದು ಶಿಷ್ಟಮಂಡಳವು ರಚನೆಯಾಗಿ, ಅದು ಮುಂಬಯಿಯ ಮುಖ್ಯ ಮತ್ತು ಶಿಕ್ಷಣ ಮಂತ್ರಿಗಳನ್ನು ಭೇಟ್ಟಿಯಾಗಿ ಬೇಡಿಕೆಯನ್ನು ಮಂಡಿಸಿದವು. ತತ್ಪರಿಣಾಮವಾಗಿ ಮುಂಬಯಿ ಸರಕಾರವು ೧೯೪೭ ಏಪ್ರೀಲ್ ೧೭ರಂದು ನ್ಯಾ. ಲೋಕೂರರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯ ಸಮಿತಿ ರಚಿಸಿತು. (ಇದರ ಕಾರ್ಯ ತೀವ್ರತೆಯಿಂದಾಗಿ ಬಳ್ಳಾರಿ ಆಂದ್ರ ವಿಶ್ವವಿದ್ಯಾಲಯದಿಂದ ಹೊರಗುಳಿಯಿತು) ೧೯೪೮ರಲ್ಲಿ ಈ ಸಮಿತಿ ತನ್ನ ವರದಿಯನ್ನೊಪ್ಪಿಸಿತು. ೧೯೪೯ರಲ್ಲಿ ಕಾಯಿದೆಯಾಯಿತು. ಇದರನ್ವಯ ಮೊದಲು ಮುಂಬಯಿಯಲ್ಲಿ ತನ್ನ ಕಾರ್ಯವನ್ನು ಆರಂಭಿಸಿ, ನಂತರ **ಧಾರವಾಡದ ಗಂಡುಮಕ್ಕಳ ಟ್ರೇನಿಂಗ ಕಾಲೇಜಿಗೆ ಸ್ಥಳಾಂತರ ಹೊಂದಿ,** ೧೯೫೦ ಮಾರ್ಚ ೧ ರಂದು ಕರ್ನಾಟಕ ವಿಶ್ವವಿದ್ಯಾಲಯ ಅಸ್ಥಿತ್ವಕ್ಕೆ ಬಂದಿತು'[೬೭] ಕರ್ನಾಟಕ ವಿಶ್ವ ವಿದ್ಯಾಲಯ ಕಾಯಿದೆ ೧೯೪೯ರ ಪ್ರಕಾರ ಅಕ್ಟೋಬರ, ೧೯೪೯ರಲ್ಲಿ ಸ್ಥಾಪನೆಗೊಂಡು, ಮಾರ್ಚ ೧,

೧೯೫೦ರಲ್ಲಿ ಕಾರ್ಯಾರಂಭ ಮಾಡಿದ್ದು, ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಆವರಣದಲ್ಲಿಯೇ. ಹಾಗಾಗಿ 'ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಆವರಣ ಉತ್ತರ ಕರ್ನಾಟಕದ ಮಹೋನ್ನತ ವಿದ್ಯಾಸಂಸ್ಥೆಗಳಿಗಿದು ಮಡಿಲು' ಎಂದರೆ ತಪ್ಪಾಗಲಾರದು. ವಿ. ಕೃ. ಗೋಕಾಕರು ಹೇಳುವಂತೆ ಖಂಡಿತವಾಗಿಯೂ "ಟ್ರೇನಿಂಗ್ ಕಾಲೇಜಿನ ಚರಿತ್ರೆ ಎಂದರೆ ಉತ್ತರ ಕರ್ನಾಟಕದ ಇತಿಹಾಸ ಮತ್ತು ಭೂಗೋಲ"ವೇ ಆಗಿದೆ. ಆದರೆ ಟೊಂಗೆ, ಟಿಸಿಲು, ಬಿಳಲುಗಳು ಬೆಳೆದು ಬೇರಿಗೆ ಕೊಡಲಿ ಪೆಟ್ಟು ನೀಡಿದ ಸಂದರ್ಭಗಳನ್ನು ಟ್ರೇನಿಂಗ ಕಾಲೇಜ ಎದುರಿಸಿದೆ. ಉನ್ನತ ಶಿಕ್ಷಣ ಪ್ರಸಾರದ ಕಾರಣಕ್ಕೆ ಪ್ರಾರಂಭಿಕ, ಪ್ರಾಥಮಿಕ, ಪ್ರಾತಿನಿಧಿತ ಸಂಸ್ಥೆಯನ್ನು ಮುಚ್ಚುವ ವಿಚಾರಗಳು ನಡೆದದ್ದಿದೆ ಎಂಬುದು ಈ ಮುಂದಿನ ಸಂಪಾದಕೀಯ ಆಶಯದಿಂದ ವಿಧಿತಗೊಳ್ಳುತ್ತದೆ.



ಸಂಪಾದಕ ಮಂಡಲ

ಸಂಚಾಲಕರು. ಶ್ರೀ ಬಿ. ಎನ್. ಮೀಮಾಂಸಿ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ
ಪ್ರಧಾನ ಸಂಪಾದಕರು: **ಶ್ರೀ. ಕೆ. ಜಿ. ಕುರ್ತಕೋಟಿ,** ಬಿ.ಎ.,ಬಿ.ಟಿ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,ಧಾರವಾಡ.

ಸಹಸಂಪಾದಕರು :

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ,ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ,ಧಾರವಾಡ.
ಶ್ರೀ. ಜಿ. ಎಂ. ಶಿಂತ್ರಿ, ರಿಟಾಯರ್ಡ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೪೦	ನವಂಬರ ೧೯೫೦	ಸಂಚಿಕೆ ೬

ಸಂಪಾದಕೀಯ

★

ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಪದವೀದಾನ ಸಮಾರಂಭ

ಕರ್ನಾಟಕದ ವಿಶ್ವವಿದ್ಯಾಲಯದ ಪ್ರಥಮ ಸಮಾವರ್ತನ ಸಂಸ್ಕಾರವು ೧೯೫೦ ಆಕ್ಟೋಬರ ೧೬ ನೆಯ ತಾರೀಖಿನ ದಿನ ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಜನರಲ್ ಹಾಲ್‌ದಲ್ಲಿ ವಿಜೃಂಭಣೆಯಿಂದ ನೆರವೇರಿತು. ಮುಂಬಯಿ ರಾಜ್ಯದ ರಾಜ್ಯಪಾಲ (ಗವ್ಹರ್ನರ)ರೂ ಕರ್ನಾಟಕ ವಿಶ್ವವಿದ್ಯಾಲಯದ ಕುಲಗುರುಗಳೂ ಆಗಿರುವ ಸರ್ ಮಹಾರಾಜಾಸಿಂಗ ಅವರು ದೀಕ್ಷಾಂತ ಭಾಷಣವನ್ನಿತ್ತರು. ಈ ಸಮಾರಂಭಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಸಿನೆಟ್ ಹಾಗು ಸಿಂಡಿಕೇಟದ ಸದಸ್ಯರೂ ಇತರ ಸದ್ಗೃಹಸ್ಥರೂ ಮಹಿಳೆಯರೂ ಆಗ ಮಿಸಿದ್ದರು. ಸಮಾವರ್ತನ ಸಂಸ್ಕಾರ ಮಂದಿರವು ಕಿಕ್ಕಿರಿದು ತುಂಬಿತ್ತು. ಸಮಯಕ್ಕೆ ಸರಿಯಾಗಿ ಪದವೀಧರರನ್ನೊಳಗೊಂಡ ಮೆರವಣಿಗೆಯು ವಿಶ್ವವಿದ್ಯಾಲಯದ ಕಚೇರಿಯಿಂದ ಹೊರಟು ಸಭಾಭವನಕ್ಕೆ ಬಂದಿತು. ಮೊದಲು ಉಪಕುಲಗುರುಗಳಾದ ಶ್ರೀ. ಆರ್. ಎ. ಜಹಾಗೀರದಾರ ಅವರು ಕರ್ನಾಟಕ ವಿಶ್ವವಿದ್ಯಾಲಯವು ಸಾಧಿಸಿದ ಕಾರ್ಯಗಳನ್ನು ವಿವರಿಸಿ ಜನತೆಯಿಂದ

ಪ್ರಾಥಮಿಕ ಶಿಕ್ಷಣ

ಹಾಗೂ ಸರಕಾರದಿಂದ ಧನಸಹಾಯವನ್ನು ಕೋರಿ ಪದವೀಧರರಿಗೆ ಪದವಿಗಳನ್ನು ಕೊಡಲು ಬಿನ್ನವಿಸಿಕೊಂಡರು.

ಕುಲಗುರುಗಳು ಪದವೀಧರರಿಗೆ ಪದವಿಗಳನ್ನು ಕೊಟ್ಟರು ಮತ್ತು ಶ್ರೀ. ಆರ್. ಎ. ಜಾಗಿರದಾರರ ಚಿನ್ನದ ಪಾರಿತೋಷಕಗಳನ್ನು ಈ ವರುಷದ ಕರ್ನಾಟಕ ವಿಶ್ವವಿದ್ಯಾಲಯದ ಉಚ್ಚ ಹಾಗೂ ಉಚ್ಚತಮ ಪರೀಕ್ಷೆಗಳಲ್ಲಿ ಪ್ರಥಮ ಬಂದವರಿಗೆ ಸಲ್ಲಿಸಲಾಯಿತು.

ಕುಲಗುರುಗಳು ತಮ್ಮ ದೀಕ್ಷಾಂತ ಭಾಷಣದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪದವೀಧರರು ತಾವು ಪಡೆದ ಯೋಗ್ಯತೆಗೆ ತಕ್ಕಂತೆ ರಾಷ್ಟ್ರಕ್ಕೆ ಮತ್ತು ಶಿಕ್ಷಣದ ಪ್ರಗತಿಗೆ ಸೇವೆ ಸಲ್ಲಿಸಬೇಕೆಂದು ಉಪದೇಶಿಸಿದರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಜನತೆ ಧನಸಹಾಯ ಮಾಡಬೇಕು ಎಂದು ಹೇಳಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಏಳ್ಗೆಯನ್ನು ಕೋರಿದರು.

ಕರ್ನಾಟಕ ವಿಶ್ವವಿದ್ಯಾಲಯದ ಕಟ್ಟಡ

ಕರ್ನಾಟಕ ವಿಶ್ವವಿದ್ಯಾಲಯವು ಈಗ ಧಾರವಾಡದ ---- ಗಂಡುಮಕ್ಕಳ ಟ್ರೇನಿಂಗ ಕಾಲೇಜದ ಒಂದು ಭಾಗದಲ್ಲಿ ತನ್ನ ಕಾರ್ಯಕಲಾಪಗಳನ್ನು ಸಾಗಿಸುತ್ತಿ[ದೆ]. ಅದು ತನ್ನ ಸ್ವತಂತ್ರ ಕಟ್ಟಡವನ್ನು ಮುಂದಿನ ವರುಷದೊಳಗಾಗಿ ಸ್ಥಾಪಿಸಿಕೊಳ್ಳುವುದು ವಿಹಿತವಾದುದು. ಟ್ರೇನಿಂಗ ಕಾಲೇಜನ್ನು ಬಂದು ಮಾಡಿಸಿ ತಾನು ಕಾಲೇಜದ ಕಟ್ಟಡವನ್ನು ಆಕ್ರಮಿಸಿಕೊಳ್ಳುವುದು ಸೂಕ್ತವಾಗಲಾರದು. ಟ್ರೇನಿಂಗ ಕಾಲೇಜುಗಳು ಉಚ್ಚ ವಿದ್ಯಾಭ್ಯಾಸಕ್ಕೆ ತಳಹದಿಯಾಗಿವೆ. ಇವನ್ನು ಬಂದು ಮಾಡಿದೆಂವರೆ ಮರದ ಮೇಲೆ ಕುಳಿತು ಬೊಡ್ಡೆಯನ್ನು-ಬೇರುಗಳನ್ನು ಕತ್ತರಿಸಿದಂತೆಯೆ ಸರಿ ಎಂದು ಹೇಳಿದ ತಪ್ಪಾಗಲಾರದು. ಇದರಿಂದ ನಾವು ಕರ್ನಾಟಕ ವಿ[ಶ್ವ]ವಿದ್ಯಾಲಯಕ್ಕೆ ಸ್ಥಳವೀಯಲು ಅಪೇಕ್ಷಿಸುವುದಿಲ್ಲವೆಂದು ಯಾರೂ ತಪ್ಪು ಭಾವಿಸಬಾರದಾಗಿ ಬಿನ್ನವಿಸಿಕೊಳ್ಳುತ್ತೇವೆ. ನಮ್ಮ ಕಟ್ಟಡದಲ್ಲಿ ವಿಶ್ವವಿದ್ಯಾಲಯವು ಇರಲಿ, ಬೇಗನೇ ತನ್ನ ಸ್ವತಂತ್ರ ಕಟ್ಟಡಗಳನ್ನು ನಿರ್ಮಿಸಿಕೊಳ್ಳಲಿ ಮತ್ತು ಅತ್ಯಂತ ಹಳೆಯ ಟ್ರೇನಿಂ[ಗ] ಸಂಸ್ಥೆಯನ್ನು ಇಲ್ಲಿಂದ ಬೇರೆಡೆಗೆ ಸ್ಥಳಾಂತ[ರಿ]ಸಲು ಕಾರಣೀಭೂತವಾಗದಿರಲಿ ಎಂದಿಷ್ಟೇ ನಮ್ಮ ಹಾರೈಕೆ.

ಕಟ್ಟಡಗಳು ಮತ್ತು ನಿರ್ಮಿಸಿದ ಅವಧಿ:

ಶಿಕ್ಷಣ ಇಲಾಖೆಗೆಂದೇ ಸವಣೂರು ನವಾಬರಿಂದ ಖರೀದಿಸಿದ ನೆಲದಲ್ಲಿ ಟ್ರೇನಿಂಗ ಕಾಲೇಜಿದೆ. ೧೮೭೫ರಿಂದ ಆರಂಭವಾಗಿ ಕಾಲಕಾಲಕ್ಕೆ ಮತ್ತು ಅವಶ್ಯಕತೆಗೆ ತಕ್ಕಂತೆ ಟ್ರೇನಿಂಗ ಕಾಲೇಜಿನ ಆವರಣದಲ್ಲಿರುವ ಕಟ್ಟಡಗಳು ನಿರ್ಮಾಣಗೊಂಡಿವೆ. ಅಗತ್ಯಕ್ಕೆ ತಕ್ಕಂತೆ ಆಗಾಗ ಅನುದಾನವನ್ನು ಕೇಳುವುದು, ಕೊಡುವುದು, ಖರ್ಚುಮಾಡುವುದು ಮತ್ತು ಕಟ್ಟಡವನ್ನು ಅಭಿವೃದ್ಧಿ ಮಡುವುದು ಹೀಗೆ ಕಾಲಕಾಲಕ್ಕೆ ನಡೆದೇ ಇವೆ. ಹಾಗೆಯೇ ಆ ಕಾಲದಲ್ಲಿಯ ಪ್ರಥಮ ಮತ್ತು ಏಕೈಕ ಸರಕಾರಿ ಕಟ್ಟಡವಾದ್ದರಿಂದ ಒಮ್ಮೆ ಜೈಲಾಗಿ(೧೮೭೮) ಇನ್ನೊಮ್ಮೆ ಮಾನಸಿಕ ಆಸ್ಪತ್ರೆಯಾಗಿ, ಮತ್ತೊಮ್ಮೆ ಪ್ಲೇಗ ಪರಿಹಾರ ಕೇಂದ್ರವಾಗಿ, ವಸತಿಗೃಹವಾಗಿ ರೂಪ ಬದಲಿಸಿಕೊಂಡಿದ್ದಿದೆ. ಉನ್ನತ ಸಂಸ್ಥೆಗಳಿಗೆ ಮಡಿಲಾದ ಕಾರಣಕ್ಕೆ ತಾನೇ ನಿರ್ಮೂಲಗೊಳ್ಳುವಷ್ಟರ ಮಟ್ಟಿಗೂ ಈ ಟ್ರೇನಿಂಗ ಕಾಲೇಜಿಗೆ ಆಪತ್ತು ಒದಗಿ ಬಂದದ್ದಿದೆ. ನೆಹರು ನಿವಾಸ ೧೯೦೭ರಲ್ಲಿ ನಿರ್ಮಾಣಗೊಂಡಿದುದಕ್ಕೆ ಅದರದ್ದೇ ಒಂದು ಕಲ್ಲಿನಲ್ಲಿ ೧೯೦೭ ಎಂದು ಬರೆದುದು ಸಾಕ್ಷಿ ನೀಡುತ್ತದೆ.

ಕನ್ನಡ ಶಾಲಾ ಪತ್ರಕ ೧೯೪೨ ನವೆಂಬರ, ೮೧/೮ ಪ್ರಕಾರ ವಿನಾಯಕರಾವ ಜೋಶಿಯವರು ೧೯೪೨ರ ನವೆಂಬರ ೧೦ನೆಯ ತಾರೀಖಿಗೆ ಮರಣ ಹೊಂದಿದಾಗ, ಅವರ ಸ್ಮರಣೆಯಲ್ಲಿ "ಇವರ ಆಳಿಕೆಯಲ್ಲಿ ಟ್ರೇನಿಂಗ ಕಾಲೇಜವು ತುಂಬ ಅಭಿವೃದ್ಧಿ ಹೊಂದಿತು. ಕಾಲೇಜದ ಮುಖ್ಯ ಕಟ್ಟಡವೂ, ಹೊಸ ವಸತಿ ಗೃಹವೂ ಇವರ ಕಾಲದಲ್ಲಿಯೇ ನಿರ್ಮಿತವಾದವು" ಎಂದಿದೆ.

ಅನುಕ್ರಮವಾಗಿ ನೋಡುವುದಾದರೆ ೧೮೭೫ರಲ್ಲಿ ಪ್ರಾಚಾರ್ಯರ ಮನೆ ಮತ್ತು ಕೊಠಡಿಗಳು, ೧೯೬೫೬/- ರೂಗಳಲ್ಲಿ, ಹೆಡ್ ಮಾಸ್ತರ ಮನೆ ೧೪೪೦/- ರೂಗಳಲ್ಲಿ, ಪ್ರ್ಯಾಕ್ಟಿಸಿಂಗ ಶಾಲೆ ೧೨೦೮೬/- ರೂಗಳಲ್ಲಿ, ವ್ಯಾಯಾಮ ಶಾಲೆ ೨೧೭೯/- ರೂಗಳಲ್ಲಿ, ೧೮೯೮ರಲ್ಲಿ ಸಾಯಿನ್ಸ ಲ್ಯಾಬ್ ಮತ್ತು ಸ್ಟೋರ್ಸಗಳು ೧೭೬೬೫/- ರೂಗಳಲ್ಲಿ, ೧೯೦೨ರಲ್ಲಿ ಊಟದ ಮನೆ, ೭೩೨೫/- ರೂಗಳಲ್ಲಿ, ೧೯೫೯-೬೦ರಲ್ಲಿ ಪೈನ್ ಆರ್ಟ್ಸ ಕಟ್ಟಡ ೫೭೦೦೦/- ರೂಗಳಲ್ಲಿ ಮತ್ತು ಮ್ಯೂಜಿಯಂ ೧೨೪೪೫/- ರೂಗಳಲ್ಲಿ ಕಟ್ಟಲಾಗಿವೆ'.[೯]

ಹೀಗೆ ಆಗಾಗ ಬೆಳೆದು ನಿಂತ ಕೆಲವು ಕಟ್ಟಡಗಳ ನಿರ್ಮಾಣದ ಅಧಿಕೃತ ದಾಖಲೆಗಳುDirectorate of Archives, government of maharastra, 156 sir Cowasjee Jahangeer Readymoney Building (Elphinston college building) Mahatma gandhi road, kala godha, fort, MUMBAI-400032ನಲ್ಲಿ ಲಭಿಸಿವೆ. ಅವು ಈ ಮುಂದಿನಂತಿವೆ:

- **PWD(Gen) vol. 365/ 1910-14** ಈ ಕಡತದ ಪ್ರಕಾರ

೧- **volume no- 365, page number S-5** ರಿಂದಮತ್ತು **S-13**ರವರೆಗೆ

ನಂ. ೯೫೨೩, ದಿನಾಂಕ ೬-೧೨-೧೯೦೯ರ ಸಂಖ್ಯೆ ಕಡತದಲ್ಲಿ

ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಆವರಣದಲ್ಲಿರುವ ೧- ಭಾವಿಯನ್ನು ಇನ್ನೂ ೧೫ ಅಡಿ ಕೊರೆಯಿಸುವ, ೨- ಎತ್ತುಗಳ ಕೊಟ್ಟಿಗೆ ಕೋಣೆಯ ನಕ್ಷೆಯನ್ನು ಬದಲಿಸುವ ಮತ್ತು ೩- ಉದ್ದನೆಯ ನೀರಿನ ಕಾಲುವೆಯನ್ನು ಮಾಡುವ ಸಲುವಾಗಿ ವೆಚ್ಚ ರೂ ೩೮೧೦/- ಎಂದು ಅಂದಾಜಿಸಲಾಗಿದೆ.

ಅಲಿಅಕ್ಬರ್ (Ali Akbar Esquire)ಸೂಪರಿಟೆಂಡಿಂಗ್ ಇಂಜಿನೀಯರ್, ಬೆಳಗಾವಿ, ೧೯ ನವೆಂಬರ್ ೧೯೦೯ ಇವರು ಡಿಪಿಐ ಪೂಣಾ ಇವರಿಗೆ ಬರೆದ ಪತ್ರ, ನಂತರ ಈ ಪತ್ರ ಸರಕಾರದ ಅಂಡರ್ ಸೆಕ್ರೆಟರಿಯವರಿಗೆ ಕಳುಹಿಸಲ್ಪಟ್ಟಿದೆ.

೨- ಇದೇ **PWD(Gen) vol. 365/ 1910-14** ಈ ಕಡತದ ಪ್ರಕಾರ, page number 59ರಲ್ಲಿ

Bombay Castle- 23rd September 1911

Educational Department – no 2775

Altrations to the grain grinding room of the training for men to convert it in to a dispensary and sick ward – 1000/-

Quarteres for the medical assistants- 3350/-

ಹೀಗೆ ಕಾಳು ಬೀಸುವ ಕೋಣೆಯನ್ನು ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಮತ್ತು ಆಸ್ಪತ್ರೆಯ ಸಹಾಯಕರಿಗೆ ವಸತಿನಿಲಯ ಕಟ್ಟಿಸುವ ಸಲುವಾಗಿ ಪ್ರಸ್ತಾವನೆ ಮಂಡಿಸಲಾಗಿದೆ.

೩-ಇದೇ volume no- 365,ದಿನಾಂಕ ೧೯ ಜುಲೈ ೧೯೦೯ರಂದು ಪುಟ 91ರಲ್ಲಿ ಟ್ರೇನಿಂಗ ಕಾಲೇಜಿಗೆ ಮತ್ತು ಪ್ರೌಢ ಶಾಲೆಗೆ ಸೇರಿ, ಆಟದ ಮೈದಾನಕ್ಕಾಗಿ ಅನುಮತಿ ದೊರೆತ ವಿಷಯವಿದೆ.

- 1913-

Educational department , no-382

Training colleges:

Dharwad male Training college – extention of the...

ಈ ಮುಖಪುಟವಿರುವ ೧೯ ಪುಟಗಳ ಕಡತದಲ್ಲಿ ಈ ಮುಂದೆ ಹೇಳಿದ ಪತ್ರಗಳಿವೆ.

೧ –Training college for men, Dharwad

Transfer to the public work department sum of Rs/- 1560 on account of the addition of an upper floor to the principal's quarter in the...

No -3763

Education Department

Bombay castle – 19 December 1913

Letter from the Director of public instruction(W.Sharp) no-9669,

dt- 25 November 1913:-

"I have honour to state that it has not yet been possible to provide Rs 3644/- from the DPI's discretionary grant for original minor work for the work of adding upper to the principal's quarter's in training college for men in Dharwad approved in government resolution PWD number A-8949 Dt 4th October 1912 and consider that it will be impossible to provide the amount at one time in one year.

Resolution: proposal is approved and acountent general should be requested to transfer PWD the sum of Rs 1500 an account of the work in question from the source indicated by the director"

Sd/- J L Rieu

Secretary to the government

೨ –ಇದೇ ಕಡತದ ಪು ೩೦ರಲ್ಲಿ ಈ ಮುಂದಿನ ವಿಷಯವಿದೆ.


No- A 10075, 9th 1914,

Additional charge for servant quarters, Additional charge for water supply at the training college sum of Rs 156/- sanctioned.

(W.Sharp)

From Director of public instruction

೩– ಜಯಕರ ಮುಖ್ಯ ಗ್ರಂಥಾಲಯ, ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ ಪುಣೆಯ ದಲ್ಲಿ ದೊರೆತ BOMBAY STATE GAZETTEER, Dharwad District- 1959, U231K 14.2- 85052 ನಂಬರಿನ, ಆರಂಭದ ೧೭ ಪುಟಗಳಿಲ್ಲದ ಗ್ಯಾಝೆಟೀಯರ[೨೦]ನಲ್ಲಿಯ ಪುಟ ಸಂಖ್ಯೆ ೭೮೯ ರ ಪ್ರಕಾರ–


Training College for Men.—The building is situated on the Karnāṭaka College Road and at present houses also the Karnāṭaka University Library and some post-graduate departments of the University. It was constructed in 1914-15 and the record value is Rs. 55,932. It is built of burnt brick in lime without any outside plaster. Yet the structure has remained without any damage to the bricks. The floor is of Yeraguntla paving stone and the roof has Mangalore tiles over corrugated iron sheets. There are arches of brick masonry in the verandah which is about 10 feet wide. The corners of the building have finish of Bādāmi stones.

Training College for Men.

In the front portion of the building, there are two towers, 40 feet high, which add beauty to the whole building.

This building is said to be the mother of educational institutions of Karnāṭaka, for premier institutions like the Karnāṭaka University and the Karnāṭaka College started their career in this building.

ಎಂದು ಹೇಳಲಾಗಿದೆ. ಈ ಉಲ್ಲೇಖದ ಪ್ರಕಾರ (ಈಗ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಚೇರಿ ಇರುವ ಕಟ್ಟಡ) ೧೯೧೪–೧೫ರಲ್ಲಿ ರೂ.೫೫,೯೩೨/– ಖರ್ಚು ಮಾಡಿ ಕಟ್ಟಿಸಿದ ಈ ಕಟ್ಟಡದ ಸೌಂದರ್ಯಕ್ಕೆ ಕಳಸವಿಟ್ಟಂತಿರುವ ೪೦ ಅಡಿ ಎತ್ತರದ ಮುಂದಿನ ಎರಡು ಶಿಖರ ಸ್ತಂಭಗಳಿವೆ. ಇವು ಹೊರಗಿನಿಂದ ಶಿಖರಸ್ತಂಭಗಳಂತೆ ಕಂಡರೂ ಒಳಬದಿಯಲ್ಲಿ ಎರಡು ಬಾಗಿಲುಗಳಿದ್ದು, ಅದರೊಳಗೆ ಮೆಟ್ಟಿಲುಗಳಿವೆ. ಅಲ್ಲಿಂದ ಏರಿ ಮೇಲ್ಮಹಡಿಗೆ ಹೋಗಬಹುದು. ಬಹಳೇ ತಾಂತ್ರಿಕವಾಗಿ ಕಟ್ಟಿರುವ ಈ ಕಟ್ಟಡ ಕೇವಲ ಇಟ್ಟಂಗಿಗಳಿಂದ ಕಟ್ಟಿದ್ದು, ಹೊರಮೈಗೆ ಯಾವುದೇ ಸಿಮೆಂಟ ಲೇಪನ ಇರದಿದ್ದರೂ, ಎಲ್ಲಿಯೂ ಭಗ್ನಗೊಂಡಿಲ್ಲ.*

*೯ ನೋಡಿ ಅನುಬಂಧ ೫

ಹೀಗೆ ಅನುದಾನ, ಮಂಜೂರಿಯ ಎಲ್ಲ ವಿಧಿವಿಧಾನಗಳನ್ನು ಪೂರೈಸಿ ಸದೃಢ ಮತ್ತು ಸುಂದರ ರೂಪ ತಳೆದು, ಇನ್ನೂ ನೂರು ವರ್ಷ ಒಂದು ಕಲ್ಲು ಕೂಡ ಅಲುಗದಂತಿರುವ ಕಟ್ಟಡ ಶೈಕಣಿಕ ಸ್ಮಾರಕವಾಗಿದೆ. ಅಪರಂಪಾರ, ವೈವಿಧ್ಯ, ವೈಶಿಷ್ಟಗಳನ್ನು ಹೊಂದಿ, ಹಲವು ಬಾರಿ ನಿಂತು ಹೋದರೂ ಮತ್ತೇ ಕರಿಕೆಯ ಕುಡಿಯಾಗಿ ಚಿಗುರಿ, ಹಬ್ಬಿನಿಂತು, ನಾಡಿನ ಶಿಕ್ಷಣದ ತಳಹದಿಯನ್ನು ನಿರ್ಮಿಸಿದ ಹಿರಿಮೆ ಗರಿಮೆ ಈ ಟ್ರೇನಿಂಗ ಕಾಲೇಜಿಗಿದೆ. ಕಾಲೇಜಿಗೆ ತನ್ನದೇಯಾದ ಧ್ವಜ ಮತ್ತು ಧ್ವಜಗೀತೆ ಇದೆ.

೩.೩. ಕನ್ನಡ ಶಿಕ್ಷಣ ಜಾಗೃತಿ, ಹೋರಾಟ ಮತ್ತು ಪರಿಣಾಮ

ಯಾವಾಗ ಸಂಘಟಿತ ಶಕ್ತಿಗಳು ಸೇರಿ ಸಂಸ್ಥೆಗಳನ್ನು ಹುಟ್ಟುಹಾಕಿದವೋ ಆಗ ಪ್ರಭುತ್ವ ಎನ್ನುವುದು ಹೊಂಚುಹಾಕತೊಡಗಿತು. ಪ್ರಭುತ್ವದ ಅಟ್ಟಹಾಸ ವರ್ಗಗಳ ಜನನಕ್ಕೆ ನಾಂದಿಯಾಯಿತು. ಸೃಷ್ಟಿಸಿತು. ಆಳುವ ಮತ್ತು ಆಳಿಸಿಕೊಳ್ಳುವವರ ವರ್ಗಗಳು ಪ್ರಾರಂಭವಾದವು. ಈ ವರ್ಗ ಸಮಾಜದಲ್ಲಿ ಶಿಕ್ಷಣ ಎನ್ನುವುದು ಆಳುವ ವರ್ಗದ ಕೈಗೊಂಬೆ. ಪ್ರಭುತ್ವದ ಆಸೆ, ಆಶಯ, ಆಕಾಂಕ್ಷೆ, ಆಚಾರ, ಆಶೋತ್ತರಗಳನ್ನು ವೈಭವೀಕರಿಸುವ,ಆದರ್ಶೀಕರಣಗೊಳಿಸುವ ಒಂದು ವಾಹಿನಿಯಾಗಿ ಶಿಕ್ಷಣ ಪದ್ಧತಿ ಆಸ್ತಿತ್ವದಲ್ಲಿರುತ್ತದೆ. ಸಮಾಜದ ಅಗತ್ಯತೆಗಳನ್ನು ಪರಿಗಣಿಸಿದಂತೆ ಕಂಡುಬಂದರೂ ಆಳುವ ವರ್ಗದ ಹಿತಾಸಕ್ತಿಗಳಿಗೆ ಅಣುಗುಣವಾಗಿ ಶಿಕ್ಷಣದ ರೂಪುರೇಷೆಗಳು ಬದಲಾಗುತ್ತಿರುತ್ತವೆ. ಅದರಲ್ಲೂ ಭಾರತದ ವಿಷಯಕ್ಕೆ ಬಂದರೆ ಭಾರತೀಯ ಶ್ರೀಸಾಮಾನ್ಯ ಹೊರ ಜಗತ್ತನ್ನು ಅರ್ಥೈಸಿಕೊಂಡಿರುವುದೇ ಕೇವಲ ಪರಾಧೀನವಾಗಿ, ಪರಕೀಯರ ಆಳ್ವಿಕೆಗೆ ಒಳಗಾಗಿ, ತಲೆ ತಗ್ಗಿಸಿ... ಆಳುವವನ ಆಳಾಗಿ. ಅಧೀನತೆ ಬೇರೆ; ಪರಾಧೀನತೆಯೇ ಬೇರೆ. ನಮ್ಮ ಆಳರಸರ ಒಡೆತನಕ್ಕೊಳಗಾಗಿ ಕಲಿಕೆ ಅಥವಾ ಶಿಕ್ಷಣವನ್ನು ಅರ್ಥೈಸಿಕೊಳ್ಳುವುದುವುದು ಒಂದು ಗಾವುದ ದೂರಾಗಿ ಇದ್ದ ಸಮಯದಲ್ಲಿ, ಪಾಶ್ಚಾತ್ಯರ ಪರಾಧೀನತೆಯಲ್ಲಿ ಕಲಿಕೆ ಅಥವಾ ಶಿಕ್ಷಣವನ್ನು ಅರ್ಥೈಸಿಕೊಳ್ಳುವುದು ನೂರು ಗಾವುದ ದೂರಾಗಿತ್ತು. ಶಿಕ್ಷಣ ಅಥವಾ ವಿದ್ಯೆಯ ಹೆಸರಿನಲ್ಲಿ ಆಳುವ ವರ್ಗದ ವಿಚಾರಗಳನ್ನು ಮತ್ತು ಹಿತಾಸಕ್ತಿಗಳನ್ನು ವಿಧಿವತ್ತಾಗಿ (ಯಾವೂದೇ ಒತ್ತಾಯ, ಒತ್ತಡ ಅಥವಾ ದಬ್ಬಾಳಿಕೆಯಿಲ್ಲದೆ) ವಿದ್ಯಾರ್ಥಿಗಳ ತಲೆಯಲ್ಲಿ ತುರುಕುವುದರಿಂದ,ಅವು ವಿದ್ಯಾರ್ಥಿಯ ಆದರ್ಶಗಳಾಗುತ್ತವೆ; ಮಾನದಂಡಗಳಾಗುತ್ತವೆ. ಸರಕಾರಿ ನೌಕರಿಯಂಥ 'ತಗೆ ಕಟ್ಟಿದ ಮೇವೊಂದೇ ಮೇಕೆಯ ಗುರಿ'ಯಾಗಿ ಕಲಿತ ಆದರ್ಶದ ಅನುಯಾಯಿಯಾಗಿ ಬಿಡುತ್ತಾನೆ. ಮಾರ್ಕ್ಸ ಹೇಳುವಂತೆ "ಆಳುವ ವರ್ಗದ ವಿಚಾರಗಳು ಯಾವಾಗಲೂ ಆಳುವ ವಿಚಾರಗಳು; ಭೌತಿಕವಾಗಿ ಸಮಾಜವನ್ನು ಆಳುವ ವರ್ಗ ಅದೇವೇಳೆಯಲ್ಲಿ ಸಮಾಜವನ್ನು ಆಳುವ ಬೌದ್ಧಿಕ ಶಕ್ತಿಯೂ ಆಗಿರುತ್ತದೆ. ಭೌತಿಕ ಉತ್ಪಾದನಾ ಮಾಧ್ಯಮಗಳನ್ನು ವಶದಲ್ಲಿರಿಸಿಕೊಂಡ ವರ್ಗ ಬೌದ್ಧಿಕ ಉತ್ಪಾದನಾ ಮಾಧ್ಯಮಗಳನ್ನೂ ಸಹ ನಿಯಂತ್ರಿಸುತ್ತದೆ. ಆಳುವ ವರ್ಗದ ವಿಚಾರಗಳು ಪ್ರಬಲ ಭೌತಿಕ ಸಂಬಂಧಗಳ ಆದರ್ಶ ಅಭಿವ್ಯಕ್ತಗಳೇ ವಿನಃ ಮತ್ತೇನೂ ಅಲ್ಲ. ಪ್ರಬಲ ಭೌತಿಕ ಸಂಬಂಧಗಳೇ ವಿಚಾರಗಳಾಗಿ

ಪರಿಗಣಿಸಲ್ಪಡುವುದರಿಂದಆಳುವ ವರ್ಗದ ವ್ಯಕ್ತಿಗಳು ವಿಚಾರವಾದಿಗಳಾಗಿ, ವಿಚಾರ ಉತ್ಪಾದಕರಾಗಿ, ಅವರು ಯುಗಗಳ ವಿಚಾರ ಮತ್ತು ವಿಸ್ತರಣೆಯನ್ನು ನಿಯಮಿತಗೊಳಿಸುತ್ತಾರೆ; ಈ ರೀತಿಯಾಗಿ ಆಳುವ ವರ್ಗದ ವಿಚಾರಗಳು ಆ ಯುಗದ ಆಳುವ ವಿಚಾರಗಳಾಗುತ್ತವೆ"[೨೧] ಶಿಕ್ಷಣ ಅವುಗಳನ್ನು ರವಾನಿಸುವ ಒಂದು ಮಾಧ್ಯಮ. ಯಾವ ವಿಚಾರದಲ್ಲೂ ಶಿಕ್ಷಣ, ಆಳಿಸಿಕೊಳ್ಳುವ ವರ್ಗದ ಅಭಿವ್ಯಕ್ತಿಯಾಗಲಾರದು. ಆಳಿಕೆಗೊಳಗಾದವರು ಪ್ರಭುತ್ವದ ವಿರುದ್ಧ ಬಂಡೆದ್ದಾಗ ಅವರನ್ನು ಹತ್ತಿಕ್ಕಲು ಬಲೋದ್ಭಂಧ(ಬಲವನ್ನು ಉಪಯೋಗಿಸಿ ನಿಯಂತ್ರಿಸುವ) ಮತ್ತು ಅಬಲೋದ್ಭಂಧ ಸಂಸ್ಥೆಗಳು ಹುಟ್ಟಿದವು. ಬಲೋದ್ಭಂಧ ಶಕ್ತಿ ಜೈಲು, ಮಿಲಿಟರಿ, ಪ್ಯಾರಾ ಮಿಲಿಟರಿ, ಪೋಲಿಸು ಮತ್ತು ಕೋರ್ಟುಗಳನ್ನು ಒಳಗೊಂಡರೆ, ಅಬಲೋದ್ಭಂಧ ಶಕ್ತಿ ಧರ್ಮ, ಸಂಸ್ಕೃತಿ, ಸಾಹಿತ್ಯ ಮತ್ತು ಶಿಕ್ಷಣಗಳನ್ನೊಳಗೊಂಡಿದೆ. ಹೀಗೆ ಶಿಕ್ಷಣ ಅಬಲೋದ್ಭಂಧವಾದರೂ ಆಳುವ ವರ್ಗದ ಶಕ್ತಿಯಾಗಿ ಇಂದಿಗೂ ಪ್ರಭುವಿನ ಹಿಡಿತದಲ್ಲಿಯೇ ಇದೆ. ಪರಾಧೀನತೆಯಲ್ಲಿ ಪಡೆಯುವ ಶಿಕ್ಷಣ ಸ್ವಯಂ ಆಯ್ಕೆಯಾಗಿರುವುದಿಲ್ಲ. ಕೊಟ್ಟದ್ದರಲ್ಲಿಯೇ ಒಂದನ್ನು ಆಯ್ದುಕೊಳ್ಳಬೇಕು. ಅದರಲ್ಲೇ ಮುಂದುವರಿದು, ಸುಧಾರಣೆಗೊಂಡು ತೃಪ್ತಿಪಟ್ಟುಕೊಳ್ಳಬೇಕು.

ಜಾಗೃತಿ: ಕನ್ನಡದ, ಮಾತೃ ಭಾಷೆಯ ಮಹತ್ವ, ಅದಕ್ಕಿರುವ ಆಯಾಮಗಳು ಮತ್ತು ಅದರ ಕಲಿಕೆ ಮತ್ತು ಅನಾದರದ ಪೂರ್ವಾಪರಗಳ ಕುರಿತು ಶಾಲಾ ಪತ್ರಕದಲ್ಲಿಯ ಲೇಖನ ನೋಡಿದರೆ '೧- ಈಗ ಉಗ್ಗಡಿಸುತ್ತಿರುವ ಅಭಿಪ್ರಾಯ ೧೫೨ ವರ್ಷಗಳಷ್ಟು ಹಿಂದೆಯೇ ವ್ಯಕ್ತವಾಗಿರುವುದು. ೨- ಕನ್ನಡ ಇಂಗ್ಲಿಷ ಕಲಿಕೆಯ ಕುರಿತು ಈಗಿನವರು ಹೇಳುತ್ತಿರುವುದು ಹೊಸತೇನೂ ಅಲ್ಲ ಎಂಬುದನ್ನು ಮತ್ತು ಈಗಿರುವ ಸ್ಥಿತಿ ೧೫೨ ವರ್ಷಗಳಷ್ಟು ಹಿಂದೆಯೂ ಇತ್ತು ಎಂಬ ಕಹಿ ಸತ್ಯ ನಮ್ಮೆದುರು ಹೀಗೆ ಬಿಚ್ಚಿಕೊಳ್ಳುತ್ತದೆ: ಕನ್ನಡ ಭಾಷೆಯ ಪ್ರೀತಿ ಹೆಚ್ಚಾಗಲಿಕ್ಕೆ ಕನ್ನಡದಲ್ಲಿ ಪುಸ್ತಕಗಳೇ ಇಲ್ಲ. ಇದರಿಂದ ಕನ್ನಡ ತನ್ನಷ್ಟಕ್ಕೇ ಅನಾದರಗೊಳ್ಳುತ್ತಿದೆ. ಕನ್ನಡ ಕಲಿಯಬೇಕೆನ್ನುವ ಜನ ನಿರುಪಾಯರಾಗಿದ್ದಾರೆ. ಅಂಥಾ ಗ್ರಂಥಗಳು ಇಂಗ್ಲಿಷಿನಲ್ಲಿ ತಯಾರಾಗಿರುವುದನ್ನು ನೋಡಿದಿರಾ! ಆದ್ದರಿಂದ ಶುದ್ಧವಾಗಿರುವ ಗ್ರಂಥಗಳನ್ನು ಶೀಘ್ರವಾಗಿ ಛಾಪಿಸಬೇಕು. ಶಾಂತರವೀರರು ಚಂಪು ರಾಮಾಯಣ, ಮಹಾಭಾರತಗಳ ವ್ಯಾಖ್ಯಾನವನ್ನು ಮಾಡಿದಂತೆ, ಇತರ ಪುಸ್ತಕಗಳು ತೀವ್ರ ಭಾಷಾಂತರಗೊಳ್ಳಬೇಕು. ಅನ್ಯಭಾಷೆಗಳಲ್ಲಿ ಗ್ರಂಥಗಳು ದೊರಕುತ್ತಿದ್ದರೆ ಜನ ಆ ಭಾಷೆಯನ್ನು ಪ್ರೀತಿಸುವುದು ಸಹಜ. ಕನ್ನಡದಲ್ಲಿ ಆ ರೀತಿಯ ಗ್ರಂಥಗಳು ಇಲ್ಲದ ಕಾರಣ ಕುರೂಪಿ ಸ್ತ್ರೀಯನ್ನು ಕಂಡರೆ ಜನ ಹೇಗೆ ಕಣ್ಣೆತ್ತುವುದಿಲ್ಲವೋ ಹಾಗೆ ಜನರಿಗೆ ಅರೋಚಕತೆ ಹುಟ್ಟಿ ಬಿಟ್ಟಿದೆ. ಭಾಷೆಗೆ ಮೂಲ ವ್ಯಾಕರಣ. ವ್ಯಾಕರಣವೇ ಭಾಷಾಶಾಸ್ತ್ರೀಯ ಮೂಲ ಸ್ವರೂಪವು; ಛಂಧಶಾಸ್ತ್ರವೇ ಕಂಚುಕವು; ಸರ್ವೋಪಯೋಗಿಯಾದ ಗದ್ಯಪದ್ಯಾತ್ಮಕವಾದ ಸ್ವಭಾಷಾ ಗ್ರಂಥಗಳೇ ಪೀತಾಂಬರವು; ಅನ್ಯಭಾಷೆಗಳ ಮೂಲವನ್ನು ವಿವರಿಸುವ ಕನ್ನಡ ಭಾಷೆಯ ಈ ಗ್ರಂಥಗಳೇ ಅನರ್ಘ್ಯ ಅಲಂಕಾರಗಳು. ಹೀಗೆ ಶೃಂಗರಿಸಲ್ಪಟ್ಟ ವಾಗ್ದೇವಿಯನ್ನು ಯಾರು ತಾನೇ ಮೋಹಿಸಲಿಕ್ಕಿಲ್ಲ? ಅದಕ್ಕೆ

ಸಿಂಹ ಪ್ರಯತ್ನದಿಂದ ಗ್ರಂಥಗಳನ್ನು ಪ್ರಸಿದ್ಧಿಪಡಿಸಿದರೆ ತಮಗೆ ವಾಕ್ಸುಧಾರಣೆಯ ಕೀರ್ತಿಯೂ, ಲೋಕೋಪಕಾರದ ಲಾಭವೂ, ಅನೇಕ ಬಂಧುತ್ವವೂ ದೊರೆಯುತ್ತದೆ. ಕನ್ನಡದ ಜನರು ತಮ್ಮ ಮಕ್ಕಳು ೮–೧೦ ವರ್ಷದವರಿರುವಾಗಲೇ ಇಂಗ್ಲಿಷ ಶಾಲೆಗಳಿಗೆ ಕಳುಹಿಸಿ, ಪ್ರಯಾಸ ಪಡುತ್ತಾರೆ. ಮಕ್ಕಳು ೨೦ವರ್ಷಗಳಿಗೆ ಮೆಟ್ರಿಕ್ಯುಲೇಶನ್ ಪರೀಕ್ಷೆ ಕೊಡಲು ಪ್ರಯಾಸ ಪಡುತ್ತಾರೆ. ಇದಕ್ಕೆ ಕಾರಣ ತಮ್ಮ ಭಾಷೆಯ ವ್ಯಾಕರಣ ಆವಜ್ಞೆ, ಇಂಗ್ಲಿಷಿನಲ್ಲಿ ಪತ್ರ ಬರೆದಂತೇ, ಮಾತು ಹೊರಟಂತೆ ಕನ್ನಡದಲ್ಲಿ ಒಂದು ವಾಕ್ಯದ ಭಾಷಾಂತರವೂ ಸಾಧ್ಯವಾಗುತ್ತಿಲ್ಲ. ಏನಾದರೊಂದು ಉದ್ದವಾದ ಚಮತ್ಕಾರದ ಅಶುದ್ಧ ಪದವೆಂದು ಹೇಳಿಬಿಡುತ್ತಾರೆ. ಇಲ್ಲವೇ ಮರಾಠಿ ಅರ್ಥವನ್ನು ಹೇಳುತ್ತಾರೆ. ಕೆಲವರಿಗೆ ಅದೂ ಬರದೇ ಸುಮ್ಮನಾಗಿ ಬಿಡುತ್ತಾರೆ. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲವೆಂಬಂತೆ ಕನ್ನಡವೂ ಬರದು, ಅತ್ತ ಮರಾಠಿಯೂ ಇಲ್ಲ, ಇತ್ತ ಇಂಗ್ಲಿಷೂ ಇಲ್ಲದಂತಾಗಿದೆ. ಕಲಿಸುವವರಿಗೆ ಈ ರೀತಿಯ ಅಜ್ಞಾನ ಆವರಿಸಿರುವಾಗ ಕಲಿಯುವವರ ಗತಿ? ಇನ್ನೂ ಸಂಸ್ಕೃತ ಕಲಿಸುವಾಗ ಅದರ ಅರ್ಥವನ್ನು ಇಂಗ್ಲಿಷಿನಲ್ಲಿಯೇ ಹೇಳುತ್ತಾರೆ. ಹೀಗಾಗಿ ಕನ್ನಡದಲ್ಲಿ ಅದರ ಅರ್ಥ ತಿಳಿಯುವುದಿಲ್ಲ. ಇದು ಸಂಸ್ಕೃತವನ್ನು ಇಂಗ್ಲಿಷಿನಲ್ಲಿ ಕಲಿತ ಆಚಾರ್ಯರ ಅವಸ್ಥೆ. ತಮ್ಮ ಭಾಷೆ ಶುದ್ಧವಾಗಿ ಬರದೆ ಮತ್ತೊಂದು ಭಾಷೆಯನ್ನು ಶುದ್ಧವಾಗಿ ಕಲಿಯಲು ಸಾಧ್ಯವಿಲ್ಲ. ತಮ್ಮ ಭಾಷೆಯನ್ನು ಕಲಿತ ಮೇಲೆ ಅನ್ಯ ಭಾಷೆಗಳನ್ನು ಕಲಿಯಲಿ. ತಮ್ಮ ಭಾಷೆಯ ಮೇಲೆ ಯುಕ್ತಾಯುಕ್ತ ಹಿಡಿತ ಸಾಧಿಸಿದ ನಂತರ ಅನ್ಯ ಭಾಷೆ ಸಲಿಸಾಗಿ ಬರುತ್ತದೆ. ಆದ್ದರಿಂದ ಪಾಠಾರ್ಥ ಕಲಿಸುವಾಗ ಬೇರೆ ಭಾಷೆಗಳ ಪರ್ಯಾಯಪದ ಹುಡುಕದೆ ಕನ್ನಡದಲ್ಲಿಯೇ ಅರ್ಥ ಹುಡುಕಬೇಕು. 'ಸ್ವಭಾಷೆಯು ಶುದ್ಧವಾಗಿ ಬರದೆ ಪರಭಾಷೆಯು ಎಂದಿಗೂ ಚನ್ನಾಗಿ ಬರಲಿಕ್ಕಿಲ್ಲ' ಎಂಬುದು ಈ ಪಾರಿಗ್ರಾಮದ ಸಾರಾಂಶವು ಎಂಬ ಹೇಳಿಕೆಯೊಂದಿಗೆ ಸುಧೀರ್ಘ ಲೇಖನ ಕೊನೆಗೊಂಡಿದೆ.[೨] ಕನ್ನಡ ಉಳಿಯುವಿಕೆಗಾಗಿ ಹೀಗೆ ಉತ್ಕಟಾಕಾಂಕ್ಷೆಯನ್ನು ಹೊಂದಿದವರು ತರಬೇತಿ ಕಾಲೇಜಿನ ಮತ್ತು ಪತ್ರಿಕೆಯ ಸೂತ್ರದಾರರಾಗಿದ್ದು, ಕನ್ನಡದೆಳ್ಗೆಯ ಬೀಜವನ್ನು ಬಿತ್ತುತ್ತಲೇ ಇದ್ದರು. ಭಾರತದಲ್ಲಿ ಶಿಕ್ಷಣ ಏಷ್ಟೊಂದು ಪ್ರಭಾವ ಬೀರಿತ್ತೆಂದರೆ ಜನೇವರಿ ೧೮೭೫ರಲ್ಲಿ ಮದ್ರಾಸಿನಲ್ಲಿ ನಡೆದ 'ಜನರಲ್ ಟೆಸ್ಟ ಎಗಝಾಮಿನೇಶನ' ಎಂಬೊಂದು ಪರೀಕ್ಷೆಗೆ ೫೦೦೦ ಜನ ಉಮೇದುವಾರರು ಹೋಗುವವರಿದ್ದಾರೆ ಮತ್ತು ಚೀನಾ ದೇಶವೊಂದನ್ನ ಹೊರತುಪಡಿಸಿ ಇಷ್ಟು ಆಗಾದ ಸಂಖ್ಯೆಯಲ್ಲಿ ಜನ ಭೂಮಿಯ ಯಾವ ಭಾಗದಲ್ಲಿಯೂ ಪರೀಕ್ಷೆಗೆ ಹೋದದನ್ನು ಕೇಳಿಲ್ಲವೆಂದು ಟೈಮ್ಸ ಆಫ್ ಇಂಡಿಯಾ ವರದಿ ಮಾಡಿದ್ದನ್ನು ಶಾಲಾ ಪತ್ರಕ ಉಲ್ಲೇಖಿಸುತ್ತದೆ.

ಬ್ರಿಟಿಷ ಸರಕಾರದವರು ಶಾಲೆಗಳನ್ನೇನೋ ತೆರೆದರು ಮತ್ತು ಶಿಕ್ಷಕರನ್ನೂ ನೇಮಿಸಿದರು ಮತ್ತವರಿಗೆ ಕಾಯಿದೆ ಕಾನೂನುಗಳೆಲ್ಲ ಆದೇಶಿಸಲ್ಪಟ್ಟವೇನೋ ನಿಜ. ಆದರೆ ದಿನಾಂಕ ೨ ಮಾರ್ಚ ೧೮೭೬ರ ಭೀಮಾಜಿ ಗಣೇಶ ಕುಲಕರ್ಣೀ ಸ್ಕೂಲ ಮಾಸ್ತರ ಕೋಳೂರು, ಜಿಲ್ಲಾ ಕಲಾದಗಿ ಇವರ ಸುಧೀರ್ಘ ನಾಲ್ಕುಪುಟಗಳ ಪತ್ರದ ಸಾರಾಂಶ ನೋಡಿದರೆ ಇಂದಿನ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ

ಹಾಜರಾತಿ ಮತ್ತು ಶಿಕ್ಷಕರ ಹೆಚ್ಚುವರಿಯಾಗುತ್ತಿರುವ ವಿದ್ಯಮಾನದ ಪಡಿಯಚ್ಚಿನಂತಿದೆ. 'ಈ ಇಂಗ್ಲಿಷ ಧರ್ಮ ಸರಕಾರದವರು ಬುದ್ಧಿಪೂರ್ವಕವಾಗಿ ಜನರಲ್ಲಿ ಅಜ್ಞಾನಂಧಕ್ಕಾರವನ್ನು ದೂರ ಮಾಡಲು ಹಳ್ಳಿಹಳ್ಳಿಗಳಲ್ಲಿ ಶಾಲೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ. ಆದರೆ ಕೆಲವು ಮೂಢ ಒಕ್ಕಲಿಗರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದೇ ಇಲ್ಲ. ಇನ್ನೂ ಗೌಡಕುಲಕರ್ಣಿಗಳು ಸಾಲಿ ಅಗತ್ಯ ಎನಿಸಿದ್ರೂ ತಮ್ಮ ಮಕ್ಕಳನ್ನು ಪುಸ್ತಕ ಕೊಡಿಸದೆ, ಮುಂಜಾನೆ ದನ ತರುಬುವ ಕಾರಣಕ್ಕೆ ಒಂದು ತಾಸು ತಡವಾಗಿ ಕಳುಹಿಸಿ, ಎರಡುವರೆಗೆ ಬುತ್ತಿಯನ್ನು ಒಯ್ಯಲು ಕರೆದೊಯ್ಯುತ್ತಾರೆ. ಸುಗ್ಗಿಯ ದಿನಗಳಲ್ಲಿಯಂತೂ ಮಕ್ಕಳು ಶಾಲೆಕಡೆಗೆ ಹಣಿಕಿಯೂ ನೋಡಗೊಡುವುದಿಲ್ಲ. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲವೆಂಬಂತೆ ಅಜ್ಞಾನಂಧಕ್ಕಾರ ಹಾಗೇ ಇದೆ. ಹೀಗೆ ಗ್ರಾಮ ನಿವಾಸಿಗಳ ದೋಷಗಳಿವೆ. ಇದರನ್ವಯ ಸಾಲಿ ಅವ್ಯವಸ್ಥಿತವಾಗಿರಲಾಗಿ ಮಾಸ್ತರನ ಬಡತಿ ಮಾರ್ಗ ತಪ್ಪಿ ಹಿಂಬರಕಿ ಬಡತಿ ಅದೀತೆಂಬ ಮಹತ್ವದ ವಿಷಯವನ್ನು ಊರವರಿಗೆ ಸಮಜಾಯಿಸಿ, ಬಾಲತ್ವವು ಬಹಳ ಬೆಲೆಯುಳ್ಳದ್ದು, ವ್ಯರ್ಥ ಕಳೆಯಗೊಡಬೇಡಿ ರೆಂದು ತಿಳಿಸಿದ್ದಾಗ್ಯೂ ನಿಷ್ಫಲವಾದಲ್ಲಿ ಸಾಲಿಯ ಅವ್ಯವಸ್ಥೆಯ ವರದಿ ಹುಜೂರಿಗೆ ತಿಳಿಸಿದಾಗ ಗ್ರಾಮಸ್ಥರು ಮಾಸ್ತರನ ಮೇಲೆಯೇ ದೋಷಾರೋಪಣ ಮಾಡುವರು. ಹುಡುಗರನ್ನ ಹೊಲಕ್ಕೆ ಕರೆದೊಯ್ದರೂ ಅಡ್ಡಿಇಲ್ಲ ಊರೊಳಗೆ ಸಾಲಿ ಇರಲಿ ಎಂದು ಅರ್ಜಿಗೆ ಸಹಿಯಾದರೂ ಮಾಡಿರೆಂದು ತಪ್ಪು ಕುಬೋಧ ಮಾಡಿ, ಕೆಲವರು ತಾವೇ ರುಜು ಮಾಡಿ ಕಳುಹಿದ್ದು, ಅದಕ್ಕೂ ಮಾಸ್ತರನ ವಿರುದ್ಧ ಸರಕಾರಕ್ಕೆ ಅರ್ಜಿ ಮಾಡುವರು. ಹೀಗಾದರೆ ಮಾಸ್ತರನ ವರದಿ ಸತ್ಯವಾಗದೆ, ಚರಿತಾರ್ಥ ಸಲುವಾಗಿ ಊರುಬಿಟ್ಟು ಬಂದು, ನೌಕರಿ ಪಥಕರಿಸಿದ ಮಾಸ್ತರನು ಲುಕ್ಸಾನು ಹೊಂದಿ, ಇದ್ದ ಸಂಬಳ ಕಾಯಂ ಇರುವುದೇ ಪರಮಪ್ರಯಾಸವಾಗಿ ಹಳ್ಳಿಸಾಲಿ ಅಭಿವೃದ್ಧಿ ಕಾಣುತ್ತಿಲ್ಲ. ಈ ದೋಷಾರೋಪಣೆ, ಲುಕ್ಸಾನು ಮಾಸ್ತರನಿಗೆ ಬೇಕಾಗಿದೆಯೇ? ಇದರಲ್ಲಿ ಬಡ ಮಾಸ್ತರನ ತಪ್ಪೇನು? ಎಂದು ಕೇಳುವುದಲ್ಲದೆ ಅದಕ್ಕೆ ಪರಿಹಾರ್ಯವಾಗಿ ಏನು ಮಾಡಬಹುದೆಂಬುದನ್ನೂ ಈ ಮುಂದಿನಂತೆ ಹೇಳುತ್ತಾರೆ: ಈ ಉಭಯ ಪಕ್ಷಕ್ಕೂ ನ್ಯಾಯ ದೊರೆತು ಲಾಭಾಲಾಭಗಳಾಗಬೇಕಾದರೆ ಯಾವ ಊರವರಿಗೆ ಸರಕಾರದವರು ಶಾಲೆಯನ್ನು ದಯಪಾಲಿಸಿರುವರೋ, ಮುಂದೆ ದಯಪಾಲಿಸುವರೋ ಆ ಊರವರ ಕಡಿಯಿಂದ ಸಾಲಿಗೆ ದಿನಾಲೂ ಕನಿಷ್ಠ(೩) ಹುಡುಗರನ್ನು ಕಳುಹಬೇಕೆಂದೂ, ಹುಡುಗರಿಗೆ ಪುಸ್ತಕಗಳನ್ನು ಕೊಡಿಸಬೇಕೆಂದೂ, ಸಾಲಿಗೆ ಮದತು ಮಾಡಬೇಕೆಂದು, ಆಪ್ರಕಾರ ವರ್ತಿಸದಿದ್ದರೆ ಸಾಲಿ ಬಂದ ಮಾಡುವುದಲ್ಲದೆ ಮಾಸ್ತರನ ಸಂಬಳ ವೆಚ್ಚವನ್ನೂ ಕೊಡಬೇಕೆಂದೂ ಠಸ್ಸೇ ಕಾಗದ ಮೇಲೆ ಕರಾರನಾಮೆ ಬರೆಯಿಸಿಕೊಂಡಲ್ಲಿ, ಕರ್ನಾಟಕದಲ್ಲಿದ್ದ ವಿದ್ಯಾಹೀನತ್ವವು ಬಹು ವೇಗದಿಂದ ದಿಕ್ಕನ್ನು ಕಾಣದೆ ಪಲಾಯಣ ಹೊಂದಿ ಸರಕಾರಕ್ಕೆ ಕೀರ್ತಿಯೂ, ನವಕರರಿಗೆ ಲಾಭಾಲಾಭಗಳೂ ದೊರೆಯತಕ್ಕ ಮಾರ್ಗ ಸುಲಭವಾಗಿ ಹೊರಡಬಹುದು. ತಂಗಡಗಿ ಶಾಲೆಯಲ್ಲಿ ಇಂಥದ್ದೇ ಅವ್ಯವಸ್ಥೆ ಉಂಟಾಗಲು ೧ನೇವರ್ಗದ ಮ್ಯಾಜಿಸ್ಟ್ರೇಟ್ ಸಾಹೇಬರು ಇಂಥದ್ದೇ ಕರಾರನಾಮೆ ಬರೆಸಿಕೊಂಡು,

ಆ ಶಾಲೆ ಸ್ಥಿರವಾಗಿರಲೆಂದು ನಮ್ಮ ವರಿಷ್ಠರಿಗೆ ಬರೆದ ಮೇರೆಗೆ ಕಟ್ಟಳೆಯಂತೆ ಆ ಸಾಲಿ ಸಾಗುತ್ತಿರುವುದಾಗಿ ವಿಷಯ ತಿಳಿದು ಬಂತು. ಗ್ರಾಮವಾಸಿಗಳಿಗೆ ಕಟ್ಟಳೆ ಮಾಡುವುದುಚಿತ ವಾಗಲಾರದು ಎಂಬುದಕ್ಕೆ ಸಬಲ ಕಾರಣ ಉದ್ಭವಿಸಲಾರದು. ಒಕ್ಕಲಜನ ವಿದ್ಯೆಯಿಂದಿರುವ ಲಾಭವರಿಯದೆ ಮೂರ್ಖತ್ವದಿಂದ ಮೋಸಹೋಗುತ್ತಾರೆಂಬ ಕಾರಣಕ್ಕೆ ಅಮೆರಿಕಾದ ನ್ಯೂಯಾರ್ಕ ಪಟ್ಟಣದ ಸಂಸ್ಥಾನದವರು ವಿದ್ಯಾಭ್ಯಾಸದ ಹೊಸ ಕಾಯ್ದೆಯನ್ನೂ, ಜಪಾನದವರು ಶಿಕ್ಷಣ ಕಡ್ಡಾಯವೆಂದು ಬಲತ್ಕಾರ ಮಾಡಿದರೆ ಹೊರತು ಜನರಿಗೆ ಅನ್ಯಾಯ ಮಾಡಲಿಲ್ಲವೆಂಬುದನ್ನ ತಾವು ನೆನೆಸುವಿರೆಂದು ಆಶಿಸುತ್ತೇನೆ. ಪತ್ರವಿಸ್ತಾರಕ್ಕೆ ಕ್ಷಮೆ ಕೋರಿ ಇದು ಹಳ್ಳಿ ಮಾಸ್ತರರು ಕೊಂಡಾಡಿ ಹರಸುವರು' ಎಂದು ಹೇಳುತ್ತ ಸುಧೀರ್ಘ ಪತ್ರ ಕೊನೆಗೊಳಿಸುತ್ತಾನೆ.[೨೩]

ಶಿಕ್ಷಕನೊಬ್ಬ ಎಲ್ಲ ಆಯಾಮಗಳಿಂದಲೂ ಸಮಸ್ಯೆಯನ್ನು ಎಳೆಎಳೆಯಾಗಿ ಬಿಡಿಸಿ, ವಿಶ್ಲೇಷಿಸಿರುವ ರೀತಿ ಶ್ಲಾಘನೀಯ. ಆರಂಭದಲ್ಲೂ ಉಪಜೀವನಕ್ಕಾಗಿ ಅವಲಂಬಿತ ಈ ನೌಕರಿ, ಕಾಯಿದೆ ಮತ್ತು ಅನುಪಾಲನೆ, ಹೊಂದಾಣಿಕೆಗಳು ಒಬ್ಬ ಪ್ರಾಥಮಿಕ ಶಾಲೆಯ ಶಿಕ್ಷಕನಿಗೆ ಆರಂಭದ ಹಂತದಲ್ಲಿಯೇ ತಂದೊಡ್ಡುವ ಈ ಅಸಹಾಯಕ ಸ್ಥಿತಿ, ಮೊದಲೇ ರಚನೆಯಾದ ಕಾನೂನು, ಕಾಯಿದೆ, ನೀತಿ ನಿಯಮಗಳು ಸಮಾಜದಲ್ಲಿ ಹೊಸದೊಂದರ ಸ್ಥಾಪನೆಗೆ, ಸಾಧನೆಗೆ ಅಡ್ಡಿಯಾಗುವ ಅಥವಾ ಕುಂಟಿತಗೊಳಿಸುವ ಬದುಕನೆಲೆಯ ಮೂಲಕಾರಣದ ಪ್ರತಿಯೊಂದು ಆಯಾಮ-ಉಪಆಯಾಮಗಳನ್ನು, ಪ್ರಸ್ತುತವಾದರೂ ಅಡೆತಡೆಯಾಗುವಂತಾದದ್ದರ ವಸ್ತುಸ್ಥಿತಿಗಳನ್ನು ಕೂಲಂಕೂಷ ಅಧ್ಯಯನ ಮಾಡಿ, ಸೈದ್ಧಾಂತಿಕವಾಗಿ ರಚನೆಯಾದವುಗಳಾಗಿರಲಿಲ್ಲ ಎಂಬುದಕ್ಕಿದು ಸಾಕ್ಷಿಯಾಗುತ್ತದೆ.

ಸರಕಾರಕ್ಕೆ ಇದೇ ಸಮಯಕ್ಕೆ ಶಾಲೆಗಳನ್ನು ನಡೆಸುವುದು ಕಷ್ಟವೆನಿಸಿ ಮಾಸ್ತರರ ಕ್ಯಾಪಿಟೇಶನ್ ಅಲಾವನ್ಸ ಇತ್ಯಾದಿಗಳನ್ನು ಕೊಡಲಾಗುತ್ತಿಲ್ಲ ಎಂಬ ವಿಷಯ ಸರಕಾರದಿಂದ ಹೊರಟಿದೆ. ೧೮೨೨ ಡಿಸೆಂಬರದ ಹೊತ್ತಿಗೆ ಸರಕಾರಿ ನೇಮಕಾತಿ ನಿಯಮಗಳಲ್ಲಿ ವ್ಯಾಪಕ ಬದಲಾವಣೆಗಳಾಗಿರುವುದು ಕಂಡು ಬರುತ್ತದೆ. 'ವಿದ್ಯೆಯ ಬೆಳವಣಿಗೆಯಾದ ಹಾಗೆ ನೌಕರಿಯನ್ನು ಸಂಪಾದಿಸಲು ಲಾಯಕ್ಕುಳ್ಳ ಇಯತ್ತೆಗಳನ್ನು ಬೆಳೆಸುವುದು ಅಗತ್ಯವಾಗುತ್ತದೆ. ಸಧ್ಯಕ್ಕೆ ಮೇಟ್ರಿಕ್ಯುಲೇಷನ್ ಆದವರನ್ನು ನೌಕರಿಗೆ ಅರ್ಹರೆಂದು ಪರಿಗಣಿಸಲ್ಪಡುತ್ತದೆ. ತರುವಾಯ ಎಫ್.ಎ.(ಲಿಟಲ್ ಗೋ) ಆದವರಿಗೆ ಯೋಗ್ಯತೆ ಬರುವುದು, ನಂತರ ಯುನಿವರ್ಸಿಟಿಯ ಪದವಿಗಳನ್ನು ಸಂಪಾದಿಸಿದವರಿಗೆ ಮಾತ್ರ ನೌಕರಿಗೆ ಲಾಯಕ್ಕೆಂದೆಣಿಸಲ್ಪಡುವುದು. ಆದ್ದರಿಂದ ನೌಕರಿಯ ಅಪೇಕ್ಷೆ ಉಳ್ಳವರು ಪದವಿಗಳನ್ನು ಪಡೆಯುವ ಹವಣಿಕೆಯಲ್ಲಿರಬೇಕು; ಇನ್ನು ಮುಂದೆ ವರ್ಷಾರು ತಿಂಗಳು ಅಭ್ಯಾಸ ಮಾಡಿ ಶಾಲೆಯನ್ನ ಬಿಡುವವರಿಗೆ, ಮುಲ್ಕಿ ಪಾಸಾದವರಿಗೆ ಕಲಿತವರೆಂದೆಣಿಸುವ ಅಗತ್ಯವಿಲ್ಲ; ಅಂಥವರಿಗೆ ಏನೂ ಮಾನವಿಲ್ಲ. ಆದ್ದರಿಂದ ಇನ್ನು ಮುಂದೆ ಮನಮುಟ್ಟಿ ಹೆಚ್ಚಿಗೆ ಅಭ್ಯಾಸ ಮಾಡಬೇಕು' ಎಂದು ಗವರ್ನರ ಪ್ರಕಟಿಸುತ್ತಾರೆ.[೨೪] ಇದರಿಂದ ಶ್ರೀ

ಸಾಮಾನ್ಯ ಸಮಾಜದಲ್ಲಿ ಗೊಂದಲಕ್ಕೀಡಾಗಿ, ಅಂತೂ ಒತ್ತಾಯದಿಂದಲೋ, ಕಷ್ಟಪಟ್ಟೋ, ಖಾಲಿ ಇರುವರೆಂಬ ಕಾರಣಕ್ಕೊ ಶಾಲೆಗೆ ಕಳುಹಿಸತ್ತಿದ್ದವರು ಅದರಿಂದ ದೂರವೇ ಉಳಿಯುವಂತಾಯಿತು. ಆದಾಗ್ಯೂ ೧೮೭೮ ಜುಲೈ ಅಷ್ಟೋತ್ತಿಗೆ ಧಾರವಾಡ ಜಿಲ್ಲೆಯಲ್ಲಿ ಅನೇಕ ಶಾಲೆಗಳು ಮಾತ್ರ ಸ್ಥಾಪಿಸಲ್ಪಡುತ್ತವೆ.

ಟ್ರೇನಿಂಗ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಏಷ್ಟು ಪ್ರತಿಭಾಶಾಲಿಗಳಾಗಿರುತ್ತಿದ್ದರೆಂದರೆ, ಮತ್ತು ಕನ್ನಡದ ಕರೆ ಹೇಗಿತ್ತೆಂದರೆ ೧೮೮೧ರಲ್ಲಿ ಈ ಕಾಲೇಜಿನ ಕೃಷ್ಣಾಜಿ ಅನಂತ ಜಕಾತಿ ಎಂಬ ವಿದ್ಯಾರ್ಥಿಯೊಬ್ಬ ಮಾಸ್ತರ ಜನರಿಗೆ ಅತ್ಯುಪಯುಕ್ತವಾಗುವ ೨೬೮ ಹೊಸ ಲೆಕ್ಕಗಳ 'ಗಣಿತ ಸಂಗ್ರಹ' ಎಂಬ ಗಣಿತ ಪುಸ್ತಕವನ್ನು ಪ್ರಕಟಿಸಿದ್ದಾನೆ.[೭೫]

ಮೊದಮೊದಲು ದೇಶಿಭಾಷೆಯ ಸರಕಾರಿ ಶಾಲೆಗಳಲ್ಲೂ ಅಂಕಿಗಳು, ಮಗ್ಗಿಗಳು ಮುಂತಾದ ಅಂಕಲಿಪಿಯ ವಿಷಯಗಳಲ್ಲಿಯ ಓದುಬರಹ ಕೂಡಾ ಮಹಾರಾಷ್ಟ್ರ ಭಾಷೆಯಲ್ಲಿಯೇ ಕಲಿಸುತ್ತಿದ್ದರು. ಆದರೆ ಆಯಾ ಸ್ಥಳೀಯ ಭಾಷೆಯಲ್ಲಿಯೇ ಸ್ಥಳಿಯ ಶಿಕ್ಷಣ ಕೊಡಬೇಕೆಂಬ ಸರಕಾರಿ ನಿರ್ಧಾರದನ್ವಯ ನಂತರ ಆಯಾ ಭಾಷೆಯಲ್ಲಿಯೇ ಶಿಕ್ಷಣ ನೀಡತೊಡಗಿದರು. ಆ ಪ್ರಕಾರ ಪುಸ್ತಕಗಳು ಕನ್ನಡದಲ್ಲಿಯೂ ಭಾಷಾಂತರಗೊಂಡವು. ಆದರೆ ಅಂಕಲಿಪಿಯೊಂದನ್ನು ಭಾಷಾಂತರಿಸದ ಕೊರತೆಯಿಂದಾಗಿ ಕೆಲವು ಶಾಲೆಗಳಲ್ಲಿ ಪಾವು ಪಾವು ಅರ್ಧ, ಅರ್ಧಕ್ಕೆ ವರಿ, ಒಂದುವರಿ, ಎರಡುವರಿ ಎಂದೂ, ಕೆಲವು ಶಾಲೆಗಳಲ್ಲಿ ಮುಕ್ಕಾಲು, ಐಕಾಲು ಎಂದೂ ಹೀಗೆ ಬೇರೆ ಬೇರೆ ರೀತಿಯಲ್ಲಿ ಮರಾಠಿಯಿಂದ ಭಾಷಾಂತರಿಸಿ ಕಲಿಸುತ್ತಿದ್ದರು. ಇದರಿಂದ ಒಬ್ಬ ವಿದ್ಯಾರ್ಥಿ ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ಹೋದರೆ ಅವನಿಗೆ ಕಲಿಕೆ ಗೊಂದಲ ಹುಟ್ಟಿಸುತ್ತಿತ್ತು. ಹಾಗಾಗೀ ಅಂಕಲಿಪಿಯನ್ನೂ ಭಾಷಾಂತರಿಸಬೇಕಾಗಿ ಶಂಬುಸಾ ಬಾಬಸಾ ಖೊಡ, ಬ್ರಾಂಚ ಸ್ಕೂಲಮಾಸ್ತರ, ಗದಗ ಇವರು ೨೮-೩-೧೮೮೧ರಂದು ಮಾಡಿಕೊಂಡ ವಿಜ್ಞಾಪಣೆ ಮನೋಜ್ಞವಾಗಿದೆ. ಕನ್ನಡದ ಬೇರು ಸರಿಯಾಗಿ ಊರಬೇಕಾದರೆ ಮೂಲ ಕಲಿಕೆಯ ಪರಿಣಾಮಕಾರಿತ್ವದ ಅರಿವು ಶಿಕ್ಷಕರಲ್ಲಿ ಮೂಡುತ್ತಿದ್ದುದು ಸ್ಪಷ್ಟವಾಗುತ್ತದೆ.

೧೮೮೯ ಫೆಬ್ರುವರಿಯಲ್ಲಿ ಗುರುಸಿದ್ದಪ್ಪಾ ಅಣ್ಣಾ ಗಿಲಗಿಂಚಿ ಎನ್ನುವವರು ಇಪ್ಪತ್ತು ಫುಲ್ ಸ್ಕೇಪ ಹಾಳೆಗಳಿಗೆ ಕಡಿಮೆ ಇಲ್ಲದಂತೆ ಒಂದು ನಿಬಂಧವನ್ನು ಬರೆದವರಿಗೆ ೧೦೦ ರೂಪಾಯಿಯ ಇನಾಮನ್ನು ಘೋಷಿಸುವುದರ ಮೂಲಕ ಕನ್ನಡದ ಪ್ರಸಾರಕ್ಕೆ, ಕನ್ನಡಭಾಷೆಯ ಬೆಳವಣಿಗೆಗೆ ಉತ್ತೇಜನ ನೀಡಿದ್ದು ಒಂದು ದೊಡ್ಡ ಕೊಡುಗೆಯಾಗಿದೆ.[೭೬]

೧೯೦೦ರಿಂದ ಇತ್ತೀಚೆಗಷ್ಟೇ ರಚನೆಗೊಂಡ ಪರಿಷತ್ತು ಕೂಟದನ್ವಯ ನಾಲ್ಕು ಜಿಲ್ಲೆಗಳ ಅಧ್ಯಾಪಕರ ಪರಿಷತ್ತಿನ ಸಮ್ಮೇಳನ ಮಾರ್ಚ ೨೬, ೨೭ ೧೯೦೨ರಂದು ಪ್ರ್ಯಾಕ್ಟಿಸಿಂಗ ಸ್ಕೂಲಿನ ಸಭಾಭವನದಲ್ಲಿ ನಡೆಯಿತು. ಇದರಲ್ಲಿ ಪಠ್ಯಗಳಲ್ಲಿ ಬದಲಾದ ಮತ್ತು ಹೆಚ್ಚುವರಿಯಾಗಿ ಸೇರಿರುವ

ಹೊಸ ವಿಷಯಗಳನ್ನು ಕಲಿಸುವುದು ಹೇಗೆ? ಎಂಬ ವಿಷಯದ ಚರ್ಚೆ ನಡೆಯಿತು ಮತ್ತು ಅವುಗಳನ್ನು ಕಲಿಸುವ ರೀತಿಯನ್ನು ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳಿಂದ ಪಾಠ ಮಾಡಿಸಿ, ಅದರಲ್ಲಿ ಬದಲಾದ ವಿಷಯಗಳ ಕಲಿಸುವ ರೀತಿಯನ್ನು ತಿದ್ದಿ ತೀಡಿ ಹೇಳುವ ಮೂಲಕ ಪ್ರಾಯೋಗಿಕವಾಗಿ ಕಲಿಸಿ, ತಿಳಿಸಿ ಕೊಡಲಾಯಿತು. ಕಲಿಕೋಪಕರಣ ಅವಶ್ಯವಿರುವ ಪಾಠಗಳಿಗೆ ನಿತ್ಯೋಪಯೋಗಿ ವಸ್ತುಗಳನ್ನ ಬಳಸಿ ಪಾಠ ಮಾಡುವ ರೀತಿಗಳನ್ನೂ ತೋರಿಸಲಾಯಿತು.[೭೭] ಮುಂದಿನ ಸಂಚಿಕೆಗಳಲ್ಲಿ ಈ ಪಾಠ ಟಪ್ಪಣಿಗಳ ಮಾದರಿಗಳನ್ನು ನೋಡಬಹುದಾಗಿದೆ. ೧೯೦೨ ರಲ್ಲಿ ಭಾರತ ಕೃಷಿಕರಿಂದಲೇ ತುಂಬಿರುವುದರಿಂದ ಶಾಲಾ ಪಠ್ಯಗಳಿಗೆ ಕೃಷಿಯನ್ನು ಸೇರಿಸಿ, ಕೃಷಿ ಪಾಠಗಳನ್ನು ಕಲಿಸಲು ಆರಂಭಿಸಿದರು. ಇದಕ್ಕಾಗಿ ಟ್ರೇನಿಂಗ್ ಕಾಲೇಜಿಗೆ ಆಯಾ ಜಿಲ್ಲೆಯ ಡಿ.ಎ.ಇ.ಗಳು ಬಂದು ಕೆಲವು ದಿನ ನಿಂತು ವಸ್ತುಪಾಠ ಶಿಕ್ಷಣ ಪದ್ಧತಿಯನ್ನು ಮೊದಲು ಅವರು ಕಲಿತು ಶಾಲೆಗಳನ್ನು ಪರೀಕ್ಷಿಸಲು ಹೋದಾಗ ಮಾಸ್ತರರಿಗೆ ಕಲಿಸಬೇಕೆಂದು ಅಪ್ಪಣೆಯಾದಂತೆ ತಕ್ಷಣ ಮೂವರು ಡಿ.ಎ.ಇ.ಗಳು ಟ್ರೇನಿಂಗ್ ಕಾಲೇಜಿಗೆ ಬಂದು ನಿಂತು, ಒಂದು ತಿಂಗಳ ತರಬೇತಿಯ ಬಳಿಕ ತಿರುಗಿ ಹೋದ ಮೇಲೆ ಉಳಿದವರು ಬರುತ್ತಾರೆ. ಅಲ್ಲದೆ ಅಲ್ಲಿ ಕಲಿಸುವ ಕೃಷಿಕರ್ಮಶಾಸ್ತ್ರದ ಪಾಠಗಳನ್ನು ಜುಲೈ ೧೯೦೨ರ ಸಂಚಿಕೆಯಿಂದ ಶಾಲಾ ಪತ್ರಕದಲ್ಲಿ ಕ್ರಮವಾಗಿ ಪ್ರಕಟಿಸುವ ವ್ಯವಸ್ಥೆಯನ್ನೂ ಮಾಡುತ್ತಾರೆ. ನಂತರದ ವರ್ಷಗಳಲ್ಲಿ ಪ್ರತಿವರ್ಷ ಶಿಕ್ಷಕರ ಸಮ್ಮೇಳನ ಹಮ್ಮಿಕೊಳ್ಳತೊಡಗಿ ಪಠ್ಯದ ಹೊಸ ಬದಲಾವಣೇಗಳಿಗೆ ಒಗ್ಗಿ ಪಾಠ ಮಾಡುವತ್ತ ಮತ್ತು ಇನ್ನೂ ಆಗಬೇಕಾದ ಬದಲಾವಣೆಗಳಿಗೆ ಹೊಂದಾಣಿಕೆಯಾಗುವ ಕಾರ್ಯ ಮೊದಲ್ಗೊಂಡಿತು. ಇದು ಶಿಕ್ಷಣಾಧಿಕಾರಿಗಳಲ್ಲಿ ಮತ್ತು ಶಿಕ್ಷಕರಲ್ಲಿ ಆದ ಮಹತ್ವದ ಮನ್ವಂತರವಾಗಿ ಪರಿಣಮಿಸಿತು.

ದಕ್ಷಿಣ ಭಾಗದಲ್ಲಿ ಈ ಹಿಂದೆ ಎ.ಇ.ಯಾಗಿ ಯಶಸ್ವಿ ಕಾರ್ಯ ನಿರ್ವಹಿಸಿ ವರಾಡ ಪ್ರಾಂತದ ಡೈರೆಕ್ಟರರಾಗಿ ಹೋಗಿ, ನಿವೃತ್ತಿ ಹೊಂದಿದ ಶ್ರೀಯುತ ಸೀತಾರಾಮ ವಿಶ್ವನಾಥ ಪಟವರ್ಧನರು, ಮುಂಬಯಿ ಗವರ್ನರ್ ಸ್ಮಾರಕವಾದ ಎಲ್‌ಫಿನ್‌ಸ್ಟನ್ ಕಾಲೇಜದ ವಿದ್ಯಾರ್ಥಿಗಳೆಂಬ ಅಭಿಮಾನದಿಂದ, ಇಬ್ಬರು ಬ್ರಾಹ್ಮಣ ವಿದ್ಯಾರ್ಥಿಗಳ ಉಚ್ಚ ಶಿಕ್ಷಣಕ್ಕೆ ಅನುಕೂಲವಾಗಲೆಂದು ೧೨೦೦೦ ರೂಪಾಯಿಗಳನ್ನು ಯುನಿವರ್ಸಿಟಿಗೆ ಮಾರ್ಚ ೧೯೦೬ಲ್ಲಿ ಕಾಣಿಕೆಯಾಗಿ ಕೊಡುತ್ತಾರೆ. ಇದು ಒಮ್ಮುಖವೆನಿಸಿದರೂ ಶಿಕ್ಷಣದ ಬೆಳವಣಿಗೆಗೆ ಮಾಡಿದ ಉತ್ತೇಜನವೆಂಬುದಂತೂ ಸತ್ಯ. ಹೀಗೆ ಮೊದಲ ಪೀಳಿಗೆಯವರಲ್ಲಿ ಜಾತ್ಯಾಭಿಮಾನದಿಂದಲೋ, ಮತ್ತೊಂದಕ್ಕೋ ಅಂತೂ ಜಾಗೃತಿ ಮೆಲ್ಲನೆ ಬೆಳೆಯತೊಡಗಿತ್ತು.

೧೯೦೯ರಷ್ಟೊತ್ತಿಗೆ ಮರಾಠಿ ಪುಸ್ತಕಗಳು ಮೆಲ್ಲನೆ ಹಿಂದೆ ಸರಿಯತೊಡಗಿದ್ದವು ಎಂಬುದಕ್ಕೆ ೧೯೧೦ಲರಲ್ಲಿ ಮತ್ತು ೧೯೧೧ರಲ್ಲಿಯ ಮುಂದಿನ ೨ ಉದಾಹರಣೆಗಳು ಸಾಕ್ಷಿಯಾಗುತ್ತದೆ.

ಜಾಹೀರಾತು.

ಮುಂಬಯಿ ಇಲಾಖೆಯಲ್ಲಿಯ ಪ್ರಾಥಮಿಕ ಶಾಲೆಗಳ ಹಾಗೂ ಅಂಗ್ಲೋವರ್ನ್ಯಾಕ್ಯುಲರ ಶಾಲೆಗಳ ಪುಸ್ತಕಾಲಯಗಳ ಉಪಯೋಗಕ್ಕೋಸ್ಕರ ಮಂಜೂರು ಮಾಡಿದ ಆರ್. ಜಿ. ಗೋಖಲೆ ಬಿ. ಎ. ಇವರಿಂದ ರಚಿಸಲ್ಪಟ್ಟ "ವಕ್ತೃತ್ವಕಲಾ" ಮೊದಲನೆಯ ಭಾಗ ಎಂಬ ಮರಾಠೀ ಪುಸ್ತಕವನ್ನು, ಪುಸ್ತಕಾಲಯಗಳ ಉಪಯೋಗಕ್ಕೂ, ಇನಾಮಗಳಿಗೆ ಕೊಡುವದಕ್ಕೂ ಮಂಜೂರುಮಾಡಿದ ಕೆ. ಎಸ್. ಬಿವಲಕರ ಇವರಿಂದ ರಚಿತವಾದ "ದಾಸಬಾಸ್" ಎಂಬ ಮರಾಠೀ ಪುಸ್ತಕವನ್ನು ಮಂಜೂರು ಮಾಡಿದ ಪುಸ್ತಕಗಳ ಪಟ್ಟಿಯಿಂದ ತೆಗೆದು ಹಾಕಿರುತ್ತದೆ.

Office of the Director of Public Instruction Poona, 19th Dec. 1910. } (Sd) W. H. SHARP. Director of Public Instruction

---

ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೋಸ್ಕರ ಈ ಮೊದಲು ಸರಕಾರದಿಂದ ಮಂಜೂರಾಗಿದ್ದಂಥ ಕೆಳಗೆ ಕಾಣಿಸಿದ ಮರಾಠೀ ಪುಸ್ತಕಗಳನ್ನು ಮಂಜೂರಾದ ಪುಸ್ತಕಗಳ ಪಟ್ಟಿಯೊಳಗಿಂದ ಸರಕಾರದ ಜಾಹೀರ ನೋಟೀಸ ನಂ. ೩೩೦೯ರ ಮೇರೆಗೆ ತೆಗೆದು ಹಾಕಿರುತ್ತದೆ:-

ಪುಸ್ತಕದ ಹೆಸರು.	ಯಾವ ನೋಟೀಸಿನಲ್ಲಿ ಮಂಜೂರಾಗಿತ್ತು.
के. श्री. पाटक कृत हिंदुस्थानचा ऐतिहासिक नकाशा. (Historical Map of India)	ನಂ. ೧೫೯೪ ತಾ|| ೧ ಜೂನ ೧೯೦೮.
भावेजर चित्रशाळा स्टीमप्रेस— शिक्षणोपयोगी म.नकाशा.	ನಂ. ೫೫೪ ತಾ|| ೯ ಮಾರ್ಚ ೧೯೦೯

ಜಾಹೀರಾತು

—:o:—

ಕೆ. ಎಸ್. ಬಿವಲಕರ ಎಂಬವರಿಂದ ರಚಿತವಾದ [illegible] ಎಂಬ ಮರಾಠೀ ಪುಸ್ತಕವು ಮರಾಠೀ ಪ್ರಾಥಮಿಕ ಶಾಲೆಗಳಿಗೂ ಅಂಗ್ಲೋವರ್ನ್ಯಾಕ್ಯುಲರ ಶಾಲೆಗಳಿಗೂ ಇನಾಮಿಗೋಸ್ಕರ ಮಂಜೂರು ಮಾಡಿದ ಪುಸ್ತಕಗಳ ಪಟ್ಟಿಯೊಳಗಿಂದ ತೆಗೆದು ಹಾಕಿರುತ್ತದೆ.

Office of the Director of Public Instruction Poona 11th January 1911. } P. WREN, For Director of Public Instruction.

---

೧೧ ಮಾರ್ಚ ೨೧ರಂದು ಜರುಗಿದ ವಿಶ್ವವಿದ್ಯಾಲಯದ ಪದವೀಧಾನ ಸಮಾರಂಭದಲ್ಲಿ ಮುಂಬಯಿಯ ಗವರ್ನರರಾದ ಜಾರ್ಜಕ್ಲಾರ್ಕ ಮಾತನಾಡುತ್ತ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಗಳನ್ನು ನೆನೆಸಿಕೊಳ್ಳುತ್ತಾರೆ; ಅದರ ಮುಖ್ಯಾಂಶದ ಪ್ರಕಾರ "ದೊಡ್ಡ ಊರುಗಳಲ್ಲಿ ಒಬ್ಬ ವಿದ್ಯಾರ್ಥಿಯ ಶಿಕ್ಷಣಕ್ಕೆ ೧೦ರೂಪಾಯಿ, ೮ಆಣೆ ಹಿಡಿದರೆ ಅಲ್ಲಿ ೭ ರೂಪಾಯಿ ೮ಆಣೆ ಹಿಡಿಯುವುದು. ಲೋಕಲ್ ಫಂಡನವರು ರೂಪಾಯಿಗೆ ಒಂದು ಆಣೆಯಂತೆ ಕೊಡುವರು; ಹಾಗಾಗಿ ದೊಡ್ಡ ಹುಡುಗರಿಗೆ ೧೨ ಆಣೆ, ಚಿಕ್ಕ ಹುಡುಗರಿಗೆ ೬ಆಣೆಗಳು ಮಾತ್ರ ವೆಚ್ಚವಾಗುತ್ತವೆ. ಹಾಗಾಗಿ ಪ್ರಾಥಮಿಕ ಶಿಕ್ಷಣವನ್ನು ಸಾಧ್ಯವಿದ್ದಷ್ಟು ಉಚಿತವಾಗಿ ಕೊಡುಮಾಡಲಾಗುತ್ತಿದೆ. ಇ.ಸ. ೧೯೦೯-೧೦ ನೇ ವರ್ಷದ ಅಂತ್ಯಕ್ಕೆ ಸರಕಾರದವರು ಮಾನ್ಯ ಮಾಡಿದ ಶಾಲೆಗಳ ಸಂಖ್ಯೆಯು ೧೧೬೯೦, ವಿದ್ಯಾರ್ಥಿಗಳ ಸಂಖ್ಯೆಯು ೬೯೦೫೩೩ ಮತ್ತು ಶಾಲೆಗಳಿದ್ದ ಹಳ್ಳಿಗಳ ಸಂಖ್ಯೆ ೧೦,೮೪೫; ಇಷ್ಟಿದ್ದಾಗ್ಯೂ ಇನ್ನೂ ಶಾಲೆಗಳ ಸಂಖೆಯನ್ನು ಹೆಚ್ಚಿಸು ಉದ್ದೇಶವಿದೆ. ವಾಡಿಕೆಯಾಗಿ ಹದಿನೈದು ಅಥವಾ ಹದಿನೈದಕ್ಕಿಂತಲೂ ಕಡಿಮೆ ಹುಡುಗರು ಹಾಜರ ಇರುವಲ್ಲಿ ಶಾಲೆಗಳು ಇಡಲ್ಪಟ್ಟಿರುತ್ತವೆ. ಇಂಥಲ್ಲಿ ಪಾಲಕರ ಉದಾಸೀನತೆಯಿಂದಾಗಿ ಮತ್ತು ಲೋಕಲ ಬೋರ್ಡಿನ ಹಲವು ವಿಧವಾದ ಬೇಡಿಕೆಯಿಂದಾಗಿ ಸಾಲೆಗಳು ಬಂದಾಗುತ್ತಿವೆ... ಅಲ್ಲದೆ ಅರ್ಧಕ್ಕಿಂತ ಹೆಚ್ಚು ಮುಖ್ಯಶಿಕ್ಷಕರು ಅನ್ಟ್ರೇನ್ಡ ಇರುವರು, ಅವರನ್ನು ಟ್ರೇನ್ಡಾಗಿ ಮಾಡುವ ಅವಶ್ಯಕತೆ ಇದೆ" ಎಂದು ಒತ್ತಿ ಹೇಳುತ್ತಾರೆ.[೨೮]

ಇವರು ಶಾಲಾ ಪತ್ರಕದಲ್ಲಿ ಪ್ರಕಟಿಸಿದ 'ದೇಶಭಾಷೆಯ ಗಂಡಸರ ಟ್ರೇನಿಂಗ ಕಾಲೇಜಗಳ ಕಾಯಿದೆ. ೧೯೧೦' ಇದರ ಪ್ರಕಾರ 'ಧಾರವಾಡದ ಗಂಡಸರ ಟ್ರೇನಿಂಗ ಕಾಲೇಜದ ತಿದ್ದಿ ಶುದ್ಧ

ಮಾಡಿದ ಕಾಯಿದೆಯನ್ನು ದಕ್ಷಿಣ ವಿಭಾಗದೊಳಗಿನ ವಿದ್ಯಾಖಾತೆಯ ಅಧಿಕಾರಗಳೂ ತಿಳದುಕೊಂಡು ಅದರಂತೆ ನಡಿಯಬೇಕೆಂಬ ಉದ್ದೇಶದಿಂದ ಪ್ರಕಟಿಸಿರುತ್ತೇವೆ' ಎಂಬ ಪ್ರಕಟಣೆಯ ಅಡಿಯಲ್ಲಿ ಟ್ರೇನಿಂಗ ಕಾಲೇಜಿನ ಕಾಯಿದೆಗಳಿಗೆ ತಿದ್ದುಪಡಿ ತಂದಿರುವುದು ತಿಳಿದು ಬರುತ್ತದೆ. ಇಲ್ಲಿ ನೀಡಿರುವ ಒಟ್ಟು ೧೯ ನಿಯಮಗಳಲ್ಲಿ ೨ನೆಯ ನಿಯಮ ಕೂತುಹಲಕಾರಕವಾಗಿದೆ.

'೧ನೇ ವರ್ಷದ ವಿದ್ಯಾರ್ಥಿಗಳಿಗೆ ೭.೫ ರೂ ಸಂಬಳ

೨ನೇ ವರ್ಷದ ವಿದ್ಯಾರ್ಥಿಗಳಿಗೆ ೭.೫ ರೂ ಸಂಬಳ

೩ನೇ ವರ್ಷದ ವಿದ್ಯಾರ್ಥಿಗಳಿಗೆ ೮ ರೂ ಸಂಬಳ............

ಯಾವ ವಿದ್ಯಾರ್ಥಿಗಳೂ ತಮ್ಮ ಹೆಂಡರನ್ನು ಹೆಂಗಸರ ಟ್ರೇನಿಂಗ ಕಾಲೇಜಕ್ಕೆ ಶಿಕ್ಷಣಾಭ್ಯಾಸಕ್ಕಾಗಿ ಕಳುಹುವರೋ ಅವರಿಗೆ ಮೇಲಿನ ಸಂಬಳ ಹೊರ್ತುಪಡಿಸಿ ೩ ರೂಪಾಯಿ ಸಂಬಳ ಹೆಚ್ಚಿಗೆ ದೊರೆಯುವವು'[೭೯] ಎಂದಿರುವುದು ಮಹಿಳಾ ಶಿಕ್ಷಣಕ್ಕಾಗಿ ನೀಡಿದ ವಿಶೇಷ ಪ್ರೋತ್ಸಾಹ ಮತ್ತು ಜಾಗೃತಿಯ ದ್ಯೋತಕವಾಗಿದೆ.

ಅಲ್ಲದೆ ಹನ್ನೊಂದನೆಯ ನಿಯಮದ ಪ್ರಕಾರ ಪೆನ್‌ಶನ್ನಿಗೆ ಯೋಗ್ಯವಾದ ಶಿಕ್ಷಕರು, ಮೇಲಾಧಿಕಾರಿಗಳ ಅಪ್ಪಣೆಯ ಮೆರೆಗೆ ಟ್ರೇನಿಂಗ ಕಾಲೇಜಿನಲ್ಲಿ ಅಭ್ಯಾಸಕ್ಕೆ ಇದ್ದರೆ, ಅವರಿಗೆ ಪಗಾರ ಸಿಗಲಿಬಿಡಲಿ, ಆ ಕಾಲವು ಪೆನ್‌ಶನಿಗೆ ಯೋಗ್ಯವಾದ ಕಾಲವೆಂದು

ಏಣಿಸಲ್ಪಡುತ್ತಿತ್ತು.' ಈ ನಿಯಮವೂ ಅಧ್ಯಯನಕ್ಕೆ ಪ್ರೋತ್ಸಾಹಕವಾಗಿದೆ.

ಪರಿಶಿಷ್ಟ (ಬ) (೬ನೇ ನಿಯಮ.)

ಅಭ್ಯಾಸಕ್ರಮ.

ಮೊದಲನೇ ವರ್ಷದ ಅಭ್ಯಾಸವು

ಅವಶ್ಯವಾದ ವಿಷಯಗಳು.

೧. ಶಿಕ್ಷಣ ಪದ್ಧತಿ ಮತ್ತು ಶಾಲಾವ್ಯವಸ್ಥೆ– (ಅ) ಶಾಲಾವ್ಯವಸ್ಥೆ ಮತ್ತು ಶಿಕ್ಷಣ ಪದ್ಧತಿಯ ಸಾಮಾನ್ಯ ತತ್ವಗಳು ಹಾಗೂ ರೀತಿಯು.
(ಬ) ದೇಶಭಾಷಾಶಾಲಾಧ್ಯಾಪಕರ ಕಾಯಿದೆಯೂ ಶಾಲೆಯ ಸಂಬಂಧದ ನಮೂನೆಗಳೂ ಪತ್ರಿಕೆಗಳೂ.
(ಕ) ದೇಶಭಾಷೆಯ ಶಾಲೆಯೊಳಗಿನ "ಶಿಕ್ಷಕರ ಬಗ್ಗೆ ಸೂಚನೆಗಳು."

೨. ಕನ್ನಡ– (ಅ) ಗದ್ಯ:– ಯಾವದಾದರೊಂದು ಸುಲಭವಾದ ಪಠ್ಯಗ್ರಂಥದೊಳಗಿನ ೪೦ ಪುಟಗಳು.
(ಬ) ಪದ್ಯ:– ಮಂಜೂರಾದ ಯಾವದಾದರೊಂದು ಅಥವಾ ಹಲವು ಗ್ರಂಥಗಳೊಳಗಿನ ೧೦೦ ಪದ್ಯಗಳು. ೨೦೦ ಸಾಲುಗಳನ್ನು ಬಾಯಿಪಾಠ ಹೇಳುವದು.
(ಕ) ವ್ಯಾಕರಣ:– ಸುಡಿಗಟ್ಟು ಮತ್ತು ದರ್ಪಣದೊಳಗಿನ ೫೦ ಸೂತ್ರಗಳು. ವ್ಯಾಕರಣ ನಿಯಮದಿಂದ ಸಾಧಿತವಾದ ಕೃದಂತ ಶಬ್ದಗಳು.
(ಡ) ನಿಬಂಧ.
(ಇ) ಅಕ್ಷರ ಬರಹವೂ ಶಿಕ್ಷೆಯನ್ನು ಹಾಕುವದೂ.
(ಫ) ಮೊದಲನೇ ೪ ಕ್ರಮಿಕ ಪುಸ್ತಕಗಳ ವಾಚನವೂ ಕವಿತೆಗಳನ್ನು ಬಾಯಿಪಾಠ ಹೇಳುವದೂ.

ಅಥವಾ, ಉರ್ದು – (ಅ) ಗದ್ಯ:– ಲಾಹೋರದ ಅಂಜುಮನ ಹಿಮಾಯತೆ ಇಸಲಾಮ್ ಇವರಿಂದ ಪ್ರಕಟಿಸಲ್ಪಟ್ಟ ಮೊದಲನೇ ೪ ಉರ್ದು ವಾಚನ ಪುಸ್ತಕಗಳೂ ಇಬತೂತೆ ಅಹದ್ನಾದಿಯ ಪೂರ್ವಾರ್ಧವೂ.

— ೬೦ —

ಪದ್ಯ:– ಮಜಮೂಯೆ, ಸುಖುನ ದ ೧ನೇ ಭಾಗದ ೩ನ ಹೈದರಿಗಳೂ ೧೦೦ ಸಾಲುಗಳನ್ನು ಬಾಯಿಪಾಠ ಹೇಳುವದೂ.
(ಬ) ವ್ಯಾಕರಣ:– ಹೋಲರಾಯಿಡ ಸಾಹೇಬರ ಕವಾಯಿದ ಉರ್ದು ಎಂಬ ಪುಸ್ತಕದೊಳಗಿನ ವಾಕ್ಯರಚನವನ್ನು ಬಿಟ್ಟು ಉಳಿದ ಭಾಗವು.
(ಕ) ನಿಬಂಧ.
(ಡ) ಅಕ್ಷರ ಬರಹವೂ ಶಿಕ್ಷೆಯನ್ನು ಹಾಕುವದೂ.
(ಇ) ಉರ್ದು ಹಸ್ತ ಲೇಖಗಳನ್ನು ಓದುವದು.

ಸಂಸ್ಕೃತ:– ಸಂಸ್ಕೃತ ೧ನೇ ಪುಸ್ತಕದೊಳಗಿನ ೧ರಿಂದ ೨೩ ಪಾಠಗಳು.
ಅಥವಾ, ಪಾರ್ಸಿ:– ಹೋಲರಾಯಿಡ ಸಾಹೇಬರ ಪಾರ್ಸಿ ೧ನೇ ಪುಸ್ತಕ ಅಮುದನ್ ನಾಮೆಯೂ.
ಅಥವಾ, ಉರ್ದು:– (ವಿದ್ಯದಲ್ಲಿ ಹಿಂದುಳಿದ ಜಾತಿಯವರ ಬಗ್ಗೆ)
(ಅ) ಗದ್ಯ:– ೧ನೆಯ ಹಾಗೂ ೨ನೆಯ ಉರ್ದು ವಾಚನ ಪುಸ್ತಕಗಳು.
ಪದ್ಯ:– ಮೇಲೆ ಕಾಣಿಸಿದ ಪುಸ್ತಕಗಳೊಳಗಿನ ಕವಿತಾ ಗೀತಗಳು.
(ಬ) ವ್ಯಾಕರಣ:– ನಾಮ, ಲಿಂಗ, ವಿಭಕ್ತಿ, ಮುಖ್ಯ ಕಾಲಗಳು ಮತ್ತು ಕ್ರಿಯಾಪದಗಳ ಸಾಮಾನ್ಯ ಜ್ಞಾನವು.
ಪಾಠದ ಪುಸ್ತಕ:– ಹೋಲರಾಯಿಡ ಸಾಹೇಬರ ಕವಾಯಿದೆ ಉರ್ದು.
(ಕ) ನಿಬಂಧ.
(ಡ) ಅಕ್ಷರ ಬರಹವೂ ಶಿಕ್ಷೆಯನ್ನು ಹಾಕುವದು.

೪. ಗಣಿತ– (ಅ) ಅಂಕಗಣಿತ:– ಬಾಯಿಲೆಕ್ಕ ಹಾಗೂ ಹಲಗೆಯ ಮೇಲಿನ ಲೆಕ್ಕ, ಶೇಷ, ವಿಮೆ, ಘಾತಪ್ರಕರಣ, ಮೂಲಪ್ರಕರಣ, ಸಂಖ್ಯಾ ಲೇಖನ ಪದ್ಧತಿ, ಶ್ರೇಢಿಗಳು ಇವುಗಳ ಹೊರ್ತು ಉಳಿದ ಎಲ್ಲ ವಿಷಯಗಳ ಉಪಪತ್ತಿಯು.

(ಬ) ಬೀಜಗಣಿತ:– ಪೂರ್ಣರಾಶಿಗಳ ಬೇರೀಜು, ವಜಾಬಾಕಿ, ಗುಣಾಕಾರ, ಭಾಗಾಕಾರಗಳು.

(ಕ) ಭೂಮಿತಿ–(ಬ) ಪರಿಶಿಷ್ಟದ(ಅ) ಪಟ್ಟಿಯಲ್ಲಿ ವಿವರಿಸಿದಂತೆ.

೩. ಇತಿಹಾಸವೂ, ಭೂಗೋಲವೂ } (ಅ) ಹಿಂದುಸ್ಥಾನದ ಇತಿಹಾಸವು, ಮುಸಲ್ಮಾನರ ಹಾಗೂ ಮಹಾರಾಷ್ಟ್ರರ ಆಳಿಕೆಯೂ, ಕರ್ನಾಟಕದ ಇತಿಹಾಸದ ವಿಶೇಷ ಜ್ಞಾನವೂ, ಸರಕಾರದ ರಾಜ್ಯಪದ್ಧತಿಯ ಕೆಲವು ಮಾಹಿತಿಯೂ.

(ಬ) ಹಿಂದುಸ್ಥಾನದ ಹಾಗು ಏಶಿಯಾ ಖಂಡದ ವಿಶೇಷ ವರ್ಣನೆಯು, ಮತ್ತು ನೈಸರ್ಗಿಕ ಭೂಗೋಲವು. ಪೃಥ್ವಿಯೂ ಅದರ ಆಕಾರವೂ ಪರಿಮಾಣವೂ ಗತಿಗಳೂ.

(ಕ) ಹಿಂದುಸ್ಥಾನದ ನಕಾಶೆಯನ್ನು ರಾಜಕೀಯ ವಿಭಾಗಗಳ ಸಹಿತ ತೆಗೆಯುವದು.

೪ ಶಾಸ್ತ್ರೀಯ ವಿಷಯ–(ಅ) ಬಾಲ್ಫರ ಸ್ಟೂಅರ್ಟ ಸಾಹೇಬರ "ಪದಾರ್ಥವಿಜ್ಞಾನ ಶಾಸ್ತ್ರದ ಮೂಲತತ್ವಗಳು" ಎಂಬ ಪುಸ್ತಕದಲ್ಲಿರುವಷ್ಟು; ಅಂದರೆ ಪದಾರ್ಥದ ಸಾಮಾನ್ಯ ಧರ್ಮಗಳು, ಉಷ್ಣತೆ, ಪ್ರಕಾಶ, ವಿದ್ಯುಲ್ಲತೆ.

(ಬ) ೨–೪ ಕ್ರಮಿಕ ಪುಸ್ತಕಗಳೊಳಗಿನ ಶಾಸ್ತ್ರೀಯ ಪಾಠಗಳು.

೫ ಚಿತ್ರಕಲೆ–(೧) ಸೂಚಿತ ವಸ್ತುಪಾಠಗಳ ಯಾದಿಯಲ್ಲಿ ಹೇಳಿದ ಮಾದರಿಯ ಬಳಿಕೆಯೊಳಗಿನ ಸ್ವಾಭಾವಿಕ ಪದಾರ್ಥಗಳ ಹಾಗೂ ಕೃತ್ರಿಮ ಪದಾರ್ಥಗಳ ಚಿತ್ರಗಳನ್ನು ಕರೆಹಲಿಗೆಯ ಮೇಲೆ ತೆಗೆಯುವದು.

(೨) ಮೇಲೆ ಹೇಳಿದ ಚಿತ್ರಗಳನ್ನು ಕಾಗದದ ಮೇಲೆ ಪೇನ್ಸಿಲಿನಿಂದಲೂ ಮಸಿಯಿಂದಲೂ ತೆಗೆಯುವದು.

ಸೂಚನೆ:– ಮಸಿಯಿಂದ ಚಿತ್ರಗಳನ್ನು ತೆಗೆಯುವ ಪೂರ್ವದಲ್ಲಿ ಸೀಸಪೇನಿನಿಂದ ತೆಗೆಯುವ ರೂಢಿಯನ್ನು ಇಡಬೇಕು.

೨. ಕನ್ನಡ–(ಅ) ಗದ್ಯ:– ಮಂಜೂರಾದ ಯಾವದಾದರೊಂದು ಪುಸ್ತಕದ ೪೦ ಪುಟಗಳು.

(ಬ) ಪದ್ಯ:– ಮಂಜೂರಾದ್ದೆ ಯಾವದಾದರೊಂದು ಅಥವಾ ಹೆಚ್ಚು ಗ್ರಂಥಗಳೊಳಗಿನ ೧೦೦ ಪದ್ಯಗಳು.

(ಕ) ವ್ಯಾಕರಣ:– ದರ್ಪಣದ ೫೦–೧೫೩ ಸೂತ್ರಗಳ ಸಾಮಾನ್ಯ ಜ್ಞಾನವು. ವ್ಯಾಕರಣ ನಿಯಮದಿಂದ ಸಾಧಿತವಾದ ತದ್ಧಿತ ಶಬ್ದಗಳು. ಕನ್ನಡ ಮಾತ್ರಾವೃತ್ತಗಳು.

(ಡ) ನಿಬಂಧ ಮತ್ತು ಅಕ್ಷರ ಬರಹ.

ಅಥವಾ ಉರ್ದು–{ (ಅ) ಗದ್ಯ:– (ಪಂಜಾಬ ಟ್ರೇನಿಂಗ ಕಾಲೇಜದಲ್ಲಿ ಹಚ್ಚಿದ) "ನಿಸಾಬೆ ಉರ್ದು" ಎಂಬ ಪುಸ್ತಕದ ೧–೧೨೮ ಪುಟಗಳು.

ಪದ್ಯ:– ಮಜಮುಯೆ, ಸುಖುನ್‌ದ ೧ನೆಯ ಭಾಗದ ೫೦೦ ದ್ವಿಪದಿಗಳೂ ೧೦೦ ಸಾಲುಗಳನ್ನು ಬಾಯಿಪಾಠ ಹೇಳುವದೂ.

(ಬ) ವ್ಯಾಕರಣ:– ಕೋಲ್‌ರಾಯಿದ ಸಾಹೇಬರ ಕವಾಯಿದೆ ಉರ್ದು ಪೂರಾ; ಮತ್ತು ೧ನೇ ಹಾಗು ೨ನೇ ವರ್ಗಗಳಲ್ಲಿ ಕಲಿತ ಕವಿತೆಗಳ ಛಂದಸ್ಸಿನ ಲಕ್ಷಣಗಳು.

(ಕ) ನಿಬಂಧ.

(ಡ) ಅಕ್ಷರ ಬರಹವೂ ಕಿತ್ತೆಯನ್ನು ಹಾಕುವದೂ.

೩. ಸಂಸ್ಕೃತ– ೧ನೇ ಪುಸ್ತಕ ಪೂರಾ. ೨ನೇ ಪುಸ್ತಕದ ೧–೧೨ ಪಾಠಗಳು.

೪ನೇ ತಂತ್ರ ಅಥವಾ ಅದಕ್ಕೆ ಸರಿಯಾದ ಬೇರೊಂದು ಪುಸ್ತಕದ ೨೦ ಪುಟಗಳು.

ಅಥವಾ ಪಾರ್ಸಿ:– ಬೋಸ್ತಾನದ ೧ನೇ ಅಧ್ಯಾಯದೊಳಗಿನ ೫೦೦ ದ್ವಿಪದಿಗಳು, ಗುಲಿಸ್ತಾನದ ೧ನೇ ಅಧ್ಯಾಯವು, ಮತ್ತು ನಿಸಾರಲಿಮ ಕವಾಯಿದೆ ಫಾರ್ಸಿಯ ಮೊದಲಿನ ೧೮ ಪುಟಗಳು.

(ಡ) ಇತಿಹಾಸ ಭೂಗೋಲ ಪಾಠಗಳನ್ನು ಸ್ಪಷ್ಟೀಕರಿಸುವದಕ್ಕಾಗಿ ನಕಾಶೆಗಳನ್ನು ತೆಗೆಯುವದು.

(ಇ) ರೂಲಪಟ್ಟಿ, ತ್ರಿಕೋಣಪಟ್ಟಿ, ಘಟಕಟ್ಟಿಗೆ, ಮತ್ತು ವಿಭಾಜಕ (ಕಂಪಾಸ) ಮುಂತಾದ ಚಿತ್ರ ತೆಗೆಯುವ ಸುಲಭವಾದ ಯಂತ್ರಗಳ ಉಪಯೋಗವನ್ನು ಮಾಡಲಿಕ್ಕೆ ಕಲಿಯುವದು. ಬಾಗಿಲ, ಪೆಟ್ಟಿಗೆ, ಕಿಟಕಿ, ಮೇಜು ಮುಂತಾದ ಸುಲಭ ವಸ್ತುಗಳನ್ನು ಪ್ರತ್ಯಕ್ಷವಾಗಿ ಅಳೆಯಲಿಕ್ಕೆ ಕಲಿಯುವದೂ ಬರೇ ನೋಡಿ ಅಜಮಾಸಿನಿಂದ ಅವುಗಳ ಅಳತೆಗಳನ್ನೂ ಪ್ರಮಾಣಗಳನ್ನೂ ಹೇಳಲಿಕ್ಕೆ ಕಲಿಯುವದೂ.

ಸೂಚನೆ:– ೧ನೇ ೨ನೇ ೩ನೇ ಸದರಿನ ವಿಷಯಗಳ ಆಕೃತಿಗಳನ್ನು ಮೇಲಿಂದ ಮೇಲೆ ಕೈಸಟಿನಿಂದ ತೆಗೆಯುವ ರೂಢಿಯನ್ನು ಪಾಡಿಸಬೇಕು.

೬. ಕಸರತು. ಲೋಡು–ಮಲಕಂಬ–ದಾಂಡಗಳ ಸುಲಭ ಕೃತಿಗಳು, ಜಿಗಿಯುವದು, ಓಡುವದು, ಮತ್ತು ಕಾಲೆಯ ಕವಾಯಿತು.

೭. ಕೃಷಿಕರ್ಮ:– ಕೃಷಿಕರ್ಮದ ೧ನೇ ಪುಸ್ತಕ ಪೂರಾ, ಹಾಗೂ ೨ನೇ ಪುಸ್ತಕದ ಅರ್ಧ.

ಐಚ್ಛಿಕ ವಿಷಯವು.

[೧೨ನೇ ಮತ್ತು ೧೫ನೇ ನಿಯಮಗಳು.]

ಡಾಕ್ಟರ ಥಾಮ್ಸನ್ ಸಾಹೇಬರು ಬರೆದ "ಹಿಂದುಸ್ಥಾನದ ಶಾಲೆಗಳ ಬಗ್ಗೆ ಕೈಗಾರಿಕೆಯ ಶಿಕ್ಷಣ" (ಮ್ಯಾನ್ಯುಅಲ್ ಟ್ರೇನಿಂಗ ಫಾರ ಇಂಡಿಯನ್ ಸ್ಕೂಲ್ಸ) ಎಂಬ ಪುಸ್ತಕದೊಳಗಿನ ೨–೬ ಪಾಠಗಳು.

ಎರಡನೇ ವರ್ಷದ ಅಭ್ಯಾಸವು.

೧. ಶಿಕ್ಷಣಪದ್ಧತಿ ಶಾಲಾವ್ಯವಸ್ಥೆ– } (ಅ) ೧ನೇ ವರ್ಷದ ವಿಷಯಗಳ ವಿಶೇಷ ಜ್ಞಾನವು.
(ಬ) ಇಂದ್ರಿಯಗಳನ್ನೂ ಸ್ಮರಣಶಕ್ತಿಯನ್ನೂ ತಿದ್ದುವದು; ಮತ್ತು ಬಾಲಕರ ಜ್ಞಾನೇಂದ್ರಿಯಗಳ ಬೆಳವಣಿಗೆಯ ಕ್ರಮವು.

ಅಥವಾ ಉರ್ದು:– (ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬರೆಯಲ್ಪಟ್ಟ ಬಗ್ಗೆ)

(ಅ) ಗದ್ಯ– ೩ನೇ ಹಾಗೂ ೪ನೇ ಉರ್ದು ವಾಚನ ಪುಸ್ತಕಗಳು.

ಪದ್ಯ– ೩ನೇ ವಾಚನ ಪುಸ್ತಕದೊಳಗಿನ ೧೦೦ ದ್ವಿಪದಿಗಳು.

(ಬ) ವ್ಯಾಕರಣ–(ಪಂಜಾಬ ಗ್ರಂಥಮಾಲೆಯ) "ಸರಫ್ ನಹವೆ ಉರ್ದು" ಎಂಬ ಪುಸ್ತಕ ಪೂರ್ವಾರ್ಧವು.

(ಕ) ನಿಬಂಧ.

(ಡ) ಅಕ್ಷರಬರಹವೂ ಕಿತ್ತೆಯನ್ನು ಹಾಕುವದೂ.

೪. ಗಣಿತ. (ಅ) ಅಂಕಗಣಿತ ಪೂರಾ. ಸಂಖ್ಯಾಲೇಖನಪದ್ಧತಿ ಮತ್ತು ಕ್ರೀಧಿಗಳು, ಇವುಗಳ ಹೊರ್ತು ಉಳಿದ ಎಲ್ಲ ವಿಷಯಗಳ ಉಪಪತ್ತಿಯು.

(ಬ) ಬೀಜಗಣಿತ– ಸುಲಭವಾದ ಅವಯವಗಳನ್ನು ತೆಗೆಯುವದು, ಮಹತ್ತಮ ಸಾಧಾರಣ ಭಾಜಕ, ಲಘುತ್ತಮ ಸಾಧಾರಣ ಭಾಜ್ಯ, ಅಪೂರ್ಣರಾಶಿಗಳು, ಸುಲಭವಾದ ಏಕವರ್ಣ ಸಮೀಕರಣವು.

(ಕ) ಭೂಮಿತಿ– (ಬ) ಪರಿಶಿಷ್ಟದ (ಅ) ಪಟ್ಟಿಯಲ್ಲಿ ವಿವರಿಸಿದಂತೆ.

(ಡ) ರೇಷೆಗಳ ಹಾಗೂ ಕ್ಷೇತ್ರಗಳ ಮಹತ್ವಮಾಪನವು.

೫. ಇತಿಹಾಸವೂ ಭೂಗೋಲವೂ } (ಅ) ಇತಿಹಾಸ— ೧ನೇ ವರ್ಷದಲ್ಲಿ ಆದ ವಿಷಯಗಳ ಪುನರಾವೃತ್ತಿಯು ಮತ್ತು ಬ್ರಿಟಿಕರ ಆಳಿಕೆಯು.

(ಬ) ಭೂಗೋಲ:– ಯುರೋಪ ಮತ್ತು ಆಫ್ರಿಕಾ ಖಂಡಗಳ ವರ್ಣನೆಯು.

ನೈಸರ್ಗಿಕಭೂಗೋಲ:– ನೆಲ ಮತ್ತು ನೀರು. ಕೃತ್ರಿಮ ಭೂಗೋಲದ ಉಪಯೋಗವು.

(ಕ) ನಕಾಶೆ ತೆಗೆಯುವದು. ೧ನೆಯ ವರ್ಷದ ಪುನರಾವೃತ್ತಿಯು.

೬. ಶಾಸ್ತ್ರೀಯ ವಿಷಯಗಳು (ಅ) ರಸಾಯನಶಾಸ್ತ್ರ:-ರಾಸ್ಕೋ ಸಾಹೇಬರ ಪ್ರಥಮಪುಸ್ತಕದಲ್ಲಿ (ಪ್ರಾಯಮರದಲ್ಲಿ) ಹೇಳಿದಷ್ಟು.

(ಬ) ಕ್ರಮಿಕ ೫ನೇ ಮತ್ತು ೬ನೇ ಪುಸ್ತಕಗಳೊಳಗಿನ ಶಾಸ್ತ್ರೀಯ ಪಾಠಗಳು.

೭. ಚಿತ್ರಕಲೆ (ಅ) ೧ನೇ ವರ್ಷದ ವಿಷಯಗಳನ್ನು ಹೆಚ್ಚು ಕಠಿಣವಾದ ಉದಾಹರಣೆಗಳನ್ನು ತೆಗೆದುಕೊಂಡು ಮುಂದೆ ಸಾಗಿಸುವದು.

(ಬ) ೧ನೇ ವರ್ಷದ ಬಗ್ಗೆ ಸೂಚಿಸಿದ ವಸ್ತುಗಳಿಗೆ ಸಮಾನವಾದ ಸ್ವಭಾವ ಹಾಗೂ ಕೃತ್ರಿಮ ವಸ್ತುಗಳ ಚಿತ್ರಗಳನ್ನು ಬಣ್ಣದ ಖಡುಗಳಿಂದಲೂ ಕುಂಚದಿಂದಲೂ ತೆಗೆಯುವದು.

(ಕ) ಸಿ. ಎಲ್. ಬರ್ನ್ಸ ಸಾಹೇಬರ ಪ್ರಾಥಮಿಕ ಚಿತ್ರಪಟಗಳಲ್ಲಿರುವಂಥ ಸುಲಭ ಆಕೃತಿಗಳನ್ನು ಯಂತ್ರಗಳಿಂದ ತೆಗೆಯುವದು. (ಇದಕ್ಕೆ ಕೃತ್ಯ ಸಿದ್ಧಾಂತಗಳ ಸಹಾಯ ತೆಗೆದುಕೊಳ್ಳುವ ಕಾರಣವಿಲ್ಲ.) ಮತ್ತು ಪ್ರಮಾಣದಿಂದ ಚಿತ್ರಗಳನ್ನು ತೆಗೆಯುವದು.

ಸೂಚನೆ:- ೧ನೇ ವರ್ಷದಲ್ಲಿ ಹೇಳಿದಂತೆ ನೆನಪಿನಿಂದ ಚಿತ್ರಗಳನ್ನು ತೆಗೆಯುವದು.

೮. ಕಸರತ್ತು:- ೧ನೇ ವರ್ಷದ ಅಭ್ಯಾಸದ ಜೊತೆಗೆ ಪ್ಯಾರಲೆಲ್‌ಬಾರ, ಹಾರೀಝಾಂಟಲ್ ಬಾರಗಳ ಮೇಲಿನ ಕಸರತ್ತು ಮತ್ತು ಕವಾಯಿತು.

೯. ಕೃಷಿಕರ್ಮ:-೫ನೇಪುಸ್ತಕದ ಉತ್ತರಾರ್ಧವು ಹಾಗೂ ೬ನೇಪುಸ್ತಕವು

ಐಚ್ಛಿಕ ವಿಷಯವು.

[೧೨ನೇ ಮತ್ತು ೧೩ನೇ ನಿಯಮವು]

ಡಾಕ್ಟರ ಥಾಮ್ಸನ್ ಸಾಹೇಬರು ಬರೆದ "ಹಿಂದುಸ್ತಾನದ ಶಾಲೆಗಳ ಬಗ್ಗೆ ಕೈಗಾರಿಕೆಯ ಶಿಕ್ಷಣ" ಎಂಬ ಪುಸ್ತಕದ ೬-೧೬ ಪಾಠಗಳು.

ಮೂರನೆಯ ವರ್ಷದ ಅಭ್ಯಾಸವು.

೧. ಶಿಕ್ಷಣಪದ್ಧತಿ ಮತ್ತು ಬಾಲಮನಸ್ಶಾಸ್ತ್ರ-(ಅ) ಬಾಲಮನಸ್ಸಿನ ಮತ್ತು ಶಿಕ್ಷಣ ಪದ್ಧತಿಯ ತತ್ವಗಳ ಹಾಗೂ ರೂಢಿಯ ಪ್ರಾಥಮಿಕ ಜ್ಞಾನವು.

(ಬ) ಅನುಮಾನದ ಕ್ರಮವು, ಚಟಗಳ ಹಾಗು ನಡತೆಯ ಉತ್ಪತ್ತಿಯ ರೀತಿಯು, ನೀತಿಶಿಕ್ಷಣದ ತತ್ವಗಳು.

೨. ಕನ್ನಡ-(ಅ) ಗದ್ಯ:- ಮಂಜೂರಾದ ಯಾವದೊಂದು ಪುಸ್ತಕದ ೪೦ ಪುಟಗಳು.

(ಬ) ಪದ್ಯ:- ಮಂಜೂರಾದ ಯಾವದಾದರೊಂದು ಅಥವಾ ಹೆಚ್ಚು ಪುಸ್ತಕಗಳೊಳಗಿನ ೧೨೦ ಪದ್ಯಗಳು ಮತ್ತು ಯಾವದಾದರೊಂದು ನಾಟಕದ ಎರಡು ಅಂಕಗಳು.

(ಕ) ವ್ಯಾಕರಣ:-ದರ್ಪಣದ ೧೫೩-೨೫೩ ಸೂತ್ರಗಳೂ, ಕನ್ನಡದಲ್ಲಿರುವ ಮುಖ್ಯ ಮಾತ್ರಾ ವೃತ್ತಗಳೂ ವರ್ಣವೃತ್ತಗಳೂ.

(ಡ) ನಿಬಂಧ ಮತ್ತು ಅಕ್ಷರ ಬರಹ.

ಅಥವಾ, ಉರ್ದು:-(ಪಂಜಾಬದಲ್ಲಿ ಪ್ರವೇಶ ಪರೀಕ್ಷೆಗೆ ಇಟ್ಟ) "ನಿಸಾಬೆ ಉರ್ದು" ಎಂಬ ಪುಸ್ತಕದ ೧೦೦ ಪುಟಗಳು.

(ಅ) ಗದ್ಯ:-

ಪದ್ಯ:- ಮಜಮುಯೆ ಸುಖುನ್‌ದ ೨ನೇಭಾಗದ ೬೦೦ ದ್ವಿಪದಿಗಳು, ಮತ್ತು ಮಂಜೂರಾದ ಯಾವದೊಂದು ಪುಸ್ತಕದ ೨೦೦ ದ್ವಿಪದಿಗಳು. ಹಾಗೂ ಛಂದಸ್ಸು.

(ಬ) ವ್ಯಾಕರಣ:-ವಾಯುವ್ಯ ಪ್ರಾಂತದ ಗ್ರಂಥಮಾಲೆಯ ಕವಾಯದೆ ಉರ್ದು ವಿನ ೨ನೇಭಾಗವು.

(ಕ) ನಿಬಂಧ ಮತ್ತು ಅಕ್ಷರಬರಹ.

೩. ಸಂಸ್ಕೃತ:- (ಅ) ರಘುವಂಶದ ಅಥವಾ ೨ನೇ ಯಾವದಾದರೊಂದು ಶ್ರೇಷ್ಠಕಾವ್ಯದ ೧ ಸರ್ಗವು; ಮತ್ತು ಶಕುಂತಲಾ ನಾಟಕದ ೧ ಅಂಕವು.

(ಬ) ಸಂಸ್ಕೃತ ೨ನೇ ಪುಸ್ತಕದ ೨೧ ಪಾಠಗಳು.

ಅಥವಾ, ಫಾರ್ಸಿ:-(ಅ) ಸಿಕಂದರನಾಮೆಯ ४೦೦ ಶ್ಲೋಕಗಳು.

(ಬ) ಅನ್ವಾರೆಸಹಿಲಿಯ ೯ನೆಯ ಅಧ್ಯಾಯವು.

(ಕ) ನಿಸ್ಸಾರ ಅಲಿಯ ಕವಾಯಿದೆ ಫಾರ್ಸಿಯ ೧ನೇ ಹಾಗೂ ೨ನೇ ಅಧ್ಯಾಯಗಳು.

(ಡ) ಸುಲಭ ವಾಕ್ಯಗಳನ್ನು ಫಾರ್ಸಿಯಲ್ಲಿ ಭಾಷಾಂತರ ಮಾಡುವದು.

ಅಥವಾ, ಉರ್ದು:- (ವಿದ್ಯದಲ್ಲಿ ಹಿಂದುಳಿದ ಜಾತಿಯವರ ಬಗ್ಗೆ)

(ಅ) ಗದ್ಯ:-(ಪಂಜಾಬ ಟ್ರೇನಿಂಗ ಕಾಲೇಜದಲ್ಲಿ ಹಚ್ಚಿದ) "ನಿಸಾಬೆಉರ್ದು" ಎಂಬ ಪುಸ್ತಕದೊಳಗಿನ ೫೦ ಪುಟಗಳು.

ಪದ್ಯ:-ಮಜಮುಯೆ ಸುಖುನ್‌ದ ೧ನೇಭಾಗದ ೧೦೦ ದ್ವಿಪದಿಗಳು.

(ಬ) ವ್ಯಾಕರಣ:-(ಪಂಜಾಬ ಗ್ರಂಥಮಾಲೆಯ) ಸರಫ್-ವೆ-ನಹವೆ ಉರ್ದು ಪೂರಾ.

(ಕ) ನಿಬಂಧ ಮತ್ತು ಅಕ್ಷರ ಬರಹ.

೪. ಗಣಿತ:-(ಅ) ಅಂಕಗಣಿತ ಪೂರಾ.

(ಬ) ಬೀಜಗಣಿತ:-ವರ್ಗಸಮೀಕರಣ ಪೂರಾ. ಏಕವರ್ಣ ಸಮೀಕರಣದ ಸುಲಭ ಪ್ರಶ್ನೆಗಳು, ಹಾಗೂ ದ್ವಿವರ್ಣ ಸಮೀಕರಣವು.

(ಕ) ಭೂಮಿತಿ:-(ಬ) ಪರಿಶಿಷ್ಟದ(ಅ) ಪಟ್ಟಿಯಲ್ಲಿ ಹೇಳಿದಂತೆ.

(ಡ) ಘನ ಪದಾರ್ಥಗಳ ಮಹತ್ವಮಾಪನವೂ ಸರಪಳಿಯಿಂದ ಭೂಮಿಯನ್ನು ಅಳೆಯುವದೂ.

೫. ಇತಿಹಾಸ ಮತ್ತು ಭೂಗೋಲ (ಅ) ಹಿಂದುಸ್ತಾನದ ಇತಿಹಾಸದ ಪುನರಾವೃತ್ತಿಯೂ ಪ್ರಾಚೀನಕಾಲದ ಇತಿಹಾಸವೂ ಇಂಗ್ಲಂಡದ ಇತಿಹಾಸವೂ, ಇವೆರಡೂ ದೇಶಗಳ ಪರಸ್ಪರ ಸಂಬಂಧದ ವಿಶೇಷಮಾಹಿತಿ ಸಹಿತ.

(ಬ) ಭೂಗೋಲ:-ಪೃಥ್ವಿಯ ಭೂಗೋಲದ ಸಾಧಾರಣ ಜ್ಞಾನವೂ ಬ್ರಿಟಿಶ ಸಾಮ್ರಾಜ್ಯದ ವಿಶೇಷ ಜ್ಞಾನವೂ.

ಪ್ರಾಕೃತಿಕ ಭೂಗೋಲ:—ವಾತಾವರಣ.

(ಕ) ಇಂಗ್ಲಂಡದ ನಕಾಶೆಯನ್ನು ತೆಗೆಯುವದು.

೬. ಶಾಸ್ತ್ರೀಯ ವಿಷಯವು (ಅ) ಜ್ಯೋತಿಷಶಾಸ್ತ್ರ:-ಲಾಕಿಯರ ಸಾಹೇಬರ ಪ್ರಥಮ ಪುಸ್ತಕವು (ಪ್ರಾಯಮರ).

(ಬ) ೬ನೇ ಪುಸ್ತಕದಲ್ಲಿರುವ ಶಾಸ್ತ್ರೀಯ ಪಾಠಗಳು.

೭. ಚಿತ್ರಕಲೆ ೧. ಕರೀಹಲಿಗೆಯ ಮೇಲೆ ಪೆನ್ಸಿಲು ಲೇಖನಿಗಳಿಂದ ಹಾಗೂ ಬಣ್ಣಗಳಿಂದ ಹೆಚ್ಚು ಕಠಿಣವಾದ ಪದಾರ್ಥಗಳ ಚಿತ್ರಗಳನ್ನು ತೆಗೆಯುವದು.

೨. ಸಿ. ಎಲ್. ಬರ್ನ್ಸಸಾಹೇಬರ ಮಧ್ಯಮ ತರಗತಿಯ ಚಿತ್ರಪಟಗಳಲ್ಲಿ ತೋರಿಸಿದಂತೆ ಕೃತ್ಯಸಿದ್ಧಾಂತಗಳನ್ನು ಹಾಗೂ ಆ ಸಿದ್ಧಾಂತಗಳ ಸಹಾಯದಿಂದ (ಡಿಝಾಯಿನ್) ಕಲ್ಪನಿಕ ಚಿತ್ರಗಳನ್ನು ತೆಗೆಯುವದು.

೩. ನಿದರ್ಶನಾತ್ಮಕ ಚಿತ್ರಗಳು*:— ಶಾಲೆಯೊಳಗಿನ ಪಾಠಗಳಲ್ಲಿರುವ ಸುಲಭ ನೋಟಗಳ ಹಾಗೂ ಸಂಗತಿಗಳ ಚಿತ್ರಗಳನ್ನು ತೆಗೆಯುವದು.

ಸೂಚನೆ:- ಎರಡನೇ ವರ್ಷದಂತೆ ನೆನಪಿನಿಂದ ಚಿತ್ರತೆಗೆಯುವದು.

೮. ಕಸರತ್ತು:— ಡ್ರಿಲ್ ಸಹಿತ ಕಸರತ್ತು ಪೂರಾ.

೯. ಕೃಷಿಕರ್ಮ:— ೧ನೇ ೨ನೇ ೩ನೇ ಪುಸ್ತಕಗಳಲ್ಲಿ ಹೇಳಿದಂತೆ ಕೃಷಿಕರ್ಮದ ಮೂಲತತ್ವಗಳು.

ಐಚ್ಛಿಕ ವಿಷಯವು

[೧೨ನೇ ಮತ್ತು ೧೩ನೇ ನಿಯಮಗಳು]

(ಅ) ಡಾಕ್ಟರ ಥಾಮ್ಸನ್ ಸಾಹೇಬರು ಬರೆದ "ಹಿಂದುಸ್ತಾನದ ಶಾಲೆಗಳ ಬಗ್ಗೆ ಕೈಗಾರಿಕೆಯ ಶಿಕ್ಷಣ" ಎಂಬ ಪುಸ್ತಕದ ೧೭-೨೪ ಪಾಠಗಳು.

(ಬ) ಉಡ್‌ವರ್ಡ ಸಾಹೇಬರು ಬರೆದ "ಕೈಗಾರಿಕೆಯ ಶಿಕ್ಷಣ" ಎಂಬ ಪುಸ್ತಕದಲ್ಲಿರುವ ಕಂಬಾರಿಕೆಯ ಆಕೃತಿಗಳು ೬೯-೭೯.

---

* ಈ ಮೂರನೇ ಭಾಗದ ವಿಷಯವು ಚಿತ್ರಕಲೆಯಲ್ಲಿ ವಿಶೇಷ ಗತಿಯುಳ್ಳ ವಿದ್ಯಾರ್ಥಿಗಳ ಸಲುವಾಗಿ ಸೂಚಿಸಲ್ಪಟ್ಟಿರುವದು; ಮತ್ತು ಬಹುತರವಾಗಿ ಎಲ್ಲ ವಿದ್ಯಾರ್ಥಿಗಳು ಅದನ್ನು ಅವಶ್ಯವಾಗಿ ಕಲಿಯಬೇಕಾಗಲಿಕ್ಕಿಲ್ಲ.

ಕೇವಲ ನೀತಿ ನಿಯಮಗಳಲ್ಲದೆ ಮೂರೂ ವರ್ಷಗಳಲ್ಲಿ ಕಲಿಯಬೇಕಾದ ಪಠ್ಯಕ್ರಮವೂ ಈ ಮೇಲಿನಂತೆ ಬದಲಾಗಿ, ಮೇಲೆ ಹೇಳಿದಂತೆ ೯ ವಿಷಯಗಳಲ್ಲಿ, ೧೧೦೦ ಅಂಕಗಳಿಗೆ ಪರೀಕ್ಷೆ ಬರೆಯಬೇಕಾಗಿತ್ತು ಅಲ್ಲದೆ ಪ್ರತಿ ವರ್ಷ ಯಾವಯಾವ ಪುಸ್ತಕಗಳನ್ವಯ ಅಧ್ಯಯನ ಮಾಡಬೇಕು ಎಂಬುದರ ಸವಿಸ್ತಾರ ಮಾರ್ಗದರ್ಶಿಯೂ ಇಡೀ ಸಂಚಿಕೆಯಲ್ಲಿ ಇಲ್ಲಿದೆ.

ಐದನೆಯ ಜಾರ್ಜ ಮತ್ತು ರಾಣಿಮೇರಿ ಇವರ ರಾಜ್ಯಾರೋಹಣವಾದ ಬಳಿಕ ಭಾರತಕ್ಕೆ ಆಗಮಿಸುತ್ತಿರುವುದರಿಂದ ಅವರಿಗಾಗಿ ಧಾರವಾಡದ ಟ್ರೇನಿಂಗ ಕಾಲೇಜಿನ ಗಾಯನ ಮಾಸ್ತರರಾದ ಬಿ.ಪಿ. ಸಾವಕಾರ ಇವರು ಜಾರ್ಜದೊರೆಯ ಮೇಲೆ ಒಂದು ಹಾಡು ಕಟ್ಟಿ ಅದಕ್ಕೆ ರಾಗ ಸಂಯೋಜನೆ ಮಾಡಿದ್ದು ೧೨-೧೨-೧೯೧೧ ರಲ್ಲಿ ಪುಟ ೫ ಮತ್ತು ೬ರಲ್ಲಿ ಪ್ರಕಟಗೊಂಡಿದೆ. ಹೀಗೆ ತ್ವರಿತ ಕವಿಗಳು, ಗಾಯಕರು ಕಾಲೇಜಿನಲ್ಲಿ ಶಿಕ್ಷಕರಾಗಿದ್ದುದು ಇದರಿಂದ ವಿಧಿತವಾಗುತ್ತದೆ. ೧೯೧೨ರಲ್ಲಿ ದರ್ಬಾರಗ್ರ್ಯಾಂಟನಡಿಯ ನಿಯಮಗಳನ್ವಯ ತರಬೇತಿ ಏರಡೇ ವರ್ಷಗಳದ್ದಾಗಿ, ಒಳಪ್ರವೇಶ ೩೭ ವಿದ್ಯಾರ್ಥಿಗಳಿಗೆ ಮಾತ್ರ ಎಂಬ ನಿಯಮ ಜಾರಿಯಾಗಿ, ಅದೇ ಕ್ರಮದಲ್ಲಿ ಅನುದಾನದ ಬಳಕೆಗೆ ಮಾರ್ಗದರ್ಶನವೂ ರೂಪಗೊಳ್ಳುತ್ತದೆ.

ಮೋಂಟೆಗೂ ಚೇಮ್ಸಫರ್ಡ ಸುಧಾರಣೆಗಳು ಶಿಕ್ಷಣ ಇಲಾಖೆಯಲ್ಲಿ ಹೊಸ ಬದಲಾವಣೆಗಳನ್ನು ತಂದವು. ಪ್ರಾಥಮಿಕ ಶಿಕ್ಷಣದ ಪರಿಶೀಲನೆಗೋಸ್ಕರ, ೧೯೨೧ರಲ್ಲಿ ಚಂದಾವರಕರ ಸಮಿತಿಯು ರಚನೆಯಾಗಿ ಒತ್ತಾಯದ ಪ್ರಾಥಮಿಕ ಶಿಕ್ಷಣಕ್ಕೆ ಅಗ್ರಹಿಸಿತು. ನಂತರ ಕಾಯ್ದೆ ಕೌನ್ಸಿಲಿನಲ್ಲಿ ಈ ಬಗೆಗೆ ಪರಾಮರ್ಶೆಗಳು ನಡೆದು ಪ್ರಾಥಮಿಕ ಶಿಕ್ಷಣ ಕಾನೂನು ೧೯೨೭ರಲ್ಲಿ ಪಾಸಾಗಿ, ಪ್ರಾಥಮಿಕ ಶಿಕ್ಷಣವು ಸರಕಾರದ ಪ್ರತ್ಯಕ್ಷ ಆಡಳಿತದಿಂದ ದೂರಸರಿದು, 'ಸ್ಥಾನಿಕ ಸ್ವರಾಜ್ಯ ಸಂಸ್ಥೆ'(ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಮತ್ತು ಸಿಟಿ ಮುನ್ಸಿಪಾಲ್ಟಿ) ಗಳ ಆಡಳಿತಕ್ಕೆ ಒಳಪಟ್ಟಿತು. ಅಂದಿನಿಂದ ಪ್ರಾಥಮಿಕ ಶಿಕ್ಷಣದ ಆಡಳಿತಕ್ಕಾಗಿ ಪ್ರತಿಯೊಂದು ಜಿಲ್ಲೆಯಲ್ಲಿ 'ಡಿಸ್ಟ್ರಿಕ್ಟ ಲೋಕಲ್ ಬೋರ್ಡ' ಎಂಬ ಹೊಸ ಸಭೆಯು ನಿರ್ಮಾಣವಾಯಿತು. ಧಾರವಾಡದಲ್ಲಿ ಇಂಥ ಸಭೆಗೆ ಶ್ರೀ ಚನ್ನಪ್ಪ ಹುಲಕೋಟಿ ಇವರು ಮೊದಲನೆಯ ಲೋಕನಿಯುಕ್ತ ಅಧ್ಯಕ್ಷರು ಮತ್ತು ಸಿದ್ಧಪ್ಪ ಹೊಸಮನಿಯವರು ಸ್ಕೂಲ ಬೋರ್ಡನ ಅಧ್ಯಕ್ಷರಾದರು. ತಮ್ಮಕಾರ್ಯಭಾರದ ಸ್ವತಂತ್ರತೆಗಾಗಿ, ಶಿಕ್ಷಣ ಇಲಾಖೆಯ ಕಾಮದಾರರನ್ನು ನಿರಾಕರಿಸಿ, ಅವು ತಮ್ಮದೇ ಕಾಮದಾರರನ್ನು ನೇಮಿಸಿಕೊಂಡಿತು. ಆದರೆ ಸ್ಕೂಲಬೋರ್ಡಿನ ಆಡಮಿನಿಸ್ಟ್ರೇಟಿವ್ ಆಫೀಸರರನ್ನು ನೇಮಿಸುವ ವಿಷಯದಲ್ಲಿ ಸರಕಾರಕ್ಕೆ ಮತ್ತು ಬೋರ್ಡನವರಿಗೂ ಮತಬೇಧ ಉಂಟಾಗಿ ಅದು ಸಧ್ಯಕ್ಕೆ ಸ್ಥಗಿತಗೊಳ್ಳುತ್ತದೆ.

ಈ ಬೋರ್ಡಿನ ಕಾರ್ಯವೆಂದರೆ ಶಾಲಾಶಿಕ್ಷಣದ ಆಡಳಿತಾತ್ಮಕ ಉಸ್ತುವಾರಿ. ಪರ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಗಳಲ್ಲಿ ಶಿಕ್ಷಣದ ಪ್ರಗತಿ ಹೇಗೆ ಇದೆ, ಅನುಸರಿಸಿದ ಕ್ರಮಗಳಾವುವು?, ಸ್ಕೂಲ

ಬೋರ್ಡ ಕೂಡ ತನ್ನ ಆಡಳಿತದಡಿ ಶಾಲೆಗಳನ್ನು ತೆರೆದು, ಶಿಕ್ಷಕರನ್ನು ನೇಮಣೂಕಿ ಮಾಡಿಕೊಂಡಿದೆ. ಮುಂತಾದವು. ಬೋರ್ಡಿನ ಪರಿಶ್ರಮ ಸಫಲವಾಗಬೇಕಾದರೆ ಒಂದು **ಮುಖಪತ್ರದ** ಅವಶ್ಯಕತೆಯನ್ನು ಮನಗಂಡು, ಧಾರವಾಡ ಜಿಲ್ಲಾ **'ಸ್ಕೂಲ್ ಬೋರ್ಡ ಪತ್ರಿಕೆ'** ಎಂಬ ಹೆಸರಿನಿಂದ ಇದು ಪತ್ರಿಕೆಯನ್ನು ಆರಂಭಿಸಿತು.

ಮೊದಲನೆಯ ಜಾಗತಿಕ ಯುದ್ಧದ ತರುವಾಯ ಸರಕಾರದ ಧೋರಣೆಯಲ್ಲಿ ನಿಜವಾದ ಬದಲಾವಣೆ ಕಂಡುಬಂದಿತು. ಹಳ್ಳಿಯಲ್ಲಿದ್ದ ಜನರಲ್ಲಿ ಹೊಸ ಜಾಗೃತಿ ಉಂಟಾಯಿತು, ರಾಜಕೀಯದ ಶಾಂತತೆ ಹಳ್ಳಿಗಳಲ್ಲಿಯೂ ಹರಡಿತು ಹಾಗೂ ಜನತಾ ಮಂತ್ರಿಮಂಡಳಗಳು ಶಾಲೆಗಳನ್ನೇ ಕಾಣದ ಹಳ್ಳಿಗಳಲ್ಲಿ ಶಾಲೆಗಳನ್ನು ತೆರೆದವು. ಇದರಿಂದಾಗಿ ಹಳ್ಳಿಗಳ ಮಹತ್ವ ಹೆಚ್ಚಾಯಿತು ಜೊತೆಗೆ ಹಳ್ಳಿಗಳಲ್ಲಿರುವ ಶಿಕ್ಷಣ ಸಂಬಂಧಿ ಸಮಸ್ಯೆಗಳು ಗಮನಕ್ಕೆ ಬರತೊಡಗಿದವು.

೧೯೪೩ರ ಜುಲೈ ಅಗಸ್ಟ ತಿಂಗಳುಗಳಲ್ಲಿ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗಾಗಿ ನಡೆಸಿದ ಚರ್ಚೆ ಮತ್ತು ವಿಚಾರ ಗೋಷ್ಠಿಯಲ್ಲಿ ಮಾನ್ಯ ಅಥಿತಿಗಳಾಗಿ ಆಗಮಿಸಿದ್ದ ಶಿವರಾಮ ಕಾರಂತರು 'ಮಕ್ಕಳ ಭಾಷಾ ಶಿಕ್ಷಣ' ಕುರಿತು, ವಿನಾಯಕರಾವ ಗೋಕಾಕರವರು 'ಹೊಸ ಸಾಹಿತ್ಯದ ಕೆಲವು ಪ್ರಕಾರಗಳು' ವಿಷಯವಾಗಿ ಉಪನ್ಯಾಸ ನೀಡುತ್ತಾರೆ. 'ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿ ಕಲಿಸಿದ ಪಾಠಗಳಲ್ಲಿ ಪುಸ್ತಕದಲ್ಲಿ ಬರೆದ ವಾಕ್ಯಗಳು ಉಚ್ಚಾರ ಪುನರುಚ್ಚಾರಗಳು ಆಗುವವೇ ಹೊರತು ಅವರ ಭಾಷೆ ಬೆಳೆಯದು. ಅವರ ಅನುಭವಕ್ಕೆ ಬಾರದ ವಿಷಯಗಳನ್ನು ಕಲಿಸುವುದು ಭಾಷೆಯ ಕೊಲೆಗೆ ಕಾರಣವಾಗುತ್ತದೆ. 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ' ಎಂಬುದು ವಯಸ್ಕರಿಗೆ ಅರ್ಥವಾಗುವಂಥದ್ದು, ಮಕ್ಕಳಿಗೆ ಹೇಗಾದೀತು? ಬೇರೆ ಬೇರೆ ಭಾಷೆ ಮಾತನಾಡುವವರ ಬಳಗದಲ್ಲಿ ಮಕ್ಕಳು ಆಡುತ್ತಲಿದ್ದರೆ ನಾಲ್ಕಾರು ತಿಂಗಳುಗಳಲ್ಲಿ ಮಕ್ಕಳು ಆ ಭಾಷೆಗಳನ್ನು ಕಲಿತು ಬಿಡುವರು. ಇದಕ್ಕೆ ಮಕ್ಕಳಿಗಿರುವ ಆಸಕ್ತಿ ಮತ್ತು ಸ್ವಾತಂತ್ರ್ಯವೇ ಕಾರಣ. ಅಲ್ಲದೆ ಗ್ರಂಥಸ್ಥ ಭಾಷೆಯಲ್ಲಿ ಜೀವಂತಿಕೆ ಕಡಿಮೆ. 'ಒಂದಾನೊಂದು ಊರಿನಲ್ಲಿ ಒಬ್ಬ ಅರಸನಿದ್ದನು. ಅವನಲ್ಲಿ ಬಹಳ ಐಶ್ವರ್ಯವಿತ್ತು...' ಎಂದು ಹೇಳುವ ಬದಲು 'ಒಂದು ಊರಿತ್ತು. ಅಲ್ಲೊಬ್ಬ ರಾಜನಿದ್ದ. ಅವನ ಬಳಿಯಲ್ಲಿ ಬಹಳ ಹಣವಿತ್ತು...' ಹೀಗೆ ಹೇಳಿದರೆ ಮಕ್ಕಳಿಗೆ ಥಟ್ಟನೆ ತಿಳಿಯುತ್ತದೆ. ಹೀಗಿರುವುದರಿಂದಲೇ ವ್ಯಾಕರಣ ಕಲಿಯದ ಮತ್ತು ಓದುಬಾರದ ಅಜ್ಜಅಜ್ಜಿಯರ ಕಥೆಗಳು ಮಕ್ಕಳಿಗೆ ರುಚಿಸುವುದು. ಅವರ ಭಾಷೆಯಲ್ಲಿ ಜೀವಂತಿಕೆ ಇದೆ. ಆಡುತ್ತ ಹಾಡುತ್ತ ಕಲಿತರೆ ಮಕ್ಕಳ ಬೇಗ ಕಲಿಯಬಲ್ಲರು. ಶಿಕ್ಷಕರು ಮಕ್ಕಳ ಕೈಗಳನ್ನು ತಿದ್ದುವ ಬದಲು ಕಿವಿಗಳನ್ನು ತಿದ್ದಬೇಕು. ಮೊದಲು ಮಾತು, ನಂತರ ಓದು, ನಂತರ ಬರಹ. ಹಾಗಾಗಿಯೇ ಮಕ್ಕಳು ಮೊದಲು ಕೇಳಬೇಕು. ಸರಿಯಾಗಿ ಕೇಳಿದರೆ ಮಾತ್ರ ಸರಿಯಾಗಿ ಬರೆಯಬಲ್ಲರು...ಮುಂತಾಗಿ ಭಾಷಾ ವಿಷಯ ಕುರಿತು ಮಾತನಾಡಿದರು.

ಸಂಪ್ರದಾಯಗೊಂಡ ಔಪಚಾರಿಕ ಪಾಠಪದ್ಧತಿಯ ಬಗೆಗೆ ಕಾರಂತರ ತಕರಾರಿದೆ. ಇಲ್ಲಿ ಅದರ ಸೂಕ್ಷ್ಮಾವಲೋಕನ ಅವಶ್ಯವೆನಿಸತ್ತದೆ. ಅವರು ಈ ಸಿದ್ಧಮಾದರಿಯನ್ನು ವಿರೋಧಿಸಿ ತಮ್ಮದೇಯಾದ ಪಠ್ಯವಸ್ತುವನ್ನು ಮತ್ತು ಬೋಧನಾ ಪದ್ಧತಿಯನ್ನು ಜಾರಿಯಲ್ಲಿ ತಂದರು. ಇವರು ಶಿಕ್ಷಣ ಕುರಿತ ಆವಿಷ್ಕಾರಿ ಬರಹಗಳನ್ನು ಬರೆದದ್ದು ಮತ್ತು ಬಾಲಪ್ರಪಂಚ, ವಿಜ್ಞಾನ ಪ್ರಪಂಚ, ಪಠ್ಯಪುಸ್ತಕಗಳು, ವಿಶ್ವಕೋಶಗಳನ್ನು ರಚಿಸಿದ್ದು ಹಾಗೂ ಮಾದರಿ ಶಾಲೆ ಮತ್ತು ಸಮ್ಮೇಳನಗಳನ್ನು ಆಯೋಜಿಸಿದ್ದು, ವಸಾಹತುಶಾಹಿ ಆಡಳಿತ ಕ್ರಮದಲ್ಲಿ, ತರ್ಕಬದ್ಧತೆ ಇಲ್ಲದೆ, ಮನೋವೈಜ್ಞಾನಿಕ ತಳಹದಿ ಇಲ್ಲದೆ ರಚನೆಗೊಂಡ, ಲೋಪದೋಷಗಳಿಂದ ಕೂಡಿದ ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳ ಖಂಡಿಸಿಯೆ. ಇದಕ್ಕೆ ೧೯೩೧ರಲ್ಲಿ ಮಕ್ಕಳ ಪ್ರತಿಭೆ, ಆಸಕ್ತಿ, ಅಭಿನಯಗಳ ಮುಕ್ತ ಪ್ರದರ್ಶನಕ್ಕಾಗಿ ಉಪ್ಪಿನಂಗಡಿಯಲ್ಲಿ ನಡೆಸಿದ 'ಮಕ್ಕಳಕೂಟ', ೧೯೩೬ರಲ್ಲಿ ಪುತ್ತೂರಿನಲ್ಲಿ ಆರಂಭಿಸಿದ 'ಬಾಲವನ'ಎಂಬ ಮಾದರಿ ಶಾಲೆ, ಮುಂತಾದುವುಗಳೇ ಸಾಕ್ಷಿ. ಕ್ರಿಶ್ಚಿಯನ್ ಧರ್ಮ ಪ್ರಸಾರದ ಅಸ್ತ್ರವಾಗಿ ಔಪಚಾರಿಕಗೊಂಡ ಶಿಕ್ಷಣಕ್ಕೆ ತನ್ನದೇ ಆದ ಮೂಲಾಧಾರಗಳಿರಲಿಲ್ಲ; ತತ್ವ ಆಶಯಗಳಂತೂ ದೂರವೇ. ಬ್ರಿಟಿಷ ಪ್ರಣೀತ ಶಿಕ್ಷಣ ಪಡೆದು, ಸಾಮ್ರಾಜ್ಯಶಾಹಿಗಳ ಸರಕಾರದಲ್ಲಿ ಉನ್ನತ ಹುದ್ದೆ ಗಿಟ್ಟಿಸಿಕೊಂಡು ಪರದೆ ಮುಂದಿರುವವರ ಚಿತ್ರಣ ಮತ್ತು ಈ 'ಔಪಚಾರಿಕ ಶಿಕ್ಷಣ' ಕೈಕಸಬುಗಳ ಕಳೆದುಕೊಂಡು, ಹಸಿದು ಹವಣಿಸುವವರಿಗೆ ಮರದ ಹಣ್ಣಾಗಿತ್ತು. ಧಾರ್ಮಿಕ ಮನೋಭಾವದವರಿಗೆ ಅದು ಬೇಡವಾಗಿತ್ತು. ಕಲಿತು ಮುಂಚುಣಿಯಲ್ಲಿದ್ದವರಿಗೆ ಗುರಿಗಮ್ಯಗಳ ಮುನ್ನೋಟ ಇಲ್ಲದಿದ್ದರೂ ತನ್ನ ಜಾತಿ ಕುಲಬಾಂಧವರು ಮುಂದೆ ಬರಬೇಕೆಂಬ ಹಂಬಲದಿಂದ ಕಲಿಯಲು ಪ್ರೇರೆಪಿಸುತ್ತಿದ್ದರು. ಇಂಥ ಕವಲುದಾರಿಯಲ್ಲಿ, ನೌಕರಿಗಾಗಿ ಪ್ರಮಾಣಪತ್ರ ಗಳಿಸುವ, ತತ್ವಸಿದ್ಧಾಂತಗಳಿಲ್ಲದೆ ಬೆಳೆದ ಶಿಕ್ಷಣ ಪದ್ಧತಿ ಭವಿತವ್ಯದ ಭದ್ರತೆಗೆ ಬುನಾದಿಯಾದಿತೋ ಇಲ್ಲವೋ ಎಂಬುದನ್ನು ವಿಚಾರಿಸುವ ಪರಿಸ್ಥಿತಿಯ ನಿರ್ಮಾಣ ಇನ್ನೂ ಆಗಿರಲಿಲ್ಲ. ಅಂತೂ ತನ್ನ ನೆಲದ, ನಾಡಿನ ಭಾಷೆಯಲ್ಲಿ ಪಠ್ಯಗಳನ್ನು ರಚಿಸಿ, ಅನುವಾದ-ಭಾಷಾಂತರಗೊಳಿಸಿ, ವೈಚಾರಿಕ ಲೇಖನಗಳನ್ನು ಬರೆದು, ಹೊಸತನಕ್ಕೆ ತೆರೆದುಕೊಳ್ಳುವ ನೀತಿನಿರೂಪಿಸಿ, ಕರ್ನಾಟಕದಾದ್ಯಂತ ಹರಡಿದ ಕೀರ್ತಿ, ಸರಕಾರಿ ನೌಕರರಾಗಿದ್ದುಕೊಂಡೇ, ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜು ಕಟ್ಟಿಬೆಳೆಸಿದ ಮತ್ತು ಉಳಿಸಿದ ಹಲವಾರು ಮಹನೀಯರದ್ದು. ಇವರೆಲ್ಲರಲ್ಲಿಯೂ ಹೊಸತನದ ಅಪೇಕ್ಷೆ ಇದ್ದರೂ, ಸರಕಾರಿ ನೌಕರನೆಂಬ ಕಾರಣಕ್ಕೆ ಪ್ರವಾಹದಲ್ಲಿಯ ತರಗೆಲೆಗಳಾದರೂ ನಿಂತಲ್ಲಿಯೇ ಬೇರು ಬಿಟ್ಟಿದ್ದಾರೆ, ಚಿಗುರಿದ್ದಾರೆ; ಮುಂದಿನ ಪೀಳಿಗೆಗೆ ಹೂ-ಹಣ್ಣಾಗಿದ್ದಾರೆ. ಇವರು ಬಿತ್ತಿದ ಬೀಜವೇ ಶಿವರಾಮ ಕಾರಂತರಂತಹ ವಿಚಾರವಾದಿಗಳಲ್ಲಿ ಬೆಳೆಯಲು ಕಾರಣವಾಗಿದೆ. 'ಭಾಷಾ ಪಠ್ಯಗಳು ಮತ್ತು ಮಗ್ಗಿ ಪುಸ್ತಕದಲ್ಲಿ ವಾರ, ತಿಥಿ, ತಿಂಗಳು, ವರ್ಷಗಳು, ಅದೇ ದಿನನಿತ್ಯದ ಬದುಕಿನ ಭಾಗವಾದ ಘನ, ದ್ರವ, ಅನಿಲ ಪದಾರ್ಥಗಳ ಅಳತೆಗಳು ಮುಂತಾದುವೆಲ್ಲ ಕಂಠಪಾಠದ ವಿಷಯಗಳಾಗಿ, ವ್ಯವಹಾರದ ಗಣಿತ ಮತ್ತು ಕಾಗದ ಕತ್ತರಿಸುವುದು,

ಚಾಪೆ ಹೆಣೆಯುವುದು, ಎಂದೂ ಕೇಳಿಕಂಡರಿಯದ ಬ್ರಿಟಿಷ ವ್ಯಕ್ತಿ/ವ್ಯಕ್ತಿತ್ವಗಳ ಪರಿಚಯ ಮುಂತಾದುವು ತಾನು ಕಲಿತ ವಿಷಯಗಳು ಎಂಬುದನ್ನು ತಮ್ಮ 'ಸ್ಮೃತಿ ಪಟಲದಲ್ಲಿ' ಕಾರಂತರು ಹೇಳುತ್ತಾರೆ. ಕಂಠಪಾಠ, ದಂಡನೆ ಮತ್ತು ಶಿಕ್ಷಕ-ಶಿಕ್ಷಣ ಕೇಂದ್ರಿತ ಪ್ರಕ್ರಿಯೆಗಳು ಮಗುವಿನ ಭವಿಷ್ಯ ನಿರೂಪಿಸಲಾರದು, ಮಗುವಿನಲ್ಲಿ ಕಲಿಕೆಗೆ ಬೇಕಾದ ಕುತೂಹಲ ಅರಳಿಸುವಂತಿರಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು.'[೮೦] ಇಂಥ ಕ್ರಾಂತಿಕಾರಕ ವಿಚಾರಗಳ ಕಾರಂತರು ೧೯೪೩ ಅಗಸ್ಟನಲ್ಲಿ ಟ್ರೇನಿಂಗ ಕಾಲೇಜಿಗೆ ಭೇಟಿ ಕೊಟ್ಟು ಉಪನ್ಯಾಸ ನೀಡಿ, ಹಂಚಿಕೊಂಡ ಪ್ರಗತಿಪರ ವಿಚಾರಗಳು, ಬ್ರಿಟಿಷಮುಖಿ ಪ್ರಚಲಿತ ಶಿಕ್ಷಣದ ಇತಿಮಿತಿಗಳಾಚೆ ಇರುವ ಹತ್ತು ಹಲವು ಸಾಧ್ಯತೆಗಳ ದೂರದರ್ಶಿತ್ವದ ಫಲವೆಂದೇ ಹೇಳಬಹುದು.

ಪರಿಣಾಮ:

ಧನಾತ್ಮಕ ಪರಿಣಾಮಗಳು: ದಿನೇದಿನೇ ಪಸರಿಸುತ್ತಿರುವ ಶಿಕ್ಷಣದ ಪ್ರಗತಿ ಮತ್ತು ಒಲವುಗಳು ಬಹು ವ್ಯಾಪಕವಾಗಿ ತನ್ನ ಸತ್ಪರಿಣಾಮವನ್ನು ಬೀರಿದವು. ೧೮೮೩ರ ಜನೇವರಿಯಲ್ಲಿ 'ಗೋಪಾಳ ವಿನಾಯಕ ಜೋಶಿ ಎಂಬುವವರು ತಮ್ಮ ಟಪಾಲ ಖಾತೆಯ ನೌಕರಿಯಲ್ಲಿ ಈಗ ಬಂಗಾಲಕ್ಕೆ ಹೋಗಲಿದ್ದಾರೆ. ಅವರಿಗೆ ಚಿಕ್ಕ ಪ್ರಾಯದ ಹೆಂಡತಿ ಇದ್ದು, ಅವಳಿಗೆ ಇಂಗ್ಲಿಷ ಚೆನ್ನಾಗಿ ಕಲಿಸಿದ್ದರಿಂದ ಈಗ ಅವಳು ವೈದ್ಯಶಾಸ್ತ್ರ ಅಭ್ಯಸಿಸಲು ಗಂಡನ ಹೊರ್ತಾಗಿಯೂ ವಿಲಾಯತಿಗೆ ಹೋಗತಕ್ಕವಳಿದ್ದಾಳೆ' ಎಂಬ ಸುವಾರ್ತೆ ಶಿಕ್ಷಣ ಮಹತ್ವ ಮತ್ತು ಜನರನ್ನು ಆಕರ್ಷಿಸುತ್ತಿರುವ ರೀತಿ ಹಾಗೂ ಮಹಿಳೆಯರ ಮನೋವಾಂಛೆಗೆ ಮುಂದುವರೆದ ಜನಾಂಗ ತತ್ಕಾಲಕ್ಕೆ ಸ್ಪಂದಿಸಿದ್ದು, ಅದನ್ನು ಸ್ವೀಕರಿಸಿದ್ದು ತಿಳಿದು ಬರುತ್ತದೆ.

೧೮೯೦, ಸಪ್ಟಂಬರದಲ್ಲಿ 'ಟ್ರೇನಿಂಗ್ ಕಾಲೇಜು ಮತ್ತು ಡೆಪ್ಯುಟಿ ಇನ್ಸಪೆಕ್ಟರಗಳು ಮುಂತಾದವರ ಸ್ಥಳನಿಯುಕ್ತಿ ಮಾಡುವಾಗ, ಅಂಥ ಏತದ್ದೇಶೀಯ ಗೃಹಸ್ಥರನ್ನು, ಆ ಸ್ಥಳಗಳು ತೆರವಾಗುವುದಕ್ಕೆ ಸ್ವಲ್ಪ ದಿನ ಮೊದಲೇ ನೇಮಿಸುವ ಆಲೋಚನೆ ಮಾಡಬೇಕು; ಮತ್ತು ಅಂಥವರನ್ನು ಇಂಗ್ಲಂಡಕ್ಕೆ ಕಳುಹಿಸಿ ಅಲ್ಲಿಯ ಟ್ರೇನಿಂಗ್ ಕಾಲೇಜಗಳಲ್ಲಿರಿಸಿ ಅಭ್ಯಾಸ ಮಾಡಿಸಬೇಕು; ಇದರಿಂದ ಆ ದೇಶದಲ್ಲಿ ನಡೆಯುವ ಶಿಕ್ಷಣ ಪದ್ಧತಿಗಳನ್ನು ತಿಳಿದುಕೊಳ್ಳಲೂ, ಶಿಕ್ಷಣದ ಜ್ಞಾನವನ್ನು ವೃದ್ಧಿಸಲಿಕ್ಕೂ ಸಹಾಯವಾಗುವುದು' ಎಂದು ಮಧ್ಯಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾದ ಕರ್ಖ್ಯಾಮ ಅವರು ಸರಕಾರಕ್ಕೆ ಒಂದು ಸೂಚನೆ ಮಾಡಿರುವುದು ಆಶ್ಚರ್ಯ ಹುಟ್ಟಿಸಿದರೂ ಸಮಂಜಸವಾಗಿದೆ.

೧೮೯೬ರಲ್ಲಿ 'ದಕ್ಷಿಣ ಭಾಗದ ವಿದ್ಯಾಭಿಮಾನಿಗಳ ಪರಿಷತ್ತಿ'ನ ಸಮ್ಮೇಳನವೊಂದನ್ನು, ಶ್ರೀನಿವಾಸ ರೊದ್ದರಾಯರ ಅಧ್ಯಕ್ಷತೆಯಲ್ಲಿ ಆಯೋಜಿಸಿ, ರಾ.ಸಾ ಸವಣೂರ-ಡಿ.ಎ.ಇ. ಬೆಳಗಾವಿ ಜಿಲ್ಲೆ, ವೆಂ. ರಂ. ಕಟ್ಟಿ, ಮಿ.ಕರಂದಿಕರ, ಮಿ. ಸವದಿ, ಮಿ. ಕೇಸ್ಕರ ಹೈಸ್ಕೂಲ ಹೆಡ್ ಮಾಸ್ತರ,

ರಾಜೇಸಾಹೇಬ-ಕೋರ್ಟಿನ ನಾಝರ, ಶಾಂತಕವಿಗಳು, ಮ.ರಾ.ಕಿತ್ತೂರು ರೇವಣಸಿದ್ದಪ್ಪನವರು, ಮಿ. ಬೋಧ ರಾಯಾಚಾರ್ಯರು, ಮಿ. ಕೃಷ್ಣಗಿರಿ, ಮಿ. ಕಿತ್ತೂರು, ಮಿ.ಪಠಾಣ, ಮಿ.ಮುಜಮದಾರ, ಮಿ.ಘಾಟಕ ಗುರುನಾಥರಾಯರು, ಗದಗಿನ ಮುನಿಸಿಪಾಲ್ಟಿ ಪ್ರತಿನಿಧಿ ಮಿ. ಚಳ್ಳಪ್ಪನವರು, ನೀಲವ್ವಾ ಸುಣ್ಣದಹಾಳ, ಮಿ. ಕರೆಗುದರಿ, ಮಿ.ಆಪ್ಟೆ ಶಂಕರರಾಯರು, ಮಿ. ದೇಶಪಾಂಡೆ, ಮಿ. ಜೋಶಿ, ಮಿ.ವಕೀಲ ಗೋವಿಂದರಾಯರು, ಮಿ.ಕದಡಿ, ವಕೀಲರಾದ ಬೆಟದೂರ ಬಳವಂತರಾಯರು, ಮಿ.ಗರ್ದೆ ವಿಜಾಪೂರ ಜಿಲ್ಲೆಯ ಅ.ಡಿ.ಎ.ಇ, ಮಿ.ಗಳತಗಿ ಬಿಜಾಪೂರ ಮುನಿಸಿಪಾಲ್ಟಿ ಪ್ರತಿನಿಧಿ, ಮಿ.ಮೈಜರಕರ ವೆಂಕಟರಾಯರು, ಮಿ.ಅಬ್ದುಲ್ ಅಲಿ, ಅಂಜುಮನ್ ಮಹಮ್ಮದಿಯ ಪ್ರತಿನಿಧಿ, ಮಿ.ಶಾಂತಪ್ಪ ಗಣೇಶ, ಸಶಿ, ಮಿ.ಸೈಯದ್, ರೆವರೆಂಡ್ ರೀಪ್ ಮಿಷನರಿ ಮೇಲ್ವಿಚಾರಕರು, ಮುಂತಾದ ಕನ್ನಡ ಉರ್ದು ಶಾಲಾ ಮಾಸ್ತರರೆಲ್ಲ ಸೇರಿ ಶಾಲಾ ವಿಷಯಕ ಪ್ರಬಂಧ ಪತ್ರಿಕೆಗಳನ್ನು ಮಂಡಿಸಿ, ಆ ಕುರಿತು ಸುದೀರ್ಘ, ಫಲಪ್ರದ ಚರ್ಚೆ ನಡೆಸಿದ್ದಾರೆ. ಇಲ್ಲಿ ಚರ್ಚಿಸಿದ ವಿಷಯಗಳು- ಕಲಘಟಗಿಯ ರಾ. ಅನಂತರಾಯರ ಪ್ರಕಾರ- ಶಾಲೆ ಆರಂಭಿಸುವ ವಯಸ್ಸು ೪ ವರ್ಷವಿರುವುದು ಬಾಧಕವೇನೂ ಅಲ್ಲವಾದರೂ, ಎಳೆ ಮಗುವಿನ ಕೋಮಲ ಶರೀರ ಬಲಗುಂದುವುದು. ಕಾರಣ ಶರೀರ ಶಾಸ್ತ್ರದ ಬಲವಾದ ಪ್ರಮಾಣಗಳನ್ವಯ ಅದು ೮ ವರ್ಷ ಆದರೆ ಒಳಿತು; ಕಟ್ಟಿಯವರು ಈ ಕುರಿತು ಮಗು ಹುಡಿಯಲ್ಲಿ ಮನಬಂದಂತೆ, ಮನಬಂದವರ ಕೂಡ ಅಡಿ ಕೆಡುವುದಕ್ಕಿಂತ ಬೇಗನೆ ಸಾಲೆಗೆ ಸೇರಿಸುವುದು ಕೆಟ್ಟದೆನೂ ಅಲ್ಲ ಎನ್ನುತ್ತಾರೆ. ಮಿ.ಕೇಸ್ಕರರ ಪ್ರಕಾರ ಓದು, ಬರಹ, ಲೆಕ್ಕ ಇವು ಶಿಕ್ಷಣದ ಕೊನೆಯ ಗುರಿ; ನಾಲ್ಕನೆಯ ಇಯತ್ತೆ ಕಲಿತವನು ವ್ಯವಹಾರಕ್ಕೆ ಯೋಗ್ಯನಾಗುವನು; ಗ್ರಂಥೋತ್ಪತ್ತಿಯಲ್ಲಿ ಮೊದಲು ಪದ್ಯಗ್ರಂಥಗಳು, ನಂತರ ಗದ್ಯಗ್ರಂಥಗಳನ್ನು ಕಲಿಸತಕ್ಕದ್ದು ಶಾಲಾ ತರಗತಿಗಳು, ಪ್ರಸ್ತುತ ಇರುವ ೬ ತರಗತಿಗಳಿಗೆ ಇನ್ನೊಂದು ತರಗತಿ ಸೇರಿಸಿ ೭ ಮಾಡಿ, ಮೊದಲ ೫ ತರಗತಿಗಳು ಪ್ರಾಥಮಿಕ ಮತ್ತು ನಂತರದ ತರಗತಿಗಳು ಮಾಧ್ಯಮಿಕ ಮಾಡಿದರೆ ಉತ್ತಮ; **ಶಿಕ್ಷಕಿ ನೀಲವ್ವಾ ಸುಣ್ಣದಹಾಳ** ಇವರ ಪ್ರಸ್ತುತಿ- ಬಾಲಕಿಯರ ಶಿಕ್ಷಣವನ್ನು ಇನ್ನೊಂದಿಷ್ಟು ಸರಳಗೊಳಿಸಿ, ಫೀಮೇಲ್ ಟ್ರೇನಿಂಗ್ ಕ್ಲಾಸಿನಲ್ಲಿ ಸೂಲಗಿತ್ತಿಯ ಕೆಲಸವನ್ನೂ, ವೈದ್ಯಕೀಯ ಮೂಲತತ್ವಗಳನ್ನೂ ಕಲಿಸತಕ್ಕದ್ದು ಯೋಗ್ಯವಿರುತ್ತದೆ; ಬೆಳಗಾವಿ ಜಿಲ್ಲೆಯ ಡಿ.ಎ.ಇ.ಯಾದ **ರಾ. ಸಾ. ಸವಣೂರ** ರಾಮಚಂದ್ರರಾಯರ ಪ್ರಕಾರ 'ಶಿಕ್ಷಣದ ಮುಖ್ಯ ತತ್ವಗಳು ಎರಡು: ಒಂದು ವಿದ್ಯಾರ್ಥಿಗಳು ತಮ್ಮ ದಿನ ನಿತ್ಯದ ಕೃತ್ಯಗಳನ್ನು ತೊಂದರೆ ಇಲ್ಲದೆ ಸಾಗಿಸಿಕೊಳ್ಳಲಿಕ್ಕೆ ಯೋಗ್ಯರನ್ನಾಗಿಸುವುದು; ಮತ್ತು ಎರಡನೆಯದ್ದು ಮೇಲ್ತರದ ವಿದ್ಯೆಯನ್ನು ಕಲಿಯಲಿಕ್ಕೆ ಯೋಗ್ಯರನ್ನಾಗಿ ಮಾಡುವುದು. ಈ ಮೊದಲು ಉಂಡುಟ್ಟು ಸುಖವಾಗಿದ್ದವರು ಮಾತ್ರ ಕಲಿಯುತ್ತಿದ್ದರು. ಈಗ ಕೂಲಿ ಕಾರ್ಮಿಕರ ಮಕ್ಕಳೂ ಕಲಿಯಲಿಕ್ಕೆ ಸಾಧ್ಯವಾಗುವಂತೆ ವಿದ್ಯಾಖಾತೆಯವರು ವ್ಯವಸ್ಥೆ ಮಾಡಿದಂದಿನಿಂದ ಅವರೂ ಕಲಿಯುತ್ತಿದ್ದಾರೆ. ಆದರೆ ಇಂಥವರು ಮೇಲ್ಥರದ ಅಭ್ಯಾಸ ಮಾಡಲಾಗದೆ, ಅಲ್ಪಸ್ವಲ್ಪ ಕಲಿತು, ಕುಲಕಸುಬಿಗೇ ತೊಡಗುತ್ತಾರೆ. ಆದ್ದರಿಂದ ಈ ವರ್ಗದ ಜನರಿಗೆ ಈಗಿರುವ ಇಯತ್ತೆಗಳಿಗೆ

ಭಿನ್ನವಾದ ಇಯತ್ತೆಗಳನ್ನು ಏರ್ಪಡಿಸಬೇಕು. ಈ ಗ್ರಾಮ್ಯ ಇಯತ್ತೆಗಳಲ್ಲಿ ಇತಿಹಾಸ, ಭೂಗೋಲ, ವ್ಯಾಕರಣ, ಕವಿತೆ ಮುಂತಾದ ನಾಗರಿಕ ವಿಷಯಗಳನ್ನು ಸೇರಿಸದೆ, ತಮ್ಮತಮ್ಮ ಉದ್ಯೋಗಗಳನ್ನು ನಡೆಸಲಿಕ್ಕೆ ಯೋಗ್ಯವಾದ ವಿಷಯಗಳನ್ನು ಸೇರಿಸಬೇಕು. ಇವರಿಗೆ ಓದು ಬರಹ ಲೆಕ್ಕಗಳೇ ಅಗತ್ಯವಾದವುಗಳು ಮಿಕ್ಕವುಗಳ ಗರಜು ಕಡಿಮೆ. ಆದ್ದರಿಂದ ಇಯತ್ತೆಗಳಲ್ಲಿ ಗ್ರಾಮ್ಯವೆಂತಲೂ, ನಾಗರಿಕವೆಂತಲೂ ಎರಡು ಭಾಗಗಳನ್ನು ಮಾಡಬೇಕು. ಮಧ್ಯಭಾಗದಲ್ಲಿರುವಂತೆ ಮೋಡೀ ಇಯತ್ತೆಗಳನ್ನು ನಮ್ಮ ಭಾಗದಲ್ಲಿಯೂ ಪ್ರಚಾರದಲ್ಲಿ ತರಬೇಕು. ಇದನ್ನು ಹೊರತುಪಡಿಸಿ ನಾಗರಿಕ ಇಯತ್ತೆಗಳ ಕುರಿತು ರೊದ್ದರಾಯರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ' ಎಂದು ಅಭಿಪ್ರಾಯ ಪಡುತ್ತಾರೆ. ಮಿ.ಆಪ್ಟೆ ಶಂಕರರಾಯರು ಡೆಪ್ಯೂಟಿ ಇನ್ಸಪೆಕ್ಟರರು ಮಕ್ಕಳನ್ನು ಪರೀಕ್ಷಿಸುವಾಗ ಮಕ್ಕಳ ಯೋಗ್ಯತೆಯ ಹೊರಗಿನ ಪ್ರಶ್ನೆಗಳನ್ನು ಕೇಳುತ್ತಾರೆ; ಶಿಕ್ಷಕರು ವ್ಯಾಕರಣವನ್ನು ವಾಚನದ ಜೊತೆಗೆ ಕಲಿಸಬೇಕೇ ಹೊರತು ಪ್ರತ್ಯೇಕವಾಗಿ ಸಲ್ಲ; ಕ್ರಮಿಕ ಪುಸ್ತಕದ ಪುಟಗಳು ಕಡಿಮೆಯಾಗಬೇಕು; ೨ನೆ ಇಯತ್ತೆಯ ಕವಿತೆಗಳ ಕಾಠಿಣ್ಯತೆ ಕಡಿಮೆಯಾಗಬೇಕು; ಪುಸ್ತಕಗಳ ಪುಟಗಳು ನಿಗದಿತವಾಗಿಬೇಕು; ಹೀಗೆ ಅತೀ ಮಹತ್ವದ ತಾತ್ವಿಕ ವಿಚಾರಗಳನ್ನು ಈ ಸಮ್ಮೇಳನದಲ್ಲಿ ಚರ್ಚಿಸಲಾಗಿದೆ. (ಕ.ಶಾ.ಪತ್ರಕ. ೧೯೯೭, ಫೆಬ್ರುವರಿ) ಹೀಗೆಮಕ್ಕಳ ಮನಸ್ಸು, ಪಠ್ಯಕ್ರಮದ ಹರುವು, ಸಮಾಜೋಪಯೋಗಿ ಶಿಕ್ಷಣದ ಹಂಬಲ, ಪ್ರಗತಿಪರ ವಿಚಾರ ಮತ್ತು ಭವಿಷ್ಯ ರೂಪಿಸಬಲ್ಲ ಸ್ವ ಅಗತ್ಯಗಳ ಅರಿವು, ಅವಲೋಕನ, ಸಿಂಹಾವಲೋಕನ ಪ್ರಜ್ಞೆ, ಧನಾತ್ಮಕ ದಾರಿ ರೂಪಿಸತೊಡಗಿದ್ದು, ಶಿಕ್ಷಣ ಕ್ಷೇತ್ರದ ಒಂದು ಕ್ರಾಂತಿಕಾರಿ ಬೆಳವಣಿಗೆಯೇ ಆಗಿದೆ.

೧೯೪೧ ಸಪ್ಟಂಬರದ ಕ.ಪ್ರಾ.ಶಿ. ಪುಟ ೩೦ರಲ್ಲಿ ಎಸ್.ಆರ್.ತಾವಡೆ, ಎಜ್ಯುಕೇಷನ್ ಇನ್ಸಪೆಕ್ಟರ್, ದಕ್ಷಿಣ ಭಾಗ ಇವರು 'ಅಸ್ಪೃಶ್ಯತಾ ನಿವಾರಣೆಯೂ ಕ್ರಮಿಕ ಪುಸ್ತಕಗಳೂ' ಎಂಬ ಶೀರ್ಷಿಕೆಯಡಿ ಒಂದು ಪ್ರಕಟಣೆ ನೀಡಿದ್ದಾರೆ. ಅದರಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳ ಬಾಲಕ ಬಾಲಕಿಯರ ವಾಚನಕ್ಕಾಗಿ ಬರೆದಿರುವ ವಾಚನ ಪುಸ್ತಕಗಳಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಿಸಿದ ಕೆಲವು ಸಾಮಾನ್ಯ ವಿಚಾರಗಳನ್ನೊಳಗೊಂಡ ಪಾಠಗಳನ್ನು, ಆಯಾತರಗತಿಗೆ ತಕ್ಕಂತೆ ಸೇರಿಸುವುದು ಅವಶ್ಯವೆಂದು ಡೈರೆಕ್ಟರ ಆಫ್ ಪಬ್ಲಿಕ್ ಇನ್ಸಟ್ರಕ್ಶನ್ ಇವರು ಸೂಚಿಸಿರುವುದಾಗಿ ತಿಳಿಸಲಾಗಿದೆ. ಅಂದರೆ ಅಸ್ಪ್ರಶ್ಯತೆಯ ನಿವಾರಣೆಯ ಕುರಿತು ಮಕ್ಕಳಲ್ಲಿಯೂ ಅಂಥ ವಿಚಾರಗಳನ್ನು ಬಿತ್ತುವ ಜಾಗೃತಿ ಆರಂಭವಾಗತೊಡಗಿತ್ತು.

ಋಣಾತ್ಮಕ ಪರಿಣಾಮಗಳು: ೧೮೮೧ ಮೇ ನಲ್ಲಿ ಬೆಳಗಾವಿ ೨ ನಂಬರ ಕನ್ನಡ ಶಾಲೆಯಲ್ಲಿ ರಾತ್ರಿ ನಡೆಯುವ ವರ್ಗದಲ್ಲಿ ೨೪ ಹೊಲೆಯರು ಮತ್ತು ಇತರ ಹಿಂದೂ ೧೮ ಅಂತೂ ೪೨ ಜನ ವಿದ್ಯಾರ್ಥಿಗಳು ಹಾಜರಿದ್ದ ಬಗ್ಗೆ ಮತ್ತು ಈ ವರ್ಗದ ಅಭ್ಯಾಸಕ್ಕೆ ಇನಸ್ಪೆಕ್ಟರ ದೊರೆಗಳ ಹೆಡ್ಡರೈಟರರಾದ ವಿನಾಯಕರಾವ ಬೆಹರೆ ಇವರು ಬಹು ಮುತುವರ್ಜಿ ವಹಿಸುತ್ತಿರುವ

ಉಲ್ಲೇಖವಿದೆ. ಹೊಲೆಯರ ಮಕ್ಕಳು ಹಗಲಿನ ಶಾಲೆಗಿಂತ ರಾತ್ರಿಶಾಲೆಗೆ ಹೆಚ್ಚಾಗಿ ಬರುತ್ತಿದ್ದುದು ಇದರಿಂದ ವಿಧಿತವಾಗುತ್ತದೆ.

ಶಾಲಾ ಪತ್ರಕ ೧೬-೧೯ ಸಪಟಂಬರ ೧೮೮೧, ಪುಟ ೧೯೪-೯೫ರಲ್ಲಿ ಪ್ರಕಟಿತ 'ವಿದ್ಯಾ ಸುಧಾರಣಾ ಸಂಬಂಧವಾದ ಸಂಗತಿಗಳು' ವಿಷಯ ಸಾರಾಂಶದ ಪ್ರಕಾರ ಅಹಮದನಗರ ಜಿಲ್ಲೆಯ ರಾಹುರಿ ಗ್ರಾಮದ ಹೊಲಿಯ, ಮಾದಿಗರು ಕೂಡಿ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಲ್ಲಿ ಬ್ರಾಹ್ಮಣ ಮುಂತಾದ ಉತ್ತಮ ವರ್ಗದವರ ಮಕ್ಕಳೊಡನೆಕೂಡ್ರಿಸಿ ವಿದ್ಯೆ ಕಲಿಸಬೇಕೆಂದು ಉತ್ತರ ಭಾಗದ ಇನ್ಸಪೆಕ್ಟರ ದೊರೆಗಳಿಗೆ ಅರ್ಜಿ ಸಲ್ಲಿಸಿದ ವಿಷಯ ಕೂತೂಹಲ ಹುಟ್ಟಿಸುತ್ತದೆ. ಇದಕ್ಕೆ ಇನ್ಸಪೆಕ್ಟರ ದೊರೆಗಳು ಅನುಮೋದನೆ ಕೊಟ್ಟರೂ ತಕರಾರಾಗಿ ಅದು ಜಿಲ್ಲೆಯ ಅಸಿಸ್ಟಾಂಟ ಕಲೆಕ್ಟರರಾದ ಮೆ.ಹಾಮಿಲ್ಟನ್ ದೊರೆಗಳ ಕಡೆಗೆ ಬಂದು ಅವರು ಪಟ್ಟ ಅಭಿಪ್ರಾಯವೆನೆಂದರೆ ವಿಲಾಯತಿಯಲ್ಲೂ ನೀಚ ವರ್ಗದವರು ಉತ್ತಮ ವರ್ಗದವರೊಡನೆ ಒತ್ತಟ್ಟಿಗೆ ಕೂತು ಭೋಜನಾದಿ ವ್ಯವಹಾರಗಳನ್ನು ಮಾಡತಕ್ಕವರೆಂದು ಏಣಿಸುವುದಿಲ್ಲ. ಹಿಂದೂಸ್ಥಾನದಲ್ಲಿಯಂತೂ ಧರ್ಮಸಂಬಂಧವಾದ ವಿಚಾರಗಳು ಪ್ರಬಲವಾಗಿ ಬೇರೂರಿರುವುದರಿಂದ ಇದು ಅವಿಚಾರದ ಕೆಲಸವಾದೀತು. ಇದರಿಂದ ಉತ್ತಮರ ಮಕ್ಕಳು ಶಾಲೆ ಬಿಟ್ಟು ಹೋಗುವರು ಅಲ್ಲದೆ ಲೋಕಲ್ ಫಂಡಿನಲ್ಲಿ ೧೦೦ಕ್ಕೆ ೯೦ರಷ್ಟು ಹಣವು ಉತ್ತಮ ಕುಲದವರಿಂದ ಬರುತ್ತದೆ. ಅವರಿಗೆ ನುಕಸಾನು ಮಾಡಿ ನೀಚ ಕುಲದವರ ಹಿತಕ್ಕಾಗಿ ವೆಚ್ಚಮಾಡುವುದು ಅಶ್ಲಾಘ್ಯವಾದುದು ಎಂಬ ಅಭಿಪ್ರಾಯ ಮೂಡಿ ಬಂದುದರ ಉಲ್ಲೇಖವಿದೆ. ಹೊಲೆಮಾದಿಗರಲ್ಲೂ ೧೮೮೧ರಲ್ಲಿಯೇ ತಮ್ಮ ಸ್ಥಾನಮಾನದ ಅರಿವು ಮೂಡತೊಡಗಿದ್ದು ಮತ್ತು ಅದಕ್ಕಾಗಿ ಧ್ವನಿ ಎತ್ತತೊಡಗಿದ್ದು ಇದರಿಂದ ಗೋಚರವಾಗುತ್ತದೆ. ಇದು ಉತ್ತರ ಭಾಗದಲ್ಲಿಯ ವಿಷಯ. ಇನ್ನೂ ದಕ್ಷಿಣ ಭಾಗದ ಪರಿಸ್ಥಿತಿಯೂ ಇದಕ್ಕೆ ಹೊರತೆನಾಗಿರಲಿಲ್ಲ. ಧಾರವಾಡದ ಹೈಸ್ಕೂಲಿಗೆ ಇಬ್ಬರು ಹೊಲೆಯರ ಹುಡುಗರು ಬಂದರೆ ಕೆಲವು ಹುಡುಗರು ನಾಲ್ಕಾರು ದಿನ ಶಾಲೆ ಬಿಟ್ಟು ಹೊರಹೊರಗೆ ಅಡ್ಡಾಡಿದರಂತೆ. ನಂತರ ತಾವೇ ಬಂದು ಶಾಲೆಯಲ್ಲಿ ಕೂಡ್ರತೊಡಗಿದರಂತೆ. ೧೮೮೨ ಮಾರ್ಚನಲ್ಲಿ ಇಂಥದ್ದೇ ಮತ್ತೊಂದು ಘಟನೆ ನಡೆದದ್ದು ಗೋಚರವಾಗುತ್ತದೆ. ಹೈಸ್ಕೂಲಿಗೆ ಇಬ್ಬರು ಹೊಲೆಯರ ಹುಡುಗರು ಬಂದದ್ದಕ್ಕೆ, ಕೆಲವು ಹುಡುಗರು ಶಾಲೆಗೆ ಹೋಗದೆ, ತುಂಬಾ ಗದ್ದಲವಾಗಿ, ಕೊನೆಗೆ ಆ ಹಾಯಸ್ಕೂಲಿಗೆ ಹೋಗಲೊಲ್ಲದ ವಿದ್ಯಾರ್ಥಿಗಳು, ಅದೇ ವರ್ಷ ಬಿ.ಎ. ಪಾಸಾಗಿ ಬಂದ ಲೇಲೇ ಎನ್ನುವ ಗೃಹಸ್ಥರೊಬ್ಬರು ತೆರೆದ ಇಂಗ್ಲಿಷ ಶಾಲೆಗೆ ಹೋಗತೊಡಗಿದರು. ಹೀಗೆ ಸಕಾಲಿಕ ವದಗಿ ಬಂದ ಅನುಕೂಲದಿಂದಾಗಿ ಪರಿಸ್ಥಿತಿ ತಾತ್ಕಾಲಿಕವಾಗಿ ಶಮನವಾದರೂ ಇಲ್ಲಿ ಶಾಶ್ವತ ಪರಿಹಾರ ಎಂಬುದೊಂದು ಉದ್ಭವವಾಗಿಯೇ ಇಲ್ಲ.

ಜಾತಿಯನ್ನು ಧರ್ಮವೆಂದು ಆಚರಿಸುವ ಭಾರತೀಯ ಸಮಾಜದಲ್ಲಿ ಊರ್ಧ್ವ ಚಲನೆಯ ಗತಿ ಮತ್ತು ಬದಲಾವಣೆ ಮಂದಗತಿಯಲ್ಲಿರುತ್ತದೆ. ಆದರೆ ತತ್ಸಂಬಂಧಿ ವಿಷಯಗಳು ಮಾತ್ರ ತೀವ್ರಗತಿಯಲ್ಲಿ ವ್ಯಾಪಿಸುತ್ತವೆ. ಭಾರತೀಯ ಕಡು ಸಂಪ್ರದಾಯಗಳ ಆಚರಣೆಯಲ್ಲಿ ಟ್ರೇನಿಂಗ ಕಾಲೇಜೇನು ಹೊರತಾಗಿರಲಿಲ್ಲ. ಪ್ರಗತಿ ಎಷ್ಟೇ ಹರಿತವಾಗಿದ್ದರೂ, ತೀಕ್ಷ್ಣವಾಗಿದ್ದರೂ ಅದು ಈ ಜಾತಿಯತೆಯನ್ನು ಒಳಗೊಳಿಸಿಕೊಂಡೇ ಎಂಬುದಕ್ಕೇ ಈ ಟ್ರೇನಿಂಗ ಕಾಲೇಜಿನ ವಿದ್ಯಮಾನಗಳೇ ಸಾಕ್ಷಿ.

—o—

ಗುಜರಾಥ ಪ್ರಾಂತದಲ್ಲಿ ಹೊಲೆಯರು ಮುಂತಾದ ಜಾತಿಯವರ ಮಕ್ಕಳನ್ನು ಸರಕಾರೀ ಶಾಲೆಗಳಲ್ಲಿ ಕ ಳ್ಳಲಿಕ್ಕೆ ಬೇಕೆಂದು ಅಲ್ಲಿಯ ಇನ್‌ಸ್ಪೆಕ್ಟರರು ನಿಯಮಿ ಸಿದ್ದರಿಂದ ಆ ಪ್ರಾಂತದ ಉತ್ತಮ ಜಾತಿಯ ಜನರು ಅ ಸಂತುಷ್ಟರಾಗಿದ್ದಾರೆ.

—o—

ಸದರೀ ಪ್ರಾಂತದ ಎಜುಕೇಶನಲ್ ಇನ್‌ಸ್ಪೆಕ್ಟರರಾದ ಬುಲರ ದೊರೆಗಳು ಸರಕಾರಿಯ ರಾಜೀನಾಮೆ ಕೊಟ್ಟು ಸ್ವ ದೇಶಕ್ಕೆ ಹೊರಟು ಹೋದರು. ಇವರು ಸಂಸ್ಕೃತಭಾ ಷಾ ಧುರೀಣರಿದ್ದರು, ಸುಮಾರು ೫೦೦೦ ಅಪ್ರಸಿದ್ಧ ಸಂ ಸ್ಕೃತ ಗ್ರಂಥಗಳನ್ನು ಗೊತ್ತುಹಚ್ಚಿ ಸರಕಾರಕ್ಕೆ ಸಂಪಾದಿ ಸ್ಸಿದರು. ಆದರೆ ಮೇಲೆ ಉಲ್ಲೇಖಿಸಿದಂತೆ ನೀಚಜಾತಿಯ ಹುಡುಗರನ್ನು ಸರಕಾರೀಶಾಲೆಗಳಲ್ಲಿ ತಕ್ಕೊಳ್ಳಲಿಕ್ಕೆ ಬೇಕೆಂಬ ಬ ಗ್ಗೆ ಇವರ ಅಗ್ರಹವು ಬಹಳ ಇತ್ತು. ಆದರಿಂದ ಜನರಿಗೆ ಬಹಳ ಬೇಸರಹುಟ್ಟಿತ್ತು.

—o—

ಹುಡುಗಿಯರಿಗಾಗಿನ ಕಲಾಶಾಲೆಯ ಪ್ರಯತ್ನವನ್ನು ಸ ರಕಾರ ಗವ್ಹರ್ನರ ದೊರೆಗಳವರು ಈ ತಿಂಗಳ ೧೬ನೇ ತಾ ರೀಖಿನಲ್ಲಿ ಸ್ವತಃ ಬಂದು ಶುರು ಮಾಡಿದರು.

—o—

(ಶಾಲಾ ಪತ್ರಕ ೧೫-೯, ಸಪಟಂಬರ ೧೮೮೦ ಪುಟ-೧೯೬)

ದಕ್ಷಿಣ ಭಾಗದ ಎಜ್ಯುಕೇಶನ್ ಇನ್ಸಪೆಕ್ಟರರಾದ ಬುಲರ ಅವರು ಕೆಳ ಜಾತಿಯ ವಿದ್ಯಾರ್ಥಿಗಳನ್ನು ಸರಕಾರಿ ಶಾಲೆಗಳಲ್ಲಿ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕ ಅಗ್ರಹ ಮಾಡಿದ್ದಾರೆ. ಜಾತ್ಯಾತಿತತೆಯ ಅರಿವನ್ನು ಜನರಲ್ಲಿ ಮೆಲ್ಲನೆ ಬಿತ್ತಿದ ಬುಲರನಂಥ ಬ್ರಿಟಿಷ ಅಧಿಕಾರಿಗಳೂ ಕೂಡ ಸಮಾಜದ ವಿರೋಧ ಕಟ್ಟಿಕೊಳ್ಳಬೇಕಾದ ಸಂದರ್ಭಗಳು ಬಂದೊದಗಿವೆ. ಕಸುಬನ್ನೇ ಜಾತಿ ಎಂದು, ಧರ್ಮವೆಂದು ಆಚರಿಸುವ ಭಾರತೀಯ ಸಮಾಜದಲ್ಲಿ ಊರ್ಧ್ವ ಚಲನೆಯ ಗತಿ ಮತ್ತು ಬದಲಾವಣೆ ಮಂದಗತಿಯಲ್ಲಿರುತ್ತದೆ. ಆದರೆ ತತ್ಸಂಬಂಧಿ ವಿಷಯಗಳು ಮಾತ್ರ ತೀವ್ರಗತಿಯಲ್ಲಿ ವ್ಯಾಪಿಸಲ್ಪಡುತ್ತವೆ. ಜಾತಿ ಆಚರಣೆಯ ಕಡುಸಂಪ್ರದಾಯದಿಂದ ಟ್ರೇನಿಂಗ್ ಕಾಲೇಜು ತಪ್ಪಿಸಿಕೊಳ್ಳಲಾಗಿಲ್ಲ. ಅತ್ತ ಬೆಳಗಾವಿಯಲ್ಲಿ ಸರದಾರರ ಮಕ್ಕಳಿಗೆ ಸರ್ದಾರ ಸ್ಕೂಲ ಆರಂಭವಾಗಿದ್ದರೆ, ಉತ್ತರ ಭಾರತದಲ್ಲಿ ಅಸಿಸ್ಟಂಟ್ ಕಲೆಕ್ಟರನಾದ ಹ್ಯಾಮಿಲ್ಟನ್‌ನಂಥವರೂ ಕೂಡ

ನೂರಕ್ಕೆ ನೂರು ಉಚ್ಚಜಾತಿಯವರ ಫಂಡಿನಿಂದ ಶಾಲೆಗಳು ನಡೆಯುತ್ತಿರುವಾಗ ನೀಚಜಾತಿಯವರನ್ನು ಸೇರಿಸಿಕೊಳ್ಳುವುದು ಅವಿಚಾರ ಎನ್ನುತ್ತಿದ್ದನು. ಸುಶಿಕ್ಷಿತನಾದರೂ ಈ ಜಾತಿಯತೆ ಮತ್ತು ಪಕ್ಷಪಾತದಿಂದ ಹೊರಬಂದಿಲ್ಲ.

೨೫೨

ಸರ್ಕ್ಯುಲರು, ನಂಬರು ೩೩೯೦

ದಕ್ಷಿಣಭಾಗದೊಳಗಿನ ಡೆಪ್ಯುಟೀ ಇನ್‌ಸ್ಪೆಕ್ಟರರಿಗೆ—

ಯಾವತ್ತು ಜಾತಿಗಳು ಸರಕಾರೀ ಶಾಲೆಗಳಲ್ಲಿ ಕಲಿಯು ವರಾದ ಕಾರಣ ಹೊಲಿಯರನ್ನು ತಕ್ಕೊಳ್ಳಲಿಕ್ಕೆ ಬೇರೆ ಹುಕುಮು ಅವಶ್ಯವಿಲ್ಲ. ಹಳ್ಳಿಗಳ ಶಾಲೆಗಳಲ್ಲಾಗಲಿ ದೇಶಿಯ ಶಾಲೆಗಳಲ್ಲಾಗಲಿ ಕಲಿಯಲಿಕ್ಕೆ ಅವರಿಗೆ ಉಪದ್ರವು ಕೊಡಕ್ಕೆ ಬೇಡ್ದು. ಶಾಲೆಗೆ ಬರುವ ಹೊಲಿಯರ ಸಂಖ್ಯಾವು ಹೆಚ್ಚಾದ್ದೇಯಾದಲ್ಲಿ, ಅವರ ಸಲುವಾಗಿ ಬೇರೆ ಶಾಲೆಗಳನ್ನು ಹಾಕಬಹುದು.

೨ ರಾತ್ರಿಯ ಶಾಲೆಗಳ ವಿಷಯವಾಗಿ ನಾವು ಹೊರಡಿಸಿದ ಹುಕುಮಿನಂತೆ ನಡಕೊಳ್ಳುವದು ಹ್ಯಾಗೆ ಪ್ರತಿಯೊಬ್ಬ ಮಾಸ್ತರರ ಕೆಲಸದ ಮುಖ್ಯಭಾಗವಾಗಿರುತ್ತದೆಯೋ ಹಾಗೆ ಈ ಹುಕುಮಿನಂತೆ ನಡಕೊಳ್ಳುವದಾದರೂ ಇರುತ್ತದೆ. ಹುಕುಮಿನಂತೆ ನಡೆದದ್ದರ ಮೇಲಿನಿಂದ ಮಾಸ್ತರ ಜನರ ಕೆಲಸವು ನಿರ್ಣಯಿಸಲ್ಪಡುವದು; ಮತ್ತು ಆ ನಿರ್ಣಯದ ಅವರ ಯೋಗ್ಯತಾನುಸಾರವಾಗಿ ಅವರಿಗೆ ಲಾಭವಾಗುವ ಅಥವಾ ಆಗಲಿಕ್ಕಿಲ್ಲ. ಬೆಳಗಾವಿ, ತಾ. ೨೦ನೇ ನವೆಂ ೧೮೮೦ ಇ.

W. A. Russell

ಎಜುಕೇಶನಲ್ ಇನಸ್ಪೆಕ್ಟರ ದ. ಭಾ

—o—

(ಶಾಲಾ ಪತ್ರಕ ೧೫-೯, ನವಂಬರ ೧೮೮೦ ಪುಟ-೨೫೨)

ಶಿಕ್ಷಣ ಬೆಳೆದ ಹಾಗೆ ಅದರ ಪ್ರಸಾರದ ಮಹತ್ವವೂ ಉಂಟಾಗತೊಡಗಿ, ಕೆಳಜಾತಿಯವರಿಗೂ ಸಮಾನ ಅವಕಾಶ ನೀಡಲು ಪ್ರತ್ಯೇಕ ಆಜ್ಞೆಗಳು ಬೇಕಾಗಿಲ್ಲ, ಅಂದರೆ ಸಹಜವಾಗಿಯೇ ಅವರಿಗೆ ಅವಕಾಶ ನೀಡಬೇಕು ಎಂದು ರಸೆಲ್ ಆದೇಶಿಸಿದ್ದಾರೆ. ಪ್ರತ್ಯೇಕ ಆಜ್ಞೆಗಳ ಬೇಕಾಗಿಲ್ಲ ಎನ್ನುವುದು ಎಲ್ಲೋ ಒಂದು ಕಡೆ ಸಮಾಜ ಪ್ರತ್ಯೇಕ ಆಜ್ಞೆಯನ್ನು ನೀರಿಕ್ಷಿಸುತ್ತಿತ್ತು ಎಂಬುದರ ಪ್ರತಿಧ್ವನಿಯೂ ಆಗಿ ಕಾಣುತ್ತದೆ. ಆದೇಶ ಪಾಲಿಸುವವರ ಕೆಲಸ ಸಕ್ಷಮವೆಂದು ನಿರ್ಣಯಿಸಲ್ಪಡುವ ಕುರಿತೂ ಎಚ್ಚರಿಕೆ ನೀಡಿದ್ದಾರೆ. ಇದು ಮೆಲ್ಲನೆ ಬೆಳೆಯುತ್ತಿರುವ ಸಾಮಾಜಿಕ ನ್ಯಾಯದ ದ್ಯೋತಕವಾಗಿದೆ. ಇಂಥ ಪರಿಸ್ಥಿತಿಗಳನ್ನು ಸಾದ್ಯಂತವಾಗಿ ವಿರೋಧಿಸಿ, ಖಂಡಿಸಿ, ಪ್ರಶ್ನಿಸಿ, ಎದುರಿಸುವ ಛಾತಿಯನ್ನು ತೋರಿದವರೆಂದರೆ ಶ್ರೀ ಕಂಬಳಿಯವರು. ಸಾಮಾಜಿಕ ನ್ಯಾಯದ ಮತ್ತು ಅಪುರೋಹಿತಶಾಹಿ ಸಮಾಜದ ಗತಿಗೆ ಸಂಪೂರ್ಣ ಮುಡಿಪಾಗಿಸಿಕೊಂಡು, ಟ್ರೇನಿಂಗ್ ಕಾಲೇಜಾದಿಯಾಗಿ ಎಲ್ಲ ಕಡೆಗೆ ಅದರ ಅನುಷ್ಠಾನಕ್ಕಾಗಿ ಹೋರಾಡಿದ್ದಾರೆ.

೩.೪. ಹೋರಾಟ ನಿರೂಪಿಸಿದ ಶೈಕ್ಷಣಿಕ ಶಿಸ್ತು

ಭಾರತೀಯ ಸಂಸ್ಕೃತಿಯಲ್ಲಿ ವಿದ್ಯೆ ಪೀಳಿಗೆಯಿಂದ ಪೀಳಿಗೆಗೆ ವಾಹಿನಿಯಾಗಿ ಹರಿದು, ಪ್ರಗತಿ ಹೊಂದಿದರೂ ಅದು ವೇದಾಗಮಗಳನ್ನು ಓದಲು, ವ್ಯಾಪಾರ ಮಾಡಲು, ಕುಲಕಸಬುಗಳನ್ನು ಮುಂದುವರೆಸಲು ಮಾತ್ರ ಸೀಮಿತವಾಗಿತ್ತು. ವಸಾಹತುಶಾಹಿಗಳ ಆಗಮನದೊಂದಿಗೆ, ವಿದ್ಯೆ ಶಿಕ್ಷಣವಾಗಿ, ಶಿಕ್ಷಣ ಮತ್ತು ಹೆಚ್ಚಿನ ಪದವಿಗಳು ಸರಕಾರದಲ್ಲಿ ಉನ್ನತ ಹುದ್ದೆ ಗಳಿಸುವುದಕ್ಕೋಸ್ಕರ ಎಂಬ ಪರಿಕಲ್ಪನೆ ಪಡೆದವು. ಶಿಕ್ಷಣ ಉತ್ಪಾದನೆಯೊಂದಿಗೆ ಸಾವಯವ ಸಂಬಂಧ ಪಡೆಯಿತು. ಆಂಗ್ಲರ ಶಿಕ್ಷಣದ ಕಲ್ಪನೆಯೊಂದಿಗೆ ವಿದ್ಯೆ ಎನ್ನುವುದು ಮೈಹೊರಳಿಸಿ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿತು. ಇದ್ದದ್ದರಲ್ಲಿಯೇ ಸ್ಥಿತಿವಂತರಿದ್ದ ಸಮಾಜದ ಎಲ್ಲ ಜಾತಿ-ಜನಾಂಗಗಳು ಕುಲಗೋತ್ರವೇನಿಸದೆ ಶಿಕ್ಷಣವನ್ನು ಪಡೆಯಬೇಕೆನ್ನುವ ಆಶಯ ಹೊಂದಿದರು. ಮೆಲ್ಲನೆ ಸಮಾಜದ ಚಲನೆ ಗತಿಯನ್ನು ಪಡೆಯತೊಡಗಿತು.

ಶಿಕ್ಷಣಕ್ಕೆ ಒಂದು ತಾತ್ವಿಕವಾದ, ಸ್ಪಷ್ಟ ತಳಹದಿ ರಚನೆಯಾಗದ ಆ ಕಾಲದಲ್ಲಿ, ಪ್ರಾಥಮಿಕ, ಪ್ರೌಢ, ಉನ್ನತ ಎನ್ನುವ ಶಾಖೆಗಳಿರಲಿಲ್ಲ. ಮ್ಯಾಟ್ರೀಕ್ಯುಲೇಷನ್ ಪರೀಕ್ಷೆ ಆಗ ಯುನಿವರ್ಸಿಟಿ ಮಟ್ಟದಲ್ಲಿ ನಡೆಸಲಾಗುತ್ತಿತ್ತು.

ಈ ವರ್ಷದ ಮುಂಬಯಿ ಯುನಿವರ್ಸಿಟಿಯ ಮ್ಯಾಟ್ರಿಕ್ಯುಲೇಶನ ಪರೀಕ್ಷೆಗಾಗಿ, ಧಾರವಾಡದಿಂದ ೨೭, ಬೆಳಗಾವಿಯಿಂದ ೨೨, ಕೊಲ್ಹಾಪುರದಿಂದ ೧೪ ಉಮೇದವಾರರು ಹೋಗತಕ್ಕವರಿದ್ದಾರೆ. ನಾವು ಕೊಟ್ಟ ಸಂಖ್ಯೆ ಸರಕಾರೀ ಸಾಲೆಗಳೊಳಗಿಂದ ಹೋಗತಕ್ಕವರವು, ಇವರಲ್ಲದೆ ಖಾಸಗೀ ಅಭ್ಯಾಸ ಮಾಡಿ ಹೋಗುವ ವಿದ್ಯಾರ್ಥಿಗಳು ಇರಬಹುದು.

(ಶಾಲಾಪತ್ರಕ ಪು ೧೨ ಸಂ ೭ಅಕ್ಟೊಬರ ೧೮೭೬, ಪುಟ-೪೩೪) ಧಾರವಾಡದ ಅಂದರೆ ಉತ್ತರ ಕರ್ನಾಟಕ ಭಾಗದ ಜನರೆಲ್ಲ ದೂರದ ಮುಂಬಯಿಗೆ ಹೋಗಿ, ಬರೆದು ಬರುತ್ತಿದ್ದ ಮ್ಯಾಟ್ರಿಕ್ಯಲೇಶನ್ ಪರೀಕ್ಷೆಯನ್ನು, ಸ್ಥಳೀಯವಾಗಿ ಮೂರು ಸ್ಥಳಗಳಲ್ಲಿ ಪೂರ್ವಬಾವಿಯಾಗಿ ಪರೀಕ್ಷೆ ತೆಗೆದುಕೊಳ್ಳುವುದು. ಅದರಲ್ಲಿ ಪಾಸದರೆ ಮಾತ್ರ ಮುಂಬಯಿಗೆ ಹೋಗುವ ಶಿಸ್ತಕ್ರಮವನ್ನು ಜಾರಿತರಲಾಗಿದೆ.

ಈ ಸ್ಥಾನದಲ್ಲಿ ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳೆಲ್ಲರು ಮುಂಬಯಿಗೆ ಹೋಗಿ, ಅಲ್ಲಿಯೇ ಮೊದಲಿನಿಂದ ಕಡೆತನಕ ಪರೀಕ್ಷೆಯನ್ನು ಕೊಡಬೇಕಾಗುತ್ತಿತ್ತು; ಮತ್ತು ಮೊದಲಿನ ಇಂಗ್ಲಿಷ ಭಾಷೆಯ ಸಂಬಂಧದ ಪ್ರಶ್ನೆಗಳಲ್ಲಿ ನಾಪಾಸ ಆದವರು ಮುಂದೆ ಪರೀಕ್ಷೆಗೆ ಕೂಡ್ರದೆ ಮನೆಗೆ ಹಿಂದಿರುಗಿ ಬರಬೇಕಾಗುತ್ತಿತ್ತು. ಆದರೆ ಒಳಗಡೆಯಲ್ಲಿ ಯುನಿವರ್ಸಿಟಿಯ ಅಧಿಕಾರಿಗಳು ಮಾಡಿದ ಸ್ತುತ್ಯವೊಂದು ನಿಯಮವೇನೆಂದರೆ, ಇನ್ನು ಮುಂದೆ ಮೂರೂ ಭಾಗಗಳಲ್ಲಿ ಒಂದೊಂದು ಮುಖ್ಯ ಸ್ಥಲವನ್ನು ಗೊತ್ತುಮಾಡಿ, ಆ ಮೂರು ಸ್ಥಳಗಳಲ್ಲಿ ಸದರೀ ಪ್ರಶ್ನೆಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷಿಸಲಾಗಿ, ಅವುಗಳಲ್ಲಿ ಪಾಸ್ ಆದವರು ಮಾತ್ರ ಉಳಿದ ಪರೀಕ್ಷೆಯಸಲುವಾಗಿ ಮುಂಬಯಿಗೆ ಹೋಗಬೇಕು, ನಾಪಾಸಾದವರು ಹೋಗುವ ಪ್ರಯೋಜನವಿಲ್ಲ. ಇದರಿಂದ ಬಹುಜನ ವಿದ್ಯಾರ್ಥಿಗಳಿಗೆ ನಿರರ್ಥಕವಾಗಿ ಆಗುತ್ತಲಿದ್ದ ಶ್ರಮವೂ ವೆಚ್ಚವೂ ಉಳಿಯುವದು.

(ಶಾಲಾಪತ್ರಕ ೧೨-೧೧, ಫೆಬ್ರುವರಿ ೧೮೭೭ ಪುಟ ೫೩೧-೫೩೨)

೪೦

ಇವರಲ್ಲಿಯೂ ಸಮಾಧಾನಕರವಾದ ವೃತ್ತಾಂತಗಳನ್ನು ಬರೆದು ತೋರಿಸಲು ನಮಗೆ ಸಂತೋಷ ಕಾಣುತ್ತೇವೆ. ಹೊರ ಚೆಂಬಾರ ಮುಂತಾದವರ ಹಲಕಿ ಜಾತಿಯ ಹುಡುಗರು ಶಾಲಾ ಅಭ್ಯಾಸಕ್ಕೆ ಕೂಡಿಸಿದರೆ ಅಂಥಾ ಜನರಲ್ಲಿ ಈ ಪ್ರಾಂತ್ಯದಲ್ಲಿ [illegible] ಬರೆದು ಓದು [illegible] ವಿದ್ಯಾರ್ಥಿಗಳು ಕೂಡಿದ ಅಭ್ಯಾಸ (ಶಿಕ್ಷಣ) [illegible] ಬ್ರಾಹ್ಮಣ ಜಾತಿಯವರಿರುವ ಕಾರಣ [illegible] ಸಂಬಂಧದಿಂದ ಅನುಕೂಲವಾಗುವದಾಗಿ [illegible] ಅಂದರೆ ಅಂಥಾ ಜಾತಿಯ ಹುಡುಗರ ಸ್ಲೇಟುಗಳನ್ನು ಕೈಮಾಡಿ ಅಕ್ಷರಗಳನ್ನು ತಿದ್ದಿಕೊಡಲಿಕ್ಕೆ ಬ್ರಾಹ್ಮಣ ಜಾತಿಯ ಮಾಸ್ತರರಿಗೆ ಮುಜಮಲ್ಲಿಯ ಅಡಚಣೆಯಾಗುತ್ತದೆ. [illegible] ಆ ಹಲಕಿ ಜಾತಿಯವರಲ್ಲಿ ಒಬ್ಬನು [illegible] ಶಾಲಾ ಅಭ್ಯಾಸ ಮಾಡಿಸುವವರಿಗೆ (ಅಂದರೆ ಬೇರೆ ಹುಡುಗರ ಸ್ಲೇಟಿನ ಮೇಲೆ ಅಕ್ಷರಗಳನ್ನು ಬರೆದುಕೊಡುವರೆ [illegible]) ಅಕಸ್ಮಾತ್ತಾಗಿ ಒಬ್ಬ [illegible] ಪರೀಕ್ಷೆಯಲ್ಲಿ [illegible] ಮುಸಲಮಾನ ಉಮೇದವಾರರು [illegible] ಅಥವಾ ಇಲ್ಲಿಯ ಶಾಲೆಯ [illegible] ಒಬ್ಬ ಮುಸಲಮಾನ ಹುಡುಗನಿಗೆ [illegible] ಬ್ರಾಹ್ಮಣ [illegible] ಚೆಂಬಾರ ಜಾತಿಯ ಹುಡುಗರ ಅಭ್ಯಾಸಕ್ಕೆ ಅಲ್ಲ ಇಲ್ಲದೆ [illegible] ಕೊಡುತ್ತದೆ. [illegible] ೧೮೮೦

೪೧

ಆನವಿ. ಬೇಳಗಿ,,

ಶಾಲೆಯ ಮೆಂಬರ. ಮಾಳಿಗಿ ಗೋಪಗಿರಿಯಪ್ಪ ಹ [illegible]

ಜ. [illegible]

ಲಕ್ಷ್ಮಣ [illegible] ಶಾಲಾ

ಮೆಂಬರ [illegible]

ಮತ್ತು ಹೀಗೇ ಶಾಲೆಯ ೬ ಮೆಂಬರರ ಸಹಿಗಳುಂಟು

(ಶಾಲಾ ಪತ್ರಕ ೧೬-೨, ಫೆಬ್ರುವಾರಿ ೧೮೮೧ ಪುಟ -೩೦-೪೧)

[illegible] ಶಾಲೆಯ [illegible] ಶಾಲೂಕ [illegible] ಕೆಳಗಿನ ಮೇಲೆ ಬರೆದ ಹಾಗೆ [illegible] ಈ ಶಾಲೆಯ [illegible] ಮಾತ್ರ ಈ ಶಾ [illegible] ಮಾಡಿದೆವು. ಮತ್ತು [illegible] ಹುಡುಗರು [illegible] ಇವರಲ್ಲಿ [illegible] ಉದ್ಯೋಗದ [illegible] ಬೇರೆ [illegible] ಎಲ್ಲರಲ್ಲಿಯೂ [illegible]

ಹೀಗೆ ಕೆಲವು ಕಡೆಗೆ ಜಾತಿಯತೆಯನ್ನು ಒಪ್ಪಿಕೊಂಡು, ತಮ್ಮ ಮಟ್ಟದಲ್ಲಿಯೇ ಬದಲಿ ವ್ಯವಸ್ಥೆಯನ್ನು ಮಾಡಿಕೊಳ್ಳಲು ಚಿಂತನೆ ನಡೆಸಿದರು. ಇವೆಲ್ಲ ಶಾಲಾಪತ್ರಕದ ಮೂಲಕವೇ ಹಾಯ್ದು ಬಂದ ವಿಷಯಗಳು. ಆ ಮೂಲಕವೇ ಪ್ರಸಾರಗೊಂಡಿವೆ.

ಮಹಿಳಾ ಸಮಾನತೆ ಮತ್ತು ಶಿಕ್ಷಣ

ಮಹಿಳಾ ತರಬೇತಿ ಸಂಸ್ಥೆಯನ್ನು ತೆರೆದು, ಪತ್ನಿಯರನ್ನು ಶಾಲೆಗೆ/ತರಬೇತಿಗೆ ಕಳುಹಿಸುವ ಶಿಕ್ಷಕರಿಗೆ ಹೆಚ್ಚಿನ ವೇತನ ನೀಡುವುದಾಗಿ ಆಜ್ಞಾಪಿಸಿದ್ದಲ್ಲದೆ, ೧೮೮೧ ರಷ್ಟೊತ್ತಿಗೆ ಮಹಿಳಾ ಶಿಕ್ಷಣ ತನ್ನವ್ಯಾಪ್ತಿ ಹೆಚ್ಚಿಸಿಕೊಳ್ಳುತ್ತಿದ್ದು ಊರಿನ ಸದ್ಗ್ರಹಸ್ಥರೊಂದಿಗೆ ಶಾಲಾ ಕಮಿಟಿಯವರು ಶಾಲೆಗೆ ಭೇಟಿ ನೀಡಿ ತಮ್ಮ ಶಕ್ತ್ಯಾನುಸಾರ ಹುಡುಗಿಯರಿಗೆ ಖಣಗಳು, ಚಿಕ್ಕ ಪುಸ್ತಕಗಳು ಹಾಗೂ ಮಿಠಾಯಿಗಳಂಥ ವೈವಿಧ್ಯಮಯ ವಸ್ತುಗಳನ್ನು ಅವರವರ ಪ್ರತಿಭೆಗನುಸಾರವಾಗಿ ಹಂಚಿ ಪ್ರೋತ್ಸಾಹ ನೀಡುತ್ತಿದ್ದುದು ಕಂಡು ಬರುತ್ತದೆ.

೧೯೪೦ ಜನೇವರಿ/ಫೆಬ್ರುವರಿಯಲ್ಲಿ ದಿನಾಂಕ ೮-೧-೧೯೪೦ ರಿಂದ ೧-೨-೧೯೪೦ರವರೆಗೆ ಹಮ್ಮಿಕೊಂಡ ಶಾರೀರಿಕ ಶಿಕ್ಷಣದ ಪ್ರಥಮ ಶಿಬಿರದಲ್ಲಿ ೧೭ ಮಹಿಳೆ ಮತ್ತು ೨೬ ಪುರುಷರಿಗೆ ಸಮಾನವಾಗಿ ತರಬೇತಿ ನೀಡಲಾಗಿದೆ. ಮಹಿಳೆಯರಿಗೆ ಕಡಿಮೆ ವಿಷಯ, ಕಡಿಮೆ ದಿನ ಹೀಗೆ ತಾರತಮ್ಯ ಮಾಡದನೆ ತರಬೇತಿ ನೀಡಿದ್ದಾರೆ. ಅದೇ ಆ ಶಿಬಿರದ ವೈಶಿಷ್ಟ್ಯವೂ ಆಗಿತ್ತು. (ಕನ್ನಡ ಪ್ರಾಥಮಿಕ ಶಿಕ್ಷಣ-೧೯೪೦, ಫೆಬ್ರುವರಿ,೭೮/೧೨, ಪುಟ೮-೧೦) ಅಲ್ಲದೇ ಪ್ರಾಥಮಿಕ ಶಿಕ್ಷಣ ಪತ್ರಿಕೆಯಲ್ಲಿ ಕೆಲವು ಪುಟಗಳನ್ನು ವೃತ್ತಿಮೂಲ ಶಿಕ್ಷಣಕ್ಕೆ ಮತ್ತು ಸ್ತ್ರೀ ವಿದ್ಯಾಭ್ಯಾಸದ ಪ್ರಗತಿಯ ವಿಷಯವನ್ನು ಬರೆಯಲು ಕಾಯ್ದಿರಿಸಿ, ಆ ಕುರಿತೇ ಲೇಖನಗಳನ್ನು ಬರೆಯಲು ಯತ್ನಿಸುವ ಆಶಯ ಮೂಡಿದೆ.ತಮ್ಮ ಪತ್ನಿಯರನ್ನು ಶಾಲೆಗೆ ಕಳುಹಿಸುವ ಗಂಡಂದಿರಿಗೆ ಹೆಚ್ಚಿನ ಸಂಬಳ ಮತ್ತು ಹೆಚ್ಚಿನ ಅನುಕೂಲ ಕಲ್ಪಿಸುವ ಸುವಿಚಾರಗಳು ಮಹಿಳಾ ಶಿಕ್ಷಣದ ಜಾಗೃತಿಯನ್ನು ಬಿಂಬಿಸುತ್ತವೆ.

ಶಿಕ್ಷಣಕ್ಕಿರುವ ಅಡ್ಡಿಆತಂಕಗಳನ್ನು ಮೀರಿ, ಸಿಗುವ ಎಲ್ಲ ಅವಕಾಶಗಳನ್ನು ಬಾಚಿಕೊಂಡು, ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಂಡು ಲಿಂಗ ತಾರತಮ್ಯಗಳನ್ನು ಕಡಿಮೆಗೊಳಿಸುವ ಪ್ರಗತಿಪರ ಹೆಜ್ಜೆ ಹೋರಾಟದ ಪ್ರತಿಫಲವೇ ಆಗಿದೆ.

ಕೊನೆ ಟಿಪ್ಪಣಿ :

೧. ಕರ್ನಾಟಕ ರಾಜ್ಯ ಗ್ಯಾಝೆಟಿಯರ್(ಭಾಗ ಒಂದು) ಪುಟ ಸಂಖ್ಯೆ- ೫೨

೨. ಕರ್ನಾಟಕ ರಾಜ್ಯ ಗ್ಯಾಝೆಟಿಯರ್(ಭಾಗ ಮೂರು) ಪುಟ ಸಂಖ್ಯೆ- ೬, ೧೯೮೬

೩. ಭಾರತೀಯ ಗ್ಯಾಝೇಟಿಯರ್- ಕರ್ನಾಟಕದ ಗ್ಯಾಝೆಟಿಯರ್- ಧಾರವಾಡ ಜಿಲ್ಲಾ ಗ್ಯಾಝೆಟಿಯರ್, ಪುಟ ಸಂಖ್ಯೆ ೬೯೨, ಪರಿಷ್ಕೃತ ಆವೃತ್ತಿ- ೧೯೯೫

೪. ಕನ್ನಡದ ಶಕಪುರುಷ ಡೆಪ್ಯೂಟಿ ಚನ್ನಬಸಪ್ಪ- ಆರ್.ಎನ್.ಕರಡಿ-ಪುಟ ಸಂಖ್ಯೆ-೧೦, ೧೯೮೯, ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ ಧಾರವಾಡ-೮,

೫. Report of the D.P.I. Bombay, p.240, 1855-56

೬. ಜೀವನ ಶಿಕ್ಷಣ: ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜದ ಶತಮಾನೋತ್ಸವದ **ಸ್ಮಾರಕ ಸಂಪುಟ** ಸಂ-೯೩, ಸಂ- ೬ ರಿಂದ ೮, (ಲೇ)ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜ-ಸಂಕ್ಷೇಪ್ತ ಇತಿಹಾಸವು-ಎಸ್‌ಪಿ. ಪಾಟೀಲ, ಪುಟ ಸಂಖ್ಯೆ-೯, ೧೯೫೭ ನವೆಂಬರ,ಡಿಸೆಂಬರ,ಜನೇವರಿ-೧೯೫೮,

೭. ಶಾಲಾ ಪತ್ರಕ- ಪುಸ್ತಕ ೨೫, ಸಂಚಿಕೆ-೧೨, ಪುಟ ೨೬೫-೨೬೮, ಡಿಶೆಂಬರ-೧೮೯೦

೮. ಶಾಲಾ ಪತ್ರಕ- ಪುಸ್ತಕ ೩೦, ಸಂಚಿಕೆ-೧೨ ಪುಟ ೨೬೬-೨೭೦, ಡಿಶೆಂಬರ-೧೮೯೫

೯. ಜೀವನ ಶಿಕ್ಷಣ:ವಿಶೇಷ ಸಂಚಿಕೆ ಸಂ-೯೩, ಸಂ-೬ ರಿಂದ ೮, , (ಲೇ) ಲಿಂಗೈಕ್ಯ ಡೆಪ್ಯೂಟಿ ಚನ್ನಬಸಪ್ಪನವರು(ಟ್ರೇನಿಂಗ್ ಕಾಲೇಜದ ಪ್ರಪ್ರಥಮ ಪ್ರಿನ್ಸಿಪಾಲರು)-ಶ್ರೀ ಶಿಂತ್ರಿ ಬಸಪ್ಪನವರು. ಪುಟ ಸಂಖ್ಯೆ- ೨೬ ೧೯೫೭ ನವೆಂಬರ,ಡಿಸೆಂಬರ; ಜನೇವರಿ-೧೯೬೮

೧೦. ಕನ್ನಡ ಪ್ರಾಥಮಿಕ ಶಿಕ್ಷಣ- ಸಂ-೯೪, ಸಂ-೯, ಪುಟ ೮, ಫೆಬ್ರುವರಿ ೧೯೫೫

೧೧. ಜೀವನ ಶಿಕ್ಷಣ: ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜದ ಶತಮಾನೋತ್ಸವದ **ಸ್ಮಾರಕ ಸಂಪುಟ** ಸಂ-೯೩, ಸಂ- ೬ ರಿಂದ ೮, (ಲೇ)ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜ-ಸಂಕ್ಷೇಪ್ತ ಇತಿಹಾಸವು-ಎಸ್. ಪಿ. ಪಾಟೀಲ, ಪುಟ ಸಂಖ್ಯೆ-೧೧ ೧೯೫೭-ನವೆಂಬರ,ಡಿಸೆಂಬರ,ಜನೇವರಿ-೧೯೫೮,

೧೨. Gazetteer of the Bombay Presidency, volume- xxii, dharwar -ಭಾರತ ಇತಿಹಾಸ ಸಂಶೋಧನ ಮಂಡಳ, ಸದಾಶಿವ ಪೇಟ, ಪೇರು ಗೇಟ, ಪುಣೆ, 1884

೧೩. ಮಠಪತ್ರಿಕೆಯ ಪುಸ್ತಕ೨ ಸಂಚಿಕೆ೧ ಬೆಳಗಾವ, ಪುಟ ೧೩ ಮಾಹೆ ಮೇ ೧೮೬೬

೧೪. ಜೀವನ ಶಿಕ್ಷಣ: ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜದ ಶತಮಾನೋತ್ಸವದ **ವಿಶೇಷ ಸಂಚಿಕೆ** ಸಂ-೯೩, ಸಂ-೬ ರಿಂದ ೮, (ಲೇ)ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜ-ಸಂಕ್ಷೇಪ್ತ ಇತಿಹಾಸವು-ಎಸ್. ಪಿ. ಪಾಟೀಲ, ಪುಟ ಸಂಖ್ಯೆ-೧೩, ೧೯೫೭ ನವೆಂಬರ,ಡಿಸೆಂಬರ,ಜನೇವರಿ-೧೯೫೮

೧೫. Directorate of Archives, government of maharastra, 156 sir Cowasjee Jahangeer Readymoney Building (Elphinston college building) Mahatma gandhi road, kala godha, fort, MUMBAI-400032

೧೬. ಶಾಲಾ ಪತ್ರಕ ಪು-೧೨ರ ಸಂಚಿಕೆ-೧೨- ಪುಟ ಸಂಖ್ಯೆ ೫೫೪, ಮಾರ್ಚ-೧೮೭೭

೧೭. ಮಠ ಪತ್ರಿಕೆ ಪು-೧ ಸಂ, ಪುಟ ಸಂಖ್ಯೆ- ೨೫೧-೨೫೩೧೧ ಫೆಬ್ರುವರಿ ೧೮೬೬

೧೮. ಮಠ ಪತ್ರಿಕೆ ಪು-೧ ಸಂ ೧೧, ಪುಟ ಸಂಖ್ಯೆ- ೩೦೯-೩೧೨, ಫೆಬ್ರುವರಿ ೧೮೬೬

೧೯. ಮಠ ಪತ್ರಿಕೆ ಪುಸ್ತಕ-೨ ಸಂಚಿಕೆ-೧೦, ಪುಟ ೨೯೬-೩೦೦, ಬೆಳಗಾವಿ ಫೆಬ್ರುವರಿ-೧೮೬೭
೨೦. ಶಾಲಾ ಪತ್ರಕ ೧೪/೧ ಪುಟ ೧೩-೨೪, ೫೮೦/ವ್ಯಾಲುಂ ೨, ಜನವರಿ ೧೮೭೯
೨೧. ಶಾಲಾ ಪತ್ರಕ ೩೦/೮, ಪುಟ ೧೮೮, ೫೯೯/ವ್ಯಾಲುಂ ೨ ಅಗಸ್ಟ ೧೮೯೫
೨೨. ಶಾಲಾ ಪತ್ರಕ ಪುಸ್ತಕ-೧೦ರ ಸಂಚಿಕೆ-೧೧, ಪುಟ ಸಂಖ್ಯೆ ೨೧೮, ಫೇಬ್ರುವಾರಿ-೧೮೭೪
೨೩. ಮಠ ಪತ್ರಿಕೆ ಪುಸ್ತಕ-೫ ಸಂಚಿಕೆ-೯, ಪುಟ ೩೦೯-೩೧೫, ಬೆಳಗಾವಿ, ಜನವರಿ-೧೮೭೦
೨೪. ಮಠ ಪತ್ರಿಕೆ ಪುಸ್ತಕ-೫ ಸಂಚಿಕೆ-೧೨, ಪುಟ ಸಂಖ್ಯೆ ೩೮೧, ಬೆಳಗಾವಿ, ಮಾರ್ಚ-೧೮೭೦
೨೫. ಮಠ ಪತ್ರಿಕೆ ಪುಸ್ತಕ-೭ರ ಸಂಚಿಕೆ-೨ ಮತ್ತು ೪, ಪುಟ ೫೪ ಮತ್ತು ೧೧೧, ೧೮೭೧
೨೬. ಮಠ ಪತ್ರಿಕೆ ಪುಸ್ತಕ-೭ ಸಂಚಿಕೆ-೨, ಪುಟ ೫೫-೫೬, ಬೆಳಗಾವಿ, ಜುಲಾಯಿ ೧೮೭೧
೨೭. ಮಠ ಪತ್ರಿಕೆ ಪುಸ್ತಕ-೭ ಸಂಚಿಕೆ-೬, ಪುಟ ೧೯೧-೧೯೨, ಬೆಳಗಾವಿ,ಸಪ್ಟಂಬರ್-೧೮೭೧
೨೮. ಕನ್ನಡ ಶಾಲಾ ಪತ್ರಕ ಪುಸ್ತಕ-೯ರಸಂಚಿಕೆ-೫- ಪುಟ ಸಂಖ್ಯೆ ೩೯೭-೩೯೮,ಅಗಸ್ಟ-೧೮೭೩
೨೯. ಶಾಲಾ ಪತ್ರಕ ಪುಸ್ತಕ-೯ರ ಸಂಚಿಕೆ-೮, ಪುಟ ಸಂಖ್ಯೆ ೪೬೬-೪೬೭, ನವೆಂಬರ-೧೮೭೩
೩೦. ಶಾಲಾ ಪತ್ರಕ ಪುಸ್ತಕ-೯ರ ಸಂಚಿಕೆ-೧೨ ಪುಟ ಸಂಖ್ಯೆ ೫೬೪-೫೬೮ ಮಾರ್ಚ-೧೮೭೩
೩೧. ಶಾಲಾ ಪತ್ರಕ ಪುಸ್ತಕ-೧೦ರ ಸಂಚಿಕೆ-೩ ಪುಟ ಸಂಖ್ಯೆ ೭೦-೭೨ ಜೂನ-೧೮೭೪
೩೨. ಶಾಲಾ ಪತ್ರಕ ಪುಸ್ತಕ-೧೦ರ ಸಂಚಿಕೆ-೪ ಪುಟ ಸಂಖ್ಯೆ ೮೧-೮೨ ಜುಲೈ-೧೮೭೪
೩೩. ಶಾಲಾ ಪತ್ರಕ ಪುಸ್ತಕ-೧೦ರ ಸಂಚಿಕೆ-೬ ಪುಟ ಸಂಖ್ಯೆ ೧೨೩ ಸಪ್ಟಂಬರ-೧೮೭೪
೩೪. ಶಾಲಾ ಪತ್ರಕ ಪುಸ್ತಕ-೧೦ರ ಸಂಚಿಕೆ-೭ ಪುಟ ಸಂಖ್ಯೆ ೧೪೭ ಅಕ್ಟೋಬರ-೧೮೭೪
೩೫. ಶಾಲಾ ಪತ್ರಕ ಪುಸ್ತಕ-೧೦ರ ಸಂಚಿಕೆ-೯ ಪುಟ ಸಂಖ್ಯೆ ೧೯೪ ಡಿಸೆಂಬರ-೧೮೭೪
೩೬. ಶಾಲಾ ಪತ್ರಕ ಪುಸ್ತಕ-೧೧ ಸಂಚಿಕೆ-೩ ಪುಟ ಸಂಖ್ಯೆ ೪೮ ಜೂನ-೧೮೭೫
೩೭. ಶಾಲಾಪತ್ರಕ ಪುಸ್ತಕ-೨೫ರ ಸಂಚಿಕೆ-೧೨ ಪುಟ ಸಂಖ್ಯೆ ೨೬೫-೨೬೮ ಡಿಶೆಂಬರ-೧೮೯೦
೩೮. ಶಾಲಾ ಪತ್ರಕ ಪುಸ್ತಕ-೧೧ ಸಂಚಿಕೆ-೭ ಪುಟ ಸಂಖ್ಯೆ ೧೪೬ ಅಕ್ಟಂಬರ-೧೮೭೫
೩೯. ಶಾಲಾ ಪತ್ರಕ ಪುಸ್ತಕ-೧೧ ಸಂಚಿಕೆ-೧೧ ಪುಟ ೨೪೧-೨೪೨ ಫೆಬ್ರುವಾರೀ -೧೮೭೬
೪೦. ಶಾಲಾ ಪತ್ರಕ ಪುಸ್ತಕ-೧೧ ಸಂಚಿಕೆ-೧೨ ಪುಟ ಸಂಖ್ಯೆ ೭೩ ಮಾರ್ಚ-೧೮೭೬
೪೧. ಅದೇ- ಪುಸಂಖ್ಯೆ ೭೪
೪೨. ಶಾಲಾ ಪತ್ರಕ ಪುಸ್ತಕ-೧೨ ಸಂಚಿಕೆ-೨ ಪುಟ ಸಂಖ್ಯೆ ೩೧೪ ಮೇ-೧೮೭೬
೪೩. ಶಾಲಾ ಪತ್ರಕ ಪುಸ್ತಕ-೧೨ ಸಂಚಿಕೆ-೩ ಪುಟ ಸಂಖ್ಯೆ ೩೫೨ ಜೂನ-೧೮೭೬
೪೪. ಶಾಲಾ ಪತ್ರಕ ಪುಸ್ತಕ-೧೨ ಸಂಚಿಕೆ-೧೨ ಪುಟ ಸಂಖ್ಯೆ ೩೫೨ ಮಾರ್ಚ-೧೮೭೭
೪೫. ಶಾಲಾ ಪತ್ರಕ ಪುಸ್ತಕ-೧೪ ಸಂಚಿಕೆ-೭ ಪುಟ ಸಂಖ್ಯೆ ೧೮೬-೧೮೭ ಜುಲೈ-೧೮೭೮
೪೬. ಶಾಲಾ ಪತ್ರಕ ಪುಸ್ತಕ-೧೪ ಸಂಚಿಕೆ-೩ ಪುಟ ಸಂಖ್ಯೆ ೫, ಮಾರ್ಚ-೧೮೭೯
೪೭. ಶಾಲಾ ಪತ್ರಕ ಪುಸ್ತಕ-೧೪ ಸಂಚಿಕೆ-೧೨ ಪುಟ ಸಂಖ್ಯೆ ೨೭೦, ದಶಂಬರ-೧೮೭೯
೪೮. ಶಾಲಾ ಪತ್ರಕ ಪುಸ್ತಕ-೨೪ ಸಂಚಿಕೆ-೩ ಪುಟ ಸಂಖ್ಯೆ ೬೨, ಮಾರ್ಚ-೧೮೮೯
೪೯. ಶಾಲಾ ಪತ್ರಕ ಪು-೨೪ ಸಂಚಿಕೆ-೭ ಪುಟ ಸಂಖ್ಯೆ ೧೪೪, ಮೇ-೧೮೮೯
೫೦. ಶಾಲಾ ಪತ್ರಕ ಪು-೨೫ ಸಂಚಿಕೆ-೪ ಪುಟ ಸಂಖ್ಯೆ ೯೮, ಎಪ್ರೀಲ್-೧೮೯೦
೫೧. ಶಾಲಾ ಪತ್ರಕ ಪು-೨೫ ಸಂಚಿಕೆ-೧ ಪುಟ ಸಂಖ್ಯೆ ೧೭-೧೮, ನವೆಂಬರ-೧೮೯೦
೫೨. ಶಾಲಾ ಪತ್ರಕ ಪು-೨೫ ಸಂಚಿಕೆ-೧ ಪುಟ ಸಂಖ್ಯೆ ೧೭-೧೮, ನವೆಂಬರ-೧೮೯೦

೫೩. ಶಾಲಾ ಪತ್ರಕ ಪುಸ್ತಕ-೨೫, ಸಂಚಿಕೆ-೧೨, ಸಂಖ್ಯೆ ೨೬೫-೨೬೮, ಡಿಶೆಂಬರ-೧೮೯೦
೫೪. ಶಾಲಾ ಪತ್ರಕ ಪುಸ್ತಕ-೩೦, ಸಂಚಿಕೆ-೧೨, ಪುಟ ೨೬೫-೨೭೧ ಡಿಶೆಂಬರ-೧೮೯೫
೫೫. ಶಾಲಾ ಪತ್ರಕ ಪುಸ್ತಕ-೩೫, ಸಂಚಿಕೆ-೪, ಪುಟ ಸಂಖ್ಯೆ ೯೮-೧೦೫, ಮೇ-೧೮೯೯
೫೬. ಶಾಲಾ ಪತ್ರಕ, ಪುಸ್ತಕ-೪೨, ಸಂಚಿಕೆ-೧, ಪುಟ ಸಂಖ್ಯೆ ೧, ಮೇ-೧೯೦೬
೫೭. ಕನ್ನಡ ಶಾಲಾ ಪತ್ರಕ ೪೩/೬, ಪುಟ೧೨೩-೧೨೭, ಜೂನ್ ೧೯೦೭
೫೮. ಕನ್ನಡ ಶಾಲಾ ಪತ್ರಕಸಂ ೬೦, ಸಂ ೧೦, ಪುಟ ೪, ಜನವರಿ ೧೯೨೪
೫೯. ಶಾಲಾ ಪತ್ರಕ, ಪುಟ ೨/೩, ಏಪ್ರೀಲ ೧೯೧೯
೬೦. ಕನ್ನಡ ಶಾಲಾ ಪತ್ರಕ, ಸಂ೬೨, ಸಂ ೪, ಪುಟ ೧-೫, ಜೂನ್ ೧೯೨೫
೬೧. ಕನ್ನಡ ಶಾಲಾಪತ್ರಕ, ಸಂ-೬೨,ಸಂ-೭/೮,ಪುಟ-೩೮೪-೧೩,ಅಕ್ಟೋಬರ/ನವೆಂಬರ ೧೯೨೫
೬೨. ಕನ್ನಡ ಶಾಲಾ ಪತ್ರಕ, ೬೩, ಸಂ ೬, ಪುಟ ೧, ಸಪ್ಟಂಬರ ೧೯೨೬
೬೩. ಕನ್ನಡ ಪ್ರಾಥಮಿಕ ಶಿಕ್ಷಣ,ಸಂ-೬೯, ಸಂ ೧೧, ಪುಟ ೧, ಫೆಬ್ರುವರಿ ೧೯೩೩
೬೪. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಹುಬ್ಬಳ್ಳಿ, ಪುಟ-೩, ೧೨-೫-೧೯೫೯
೬೫. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಹುಬ್ಬಳ್ಳಿ, ಪುಟ-೭, ೨೬-೮-೧೯೩೫
೬೬. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಹುಬ್ಬಳ್ಳಿ, ಪುಟ-೨, ೨೬-೬-೧೯೩೫
೬೭. ಕನ್ನಡ ಪ್ರಾಥಮಿಕ ಶಿಕ್ಷಣ- ಸಂ ೮೦, ಸಂ ೩, ಜೂನ ೧೯೪೧
೬೮. ಕನ್ನಡ ಪ್ರಾಥಮಿಕ ಶಿಕ್ಷಣ- ೯೩/೬, ೧೯೫೩,
೬೯. ಧಾರವಾಡದ ಗತವೈಭವ- ನ.ಹ. ಕಟಗೇರಿ, ಪುಟ ೧೬, ಕರ್ನಾಟಕ ಸಂಶೋಧನ ಮಂಡಳ, ಧಾರವಾಡ, ೨೦೦೭-೦೮
೭೦. BOMBAY STATE GAZETTEER, Dharwad District- U231K 14.2-85052 -ಪುಟ 789, ಜಯಕರ ಮುಖ್ಯ ಗ್ರಂಥಾಲಯ, ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ ಪುಣೆ 1959,
೭೧. German Ideology, Progress publishers, Moscow, p.67,1976
೭೨. ಶಾಲಾ ಪತ್ರಕ ಪುಸ್ತಕ-೧೦ ಸಂಚಿಕೆ-೩, ಪುಟ ಸಂಖ್ಯೆ- ೫೯-೬೨ ಜೂನ-೧೮೭೪
೭೩. ಶಾಲಾ ಪತ್ರಕ ಪುಸ್ತಕ-೧೨ ಸಂಚಿಕೆ-೧ ಪುಟ ಸಂಖ್ಯೆ-೨೦೮-೨೧೨, ಎಪ್ರೇಲ-೧೮೭೬
೭೪. ಶಾಲಾ ಪತ್ರಕ ಪುಸ್ತಕ-೧೨ ಸಂಚಿಕೆ-೧೨ ಪುಟ ಸಂಖ್ಯೆ ೫, ದಶಂಬರ-೧೮೭೭
೭೫. ಶಾಲಾ ಪತ್ರಕ ಪುಸ್ತಕ-೧೬ ಸಂಚಿಕೆ-೩ ಪುಟ ಸಂಖ್ಯೆ ೫೩-೫೪, ಮಾರ್ಚ-೧೮೮೧
೭೬. ಶಾಲಾ ಪತ್ರಕ ಪುಸ್ತಕ-೨೪ ಸಂಚಿಕೆ-೨ ಪುಟ ಸಂಖ್ಯೆ ೪೮, ಫೆಬ್ರುವಾರಿ-೧೮೮೯
೭೭. ಶಾಲಾ ಪತ್ರಕ ಪುಸ್ತಕ-೩೮, ಸಂಚಿಕೆ-೫ ಪುಟ ಸಂಖ್ಯೆ ೯೪-೧೧೦, ಮೇ-೧೯೦೨
೭೮. ಶಾಲಾ ಪತ್ರಕ ಪುಸ್ತಕ-೪೭, ಸಂಚಿಕೆ-೫ ಪುಟ ಸಂಖ್ಯೆ ೧-೫, ಮೇ-೧೯೧೧
೭೯. ಶಾಲಾ ಪತ್ರಕ ಪುಸ್ತಕ-೪೭, ಸಂಚಿಕೆ-೮ ಪುಟ ಸಂಖ್ಯೆ ೧-೭, ಅಗಸ್ಟ-೧೯೧೧
೮೦. ವಸಾಹತುಶಾಹಿ ಶಿಕ್ಷಣ: ಶಿವರಾಮ ಕಾರಂತರ ಪ್ರತಿಕ್ರಿಯೆ ಮತ್ತು ಪ್ರಯೋಗ' ಪಾಗುಂಡಪ್ಪ ತಿಮ್ಮಪ್ಪ- ಪು- ೧೭೯, ೨೦೧೬

ಅಧ್ಯಾಯ : ೪

ಟ್ರೈನಿಂಗ್ ಕಾಲೇಜು ಮತ್ತು ಹೊಸಗನ್ನಡ ಸಾಹಿತ್ಯದ ಅರುಣೋದಯ

೪.೧ ಕನ್ನಡ ಪಠ್ಯ ಮತ್ತು ಪಠ್ಯಪೂರಕ ಸಾಹಿತ್ಯ ರಚನೆ

೪.೨ ಅನುವಾದಗಳು

೪.೩ ಪತ್ರಿಕೆಗಳು

೪.೪ ಸಾಂಸ್ಥಿಕ ಸಮನ್ವಯ

ಅಧ್ಯಾಯ ೪

ಟ್ರೈನಿಂಗ್ ಕಾಲೇಜು ಮತ್ತು ಹೊಸಗನ್ನಡ ಸಾಹಿತ್ಯದ ಅರುಣೋದಯ

ಬೆಳೆದು ನಿಂತ ಗಿಡಮರಬಳ್ಳಿಗಳಲ್ಲಿಯ ಹೂಹಣ್ಣು ನೋಡಿ, ಸವಿದು ಚನ್ನಾಗಿದೆ, ಸುಂದರವಾಗಿದೆ, ಸವಿಯಾಗಿದೆ, ಭವ್ಯವಾಗಿದೆ ಎಂದು ದೃಷ್ಟಿ ಮೇಲೆಯೇ ಇರಿಸಿ ಹೊಗಳುವವರ್‍ಯಾರೂ ದೃಷ್ಟಿಯನ್ನೊಮ್ಮೆ ಭೂತಳಕ್ಕಿಳಿಸಿ ಆ ಗಿಡಮರಬಳ್ಳಿಗಳು ಮೇಲೆ ಅಷ್ಟು ಸಮೃದ್ಧವಾಗಿ ಹೂಹಣ್ಣು ಕೊಡುತ್ತಿರಬೇಕಾದರೆ ಅವು ತಮ್ಮ ಬೇರುಗಳನ್ನು ಹೇಗೆ ಹರಡಿಕೊಂಡಿವೆ ಮತ್ತು ತೇವಾಂಶ ದೊರಕಿಸಿಕೊಂಡಿದ್ದೆಲ್ಲಿಂದ? ಹೇಗೆ? ಎಂಬುದರ ಕುರಿತು ಚಿಂತಿಸುವುದಿಲ್ಲ. ಅದಕ್ಕೆ ನೀರು, ಗೊಬ್ಬರ ಹಾಕಿ ಬೆಳೆಸಿದವರಾರು? ಸದ್ಯಕ್ಕೆ ಕನ್ನಡ ಸಾಹಿತ್ಯ ವಿಷಯದಲ್ಲಿ ನಡೆಯುತ್ತಿರುವುದೂ ಅದೇ ಆಗಿದೆ. ಘನತರವಾದ ಪಿಎಚ್‌ಡಿಗಳನ್ನು ಪಡೆದು, ಸಂಶೋಧಕರೆನಿಸಿಕೊಂಡವರೆಲ್ಲ ಹೀಗೆ ಫಸಲನ್ನು ಪಡೆಯುವ ಕಾಲ ಮತ್ತು ಪರಿಸ್ಥಿತಿಯಲ್ಲಿದ್ದು ಫಲಾನುಭವಿಗಳಾದವರು. ಇಂಥವರು ಎಲ್ಲಿಯವರೆಗೆಂದರೆ ಅಜ್ಜನಿಗೆ ಪ್ಯಾಂಟ್ ಹಾಕಲು ಬರಲ್ಲ, ಅಜ್ಜಿಗೆ ಲಂಗ ಹಾಕಲು ಬರಲ್ಲ ಎಂಬಲ್ಲಿವರೆಗೂ ವಿಮರ್ಶೆ ಮಾಡಿದವರು. ಆದರೆ ಪರತಂತ್ರದಲ್ಲಿದ್ದ ಅಂದಿನ ಪರಿಸ್ಥಿತಿ, ವೈರುಧ್ಯ, ಪೋಷಣೆ, ಸಹಕಾರ, ಲಭ್ಯತೆ, ಆರ್ಥಿಕತೆ ಮತ್ತು ಒಪ್ಪಿಕೊಳ್ಳುವ ಮನೋಭಾವ ಆ ಕಾಲದಲ್ಲಿ ಎಷ್ಟೊಂದು ಅಪೋಷಕವಾಗಿತ್ತು ಎಂಬುದರ ಕುರಿತು ಯಾರೂ ವಿಚಾರಿಸಲೇ ಇಲ್ಲ. ಆರ್. ನರಸಿಂಹಾಚಾರ್ಯರ 'ಕವಿಚರಿತೆ'ಯಲ್ಲಿ ಕೂಡ ಈ ಸಾಹಿತ್ಯ ಬೇರುಗಳ ಬದುಕು-ಬರಹಗಳು ಮುಂಚುಣಿಗೆ ಬರಲೇ ಇಲ್ಲ. "....ಸ್ವಲ್ಪ ಕಾಲಕ್ಕೆ ಹಿಂದೆ ಗತಿಸಿದವರ ಚರಿತ್ರೆಯನ್ನು ಲಂಬಿಸಿ ಬರೆಯುವುದು ನಮ್ಮ ಉದ್ದೇಶವಲ್ಲವಾದುದರಿಂದ ಅಂಥವರ ವಿಷಯವನ್ನು ಗ್ರಂಥಗಳನ್ನೂ ನಮಗೆ ತಿಳಿದ ಮಟ್ಟಿಗೆ ಬಹಳ ಸಂಕ್ಷೇಪವಾಗಿ ತಿಳಿಸುತ್ತೇವೆ." ಎಂದು ಹೇಳಿ ಕೇವಲ ಎರಡು ಮೂರು ಸಾಲಿನಲ್ಲಿ ಈ ಹತ್ತೊಂಭತ್ತನೆಯ ಶತಮಾನದ ಬರಗಾರರ/ ಲೇಖಕರ ಪರಿಚಯ ಕೊನೆಕಂಡಿದೆ. ಮೊದಲೇ ಬಡತನ, ಅವಹೇಳನ, ಅನುತ್ತೇಜನಕಾರಿ ಪ್ರತಿಕ್ರಿಯೆ, ಆರ್ಥಿಕ ಸಂಕಷ್ಟದ ನಡುವೆ ಇದ್ದುಕೊಂಡು ತನ್ನತನ, ತನ್ನನಾಡು ಮತ್ತು ನುಡಿಗಾಗಿ ಹೋರಾಡುತ್ತ, ಪಾರತಂತ್ರ್ಯದ ಹಿಡಿತದಲ್ಲಿ ಮತ್ತು ಕೃಪೆಯಲ್ಲಿ ವೈಯಕ್ತಿಕ ಜೀವನವನ್ನೂ ಲಕ್ಷಿಸದೆ ಬದುಕಿದ ಇವರನ್ನು ಇನ್ಯಾರು ಗುರುತು, ಪರಿಚಯ ಮಾಡಬೇಕು? ಅತ್ತ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಪುಣೆ, ಮುಂಬಯಿಗಳಿಗೆ ಹೋಗಿ, ಆಂಗ್ಲ ವಿದ್ಯೆ ಕಲಿತು, ಮರಾಠಿಯ ಪ್ರಭಾವಕ್ಕೊಳಗಾಗಿ, ಆರೇ ಅರಿಯದವರೆಂಬುದು ಅಪಮಾನ ಎಂಬ ಕಾರಣಕ್ಕಾಗಿ, 'ಅರಸನನ್ನು ನೋಡಿ ಪುರುಷನನ್ನು ಮರೆತ' ಹಾಗೆ ಅಲ್ಲಿಯದೇ ಹುಡುಗಿಯನ್ನು ಮದುವೆ ಮಾಡಿಕೊಂಡು ಬರುತ್ತಿದ್ದರು. ಓದು, ನಾಟಕ, ಸಂಗೀತ ಎಲ್ಲವೂ ಮರಾಠಿಮಯ. ಇತ್ತ ಶ್ರೀಮಂತಿಕೆಯ ಪ್ರಭಾವದಿಂದ ಆಂಗ್ಲರ ಮತ್ತು ಆಂಗ್ಲ ಭಾಷೆಯ

ಕೃಪಾಕಟಾಕ್ಷಕ್ಕೆ ಪಾತ್ರರಾಗುತ್ತ, ಅವರ ಆಡಳಿತದಲ್ಲಿ ದೊಡ್ಡದೊಡ್ಡ ನೌಕರಿ ಗಿಟ್ಟಿಸಿಕೊಂಡು ತಮ್ಮದೇ ರಕ್ಷಾಗೂಡಿನೊಳಗೆ ಆರಾಮಾಗಿದ್ದು ಬಿಡುತ್ತಿದ್ದರು. ಇಂಥವರಿಗೆ ಕನ್ನಡ ಭಾಷೆಯ ವಿಚಾರವೆಲ್ಲಿಂದ ಬರಬೇಕು? "ಹಳ್ಳಿಯ ಜನ ಮಗನ ಹೆಗಲಿಗೆ ಮನೆತನದ ನೊಗ ಹೇರಿ ತಾವು ಮನರಂಜನೆಯಲ್ಲಿ ಕಾಲ ಕಳೆಯುತ್ತಿದ್ದರೆ, ಪಟ್ಟಣಗಳು ಶೃಂಗಾರಕ್ಕೆ ಅರಸು ಪಟ್ಟವನ್ನೂ, ಭೀಭತ್ಸಕ್ಕೆ ಪ್ರಧಾನಿ ಪಟ್ಟವನ್ನೂ ಕಟ್ಟಿದ್ದವು. ಕಾಲವೇ ರೌದ್ರಾಕಾರವನ್ನು ತಳೆದಿದ್ದರಿಂದ ರಸಗಳು ಕಲಿಗಳನ್ನೂ, ಕಾವ್ಯಗಳನ್ನೂ ಬಿಟ್ಟು ಭೀತಿಯಿಂದ ದಿಕ್ಕಾಪಾಲಾಗಿ ಸಿಕ್ಕಲ್ಲಿ ಸೇರಿಕೊಂಡಿದ್ದವು... ವೀರರಸವು ಗತಪ್ರಾಣವಾಗಿ ಬಿದ್ದುಕೊಂಡಿತ್ತು"[೧] "ಎಷ್ಟೋ ದಿನಗಳಿಂದ ರಾಜಾಶ್ರಯವನ್ನು ಕಳೆದುಕೊಂಡು ತೊಳಲುತ್ತಿರುವ ಕರ್ನಾಟಕವು ಇಂಗ್ಲಿಷರ ಆಳಿಕೆಯಲ್ಲಿ ಭಿನ್ನಭಿನ್ನವಾಗಿದ್ದುದು ಮೊದಲನೆಯ ಕಾರಣವು; ಪೇಶ್ವೆಯರ ಆಳಿಕೆ ತೀರಿದ ಮೇಲೆ ಆರೇ ಅಮಲದಾರರ ಆಳಿಕೆಯು ಎರಡನೆಯ ಕಾರಣವು; ರಾಜಾಶ್ರಯ ದೊರೆತ ಮೈಸೂರ ಕನ್ನಡವು ಯಾವುದೋ ಕಾರಣದಿಂದ ನಮ್ಮ ಕೂಡ ಬಳಕೆ ಮಾಡದೇ ಇದ್ದದ್ದು ಮೂರನೆಯ ಕಾರಣ; ಕಾಲ ಪ್ರತಿಕೂಲತೆ ನಾಲ್ಕನೆಯ ಕಾರಣ; ಮೊದಲ ತರಗತಿಯ ಕರ್ತೃತ್ವಶಾಲಿಗಳು ಹುಟ್ಟದಿದ್ದದ್ದು ಐದನೆಯ ಕಾರಣ"[೨] ಇದರೊಂದಿಗೆ ಇನ್ನೂ ಒಂದು ಕಾರಣವನ್ನು ಸೇರಿಸಬೇಕಾದುದು ತೀರ ಅವಶ್ಯ; ಅದೇನೆಂದರೆ ಕರ್ತೃತ್ವಶಾಲಿಗಳಿದ್ದರೂ ಸರಕಾರಿ ನೌಕರಿಯಲ್ಲಿದ್ದು, ಕೇವಲ ಕನ್ನಡದ ಸೇವೆ ಮಾಡುತ್ತಿದ್ದುದರಿಂದ ಅವರಿಗೆ ಮತ್ತು ಅವರ ಸಾಹಿತ್ಯಕ್ಕೆ ಆದರ, ಮೌಲ್ಯ ಇಲ್ಲದಂತಾದುದು. ಯಾವೂದೇ ರೀತಿಯ ಆಧಾರ, ಸಹಕಾರ ಮತ್ತು ಪ್ರೋತ್ಸಾಹ ಇಲ್ಲದಿದ್ದರೂ ತಮ್ಮ ಸರಕಾರಿ ಸೇವೆಯೊಂದಿಗೆ ಕನ್ನಡದ ಸೇವೆಯನ್ನೂ ಮಾಡಿ, 'ಆಧುನಿಕ ಕನ್ನಡ ಸಾಹಿತ್ಯದ ಆದ್ಯರು' ಎನಿಸಿಕೊಳ್ಳಲು ಯೋಗ್ಯತೆ ಇರುವ ದಿಗ್ಗಜರೆಲ್ಲ ಕಲಿತು, ಕಲಿಸಿ, ಕನ್ನಡ ಉಳಿಸುವ ಬೆಳೆಸುವ ಕೈಂಕರ್ಯವನ್ನು ಮೂಲದಿಂದಲೇ ಆರಂಭಿಸಿದ್ದು ಈ ಟ್ರೇನಿಂಗ ಕಾಲೇಜಿನ ಆಶ್ರಯದಲ್ಲಿಯೇ. ಹಾಗಾಗಿಯೇ ಸಾಹಿತ್ಯದ ತಾಯಿ ಬೇರು ಊರಿರುವುದು ಈ ತರಬೇತಿ ಸಂಸ್ಥೆಯ ಹೃದಯದಲ್ಲಿಯೇ ಎಂದರೆ ಅತಿಶಯೋಕ್ತಿ ಆಗಲಾರದು.

೪.೧. ಕನ್ನಡ ಪಠ್ಯಸಾಹಿತ್ಯ ಮತ್ತು ಪಠ್ಯಪೂರಕ ಸಾಹಿತ್ಯ ರಚನೆ:

'ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು' ಹೇಳುವಂತೆ "ಕಳೆದ ತಿಂಗಳ ಆರಂಭದಲ್ಲಿ ಮುಂಬೈ ವಿದ್ಯಾಪೀಠದ ಹೆಚ್ಚಿನ ಪರೀಕ್ಷೆಗಳಲ್ಲಿ ನಮ್ಮ ದೇಶ ಭಾಷೆಗಳನ್ನು ಒಂದು ವಿಷಯವಾಗಿ ಸೇರಿಸಬೇಕೆಂಬ ಮಾತಿನ ಚರ್ಚೆಯು ನಡೆಯಿತು. ಮೊದಲಿಗೆ ಈ ಭಾಷೆಗಳು ಹೆಚ್ಚಿನ ಪರೀಕ್ಷೆಗಳ ವಿಷಯಗಳಾಗಿದ್ದವು. ಆದರೆ ಇವು ನಿಸ್ಸಾರವಾದಂಥವೂ, ತಕ್ಕಷ್ಟು ಗ್ರಂಥ ಸಂಗ್ರಹವು ಇಲ್ಲದಂಥವೂ ಆದ್ದರಿಂದ ಇವುಗಳನ್ನು ತೆಗೆದು ಪಾರ್ಸಿ, ಸಂಸ್ಕೃತ, ಲ್ಯಾಟಿನ್ ಮುಂತಾದ ಪ್ರಾಚೀನ ಭಾಷೆಗಳನ್ನಷ್ಟೇ ಇಟ್ಟರು. ಈ ಮಾತಿಗೆ ಸುಮಾರು ೨೫ ವರ್ಷಗಳಾದವು. ಈ ಅವಧಿಯಲ್ಲಿ ವಿದ್ಯಾಪೀಠದ ಬಹು

ಮಾನದ ಪದವಿಗಳನ್ನು ಪಡೆದಂಥ ಜನರಿಂದ ದೇಶದ ಉನ್ನತಿಗೆ ಆಗತಕ್ಕಷ್ಟು ಸಹಾಯವಾಗಲಿಲ್ಲ. ಅವರ ವ್ಯವಸಾಯಗಳೆಲ್ಲ ಇಂಗ್ಲಿಷ ಭಾಷೆಯ ಮುಖಾಂತರ ನಡೆದದ್ದರಿಂದ ಅವರಿಗೆ ಜನ್ಮ ಭಾಷೆಯ ಜ್ಞಾನವು ಕಡಿಮೆಯಾಗಿ ಉನ್ನತ ವಿಚಾರಗಳನ್ನು ತಮ್ಮ ಜನರಿಗೆ ತಿಳಿಸಿ ಅವರನ್ನು ಸುಧಾರಿಸುವ ಸಾಮರ್ಥ್ಯವು ಅವರಲ್ಲಿ ಹುಟ್ಟಲಿಲ್ಲ. ಇಂಗ್ಲಿಷ ಕಲಿತ, ಕಲಿಯದ ಜನರಿಗೂ ಹುಟ್ಟಬೇಕಾದ ಐಕ್ಯಭಾವವು ಹುಟ್ಟದೆ ಇವೆರಡು ವರ್ಗಗಳು ಸ್ವತಂತ್ರವಾದವು..."[೩] ಈ ದಿಶೆಯತ್ತ ಎಲ್‌ಫಿನಸ್ಟನ್ ಹಾಯಸ್ಕೂಲಿನ ಪ್ರಿನ್ಸಿಪಾಲರೂ, ಮುಂಬೈ ವಿದ್ಯಾಪೀಠದ ಫೇಲೊಗಳು ಆದ ರಾ. ಮೋಡಕ, ನೇಟಿವ್ಹ ಪ್ರೆಸ್‌ನ ರೀಪೋರ್ಟರ ಆದ ರಾ. ಸಾಠೆ ಮತ್ತು ರಾ. ರಾನಡೆಯವರು ಬಹುತರವಾಗಿ ಪ್ರಯತ್ನಿಸಿದ್ದಾರೆ. ೧೮೯೫ರಲ್ಲಿ ಕೂಡ ಪ್ರಾದೇಶಿಕ ಭಾಷೆಯನ್ನು ಉನ್ನತ ಶಿಕ್ಷಣದಲ್ಲಿ ಸೇರಿಸುವ ಕುರಿತು ಚರ್ಚೆ ವಾದವಿವಾದಗಳು ನಡೆದಿದ್ದು ಒಂದು ನಿರ್ಧಾರಕ್ಕೆ ಬರದಂಥ ಸ್ಥಿತಿ ಒದಗಿ ಬಂದಿರುವುದು ಕಂಡುಬರುತ್ತದೆ. ಇಂಥ ಎಲ್ಲ ಬೆಳವಣಿಗೆಗಳನ್ನು ಗಣಿಸಿದರೆ, ಇಂಥ ಪ್ರತಿಕೂಲಾವಸ್ಥೆಯಲ್ಲಿಯೂ ಸಾಹಿತ್ಯ ಕೃಷಿ ನಡೆದದ್ದು ಹೇಗೆ ಎಂಬುದನ್ನೊಮ್ಮೆ ಅವಲೋಕಿಸ ಬೇಕಾದುದು ಅವಶ್ಯವಾಗುತ್ತದೆ.

"ಸಿದ್ಧವಾದ ಪಠ್ಯಪುಸ್ತಕಗಳು ಸರಕಾರೀ ಡಿಪೋಗಳಿಂದ ಮಾರಟವಾಗುತ್ತಿದ್ದವು. ೧೮೬೪–೬೫ರಲ್ಲಿ ಇವುಗಳ ಮಾರಾಟ ಸಂಖ್ಯೆಯು ೫೨೦೦ ಪ್ರತಿಗಳದ್ದಾದರೆ, ಎರಡೇ ವರ್ಷಗಳ ಅಂತರದಲ್ಲಿ ಎಂದರೆ ೧೮೬೭ರಲ್ಲಿ ಸುಮಾರು ೨೭ಸಾವಿರ ಕನ್ನಡ ಪಠ್ಯಗಳು ವಿಕ್ರಯವಾದವು ಎಂಬುದರಿಂದ ಶಿಕ್ಷಣ ಪ್ರಸಾರ ಅದೆಷ್ಟು ಭರದಿಂದ ಸಾಗಿದ್ದಿತೆಂಬುದನ್ನು ಕಂಡುಕೊಳ್ಳಬಹುದು. ಪಠ್ಯಗಳಾದ ಕಾರಣದಿಂದ ಅನೇಕ ಹಳೆಯ ಕಾವ್ಯಗಳು, ಕಾವ್ಯಭಾಗಗಳು ಮತ್ತು ವ್ಯಾಕರಣ ಗ್ರಂಥಗಳು ಇವುಗಳ ಅಭ್ಯಾಸ ಆಗ ನಡೆಯಿತು. ಮುಲ್ಕಿ ಪರೀಕ್ಷೆಯ ಮಟ್ಟದಲ್ಲಿದ್ದವರಿಗಾಗಿ ರಾಜಶೇಖರ ವಿಳಾಸ, ಜೈಮಿನಿಭಾರತಗಳ ಜೊತೆ ಶಬ್ದಮಣಿದರ್ಪಣ, ಶಬ್ದಸಿದ್ಧಿ ನಿಬಂಧ (Treaties on Etimology) ಇವನ್ನೂ–ಪಠ್ಯವಾಗಿ ನಿಯಮಿಸಿದ್ದನ್ನು (ಉದಾ.೧೮೮೨ರಲ್ಲಿ) ಗಮನಿಸಿದರೆ ಆಗಿನ ಕಾಲಕ್ಕೆ ಕನ್ನಡದ ಆಳವಾದ ಅಭ್ಯಾಸ ನಡೆಯುತ್ತಿತ್ತೆಂದು ಹೇಳಬೇಕಾಗುತ್ತದೆ."[೪]

ಮುಲ್ಕಿ ಎಂದರೆ ಆಗೀನ ಏಳನೆಯ ತರಗತಿ ಎಂದು ಹೇಳುತ್ತಿದ್ದುದನ್ನು ನಾವು ಕೇಳಿದ್ದೇವೆ. ಅಬ್ಬಬ್ಬಾ ಎಂದರೆ ಈಗೀನ ನಿಯಮದ ಪ್ರಕಾರ ೧೩–೧೪ ವರ್ಷ! ಈಗ ಈ ವಯೋಮಾನದವರಿಗೆ ಗದ್ಯವನ್ನೋದುವುದೇ ಭಾರಿ ಸಾಧನೆಯಾಗಿರುವಾಗ, ಅಂದು ರಾಜಶೇಖರ ವಿಳಾಸ, ಜೈಮಿನಿಭಾರತ, ಶಬ್ದಮಣಿದರ್ಪಣ, ಶಬ್ದಸಿದ್ಧಿ, ನಿಬಂಧ ಇವುಗಳನ್ನು ಓದಿದ್ದು ಮಹತ್ತರ ಸಾಧನೆಯೇ ಆಗಿದೆ; ಚಿಕ್ಕ ವಯಸ್ಸಿನ ಮಹಾನ್ ಗ್ರಹಿಕೆ ಕನ್ನಡದ ಅಂತರಾವಲೋಕನಕ್ಕೆ ನಾಂದಿಯಾಗಿದೆ. ಹದಿನೈದನೆಯ ಶತಮಾನದಿಂದ ಹತ್ತೊಂಭತ್ತನೆಯ ಶತಮಾನದ ಕೊನೆಯವರೆಗೆ

(೧೪೦೦-೧೯೦೧) ಅಂದರೆ ಆಧುನಿಕ ಕಾಲದವರೆಗೆ ಕುಮಾರವ್ಯಾಸ ಯುಗ ಎಂಬ ಮಾನಕವನ್ನು (ರಂ.ಶ್ರೀ.ಮುಗಳಿಯವರ ವಿಭಾಗಕ್ರಮದಂತೆ) ನಾವು ಒಪ್ಪುವುದಾದರೆ ನನ್ನ ಈ ಅಧ್ಯಯನದ ಪೂರ್ವಾರ್ಧ ಕಾಲಾವಧಿ ೧೮೫೬ರಿಂದ ೧೯೫೬, ಸಾಹಿತ್ಯ ವಿಭಾಗಕ್ರಮದ ಅಂತಿಮ ಕಾಲಘಟ್ಟ ಸೇರಿಕೊಳ್ಳುತ್ತದೆ. ಕುಮಾರವ್ಯಾಸ ಯುಗದ ಅಂತಿಮ ಘಟ್ಟದಲ್ಲಿ 'ಆಧುನಿಕ ಕಾಲ'ವೂ ಹರವಿಕೊಂಡಿರುವುದರಿಂದ ಮತ್ತು ಈ ಘಟ್ಟವನ್ನು ಸಾಹಿತ್ಯದ ಅರುಣೋದಯ ಎಂದಿರುವುದರಿಂದ, ಈ ಅರುಣೋದಯ ಕಾಲದಲ್ಲಿಯೇ ಆರಂಭವಾಗುವ ನನ್ನ ಅಧ್ಯಯನದ ವ್ಯಾಪ್ತಿಯ ಪೂರ್ವಾರ್ಧ ಸಾಹಿತ್ಯ ರಚನೆಯ ದೃಷ್ಟಿಕೋನದಿಂದ ಅರುಣೋದಯ ಕಾಲವೇ ಆಗುತ್ತದೆ. ಮುಂಗೋಳಿಯ ಕರೆಯೊಡನೆ ಕಣ್ಬಿಡುವ ಈ ಸಾಹಿತ್ಯದ ಕಾಲಘಟ್ಟದಲ್ಲಿ ಉತ್ತರ (ಕಿತ್ತೂರು)ಕರ್ನಾಟಕದ ಗೆಯ್ಮೆ ಬಹುಪಾಲು ವ್ಯಾಪಿಸಿಕೊಂಡಿದೆ ಎಂಬುದು ಇಲ್ಲಿ ಪ್ರಸ್ತಾಪಿಸಬೇಕಾದ ವಿಷಯವಾಗಿದೆ.

'ಹೊಟ್ಟೆಯ ಹೊರೆಗಾಗಿ ವಿದ್ಯಾಕ್ಷೇತ್ರದಲ್ಲಿರುವವರೇ ಹೆಚ್ಚಾಗಿ ಕನ್ನಡದಲ್ಲಿ ಕೃತಿರಚನೆ ಮಾಡಿದರು. ಇದರಿಂದ ಕನ್ನಡಕ್ಕೆ ಆಗಬೇಕಾದಷ್ಟು ಲಾಭ ಆಗಲಿಲ್ಲ; ಸಾಹಿತ್ಯದ ಸತ್ವ-ವೈವಿಧ್ಯಗಳಿಗೂ ಅಷ್ಟು ಲಾಭ ವಾಗಲಿಲ್ಲ. ಕೇವಲ ಶಿಕ್ಷಕ ವರ್ಗ ಕೃತಿರಚನೆ ಮಾಡಿದರೆ, ಸ್ವಾಭಾವಿಕವಾಗಿಯೇ ಕೃತಿಯಲ್ಲಿಯ ಅನುಭವ ಅವರ ಅನುಭವಕ್ಕೆ ಮಾತ್ರ ಸೀಮಿತವಾಗುತ್ತದೆ.'[೫] ಎನ್ನುವಲ್ಲಿ ಹಾಗೂ 'ವಕೀಲ, ವ್ಯಾಪಾರಸ್ಥರು, ನೌಕರಿಯಲ್ಲಿರುವವರೂ ವ್ಯವಹಾರಿಕತೆ ಯೊಂದಿಗೆ ಅಧ್ಯಯನ ಮಾಡದೆ ಹಾಗೂಪಂಡಿತರು ಉಪಜೀವನದ ಸಾಧನವಾಗಿ ಗ್ರಂಥ ಬರೆಯದೇ ಅಂತರಾಳ ಹೆಕ್ಕಿತೆಗೆದು, ಅಭ್ಯಸಿಸಿ ಬರೆದರೆ ಕನ್ನಡ ಭಾಷೆಯ ಒನವು, ಸೊಬಗೂ, ಬೆಡಗೂ ಅಂದ ಚಂದಗಳು ಅಳತೆ ಮೀರಿ ಹೆಚ್ಚುವವು'[೬] ಎಂಬ ಅಭಿಪ್ರಾಯದಲ್ಲಿಯೂ ನಿರಪೇಕ್ಷೆಯಿಂದ ಸಾಹಿತ್ಯ ರಚನೆಯಾಗಬೇಕೆಂಬ ಅಭಿಪ್ರಾಯಗಳು ಧ್ವನಿಸುತ್ತವೆ ಆದರೆ ವಸ್ತುಸ್ಥಿತಿ ಹಾಗಿರಲಿಲ್ಲ. ಕನ್ನಡಕ್ಕಾಗಿ ಜೋಳಿಗೆ ಹಿಡಿಯುವ ಆ ಕಾಲದಲ್ಲಿ ನಿರಪೇಕ್ಷೆಯ ಮಾತೆಲ್ಲಿಯದು? ಇಲ್ಯಾರೂ ರಾಜಸ್ಥಾನದಲ್ಲಿದ್ದವರಲ್ಲ. ಉಪಜೀವನಕ್ಕೆ ಎಲ್ಲವೂ ಅಗತ್ಯವೇ.


ಸಾಹಿತ್ಯ ಕ್ಷೇತ್ರಕ್ಕೆ ಉತ್ತರ (ಕಿತ್ತೂರು) ಕರ್ನಾಟಕದ ಕೊಡುಗೆ ಎಂದರೆ ಅದು ಅರುಣೋದಯ ಕಾಲದ ಕನ್ನಡ ಸಾಹಿತ್ಯಕ್ಕೆ ಟ್ರೇನಿಂಗ ಕಾಲೇಜಿನ ಕೊಡುಗೆಯೇ ಆಗುತ್ತದೆ. ಆ ಕಾಲಘಟ್ಟದಲ್ಲಿ ಸಾಹಿತ್ಯದ ಔನತ್ತ್ಯಕ್ಕೇರಿದ ವಿದ್ವಜ್ಜನರೆಲ್ಲ ಟ್ರೇನಿಂಗ ಕಾಲೇಜಿಗೆ ಬಂದು ಓದಿ ಹೋದವರು, ಶಿಕ್ಷಣ ಇಲಾಖೆಯಲ್ಲೇ ಶಿಕ್ಷಕ ಹಾಗೂ ಅಧಿಕಾರಿಗಳಾಗಿ ಮತ್ತು ಇತರ ಹುದ್ದೆಗಳಲ್ಲಿ ಸೇವೆಸಲ್ಲಿಸಿದವರು. ಈ ಹಿನ್ನೆಲೆಯಲ್ಲಿ ಅಂದು ಈ ಟ್ರೇನಿಂಗ ಕಾಲೇಜ್ ಆಡಿದ ಪಾತ್ರ ಅಸದೃಶ್ಯವಾದುದು. ದಾಖಲೆಗಳು ಮತ್ತು ರಚಿಸಿದ ಕೃತಿಗಳ ಬಹುಪಾಲು ನಿಖರವಾಗಿ ಲಭಿಸದಿದ್ದರೂ ಅವು ನಿರ್ಮಾಣಗೊಂಡಿರುವುದಂತೂ ಸತ್ಯ. ಹಾಗಾಗಿ ಲಭ್ಯ ದಾಖಲೆಗಳ ಆಧಾರದ

ಮೇಲಿಂದ **ಟ್ರೇನಿಂಗ ಕಾಲೇಜಿನ ಕೊಡುಗೆ**ಯನ್ನು, ಅದು ನಿರ್ವಹಿಸಿದ ಪಾತ್ರವನ್ನು ನಿರ್ಧರಿಸಲಾಗಿದೆ. ೧೮೫೭ರಲ್ಲಿ ಈ ಕಾಲೇಜು ಆರಂಭವಾದ ಹೊತ್ತಲ್ಲಿ ಮುಂಗೋಳಿಯ ಕರೆಯೊಂದನ್ನು ಬಿಟ್ಟರೆ, ಸಾಹಿತ್ಯಿಕ ಬೆಳವಣಿಗೆ ಮಂದಗತಿಯಲ್ಲಿ ಸಾಗಿದ ಕೂರ್ಮ. ಅಂದು ಸಾಹಿತ್ಯ ಎನ್ನುವುದು ಜನಜೀವನಾಡಿಯ, ಭಾವನಾವಲಯದ ಅವಶ್ಯಕತೆ ಎಂಬ ಅರಿವು ಮೂಡದಿದ್ದ ಕಾಲ. ಸಮಾಜದ ಏಳ್ಗೆಗಾಗಿ, ಜಾಗೃತಿಗಾಗಿ ಶಿಕ್ಷಣ ಪಡೆಯಬೇಕೆಂಬ ಆಕಾಂಕ್ಷೆಯ ಸಾಕಾರಕ್ಕಾಗಿ, ಈ ಶಿಕ್ಷಣ ಪೂರೈಕೆಯ ಹೊಣೆಯ ಅಗತ್ಯವಾಗಿ, ಮತ್ತು ಬ್ರಿಟಿಷರ ಅನುಕರಣದಿಂದ ಪಠ್ಯಕ್ರಮದ ರೂಪದಲ್ಲಿ ಒಂದೊಂದೆ ಕೃತಿಗಳು ರಚನೆಗೊಳ್ಳತೊಡಗಿದ್ದನ್ನು ನಾವು ಕಾಣುತ್ತೇವೆ. (ಸಾಹಿತ್ಯ, ಅದರ ಕಾಲಘಟ್ಟ... ಅವೆಲ್ಲ ನಿರ್ಧಾರಗೊಂಡಿದ್ದು ನಂತರ) ಅಂತೂ ಸಮಾಜಗತಿಯ ಸಂಗತಿಯಾಗಿ, ಭಾಗವಾಗಿ, ತನ್ನಪಾಡಿಗೆ ತಾನು ಸಾಹಿತ್ಯ ಮೆಲ್ಲಗೆ ರಚನೆಯಾಗುತ್ತ ಸಾಗಿತ್ತು. ಇಲ್ಲಿ ಹಲವಾರು ಕವಲುಗಳು ತಿರುಚಿಕೊಂಡು ಕನ್ನಡ ಸಾಹಿತ್ಯವಾದ ರೀತಿ ಬಹು ಆಶ್ಚರ್ಯಕರ, ರೋಚಕ. **ಒಂದು** ಇಂಗ್ಲಿಷರು ಭೂಆಳ್ವಿಕೆಯ ಕಾರಣಕ್ಕಾಗಿ ಸ್ಥಳಿಯ ಜನರ ಭಾವನಾತ್ಮಕ ಮತ್ತು ಭೌದ್ಧಿಕ ವಲಯ ಪರಿಚಯಿಸಿಕೊಂಡು, ಅಭ್ಯಸಿಸಿ, ನೇರವಾಗಿ ಜನಜೀವನ ಪ್ರವೇಶಿಸುವುದಕ್ಕಾಗಿ ನಡೆಸಿದ (ಈಗಾಗಲೇ ರಚನೆಯಾದ) ಸಾಹಿತ್ಯದ ಹುಡುಕಾಟ, ಅಧ್ಯಯನ, ಅನುವಾದ ಮತ್ತು ಹೊಸ ರಚನೆ; **ಇನ್ನೊಂದು** ಈ ಬ್ರಿಟಿಷ ಅಧ್ಯಯನಕಾರರೊಂದಿಗೆ ಸ್ಥಳಿಯರು (ಶಿಕ್ಷಕರು ಮತ್ತು ಶಿಕ್ಷಣ ಇಲಾಖೆಯ ಹಾಗೂ ಇತರ ಕೆಲವು ಅಧಿಕಾರಿಗಳು)ಶಿಕ್ಷಣದ ಮತ್ತು ಜಾಗೃತ ನಾಗರಿಕ ಸಮಾಜದ ಅಗತ್ಯ ಬೇಡಿಕೆಯನ್ನು ಪೂರೈಸುವುದಕ್ಕೋಸ್ಕರ ಕರ್ನಾಟಕದ ಬ್ರಿಟಿಷ ಸಾಹಿತಿಗಳ/ಸಾಹಿತ್ಯದ ಪ್ರಭಾವ/ಪರಿಣಾಮಗಳಿಗೆ ಸರಿಸಮನಾಗಿ, ಸಂವಾದಿಯಾಗಿ ಅನುವಾದ, ಭಾಷಾಂತರ, ಸ್ವತಂತ್ರ ರಚನೆ, ಸಂಶೋಧನೆ, ಸಂಪಾದನೆ ಮಾಡಿದ ಸಾಹಿತ್ಯ ರಚನೆ. ಹೀಗೆ ಎರಡು ರೀತಿಯಲ್ಲಿ ರಚನೆಗೊಂಡ ಸಾಹಿತ್ಯ ಈ ಅರುಣೋದಯ ಕಾಲದಲ್ಲಿ ಕಂಡು ಬರುತ್ತದೆ. ಕರ್ನಾಟಕ ಕವಿಚರಿತೆಕಾರರು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೆಯ ಶತಮಾನದ ಪೂರ್ವಾರ್ಧವನ್ನು ಅಜ್ಞಾತ ಕಾಲಖಂಡವೆಂದೂ, ಅನುಕರಣ ಯುಗವೆಂದೂ ಕರೆದಿರುವಂತೆ ಇಲ್ಲಿ ಅನುಕರಣೆಯೂ ಹೆಚ್ಚಾಗಿಯೇ ಇದೆ.


ಈ ರೀತಿಯ ಸಾಹಿತ್ಯದಲ್ಲಿ ಸ್ವತಂತ್ರವಾಗಿ ಬೆಲೆಯುಳ್ಳ ಕೃತಿಗಳನ್ನು, ಕೆಲವು ಅನುವಾದಗಳನ್ನು ಹಾಗೂ ಕೆಲವು ಸಂಶೋಧನಾ ಲೇಖನಗಳನ್ನು ಬರೆದು ಅರುಣೋದಯದ ಮುಂಗೋಳಿ ಎನಿಸಿಕೊಂಡವ ಮುದ್ದಣ. 'ಈತನ ಮೇಲೆ ಹಳೆಯ ಕಾವ್ಯದ ಸಂಸ್ಕಾರಗಳಾದಂತೆ ಹೊಸ ಪಾಶ್ಚಾತ್ಯ ಪದ್ಧತಿಯ ಸಾಹಿತ್ಯದ ಸಂಸ್ಕಾರಗಳೂ ಆದುವು.... ಹಳೆ ತಂತ್ರ ಹೊಸ ಮಂತ್ರ ಎರಡೂ ಅವನನ್ನು ಆಕರ್ಷಿಸಿದ್ದವು'[2] ಹೀಗೆ ಕಿಂಚಿತ್ತಾದರೂ ಪಾಶ್ಚಾತ್ಯ ಪದ್ಧತಿಯ ಪ್ರಭಾವಕ್ಕೊಳಗಾದ ಮುದ್ದಣ ಅರುಣೋದಯ ಕಾಲದ ಸಾಹಿತ್ಯದ ಸಾರಥ್ಯ ವಹಿಸಿರುವಾಗ ನಂತರದವರ ಮೇಲೆ ಈ ಪ್ರಭಾವ ಆಗದೇ ಇದ್ದೀತೆನ್ನಲಾದೀತೆ?

೧೮೫೬ರನಂತರ ತರಬೇತಿ ಪಡೆದ ಶಿಕ್ಷಕರು ಶಿಕ್ಷಣದ ಅಗತ್ಯವನ್ನು ಪೂರೈಸಲು ರಚಿಸಿದ ಗ್ರಂಥಗಳು ಸಾಹಿತ್ಯದ ಅಸ್ತಿತ್ವವನ್ನು, ಮೂಲವನ್ನು ಎತ್ತಿ ತೋರುತ್ತಿರುವುದು ನೈಜ ಸಂಗತಿಯೂ, ಪೂರ್ಣ ಸತ್ಯವೂ ಆಗಿದೆ. ಈ ಹಿನ್ನಲೆಯಲ್ಲಿ ಚನ್ನಬಸಪ್ಪನವರ ಅಂಕಗಣಿತ, ಬೀಜಗಣಿತ ಕೃತಿಗಳು ಮತ್ತು 'ನಗದವರನ್ನು ನಗಿಸುವ ಕಥೆ' (ಕಾಮಿಡಿ ಅಫ್ ಎರರ್ಸ- ೧೮೭೧) ಅನುವಾದಗ್ರಂಥ ಪರಿಸ್ಥಿತಿಯ ಅಗತ್ಯಗಳಾಗಿ, ಸ್ವತಂತ್ರವಾಗಿ ಪ್ರಕಟಗೊಂಡಿವೆ. ಇಂಜನೀಯರಿಂಗ ಕಲಿತ ಚನ್ನಬಸಪ್ಪನವರು ಗಣಿತದಲ್ಲಿ ಬಹು ಪ್ರತಿಭಾಶಾಲಿಯಾಗಿದ್ದರು ಎನ್ನುವುದು ಅವರ ಬಾಲ್ಯ ಮತ್ತು ವಿದ್ಯಾರ್ಥಿ ಜೀವನದಲ್ಲಿ ಗಣಿತದಲ್ಲಿ ತೋರಿದ ಅಸಾಧಾರಣ ಪ್ರತಿಭೆ ಮತ್ತು ಆರಿಸಿಕೊಂಡ ಇಂಜನೀಯರಿಂಗ ಕ್ಷೇತ್ರಗಳೇ ಸಾಬಿತು ಪಡಿಸುತ್ತವೆ. ಅಲ್ಲದೇ ಅಂದು ಗಣಿತದಲ್ಲಿ ಪ್ರತಿಭಾನ್ವಿತರಾದವರಿಗೆ ಸಮಾಜದಲ್ಲಿ ಎಲ್ಲಿಲ್ಲದ ಬೇಡಿಕೆ ಮತ್ತು ಗೌರವ. ಶಾಲೆಗಳಲ್ಲಿ ಕಲಿಸಲು ಗಣಿತ ಪದ್ಧತಿಯ ಪುಸ್ತಕಗಳೂ ಇರಲಿಲ್ಲ. ಈ ಕೊರತೆ ನೀಗಿಸಲು, ಸ್ವತಂತ್ರ ಪ್ರತಿಭೆಯ ಗುರುತ್ವವಾಗಿ ಮತ್ತು ಪರಿಸ್ಥಿತಿಯ ಬೇಡಿಕೆಯಾಗಿ ಈ ಗಣಿತ ಪುಸ್ತಕಗಳನ್ನು ಪ್ರಕಟಪಡಿಸಿದ್ದಾರೆ.

ಕನ್ನಡ ಕವಿತೆಗಳ ಸಂಗ್ರಹವನ್ನು ಮಾತ್ರ ಮೊತ್ತಮೊದಲ ಬಾರಿಗೆ ಗಂಗಾಧರ ಮಡಿವಾಳೇಶ್ವರ ತುರಮರಿಯವರು ೧೮೭೪ರಲ್ಲಿ ಮಾಡಿದ್ದಾರೆ. ಕನ್ನಡ ಮತ್ತು ಇಂಗ್ಲಿಷ ಎರಡೂ ಭಾಷೆಯಲ್ಲಿಯೂ ಇದಕ್ಕೊಳಪುಟಗಳಿವೆ:


ಕವಿತಾಸಂಗ್ರಹವು.

ರಸಭರಿತವಾದ ಭಾಗಗಳನ್ನು


POETICAL SELECTIONS

FROM
CELEBRATED ANCIENT CANARESE
AUTHORS
WITH EXPLANATORY NOTES

BY

GANGADHAR MADIVALESHWAR
TURMARI
Acting Vice-Principal Training
College Belgaum.

BELGAUM.
Printed at the Belgaum Samachar Press
1874

ಅದರ 'ಸೂಚನೆಯೂ'(ಮುನ್ನುಡಿ)ಯಲ್ಲಿ ತುರಮರಿಯವರೇ ಹೇಳುವಂತೆ "ಇದರೊಳಗೆ ೨೦ ಕವಿಗಳಿಂದಾದ ೨೯ ಗ್ರಂಥಗಳೊಳಗಿನ ೬೪ ವಿಷಯಗಳುಂಟು. ಓದುವವರಿಗೆ ಸುಲಭವಾಗಿ ತಿಳಿದು, ತಕ್ಕಫಲವಾಗಬೇಕೆಂಬ ಉದ್ದೇಶದಿಂದ ಭಾರತ, ರಾಮಾಯಣ ಮುಂತಾದ

ಸುಲಭಗ್ರಂಥಗಳಲ್ಲಿರುವ ಕಠಿಣ ಶಬ್ದಗಳಿಗೆ ಪ್ರತಿಪುಟದ ಕೆಳಗೆ ಟೀಪು; ವೃಷಭೇಂದ್ರ ವಿಜಯ, ಶಬರಶಂಕರ ವಿಳಾಸಗಳೊಳಗಿನ ಕಠಿಣ ಪದಗಳಿಗೆ ಅರ್ಥ; ರಾಜಶೇಖರ ವಿಳಾಸದ ಮೂರನೇ ಆಶ್ವಾಸದ ಕೆಲವು ಭಾಗಕ್ಕೆ ವ್ಯಾಖ್ಯಾನ ಬರೆದಿರುತ್ತೇವೆ. ಆರಂಭದಲ್ಲಿ ಪ್ರಸಿದ್ಧ ಕವಿಗಳ ಚರಿತ್ರವನ್ನು ತಿಳಿದ ಮಟ್ಟಿಗೆ ವಿವರಿಸಿದ್ದೇವೆ. ಇಂಥ ಬಗೆಬಗೆಯ ಗ್ರಂಥಗಳನ್ನು ದೊರಕಿಸುವದಕ್ಕೂ, ಅವುಗಳನ್ನು ಓದಿನೋಡಿ ಮೇಲಾದ ವಿಷಯ ಪದ್ಯಗಳನ್ನು ಆರಿಸುಕೊಳ್ಳುವುದಕ್ಕೂ, ಅವುಗಳಿಗೆ ಟೀಪು ವ್ಯಾಖ್ಯಾನಗಳನ್ನು ಬರೆಯುವುದಕ್ಕೂ, ಐದು, ಆರು ವರುಷಗಳು ಹತ್ತಿದವು; ಇಷ್ಟು ಕಷ್ಟಪಟ್ಟು ಸಂಗ್ರಹಮಾಡಿದ್ದನ್ನು ಕೆಲವು ತೊಂದರೆಯ ಮೂಲಕವಾಗಿ ಅಚ್ಚುಹಾಕದೆ ಬಿಟ್ಟಿದ್ದೆವು. ಇದನ್ನರಿದು ರಾ. ಸಾ. ಚನ್ನಬಸಪ್ಪಾ ಅಣ್ಣಾ ಡಿ.ಎ.ಇ. ಜಿಲ್ಲಾ ಧಾರವಾಡ ಇವರು ಮತ್ತು ರಾ. ಸಾ. ವೆಂಕಟರಂಗೋ ಕಟ್ಟೀ ಕಂನಡ ಟ್ರಾನ್ಸಲೇಟರ ಇವರು ಇಂಥ ಪುಸ್ತಕವು ಅವಶ್ಯವಾಗಿ ಇರತಕ್ಕದ್ದೆಂತಲೂ, ಮಾಡಿದ ಕಷ್ಟವು ಕಡೆಗಾಣಬೇಕೆಂತಲೂ, ಇದನ್ನು ಅಚ್ಚು ಹಾಕಲು ಪ್ರೇರಣೆ ಮಾಡಿ ತಮ್ಮ ಪಾಲಿಗೆ ಭೂಷಣವನ್ನು ತಕ್ಕೊಂಡರು; ಆಕಾರಣ ಈ ಉಭಯತರ ಉಪಕಾರವನ್ನು ನಾನು ಅಂತಃಕರಣ ಪೂರ್ವಕವಾಗಿ ನೆನಿಸುತ್ತೇನೆ.....”[೮] ಎಂದಿದ್ದಾರೆ. ಜೊತೆಗೆ ತನ್ನ ಮೇಲಾಧಿಕಾರಿಗಳನ್ನು ಅಣ್ಣಾ ಎಂದು ಸಂಬೋಧಿಸುವ ಮೂಲಕ ಉಪಕಾರ ಸ್ಮರಿಸಿದ್ದಾರೆ. ಇದರಿಂದ ಚನ್ನಬಸಪ್ಪನವರಿಗೂ ಮತ್ತು ವೆಂಕಟರಂಗೋ ಕಟ್ಟಿಯವರಿಗೂ ಕನ್ನಡ ಸಾಹಿತ್ಯದ ತಿರುಳಿನ ಗಾಢ ಅರಿವು ಮತ್ತು ಅದರ ಪ್ರಸಾರ, ಪೋಷಣೆಯ ಜವಾಬ್ದಾರಿ ಎಷ್ಟಿತ್ತೆಂಬುದನ್ನು ಗುರುತಿಸಬಹುದಾಗಿದೆ. ಕವಿತಾಸಂಗ್ರಹದ ಆಳ, ಅಗಲ ಮತ್ತು ಗಾಂಭೀರ್ಯವೂ ಅರ್ಥವಾಗುತ್ತದೆ.

ಈ ರೀತಿ ಐದಾರು ವರ್ಷಗಳ ಸತತ ಪರಿಶ್ರಮದ ಫಲವಾಗಿ, ಕನ್ನಡದ ಕಟ್ಟಾಭಿಮಾನಿ ಮೇಲಾಧಿಕಾರಿಗಳ ಸಹಕಾರ ಮತ್ತು 'ಬೆಳಗಾವಿ ಸಮಾಚಾರ' ಅಚ್ಚುಕೂಟದ ಸಹಾಯ–ಹೀಗೆ ಸಾಂಘಿಕ ಪ್ರಯತ್ನದ ಫಲವಾಗಿ ಈ 'ಕವಿತಾಸಂಗ್ರಹವು' ಮೊಟ್ಟಮೊದಲ 'ಪದ್ಯಗಳ ಸಂಪಾದನಾ ಕೃತಿ'ಯಾಗಿ ಹೊರಹೊಮ್ಮಿದೆ. ಶಾಲಾ ಪತ್ರಿಕೆಯಲ್ಲಿ ಇವರ 'ಶಬ್ದಮಣಿ ದರ್ಪಣ ಟೀಕೆ' (೧೮೬೬–೭೦), ಸ್ವತಂತ್ರ ವ್ಯಾಕರಣ ಗ್ರಂಥ 'ಭಾಷಾ ದರ್ಪಣ'(೧೮೭೬)ವನ್ನು ಬರೆದಿದ್ದಾರೆ. ಕನ್ನಡ ಕವಿತಾ ಪದ್ಧತಿ, ಕೈವಲ್ಯ ಪದ್ಧತಿಯ ಟೀಕೆ, ಬಾಣ ಕಾದಂಬರಿ, ಬಾಲಕರ ಕನ್ನಡ ವಾಚನ ಪಾಠಗಳು, ಕರ್ನಾಟಕ **ಶಬ್ದಮಂಜರಿ** ಮತ್ತು ರಾಜಶೇಖರ ವಿಳಾಸ ಟೀಕೆ ಇವು ತುರಮರಿಯವರ ಕೀರ್ತಿವೆತ್ತ ಕೃತಿಗಳು. ಕರ್ನಾಟಕ **ಶಬ್ದಮಂಜರಿ** ಮತ್ತು ರಾಜಶೇಖರ ವಿಳಾಸ ಟೀಕೆ ಇವೆರಡನ್ನೂ ಮೆಚ್ಚಿ ಸರಕಾರ ೨೦೦ ರೂಗಳ ಪುರಸ್ಕಾರ ನೀಡಿದೆ. ಆಗ ಪರಿಷತ್ತು, ಅಕಾಡೆಮಿ ಮತ್ತು ಪಂಪ ಪ್ರಶಸ್ತಿಗಳಿದ್ದಿದ್ದರೆ ಅವುಗಳ ಮೇಲೊಂದು ಸಂಶೋಧನೆ ಮಾಡುವಷ್ಟು ದೊಡ್ಡ ಪಟ್ಟಿಯೇ ಸಿದ್ಧವಾಗಿರುತ್ತಿತ್ತು.

ಹದಿನಾರನೆಯ ವಯಸ್ಸಿಗೆ (೧೮೭೨ರಲ್ಲಿ) ರಾಣೆಬೆನ್ನೂರಿನಲ್ಲಿ ಕನ್ನಡಶಾಲಾ ಮಾಸ್ತರ ರಾಗಿ ಸೇರಿದ ಗೋಪಾಲ ಬಾಳಾಚಾರ್ಯ ಸಕ್ಕರಿ (ಶಾಂತಕವಿ ೧೮೫೬–೧೯೨೧)ಯವರಂತೂ ಅಗಾಧವಾದ ಸಾಹಿತ್ಯ ರಚನೆ ಮಾಡಿರುವುದು ಪ್ರತಿಭೆಯ ವಿರಾಟ್ ರೂಪವೇ ಆಗಿದೆ. ಆದರೆ

ಬಡತನ ಕಾರಣವಾಗಿ ಅವರೇನು ಮಾಡಿದರೆಂಬುದಕ್ಕೆ ಈ ಮುಂದಿನ ಪ್ರಕಟಣೆಯೇ ಸಾಕ್ಷಿಯಾಗುತ್ತದೆ.

Correspondence.

ಪತ್ರವ್ಯವಹಾರ

ಸೂಚನಾಪತ್ರಕವು.

ಟಪಾಲಹಾಶೀಲು ಸಹಿತ ಎಂಟು ಆಣೆ, ಅರು ಪೈ ... ನ್ನು ಕಳಿಸಿದರೆ "ಮುಕುಂದದಾಸಾಮೃತ" ಎಂಬ ... ಪದ್ಯಾತ್ಮಕ ಗ್ರಂಥವು ಕೆಳಗೆ ಸಹಿಮಾಡಿದವರ ಹ... ದೊರಕುತ್ತದೆ.

ಅಚ್ಚುಹಾಕದಗ್ರಂಥಗಳಪಟ್ಟಿ.

೧ ವಿರಹತರಂಗ. ೨ ಗಜೇಂದ್ರಮೋಕ್ಷ, ೩ ರಸಿಕಾರ

೪೫

...ಸಿಕವಿಚಾರ ೪ ಬಾಲೋಪದೇಶ. ೫ ಶೃಂಗಾರಪದಸಂಗ್ರಹ ೬ ದೇ... ...ನ. ೭ ಬರಗಾಲರಸ (ದುಷ್ಕಾಳವರ್ಣನ). ೮ ಪಂಚ... ...ಸಾರ. ೯ ಹಾಸ್ಯಮಂದಿರ. ೧೦ ಪತಿಭಾರ್ಯಾಮರಣ (ಅಲಾವೀಜಂಗು) ೧೧ ಮದನವಿಹಾರ.

ಈ ೧೧ ಗ್ರಂಥಗಳು ಪದ್ಯಾತ್ಮಕಗಳೇ ಇದರ ಹಕ್ಕುಗಳ ...ಕೊಂಡಲಪೇಕ್ಷಿಸುವವರು ಕೆಳಗೆ ಸಹಿ... ...ರವರಿಗೆ ರೊಖ ೨೦ ರೂಪಾಯಿಗಳನ್ನು ಕೊಡುವ ...ಕರಾರನಾಗೀ ಮಾಡಬೇಕು. ಈ ಮಾತು ಭಾಷಾಭಿಮಾನಿಯ... ಬಹಳೇ ಹಿತಕರವಾದದ್ದು.

೧ ಆನಂದಲಹರೀ, ೨ ಸುರಸರಂಜನ, ೩ ಕವಿಪ್ರಲಾಪ, ...ವಿಟಕಂಟಖಡ್ಗಗಳೆಂಬ ನಾಲ್ಕು ಗ್ರಂಥಗಳನ್ನು ಈಗ ಬರೆಯು...ತಿದ್ದೇವೆ. ಮುಗಿದನಂತರ ಮಾಡುವ ವ್ಯವಸ್ಥಾ ಕ್ರ...ವನ್ನು ಬೇಗನೇ ಸೂಚಿಸುತ್ತೇವೆ.

ಈ ಸೂಚನಾ ಪತ್ರಕೋತ್ಪತ್ತಿಗೆ ಬಡತನವಲ್ಲದ ಅನ್ಯ ಕಾ... ...ಇಲ್ಲ. ಎಂಬುವದನ್ನು ಸರ್ವರಿಗೂ ಬಹು ವಿನಯದಿಂದ ...ಸುತ್ತೇವೆ.

ತಾ ೨೮।೧।೭೯) ಬಾಳಾಜೀ ಗೋಪಾಳ ಸಕ್ಕರೀ.
ಕೊಪ್ಪಳ.) ಗ್ರಂಥಕರ್ತಾ.
ಹಿಡ್ಡಮಾಸ್ತರ ಕೊಪ್ಪಳ ತಾ. ಗದಗು ಜಿಲ್ಲಾ ಧಾರವಾಡ.

೧–ವಿರಹತರಂಗ, ೨–ಗಜೇಂದ್ರಮೋಕ್ಷ, ೩–ರಸಿಕಾರಸಿಕವಿಚಾರ ೪–ಬಾಲೋಪದೇಶ ೫–ಶೃಂಗಾರಪದ ಸಂಗ್ರಹ ೬–ದೇಶ ವರ್ಣನ(?) ೭–ಬರಗಾಲರಸ (ದುಷ್ಕಾಳವರ್ಣನ) ೮–ಪಂಚ... ನುಸಾರ ೯–ಹಾಸ್ಯ ಮಂದಿರ ೧೦–ಪತಿಭಾರ್ಯಾ ಮರಣ (ಅಲಾ ವೀಜಂಗು) ೧೧–ಮದನವಿಹಾರ. ಈ ೧೧ ಪದ್ಯಾತ್ಮಕ ಗ್ರಂಥಗಳನ್ನು ಮತ್ತು ೧–ಆನಂದ ಲಹರೀ ೨–ಸುರಸರಂಜನ ೩–ಕವಿ ಪ್ರಲಾಪ ೪–ವಿಟಕಂಟಖಡ್ಗ (ಕಲ್ಪಿತ ಕಾದಂಬರಿ) ಎಂಬ ಇನ್ನೂ ಬರೆಯುತ್ತಿರುವ ಗ್ರಂಥಗಳನ್ನು ಹೆಸರಿಸಿ ಅವುಗಳ ಹಕ್ಕು ಬಿಟ್ಟುಕೊಡುತ್ತಿರುವುದನ್ನು ಪ್ರಸ್ತಾಪಿಸಿದ್ದಾರೆ. ಹೀಗೆ ೧೮೭೯ರಲ್ಲಿಯೇ ಬಾಳಾಜಿ ಗೋಪಾಳ ಸಕ್ಕರಿ ಒಮ್ಮೆಲೆ ಹನ್ನೊಂದು ಕೃತಿಗಳನ್ನು ಬರೆದುದು ಒಂದು ಆಘಾದ ವಿಷಯವಾದರೆ, ಅವುಗಳನ್ನು ಹೀಗೆ ೨೦ ರೂಪಾಯಿಗೆ ಹರಾಜು ಹಾಕಿದ್ದೂ ಊಹಿಸಲಸಾಧ್ಯವಾದ ಆಘಾತಕರ ವಿಷಯವಾಗಿ ತೋರುತ್ತದೆ. ಪಠ್ಯಕ್ರಮಕ್ಕೆ ಪುಸ್ತಕಗಳಿಲ್ಲದ ಸಮಯದಲ್ಲಿ ಇವರು ಬರೆದರೂ ಪ್ರಕಟಿಸಲಾರದಂಥ ದುರಾದೃಷ್ಟ ಕನ್ನಡದ ದುರ್ದೆಸೆ ಮತ್ತು ಅನಾದರ ಎರಡನ್ನೂ ತೆರೆದು ತೋರುತ್ತದೆ. ಪಠ್ಯ ಪುಸ್ತಕಗಳಿಗೆ ಅಷ್ಟೊಂದು ಬೇಡಿಕೆ ಇದ್ದಾಗಲೂ, ಅಧಿಕಾರಿ ಸ್ಥಾನದಲ್ಲಿ ಬೇಕಾದವರೇ ಇದ್ದರೂ, ಪ್ರಕಟಿಸುವ ಸೌಜನ್ಯ ಕಾಣದೆ, ಈ ಲೇಖಕ ಹೀಗೆ ಹಕ್ಕು ಬಿಟ್ಟುಕೊಡುವ ಪರಿಸ್ಥಿತಿ ಬಂದುದು ಅಯೋಮಯವೆನಿಸುತ್ತದೆ.

೨೧–೯–೧೮೭೩ರಲ್ಲಿ ಸಕ್ಕರಿ ಬಾಳಾಚಾರ್ಯ ಗೋಪಾಳಾಚಾರ್ಯರು "ಗಜೇಂದ್ರ ಮೋಕ್ಷ"ವೆಂಬ ಕಾವ್ಯವನ್ನು ಬರೆದಿದ್ದಾರೆ. ಹಾಗೇಯೇ 'ಭುಜಂಗೋಪದೇಶ' ಎಂಬ ನಾಟಕವೂ ೧೮೮೨ ಫೆಬ್ರುವರಿಯಲ್ಲಿಯೇ ಶಾಲಾಪತ್ರಕದಲ್ಲಿ ಪ್ರಕಟಗೊಳ್ಳತೊಡಗಿದೆ. 'ಕೃಷ್ಣ ರಾಧಿಕಾ ವಿನೋದ ನಾಟಕ' ಜನೇವರಿ ೧೮೮೩ರಿಂದ (ಪುಟ ೧೦–೧೩) ಪ್ರಕಟಗೊಳ್ಳತೊಡಗಿದೆ. ಪ್ರಖಾಂಡ

ಪಂಡಿತರೆನಿಸಿದವರೆಲ್ಲ ಲೋಕಸಮಾಜದ ಸುಧಾರಣೆಗಾಗಿ ಕೃತಿಗಳನ್ನು ರಚಿಸಿ ಹೆಸರು ಗಳಿಸಿದರೂ ಯಾರಿಗೂ ಕನ್ನಡ ಭಾಷೆಯ ವಿಷಯದ ಕುರಿತು ಕಾಳಜಿ ಇಲ್ಲವಾಗಿದೆ ಎಂದು ಅವರೇ ತಮ್ಮ 'ಸೀತಾರಣ್ಯ ಪ್ರವೇಶ ನಾಟಕ–(೧೮೮೬)'ದ ಮುನ್ನುಡಿಯಲ್ಲಿ "...ಅರಸು ಪಂಡಿತರಿಗೆ ಅಣಕಿಸಿ ಅವರಲ್ಲಿ ಗ್ರಂಥರಚನೆಯ ಈರ್ಷೆಯನ್ನು ಉತ್ಪನ್ನಮಾಡುವ ಮಂದ ವಿಚಾರದಿಂದ ಕನ್ನಡ ಭಾಷೆಯನ್ನು ಊರ್ಜಿತಗೊಳಿಸುವ ಅಭಿಲಾಷೆಯವರಾದ ನಾವು ಕನ್ನಡ ಭಾಷೆಯಲ್ಲಿ ೬೫ ಗ್ರಂಥಗಳನ್ನು ರಚಿಸಿರುವೆವು." ಎಂದಿದ್ದಾರೆ.

೧೮೮೪ರ ಜನೇವರಿ ಪುಸ್ತಕ ೧೯, ಸಂಚಿಕೆ ೧ಪುಟ ೬ರಲ್ಲಿ "ಶ್ರೀ **ಬಾಳಶಾಸ್ತ್ರಿ ನರೆಗಲ್ಲ** ಇವರ "ವಾಣಿಮುಕುರ" ಎಂಬ ಹೊಸ ವ್ಯಾಕರಣ ಪುಸ್ತಕವನ್ನು ಮಾಡಿ ಕಳುಹಿಸಿರುವುದಾಗಿ, ಅದನ್ನು ಕುರಿತು ಟ್ರೇನಿಂಗ ಕಾಲೇಜಿನ ಕನ್ನಡ ಶಿಕ್ಷಕರಾದ ದೋಂಡೋ ನರಸಿಂಹ ಮುಳಬಾಗಲ ಇವರು "....ಅದನ್ನು ತಾವು ಬಹಳ ಆದರದಿಂದ ೨/೩ ಬಾರಿ ಓದಿದೆವು, ಇದರಲ್ಲಿ ಕೃದಂತ, ತದ್ಧಿತಾಂತ, ತತ್ಸಮ ತತ್ಭವಗಳೆಂಬ ನಾಲ್ಕು ಪ್ರಕರಣಗಳು ವಿದ್ಯಾರ್ಥಿಗಳಿಗೆ ಬಹಳೇ ಉಪಯೋಗವಾಗುವಂತೆ ಅವೆ. ಕೆಲವು ಕಡೆಗೆ ದೋಷಗಳುಂಟು. ಅವನ್ನು ಗ್ರಂಥಕರ್ತರಿಗೆ ತಿಳಿಸಿದ್ದೇವೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದನ್ನು ನೋಡಿದರೆ ಬಾಳಶಾಸ್ತ್ರಿ ನರೆಗಲ್ಲ ಇವರ "ವಾಣಿಮುಕುರ" ಎಂಬ ಹೊಸ ವ್ಯಾಕರಣ ಪುಸ್ತಕ ೧೮೮೪ರಲ್ಲಿ ಪ್ರಕಟವಾಗಿ, ಪಠ್ಯವಾಗಿದೆ.

೧೮೮೫ರ ಜನೇವರಿ ಪುಸ್ತಕ ೨೦, ಸಂಚಿಕೆ ೧ಪುಟ ೬ರಲ್ಲಿ ಹುಬ್ಬಳ್ಳಿಯ ೨ನೇ ನಂಬರಿನ ಶಾಲೆಯ ಅಸಿಸ್ಟಂಟ ಮಾಸ್ತರಾದ ಶ್ರೀನಿವಾಸ ಗುಂಡೋ ಇವರು ೬ನೇ ಈಯತ್ತೆಯ ವಿದ್ಯಾರ್ಥಿಗಳಿಗಾಗಿ 'ಫಿಜಿಕಲ್ ಜ್ಯಾಗ್ರಫಿ' (ಪ್ರಾಕೃತಿಕ ಭೂಗೋಲ) ಎಂಬ ಪುಸ್ತಕ ಬರೆದಿದ್ದು, ಸರಳ ಭಾಷೆಯಲ್ಲಿದ್ದು ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾಗಿದೆ. ಅದರ ಬೆಲೆ ೪ಆಣೆ ಇದ್ದು, ಇದು ಧಾರವಾಡದ ಚನ್ನವೀರಪ್ಪಾ ಬುಕ್ ಸೇಲರ ಇವರ ಅಂಗಡಿಯಲ್ಲಿ ಸಿಗುವುದಾಗಿ ಇರುವ ಪ್ರಕಟಣೆ ಪಠ್ಯಪುಸ್ತಕ ಬರೆದ ಅಸಿಸ್ಟಂಟ ಮಾಸ್ತರರ ಪರಿಚಯ ಮಾಡುತ್ತದೆ.

೧೮೮೪ ಸಪ್ಟಂಬರ ಅಷ್ಟೊತ್ತಿಗೆ 'ಸರಕಾರಿ ಬುಕ್ ಡೀಪೋ ಹೊಸನಿಯಮಗಳು' 'ಬುಕ್ ಡೀಪೋ ಕೋಡ್' ನಡಿಯಲ್ಲಿ ಜಾರಿಗೊಂಡವು.

ಕನ್ನಡ ಟ್ರಾನ್ಸಲೇಟರ್ ವಿ.ಆರ್.ಕಟ್ಟಿಯವರು **ಕನ್ನಡ ವಾಚನದ ಆರನೆಯ ಪುಸ್ತಕ**ವನ್ನು ಛಾಪಿಸಲಿಕ್ಕೆ ಕಳುಹಿಸಿ, ಅದರ ನಾಲ್ಕು ಮಾದರಿಗಳನ್ನು ಕೊಟ್ಟಿದ್ದು (ಮದಿನಾ ಪಟ್ಟಣವೂ– ಮಹಮ್ಮದನ ಗೋರಿಯೂ, ಇಂದ್ರ ಧನುಷ್ಯವು, ಭೂಮಿಯ ಗತಿಗಳು, ರಸಾಯನ ಮಿಶ್ರವು) ೬ ನೆಯ ತರಗತಿ ಕಲಿಸುವ ಶಿಕ್ಷಕರು ಅದರ ಗುಣಾವಗುಣಗಳನ್ನು ಹೇಳಬೇಕೆಂದು ಕೇಳಿಕೊಂಡಿದ್ದಾರೆ. ೧೮೮೫ ರಷ್ಟೊತ್ತಿಗೆ **ಕನ್ನಡ ವಾಚನದ ಆರನೆಯ ಪುಸ್ತಕವು** ಸಿದ್ಧವಾಗಿದೆ.[೯]

ಧೋಂಡೋ ನರಸಿಂಹ ಮುಳಬಾಗಲ ಅವರ **'ಕನ್ನಡ ಕೈಪಿಡಿ'(ಹಳಗನ್ನಡ ಹೊಸಗನ್ನಡ ವ್ಯಾಕರಣ)ಯ ಪೂರ್ವಾರ್ಧದ ೨ನೇ ಅವೃತ್ತಿ** ೧೮೯೪ರಲ್ಲಿ ಪ್ರಕಟಗೊಂಡಿದೆ. ಆಗ ಅವರು ಟ್ರೇನಿಂಗ ಕಾಲೇಜಿನ ಕನ್ನಡ ಅಧ್ಯಾಪಕರಾಗಿದ್ದರು[೧೦] ೧೮೯೫ರ ಮೇನಲ್ಲಿ ಇವರಿಂದ ರಚಿತವಾದ **'ಸುಡಿಗಟ್ಟು'** ಎಂಬ ಕನ್ನಡ ವ್ಯಾಕಣದ ಎರಡನೆಯ ಆವೃತ್ತಿಯನ್ನು ಡೈರೆಕ್ಟರ ಆಫ್ ಪಬ್ಲಿಕ ಇನ್ಸಟ್ರಕ್ಶನ್ ಇವರು ಜಿಲ್ಲೆಗಳೊಳಗಿನ ಶಾಲೆಗಳ ಉಪೊಯೋಗಕ್ಕಾಗಿ ಮಂಜೂರಾಗಿದೆ. ಇದೇ ಸಂದರ್ಭದಲ್ಲಿಯೇ ಅವರ **'ಕನ್ನಡ ಕೈಪಿಡಿ' ಎಂಬ ವ್ಯಾಕರಣದ ೧ನೇ ಭಾಗ** ಲೈಬ್ರರಿಗಳಿಗಾಗಿ ಮತ್ತು ಇನಾಮುಗಳಿಗಾಗಿ ಮಂಜೂರು ಆಗುತ್ತದೆ. ೨೪ ಮೇ, ೧೮೯೫ ರಲ್ಲಿ (ಜುಲೈನ ವರದಿ)ವಿರೂಪಾಕ್ಷಪ್ಪ ಚಿನ್ನಪ್ಪಾ ಹೂಲಿ, ಕನ್ನಡ ಶಾಲಾ ಮಾಸ್ತರ ಸಿಗ್ಗಾಂವ ಇವರಿಂದ ರಚಿತ **"ಜಮಾ ಖರ್ಚಿನ ಪದ್ಧತಿ"** ಎಂಬ ಪುಸ್ತಕವು ಡೈರೆಕ್ಟರ ಆಫ್ ಪಬ್ಲಿಕ ಇನ್ಸಟ್ರಕ್ಶನ್ ಇವರ ಆದೇಶದ ಮೆರೆಗೆ ಲೈಬ್ರರಿಗಳಿಗಾಗಿ ಮತ್ತು ಇನಾಮುಗಳಿಗಾಗಿ ಮಂಜೂರು ಆಗುತ್ತದೆ.

"ವೆಂಕಟ ರಂಗೋ ಕಟ್ಟಿಯವರ ಅತ್ಯುತ್ತಮ **'ಕರ್ನಾಟಕ ವರ್ಣನೆ'** ಪುಸ್ತಕ ಛಾಪಿಸಿ ತಯಾರಾಗಿ ಡೀಪೊಗಳಿಗೆ ಬಂದಿರುವುದರಿಂದ ಮುಂದಿನ ವರ್ಷದಿಂದ- ಮಹಾರಾಷ್ಟ್ರ ದೇಶ ವರ್ಣನೆ ನಿಲ್ಲಿಸಿ ಕರ್ನಾಟಕ ವರ್ಣನೆ ಕಲಿಸತಕ್ಕದ್ದು"[೧೧] (ತಾ. ೧೫ನೆ ಸಪ್ಟಂಬರ ಸ.೧೮೮೫ ಇ. ಮು. ಕಾರವಾರ. ಶ್ರೀ ಆರ್. ಎಚ್. ದೇಶಪಾಂಡೆ,ಡಿ.ಎ.ಇನ್ಸಪೆಕ್ಟರ ಜಿಲ್ಲಾ ಕಾನಡಾ) ಎಂಬ ವಿಷಯದ ಪ್ರಕಾರ ೧೮೮೫ರಲ್ಲಿ ವೆಂಕಟ ರಂಗೋ ಕಟ್ಟಿಯವರ ಅತ್ಯುತ್ತಮ 'ಕರ್ನಾಟಕ ವರ್ಣನೆ' ಪುಸ್ತಕ ಪ್ರಕಟಗೊಂಡಿತ್ತು. ಕರ್ನಾಟಕದ ಇತಿಹಾಸವನ್ನು ತಿಳಿಸುವ ಪ್ರಪ್ರಥಮ ಪುಸ್ತಕ ಇದಾಗಿದೆ. ೧೮೮೫ ರವರೆಗೂ ಕನ್ನಡ ತರಗತಿಗಳಲ್ಲಿ ಮಹಾರಾಷ್ಟ್ರ ವರ್ಣನೆ ಪುಸ್ತಕವನ್ನೇ ಬೋಧಿಸಲಾಗುತ್ತಿತ್ತು. ಇದರಂತೆಯೇ 'ಎಸ್.ಕೆ. ರೊದ್ದ ಡಿ.ಎ.ಇ ಜಿಲ್ಲಾ ಧಾರವಾಡ ಆದ ಇವರೂ ಕೂಡ ೩ ಫೆಬ್ರುವಾರೀ ಸನ್ ೧೮೮೬ ಇಸ್ವಿ'ಯಲ್ಲಿ "ಕನ್ನಡ ನಾಲ್ಕನೆಯ ಮರ್ಯಾದೆಯಂತೆ ಅಭ್ಯಾಸ ಮಾಡುವವರಿಗೆ ಕರ್ನಾಟಕದೇಶ ವರ್ಣನೆ ಕಲಿಸತಕ್ಕದ್ದು ಮಹಾರಾಷ್ಟ್ರ ದೇಶ ವರ್ಣನೆ ಕಲಿಸಬಾರದು. ಜರ ಕಲಿಸಿದರೆ ಮುಂದಿನ ವರ್ಷ ಎಲ್ಲಾ ಹುಡುಗರು ನಾಪಾಸಾಗಿ ಮಾಸ್ತರ ಲುಕಸಾನೇ ಆದೀತು. ಕರ್ನಾಟಕ ದೇಶ ವರ್ಣನೆಯನ್ನೆ ಕಲಿಸಬೇಕು" ಎಂದು ಸರಕ್ಯೂಲರ್ ಹೊರಡಿಸಿದ್ದಾರೆ. ೧೨೦ ಪುಟಗಳ ಈ ಪುಸ್ತಕದ ಎರಡನೆಯ ಆವೃತ್ತಿ ೧೮೮೭ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಮುದ್ರಣಾಲಯದಲ್ಲಿ, ಮತ್ತೇ ೧೮೯೫ರಲ್ಲಿ ಮುದ್ರಿತವಾಗಿದೆ.

೧೮೮೦ ಮಾರ್ಚನಲ್ಲಿ ಶ್ರೀನಿವಾಸ ರೊದ್ದ ಮತ್ತು ಗೋವಿಂದರಾವ ವಕೀಲ ಇವರಿಂದ ಒಂದು 'ವಕ್ತೃತ್ವೋತ್ತೇಜಕ ಸಭೆ'ಯೊಂದು ಸ್ಥಾಪನೆಯಾದ ಬಗೆಗೆ ಮತ್ತು ಅದರ ಪ್ರಾಯೋಜಕತ್ವದಲ್ಲಿ ಮೊದಲ ಸಮಾರಂಭ ೧೮೮೧ರ ಸಪ್ಟಂಬರ ತಿಂಗಳಲ್ಲಿ ನಡೆದು, ಅದರಲ್ಲಿ ಕನ್ನಡದ ೧೦ ಮತ್ತು ಮಹಾರಾಷ್ಟ್ರ ೧೦ ವಿದ್ಯಾರ್ಥಿಗಳು ಭಾಗವಹಿಸಿದ್ದು, ಮಹಾರಾಷ್ಟ್ರದ ಟ್ರೇನಿಂಗ ಕಾಲೇಜಿನ ಗೋವಿಂದ ದಾಮೋದರ ದೀಕ್ಷಿತ ಎಂಬ ವಿದ್ಯಾರ್ಥಿ ಬಹು ಸೊಗಸಾಗಿ, ಸಯುಕ್ತಿಕವಾಗಿ,

ಚಿತ್ತವೇದಕವಾಗಿ ಮಾತನಾಡಿ ೨೫ ರೂಪಾಯಿಯ ಬಹುಮಾನ ಪಡೆದಿದ್ದಾನೆ. ಇಂಥ ಕಾರ್ಯಕ್ರಮ ಏರ್ಪಡಿಸುವುದರೊಂದಿಗೆ ಟ್ರೇನಿಂಗ್ ಕಾಲೇಜು ಕರ್ನಾಟಕ-ಮಹಾರಾಷ್ಟ್ರಗಳನ್ನು ಬೆಸೆದ ಸಾಂಸ್ಕೃತಿಕ ಕೊಂಡಿಯಾಗಿತ್ತು.

ವೆಂಕಟ ರಂಗೋ ಕಟ್ಟಿಯವರು "ವಿದ್ಯಾಖಾತೆಯ ಟ್ರಾನ್ಸಲೇಟರರೂ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರೂ ಆಗಿದ್ದಾಗ, ಇವರು ಉತ್ತರ ಕರ್ನಾಟಕದ ವಿದ್ಯಾಖಾತೆಯ ಅಪ್ಪಣೆಯ ಮೇರೆಗೆ ಬರೆದ ಕನ್ನಡ ಕ್ರಮಿಕ ಪುಸ್ತಕಗಳು ಆ ಕಾಲದ ಮೈಸೂರು, ಮಂಗಳೂರು ಪ್ರಾಂತಗಳ ಕ್ರಮಿಕ ಪುಸ್ತಕಗಳಿಗಿಂತ ಭಾಷೆಯ ದೃಷ್ಟಿಯಿಂದಲೂ ಎಷ್ಟೋ ಪಾಲು ಮಿಗಿಲಾಗಿರುವವು. ಕನ್ನಡ ಶಾಲಾ ಪತ್ರಕಕ್ಕೆ ಮಹತ್ವ ಉಂಟಾದದ್ದು ಈ ಮಹನೀಯರಿಂದಲೇ. ಇವರು ರಚಿಸಿದ ಜ್ಯೋತಿಷಶಾಸ್ತ್ರ, ಪದಾರ್ಥ ವಿಜ್ಞಾನ ಶಾಸ್ತ್ರ, ವನಸ್ಪತಿ ಶಾಸ್ತ್ರ, ಖನಿಜ ಶಾಸ್ತ್ರ, ಲಘು ವ್ಯಾಕರಣ, ಕನ್ನಡ ಕ್ರಮಿಕ (ಶಾಲೋಪಯೋಗಿ) ಪುಸ್ತಕಗಳು, ಕವಿತೆಯ ಪುಸ್ತಕಗಳು– ಇವೇ ಮೊದಲಾದವು ಆ ಕಾಲದ ಕನ್ನಡ ಅಭ್ಯಾಸ ಬರವಣಿಗೆಗಳಲ್ಲಿ ವಿಶೇಷ ಬದಲಾವಣೆಯನ್ನುಂಟುಮಾಡಿದವು. ಉತ್ತರ ಕರ್ನಾಟಕದ ಅರ್ವಾಚಿನ ಲೇಖಕ ವರ್ಗಕ್ಕೆ ಇವರೇ ಮಾರ್ಗದರ್ಶಿಗಳಾಗಿ ರಾರಾಜಿಸುತ್ತಿರುವರೆಂದರೆ ಅತಿಶೋಕ್ತಿ ಆಗಲಾರದು. ಇವರ **'ಕರ್ನಾಟಕದ ಇತಿಹಾಸ'**ವು ಭಾಷೆಯಲ್ಲಿಯೂ ಆ ಕಾಲದ ಮಾನದಂತೆ ವಿಷಯದಲ್ಲಿಯೂ ಅತಿ ಮಹತ್ವದ್ದಾಗಿರುವುದು. ಅದಕ್ಕೂ ಮೊದಲು ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಮಾತೃಭೂಮಿ ಕರ್ನಾಟಕದ ಇತಿಹಾಸವನ್ನು ಮರಾಠಿ ಪುಸ್ತಕದಲ್ಲಿ ಓದಬೇಕಾಗುತ್ತಿತ್ತು"[೧೨] ಅಖಂಡ ಕರ್ನಾಟಕದ ಭೂಪಟವನ್ನು ಮೊದಲು ನಿರ್ಮಿಸಿದವರೂ ಅವರೇ.

DEPARTMENTAL NOTICE.

ನೋಟೀಸುಗಳು.

ಜಾ. ನಂಬರು ೧೬೨.

ಮೆ॥ ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ– ಮಾಹೆ ಜುಲಾಯಿ ೧೮೯೫ ಇಸ್ವಿಯ ಕೊನೆಯ ವರೆಗೆ ಕೆಳಗೆ ಬರೆದ ಪುಸ್ತಕಗಳು ಮುದ್ರಿತವಾಗಿ ಮಾರಾಟಕ್ಕೆ ಸಿದ್ಧವಾಗಿವೆ:—

ಪುಸ್ತಕಗಳು.	ಬೆಲೆ. ರೂ.	ಆ.	ಪೈ.
ಸಂಸ್ಕೃತ.			
೧. ಪಂಡಿತಕೃತ ಅಥರ್ವವೇದ ಭಾಗ ೧ನೇ	೧೦	೦	೦
೧. ಸದರ ಸದರ ಭಾಗ ೨ನೇ	೧೦	೦	೦
ಮರಾಠಿ.			
೧. ಬಾಲಬೋಧ ಮೊದಲನೇ ಪುಸ್ತಕ	೦	೧	೦
೧. ಉಜಳಣಿಯ ಪುಸ್ತಕ	೦	೧	೦
೧. ಹಿಂದುಸ್ಥಾನದ ನಕಾಶೆ	೪	೧೦	೦
ಕನ್ನಡ.			
೧. ಅಂಕಲಿಪಿ	೦	೧	೬
೧. ಎರಡನೇ ಪುಸ್ತಕ	೦	೧	೬
೧. ಪೇ ಟು ಹೆಲ್ಥ (ಆರೋಗ್ಯಶಾಸ್ತ್ರ)	೦	೨	೯
೧. ಫಾಲರ ಸಾಹೇಬರ ಶಿಕ್ಷಣ ಪದ್ಧತಿ	೦	೧೧	೦
೧. ಕರ್ನಾಟಕ ಇತಿಹಾಸ	೦	೬	೦

ಮುಂಬಯಿ, ತಾ॥ ೩೧-೭-೯೫

G. B. Nene.
ಕ್ಯೂರೇಟರ ಗವರ್ನಮೆಂಟ,
ಸೆಂಟ್ರಲ್ ಬು. ಡಿ. ಮುಂಬಯಿ.

ಹೀಗೆ ಸರಕಾರವೇ ಮುದ್ರಿಸುವುದಲ್ಲದೆ ತೀರ ಅವಶ್ಯವಿದ್ದ ಪುಸ್ತಕಗಳನ್ನ ಯಾರು ಬರೆಯಲಿಚ್ಛೆಯುಳ್ಳವರಿದ್ದೀರಾ? ಎಂದು ಪ್ರಕಟಿಸಿ, ಬರೆದ ಪುಸ್ತಕ ಪ್ರಕಟಣೆ ತಾವೇ ಛಾಪಿಸುವ ಮನಸ್ಸಿದೆಯೋ ಅಥವಾ ಸರಕಾರ ಛಾಪಿಸಬೇಕೋ ಎಂದು ಕೇಳುವ ಮೂಲಕ 'ಬಾಯಿಲೆಕ್ಕ' ಎಂಬ ಪುಸ್ತಕದ ಜರೂರನ್ನು ತಿಳಿಸಿದ್ದಾರೆ. ಅಲ್ಲದೆ ದೇವಕುಳೆ(?) ಎಂಬುವರು ಬರೆದ 'ಬಾಯಿಲೆಕ್ಕ' ಪುಸ್ತಕದ ಭಾಷಾಂತರವನ್ನಾದರೂ ಮಾಡಲಿಕ್ಕೆ ಒಪ್ಪಿಕೊಂಡರೆ ಪ್ರತಿಯಾಗಿ ಅಂಥವರ ಅಪೇಕ್ಷೆ

ಏನು? ಎಂದು ವರ್ನಾಕ್ಯುಲರ್ ಬುಕ್ ಕಮಿಟಿಯ ಸೆಕ್ರೆಟರಿಯಾಗಿ ರಾವಜೀ ಬಾ. ಕರಂದೀಕರರು ದಿ. ೧೧-೧೦-೧೮೯೫ರಲ್ಲಿ ಕೇಳುತ್ತಾರೆ. ಅಂದರೆ ಅವಶ್ಯವಿರುವ ಪುಸ್ತಕಗಳನ್ನು ಬರೆಯಬಲ್ಲವರಿಂದ, ಪರಿಣತರಿಂದ ಬರೆಯಿಸುವ, ಭಾಷಾಂತರಿಸುವ ಮತ್ತು ಅಂಥವರಿಗೆ ಉತ್ತೇಜನಾರ್ಥವಾಗಿ ಉಚಿತ ಬಹುಮಾನವನ್ನು ಕೊಟ್ಟು ಪ್ರೋತ್ಸಾಹಿಸುವ ರೂಢಿ ಸಂಪ್ರದಾಯ ಆರಂಭವಾಗಿತ್ತು.

೧೮೯೭ ಜುಲೈನಲ್ಲಿ ಮಿ.ಕೆ.ಎಸ್.ಹುನಗುಂದ. ಬಿ.ಎ ಇವರು ರಚಿಸಿದ 'ಕುರುಹಿನ ಬಕುಲಾಹಾರ' ಮತ್ತು ಕೈಲಾಸವಾಸಿ ಮೆಸರ್ಸ! ಸಿ.ಸುಬ್ಬರಾವ ಮತ್ತು ಬಸವಪ್ಪಸಾಸ್ತ್ರೀಗಳು ರಚಿಸಿದ 'ಸೂರಸೇನ ಚರಿತ್ರ' ಪುಸ್ತಕಗಳು ಶಿಕ್ಷಣ ಇಲಾಖೆಯ ಡಿಪಿಐ ಅವರಿಂದ ಗ್ರಂಥಾಲಯ ಮತ್ತು ಇನಾಮಿಗಾಗಿ ಮಂಜೂರುಗೊಂಡಿವೆ.

ಇಷ್ಟೆಲ್ಲ ಪುಸ್ತಕಗಳು ಪ್ರಕಟಗೊಳ್ಳುತ್ತಿದ್ದರೂ ೧೮೯೭ರ ಅಕ್ಟೋಬರ ವರದಿಯ ಪ್ರಕಾರ 'ನಮ್ಮ ದೇಶದ ಬೇರೆಬೇರೆ ಪ್ರಾಂತಗಳಲ್ಲಿ ಛಾಪಿಸಲ್ಪಟ್ಟ ಪುಸ್ತಕ, ಮಾಸಿಕ ಪುಸ್ತಕ, ವರ್ತಮಾನ ಪತ್ರಗಳನ್ನು ಕುರಿತು ಆದ ರಿಪೋರ್ಟುಗಳನ್ನು ಒಟ್ಟುಗೂಡಿಸಿ ಹಿಂದುಸ್ಥಾನ ಸರಕಾರದವರು ಒಂದು ಪುಸ್ತಕವನ್ನು ಛಾಪಿಸಿರುತ್ತಾರೆ. ಅದರಲ್ಲಿ ಕೊಟ್ಟ ಬೇರೆಬೇರೆ ಭಾಷೆಗಳ ಅಂಕಿಅಂಶಗಳಿಂದ ನಮಗೆ ತಾದೃಶ್ಯ ಕಾರಣವಿಲ್ಲ. ನಮ್ಮ ಇಲಾಖೆಯಲ್ಲಿ ಸನ್ ೧೮೯೫ನೇ ಸಾಲಿನಲ್ಲಿ ಒಟ್ಟು ೮೮೬ ಪುಸ್ತಕಗಳೂ, ೫೩೫ ಮಾಸಿಕ ಪುಸ್ತಕ ಮತ್ತು ವರ್ತಮಾನ ಪತ್ರಗಳೂ ಛಾಪಿಸಲ್ಪಟ್ಟಿದ್ದು, ಅವುಗಳಲ್ಲಿ ಕನ್ನಡ ೧೨, ಮರಾಠಿ ೨೧೭ ಮತ್ತು ಗುಜರಾತಿ ೨೯೪ ಪುಸ್ತಕಗಳು ಪ್ರಸಿದ್ಧವಾಗಿರುವವು....' ಕನ್ನಡದಲ್ಲಿ ಚರಿತ್ರೆ ೧, ನಾಟಕಗಳು ೨, ಭಾಷಾವಿಷಯಕ ಪುಸ್ತಕಗಳು ೨, ತತ್ವಶಾಸ್ತ್ರ ೧, ಗಣಿತ ಮತ್ತು ಯಂತ್ರಶಾಸ್ತ್ರ ೧, ರಾಜನೀತಿ ಪುಸ್ತಕ ೧ (ಕೋಷ್ಟಕ ಕೊಡಲಾಗಿದೆ). ಇದು ೧೮೯೪ರಲ್ಲಿ ಛಾಪಿಸಿದ ಪುಸ್ತಕಗಳಿಗಿಂತ ಕಡಿಮೆಯಾಗಿದೆ. ಆದರೆ ಮರಾಠಿ ಮತ್ತು ಗುಜರಾತಿ ಭಾಷೆಗಳಿಗೆ ಹೋಲಿಸಿದರೆ ಕನ್ನಡ ಪುಸ್ತಕಗಳು ಅತ್ಯಂತ ಕಡಿಮೆಯಾಗಿರುವುದು ಖೇದಕರ.

೧೯೦೦ ಜೂನನಲ್ಲಿ ಗುರುಬಸಪ್ಪ ಫಕೀರಪ್ಪ ಹಳಕಟ್ಟಿ ಇವರು ಬರೆದ 'ಇಂಗ್ಲೆಂಡ ದೇಶದ ಇತಿಹಾಸ' ಪುಸ್ತಕವು ಇನಾಮಿನ ಪುಸ್ತಕವಾಗಿಯೂ, ಲೈಬ್ರರಿಯ ಪುಸ್ತಕವಾಗಿಯೂ, ಟ್ರೇನಿಂಗ ಕಾಲೇಜಿನ ಕ್ರಮಿಕ ಪುಸ್ತಕವಾಗಿಯೂ ಮಂಜೂರಾಗಿದೆ. ಅದರಂತೆ ರಾಮಚಂದ್ರ ಹನುಮಂತ ದೇಶಪಾಂಡೆ ಇವರು ರಚಿಸಿದ 'ಚರಿತ್ರ ಸಂಗ್ರಹ'-೧ನೇ ಭಾಗ ಪುಸ್ತಕವು ಇನಾಮಿನ ಪುಸ್ತಕವಾಗಿಯೂ, ಲೈಬ್ರರಿಯ ಪುಸ್ತಕವಾಗಿಯೂ ಮಂಜೂರಾಗಿದೆ. ೧೬-೬-೧೯೦೦ ರಂದು ಇವರು ರಚಿಸಿದ 'ಹೈದರಲಿ ಟೀಪೂಸುಲ್ತಾನ', ನಾನಾಫಡಣವೀಸ' ಮತ್ತು 'ನೂರಜಹಾನ' ಪುಸ್ತಕಗಳು ಇನಾಮಿನ ಪುಸ್ತಕವಾಗಿ ಮಂಜೂರಾಗಿದೆ. ಹಾಗೆಯೇ ಕರ್ನಾಟಕ ವಿದ್ಯಾವರ್ಧಕ ಸಂಘವು ತಯಾರಿಸಿದ 'ಹಿತೋಪದೇಶ' ಭಾಗ-೨ ಪುಸ್ತಕವು ಲೈಬ್ರರಿಯ ಪುಸ್ತಕವಾಗಿಯೂ

ಮಂಜೂರಾಗಿದೆ. ೧೪-೪-೧೯೦೦ ರಲ್ಲಿ ಎಲ್.ಜಯರಾವ, ಗ್ರಾಜ್ಯುಯೆಟ್ ಟ್ರೇಡಿಂಗ ಅಸೋಸಿಯೆಶನ್ ಮೈಸೂರು, ಎನ್ನುವವರು ಬರೆದ 'ಈಸೋಫನ ನೀತಿ ಭಾಗ ೧' ಪುಸ್ತಕವು ಇನಾಮಿಗಾಗಿ ಮಂಜೂರಾಗಿದೆ. ೧೯೦೨ ಫೆಬ್ರುವಾರಿ ೮ರಂದು ಮಿ. ವೆಂಕಟೇಶ ತಿರಕೋ ಕುಲಕರ್ಣಿ(ಗಳಗನಾಥ) ಇವರು ರಚಿಸಿದ 'ಲಘು ನಿಬಂಧ ಸಂಗ್ರಹ ಮತ್ತು ಪತ್ರವ್ಯವಹಾರ' ಎಂಬ ಪುಸ್ತಕ ಇನಾಮಿಗಾಗಿಯೂ, ಲೈಬ್ರರಿಗಾಗಿಯೂ ಮಂಜೂರಾಗಿದೆ.

೧೯೦೩ ಮಾರ್ಚನಲ್ಲಿ ಮೈಸೂರು ಸರಕಾರದವರು ಕೃಷ್ಣರಾವ ಬೆಂಡಿಗೇರಿ (ವ್ಹಾಯ್ಸ ಪ್ರಿನ್ಸಿಪಾಲ) ಇನಚಾರ್ಜ ಪ್ರಿನ್ಸಿಪಾಲ ಇವರು ಬರೆದ 'ಜೈಮಿನಿ ಭಾರತದ ೧೨ ಮತ್ತು ೧೩ ನೇ ಸಂಧಿಗಳಿಗೆ ಟೀಕೆ' ಪುಸ್ತಕದ ನೂರು ಪ್ರತಿಗಳನ್ನು ಕೊಂಡು ಗ್ರಂಥಕಾರರಿಗೆ ಉತ್ತೇಜನ ನೀಡಿದ ಮತ್ತು ಶಿಕ್ಷಣ ಇಲಾಖೆಯ ಡೈರೆಕ್ಟರರೂ ಈ ಪುಸ್ತಕಗಳನ್ನು ಲೈಬ್ರರಿಗಾಗಿಯೂ, ಇನಾಮಿಗಾಗಿಯೂ, ಟೆಕ್ಸ್ಟಬುಕ್ಕಿಗಾಗಿಯೂ ಮಂಜೂರು ಮಾಡಿದ್ದು ತಿಳಿದು ಬರುತ್ತದೆ.

೧೭/೭/೧೯೦೩ ರಲ್ಲಿ ಪ್ರಕಟಿಸಿದಂತೆ ವಿದ್ಯಾವರ್ಧಕ ಸಂಘದಿಂದ ಮುದ್ರಣಗೊಂಡಿರುವ 'ಬಾಲಮಿತ್ರ' ಎಂಬ ಪುಸ್ತಕ ಶಿಕ್ಷಣ ಇಲಾಖೆಯ ಡೈರೆಕ್ಟರರಿಂದ ಇನಾಮಿಗಾಗಿಯೂ, ಲೈಬ್ರರಿಗಾಗಿಯೂ ಮಂಜೂರಾಗಿದೆ.

೯/೯/೧೯೦೩ರಲ್ಲಿ ಧಾರವಾಡದ ಪ್ರಾಕ್ಟಿಸಿಂಗಸ್ಕೂಲ ಮಾಸ್ತರರಾದ ಗೋವಿಂದ ವೆಂಕಟೇಶ ದೇಶಪಾಂಡೆ ಇವರು ರಚಿಸಿದ 'ವಸ್ತುಪಾಠ ಶಿಕ್ಷಣಕ್ರಮ' ಎಂಬ ಪುಸ್ತಕ ಶಿಕ್ಷಣ ಇಲಾಖೆಯ ಡೈರೆಕ್ಟರರಿಂದ ಇನಾಮಿಗಾಗಿಯೂ, ಲೈಬ್ರರಿಗಾಗಿಯೂ ಮಂಜೂರಾಗಿದೆ. ಸೌದಾಗರ ಬುಕ್ ಡಿಪೋ, ಮಹಮ್ಮದ.ವ.ಅಬ್ದುಲ್ ಹಮೀದ ಸಾ॥ ಸೌದಾಗರ. ಈ ಬುಕ್ ಡಿಪೋದ ಜಾಹೀರಾತು ಎಲ್ಲ ರೀತಿಯ ಪುಸ್ತಕಗಳಿಗಾಗಿ ೧೯೦೧ ರಿಂದಲೇ ಕೊಡಮಾಡಲಾಗುತ್ತಿದೆ.

ಮುಲ್ಕಿ ಪರೀಕ್ಷೆಗೂ ಮತ್ತು ಪ್ರವೇಶ ಪರೀಕ್ಷೆಗೂ ಇರುವ ಜೈಮಿನಿ ಭಾರತದ ನಾಲ್ಕನೆಯ ಸಂಧಿಯ ೫೦ ಪದ್ಯಗಳನ್ನು ೧೯೦೬ ಫೆಬ್ರುವರಿಯಲ್ಲಿ ಅವುಗಳ ಅನ್ವಯಾದಿ, ಸಮಾಸ, ವ್ಯಾಕರಣ ವಿಚಾರ, ವಿಶೇಷಮಾಹಿತಿಯನ್ನೊಳಗೊಂತೆ ಪ್ರಾಥಮಿಕ ಶಾಲೆಯ ೧ನೆಯ ಅಸಿಸ್ಟಂಟ ಮಾಸ್ತರ-ತಮ್ಮಾಜಿ ನಾರಾಯಣ ಅಮ್ಮಿನಭಾವಿ ಇವರಿಂದ ಬರೆಯಿಸಿ, ಅಚ್ಚುಹಾಕಿಸಿದ ವಿಷಯವನ್ನು ಬುಕ್ಕಶೇಲರ ರಾಮಾಚಾರ್ಯ ತಮ್ಮಣ್ಣಾಚಾರ್ಯ ತೊನಶಿಯವರು ಪ್ರಕಟಣೆಗೆ ಕೊಟ್ಟಿದ್ದಾರೆ. ೨೪-೪ ೧೯೦೬ ರಂತೆ ಬೀ.ಕೇ.ವೆಂಕಟರಮಣ ಅಯ್ಯಂಗಾರ ಇವರಿಂದ ರಚಿಸಲ್ಪಟ್ಟ 'ಸ್ತ್ರೀ ವಿದ್ಯಾಭ್ಯಾಸ' ಎಂಬ ಪುಸ್ತಕ ಲೈಬ್ರರಿಗಾಗಿ ಮತ್ತು ಇನಾಮುಗಳಿಗಾಗಿ ಮಂಜೂರಿಯಾಗಿದೆ. ಇದೇ ಸಂದರ್ಭದಲ್ಲಿ ಅಂಕಗಣಿತದ ಪುಸ್ತಕಗಳ ಕೊರತೆಯನ್ನು ನೀಗಿಸಲು ಇಂಗ್ಲಿಷಿನಲ್ಲಿ ಪ್ರೋಫೆಸರ್ ಗೋಖಲೆಯವರು ಬರೆದ ಪ್ರಸಿದ್ಧವಾದ 'ಅಂಕಗಣಿತ' ಪುಸ್ತಕವನ್ನು ಬೆಳಗಾವಿಯ ಕಾಂಟೋನ್ಮೆಂಟದ ಶಿರಸ್ತೇದಾರರಾದ ಕೃಷ್ಣಾಜಿ ಗೋವಿಂದ ಗೆಜ್ಜಿ. ಬಿ.ಎ. ಇವರು ಶ್ರಮವಹಿಸಿ ಕನ್ನಡಕ್ಕೆ ಅನುವಾದಿಸಿದ್ದಾರೆ.

'ನನ್ನ ತಾಯಿ' ಪುಸ್ತಕದ ಎರಡನೆಯ ಆವೃತ್ತಿ ಪ್ರಕಟವಾದ ಕುರಿತು ಶಿ ಸೋ ಕುಲಕರಣಿ ಶಾಲಾಗುರುಗಳು ನೆಗಳೂರು. ತಾ-ಕರಜಗಿ. ಜೀಡು(ಸ್ಥಳ) ಧಾರವಾಡ, ಶಿಕ್ಷಣಾಲಯ ಇವರ ಪ್ರಕಟಣೆಯಿಂದ 'ತಾಯಿ' ಎರಡನೆಯ ಮುದ್ರಣ ಕಂಡಿದ್ದು (೪೨/೮ ಅಗಸ್ಟ ೧೯೦೬)ತಿಳಿದು ಬರುತ್ತದೆ. ಇದರೊಂದಿಗೆ 'ಮರಾಠಿ ಕಲಿಯುವರಿಗೇನೂ ಕಮ್ಮಿ ಇರಲಿಲ್ಲ ಹಾಗೂ ಪುಸ್ತಕ ಬರೆಯುವವರಿಗೂ ಕಮ್ಮಿ ಇರಲಿಲ್ಲವೆಂದೇ ಹೇಳಬೇಕು. ೧೯೦೮ ಜನೇವರಿಯಲ್ಲಿ ನ. ಸು. ಬಾಗಲ, ಸ್ಕೂಲ ಮಾಸ್ತರ ಕಡಕೋಳ ತಾ. ಸಿರಹಟ್ಟಿ ಜಿ. ಧಾರವಾಡ ಇವರ 'ಮರಾಠಿ ಶಿಕ್ಷಕ' ಪ್ರಕಟವಾದರೆ, ೧೯೧೮ರಲ್ಲಿ ಗಳಗನಾಥ ಸುರಸ ಗ್ರಂಥಮಾಲೆಯಿಂದ, ಗಳಗನಾಥರ 'ಮರಾಠರ ಅಭ್ಯುದಯ' ಎಂಬ ಪುಸ್ತಕ ಪ್ರಕಟವಾಗಿದೆ.

೧೯-೧೨-೧೯೦೭ ರ ನರಹರ ನಾರಾಯಣ ದಾತಾರ ಮ್ಯಾಪ ಕಾಂಟ್ರಾಕ್ಟರ್ ಪುಣೆ ಇವರ ವಿನಂತಿ ಅರ್ಜಿ ಏನೆಂದರೆ 'ಮುಂಬಯಿಯ ಸರಕಾರಿ ಬುಕ್ ಡೀಪೋ ಮುಚ್ಚಿದ ಮೇಲೆ ಡೀಪೋದಲ್ಲಿದ್ದ ಯಾವತ್ತೂ ನಕಾಶೆಗಳನ್ನು ತಾನೇ ಕೊಂಡಿರುವ ಕಾರಣದಿಂದಾಗಿ ಮುಂಬಯಿ ಇಲಾಖೆಯೊಳಗಿನ ಯಾವತ್ತೂ ಶಾಲೆಗಳಿಗೆ ಅವಶ್ಯವೆನಿಸುವ ನಕಾಶೆಗಳನ್ನು ತನ್ನಿಂದಲೇ ಖರೀದಿಸಬೇಕಾಗಿ ಆದೇಶಿಸಬೇಕು' ಎಂಬುದು; ಅಂದರೆ ಮುಂಬಯಿಯ ಸರಕಾರಿ ಬುಕ್ ಡೀಪೋ ಮುಚ್ಚಿ ಹೋದುದು ತಿಳಿದು ಬರುತ್ತದೆ.

೧೯೧೨ ಜನೇವರಿಯಿಂದ ಉಪೇಂದ್ರ ಶರ್ಮಾ ತೋಳಮಟ್ಟಿಯವರು ಬರೆದ 'ಅಲಂಕಾರ ದರ್ಪಣ' ಎಂಬ ಲೇಖನಗಳು ಹಲವಾರು ಕಂತುಗಳಲ್ಲಿ ಪ್ರತಿ ತಿಂಗಳೂ ಪ್ರಕಟಗೊಂಡಿವೆ.

ಮ. ಪ್ರ. ಪೂಜಾರರ ಲೇಖನಗಳಂತೂ ಅತೀ ಮಹತ್ವದ್ದಾಗಿ ಕಾಣುತ್ತವೆ. ೧೯೧೪ ಮಾರ್ಚ ಪು ೫೦, ಸಂ ೩, ಪುಟ ೯ರಲ್ಲಿಯ 'ಯುದ್ಧವು ಜನಾಂಗದ ಅವನತಿಯ ಮುಖ್ಯ ಕಾರಣ' ಎಂಬ ಲೇಖನ ಅವರ ವೈವಿಧ್ಯಮಯ ಜ್ಞಾನ ಸಂಪತ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ೧೯೧೩ ಅಕ್ಟೋಬರ ಪು ೪೯, ಸಂ ೧೧, ಪುಟ ಸಂಖ್ಯೆ ೯ರಿಂದ ೧೯ ರಲ್ಲಿರುವ ಪೂಜಾರರು 'ಮಹಾಲಕ್ಷ್ಮಿ' ವಸ್ತು ವೈಶಿಷ್ಟ್ಯದಿಂದಾಗಿ ವಿಶೇಷವೆನಿಸುತ್ತದೆ. ೧೯೧೪ ಎಪ್ರೀಲ್ ಪು ೫೦, ಸಂ ೪, ಪುಟ ೧೮-೨೪ ರಲ್ಲಿಯ 'ವನಸ್ಪತಿಗಳು ಸಜೀವಗಳೆಂಬ ವಿಷಯದಲ್ಲಿ ಪ್ರಾಚೀನರ ವಿಚಾರವು' ಮತ್ತು ಇದೇ ಸಂಚಿಕೆಯ ಪುಟ ೯ ರಿಂದ ೧೩ರಲ್ಲಿಯ 'ಕನ್ನಡ ಭಾಷೆಯ ವಿಶೇಷ ವಿಷಯಗಳು' ಎಂಬ ಲೇಖನಗಳು ವೈಜ್ಞಾನಿಕವಾಗಿ ಸಂಶೋಧನಾತ್ಮಕವಾಗಿರುವುದು. ೧೯೧೪ ಜೂನ ಪು ೫೦, ಸಂ ೬, ಪುಟ೫ ರಿಂದ ೮ ರವರೆಗಿರುವ ಲೇಖನ 'ಸನ್ಯಾಸವು ಜನಾಂಗದ ಅವನತಿಯ ಒಂದು ಕಾರಣ' ಇದು ಸೃಜನಶೀಲ ಮತ್ತು ಚಿಂತನಪರ ಮನಸ್ಸಿಗೆ ಹಿಡಿದ ಕನ್ನಡಿಯಂತಿದೆ. ೧೯೧೪ ಅಗಸ್ಟ, ಪು ೫೦, ಸಂ ೮, ಪುಟ ೯-೧೫ ರಲ್ಲಿರುವ ಲೇಖನ 'ಪ್ರಕೃತಿಯ ವರ್ಣವೈಚಿತ್ರ್ಯವು' (೨೪-೬-೧೯೧೪ ಬುಧುವಾರ ದಿವಸ ಟ್ರೇನಿಂಗ ಕಾಲೇಜದಲ್ಲಿ ಉಪನ್ಯಾಸ ಮಾಡಿದ್ದು)' ಎಂಬ

ಈ ಲೇಖನವೂ ಮ.ಪ್ರ.ಪೂಜಾರರ ಸಂಶೋಧನಾತ್ಮಕ, ಪ್ರಗತಿಪರ ಆಲೋಚನಾ ಮನೋಭಾವದ ಪ್ರತೀಕವಾಗಿದೆ.

ಹಾಗೆಯೇ ೧೯೨೨ರ ಜನೇವರಿ ೫೮-೧೨ರ ಸಂಚಿಕೆಯಲ್ಲಿ ಶ್ರೀ ಮಹಾದೇವ ಪ್ರಭಾಕರ ಪೂಜಾರರು ರಚಿತ 'ರಾಮಾಶ್ವಮೇಧ ಸಾರಸಂಗ್ರಹ" ಹಾಗೂ "ಪಂಚತಂತ್ರಸಾರ" ಈ ಎರಡೂ ಪುಸ್ತಕಗಳನ್ನು ಸೆಕೆಂಡರಿ ಸ್ಕೂಲ ಮತ್ತು ಟ್ರೇನಿಂಗ್ ಕಾಲೇಜುಗಳಿಗಾಗಿ ಟೆಕ್ಸಬುಕ್ಕಿನಂತೆ ಉಪಯೋಗಿಸಲಿಕ್ಕೆ ಮಂಜೂರಾಗಿದೆ. ೧೯೨೩ರಲ್ಲಿ ಶ್ರೀ ಮ ಪ್ರ ಪೂಜಾರ, ಕನ್ನಡ ಪಂಡಿತ ಟ್ರೇ. ಕಾ. ಫಾರ್ ಮೆನ್ ಧಾರವಾಡ ಇವರಿಂದ 'ಸತ್ಕಥಾಲಾಪ' ಎಂಬ ಚಿಕ್ಕ ಕಥೆಗಳ ಸಂಗ್ರಹ ಮುದ್ರಣವಾಗಿದೆ. ೧೨೮+೮ ಪುಟಗಳ, ಮಹಾವೀರ ಪ್ರೆಸ್ಸಿನಲ್ಲಿ ಮುದ್ರಿತಗೊಂಡ ಈ ಪುಸ್ತಕ ಚಿಕ್ಕಮಕ್ಕಳ ನೀತಿಶಿಕ್ಷಣಕ್ಕೆ ಬಹು ಉಪಯುಕ್ತವಾದ ಪುಸ್ತಕವಿದು. ಪುಸ್ತಕ ದೊರೆಯುವ ಸ್ಥಳ ಕ.ವಿ.ಸಂಘ[೧೩] ೧೯೩೧ರಲ್ಲಿ ಮ. ಪ್ರ. ಪೂಜಾರ, ಕನ್ನಡ ಪಂಡಿತ, ಟ್ರೇನಿಂಗ ಸ್ಕೂಲ, ಧಾರವಾಡ ಇವರಿಂದ 'ನುಡಿಗನ್ನಡಿ- ಭಾಗ ೨' ಪುಸ್ತಕವು ರಚಿಸಲ್ಪಟ್ಟಿದೆ. ಪ್ರಾಥಮಿಕ ಶಾಲೆಗಳ ೪ ಮತ್ತು ೫ ತರಗತಿಗಳಿಗಾಗಿ ವ್ಯಾಕರಣದ ಎಲ್ಲ ಅಂಶಗಳನ್ನು ಸ್ಥೂಲಮಾನದಿಂದ ಕಲಿಸುವುದಕ್ಕಾಗಿ ಉಪಯುಕ್ತವಾದ ಈ ಪುಸ್ತಕದ ಬೆಲೆ ಕೇವಲ ೪ ಆಣೆ ಯಾಗಿದ್ದು, ಎಲ್ಲ ಬುಕ್‌ಡಿಪೋಗಳಲ್ಲಿ ಮತ್ತು ಗ್ರಂಥಕರ್ತರಲ್ಲಿ ಲಭ್ಯವಿತ್ತು. ಇದೇ ೧೯೩೧ರ ಜುಲೈನಲ್ಲಿ ಮ. ಪ್ರ. ಪೂಜಾರರ ಚಾರಿತ್ರಿಕ ಮಹಾಪುರುಷರ ಚರಿತ್ರೆಯನ್ನು ಹೇಳುವ ಮತ್ತೊಂದು ಪುಸ್ತಕ 'ಸದ್ಗುಣಾದರ್ಶ' ಪ್ರಕಟವಾಗಿದೆ.

೧೯೧೨ ರಿಂದಿಚೆಗೆ ತ. ನಾ. ಅಮ್ಮಿನಭಾವಿಯವರ ಹಲವಾರು ಲೇಖನಗಳು ಪ್ರಾಥಮಿಕ ಶಿಕ್ಷಣದ ಕಲಿಕೆ ಮತ್ತು ಬೋಧನೆಗೆ ಹಾಗೂ ಪ್ರತಿಭೆಯ ಗಳಿಕೆಗೆ ಸಹಾಯವಾಗುವಂಥವಾಗಿವೆ.

೧೯೧೬ ಫೇಬ್ರುವರಿ, ೫೨-೨, ಪುಟ೭೯ರ ಪ್ರಕಾರ ರಲ್ಲಿ ಆರ್.ಎಮ್.ಜೋಶಿ (ಎಂಎ, ಎಲ್.ಎಲ್.ಬಿ.) ಇವರು ಬರೆದ 'ಕನ್ನಡ ಆರೋಗ್ಯ ವಿಜ್ಞಾನ' ಎಂಬ ಪುಸ್ತಕ ಶಿಕ್ಷಣ ಇಲಾಖೆಯಿಂದ ೬ ಮತ್ತು ೭ನೆಯತರಗತಿಗೆ ಓದಿಸಲು ಮಂಜೂರಾಗಿದೆ.

೧೯೧೭ರ ಜೂನ್‌ನ ೫೩-೬ ಸಂಚಿಕೆಯಲ್ಲಿ ಆಯ್.ಪಿ.ನಿಂಬಾಳಕರರ 'ಮುಂಬಯಿ ಇಲಾಖೆಯ ಭೂಗೋಲ', ಜಿ.ಎಚ್. ಹೊನ್ನಾಪೂರಮಠ. ವಕೀಲರ 'ಬಾಲಭಾರತ', ಅಲವರಯ್ಯಂಗಾರರ ಅಂಕಗಣಿತ ೨ನೆಯ ಇಯತ್ತೆ, ಎಚ್.ವಿ.ಗುಣಾಜಿಯವರ 'ಸದ್ಬೋಧ ಸಂಗ್ರಹ', ಮಹಬೂಬ ಅಲ್ಲಿಖಾನ ಬಿರಾದಾರರವರ 'ಮುಂಬಯಿ ಕರ್ನಾಟಕದ ಸಾಂಪತ್ತಿಕ ಸ್ಥಿತಿ' ಮುಂತಾದ ಹನ್ನೊಂದು ಪುಸ್ತಕಗಳ ಪಟ್ಟಿಯನ್ನು ಕನ್ನಡ ಸಾಲೆಗಳ ಲಾಯಬ್ರರಿಗೂ ಮತ್ತು ಇನಾಮಿಗೂ ಮಂಜೂರು ಮಾಡಲಾಗಿದ್ದನ್ನು ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರೇ ಹೇಳುತ್ತಾರೆ. ೧೯೧೭ರಲ್ಲಿ ಎನ್.ಡಿ. ಮುಳಬಾಗಲ ಅವರು ಬರೆದ 'ನುಡಿಗಟ್ಟು' ಎಂಬ ಕನ್ನಡ ಸಂಕ್ಷಿಪ್ತ ಶಾಲಾ

ವ್ಯಾಕರಣ ಪುಸ್ತಕ ೭ ಆಣೆ ೬ ಪೈಸೆ ಮುಖಬೆಲೆಯೊಂದಿಗೆ ಜೆ. ಈ. ಕೊವರ್‍ನಟನ್ ಸಾ.ಶಿ.ಇ. ನಿರ್ದೇಶಕರು ಇವರಿಂದ ಮಂಜೂರಿಗೊಂಡಿದೆ.

೧೯೨೧ರ ಡಿಸೆಂಬರ ತಿಂಗಳಿನ ಸಂ.೫೮–೯ ಶಾಲಾ ಪತ್ರಕದಲ್ಲಿ ಟ್ರೇನಿಂಗ ಕಾಲೇಜಿನ ಅಧ್ಯಯನಕ್ಕೆ ಮತ್ತು ಶಾಲೆಗಳ ಇನಾಮು ಮತ್ತು ಗ್ರಂಥಾಲಯಗಳಿಗಾಗಿ ರೆವರೆಂಡ್ ಎಫ್.ಕಿಟೆಲ್ ರ 'ಶಬ್ದಮಣಿ ದರ್ಪಣ'ವನ್ನು ಇಟ್ಟಿದ್ದಾರೆ. ಕಿಟೆಲ್ಲರು ಇದನ್ನು ರಸೆಲ್ಲರಿಗೆ ಸಮರ್ಪಿಸಿ ಕೃತಾರ್ತರಾಗಿದ್ದಾರೆ. ಓ.ಟಿ. ಶರ್ಮಾರ 'ಜ್ಯೂಲಿಯಸ್ ಸೀಝರ್' ಪುಸ್ತಕವನ್ನು ಗ್ರಂಥಾಲಯ ಮತ್ತು ಇನಾಮಿಗಾಗಿ ಇರಿಸಲಾಗಿದೆ.

ಇದೇ ೧೯೨೩ರಲ್ಲಿ ಕರ್ನಾಟಕ ಹಿತೈಸಿನಿ ಗ್ರಂಥ ಮಾಲೆಯ ಪ್ರಥಮ ಪುಷ್ಪವಾಗಿ 'ಸಚಿತ್ರ ಸಾವಿತ್ರೀ ಸತ್ಯವಾನ' ಪುಸ್ತಕವು ಪ್ರಾಥಮಿಕ ಶಾಲೆಗಾಗಿ ಮಂಜೂರಾಗಿದೆ. ಇದರ ಕರ್ತೃಗಳಾದ ಶ್ರೀ ಕರಡಿಯವರು ಧಾರವಾಡದವರಾದರೂ ಅವರ ಈ ಪುಸ್ತಕ ಬೆಂಗಳೂರು, ಮಂಗಳೂರು, ಮೈಸೂರು ವಿದ್ವಾಂಸರು ಮೆಚ್ಚಿದಂಥ ಕೃತಿಯಾಗಿತ್ತು ಎಂದು ಹೇಳಿದ್ದನ್ನು ನೋಡಿದರೆ ಕರಡಿಯವರು ಎಂಥ ಪ್ರೌಢ ಬರಹಗಾರರಾಗಿದ್ದರು ಎಂಬುದು ವಿಧಿತವಾಗುತ್ತದೆ.[೧೪]

ನೋಟೀಸು. ೩.

ಮೆ ॥ ಡಾಯರೆಕ್ಟರ ಆಫ ಪಬ್ಲಿಕ್ ಇನ್‌ಸ್ಟ್ರಕ್ಶನ್ ಮುಂಬಯಿ ಇವರಿಂದ ಸ. ೧೯೨೩–೨೪ನೇ ಸಾಲಿನಲ್ಲಿ ಮಂಜೂರಾದ ಪುಸ್ತಕಗಳು.

ಅ. ಸಂಖ್ಯೆ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಯಾತಕ್ಕೋಸ್ಕರ ಮಂಜೂರಾಗಿವೆ.
೧	ನೀತಿಮಂಜರಿ	ಜಿ. ಎಚ್. ಹೊನ್ನಾಪುರಮಠ	ಎ. ವ್ಹಿ. ಸ್ಕೂಲ ಹಾಗು ಪ್ರಾಥಮಿಕ ಶಾಲೆಗಳ ಅಧಿಕ ಪಠ್ಯಪುಸ್ತಕ
೨	ಬಾಲರಾಮಾಯಣ	ಸದರ	ಪ್ರಾಥಮಿಕ ಶಾಲೆಗಳ ೪–೫ ಇಯತ್ತೆಗಳ ಸಲುವಾಗಿ
೩	ಬಾಲಭಾರತ	ಸದರ	ಪ್ರಾಥಮಿಕ ಶಾಲೆಗಳ ೬–೭ನೇ ಇಯತ್ತೆಗಳ ಸಲುವಾಗಿ
೪	ಮಹಮ್ಮದಕವನ ಇವರ ಚರಿತ್ರ	ಎಮ್. ಎಸ್. ಪುಟ್ಟಣ್ಣ	ಪ್ರಾಥಮಿಕ ಶಾಲೆಗಳ ಇನಾಮು ಹಾಗು ಲಾಯಬ್ರರಿ ಸಲುವಾಗಿ
೫	ಸರ್ವಜ್ಞ ವಚನಗಳು	ಪಿ. ಡಿ. ಉತ್ತಂಗಿ	ಪ್ರಾಥಮಿಕ ಶಾಲೆಗಳ ಲಾಯಬ್ರರಿ ಸಲುವಾಗಿ
೬	ಆರೋಗ್ಯಶಾಸ್ತ್ರಭಾಗ ೧	ಜಿ. ಎಮ್. ದೇಶಮುಖ	ಟ್ರೇನಿಂಗಕಾಲೇಜ ಹಾಗು ಪ್ರಾಥಮಿಕಶಾಲೆಗಳ ಸಲುವಾಗಿ ಪಠ್ಯಪುಸ್ತಕ
೭	ಭಾಗವತಾಮೃತ	ವೆ. ಶಿ. ಕುಲಕರ್ಣಿ ಗಳಗನಾಥ	ಲಾಯಬ್ರರಿಗಳ ಸಲುವಾಗಿ
೮	ಪದ್ಮಿನಿ	ಎಸ್ ವ್ಹಿ ಕರಡಿ	ಹಾಯಸ್ಕೂಲಗಳ ಸಲುವಾಗಿ ಪಠ್ಯಪುಸ್ತಕ
೯	ಬೀರಬಲ್ಲನ ಚರಿತ್ರೆಯೂ ಕಥೆಗಳೂ	ಆರ್ ಎಚ್ ದೇಶಪಾಂಡೆ ಎಮ್. ಎ.	ಇನಾಮು ಹಾಗು ಲಾಯಬ್ರರಿಗಳ ಸಲುವಾಗಿ
೧೦	ಹಿಂದೂಸ್ಥಾನದ ಭೂಗೋಲ	ವ್ಹಿ. ಎಸ್. ಮುಗದಾಲ	ಪ್ರಾಥಮಿಕ ಶಾಲೆಗಳ ಸಲುವಾಗಿ ಪಠ್ಯಪುಸ್ತಕ
೧೧	ಭಾರತಪ್ರೇಮ	ಕೆ ಬಿ. ರಾಮಕೃಷ್ಣ	ಇನಾಮು ಹಾಗು ಲಾಯಬ್ರರಿಗಳ ಸಲುವಾಗಿ
೧೨	ಕನ್ನಡ ವ್ಯಾಕರಣ	ಜಿ. ಕೆ. ಕರಿವಾಳ	ಪ್ರಾಥಮಿಕ ಶಾಲೆಗಳ ಸಲುವಾಗಿ ಪಠ್ಯಪುಸ್ತಕ

೧೩	ಸಾವಿತ್ರಿ ಸತ್ಯವಾನ	ಎಸ್. ವ್ಹಿ. ಕಂಠಿ	ಹಾಯಸ್ಕೂಲಗಳ ಸಲುವಾಗಿ ಪಠ್ಯಪುಸ್ತಕ
೧೪	ಬಾಲಭಾಗವತ	ಡಿ. ಎಚ್. ಕೊಣ್ಣೂರಮಠ	ಪ್ರಾಥಮಿಕಶಾಲೆಗಳ ಇನಾಮಿನ ಸಲುವಾಗಿ
೧೫	ಧ್ರುವ	ಸದರ	ಸದರ
೧೬	[illegible]	ಸದರ	ಸದರ
೧೭	[illegible]	ಮ್. ಬಿ. ಪೂಜಾರ	ಪ್ರಾಥಮಿಕ ಶಾಲೆಗಳ ಇನಾಮು ಹಾಗು ಲಾಯಬ್ರರಿಗಳ ಸಲುವಾಗಿ
೧೮	ಸರ ಜೆ. ಸಿ. ಬೋಸರವರ ಚರಿತ್ರೆ	ಕೆ. ಜಿ ಸಂಗಮ	ಪ್ರಾಥಮಿಕ ಮತ್ತು ಹಾಯಸ್ಕೂಲುಗಳ ಸಲುವಾಗಿ ಇನಾಮಿನ ಪುಸ್ತಕ
೧೯	ಆರೋಗ್ಯಶಾಸ್ತ್ರ ಭಾಗ ೨	ಜಿ ಎಮ್. ದೇಶಮುಖ	ಟ್ರೇನಿಂಗಕಾಲೇಜ ಹಾಗು ಪ್ರಾಥಮಿಕಶಾಲೆಗಳ ಪಠ್ಯಪುಸ್ತಕ
೨೦	ದಮಯಂತಿ	ಬಗವಾರ್ಯ ಬಾದಿವಾಳ	ಪ್ರಾಥಮಿಕ ಶಾಲೆಗಳ ಇನಾಮಿನ ಸಲುವಾಗಿ
೨೧	ಮಾನವಧರ್ಮ	ಸದರ	ಸದರ
೨೨	ಶ್ರೀ ರಾಮದಾಸ ಸ್ವಾಮಿಗಳ ಚರಿತ್ರೆ	ಡಿ. ಎಚ್. ಕೊಣ್ಣೂರಮಠ	ಹಾಯಸ್ಕೂಲ ಹಾಗು ಪ್ರಾಥಮಿಕ ಶಾಲೆಗಳ ಇನಾಮಿನ ಸಲುವಾಗಿ
೨೩	ಸಾವಿತ್ರಿ	ಸದರ	ಪ್ರಾಥಮಿಕಶಾಲೆಗಳ ಇನಾಮಿನ ಸಲುವಾಗಿ
೨೪	ದಕ್ಷಯಜ್ಞ	ಡಿ. ಕೆ. ರಂಗಾಪುರ	ಸದರ
೨೫	ಅರುಂಧತಿ	ಸದರ	ಸದರ
೨೬	[illegible]	ಎಮ್. ಎ. ಶ್ರೀನಿವಾಸಾಚಾರ್ಯ	ಹಾಯಸ್ಕೂಲಗಳ ಇನಾಮಿನ ಸಲುವಾಗಿ
೨೭	ಶಿಶುಸಂಗೋಪನ	ಸದರ	ಹೆಣ್ಣುಮಕ್ಕಳ ಕನ್ನಡಶಾಲೆಗಳ ಇನಾಮು, ಲಾಯಬ್ರರಿ ಮತ್ತು ಶಾಸ್ತ್ರೀಯ ವಿಷಯ, ಆರೋಗ್ಯಶಾಸ್ತ್ರದ ಸಲುವಾಗಿ
೨೮	[illegible]	ಜೆ ವ್ಹಿ. ಗಾಣಿ	ಹಾಯಸ್ಕೂಲಗಳಲ್ಲಿ ಭಾಷಾವಿಷಯದ ಸಲುವಾಗಿ ಪಠ್ಯಪುಸ್ತಕ.
೨೯	ರೂಢಿಗಳು	ಟಿ ಎಸ್. ಅಮ್ಮಣಭಾವಿ	ಟ್ರೈನಿಂಗ ಸಂಸ್ಥೆಗಳ ಲಾಯಬ್ರರಿಗಳ ಸಲುವಾಗಿ

Dharwar
Trg School
25-6-24.

Sd/ **H. G. Deshpande,**

Head Master.

ಹೀಗೆ ಪುಸ್ತಕ ಮತ್ತು ಪಠ್ಯಪುಸ್ತಕಗಳ ರಾಶಿಯೇ ಇದೆ. ೧೯೨೫ರ ಮೇನಲ್ಲಿ ವಿ.ಎನ್.ಮಗದಾಳರ 'ಪ್ರಾಚೀನ ಹಿಂದುಸ್ಥಾನ' ಪ್ರಕಟವಾಗಿದೆ. ಹನುಮಂತರಾವ ದೇಶಪಾಂಡೆಯವರ 'ಸಂಸಾರ ಸುಖ'(೨ನೇ ಆವೃತ್ತಿ) ೩೦-೧೧-೧೯೨೫ ರಂದು ಪ್ರಕಟವಾಗಿದೆ. 'ಗಣಿತಾದರ್ಶ' ೨ನೆಯ ಇಯತ್ತೆಗಾಗಿ, ಶ್ರೀ ಎಸ್. ಆರ್. ತಟ್ಟಿ ಮತ್ತು ಜೋಶಿಯವರಿಂದ ರಚಿತವಾಗಿದೆ.[೧೫] ೧೯೩೧ ರಲ್ಲಿ ಆರ್. ಆಳ್ವಾರರವರ 'ಪ್ರೌಢ ಅಂಕಗಣಿತ', ನರಸಿಂಹಾಚಾರ್ಯ ಪುಣೇಕರರ 'ಬಾಲರಂಜನ', ಬಿ. ವಿ. ಆಲೂರರವರ 'ಕರ್ನಾಟಕದ ವೀರ ರತ್ನಗಳು', ದತ್ತಾತ್ರೇಯ ಮುಂತಾದ ಪುಸ್ತಕಗಳು ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಮಾನ್ಯಮಾಡಲ್ಪಟ್ಟಿವೆ.

೧೯೩೧ರ ಡಿಸೆಂಬರ ನಲ್ಲಿ ಶಿಕ್ಷಣ ಇಲಾಖೆಯಲ್ಲಿ ಮಹಾನ್ ಲೇಕಕರ ಪುಸ್ತಕಗಳು ಪಠ್ಯಪುಸ್ತಕಗಳಾಗಿ ಇಡಲ್ಪಟ್ಟಿವೆ. ಡಿ.ವಿ.ಗುಂಡಪ್ಪ ಅವರ 'ಶ್ರೀ ವಿದ್ಯಾರಣ್ಯ ವಿಜಯ' ಮತ್ತು 'ಗೋಪಾಲಕೃಷ್ಣ ಗೋಖಲೆಯವರ ಜೀವನಚರಿತ್ರೆ, ಉಪನ್ಯಾಸಗಳು(೬ನೆಯ ಆವೃತ್ತಿ ೧೯೩೦), ಎಮ್. ರಾಮರಾವ ಮತ್ತು ಯು. ಮಂಗೇಶ ಅವರ 'ಪ್ರೌಢ ಪಾಠ ಮಾಲಿಕೆ ಭಾಗ ೨ (ಮೊದಲನೆಯ ಆವೃತ್ತಿ ೧೯೩೧), ಕೆ.ಪಿ. ಪದ್ಮನಾಭಪ್ಪ ಮತ್ತು ಶ್ರೀನಿವಾಸ ಕಿಣಿಯವರ 'ನೂತನ ಭೂ ವರ್ಣನೆ' ಭಾಗ ೧, ೨, ಮತ್ತು ೩ (ಮೊದಲ ಆವೃತ್ತಿ ೧೯೩೦)– ಈ ಎಲ್ಲ ಪುಸ್ತಕಗಳು ಪ್ರಾಥಮಿಕ, ಮಾಧ್ಯಮಿಕ ಮತ್ತು ಟ್ರೇನಿಂಗ ಸಂಸ್ಥೆಗಳ ಪಠ್ಯಪುಸ್ತಕಗಳಾಗಿ ಮಂಜೂರಾಗಿವೆ.

ಇದರೊಂದಿಗೆ ಇನ್ನೂ ಕೆಲವು ಪುಸ್ತಕಗಳು ಇವೆಯಾದರೂ ಅವು ಲೈಬ್ರರಿಗಾಗಿ, ಪ್ರಾಯ್ಜಗಾಗಿ ಮತ್ತು ಹೆಚ್ಚುವರಿ ಓದಿಗಾಗಿ ಮಂಜೂರಿಯಾಗಿವೆ.[೧೬] ಅಲ್ಲದೆ ಬಿ.ಎಸ್. ಪುರೋಹಿತ ಅವರು ಬರೆದ ಅಂಕಗಣಿತದ ಪುಸ್ತಕಗಳು ೧-೪ನೆಯ ಇಯತ್ತೆಗಾಗಿ (ಭೂಮಿತಿ, ಜಮಾಖರ್ಚು ಸಹಿತ), ೨- ೩ನೆಯ ಇಯತ್ತೆಗಾಗಿ (ಭೂಮಿತಿ ಸಹಿತ), ೩- ೨ನೆಯ ಇಯತ್ತೆಗಾಗಿ, ವಿ. ಎನ್. ಮಗದಾಳ ಕೃತ 'ಭೂಗೋಲ' ಪಠ್ಯಗಳಾಗಿವೆ.[೧೭]

೧೯೩೨ರಲ್ಲಿ ಶ್ರೀ. ನಾ. ಶ್ರೀ. ಪುರೋಹಿತ ಅವರ 'ಕರ್ನಾಟಕದ ವರ್ಣನೆಯೂ ಇತಿಹಾಸವೂ' ಎಂಬ ಪುಸ್ತಕ ೪ನೆಯ ಇಯತ್ತೆಗಾಗಿ ಬರೆಯಲ್ಪಟ್ಟಿದೆ. ಇದು ಚಿತ್ರ, ನಕಾಶೆಗಳಿಂದ ಕೂಡಿದೆ. ಇದೇ ೪ನೆಯ ಇಯತ್ತೆಗಾಗಿಯೇ ೧೯೩೨ರ ನವೆಂಬರ/ಡಿಸೆಂಬರನಲ್ಲಿ ಎನ್.ಪಿ ಮೋಡಕರ 'ಹಿಂದುಸ್ಥಾನದೊಳಗಿನ ಮುಸಲ್ಮಾನರ ಆಳ್ವಿಕೆ (ಒಂದನೆಯ ಆವೃತ್ತಿ), ಎಚ್. ಜಿ. ಬೆಂಗೇರಿ, ಎಸ್. ಎಮ್. ಕರ್ಜಗಿ ಮತ್ತು ಡಿ. ಆರ್. ಕುಂದವಾಡ ಅವರ 'ಕರ್ನಾಟಕದ ಇತಿಹಾಸ' (ಒಂದನೆಯ ಆವೃತ್ತಿ) ನಾಲ್ಕನೆಯ ತರಗತಿಗಾಗಿ, ಎಚ್. ಆರ್. ಕುಲಕರ್ಣಿಯವರ 'ದೇಶಿಯ ಜಮಾ ಖರ್ಚು ಪ್ರವೇಶ', ವಾಯ್. ನಾಗೇಶ ಶಾಸ್ತ್ರಿಯವರ 'ಕರ್ನಾಟಕ ರಘುವಂಶ'(ಒಂದನೆಯ ಆವೃತ್ತಿ), ಕೆ.ಜಿ. ಕುಂದಣಗಾರ ಇವರ 'ಇಂದ್ರಿಯ ವಿಜ್ಞಾನ'(ಒಂದನೆಯ ಆವೃತ್ತಿ), ಮತ್ತು ದ. ಬಾ. ಬರ್ವೆಯವರ 'ಶರೀರ ಸಂಗೋಪನಾ ಶಾಸ್ತ್ರ' (ಆರೋಗ್ಯಶಾಸ್ತ್ರಕ್ಕೆ) ಇವು ಪಠ್ಯಪುಸ್ತಕಗಳಾಗಿ ಮತ್ತು ಇನ್ನೂ ಹಲವಾರು ಪುಸ್ತಕಗಳು ಹೆಚ್ಚುವರಿ ಓದಿಗಾಗಿ ಮತ್ತು ಬಹುಮಾನಕ್ಕಾಗಿ ಬಳಸಲು ಮಂಜೂರಿ ಪಡೆದಿವೆ.[೧೮]

೧೯೩೦ರಲ್ಲಿ ರಾವಸಾಹೇಬ ಎಫ್.ಜಿ.ಹಳಕಟ್ಟಿ ಇವರು ಬರೆದು ಪ್ರಸಿದ್ಧ ಪಡಿಸಿದ ವಚನಕಾರರಿಗೆ ಮತ್ತು ವಚನ ಸಾಹಿತ್ಯಕ್ಕೆ ಸಂಬಂಧಿಸಿದ ೧೭ ಪುಸ್ತಕಗಳ ಪಟ್ಟಿಯಲ್ಲಿ **'ಚನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಜೀವನ ಚರಿತ್ರೆ'**- ೧೯೩೦, ಬೆಲೆ ೪ ಆಣೆ – ಈ ಪುಸ್ತಕವೂ ಸೇರಿದೆ. ಇದೇ ಚನ್ನಬಸಪ್ಪವನರ ಬಗೆಗೆ ಬರೆದ ಮೊದಲ ಪುಸ್ತಕವಾಗಿದೆ.[೧೯] ಹದಿನೆಂಟನೆಯ ಶತಮಾನದ ಮಧ್ಯದಲ್ಲಿದ್ದು ಸಾಧನೆಗೈದವರು ಹತ್ತೊಂಭತ್ತನೆಯ ಶತಮಾನದಲ್ಲಿ ಪುಸ್ತಕಗಳಿಗೆ ವಿಷಯವಸ್ತುವಾಗಿದ್ದಾರೆ.

ಶ್ರೀ ಮೋಡಕ ಅವರಿಂದ 'ಮಹಾರಾಷ್ಟ್ರ-ಇಂಗ್ಲಿಷರ ಆಳಿಕೆ' ಎಂಬ ಪಠ್ಯಪುಸ್ತಕವನ್ನು ೬ನೆಯ ಇಯತ್ತೆಗಾಗಿ, ಶ್ರೀ ಬ.ದು. ಹಿರೇಮಠ ಇವರು 'ಗಣಿತ ಶಿಕ್ಷಕ' ಎಂಬ ಪುಸ್ತಕವನ್ನು ಬರೆದಿದ್ದಾರೆ.[೨೦]

೧೯೩೪ರಲ್ಲಿ ಬಾಳಕೃಷ್ಣ ಹಳೇಪೇಟೆಯವರ 'ಹಿಂದೂ ಮುಸಲ್ಮಾನರ ಇತಿಹಾಸ', ಯ ಕೃ ಅಣ್ಣಿಗೇರಿಯವರ 'ವಿಜಾಪೂರ ಜಿಲ್ಲೆಯ ಸಾಮಾನ್ಯ ವರ್ಣನೆಯು' ಪುಸ್ತಕಗಳು ಶಾಲೆಯ

ಉಪಯೋಗಕ್ಕಾಗಿ ಮಂಜೂರಿಗೊಂಡಿವೆ. ಪ್ರೊ. ಸಾಸನೂರಕೃತ 'ಕರ್ನಾಟಕ ಇತಿಹಾಸ ಬೋಧಿನಿ' ಪುಸ್ತಕ ೪ನೆಯ ತರಗತಿಗಾಗಿ, ೧೯೩೬ ಮಾರ್ಚನಲ್ಲಿ ಮಂಜೂರಾಗಿದೆ.

ಶಂ. ಬಾ. ಜೋಶಿಯವರು 'ಕನ್ನಡ ನುಡಿಯ ಹುಟ್ಟು' ಕೃತಿ ರಚಿಸಿದ್ದನ್ನು ೧೯೩೭, ಮಾರ್ಚ ಸಂ ೭೩, ಸಂ ೧೨ ಪತ್ರಿಕೆ ಪ್ರಕಟಿಸುತ್ತದೆ. ಶ್ರೀಮಾನ್ ದೇವುಡು ನರಸಿಂಹಶಾಸ್ತ್ರಿಯವರು ಹೊರಡಿಸುತ್ತಿರುವ 'ನಮ್ಮಪುಸ್ತಕ' ಎಂಬ ಮಾಸಪತ್ರಿಕೆಯೊಳಗಿನ ಒಂದು ಲೇಖನ 'ಕನ್ನಡ ನಾಡಿನ ಇತಿಹಾಸ'ವನ್ನು ಕನ್ನಡ ಪ್ರಾಥಮಿಕ ಶಿಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಪುಟ ೧೪ ರಿಂದ ೨೦ಪುಟಗಳ ವರೆಗೆ ಹಬ್ಬಿರುವ ಈ ಲೇಖನದಲ್ಲಿ ಸಂಶೋಧನಾತ್ಮಕವಾದ ವಿಚಾರಗಳಿವೆ.[೨೧]

೧೯೩೮ರ ಡಿಸೆಂಬರದಲ್ಲಿ ಮ. ಪ್ರ. ಪೂಜಾರ. ಕನ್ನಡ ಪಂಡಿತ ಮತ್ತು ನಾ. ವೆಂ. ಕುರಡಿ, ಹೆ. ಮಾ. ಪ್ರಾ. ಸ್ಕೂಲ. ಧಾರವಾಡ ಇವರಿಬ್ಬರಿಂದ ಮತ್ತೊಂದು ಅತ್ಯಂತ ಬೇಡಿಕೆಯ ಕೃತಿ **'ಕನ್ನಡ ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ'** ಸಂಪಾದನೆಗೊಂಡಿದೆ. ಉತ್ತಮ ಗ್ರಂಥಗಳೊಳಗಿನ ಒಳ್ಳೆಯ ಭಾಗಗಳನ್ನು ಆರಿಸಿ, ಬೇರೆ ಒಳ್ಳೆಯ ಲೇಖನಗಳನ್ನು ಸೇರಿಸಿ ರಚಿಸಿದ ೧೫ ವಾಚನ ಪಾಠ ಮತ್ತು ೨೪ ಕವಿತಾಪಾಠಗಳ ಸಂಗ್ರಹ ಪುಸ್ತಕವಾಗಿದೆ. ಮುಂಬರುವ ವರ್ಷದಲ್ಲಿ ಪ್ರಾಥಮಿಕ ಶಾಲೆಯ ಲೀವಿಂಗ ಸರ್ಟಿಫೀಕೆಟ್ ಪರೀಕ್ಷೆಯ ಭಾಷಾಭ್ಯಾಸಕ್ಕೆ ಒಂದು ಯೋಗ್ಯವಾದ ಪುಸ್ತಕ ದೊರೆತಂತಾಯಿತೆಂದು ಪತ್ರಿಕೆ ಸಂಪಾದಕರನ್ನು ಅಭಿನಂದಿಸಿದೆ.[೨೨] ಇದೇ ಸಂದರ್ಭದಲ್ಲಿ ಜಿ.ವಿ.ಚುಳಕಿಯವರ– 'ಹರಿಜನ್ನಾವರ', 'ಕನ್ನಡದ ಕಿಡಿಗಳು', 'ಕವಿಕಾವ್ಯಮಹೋನ್ನತಿ', 'ಕಲ್ಕಿ', 'ಹೆಣ್ಣಿನ ತೊಡಕು', 'ಮೂರ್ತಿ ಮತ್ತು ಕಾಮಕಸ್ತೂರಿ', 'ಕಲೋಪಾಸಕ', 'ಎಲೆಕ್ಶನ್', 'ವೀಣಾನಾದ', 'ರಂಗವಲ್ಲಿ', 'ನಿರ್ಭಾಗ್ಯ ಬೋರೆಗೌಡ', ಶ್ರೀ ಎಸ್. ಪಿ. ಪಾಟೀಲರ 'ಹಿಂದುಸ್ತಾನದ ಹೊಸ ರಾಜ್ಯಘಟನೆ'(ಪಠ್ಯ ಪುಸ್ತಕ), ಕೆ. ಬಿ. ಅಂಗಡಿಯವರ 'ಸಚಿತ್ರ ನಿಬಂಧ ಮಾಲಾ', ಹರಿಕೃಷ್ಣ ಶಾನಭಾಗರ 'ಸಂಗೀತ ಆಧುನಿಕ ಸಂಸಾರ' ಮಹಾರುದ್ರಪ್ಪ. ಮಿರ್ಜಿಯವರ 'ಚರಲಿಂಗಸ್ವಾಮಿ', ಶ್ರೀ ಬಸವಾರ್ಯ ಬೂದೀಹಾಳಮಠರ 'ಸುಲಭ ಬಾಲಬೋಧೆ' ಮತ್ತು ಶ್ರೀ ಕ.ರಾ. ಅಡಬಡ್ಡಿಯವರ 'ಕನ್ನಡಿಗರ ಕಥೆ ಅಥವಾ ಕರ್ನಾಟಕದ ಇತಿಹಾಸ'– ಹೀಗೆ ಹದಿನೆಂಟು ಪುಸ್ತಕಗಳು ಶಾಲೆಗಳ ಗ್ರಂಥಾಲಯಕ್ಕಾಗಿ ಮಂಜೂರಿಯಾಗಿವೆ.

ಈ ಪಠ್ಯಪುಸ್ತಕಗಳ ಪ್ರಕಟಣೆ ಮತ್ತು ಅವುಗಳ ವರ್ಣನೆ, ಪರಿಚಯ ಮಾಡುವ ರೀತಿ, 'ಇತಿಹಾಸ ಶೋಧಿಸಿ ಬರೆದಿರುವರು.....', '...ಇದೇ ಪದ್ಧತಿಯಿಂದ ಬರೆದ ಯ. ಕೃ. ಅಣ್ಣಿಗೇರಿಯವರಿಂದಲೇ ಇದನ್ನು ಬರೆಯಿಸಿದೆ....' ಮುಂತಾದ ಹೇಳಿಕೆಗಳನ್ನು ನೋಡಿದರೆ ಇವನ್ನು ಪ್ರಕಾಶಕರು ಮತ್ತು ಮುದ್ರಣಗಾರರು, ಲೇಖಕರಿಂದ ಬರೆಯಿಸಿ, ಅಚ್ಚು ಹಾಕಿಸಿ ಮಾರುವಂತೆ ತೋರುತ್ತದೆ. ೧೯೪೦ರಲ್ಲಿ ಮುಂಬಯಿ ಸರಕಾರದ ಡೈರೆಕ್ಟರ್ ಆಫ್ ಇನ್ಫಾರ್ಮೇಶನ್‌ರವರಿಂದ ಪಠ್ಯ ಪುಸ್ತಕಗಳನ್ನು

ರಚಿಸುವುದು ಮತ್ತು ಆಯ್ಕೆ ಮಾಡುವ ಸಲುವಾಗಿ 'ಪಾಠಪುಸ್ತಕಗಳ ಸಮಿತಿ' ನಿಯಮಿಸಲಾಗುತ್ತದೆ. ಇವರು ಒಂದು ಉಪ ಸಮಿತಿಯನ್ನು ನಿಯಮಿಸಿ, ಅವರಿಗೆ ಪ್ರಾಥಮಿಕ ಶಾಲೆಗಳ ಭಾಷಾ ವಿಷಯಕ ಪಠ್ಯ ಪುಸ್ತಕಗಳನ್ನು ವಿಮರ್ಶಿಸುವ ಕಾರ್ಯವನ್ನು ಒಪ್ಪಿಸುತ್ತಾರೆ. ಗುಜರಾಥಿ, ಕನ್ನಡ ಮರಾಠಿ ಮತ್ತು ಉರ್ದು ಟ್ರೇನಿಂಗ ಕಾಲೇಜುಗಳ ಮುಖ್ಯಸ್ಥರಿಗೆ ಈ ಕಾರ್ಯ ವಹಿಸಲ್ಪಡುತ್ತದೆ. ಕನ್ನಡದ ಪುಸ್ತಕ ಪರಿಶೀಲನೆ ಕಾರ್ಯ ಧಾರವಾಡದ ಟ್ರೇನಿಂಗ ಕಾಲೇಜಿನ ಹೆಡ್ ಮಾಸ್ತರರಿಗೆ ವಹಿಸಲಾಗುತ್ತದೆ.[೨೩] ಅಂಥಾ ಪರಿಣಿತಿ ಅವರಿಗೆ ಒದಗಿತ್ತು ಎಂಬುದಿಲ್ಲಿ ಸಾಬಿತ್ತಾಗುತ್ತದೆ.

ವಿ. ಎಸ್. ಮಗದಾಳರ '**ಹಿಂದುಸ್ಥಾನದ ಹೊಸ ಭೂಗೋಲ**', ಪ್ರಾಥಮಿಕ, ಮಾಧ್ಯಮಿಕ ಮತ್ತು ಟ್ರೇನಿಂಗ ಕಾಲೇಜಿನ ಪಠ್ಯಪುಸ್ತಕವಾಗಿ, ಎನ್.ಪಿ. ಮೋಡಕ ಅವರ 'ಶಾಲಾ ಭಾರತ ವರ್ಷ/ ಹಿಂದುಸ್ಥಾನದ ಇತಿಹಾಸ', ಬಿ.ಪಿ. ಕಾಳೆಯವರ 'ಅಮಾತ್ಯನಂದಿನಿ', 'ತತ್ಸಮ ತದ್ಭವಗಳ ಕೈಪಿಡಿ', ವಿ.ಬಿ.ಬಿಳೇಅಂಗಡಿಯವರ 'ತೊರವೆ ರಾಮಾಯಣ ಸಾರಸಂಗ್ರಹವು', ಎಸ್.ಡಿ.ಪಾವಟೆಯವರ 'ಹರಿಹರನ ಇನಿಗಬ್ಬ', ಆರ್. ವಿ. ಕರಿಗುದರಿಯವರ 'ರಾಷ್ಟ್ರಗೀತಾವಲಿ' ಇವು ಪ್ರಾಥಮಿಕ, ಮಾಧ್ಯಮಿಕ ಮತ್ತು ಟ್ರೇನಿಂಗ ಕಾಲೇಜಿನ ವಾಚನಾಲಯಗಳಿಗಾಗಿ, ಬಿ.ಎಮ್.ಬುರ್ಲಿಯವರ 'ಕನ್ನಡ ನಾಡಿನ ಮಿಂಚಿದ ಮಹಿಳೆಯರು' ಮಾಧ್ಯಮಿಕ ಮತ್ತು ಟ್ರೇನಿಂಗ ಕಾಲೇಜಿನ ಪಠ್ಯಪುಸ್ತಕವಾಗಿ 'ಧಾರವಾಡದ ಕನ್ನಡ ಟೆಕ್ಸ್ಟಬುಕ್ ಕಮಿಟಿ'ಯವರಿಂದ ಮಂಜೂರಿಯಾಗಿವೆ. ಧಾರವಾಡದ ಕನ್ನಡ ಟೆಕ್ಸ್ಟಬುಕ್ ಕಮಿಟಿ ಟ್ರೇನಿಂಗ ಕಾಲೇಜಿನಲ್ಲಿ ಭರದಿಂದ ತನ್ನ ಕಾರ್ಯವನ್ನು ಆರಂಭಿಸಿದೆ. ಈ ಕಮಿಟಿ ಆಧಾರ ಗ್ರಂಥಗಳಾಗಿ ಬಳಸಬಹುದಾದ ಮತ್ತು ವಾಚನಾಲಯಗಳಿಗಾಗಿ ಖರೀದಿಸಬಹುದಾದ ಪುಸ್ತಕಗಳನ್ನು ಆಯ್ಕೆ ಮಾಡಿ, ಶಿಕ್ಷಕರ ಮತ್ತು ಸಾರ್ವಜನಿಕರಿಗಾಗಿ ಈ ಪತ್ರಿಕೆಯ ಮೂಲಕ ಸರಣಿಯಾಗಿ ೨೦ ರಿಂದ ೫೦ ಪುಸ್ತಕಗಳ ಪಟ್ಟಿಯನ್ನು ಪ್ರತಿ ತಿಂಗಳೂ ಪ್ರಕಟಿಸಿದೆ.[೨೪] ದಕ್ಷಿಣ ಭಾಗದ ಎಜ್ಯುಕೇಷನ್ ಇನ್ಸಪೆಕ್ಟರರಾದ ಶ್ರೀ ತಾವಡೆಯವರಿಗೆ ವಿನಂತಿಸಿಕೊಂಡಂತೆ ಅವರ ಉದಾತ್ತ ವಿಚಾರಗಳ ಲೇಖನಗಳು ಪ್ರತಿ ತಿಂಗಳೂ ಪ್ರಕಟವಾಗಿವೆ.

ಶ್ರೀ ಎಸ್ ವಿ ಮಗದಾಳರು ಮತ್ತು ಆಲೂರು ವೆಂಕಟರಾಯರು ಸೇರಿ ಹೊರತಂದ ಪುಸ್ತಕ ಹೊತ್ತಿಗೆ 'ಶಿಕ್ಷಣ ಮೀಮಾಂಸೆ'.[೨೫] ಶ್ರೀ ಗುರುನಾಥ ಜೋಶಿ, ಅಧ್ಯಾಪಕ ಟ್ರೇನಿಂಗ್ ಸ್ಕೂಲ ಧಾರವಾಡ ಮತ್ತು ಶ್ರೀ ಭಾ. ಮಾ. ಕುಲಕರ್ಣಿ ಬೇಸಿಕ್ ಟ್ರೇನಿಂಗ್ ಸ್ಕೂಲ್ ಧಾರವಾಡ ಇವರಿಬ್ಬರೂ ಸೇರಿ ಕನ್ನಡ ೫,೬,೭ ಮತ್ತು ಇಂಗ್ಲಿಷ ೧,೨,೩ ಇಯತ್ತೆಗಳಿಗೂ, ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ ಹಾಗೂ ಖಾಸಗಿಯಾಗಿ ಕಲಿಯುವವರಿಗೂ, ಹಿಂದಿ ಅಧ್ಯಾಪಕರಿಗೂ ಉಪಯುಕ್ತವಾಗುವಂತೆ, ಸರಳ ಶೈಲಿಯಲ್ಲಿ '**ಹಿಂದೂಸ್ತಾನೀ ಕನ್ನಡ ವ್ಯಾಕರಣ**' ವನ್ನು ಬರೆದು ಪ್ರಕಟಿಸಿದ್ದಾರೆ.[೨೬]

ಪ್ರಸ್ತುತ ನಮಗೆ ಅಲ್ಲೊಂದು ಇಲ್ಲೊಂದು ಕಾಣಸಿಗುವ ಗೌರೀಶ ಮಾಲೆಯ ಪುಸ್ತಕಗಳು ೧೯೪೦-೪೧ರಿಂದ ಪ್ರಕಟವಾಗತೊಡಗಿವೆ. ಶಂಬುಲಿಂಗಪ್ಪ. ಸೋ. ಕುಲಕರಣಿ ಪ್ರಕಾಶಿತ ೯ ಪುಸ್ತಕಗಳು ಒಂದೇ ಸಾರಿ ಮಾರಾಟಕ್ಕಿಡಲ್ಪಟ್ಟಿವೆ. 'ಪುರೋಗಾಮಿ ಶಿಕ್ಷಕ' ಶ್ರೀ ಎಸ್ ಬಿ ಗಜೇಂದ್ರಗಡ ಇವರು ಬರೆದ ಶೈಕ್ಷಣಿಕ ಮನಶಾಸ್ತ್ರ, ಶಿಕ್ಷಣ ಶಾಸ್ತ್ರದ ಮೂಲ ತತ್ವಗಳು ಮತ್ತು ಆಧುನಿಕ ಶಿಕ್ಷಣ ಕ್ರಮ ಕುರಿತಾಗಿ ತಿಳಿಸುತ್ತದೆ. (ಕ.ಪ್ರಾ.ಶಿ೧೯೪೨, ಮೇ). ಕನ್ನಡ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳಲ್ಲಿ ಕುಮಾರರಾಮ, ವರ್ಧಾಯೋಜನೆ ಮತ್ತು ಸ್ತ್ರೀ ಶಿಕ್ಷಣ, ಶ್ರೀ ಶಾಂತೇಶ್ವರ ಚರಿತ್ರಂ ಮುತಾದ ಪುಸ್ತಕಗಳು ಮಂಜೂರಾಗಿವೆ. ಇಲ್ಲೆಲ್ಲ ಲೇಖಕರ ಹೆಸರಿಗಿಂತ ಪ್ರಕಾಶಕರ ಹೆಸರುಗಳನ್ನೇ ಪ್ರಕಟಿಸಲಾಗಿದೆ.

೧೯೫೦ ಅಕ್ಟೋಬರನಲ್ಲಿ ಶ್ರೀ ಗುರುನಾಥ ಜೋಶಿಯವರ ೭೦೦ ಪುಟಗಳ, ೨೭೦೦೦ ಶಬ್ದಾರ್ಥಗಳಿರುವ, ಬಸವೇಶ್ವರ ಪುಸ್ತಕ ಭಾಂಡಾರ, ಹುಬ್ಬಳ್ಳಿ ಇವರ ಪ್ರಕಾಶನದ 'ಹಿಂದಿ-ಕನ್ನಡ ಕೋಶ' ಸಾದರ ಸ್ವೀಕೃತಗೊಡಿದೆ. ಆಕಳವಾಡಿ ಬುಕ್ ಡಿಪೋ, ಧಾರವಾಡ ಇವರಿಂದ ೧೯೫೨ ರ ಮಾರ್ಚನಲ್ಲಿ ಮ.ಗು.ಹಂದ್ರಾಳರ **'ಮೂಲ ಶಿಕ್ಷಣ'**, ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥ. ಶ್ರೀ ಹೀರೆಮಠರ 'ಭಾರತೀಯರ ಕಥೆಗಳು', ಶ್ರೀ ಗಲಗಲಿಯವರ 'ನೂತನ ಗಣಿತ' ಮತ್ತು 'ನೂತನ ದಿಸೆಯ ಕೈಪಿಡಿ ಮಾಲೆ' ಪ್ರಕಟಗೊಂಡಿವೆ. ರಾಮಾಶ್ರಯ ಬುಕ್ ಡಿಪೊ, ಧಾರವಾಡ ಇವರಿಂದ 'ಮಕ್ಕಳ ಸಚಿತ್ರ ಅಂಕಗಣಿತ', ಶ್ರೀ ನಾರಾಯಣ ಶರ್ಮ ಅವರ 'ಸ್ವತಂತ್ರ ಭಾರತೀಯ ರಾಜ್ಯತಂತ್ರ' ಪ್ರಕಟಗೊಂಡಿವೆ.

ಇದೇ ಸಂದರ್ಭದಲ್ಲಿಯೇ ಗೌರೀಶ ಗ್ರಂಥ ಪ್ರಕಟನಾಲಯದಿಂದ- ಬಸಪ್ಪ. ಮಲ್ಲಪ್ಪ. ಶಿಂತ್ರಿಯವರ 'ಕರ್ನಾಟಕದ ಐತಿಹಾಸಿಕ ಕಥೆಗಳು', ಶ್ರೀ ಶಿ.ಸೋ. ಕುಲಕರ್ಣಿಯವರ 'ಭೂಮಂಡಲ ಬೋಧಿನಿ' ಭಾಗ-೧, ಶ್ರೀ. ಎ.ಜಿ. ಕುಲಕರ್ಣಿಯವರ 'ಭೂಮಂಡಲ ಬೋಧಿನಿ' ಭಾಗ- ೨, ೩, ೪, ಆದ್ಯ ರಂಗಾಚಾರ್ಯರ 'ಸ್ವತಂತ್ರ ಭಾರತದ ಗಣರಾಜ್ಯ ಘಟನೆ' ಮುಂತಾದ ಗ್ರಂಥಗಳು ಪ್ರಕಟಗೊಂಡಿವೆ.

ಈ ದಶಕದಲ್ಲಿ ನೂಲು, ನೇಯ್ಗೆಗೆ, ಬಡಿಗತನ, ಒಕ್ಕಲುತನಕ್ಕೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳು ಪ್ರಕಟಗೊಂಡಿವೆ.

ಅಧ್ಯಯನಕ್ಕೆ ಸಕ್ರಮಗೊಳ್ಳುವ ಪುಸ್ತಕಗಳನ್ನು ಇಲಾಖೆಯು ಪ್ರಕಟಣೆಯ ಮೂಲಕ ಈ ಮುಂದಿನಂತೆ ಮಾನ್ಯಮಾಡುತ್ತಿತ್ತು. ಸಪ್ಟೆಂಬರ ೧೯೧೧ ಪು.೪೭. ಸಂ.೧೦ ಪುಟ ೨೨-೩೦ರವರೆಗೆ ನೀಡಿದ ಪ್ರಕಟಣೆ ಹೀಗಿದೆ:

ವಿದ್ಯಾಖಾತೆಯ ನೋಟೀಸುಗಳು.

ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವ ಬಗ್ಗೆ ಸರಕಾರದವರು ಮಂಜೂರು ಮಾಡಿದ ಪುಸ್ತಕಗಳ ಪಟ್ಟಿ:—
(ಮೆ॥ ಎ॥ ಇನಸ್ಪೆಕ್ಟರ ಸಾಹೇಬ ಬಹಾದ್ದೂರ ದಕ್ಷಿಣ ಭಾಗ ಇವರ ಅಪ್ಪಣೆಯ ಮೇರೆಗೆ ಪ್ರಸಿದ್ಧ ಮಾಡಿದ್ದು.)

ಅಂಕಲಿಪಿ (ಹೊಸ ಆವೃತ್ತಿ.)
ಪದಾರ್ಥ ವಿಜ್ಞಾನಶಾಸ್ತ್ರ (ಅಂಕಲೆಕೃತ).
ಬಸವಪುರಾಣ.
ಶಬ್ದವ್ಯುತ್ಪತ್ತಿ. (ಚಿಂತಾಮಣಿಪೇಟಕರಕೃತ.)
ಹಿಂದುಸ್ತಾನ ವಿಲಾಸಿ.
ವಾಚನ ಪುಸ್ತಕಗಳು:— (ಹುಡುಗರಿಗೋಸ್ಕರ)
ಬಾಲಬೋಧಿನಿ
೧ನೇ ಪುಸ್ತಕ.
೨ನೇ ,,
೩ನೇ ,,
೪ನೇ ,,
೫ನೇ ,,
೬ನೇ ,,
೭ನೇ ,,

ಮಹಾಭಾರತ.
ಮುದ್ರಾಮಂಜುಷ.
ಛಂದಸ್ಸಾರ (ಮುಳಬಾಗಲಕೃತ.)
ನುಡಿಗಟ್ಟು (ಮುಳಬಾಗಲಕೃತ.)
ಛಂದಸ್ಸು (ನಾಗವರ್ಮಕೃತ.)
ರಾಮಾಯಣ.
ಶಬ್ದಮಣಿದರ್ಪಣ.
ಶಾಲಾವ್ಯಾಕರಣ.
ಆರೋಗ್ಯವಿದ್ಯೆ.
ನನ್ನತಾಯಿ. (ಗಿ. ಸೋ. ಕುಲಕರ್ಣಿ.)
ಅಂಕಗಣಿತ. (ಚೆನಬಸಪ್ಪಕೃತ.)
ಭಾಗ ೧.
ಭಾಗ ೨.
ಮಹತ್ವಮಾಪನ. (ಕುಕ್‌ಕೃತ)

ರಸಾಯನಶಾಸ್ತ್ರದ ಮೂಲತತ್ವಗಳು (ಶಕ್ರೀಕೃತ ಪುಸ್ತಕದ ಭಾಷಾಂತರ)
ಜೈಮಿನಿಭಾರತ.
ಕನ್ನಡಲಘುವ್ಯಾಕರಣ (ಕಟ್ಟೀಕೃತ)
ಸತ್ಯಹರಿಶ್ಚಂದ್ರ ಚರಿತ್ರವು. (ವಿ. ಕೃಷ್ಣಾಚಾರಕೃತ)
ಭೂಮಿತಿ ೧ನೇ ಪುಸ್ತಕ (ಹಳಕಟ್ಟೀಕೃತ.)
ಜಮಾಖರ್ಚಿನ ಪದ್ಧತಿ (ಹೂಲಿಕೃತ.)
ನಾಯಿಲೆಕ್ಕ. (ಯಾತಗಿರಿಕೃತ.)
ಓಬಲೆ ಅಂಕಗಣಿತ (ಗೆಜ್ಜಿಕೃತ)
ಭಾಗ ೧.
,, ೨.
,, ೩.
ಪ್ರಾಕೃತಿಕ ಭೂಗೋಲ.
ಇಂಗ್ಲಂಡದ ಇತಿಹಾಸ. (ಹಳಕಟ್ಟೀಕೃತ.)
ಹಿಂದುಸ್ತಾನದ ಸಂಕ್ಷಿಪ್ತ ಇತಿಹಾಸ. (ಹಂಟರಕೃತ.)
ಹಿಂದುಸ್ತಾನದ ಇತಿಹಾಸ. (ಮಾರ್ಸಡೆನ್‌ಕೃತ)
ಭೂಗೋಲ ವಿದ್ಯದ ಮೂಲತತ್ವಗಳು (ಕಟ್ಟೀಕೃತ.)
ಭಾಗ ೧.
,, ೨.

ಬೀಜಗಣಿತ. (ದಲಾಲಕೃತ)
ಭೂಮಿತಿ ೧ನೇ ಪುಸ್ತಕ.
ಮನೆಯಲ್ಲಿ ಉಪಯೋಗಿಸುವ ಹಿಂದುಸ್ತಾನದ ನಕಾಶೆ. (ದಾತಾರಕೃತ.)
ಮನೆಯಲ್ಲಿ ಉಪಯೋಗಿಸುವ ಧಾರವಾಡ ಜಿಲ್ಹೆಯ ನಕಾಶೆ. (ದಾತಾರಕೃತ.)
ಮನೆಯಲ್ಲಿ ಉಪಯೋಗಿಸುವ ವಿಜಾಪುರ ಜಿಲ್ಹೆಯ ನಕಾಶೆ. (ದಾತಾರಕೃತ.)
ಮನೆಯಲ್ಲಿ ಉಪಯೋಗಿಸುವ ಕಾನಡಾ ಜಿಲ್ಹೆಯ ನಕಾಶೆ.
ಮನೆಯಲ್ಲಿ ಉಪಯೋಗಿಸುವ ಬೆಳಗಾವಿ ಜಿಲ್ಹೆಯ ನಕಾಶೆ. (ದಾತಾರಕೃತ.)
ಕುಮಟಾ ತಾಲೂಕಿನ ನಕಾಶೆ. (ಧಾರೇಶ್ವರಕೃತ)
ಮುಂಬಯಿ ಕರ್ನಾಟಕದ ನಕಾಶೆ. (ಹೂಲಿಕೃತ.)
ವಿದ್ಯಾಖಾತೆಯ ನಕಾಶೆಗಳು:—
ಹಿಂದುಸ್ತಾನ.
ಯುರೋಪಖಂಡ.
ಅಮೇರಿಕಾಖಂಡ.
ಆಫ್ರಿಕಾಖಂಡ.
ಏಶಿಯಾಖಂಡ.

ಭೂ. ವಿ. ಮೂ. ಕಟ್ಟೀಕೃತ ಭಾಗ ೩.
ಮುಂಬಯಿಇಲಾಖೆಯ ಮನೆಯಲ್ಲಿ ಉಪಯೋಗಿಸುವ ನಕಾಶೆ.
(ದಾತಾರಕೃತ.)

ಮುಂಬಯಿ ಇಲಾಖೆ.
ಪೃಥ್ವಿಯ ನಕಾಶೆ.

ಇಲ್ಲಿ ಮತ್ತೇ ಚನ್ನಬಸಪ್ಪನವರು ರಚಿಸಿದ ಅಂಕಗಣಿತ ಭಾಗ–೧ ಮತ್ತು ಭಾಗ –೨ ಇವುಗಳ, ಮುಳಬಾಗಲರು ರಚಿಸಿದ– ಮಹಾಭಾರತ, ಮುದ್ರಾಮಂಜುಷ, ಛಂದಸ್ಸಾರ ಮತ್ತು ನುಡಿಗಟ್ಟು ಹಾಗೂ ಫ.ಗು.ಹಳಕಟ್ಟಿಯವರು ರಚಿಸಿದ 'ಹಿಂದುಸ್ಥಾನದ ಸಂಕ್ಷಿಪ್ತ ಇತಿಹಾಸ' ಇವುಗಳ ಉಲ್ಲೇಖವಾಗಿದೆ.

೪.೨. ಅನುವಾದಗಳು

ಹದಿನೆಂಟನೆಯ ಶತಮಾನದ ಮಧ್ಯದಲ್ಲಿಯೇ ಅನುವಾದಕರ ಒಂದು ಹುದ್ದೆಯನ್ನು ರಚಿಸುವ ಮತ್ತು ಆ ಹುದ್ದೆಗೆ ಸಮರ್ಥರನ್ನು ಆಯ್ದು ನೇಮಿಸುವ ಅಗತ್ಯ, ಅನಿವಾರ್ಯತೆಗಳೇ 'ಅನುವಾದ'ದ ಇತಿಹಾಸವನ್ನು ಹೇಳುತ್ತವೆ. ಕನ್ನಡದಲ್ಲಿಯೂ ಪುಸ್ತಕಗಳ ಕೊರತೆಯನ್ನು ನೀಗಲು ಮತ್ತು ಪಠ್ಯಗಳಾಗಿ ಬಳಸಲು ಅನುವಾದದ ಅವಶ್ಯಕತೆ ಅತಿಯಾಗಿತ್ತು. ಸ್ವತಂತ್ರ ರಚನೆಗಳಿಲ್ಲದ ಆ

ಕಾಲದಲ್ಲಿ ಅನುವಾದ, ಭಾಷಾಂತರವೂ ಅಷ್ಟೇ ಕಾಠಿಣ್ಯತೆಯ ಕಾರ್ಯವಾಗಿತ್ತು. ಇದಕ್ಕೆ ಎರಡೂ ಭಾಷೆಗಳ ಪರಿಣಿತಿಯ ಅವಶ್ಯಕತೆ ಇತ್ತು.

೧೮೬೪ರಲ್ಲಿ ಸದರ್ನ ಡಿವಿಜನ್‌ಗೆ ಎಜ್ಯುಕೆಷನ್ ಇನ್ಸಪೆಕ್ಟರಾಗಿ ನೇಮಕಗೊಂಡು, ಆಗಮಿಸಿದ ವಿಲಿಯಮ್ ಅಲೆನ್ ರಸೆಲ್ ಇಲ್ಲಿರುವ ಪಠ್ಯಪುಸ್ತಕಗಳ ಕೊರತೆಯನ್ನು ಹೋಗಲಾಡಿಸಲು, ಶಿಕ್ಷಣ ಖಾತೆಯ 'ಕೆನರೀಸ್ ಟ್ರಾನ್ಸಲೇಟರ್' ಕಚೇರಿಯಿಂದ ಕನ್ನಡ ವಾಚನ ಪುಸ್ತಕಗಳನ್ನು ಹೊರತರುವಲ್ಲಿ ಅಧಿಕಾರ ಬಳಸಿಕೊಂಡರು. '೧೮೫೬ರಷ್ಟೊತ್ತಿಗೆ ಕನ್ನಡ ವಾಚನದ ಮೊದಲ ನಾಲ್ಕು ಪುಸ್ತಕಗಳನ್ನು ಹೊರತಂದಿದ್ದು ಐದನೆಯದೂ ಸಿದ್ಧವಾಗಿತ್ತು. ಇದೇ ವೇಳೆಗೆ ಮೈಸೂರಿನಲ್ಲಿ ಮೂರನೆಯ ಪುಸ್ತಕದವರೆಗೆ ಮಾತ್ರ ಸಿದ್ಧಗೊಳಿಸಿತ್ತು. ಹಾಗಾಗಿ ಈ ವಿಷಯದಲ್ಲಾದರೂ ಮುಂಬಯಿ ಪ್ರಾಂತ ಸ್ವಲ್ಪಾದರೂ ಮುಂದಿದೆ' ಎಂಬುದನ್ನು ರಸೆಲ್ Memoir of the Rev. John. Reid, London.(ಪುಟ-೩೦೬-೩೦೭) ಎಂಬ ಕೃತಿಯಲ್ಲಿ ವರದಿ ಮಾಡಿದ್ದಾರೆ. ಮೊದಲ ಗಣಿತ, ಇತಿಹಾಸ, ಭೂಗೋಳ ಪಠ್ಯಪುಸ್ತಕಗಳೆಲ್ಲವೂ ಮೇಜರ್ ಕ್ಯಾಂಡೀ ಮಾಡಿದ ಮರಾಠಿ ಅನುವಾದಗಳೇ ಇದ್ದುವು. ೧೮೬೭ರಲ್ಲಿ ಟ್ರಾನ್ಸಲೇಶನ್‌ಗಾಗಿಯೇ ಒಂದು ಹುದ್ದೆಯನ್ನು ಮಂಜೂರಿಸಿ, ೨೦೦/- ರೂಗಳ ವೇತನ ನೀಡಿದ್ದು ಅನುವಾದದ ಅತ್ಯಾವಶ್ಯಕತೆಯನ್ನು ಸಾರಿ ಹೇಳುತ್ತದೆ. ಈ ಹುದ್ದೆ ೧೮೮೬ರವರೆಗೆ ಮುಂದುವರೆದು, ೨೦ ವರ್ಷಗಳ ನಂತರ ಅದು ನಿಂತು ಹೋಗಿದೆ. ಇದು ಅನುವಾದವೇ ಪಠ್ಯ ಮತ್ತು ಪತ್ರಿಕೆಗಳಿಗೆ ಗತಿ ಎಂದು ನಂಬಿದ್ದನ್ನು ದೃಢಪಡಿಸುತ್ತದೆ.

'ನಗದವರನ್ನು ನಗಿಸುವ ಕಥೆ' (ಕಾಮಿಡಿ ಅಫ್ ಎರರ್ಸ್) ೧೮೭೧ರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು ಮಾಡಿದ ಅನುವಾದ ಕೃತಿ. ಗಂಗಾಧರ ಮಡಿವಾಳೇಶ್ವರ ತುರಮರಿಯವರು ಭಾಷಾಂತರಿಸಿದ ಬಾಣ ಕಾದಂಬರಿ ಹೊಸ ಮನ್ವಂತರವನ್ನೇ ಸೃಷ್ಟಿಸಿತು.

೧೯೩೩ರಲ್ಲಿ ಶ್ರೀ ಗೋ. ಅ. ಜೋಗಳೇಕರ, ಸ್ಕೂಲ ಮಾಸ್ತರ, ಗದಗ ಮುನ್ಸಿಪಾಲಿಟಿ, ಗದಗ ಅವರಿಂದ ಭಾಷಾಂತರಿಸಲ್ಪಟ್ಟ 'ಕರ್ನಾಟಕ ಕಥಾಮಯ ಇತಿಹಾಸ' ಕನ್ನಡ ನಾಲ್ಕನೆಯ ಇಯತ್ತೆಗಾಗಿ ಮಂಜೂರಿಯಾಗಿದೆ. ಇದು ಮುಂಬಯಿ ಸರಕಾರದಿಂದ ಮಂಜೂರಾದ, ಇವರೇ ರಚಿಸಿದ 'ಕರ್ನಾಟಕಾಚಾ ಗೋಷ್ಠಿರೂಪ ಇತಿಹಾಸ' ಎಂಬ ಪುಸ್ತಕದ ಅನುವಾದವಾಗಿದೆ. ೩೨ ಕಥೆಗಳ ರೂಪದಲ್ಲಿ, ಮಕ್ಕಳಿಗೆ ತಿಳಿಯಬಹುದಾದ ಸುಲಭ ಭಾಷೆಯಲ್ಲಿ ಬರೆಯಲ್ಪಟ್ಟಿದೆ.

೧೯೪೭ ಜುಲೈನಲ್ಲಿ ಮಿ.ಕೆ.ಎಸ್.ಹುನಗುಂದ. ಬಿ.ಎ ಇವರು ರಚಿಸಿದ 'ಕುರುಹಿನ ಬಕುಲಾಹಾರ' ('ಮಾಲತಿ ಮಾಧವ' ಸಂಸ್ಕೃತ ಪುಸ್ತಕದ ಕನ್ನಡ ಭಾಷಾಂತರ) ಮತ್ತು ಕೈಲಾಸವಾಸಿ

ಮೆಸರ್ಸ್‌। ಸಿ.ಸುಬ್ಬರಾವ ಮತ್ತು ಬಸವಪ್ಪಸಾಸ್ತ್ರೀಗಳು ರಚಿಸಿದ 'ಸೂರಸೇನ ಚರಿತ್ರೆ' (ಶೆಕ್ಸಪೀಯರ್ ಕೃತ 'ಆಥೆಲೊ' ಪುಸ್ತಕದ ಮಾದರಿ) ಪ್ರಕಟಗೊಂಡಿವೆ.

ಇದಲ್ಲದೆ ಹಲವಾರು ಭಾಷಾಂತರ ಕೃತಿಗಳು ಸುಪ್ರಸಿದ್ಧವಾಗಿದ್ದವು. ಹಲವಾರು ಕೃತಿಗಳಿಗೆ ವ್ಯಾಖ್ಯಾನಕೂಡ ಬರೆಯಲಾಗಿದೆ. ಬಾಳಾಚಾರ್ಯ ಸಕ್ಕರಿಯವರ 'ರಘುವಂಶ'ದ ಕನ್ನಡ **ಅನುವಾದದ** ಮೊದಲ ಕಂತು ೧೮೮೨ ಫೆಬ್ರುವರಿಯಲ್ಲಿ ಪ್ರಕಟಗೊಂಡಿದ್ದು, ಮುಂದೆ ೧೮೮೨ ಮಾರ್ಚ್‌ಲ್ಲಿ ಎರಡನೆಯ ಕಂತು (ಪುಟ ೮೫-೮೭)ಪ್ರಕಟಣೆಗೊಂಡಿದೆ.

೪.೩. ಪತ್ರಿಕೆಗಳು

೧೯೨೧ರ ಮೇ ಸಂ ೫೮-೨ ರ ಪ್ರಕಾರ ವ.ಮ.ತಟ್ಟಿ, ಸಂಪಾದಕ "ಬಾಲಮಿತ್ರ" ಧಾರವಾಡ.ಟ್ರೇ. ಕಾ. ಪ್ರಾ. ಸ್ಕೂಲ ೧೨-೫-೨೧ಇಸ್ವಿ' ಎಂದಿರುವುದನ್ನು ನೋಡಿದರೆ ಶಿಕ್ಷರಾಗಿದ್ದ ತಟ್ಟಿಯವರು "ಬಾಲಮಿತ್ರ" ಎಂಬ ಪತ್ರಿಕೆ ಸಂಪಾದಿಸುತ್ತಿದ್ದುದು ತಿಳಿದು ಬರುತ್ತದೆ.

ವೆಂಕಟ ರಂಗೋ ಕಟ್ಟಿಯವರು ಪತ್ರಿಕಾರಂಗದಲ್ಲಿ ಬಹು ಸಾಧನೆಗೈದವರು. ಮಠ ಪತ್ರಿಕೆಗೂ ಮೊದಲು ಶಿಕ್ಷಕರಿಗಾಗಿಯೇ ಪ್ರಕಟಗೊಳ್ಳುತ್ತಿದ್ದ ಪತ್ರಿಕೆ 'ಜ್ಞಾನಬೋಧಕ'(೧೮೬೧) ಸಂಪಾದಕರಾಗಿದ್ದ ಇವರು, ಸೇವೆಯಲ್ಲಿದ್ದು 'ಶಾಲಾ ಪತ್ರಿಕೆ' ಮುನ್ನಡೆಸಿದರೆ, ವೈಯಕ್ತಿಕವಾಗಿ 'ಶೋಧಕ' ತಿಂಗಳ ಪತ್ರಿಕೆ ಪ್ರಾರಂಭಿಸಿದರು. 'ಧಾರವಾಡ ವೃತ್ತ' ಪತ್ರಿಕೆಗೆ ಪ್ರೋತ್ಸಾಹ ಕೊಟ್ಟರು. ಧಾರವಾಡದಲ್ಲಿ ಜ್ಞಾನವರ್ಧಕ ಮುದ್ರಣಾಲಯ ಸ್ಥಾಪಿಸಿದರು. 'ಲೋಕಶಿಕ್ಷಣ' ಮತ್ತು 'ಚಂದ್ರೋದಯ' ಪತ್ರಿಕೆ ನಡೆಸಿದರು. ಅಲ್ಲದೆ 'ಕರ್ನಾಟಕ ಪತ್ರ' ಎಂಬ ಪತ್ರಿಕೆಯನ್ನು ನಡೆಸಿರುವುದೂ ತಿಳಿದು ಬರುತ್ತದೆ.

"'ಶೋಧಕ' ಪತ್ರಿಕೆಯ ಪ್ರಥಮ ಸಂಪಾದಕೀಯದಲ್ಲಿ (೧೮೭೫) ಅವರು ಬರೆದ ಮಾತುಗಳು ಈ ಸಂದರ್ಭದಲ್ಲಿ ಗಮನಿಸುವಂತಿವೆ. ಅದು ಕಟ್ಟಿಯವರ ಕನ್ನಡ ಮರಾಠಿ ನಿಲುಮೆಯನ್ನು ತಿಳಿಸುವುದರ ಜೊತೆಗೆ, ಅದರಿಂದ ಕರ್ನಾಟಕದ, ವಿಶೇಷತಃ ಮುಂಬಯಿ ಕರ್ನಾಟಕದ ಅಂದಿನ ಸ್ಥಿತಿಗತಿಯ ಮಾರ್ಮಿಕ ಚಿತ್ರವನ್ನೂ ಕೊಡುತ್ತದೆ: 'ಕೊಲ್ಲಾಪುರ, ಬೀದರ, ನೀಲಗಿರಿ, ಪಶ್ಚಿಮ ಸಮುದ್ರ ಈ ೪ ಮರ್ಯಾದೆಗಳ ಮಧ್ಯದಲ್ಲಿ ವಿಸ್ತಾರವಾಗಿ ಹಬ್ಬಿದ ಸೀಮೆಯು ಕರ್ನಾಟಕವೆಂದೆನಿಸಿಕೊಳ್ಳುತ್ತದೆ... ಈ ದೇಶದ ಕ್ಷೇತ್ರ ಫಲವು ಸು.೬೬೦೦೦ ಚೌಕು ಮೈಲು. ಜನಸಂಖ್ಯೆ ೭೭ಲಕ್ಷ. ಆದರೆ ನಮ್ಮ ನೆರೆಯಲ್ಲಿದ್ದ ಮಹಾರಾಷ್ಟ್ರ ದೇಶವು ಇದಕ್ಕೂ ಚಿಕ್ಕದಿದ್ದಾಗ್ಯೂ ಇವೆರಡು ದೇಶಗಳ ಈಗೀನ ಸ್ಥಿತಿಗತಿಗಳನ್ನು ಸರಿನೋಡಲಾಗಿ ಅತಿ ಖೇದಕರ ವ್ಯತ್ಯಾಸವು ಕಂಡುಬರುತ್ತದೆ. ಮಹಾರಾಷ್ಟ್ರದಲ್ಲಿ ನಾಲ್ಕೈದು ಕಾಲೇಜುಗಳೂ ಬಹುಶಃ ಪ್ರತಿ ಜಿಲ್ಲೆಗೊಂದರಂತೆ

ಹೈಸ್ಕೂಲುಗಳೂ, ೨೦೦೦ಕ್ಕಿಂತ ಹೆಚ್ಚು ಇತರ ಶಾಲೆಗಳು ಇರುತ್ತವೆ. ಕರ್ನಾಟಕದಲ್ಲಿ ಕಾಲೇಜು ಎಂಬ ಹೆಸರೇ ಗೊತ್ತಿಲ್ಲ. ಹೈಸ್ಕೂಲುಗಳು (ಮೈಸೂರು, ಮದ್ರಾಸಗಳಿಗೆ ಸೇರಿದ ಭಾಗಗಳು ಸಹಿತ) ಐದಾರಕ್ಕಿಂತ ಹೆಚ್ಚಿಲ್ಲ. ಇತರ ಶಾಲೆಗಳು (ಪ್ರಾಥಮಿಕ)ಯೆಲ್ಲ ಕೂಡಿ ಆರೇಳುನೂರರವರೆಗೇ. ಮಹಾರಾಷ್ಟ್ರದಲ್ಲಿ ೩೦ಕ್ಕಿಂತ ಹೆಚ್ಚು ವರ್ತಮಾನ ಪತ್ರಗಳೂ ಸುಮಾರು ೨೦ ಮಾಸಿಕ ಪುಸ್ತಕಗಳೂ ಸಧ್ಯಕ್ಕೆ ನಡಿಯುತ್ತವೆ. ಕರ್ನಾಟಕ ಭಾಷೆಯಲ್ಲಿ ಯೆರಡಕ್ಕಿಂತ ಹೆಚ್ಚು ವರ್ತಮಾನ ಪತ್ರಗಳಿಲ್ಲ. ಅವೂ ಬೆಂಗಳೂರು ಸೀಮೆಯ ಹೊರಗೆ ಯಾರಿಗೂ ಗೊತ್ತಿಲ್ಲ. ಮಾಸಿಕ ಪುಸ್ತಕವು ಇರುತ್ತದೆಂದು ಆಸೆ ಮಾಡಲಿಕ್ಕೆ ಮಾತ್ರ ಒಂದುಂಟು, ಅದೂ ಹುಟ್ಟಿ ಒಂದು ವರ್ಷವೂ ಪೂರ್ಣವಾಗಿರುವುದಿಲ್ಲ'...." ಹೀಗೆ ಒಂದೇ ರೀತಿ ಅಸಮಾಧಾನವನ್ನು ಹೊರಹಾಕಿದದ್ದು ಅವರ ತೀವ್ರ ಕಾಳಜಿ ಮತ್ತು ತುಡಿತಗಳನ್ನು ಎತ್ತಿ ತೋರುತ್ತದೆ.

೪.೫. ಸಾಂಸ್ಕೃತಿಕ ಸಮನ್ವಯ

೧೮೮೦ ಮಾರ್ಚನಲ್ಲಿ ಶ್ರೀನಿವಾಸ ರೊದ್ದ ಮತ್ತು ಗೋವಿಂದರಾವ ವಕೀಲ ಇವರಿಂದ ಒಂದು 'ವಕ್ತೃತ್ವೋತ್ತೇಜಕ ಸಭೆ'ಯೊಂದು ಸ್ಥಾಪನೆಯಾದ ಬಗೆಗೆ ಮತ್ತು ಅದರ ಪ್ರಾಯೋಜಕತ್ವದಲ್ಲಿ ಮೊದಲ ಸಮಾರಂಭ ೧೮೮೧ರ ಸಪ್ಟಂಬರ ತಿಂಗಳಲ್ಲಿ ನಡೆದು, ಅದರಲ್ಲಿ ಕನ್ನಡದ ೧೦ ಮತ್ತು ಮಹಾರಾಷ್ಟ್ರ ೧೦ ವಿದ್ಯಾರ್ಥಿಗಳು ಭಾಗವಹಿಸಿದ್ದು, ಮಹಾರಾಷ್ಟ್ರದ ಟ್ರೇನಿಂಗ ಕಾಲೇಜಿನ ಗೋವಿಂದ ದಾಮೋದರ ದೀಕ್ಷಿತ ಎಂಬ ವಿದ್ಯಾರ್ಥಿ ಬಹು ಸೊಗಸಾಗಿ, ಸಯುಕ್ತಿಕವಾಗಿ, ಚಿತ್ತವೇದಕವಾಗಿ ಮಾತನಾಡಿ ೨೫ ರೂಪಾಯಿಯ ಬಹುಮಾನ ಪಡೆದಿದ್ದಾನೆ. ಇದನ್ನು ತಿಳಿದಾಗ ಟ್ರೇನಿಂಗ್ ಕಾಲೇಜ್ ಮಹಾರಾಷ್ಟ್ರ ಮತ್ತು ಕರ್ನಾಟಕಗಳ ಸಾಂಸ್ಕೃತಿಕ ಕೊಂಡಿಯನ್ನು ಬೆಸೆದಿತ್ತು ಎಂಬುದು ತಿಳಿದು ಬರುತ್ತದೆ.

ಪಠ್ಯಕ್ರಮ ಮತ್ತು ಶಿಕ್ಷಕರ ಉದ್ಯೋಗದಲ್ಲಿ ಅಮೂಲಾಗ್ರ ಬದಲಾವಣೆಯಾಗುವುದರ ಅವಶ್ಯಕತೆ ಮನಗಂಡು, ಕಳೆದ ವರ್ಷದಂತೆ ಈ ವರ್ಷವೂ ೧೯೦೩ರ ಮಾರ್ಚ ೧೬ ಮತ್ತು ೧೭ರಂದು ರೊದ್ದರಾಯರು ಟ್ರೇನಿಂಗ ಕಾಲೇಜಿನಲ್ಲಿ ದ್ವಿತಿಯ 'ಶಿಕ್ಷಕ ಸಮ್ಮೇಳನ' ಏರ್ಪಡಿಸಿ, ಹೊಸ ಪರಿಕಲ್ಪನಾ ತತ್ವಗಳನ್ನು ಮತ್ತು ಪ್ರಾಯೋಗಿಕ ಪಾಠ ಮಾಡುವ ರೀತಿಯನ್ನೂ ಲ್ಯಾಂಡನ್‌ನೆಂಬ ಘನವಿದ್ವಾಂಸನ ಗ್ರಂಥದಿಂದ ತೆಗೆದುಕೊಂಡಿರುವುದಾಗಿ ಹೇಳಿದರು ಮತ್ತು ಎಲ್ಲ ತರಗತಿಗಳಿಗೆ ಪ್ರಾಯೋಗಿಕ ಪ್ರಕ್ರಿಯೆಯೂ ನಡೆಯಿತು. ಈ ಪಾಠ ಪ್ರಕ್ರಿಯೆ ಮತ್ತು ಟಿಪ್ಪಣಿಗಳು ಶಾಲಾ ಪತ್ರಕದ ನಾಲ್ಕು ಸಂಚಿಕೆಗಳಲ್ಲಿ, ಪುಟ ೭೩ ರಿಂದ ೧೫೨ ರವರೆಗೆ ನಿರಂತರವಾಗಿ ಪ್ರಕಟಗೊಂಡಿದೆ. ಸಮ್ಮೇಳನದ ಮೂಲಕ ಎಲ್ಲ ಅಧಿಕಾರಿಗಳಿಗೆ ಮತ್ತು ಪ್ರಕಟಣೆಯ ಮೂಲಕ ಎಲ್ಲ ಶಿಕ್ಷಕರಿಗೆ ಹೊಸ ಪರಿಕಲ್ಪನೆಯನ್ನು ಪರಿಚಯಿಸುವ ಈ ಅದ್ವಿತಿಯ ವಿಚಾರ ಪ್ರಶಂಸನೀಯವೇ ಸರಿ.

ಸಮ್ಮೇಳನದ ಸಂದರ್ಭದಲ್ಲಿ ರಜೆ ಮೇಲಿದ್ದ ಎ.ಇ. ಸಹಸ್ರಬುದ್ಧೆಯವರು ಮರಳಿ ಬಂದು ಸಮ್ಮೇಳನದ ಸಾರಾಂಶವನ್ನು ತಿಳಿದು, ಪಾಠಗಳನ್ನು ಅವಲೋಕಿಸಿ, ಆ ವಿಷಯಗಳನ್ನು ಮತ್ತು ಟಿಪ್ಪಣಿಗಳನ್ನು ಇಂಗ್ಲಿಷಿನಲ್ಲಿ ಭಾಷಾಂತರಿಸಿ, ಈ ಬಗೆಯ ಸಮ್ಮೇಳನಗಳಿಂದಾಗುವ ಲಾಭಗಳನ್ನರುಹಿ 'ಇಂತಹ ಸಮ್ಮೇಳನಗಳು ಅವಶ್ಯವಿರುವವು; ಆದ್ದರಿಂದ ಮುಂದಿನ ಸಮ್ಮೇಲನಕ್ಕೆ ಅದ್ಯಾಪಕರು ಬರುವುದಾಗಬೇಕು. ನಮ್ಮ ಅದ್ಯಾಪಕರು ಬಡವರು, ಅವರಿಗೆ ದಾರಿ ವೆಚ್ಚ ಭರಿಸಲಾಗದು ಆದ್ದರಿಂದ ಅವರಿಗೆ ದಾರಿ ವೆಚ್ಚವನ್ನಾದರೂ ಪೂರ್ಣ ಕೊಡಬೇಕು' ಎಂದು ಸ್ಪಷ್ಟವಾಗಿ ಬರೆದರು. ಈ ವಿಚಾರ ಡಾಯರೆಕ್ಟರರಿಗೆ ಯೋಗ್ಯವೆನಿಸಿ ಹೋಗುವ ಅಥವಾ ಬರುವ ಒಂದು ವೆಚ್ಚವನ್ನು ಕೊಡುವುದಾಗಿ ಆಶ್ವಾಸನೆ ನೀಡಿದರು. ಇದು ಕೇವಲ ಎರಡನೆಯ ಸಮ್ಮೇಲನದ ಅತೀ ಮುಖ್ಯವಾದ ಫಲವಾಗಿದೆ. ಇದಕ್ಕೆ ಶಿಕ್ಷಕರೆಲ್ಲ ಸಹಸ್ರಬುದ್ಧೆಯವರಿಗೆ ಆಭಾರಿಯಾಗಿರುವ ಸಂದೇಶ ರವಾನಿಸುತ್ತಾರೆ. ದಾರಿವೆಚ್ಚ ಕೊಡುವುದಾದರೆ ಒಮ್ಮೆಲೇ ಎಲ್ಲ ಶಿಕ್ಷಕರನ್ನು ಕಳಿಸಲಾಗದು; ಯಾವ ಯಾವ ಶಿಕ್ಷಕರನ್ನು ಕಳಿಸುವುದು? ಒಂದು ತಾಲೂಕಿಗೆ ಇಂತಿಷ್ಟು ಎಂದು ಡಿ.ಎ.ಇ.ಯವರೇ ಆರಿಸಿ ಗೊತ್ತು ಮಾಡುವುದು; ಹೋದವರು ಮರಳಿ ಬಂದ ಬಳಿಕ, ಮಧ್ಯ ಒಂದು ಜಾಗದಲ್ಲಿ ಕೂಡಿ ಸಮ್ಮೇಳನದ ಸಂಗತಿಗಳನ್ನು ಮನನ ಮಾಡಿಕೊಡುವುದು ಎಂದು ನಿರ್ಧಾರ ಕೂಡ ಮಾಡಲಾಗುತ್ತದೆ. ಹೀಗೆ ಈ ನಾಡು ನುಡಿಗಾಗಿ, ಕನ್ನಡದ ಕಲಿಗಳು ಸ್ಥಳಿಯರಿಗೆ ಬೇಕಾದ ಶಿಕ್ಷಣದ ರೀತಿ ನೀತಿ ಮತ್ತು ನಿಯತಿಗಳಿಗಾಗಿ ಹೀಗೆ ವಿಳಂಬ ಮಾಡದೆ ಶ್ರಮಿಸಿರುವುದು ಇಂದಿನವರಿಗೆ ಒಂದು ಆದರ್ಶವಾಗಿದೆ, ದಾರಿದೀಪವಾಗಿದೆ.

ನಂತರ ಈ ಇಂಥ ಸಮ್ಮೇಳನಗಳು ಮೇಲಾಧಿಕಾರಿಗಳಿಂದ ಆದೇಶಗೊಂಡು ಪ್ರತಿ ಜಿಲ್ಲೆಯಲ್ಲಿ ಪ್ರತಿವರ್ಷವೂ ನಡೆಯತೊಡಗಿದವು. ನಡೆಸುವಂಥ ಸಮ್ಮೇಳನಗಳಲ್ಲಿ ಏನೇನು ವಿಷಯ ತೆಗೆದುಕೊಳ್ಳಲಾಗಿದೆ ಮತ್ತು ಎಲ್ಲೆಲ್ಲಿ ಸಮ್ಮೇಳನಗಳು ನಡೆಯುತ್ತವೆ, ಕಾಲ, ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಯಾರು ಎಂಬ ವಿವರ ಪಟ್ಟಿಯನ್ನು ಮತ್ತು ಸಮ್ಮೇಲನ ಮುಗಿದ ನಂತರದ ವರದಿಯನ್ನೂ ಕಾಲಕಾಲಕ್ಕೆ ಪತ್ರಿಕೆಯಲ್ಲಿ ಪ್ರಕಟಿಸುತ್ತ ಬರಲಾಗಿದೆ.[೨೭] ಇದನ್ನೆಲ್ಲ ನೋಡಿದರೆ ಇಂದು ಎಲ್ಲವೂ ಇದ್ದೂ ಇಚ್ಛಾಶಕ್ತಿಯ ಕೊರತೆ, ಅರ್ಪಣಾ ಮನೋಭಾವ ಇಲ್ಲದಿರುವುದು ಸ್ಪಷ್ಟವಾಗುತ್ತದೆ.

ಟ್ರೇನಿಂಗ್ ಕಾಲೇಜಿನಲ್ಲಿ ಪ್ರಕಟವಾದ ಪತ್ರಿಕೆ, ಸೇವೆ ಸಲ್ಲಿಸಿದ ಗಣ್ಯರು ಮತ್ತು ಅವರಿಂದ ಪ್ರಕಟಗೊಂಡ ಪುಸ್ತಕಗಳು, ಹಾಗೂ ನಡೆದ ಪ್ರಮುಖ ಸಭೆಗಳು ಹಾಗೂ ಸಮ್ಮೇಳನಗಳು ಒಂದು ಸಂಸ್ಥೆ ಅಥವಾ ಸಂಘಟಣೆ ಮಾಡಬಲ್ಲಷ್ಟು ಕಾರ್ಯವನ್ನು ಮಾಡಿವೆ. ವಿದ್ಯಾವರ್ಧಕ ಸಂಘಕ್ಕಾಗಿ ದುಡಿದ ಕಟ್ಟಿಯವರು ನಿವೃತ್ತಿ ಹೊಂದಿದ ಮೇಲೆ ಆಯುರ್ವೇದ ಅಭ್ಯಾಸ ಮಾಡಿ ಹೊಸ ಹೊಸ ಪ್ರಯೋಗ ಮಾಡಿದ್ದಾರೆ. ಸ್ವದೇಶಿ ವಸ್ತುಗಳನ್ನು ತಯಾರಿಸಿದರು. ಸಕ್ಕರಿ ಬಾಳಾಚಾರ್ಯ ಗೋಪಾಳಾಚಾರ್ಯರು ಕೇವಲ ಒಬ್ಬ ವ್ಯಕ್ತಿಯಾಗಿ ೬೫ ಗ್ರಂಥ ರಚನೆ ಮಾಡಿ, ನಾಟಕ ಆಡಿ,

ಕೀರ್ತನೆ ಹೇಳಿ ಸುಮ್ಮನಿರಲಿಲ್ಲ. ಒಂದು ಸಂಸ್ಥೆಯೋಪಾದಿಲ್ಲಿ ಮಾಡಿರುವ ಕಾರ್ಯಗಳಿಗೆ ಈ ಮುಂದಿನವು ಉದಾಹರಣೆಯಾಗುತ್ತವೆ:

೧-'ಕರ್ನಾಟಕ ಸಾಹಿತ್ಯ ಪರಿಷತ್ತು' ೧೯೧೫ ರಲ್ಲಿ ಆರಂಭವಾದ ಬಳಿಕ ಹಮ್ಮಿಕೊಂಡ ಮೊದಲ ಮೂರೂ ಸಮ್ಮೇಳನಗಳು(೧೯೧೫, ೧೯೧೬, ೧೯೧೭ರಲ್ಲಿ) ನಡೆದದ್ದು ಬೆಂಗಳೂರು, ಮೈಸೂರಿನಲ್ಲಿಯೇ ಮತ್ತು ಏಕವ್ಯಕ್ತಿ ಅಧ್ಯಕ್ಷತೆಯಲ್ಲಿಯೇ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಲು ಚಿಂತನ ಮಂಥನ ನಡೆದ ಸ್ಥಳವಾದ ಕನ್ನಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಆವರಣದಲ್ಲಿಯೇ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ (೧೯೧೮) ನಡೆಯಬೇಕೆಂದು ಸಾಹಿತ್ಯಾಸಕ್ತರು ತಿರ್ಮಾನಿಸಿದ್ದರೂ, ಹಣದ ಅಭಾವದಿಂದಾಗಿ ಕಾರ್ಯಕರ್ತರಲ್ಲಿ ಮೊದಲಿದ್ದ ಉತ್ಸಾಹ ಉಳಿಯಲಿಲ್ಲ. ಆಗ ಬಾಳಾಚಾರ್ಯರು 'ರಾಜರಿಂದಾಗದ ಸಹಾಯವನ್ನು ನಾನು ಭಿಕ್ಷಾವೃತ್ತಿಯಿಂದ ಮಾಡುತ್ತೇನೆ' ಎಂದು ಹೇಳಿ, 'ಬೇಡಲು ಕನ್ನಡದ ದಾಸಯ್ಯ ಬಂದಾನೆ ನೀಡಿರವ್ವಾ ತಡಮಾಡದೆಲೆ....' ಎಂದು ಬೇಡುತ್ತ, 'ಕನ್ನಡದ ದಾಸಯ್ಯ'ನಾಗಿ ಕೀರ್ತನೆ, ದಾಸಯ್ಯನ ಪದಗಳನ್ನು ಧಾರವಾಡ, ಬೆಳಗಾವಿ, ಗದಗ, ಬಾಗಿಲುಕೋಟೆ, ಹುನಗುಂದ, ದಾವಣಗೇರಿ ಮುಂತಾದ ಊರುಗಳಿಗೆ ತೆರಳಿ ಹಾಡುತ್ತ, ಹಣ ಸಂಗ್ರಹಿಸಿ ತಂದಿತ್ತಾಗ ಕರ್ನಾಟಕ ಸಾಹಿತ್ಯ ಸಮ್ಮೇಳನ ನೇರವೇರಿತು. ಒಂದು ಸಂಘ, ಸಂಸ್ಥೆ ಮಾಡಬಲ್ಲ ಈ ಕಾರ್ಯವನ್ನು ಒಬ್ಬ ವ್ಯಕ್ತಿಯಾಗಿ ಮಾಡಿದ್ದಾರೆಂದರೆ ಇವರೊಬ್ಬ 'ಏಕವ್ಯಕ್ತಿ ಸಂಸ್ಥೆ'ಯಲ್ಲವೆ? ಇಂಥ ಅತ್ಯದ್ಭುತ ವ್ಯಕ್ತಿತ್ವದ ಅವರಿಗೆ ಅವರೇ ಮಾದರಿ.

೨- ತಮ್ಮ 'ವಿದ್ಯಾರಣ್ಯ ವಿಜಯ'ವನ್ನು ಊರೂರು ತಿರುಗಿ ಕೀರ್ತನೆ ಮಾಡುತ್ತ ಸಾಗಿದ್ದು, ಇದರಲ್ಲಿಯ 'ರಕ್ಷಿಸು ಕರ್ನಾಟಕ ದೇವಿ' ಎಂಬ ಗೀತೆ ಪ್ರಸಿದ್ಧಿಯಾಗಿ ಎರಡು ದಶಕಗಳ ಕಾಲ ಮುಂಬಯಿ ಕರ್ನಾಟಕದಲ್ಲಿ ನಾಡ ಗೀತೆಯಾದದ್ದು, ಇದರಿಂದ ಜನಜಾಗೃತಿ ಹೆಚ್ಚಾದದ್ದು.... ಇವೆಲ್ಲವೂ ಒಂದು ಸಂಸ್ಥೆ ಮಾಡಬೇಕಾದ ಕಾರ್ಯಗಳಲ್ಲವೆ?

೩- ಹೊಸ ವಿಷಯವೆಂದರೆ ನಾಟಕ ನಿರ್ವಹಣೆಯ ಒಳಹೊರಗುಗಳನ್ನು ಪರಿಚಯಿಸಲು ತಾವು ಆರಂಭಿಸುತ್ತಿರುವ **'ಕರ್ನಾಟನಾಟಕಾಧಾರಿ'** ಎಂಬ **ಮಾಸಿಕ ಪುಸ್ತಕ**ವನ್ನು ಪ್ರಕಟಿಸುವ ಪ್ರಸ್ತಾವ ಮಾಡಿ, ಅದಕ್ಕೆ ಚಂದಾದಾರರಾಗ ಬಯಸುವವರು ೨.೫೦ ರೂಗಳನ್ನು ತಮ್ಮ ವಿಳಾಸಕ್ಕೆ ಮನಿ ಆರ್ಡರ್ ಮಾಡಲು ಕೋರಿದ್ದು, ಒಂದೇ ಉಸಿರಿನಲ್ಲಿ ಒಂದುವರೇ ಒಂದುವರೆ ಪುಟವೆಲ್ಲ ಒಂದೇ ವಾಕ್ಯದಲ್ಲಿ ಹೇಳಿದ್ದು, ತನ್ನ ತಲೆಮಾರಿನೊಂದಿಗೆ ನಾಟಕರಂಗ ಕೊನೆಗೊಳ್ಳದೆ ಅಪರಂಪಾರವಾಗಿ ಉಳಿಯಲೆಂಬ ಅವರ ಉತ್ಕಟ ಆಶಯ ಹೊಂದಿದ್ದು, ಇದು ಇದುವರೆಗೂ ಎಲ್ಲಿಯೂ ಪ್ರಮುಖವೆನಿಸಿಲ್ಲ. ಆ ಪ್ರಕಟಣೆಯ ಪ್ರತಿಯನ್ನು ಇದ್ದ ಹಾಗೆಯೇ ಇಲ್ಲಿ ಕೊಡಲಾಗಿದೆ:

(೬೧)

ಕರ್ನಾಟಕನಾಟಕಾಧಾರಿ.

ಎಲೈ! ಕನ್ನಡ ಭಾಷಾಭಿಮಾನಿಗಳಾದ ರಸಜ್ಞವಾಚಕರಿರಾ! ಈ ಮಾಸಿಕ ಪುಸ್ತಕವನ್ನು ಪ್ರಕಟಿಸಲಿಕ್ಕೆ ಬರುವ ಜೂನ್ ತಿಂಗಳ ೧ನೇ ತಾರೀಖಿನಿಂದ ಪ್ರಾರಂಭ ಮಾಡುತ್ತೇವೆ! ಇದರಲ್ಲಿ ನಾಟಕ ಆಡುವವರಿಗೂ ನೋಡುವವರಿಗೂ ಉಚಿತ ಲಾಭವಾಗಲಿಕ್ಕೆ ಮುಖ್ಯ ಕಾರಣಗಳಾಗಿರುವ ನಾಟಕದ ಖರೇ ಅರ್ಥವನ್ನೂ ಅದನ್ನು ಮಾಡುವ ಮತ್ತು ನೋಡುವ ಉದ್ದೇಶವನ್ನೂ ಮೊದಲು ವರ್ಣಿಸಿ ಆ ಮೇಲೆ ಕ್ರಮದಿಂದ ನಾಟಕ ಕಲಿಯಲಿಕ್ಕೆ ಪ್ರಯೋಗವನ್ನು ಕೂಡಿಸುವ ಸಂಗೀತವನ್ನೂ, ಕಲಿಯುವ ಪದ್ಧತಿಯನ್ನೂ ವೇಷ ರಚನೆಯ ಪ್ರಕಾರವನ್ನೂ, ಜಾಹೀರನಾಮೆ ತಿಕೀಟುಗಳನ್ನು ತಯಾರು ಮಾಡುವ ರೀತಿಯನ್ನೂ, ಅವುಗಳನ್ನು ಊರೊಳಗೆ ಪ್ರಸಿದ್ಧ ಮಾಡುವ ಹಂಚಿಕೆಯನ್ನೂ, ನಾಟಕ ಮಂದಿರಕ್ಕೆ ಬಂದ ಪ್ರೇಕ್ಷಕರನ್ನು ಉಪಚರಿಸುವ ವಿಧಿಯನ್ನೂ ಪ್ರೇಕ್ಷಕರು ಥಿಯೇಟರದಲ್ಲಿ ನಾಟಕದವರ ಮೇಲೆ ಮಾಡತಕ್ಕ ಅನುಗ್ರಹವನ್ನೂ ವಿವರವಾದಿಂದ ಹೇಳುತ್ತ ಬರುವದಲ್ಲದೇ ಈ ಪುಸ್ತಕದ ಸಹಾಯದಿಂದ ಯಾವ ಕಥೆಯಂತೇ ಆಗಲಿ ನಾಟಕ ರೂಪದಲ್ಲಿ ತಂದು ಆಡತೋರಿಸಲಿಕ್ಕೆ ಬರಬೇಕೆಂಬ ವಿಚಾರದಿಂದ ದೇವತೆಗಳ ಗಾಂಭೀರ್ಯವನ್ನೂ ರಾಕ್ಷಸರುಗಳ ಮಾಯಾಕರ್ಮಗಳನ್ನೂ, ರಾಜಮಂತ್ರಿ ಸೇನಾಪತಿ ಬ್ರಾಹ್ಮಣರಿವರುಗಳ ಕರ್ತವ್ಯಗಳನ್ನೂ, ಚತುರ್ವರ್ಣಗಳ ಕಾರ್ಯಗಳನ್ನೂ, ಸ್ವರ್ಗ, ಕೈಲಾಸ, ಮೇರು ಮಂದರಾದ್ರಿಗಳನ್ನೂ ವರ್ಣಿಸಿ ಸಾಗರ, ಅರಣ್ಯ, ಸರೋವರ, ನದಿ, ಉಪವನ, ನಗರ, ಮಂದಿರ, ದೇವಾಲಯಗಳನ್ನೂ ಜಲಕ್ರೀಡಾ, ವಿನೋದ, ಸುರತ, ವಿವಾಹ, ಅಗ್ನಿ, ಪ್ರತಿಕ್ರಿಯಾಪ, ಹಾಸ್ಯ, ಶೃಂಗಾರ, ಮುಷ್ಟಿವಾದ ಕೋಪ ಮೊದಲಾದವುಗಳನ್ನೂ ಮರ್ಮ, ಈರ್ಷ್ಯ, ಕಪಟ, ಯುದ್ಧ, ದುರ್ನೀತಿಗಳನ್ನೂ ನೀತಿ, ಭಕ್ತಿ, ಸತ್ಯಗಳನ್ನೂ ಸ್ತ್ರೀಸೌಂದರ್ಯವನ್ನೂ ಸೂರ್ಯ ಚಂದ್ರ ಉದಯಾಸ್ತಗಳನ್ನೂ ಪಶುಪಕ್ಷಿಗಳನ್ನೂ, ನಾಯಿಕಾ, ನಾಯಕ, ಸಖಿ, ಮೊದಲಾದವರುಗಳನ್ನೂ ನಾಟಕ ಭಾಷೆಯಿಂದ ಅಂದಗೊಳಿಸಿ ಪ್ರವೇಶ ಬಂಧನ ಕ್ರಮವನ್ನೂ ಪ್ರಹಸನ (ಫಾರ್ಸ್) ಲಕ್ಷಣವನ್ನೂ ಪ್ರಯೋಗದಿಯಲ್ಲಿ ಉಪಯೋಗಿಸ ಬರುವ ಪದವಾದ್ಯಗಳನ್ನೂ ಇರಿಸಿ ಸ್ವತಂತ್ರ ಜೋಡು ನಾಟಕಗಳನ್ನು ಪದಸಹಿತ ಸತತ ಸಾಗಿಸುತ್ತೇವೆ! ಇದನ್ನು ಧಾರವಾಡ ಜ್ಞಾನವರ್ಧಕದಲ್ಲಿ ಮೊಳೆಯಿಂದ ಅಚ್ಚು ಹಾಕಿಸುತ್ತೇವೆ!

ಈ ಮಾದರಿಯ ಪುಸ್ತಕವು ಕನ್ನಡದಲ್ಲಿ ಇಲ್ಲದೇ ಇರುವದರಿಂದಲೂ ಇದೇ ಮೊದಲನೆಯದಾಗಿರುವದರಿಂದಲೂ ದೇಶಭಾಷಾ ಸುಧಾರಣೆಗೆ ಇದರಿಂದ ಕಿಂಚಿತ್ ಸಾಧನವಾಗುವದರಿಂದಲೂ ಅಭಿಮಾನಿಗಳೂ ರಸಿಕರೂ ಆದ ನೀವು ಇದಕ್ಕೆ ಉದಾರಾಶ್ರಯವನ್ನು ನಿಶ್ಚಯವಾಗಿ ಕೊಡುವಿರೆಂದು ತುಂಬಾ ನಂಬುತ್ತೇವೆ!

ಇದರ ಕ್ರಯವು ವರ್ಷ ೧ಕ್ಕೆ ಅಂಚೆಯದ್ದುಸಹಿತ ೩ ರೂಪಾಯಿ ಇರುತ್ತದೆ! ವರ್ಗಣೀದಾರರಾಗಬಯಸುವವರು ಕೆಳಗೆ ಸಹಿ ಮಾಡಿರುವ ವಿಳಾಸಕ್ಕೆ ಆಪ್ರಿಲ ೧೫ನೇ ತಾರೀಖಿನೊಳಗೇ ಹಣವನ್ನು ಮನೀಆರ್ಡರ ಮಾಡಬೇಕು! ಹೆಚ್ಚಿನ ವಿವರವು ಪುಸ್ತಕದಲ್ಲಿ ದೊರೆಯುವದು!

ಬಂಕಾಪುರ ತಾರೀ ಖು೧೫|೩|೯೭. } ಬಾಳಾಚಾರ್ಯ ಸಕ್ಕರೀ ಶಾಂತಕವಿ ಹೆ.ಮಾ. ಕೇ. ಗ್ರೇ. ಅಂ.ವ್ಹಸ್ಕೂ. ಜಿ. ಧಾರವಾಡ.

ಒಟ್ಟು ಅವರ ಗ್ರಂಥ ರಚನೆಯನ್ನು ನೋಡಿದಾಗ ಕವನ, ನಾಟಕ, ಕೀರ್ತನೆ, ಕಾದಂಬರಿ, ಪ್ರಭುದ್ಧ ಗ್ರಂಥಗಳನ್ನು ಬರೆದು, ಹಾಡಿ, ಆಡಿ, ಬೇಡಿ, ಸಾಹಿತ್ಯ ಸಂಸ್ಕೃತಿಯ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಛಾಪು ಮೂಡಿಸಿದ್ದು ವಿಧಿತವಾಗುತ್ತದೆ.

ತರಬೇತಿ ಸಂಸ್ಥೆ ಇಂಥ ವಿದ್ವಜ್ಜನರ ಪಡೆಯನ್ನೇ ನಿರ್ಮಿಸಿ, ಅವರಿಗೆ ಪತ್ರಿಕೆಯ ಮೂಲಕ ಒಂದು ವೇದೀಕೆಯನ್ನು ಸ್ಥಾಪಿಸಿ ಕೊಟ್ಟಿತು. ಅದೇ ವೇದಿಕೆಯ ಮುಖಾಂತರ ನೂರಾರು ಜನ ಶಿಕ್ಷಕರು ಮತ್ತು ವಿದ್ಯಾರ್ಥಿಗಳೂ ಕೂಡ ಬರೆಯುವಂತೆ ಪ್ರೇರೆಪಿಸಿದೆ; ವಿಷಯಗಳ ಪರಸ್ಪರ ವಾದ ವಿವಾದ, ಪ್ರಶ್ನೋತ್ತರ ಮತ್ತು ಜ್ಞಾನದ ಹಂಚಿಕೆಗೆ ರಾಜಮಾರ್ಗವನ್ನೇ ನಿರ್ಮಿಸಿದೆ. ಈ ಮಹನೀಯರೆಲ್ಲ ಒಬ್ಬೊಬ್ಬರು ಒಂದೊಂದು ಸಂಸ್ಥೆ ಮಾಡುವಷ್ಟು ಕಾರ್ಯಗಳನ್ನು ಮಾಡಿದ್ದಾರೆ. ಕಂಬಳಿಯವರು ಶಿಕ್ಷಣ ಮಂತ್ರಿಯಾಗಿ ಈ ಕಾಲೇಜಿನ ಅಸ್ತಿತ್ವ ಉಳಿಸಲು ಮತ್ತು ಸರ್ವರಿಗೂ ಸಮಾನವಾಗಿ ಶಿಕ್ಷಣ ದೊರೆಯುವಂತೆ ಮಾಡಿದ ಅವರ ಅರ್ಪಣಾಭಾವ ಯಾವುದಕ್ಕೂ ಸರಿಸಾಟಿಯಾಗದಂಥದ್ದು.

ಅಂತೂ ಈ ಅವಧಿಯಲ್ಲಿ ಮತ್ತು ಟ್ರೇನಿಂಗ ಕಾಲೇಜಿನ ವ್ಯಾಪ್ತಿಯಲ್ಲಿ ಪ್ರಾಚೀನ ಮತ್ತು ಪೌರಾಣಿಕ ಕೃತಿಗಳ ಅನುವಾದ, ಸಂಪಾದನೆ, ಟೀಕೆ, ಪರಿಷ್ಕರಣಗಳು ಹೆಚ್ಚಾಗಿ ನಡೆದವು. ಈ ಶತಕದಲ್ಲಿ ಶಿಕ್ಷಣದ ಅನುಷ್ಠಾನ ಮತ್ತು ಸ್ಥಾಪನೆಗಾಗಿ ಅಧಿಕ ಪ್ರಮಾಣದಲ್ಲಿ ಪಠ್ಯಪುಸ್ತಕಗಳಿಗಾಗಿಯೇ ಪ್ರಕಟಗೊಂಡಿವೆ. ಇವುಗಳಲ್ಲಿ ಕಾವ್ಯ, ನಾಟಕ, ಕಥಾಸಾಹಿತ್ಯ, ಗದ್ಯಲೇಖನ, ಪತ್ರಿಕೆಗಳು,

ಸಂಶೋಧನಾ ಲೇಖನಗಳು, ವೈಜ್ಞಾನಿಕ ಬರಹಗಳು ಮುಖ್ಯವಾದವುಗಳು. ಒಂದು ರೀತಿಯಲ್ಲಿ ಈಗ ಸಿದ್ಧಗೊಂಡ ಸಾಹಿತ್ಯ ಆಗ ತನ್ನದೇ ಮಾರ್ಗ ರೂಪಿಸಿಕೊಳ್ಳುವುದರಲ್ಲಿತ್ತು.

- **ಡೆಪ್ಯೂಟಿ ಚನ್ನಬಸಪ್ಪ ಅವರು ರಚಿಸಿದ ಕೃತಿಗಳು:**

೧- ನಗದವರನ್ನು ನಗಿಸುವ ಒಂದು ಬಹು ಚಮತ್ಕಾರದ ಕಥೆಯು' (ಷೇಕ್ಸಪಿಯರನ ಕಾಮಿಡಿ ಆಫ್ ಎರರ್ಸ -ಅನುವಾದ ನಾಟಕ))

೨- ಮ್ಯಾಕಬೇತ್ (ಅನುವಾದ ನಾಟಕ)

೩- ಸಮೀಕರಣ ಸಂಗ್ರಹ (ಅನುವಾದ)

೪- ಸಮೀಕರಣ ಸಂಗ್ರಹ ಅಥವಾ ಸಿದ್ಧಾಂತ ಸಂಗ್ರಹ, ಭಾಗ-೨

೫- ಕನ್ನಡ ಅಂಕಗಣಿತ ಭಾಗ-೨

- **ಗಂಗಾಧರ ಮಡಿವಾಳೇಶ್ವರ ತುರಮರಿಯವರು ರಚಿಸಿದ ಕೃತಿಗಳು:**

೧- ಶಬ್ದಮಣಿದರ್ಪಣ ವ್ಯಾಖ್ಯಾನ -೧೮೬೬(ಮಠಪತ್ರಿಕೆಯಲ್ಲಿ ಪ್ರಕಟ)

೨- ಹಳಗನ್ನಡ ಕವಿತಾ ಸಂಗ್ರಹ (ಸಂಪಾದನೆ) ೧೮೬೭

೩- ಸಟೀಕಿನ ಶಬ್ದ ಮಂಜರಿ- ೧೮೬೯

೪- ರಾಜಶೇಖರ ವಿಳಾಸದ ಮೊದಲ ಆಶ್ವಾಸದ ಟೀಕೆ- ೧೮೭೧

೫- ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಟೀಕೆ- ೧೮೭೩

೬- ರಾಜಶೇಖರ ವಿಳಾಸದ ನಾಲ್ಕನೆಯ ಆಶ್ವಾಸದ ಟೀಕೆ } ೧೮೭೪ ಪತ್ರಿಕೆಯಲ್ಲಿ

೭- ಭಾಷಾ ದರ್ಪಣ ಪ್ರಕಟಣೆ -೧೮೭೪

೮- ಕವಿತಾ ಸಂಗ್ರಹವು- ೧೮೭೪

೯- ಕನ್ನಡ ೧ ಮತ್ತು ೨ನೆಯ ಪುಸ್ತಕಗಳ ಪರಿಷ್ಕರಣ- ೧೮೭೫

೧೦- ಬಾಣ ಕಾದಂಬರಿಯ ಅನುವಾದ- ೧೮೭೬-೭೭

ಪತ್ರಿಕೆಯ ಸಂಪಾದಕತ್ವವನ್ನು ಸಮರ್ಥವಾಗಿ ನಿರ್ವಹಿಸಿದ ಹಿರಿಮೆ ಇವರದ್ದು.'ರಸಿಕ ರಂಜಿನಿ' ಮತ್ತು 'ಕರ್ನಾಟಕ ಜ್ಞಾನಮಂಜರಿ' ಮಾಸ ಪತ್ರಿಕೆಗಳಿಗೆ ಇವರು ಲೇಖಕರಾಗಿದ್ದರು. ದೋಂಢೋ ನರಸಿಂಹ ಮುಳಬಾಗಲ ಮತ್ತು ಶಾಂತವೀರ ರಾಚಿದೇವ ಕಿತ್ತೂರ ಇಬ್ಬರೂ ತುರಮರಿಯವರ ಗರಡಿಯಲ್ಲೇ ಬೆಳೆದವರು. ಇವರಿಬ್ಬರೂ ಇವರ ಸಹಕಾರ ಮತ್ತು ಮಾರ್ಗದರ್ಶನದಿಂದಾಗಿ, ಕಲಿತು ಮೇಲೆ ಬರಲು ಸಾಧ್ಯವಾಯಿತು.

- **ವೆಂಕಟ ರಂಗೋ ಕಟ್ಟಿ ರಚಿಸಿದ ಕೃತಿಗಳು:**

ಅನುವಾದಗಳು:

೧– ಅರಬ ಭಾಷೆಯ ಸುರಸ ಕಥೆಗಳ ಸಂಗ್ರಹ(ಅರೇಬಿಯನ್ ನೈಟ್ಸ್) (೧೮೬೩)

೨– ಯುಕ್ಲಿಡನ ಸಿದ್ಧಾಂತ (೧೮೭೫)

೩– ಪಂಚಾಳ ಜಾತಿಗಳ ಉತ್ಪತ್ತಿ (ಪದ್ಮಪುರಾಣದಲ್ಲಿಯ ಸಂಬಂಧಪಟ್ಟ ಭಾಗಗಳ ಭಾಷಾಂತರ)

೪– ಕರ್ನಾಟಕ ಗೆಝೆಟಿಯರ್–ಇತಿಹಾಸ (೧೮೬೩)

೫– ಜ್ಯೋತಿಷ್ಯ ಶಾಸ್ತ್ರ (೧೮೯೪)

೬– ಪ್ರಾಕೃತಿಕ ಭೂಗೋಲ (೧೯೦೫)

೭– The first book of Sanskrit (1880) (ಇಂಗ್ಲಿಷಿನಿಂದ)

೮– ಬರ್ಥೋಲ್ಡನ ಚರಿತ್ರೆ– ಚಾರಿತ್ರಿಕ ಗ್ರಂಥ (ಮರಾಠಿಯಿಂದ)

೯– ಹಿಂದುಸ್ತಾನದ ಇತಿಹಾಸ ಸಾರ

ಕೃತಿಗಳು

೧೦– ನರತನು – ಶರೀರಶಾಸ್ತ್ರ (ಮರಾಠಿ ಕೃತಿ)

೧೧– ಸವಾಯಿ ಮಾಧವರಾಯಾಂಚೆ ನಾಟಕ(೧೮೭೧)

೧೨– ವಿಧವಾ ವಪನ ಅನಾಚಾರ (ಶಾಸ್ತ್ರಾಧಾರಗಳಿಂದ ಬರೆದ ಪ್ರಬಂಧ)

೧೩– ಉಪನ್ಯಾಸ ವಿದ್ಯೆ –ಪ್ರಬಂಧ

೧೪– ಲಘುವ್ಯಾಕರಣ–

೧೫– ಮುಂಬಯಿ ಇಲಾಖೆ

೧೬– ಹಿಂದುಸ್ತಾನ

೧೭– ಜಗತ್ತಿನ ಭೂಗೋಲ ವಿದ್ಯೆ

೧೮– ಕರ್ನಾಟಕದ ವರ್ಣನೆಯ ಇತಿಹಾಸವೂ

೧೯– ರೆಸೆಲ್ ಸಾಹೇಬರ ಆಡಳಿತ– ಶಿಕ್ಷಣ ಇಲಾಖೆಯ ಐತಿಹಾಸಿಕ ಗ್ರಂಥ (ಇಂಗ್ಲಿಷ)

೨೦– ಆರು ಬೆರಳಿನ ಕುರುಹು– ಸಾಮಾಜಿಕ ನಾಟಕ

೨೧– ನೇಪೋಲಿಯನ್ ಬೋನಾಪಾರ್ಟನ ಚರಿತ್ರೆ

೨೨– ಸೋಮೇಶ್ವರ ಶತಕ

೨೩– ಜೈಮಿನಿ ಭಾರತ (ಸಟೀಕ ೧ರಿಂದ ೪ ಸಂಧಿಗಳು)

ಇವರು ಪ್ರಕಟಿಸಿದ ಪಠ್ಯಪುಸ್ತಕಗಳು:

ಕನ್ನಡ ಐದನೆಯ ಪುಸ್ತಕ(೧೮೮೫)

ಕನ್ನಡ ಆರನೆಯ ಪುಸ್ತಕ(೧೮೮೯)

ಕನ್ನಡ ಲಘು ವ್ಯಾಕರಣ(೧೮೮೦ ಎರಡನೆಯ ಆವೃತ್ತಿ)

'ಜ್ಞಾನವರ್ಧಕ' – ಮುದ್ರಣಾಲಯ

ಪತ್ರಿಕೆಗಳು:

ಶೋಧಕ–(೧೮೭೫–೭೮) 'ಚಂದ್ರೋದಯ'

'ಕರ್ನಾಟಕ ಪತ್ರ' 'ಲೋಕ ಶಿಕ್ಷಕ'

ಕಟ್ಟಿಯವರು ತ್ರಿಭಾಷಾ ಪಂಡಿತರಾಗಿದ್ದು, ಬಹು ಆಯಾಮಗಳಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಅಚ್ಚು ಮೊಳೆಗಳನ್ನು ತಯಾರಿಸಿದ್ದು, ಕರ್ನಾಟಕ ಗೆಝೆಟಿಯರ್ ಬರೆದದ್ದು ಮತ್ತು ವಿಧವೆಯರ ಮುಂಡನದಂಥ ಅನಾಚಾರಗಳನ್ನು ಖಂಡಿಸಿ, ಬಹಿರಂಗವಾಗಿ ಪಂಥಾಹ್ವಾನ ನೀಡಿದ್ದು ಅವರ ಕೀರಿಟದಲ್ಲಿರುವ ಮಹತ್ವದ ಗರಿಗಳು. ಹೀಗೆ ಸಾಹಿತ್ಯ ಲೋಕಕ್ಕಲ್ಲದೆ ಸಾಮಾಜಿ, ಸಾಂಸ್ಕೃತಿಕ ಲೋಕದಲ್ಲಿ ಪದಾರ್ಥ ವಿಜ್ಞಾನ, ವನಸ್ಪತಿಶಾಸ್ತ್ರ, ಖನಿಜ ಶಾಸ್ತ್ರ, ಲಘುವ್ಯಾಕರಣ ಮತ್ತು ಜ್ಯೋತಿಷ್ಯಶಾಸ್ತ್ರ ಕುರಿತು ಪ್ರಬಂಧ, ಲೇಖನ ಬರೆದರಲ್ಲದೆಆಯುರ್ವೇದವನ್ನು ಅಭ್ಯಸಿಸಿ ಅದರಂತೆ ಔಷಧವನ್ನು ಪುಕ್ಕಟೆಯಾಗಿ ನೀಡುವುದು, ಸೀಗೆಕಾಯಿ ವಡಿಗಳನ್ನು ಸಿದ್ಧಪಡಿಸುವುದು, ಅಲ್ಯುಮಿನಿಯಂ ಧಾತುವಿನಿಂದ ಕತ್ತಿ, ಕತ್ತರಿಗಳ ಸಿದ್ಧಪಡಿಸುವಿಕೆ, ಮಣ್ಣಿನ ಹೂಜಿ, ಪಾತ್ರೆಗಳ ನಿರ್ಮಾಣ, ಮಂಗಳೂರು ಹಂಚು ಮಾದರಿಯ ಹಂಚುಗಳ ತಯಾರಿಕೆ ಮುಂತಾದುವು ಅವರು ಸಮಾಜಕ್ಕೆ ನೀಡಿದ ಇತರ ಕೊಡುಗೆಗಳಾಗಿವೆ. ಕನ್ನಡದ ಭಾಷಾ ಶ್ರೀಮಂತಿಕೆಗೆ ಮರಾಠಿಯ ಜ್ಞಾನದ ಅವಶ್ಯಕತೆಯನ್ನವರು ಅರಿತಿದ್ದರು. ಆದರೇ ಅದೇ ಅಭಾಸವಾಗಿ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷ ಹುದ್ದೆಯಿಂದ ನಿರ್ಗಮಿಸುವಂಥ ಪ್ರಸಂಗಗಳೂ ಬಂದೊದಗಿದವು.

- **ದೋಂಡೋ ನರಸಿಂಹ ಮುಳಬಾಗಲ ರಚಿಸಿದ ಕೃತಿಗಳು:**

ಅನುವಾದಗಳು (ಸಂಸ್ಕೃತದಿಂದ)

೧. ಭವಭೂತಿ ಕವಿಯ ಉತ್ತರರಾಮಚರಿತ

೨. ಶೂದ್ರಕ ಕವಿಯ ಮೃಚ್ಛಕಟಿಕ

೩. ಭಟ್ಟನಾರಾಯಣನ ವೇಣಿಸಂಹಾರ

೪. ಕಾಳಿದಾಸನ ಮಾಳವಿಹಾಗ್ನಿ ಮಿತ್ರ

೧. ಕನ್ನಡ ನುಡಿಗಟ್ಟು

೨. ಕನ್ನಡ ಕೈಪಿಡಿ

೩. ಛಂದಸ್ಸಾರ

೪. ಪದ್ಯಾರ್ಥಸಾರ

೫. ರಾಜಶೇಖರ ವಿಳಾಸದ ಏಳನೆಯ ಆಶ್ವಾಸಕ್ಕೆ ಟೀಕು– ೧೮೯೨

❖ **ಹುಯಿಲಗೋಳ ಭುಜಂಗರಾಯರು ರಚಿಸಿದ ಕೃತಿಗಳು:**

೧– ಪ್ರಾಕೃತಿಕ ಭೂಗೋಲ

ಇವರು ರಚಿಸಿದ ಕೃತಿಗಳು ಕಡಿಮೆ ಇದ್ದರೂ **ರೊದ್ದ ಶ್ರೀನಿವಾಸರಾಯ**ರಂಥವರಿಗೆ ಸಹಾಯಹಸ್ತ ನೀಡಿ, ಬೆಳೆದು ಮಹಾನ್ ವ್ಯಕ್ತಿಗಳಾಗಲು ಕಾರಣವಾದ ಮಹಾನ್ ಕೀರ್ತಿ ಇವರಿಗೆ ಸಲ್ಲುತ್ತದೆ.

❖ **ಶಾಂತವೀರ ರಾಚಿದೇವ ಕಿತ್ತೂರ ರಚಿಸಿದ ಕೃತಿಗಳು:**

ಇವರು ವಿದ್ವತ್ತನ್ನ ಮೆಚ್ಚಿ ಸರದಾರ ಹೈಸ್ಕೂಲಿನಿಂದ ಟ್ರೇನಿಂಗ್ ಕಾಲೇಜಿನ ಅಸಿಸ್ಟಂಟ್ ಮಾಸ್ಟರ್ ಹುದ್ದೆಗೆ, ಸುಮಾರು ೧೮೬೧ರಲ್ಲಿ ನೇಮಿಸಿದವರು ಶ್ರೀ ಡೆಪ್ಯೂಟಿಯಾಗಿದ್ದ ಚನ್ನಬಸಪ್ಪನವರು. ಆಗ ಪ್ರಿನ್ಸಿಪಾಲರಾಗಿ ಹುಯಿಲಗೋಳ ಭುಜಂಗರಾಯರಿದ್ದರು. ಸರದಾರ ಹೈಸ್ಕೂಲಿನಲ್ಲಿ ಅರಟಾಳ ರುದ್ರಗೌಡರು ಮತ್ತು ರೊದ್ದ ಶ್ರೀನಿವಾಸರಾಯರು ಇವರ ಶಿಷ್ಯರಾಗಿದ್ದರು. ಪಾದ್ರಿಗಳು ಅದರಲ್ಲೂ ಕಿಟೆಲ್‌ರು ಕನ್ನಡವನ್ನು ಚಪ್ಪರಿಸಲು ಕಾರಣ ಇವರ ಕನ್ನಡ ಕಲಿಸುವ ವಿಧಾನ ಮತ್ತು ಪದ್ಧತಿ.

೧– ಶಾಂತವೀರ ಛಂಧಸ್ಸು
೨– ಶಾಂತವೀರ ನಿಘಂಟು
೩– ರಾಜಶೇಖರ ವಿಳಾಸದ ಎರಡನೆಯ ಆಶ್ವಾಸಕ್ಕೆ ಟೀಕೆ
೪– ನವರತ್ನಹಾರ(ಪ್ಲೀಟರನ್ನು ಕುರಿತ ಕವಿತಾ ಸಂಗ್ರಹ)
೫– ಇತಿಹಾಸ
೬– ಭೂಗೋಲ
೭– ವ್ಯಾಕರಣ
(೫–೭: ಕ್ರಮಿಕ ಪುಸ್ತಕಗಳು)

• **ಕೋನೆರ ರೊದ್ದ ಶ್ರೀನಿವಾಸರಾಯರು ರಚಿಸಿದ ಕೃತಿಗಳು:**

ಟ್ರೇನಿಂಗ ಕಾಲೇಜಿನ ಕಲಿಕೆಯ ನಂತರ ಪ್ರಿನ್ಸಿಪಾಲರಾಗಿದ್ದ ಭುಜಂಗರಾಯರ ಸಹಾಯದಿಂದಾಗಿ ಪುಣೆಗೆ ಹೋಗಿ ಕಲಿಯುವಂತಾಯಿತು. ಶಿಕ್ಷಣ ಇಲಾಖೆಯಲ್ಲಿ ಉತ್ತಮ ಶಿಕ್ಷಕನಾಗಿ ಕಾರ್ಯ ಮಾಡಿದ್ದಕ್ಕೆ ಡೆಪ್ಯೂಟಿ ಹುದ್ದೆ ಹುಡುಕಿಕೊಂಡು ಬಂದಿತು. ನಂತರ ಇವರು ೧೮೮೮ರಲ್ಲಿ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿ ಅನೇಕ ಹೊಸ ಅವಿಷ್ಕಾರಗಳನ್ನು ಮಾಡಿದರು. ಇವರ ಬೋಧನೆ ಮತ್ತು ಆಡಳಿತ ಉತ್ತಮವಾಗಿದ್ದವು. ವಿದ್ಯಾರ್ಥಿಗಳಿಗೆ ಶಾಶ್ವತವಾದ ವಸತಿ ನಿಲಯ ಮತ್ತು ಪ್ರತ್ಯೇಕ ಕಟ್ಟಡಕ್ಕೆ ಭದ್ರ ಬೂನಾದಿ ನಿರ್ಮಿಸಿದರು. ಇವರ ಸಾಮಾಜಿಕ ಕಾರ್ಯಗಳಲ್ಲಿ ಕ್ಷಾಮ ನಿವಾರಕ ಸಂಘವು ಜನರ ಸೇವೆಯಿಂದಾಗಿ ಪ್ರಸಿದ್ಧವಾಗಿತ್ತು. ೧೯೦೮ರಲ್ಲಿ ನಿವೃತ್ತಿ ಪಡೆದು, ಸತತ ಮೂರುಬಾರಿ ಮುಂಬಯಿ ಶಾಸನ ಸಭೆಯ ಸದಸ್ಯರಾಗಿ ಆಯ್ಕೆಯಾದರು. ಕರ್ನಾಟಕ ಕಾಲೇಜ್ ಸ್ಥಾಪನೆಯಲ್ಲಿ ಅವರದ್ದು ಬಹು ಮುಖ್ಯ ಪಾತ್ರವಿದೆ. ಶಿಕ್ಷಣ ಇಲಾಖೆಯ,

ಪ್ರಾಥಮಿಕ ಶಾಲಾ ಶಿಕ್ಷಕರಿಂದ ಪೈಸೆಪೈಸೆ ಸಂಗ್ರಹಿಸಿ ಸರಕಾರಕ್ಕೆ ಕೊಟ್ಟು ಕರ್ನಾಟಕ ಕಾಲೇಜು ಸ್ಥಾಪಣೆಯಾಗಲು ಕಾರಣರಾಗುತ್ತಾರೆ. ಜಿಲ್ಲಾ ಶಾಲಾ ಸಮಿತಿಯ ಸದಸ್ಯರಾಗುತ್ತಾರೆ.

ಮಾರ್ಸಡನ್ – ಇತಿಹಾಸ, ಶಾಲಾ ಕ್ರಮಿಕ ಪುಸ್ತಕಗಳು ಮತ್ತು ಕನ್ನಡ, ಇಂಗ್ಲಿಷ ಕವಿತೆಗಳನ್ನು ಇವರು ಬರೆದುದಾಗಿ ತಿಳಿದು ಬರುತ್ತದೆ.

- **ಬಾಳಾಚಾರ್ಯ ಗೋಪಾಳಾಚಾರ್ಯ ಸಕ್ಕರಿ(ಶಾಂತಕವಿ)ಯವರು ರಚಿಸಿದ ಕೃತಿಗಳು:**

ಶಾಂತವೀರರ ಶಿಷ್ಯರಾದ್ದರಿಂದ ಶಾಂತಕವಿ ಎಂಬ ಕಾವ್ಯನಾಮ ಇರಿಸಿಕೊಂಡು ಗುರುವಿನ ಋಣ ತೀರಿಸಿದ್ದಾರೆ. ಇವರು ಶಿಕ್ಷಕ ನಾಟಕಕಾರ, ಸಾಹಿತ್ಯ ಆರಾಧಕ, ಕೀರ್ತನಕಾರ ಮತ್ತು ವಿಶಿಷ್ಟ ಸಮಾಜ ಸೇವಕರಾಗಿದ್ದರು. ಟ್ರೇನಿಂಗ್ ಕಾಲೇಜಿನ ಶಿಕ್ಷಕರಾಗಿದುಕೊಂಡು ಮಾಡಿದ ಬೋಧನೆ, ರಚಿಸಿದ ಕೃತಿಗಳು ಮತ್ತು ಕನ್ನಡಕ್ಕಾಗಿ ಕೈಕೊಂಡ ಆಚರಣೆಗಳು ನಿತ್ಯ ಅನುಕರಣೀಯವಾಗಿವೆ.

ಇವರು ರಚಿಸಿ, ಹಾಡಿದ ಕನ್ನಡಾಭಿಮಾನ ಮತ್ತು ಕರ್ನಾಟಕತ್ವವನ್ನು ಬಡಿದೆಬ್ಬಿಸುವ ಹಾಡುಗಳು ಮನೆಮನೆಯಲ್ಲಿ ಜಾಗೃತಿಯ ಡಂದುರವನ್ನೇ ಬಾರಿಸಿದ್ದವು. ಇವರು ಉತ್ತರ ಕರ್ನಾಟಕದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಚಾಲಕರಾಗಿದ್ದಾರೆ. ಹಣಕಾಸಿನ ಕೊರತೆಯಾಗಿ ಸಂಘಟಕರು ಕೈಚೆಲ್ಲಿದಾಗ, ನಾನು ರಾಷ್ಟ್ರ ಭಿಕ್ಷುಕ, ರಾಜರಿಂದಾಗದ ಸಹಾಯವನ್ನು ಭಿಕ್ಷಾವೃತ್ತಿಯಿಂದ ಮಾಡಬಲ್ಲೆ' ಎಂದು ಹೇಳಿ, ಹೆಗಲಿಗೊಂದು ಜೋಳಿಗೆ ಹಾಕಿ 'ಬೇಡಲು ಕನ್ನಡದ ದಾಸಯ್ಯ ಬಂದಿಹನು ನೀಡಿರವ್ವ.. ತಡಮಾಡದೆಲೇ' ಎಂದು ಹಾಡುತ್ತ, ಊರೂರು ತಿರುಗಿ ಹಣ ಸಂಗ್ರಹಿಸಿ ತಂದು ಕೊಟ್ಟಾಗ ಸಮ್ಮೇಳನ ಜರುಗಲು ಸಾಧ್ಯವಾಯಿತು. ಈ ಕನ್ನಡಕ್ಕಾಗಿ ಹಿಡಿದ ಜೋಳಿಗೆ ಮತ್ತೊಮ್ಮೇ ಎತ್ತುವ ಮೊದಲೇ ವಿಧಿವಶರಾದರು. ಈ 'ಅಕ್ಷರದ ಜೋಳಿಗೆ' ಸಂಸ್ಕೃತಿಗೆ ನಾಂದಿ ಹಾಡಿದರೂ ನಂತರದ ದಿನಗಳಲ್ಲಿ ಅದು ಅನುಕರಣೀಯವಾಗಿ ಮುಂದುರೆಯಲೇ ಇಲ್ಲ. ಇವರು ರಚಿಸಿದ ಕೃತಿಗಳೆಂದರೆ:

ಕಾವ್ಯ

೧. (ಪತಿಭಾರ್ಯಾಮರಣ)ಅಲಾವೀ ಜಂಗು
೨. ರಸಿಕಾರಸಿಕವಿಚಾರ
೩. ಆನಂದ ಲಹರೀ
೪. ನಾಟಕಪದ ಸಂಗ್ರಹ
೫. ಬಾಲೋಪದೇಶ
೬. ಶೃಂಗಾರಪದ ಸಂಗ್ರಹ (ಭಾಗ ೧–೨)
೭. ಶ್ರೀಕೃಷ್ಣ ಮೋಹಿಣೀ(ದುಂದುಮೆ)
೮. ಸ್ಫುಟ ಕವಿತಾ ಸಂಗ್ರಹ
೯. ಪುಷ್ಪ ಬಾಣ ವಿಲಾಸ
೧೦. ರಸಿಕಾರಸಿಕ ವಿಚಾರ
೧೧. ವಿಷಕಂಠ ಖಡ್ಗ
೧೨. ಸ್ಯಮಂತಕಮಣಿ ಚರಿತ್ರೆ

ಕಾವ್ಯಾನುವಾದ:

೧೩. ಋತು ಸಂಹಾರ
೧೪. ಮೇಘಧೂತ
೧೫. ರಘುವಂಶ (೩ನೆಯ ಸರ್ಗ)
೧೬. ವಿರಹತರಂಗ

ಕೀರ್ತನಗಳು:

೧೭. ಗಜೇಂದ್ರಮೋಕ್ಷ
೧೮. ಮುಕುಂದ ದಾನಾಮೃತ(ಶ್ರೀ ಕೃಷ್ಣ ದಾನಾಮೃತ)
೧೯. ರಾವಣ–ವೇದವತಿ)

೨೦. ಶ್ರೀಮತಿ ಸ್ವಯಂವರ
೨೧. ಶ್ರೀ ವಿದ್ಯಾರಣ್ಯ ವಿಜಯ
೨೨. ಹರಿಮಿತ್ರೋಪಖ್ಯಾನ

ನಾಟಕಗಳು

೨೩. ಆಂಜನೇಯ ವಿಜಯ
೨೪. ಉಷಾಹರಣ (ಬಾಣಾಸುರ)
೨೫. ಕನಕವಲ್ಲರೀ(ಶೂರಸ್ತ್ರೀ ಪ್ರತಾಪ)
೨೬. ಕಾಳಾಸುರ
೨೭. ಕೀಚಕವಧ(ವಿರಾಟಪರ್ವ)
೨೮. ಗಾಲವ ಚಿತ್ರಸೇನ
೨೯. ಗಿಳಿಮರಿ ಬೇಕೆ?
೩೦. ಚಂದ್ರಾವಳಿ ಚರಿತ್ರೆ
೩೧. ಜರಾಸಂದ ವಧ
೩೨. ನಾರದ ಕುಚೇಷ್ಟಾ
೩೩. ಬೃಹಜ್ಜಂಬೂ ಚರಿತ್ರೆ
೩೪. ಭುಜಂಗೋಪದೇಶ
೩೫. ಮಯೂರಧ್ವಜ ಪ್ರತಾಪ
೩೬. ರತಿ ಕಲ್ಯಾಣ (ಬಯಲಾಟ)
೩೭. ರಾವಣ ವಧ
೩೮. ವತ್ಸಲಾಹರಣ
೩೯. ವಿಶ್ವಮಿತ್ರ ತಪೋಭಂಗ (ಶಕುಂತಲಾ ಉತ್ಪತ್ತಿ)
೪೦. ವ್ಯಭಿಚಾರಾನರ್ಥ ಸಿಂಧು
೪೧. ಶ್ರೀಕೃಷ್ಣರಾಧಾ ವಿಲಾಸ
೪೨. ಶ್ರೀಯಾಳ ಸತ್ವ ಪರೀಕ್ಷೆ
೪೩. ಸೀತಾರಣ್ಯ ಪ್ರವೇಶ
೪೪. ಸೀತಾಸ್ವಯಂವರ
೪೫. ಸುಂದೋಪಸುಂದವಧ
೪೬. ಸುಧನ್ವವಧ
೪೭. ಹರಗರ್ವ ಪರಿಹಾರ
೪೮. ಹರಿಶ್ಚಂದ್ರ ಸತ್ವಪರೀಕ್ಷಾ(ಭಾಗ ೧–೨)
೪೯. ವಾಸಪ್ಪ ನಾಯಕನ ಪಾರ್ಸು

ಅನುವಾದ ನಾಟಕಗಳು:

೫೦. ಗಿರಿಜಾ ಕಲ್ಯಾಣ (ಪಾರ್ವತಿ ಪರಿಣಯ)
೫೧. ನಾಗಾನಂದ
೫೨. ಮೃಚ್ಛಕಟಿಕ

ಕಥಾಸಾಹಿತ್ಯ

೫೩. ಅಡ್ಡಕಥೆಗಳ ಬುಕ್ಕು
೫೪. ಕವಿಕಂಠ ಕುಠಾರ (ಕಲ್ಪಿತ ಕಾದಂಬರಿ)
೫೫. ಸಿಂಹಾಸನಬತ್ತೀಸ ಪುತ್ಥಳಿ

ಶಾಸ್ತ್ರ ಸಾಹಿತ್ಯ

೫೬. ಅಲಂಕಾರ ಶಾಸ್ತ್ರ –೧
೫೭. ಲಘು ಕವಿತಾ ಪದ್ಧತಿ(ಟಿಪ್ಪಣಿ)

ಹಾಸ್ಯ ಪ್ರಬಂಧಗಳು

೫೮. ಕಾಲ ಮಹಿಮೆ
೫೯. ವಾಸಪ್ಪನಾಯಕನ ಪಾರ್ಸು

ಶಾಲಾಪಯೋಗಿ ಪುಸ್ತಕಗಳು

೬೦. ಕನ್ನಡ ಕವಿತೆಯ ಮೊಲನೆಯ ಪುಸ್ತಕದ ಶಬ್ದಾರ್ಥ ಭಾವಾರ್ಥಗಳು
೬೧. ಲೇಖನ ಪದ್ಧತಿಯು

ಬಿಡಿ ಕವನಗಳು

೬೨. ಅತ್ತೆ ಮನೆಗೆ ಹೊರಟ ಮಗಳಿಗೆ ತಾಯಿಯ ಉಪದೇಶ
೬೩. ಆರ್ಯರ್ಗಳ ಧರ್ಮ (ಅಪೂರ್ಣ)
೬೪. ಏಕೆ ಬಡತನ ಬಂತು?
೬೫. ಕನ್ನಡ ದಾಸಯ್ಯ
೬೬. ಕನ್ನಡಿಗರ ಕಿಂ ಕರ್ತವ್ಯಂ?
೬೭. ಕನ್ನಡಿಗರೆ ಅಭಿಮಾನವು ಎಲ್ಲಿರುವುದು?
೬೮. ಕರ್ನಾಟಕ ಭೂದೇವಿ ಸ್ತವನ
೬೯. ಕಮತವನ್ನು ಮುರಿದು ಬಡವನಾದ
೭೦. ಕವಿಯ ಪ್ರಪಂಚ
೭೧. ಕವಿಸೃಷ್ಟಿ
೭೨. ಕಾಲಮಹಿಮೆ
೭೩. ಕುಣಿಯೆ ದೇವಿ ಕುಣಿಯೆ
೭೪. ನಾಟಕ
೭೫. ನೀ ಯಾರಿಗ್ಹೇಳತಿ
೭೬. ಪ್ರಭಾತ ಪ್ರಾರ್ಥನೆ
೭೭. ಪ್ರಭಾತ ಸಮಯ
೭೮. ಪ್ರಾಣದೇವರ ಪ್ರಾರ್ಥನಾ ಪದ
೭೯. ಬರೆಯುವ ಕೋಣೆ
೮೦. ಮೂರೂ ಸಂಜೆ
೮೧. ಮೆರವಣಿಗೆ
೮೨. ಸಾನಿ(ವೇಶ್ಯೆ)
೮೩. ಹರಿಕಥೆಯನು

ಇತರೆ ಬರಹಗಳು

೮೪. ಕನ್ನಡಿಗರಿಗೆ ಸವಾಲುಗಳು
೮೫. ಬರಗಾಲರಸು
೮೬. ವೇಶ್ಯಾವಾಟಿಕಾ ಸಂಚಾರ
೮೭. ಶೃಂಗಾರ ಸಾಗರ
೮೮. ಸದ್ವರ್ತನ

ಹೀಗೆ ಇವರು ಗೇಯ ಗೀತ, ಕೀರ್ತನ, ಪದ್ಯ ಮತ್ತು ಗದ್ಯಮಯ ಎರಡೂ ಬಗೆಯ ನಾಟಕ, ಕಥೆ, ಅಲಂಕಾರ, ಛಂದಸ್ಸು, ಬಿಡಿ ಕವನ ಮತ್ತು ಶಾಲಾ ಉಪಯೋಗಿ ಕೃತಿಗಳನ್ನು ರಚಿಸಿ ಮಹಾನ್ ಲೇಖಕನೇ ಆಗಿದ್ದರು. ಸಮಾಜಸೇವಾ ಮನೋಭಾವದ, ನೇರ ನಿಷ್ಠುರ ನುಡಿಯ, ಸರಳ ಸಜ್ಜನಿಕೆಯ ಸ್ವಭಾವದವರಾಗಿದ್ದರು. ಕವಿ, ಸಾಹಿತಿ, ನಟ, ನಿರ್ದೇಶಕ ಎಲ್ಲವೂ ಆಗಿದ್ದರು.

ಆದರೆ ೧೮೭೯ರಲ್ಲಿಯೇ ಸಕ್ಕರಿಯವರು ಒಮ್ಮೆಲೆ ಹನ್ನೊಂದು ಕೃತಿಗಳನ್ನು ಬರೆದುದು ಒಂದು ಅಘಾದ ವಿಷಯವಾದರೆ, ಅವುಗಳನ್ನು ಹೀಗೆ ೨೦ ರೂಪಾಯಿಗೆ ಹರಾಜು ಹಾಕಿದ್ದೂ ಊಹಿಸಲಸಾಧ್ಯವಾದ ಆಘಾತಕರ ವಿಷಯವಾಗಿ ತೋರುತ್ತದೆ. ಪಠ್ಯ ಪುಸ್ತಕಗಳಿಗೆ ಅಷ್ಟೊಂದು ಬೇಡಿಕೆ ಇದ್ದಾಗಲೂ, ಅಧಿಕಾರಿ ಸ್ಥಾನದಲ್ಲಿ ಬೇಕಾದವರೇ ಇದ್ದರೂ, ಪ್ರಕಟಿಸುವ ಸೌಜನ್ಯ ಕಾಣದೆ, ಈ ಲೇಖಕ ಹೀಗೆ ಹಕ್ಕು ಬಿಟ್ಟುಕೊಡುವ ಪರಿಸ್ಥಿತಿ ಬಂದುದು ಅಯೋಮಯವೆನಿಸುತ್ತದೆ. 'ಆ ಕಾಲಕ್ಕಾಗಲೇ ಶಾಂತಕವಿಗಳನ್ನು ತೀರ ಹತ್ತಿರದಿಂದ ಕಂಡಿದ್ದ ಡೆಪ್ಯೂಟಿ ಚನ್ನಬಸಪ್ಪ ಧಾರವಾಡ, ವೆಂಕಟ ರಂಗೋ ಕಟ್ಟಿ, ರಾ.ಹ.ದೇಶಪಾಂಡೆ, ರೊದ್ದ ಶ್ರೀನಿವಾಸರಾವ, ಮುದವೀಡು ಕೃಷ್ಣರಾವ, ಮಂಗಳವೇಡೆ ಶ್ರೀನಿವಾಸರಾವ, ಕಡಪಾ ರಾಘವೇಂದ್ರರಾವ, ಕಾವ್ಯಾನಂದ ಪುಣೇಕರ ಮುಂತಾದವರು ಅವರ ಯೋಗ್ಯತೆಯನ್ನು ನಿರ್ಲಕ್ಷಿಸಿದ್ದು ಸ್ಪಷ್ಟವಿದೆ. ಅವರು ಯಾರ ಮುಲಾಜಿಗೂ ಒಳಗಾಗದ, ಸ್ವತಂತ್ರ ಮನೋಭಾವದ, ಸಾಮಾನ್ಯ ಶಾಲಾ ಮಾಸ್ತರರಾಗಿದ್ದರು ಎಂಬುದು ಒಂದು ಕಾರಣವಾದರೆ, ಇಂಗ್ಲಿಷ ಅಧಿಕಾರಿಗಳ ಕಟು ದೃಷ್ಟಿಗೆ, ಆವಜ್ಞೆಗೆ ತುತ್ತಾದವರು; ಹಾಗೂ ಬಡವರು ಎಂಬ ಕಾರಣವೂ ಇದ್ದಿರಬಹುದು'[೨೮] ಎನ್ನುವ ಆಪಾದನೆಯೂ ಇದೆ. ಇವರು ಹಿಡಿದ ಕನ್ನಡದ 'ಜೋಳಿಗೆ ಸಂಸ್ಕೃತಿ' ಅವರೊಂದಿಗೆ ಕೊನೆಗೊಂಡಿದ್ದು ಕನ್ನಡದ ದುರಾದೃಷ್ಟ. ವ್ಯಕ್ತಿ ಕೊನೆಗೊಳ್ಳುವುದು ಪ್ರಕೃತಿದತ್ತ; ಆದರೆ ಒಂದು ಭಾಷೆ, ಶಿಕ್ಷಣ ಮತ್ತು ಸಾಹಿತ್ಯಗಳ ಸಂಗಮ, ಕಲೆಯ ಗಂಗೋತ್ರಿ, ಸಾಧನೆ ಮತ್ತು ಸಾಧನಗಳು ಹೀಗೆ ಹೇಳ ಹೆಸರಿಲ್ಲದಂತೆ ಬತ್ತಿ ಹೋದುದು ಅದೇಂಥ ಸಂಸ್ಕೃತಿಯ ಪ್ರತೀಕ? ಇವರ ಸ್ಮರಣೆಯಲ್ಲಿ ವಾಗ್ಭೂಷಣ' ಪತ್ರಿಕೆಯನ್ನು ಸಂಪಾದಿಸುತ್ತಿದ್ದ ಸಂದರ್ಭದಲ್ಲಿ ಬೇಂದ್ರೆಯವರ ಸೂಚನೆಯಂತೆ ಕರ್ನಾಟಕ ವಿದ್ಯಾವರ್ಧಕ ಸಂಘದ ಮೇಲ್ಮಹಡಿಯಲ್ಲಿದ್ದ ವಾಚನಾಲಯಕ್ಕೆ 'ಶಾಂತೇಶ ವಾಚನಾಲಯ' ಎಂದು ಹೆಸರನ್ನಿಟ್ಟಿದ್ದನ್ನು, ಪುಸ್ತಕಗಳ ಮೇಲೆ ಶಾಂತೇಶ ವಾಚನಾಲಯವೆಂದೇ ಮುದ್ರೆ ಇದ್ದುದನ್ನೂ ಮತ್ತು ಅದು ಈಗ ಹೇಳಕೇಳದೆ ಮಾಯವಾಗಿರುವುದನ್ನು ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಬಹಳ ಖೇದದಿಂದ ಖಂಡಿಸುತ್ತಾರೆ. ಸಂಸ್ಕೃತಿಯ ಪ್ರಮುಖ ವಾಹಕಗಳು ತಮ್ಮ ಕರ್ತವ್ಯದಿಂದ ವಿಮುಖವಾದಾಗ ಎಲ್ಲವೂ ಅರ್ಥಹೀನವಾಗುತ್ತವೆ. ಆದರೆ ಶಾಂತಕವಿಗಳ ಮಹತ್ವವನ್ನರಿತು ಅವರನ್ನು ಸನ್ಮಾನಿಸಿದ, ಸತ್ಕರಿಸಿದ ಮತ್ತು ಆದರಿಸಿ, ಸಹಕರಿಸಿದ ಸಾರ್ವಜನಿಕರಿಗೇನೂ ಕಡಿಮೆ ಇಲ್ಲ. ಬೆಳಗಾವಿಯ ಜನ ಕೈಗಡಿಯಾರ, ಟೊಪ್ಪಿಗೆ ಮತ್ತು ಉಡುಪು ನೀಡಿ, ಸಾರ್ವಜನಿಕವಾಗಿ ಮೆರವಣಿಗೆ ಮಾಡಿದರೆ, ಅಗಡಿಯ ಜನ ಮನೆಯ ಮಗನಂತೆ ಅವರನ್ನು ಹತ್ತು ವರ್ಷಗಳ ಕಾಲ ಕಾಪಾಡಿದ್ದು ಸಾಹಿತ್ಯಕ್ಕೆ ಸಂದ ಗೌರವವಾಗಿದೆ.

ಹೀಗೆ ಒಂದು ಪತ್ರಿಕೆ, ಒಂದು ಗ್ರಂಥ, ಒಬ್ಬ ವ್ಯಕ್ತಿ– ಇವು ಹಲವುಗಳಿಗೆ ಸಮಾನವಾಗಿ ಕಾರ್ಯ ಕೈಕೊಂಡಿದ್ದು, ನೀಡಿದ ಸಾಂಸ್ಥಿಕ ಸಮನ್ವಯತೆ ವರ್ಣನೆಗೆ ನಿಲುಕದಂಥದ್ದು.

ಕೊನೆ ಟಿಪ್ಪಣಿ

೧. ಸಾಹಿತ್ಯ ಸಂಶೋಧನೆ- ದ.ರಾ ಬೇಂದ್ರೆ, ಪುಟ ೧೭೬, ೧೯೪೦
೨. ಅದೇ ಪುಟ ೧೭೩,
೩. ಕನ್ನಡ ಶಾಲಾ ಪತ್ರಿಕೆ, ಪುಸ್ತಕ ೩೦, ಸಂಚಿಕೆ ೧, ಜನೇವರಿ ೧೮೯೫
೪. ಹೊಸಗನ್ನಡ ಅರುಣೋದಯ- ಶ್ರೀನಿವಾಸ ಹಾವನೂರು. ಪುಟ ಸಂಖ್ಯೆ – ೮೨, ೨೦೦೦
೫. ಹೊಸಗನ್ನಡ ಸಾಹಿತ್ಯದ ಉದಯಕಾಲ- ರಾ.ಯ.ಧಾರವಾಡಕರ –ಪುಟ–೬೦, ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ, ೧೯೭೫,
೬. ಕನ್ನಡಿಗರ ಜನ್ಮ ಸಾರ್ಥಕತೆ–ವಲ್ಲಭ ಮಹಾಲಿಂಗ ತಟ್ಟಿ- ಮುನ್ನುಡಿಯಿಂದ ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ೧೮೯೨,
೭. ರಂ. ಶ್ರೀ. ಮುಗಳಿ –ಕನ್ನಡ ಸಾಹಿತ್ಯ ಚರಿತ್ರೆ ಪುಟ – ೩೯೯, ೧೯೯೦
೮. ಕವಿತಾ ಸಂಗ್ರಹವು- ಗಂ.ಮ.ತೂರ್ಮರೀ. ಮುನ್ನುಡಿಯಿಂದ, ಬೆಳಗಾವಿ. ೧೮೭೪
೯. ಶಾಲಾ ಪತ್ರಕ, ಪು.೨೦, ಸಂ೧೧, ಪುಟ ೨೪೬, ೫ ಡಿಸೆಂಬರ್ ೧೮೮೫,
೧೦. ಶಾಲಾ ಪತ್ರಕ– ಪು ೨೯/೨, ಪುಟ ಬೆನ್ನುಪುಟ, ಫಭ್ರುಅರಿ ೧೮೯೪
೧೧. ವಾಗ್ಭೂಷಣ– ಸಂ.೨೯: ಸಂ೨–ಪು.೪, ಸಪ್ಟಂಬರ ೧೯೨೪
೧೨. ಕನ್ನಡ ಶಾಲಾ ಪತ್ರಿಕ ಸಂ.೬೦,ಸಂ.೮, ಪುಟ–೬ ೧೯೨೩
೧೩. ಕನ್ನಡ ಶಾಲಾ ಪತ್ರಕ, ಸಂ೬೧, ಸಂ.೧/೨೦, ಮೇ/ಜೂನ್ ೧೯೨೪
೧೪. ಕನ್ನಡ ಪ್ರಾಥಮಿಕ ಶಿಕ್ಷಣ, ಸಂ ೬೭, ಸಂ ೧೦, ಪುಟ ೩೨, ೧೯೩೧,
೧೫. ಕನ್ನಡ ಪ್ರಾಥಮಿಕ ಶಿಕ್ಷಣ, ಸಂ ೬೭, ಸಂ ೮/೯, ಪುಟ ೪೩/೪೪, ೧೯೩೧
೧೬. ಕನ್ನಡ ಪ್ರಾಥಮಿಕ ಶಿಕ್ಷಣ, ಸಂ ೬೮, ಸಂ ೧೦, ಒಳಪುಟ, ೧೯೩೨
೧೭. ಕನ್ನಡ ಪ್ರಾಥಮಿಕ ಶಿಕ್ಷಣಸಂ ೬೯, ಸಂ ೧೦, ರಕ್ಷಾಪುಟದ ಒಳಪುಟ, ೧೯೩೩,
೧೮. ಕನ್ನಡ ಪ್ರಾಥಮಿಕ ಶಿಕ್ಷಣ ಸಂ–೭೦, ಸಂ೨/೩, ಪುಟ ೫೯, ಮೇ ೧೯೩೩,
೧೯. ಕನ್ನಡ ಪ್ರಾಥಮಿಕ ಶಿಕ್ಷಣ ಸಂ–೭೦, ಸಂ೬, ಬೆನ್ನುಪುಟದ ಒಳಪುಟ, ಸಪ್ಟಂಬರ ೧೯೩೩,
೨೦. ಕನ್ನಡ ಪ್ರಾಥಮಿಕ ಶಿಕ್ಷಣ ಸಂ೭೪, ಸಂ ೨ ಮೇ ೧೯೩೭
೨೧. ಕನ್ನಡ ಪ್ರಾಥಮಿಕ ಶಿಕ್ಷಣ ಪುಟ ೪೯–೫೨, ನವೆಂಬರ/ ಡಿಸೆಂಬರ, ೧೯೩೮,
೨೨. ಕನ್ನಡ ಪ್ರಾಥಮಿಕ ಶಿಕ್ಷಣ ೭೮/೧ ಪು ೧೦, ಮಾರ್ಚ ೧೯೪೦
೨೩. ಕನ್ನಡ ಪ್ರಾಥಮಿಕ ಶಿಕ್ಷಣ, ೭೮/೧ ಪು೧೦ ಏಪ್ರೀಲ್ ೧೯೪೦
೨೪. ಕನ್ನಡ ಪ್ರಾಥಮಿಕ ಶಿಕ್ಷಣ, ೭೮/೧ ಪು೧೦ ಜೂನ್ ೧೯೪೦
೨೫. ಕನ್ನಡ ಪ್ರಾಥಮಿಕ ಶಿಕ್ಷಣ ೭೯/೬ ಸಪ್ಟಂಬರ, ೧೯೪೦
೨೬. ಶಾಲಾ ಪತ್ರಕ– ಪು ೨೦ ಸಂ–೧೦ ಪುಟ ೨೧೮–೨೧೯, ಅಕ್ಟೋಬರ ೧೮೯೦
೨೭. ಶಾಲಾ ಪತ್ರಕ– ಪು ೨೦ ಸಂ–೧೧ ಪುಟ ೧–೪, ನವಂಬರ ೧೮೯೦
೨೮. ಉತ್ತರ ಕರ್ನಾಟಕದಲ್ಲಿ ಕನ್ನಡ ಕಟ್ಟಿದ ಮಹನೀಯರು–ಸಂ. ಆರ್.ದೊಡ್ಡೆಗೌಡ. ಲೇ– ಶಾಂತಕವಿಗಳ ಇತಿವೃತ್ತ ಮತ್ತು ಕನ್ನಡ ಕಟ್ಟಿದ ಬಗೆ–ಪ್ರೊ. ಸಿದ್ದಲಿಂಗ ಪಟ್ಟಣಶೆಟ್ಟಿ, ಪುಟ ೧೪೮, ೨೦೧೭,

ಅಧ್ಯಾಯ : ೫

ಕನ್ನಡ ಶಿಕ್ಷಣ, ಸಾಹಿತ್ಯ, ಪತ್ರಿಕಾ ಇತಿಹಾಸ ಮತ್ತು 'ಕನ್ನಡ ಜ್ಞಾನ ಬೋಧಕ/ಮಠ ಪತ್ರಿಕೆ'

ಅಧ್ಯಾಯ ೫

ಕನ್ನಡ ಶಿಕ್ಷಣ, ಸಾಹಿತ್ಯ, ಪತ್ರಿಕಾ ಇತಿಹಾಸ ಮತ್ತು ಕನ್ನಡ ಜ್ಞಾನಬೋಧಕ/ಮಠ ಪತ್ರಿಕೆ

೫.೧. 'ಪತ್ರಿಕೆ'ಯ ಹುಟ್ಟು-ಸ್ವರೂಪ-ಆಶಯ


ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ಕನ್ನಡ ಶಿಕ್ಷಣದ ಪ್ರಸಾರಕ್ಕಾಗಿಯೇ ಹುಟ್ಟಿ (೧೮೫೬) ಕನ್ನಡದ ಮನಸ್ಸುಗಳನ್ನು ಕಟ್ಟಿ, ಆ ಮೂಲಕ ಕನ್ನಡವು ಜನಭಾಷೆಯಾಗಿ ಎಲ್ಲೆಡೆ ಪ್ರಸಾರವಾಗುವಲ್ಲಿ ಅಹರ್ನಿಶಿ ಶ್ರಮಿಸಿ, ಕೀರ್ತಿಗೆ ಭಾಜನವಾಗಿದ್ದು ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜು. ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ವಿಕಾಸಕ್ಕಾಗಿ ಅನೇಕ ನೆಲೆಗಳಲ್ಲಿ ತನ್ನದೇ ಆದ ಕ್ರಿಯಾಪ್ರೇರಕ ಚಟುವಟಿಕೆಗಳನ್ನು ವಿಧಾಯಕಗೊಳಿಸಿದ ಹಿರಿಮೆ ಟ್ರೇನಿಂಗ್ ಕಾಲೇಜಿಗಿದೆ.

ಇಂಥ ಕಾಲೇಜಿನ ಮಾನಸವಾಣಿಯಾಗಿ, ಕನ್ನಡ ನಾಡಿನ ಚರಿತ್ರೆಯಲ್ಲಿ ಮತ್ತು ಪತ್ರಿಕಾ ಇತಿಹಾಸದಲ್ಲಿಯೇ ತನ್ನದೇ ಆದ ಮಹತ್ವದ ಪುಟಗಳನ್ನು ಸೇರಿಸಿ, ಕನ್ನಡ ಅಕ್ಷರ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಮತ್ತು ಶಿಕ್ಷಣದ ತತ್ಕಾಲಿನ ಸಮಾಚಾರಗಳನ್ನು ಮೂಲೆಮೂಲೆಗೂ ತಲುಪಿಸಲು, ಶೈಕ್ಷಣಿಕ ಪ್ರಚಲಿತ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಪರಿಹರಿಸಲು ಆರಂಭಗೊಂಡಿದ್ದು ಈ ಪತ್ರಿಕೆ.

ಒಂದು ಕಾಲಘಟ್ಟದ ಅಧ್ಯಯನಕ್ಕೆ, ಒಂದು ಚಿಕ್ಕ ವರದಿಯೂ ಮಹತ್ವದ ದಾಖಲೆ ಆಗಬಲ್ಲುದು ಎನ್ನುವುದಕ್ಕೆ ಇದರಲ್ಲಿ ಲಭಿಸುವ ವಿಷಯಗಳೇ ಸಾಕ್ಷಿಯಾಗುತ್ತವೆ. ಸಂವಿಧಾನದ ನಾಲ್ಕನೆಯ ಅಂಗವಾದ ಮಾಧ್ಯಮಗಳು ಅದರಲ್ಲೂ ಪತ್ರಿಕೋದ್ಯಮ, ಸಮಾಜಕ್ಕೆ ಮಾರ್ಗದರ್ಶನ ಮಾಡುವಲ್ಲಿ, ಒಳಿತು ಕೆಡುಕು ಬಿಂಬಿಸುವಲ್ಲಿ ಪ್ರಬಲ ಅಸ್ತ್ರವಾಗಿದೆ ಎನ್ನುವ ಸಂದೇಶವನ್ನು ಸಂವಿಧಾನ ನಿರ್ಮಾಣವಾಗುವ ಮೊದಲೇ ಇದು ಸಾರಿ ಬಿಟ್ಟಿದೆ.

ನಾಡಿನ ಸಾಂಸ್ಕೃತಿಕ ಸಾಹಿತ್ಯಿಕ ಚಟುವಟುಕೆಗಳು, ಶೈಕ್ಷಣಿಕ ಸುಧಾರಣಾ ಕಾರ್ಯಗಳು ನಿರಂತರವಾಗಿ ನಡೆದಿರುವುದಕ್ಕೆ ಇದು ಪ್ರಥಮ ಪುರಾವೆಯಾಗಿದೆ. ಶ್ರೀ ಸಿದಸ್ದಪ್ಪ ಕಂಬಳಿ, ಅರಟಾಳ ರುದ್ರಗೌಡ, ಪಾವಟೆ ಮುಂತಾದವರ ಅವಿರತ ಪ್ರಯ್ನಗಳಿಗೆ ಇದು ಮೈಲಿಗಲ್ಲಾಗಿದೆ. ಈ ಪತ್ರಿಕೆಯನ್ನು ಬೆಳೆಸುವ ಮೂಲಕ ತಾವೂ ಎತ್ತಕ್ಕೇರಿದ ಮಹನೀಯರ ನಿಸ್ವಾರ್ಥಸೇವೆಗೆ ಇದು ಸಾಕ್ಷಿಯಾಗುತ್ತದೆ. ಶಂ.ಬಾ ಜೋಶಿ, ಪಂಜೆ ಮಂಗೇಶರಾಯ, ಮುದವೀಡು ಕೃಷ್ಣರಾಯ, ರೊದ್ದರಾಯ, ತುರಮರಿ, ಸ.ಸ.ಮಾಳವಾಡ, ಸಿದ್ದಯ್ಯ ಪುರಾಣಿಕ, ಶಾಂತವೀರ ರಾ ಕಿತ್ತೂರ, ಸಕ್ಕರಿ ಬಾಳಾಚಾರ್ಯ ಮುಂತಾದ ಸಾಹಿತ್ಯ ದಿಗ್ಗಜರನ್ನು ಇದು ಬೆಳೆಸಿದೆ.

ಸಾಮಾನ್ಯವಾಗಿ ಜನಜನಿತವಾಗಿರುವುದು ೧೮೬೫ ರಿಂದ 'ಮಠಪತ್ರಿಕೆ' ಪ್ರಕಟಗೊಳ್ಳತೊಡಗಿತು ಎಂಬ ವಿಷಯ. ಆದರೆ 'ಮಠಪತ್ರಿಕೆ ಪತ್ರಿಕೆ' ಎನ್ನುವ ಹೆಸರಿನಿಂದ ಆರಂಭವಾದದ್ದು ೧೮೬೫ರಲ್ಲಿ; ಅದೇ ಆರಂಭ ಅಲ್ಲ. ಅದು ತನ್ನ ಆರಂಭದ ಹಿನ್ನೆಲೆಯನ್ನು ತಾನೇ ಹೇಳಿಕೊಂಡೇ ಪ್ರಕಟಗೊಂಡಿದೆ. ತಾನೇ ತನ್ನ ಹಿನ್ನೆಲೆಯನ್ನು ಹೇಳುವ ಪ್ರಕಾರ ಎಜ್ಯುಕೇಷನಲ್ ಇನ್ಸಪೆಕ್ಟರ ದೊರೆಗಳ ಆದೇಶದಮೇರೆಗೆ ಮೊದಲು **"ಕನ್ನಡ ಜ್ಞಾನ ಬೋಧಕ"**ವೆಂಬ ಹೆಸರಿನಿಂದ ಮಾಸಿಕ ಪತ್ರಿಕೆಯಾಗಿ ೧೮೬೧ ನವೆಂಬರನಿಂದ ೧೮೬೨ ಮೇ ತಿಂಗಳವರೆಗೂ(ಏಳು ತಿಂಗಳು) ಇದು ಧಾರವಾಡದ ಮುದ್ರಣಾಲಯ(?)ದಲ್ಲಿ ಅಚ್ಚಾಗಿ, ಚನ್ನಾಗಿಯೇ ಸಾಗಿತ್ತು. ಕೆಲವು ಅಡೆತಡೆಗಳಿಂದಾಗಿ ನಷ್ಟವಾದಾಗ, ಪಾಕ್ಷಿಕ ಪತ್ರಿಕೆಯನ್ನು ಹೊರತರಲು ಯೋಚಿಸಿ, ಬೆಂಗಳೂರಿನ ಮುದ್ರಣಾಲಯ(?)ದವರ ಒಪ್ಪಿಗೆ ಪಡೆದು, **"ವಿಚಿತ್ರ ವರ್ತಮಾನ ಸಂಗ್ರಹ"**ಎಂಬ ಹೆಸರಿನಿಂದ ಪಾಕ್ಷಿಕ ಪ್ರಕಟವಾಗತೊಡಗುತ್ತದೆ. ೧೮೬೩ ಡಿಸೆಂಬರ ತಿಂಗಳವರೆಗೆ (ಒಂದುವರೆ ವರ್ಷ) ಚನ್ನಾಗಿಯೇ ಮುದ್ರಣಗೊಳ್ಳು ತ್ತಿದ್ದದ್ದು, ಅಚ್ಚುಕೂಟದವರ ಆಯವ್ಯಯ ಹೊಂದಾಣಿಕೆ ಆಗದೆ, ಮುದ್ರಿಸಲು ನಿರಾಕರಿಸಿದ್ದರಿಂದ ಅದೂ ಕೂಡ ನಿಂತು ಹೋಯಿತು. ಮತ್ತೇ **"ಜ್ಞಾನಬೋಧಕ"ವನ್ನೇ** ಮರಳಿ ಆರಂಭಿಸಲು ಆದೇಶವಾದಂತೆ, ಪ್ರಕಟಣೆ ಆಗತೊಡಗಿ ಇಂದಿನಪರಿಯಂತರಕ್ಕೂ ಅಂದರೆ ೧೮೬೫ರವರೆಗೂ ಅದು ಸಾಗಿ ಮತ್ತೇ ಲಾಭ-ನಷ್ಟದ ಪ್ರಶ್ನೆಯಿಂದಾಗಿ ಅದೂ ಕೂಡ ನಿಂತು ಬಿಡುತ್ತದೆ. ಕೊನೆಗೆ ಶಾಲೆಗಳಿಗೋಸ್ಕರವಾಗಿಯೇ 'ಮಠಪತ್ರಿಕೆ'ಯೆಂಬ ಹೆಸರಲ್ಲಿ ಮಾಸಿಕವನ್ನು ಆರಂಭಿಸಬಹುದೆಂದು ಎಜ್ಯುಕೇಷನಲ್ ಇನ್ಸಪೆಕ್ಟರರಾದ ಲಿಟಲ್‌ರು, ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಹಾರ್ವಡ್ ಸಾಹೇಬರಿಗೆ ಕೇಳಿದಾಗ, ಒಪ್ಪಿಗೆ ಕೊಟ್ಟದ್ದರನ್ವಯ ೧೮೬೫ ಏಪ್ರೀಲ ತಿಂಗಳಿನಿಂದ "ಮಠ ಪತ್ರಿಕೆ" ಪ್ರಕಟಣೆ ಆರಂಭವಾಗಿದೆ. ಮಠ ಪತ್ರಿಕೆಯೇ ಮೊದಲಲ್ಲ. ಅದಕ್ಕೆ ಅದರದ್ದೇ ಹಿನ್ನೆಲೆ ಇರುವುದರಿಂದ ಪತ್ರಿಕೆಯ ಇತಿಹಾಸವನ್ನು "ಜ್ಞಾನಬೋಧಕ"ದಿಂದಲೇ ಆರಂಭಿಸಬೇಕಾಗುತ್ತದೆ. ಆದ್ದರಿಂದ ಪತ್ರಿಕೆಯ ಇತಿಹಾಸ ನಿಸ್ಸಂದೇಹವಾಗಿ ಹಿಂದಕ್ಕೆ ಸರಿಯುತ್ತದೆ. ೧೮೬೧ರಿಂದಲೇ ಇದರ ಇತಿಗತಿಯನ್ನು ನಾವು ಪರಿಗಣಿಸಬೇಕಾಗುತ್ತದೆ. ೧೯೭೦ರಲ್ಲಿ ಪ್ರಕಟವಾದ ತಿ.ತಾ.ಶರ್ಮಾರ 'ವಿಚಾರ ಕರ್ನಾಟಕ' ಕೃತಿಯ ಪುಟ ೧೦೩ರಲ್ಲಿ 'ಕನ್ನಡ ಜ್ಞಾನಬೋಧಕ' ಪತ್ರಿಕೆಯ ೧೮೬೨ ಮಾರ್ಚ ಸಂಚಿಕೆಯ ಮುಖಪುಟದ ಅಚ್ಚು ಕಾಣಸಿಗುತ್ತದೆ. ಈ ಪತ್ರಿಕೆ ಬೆಳಗಾವಿಯಲ್ಲಿ ಸ್ಥಾಪಿತವಾದ 'ಕನ್ನಡ ಭಾಷೆಯಲ್ಲಿ ಪುಸ್ತಕ ಪ್ರಸಿದ್ಧ ಮಾಡುವ ಮಂಡಳಿ'ಯ ಆಶ್ರಯದಲ್ಲಿ ಅದರ ಅಪ್ಪಣೆಯ ಪ್ರಕಾರ, ಧಾರವಾಡದ ಗೋವಿಂದ. ಪ್ರಭಾಕರ. ಜೋಶಿಯವರ 'ಸನ್ಮಾರ್ಗದರ್ಶಕ ಛಾಪಖಾನೆ' ಯಲ್ಲಿ ಮುದ್ರಿಸಿದ್ದಾರೆ.[೧]



ಕನ್ನಡ ಜ್ಞಾನಭೋಧಕವು ೧೮೬೧ ೧೩


ಇದು ಕನ್ನಡ ಮಾಸಪತ್ರಿಕೆ; ಇದರ ಮೊದಲನೆಯ ಸಂಚಿಕೆ ಹೊರಟದ್ದು ೧೮೬೧ನೆಯ ವರ್ಷದ ನವೆಂಬರ್ ತಿಂಗಳಲ್ಲಿ. ಈ ಪತ್ರಿಕೆಯು ಬೆಳಗಾಂವಿ


* ಈ ಪತ್ರಿಕೆಯ ಒಂಬತ್ತು ಸಂಚಿಕೆಗಳ ಮೂಲ ಪ್ರತಿಗಳನ್ನು ನನಗೆ ಕೊಟ್ಟು ಉಪಕಾರ ಮಾಡಿದವರು ನನ್ನ ಮಿತ್ರ ಶ್ರೀಮಾನ್ ವೆಂ. ಮು. ಜೋಶಿಯವರು

ಹೀಗೆ 'ಕನ್ನಡ ಜ್ಞಾನಬೋಧಕ' ಬೇರೆ ಬೇರೆ ಮಾರ್ಗಗಳಲ್ಲಿ ಹಾಯ್ದು, ಮತ್ತೇ ಜ್ಞಾನಬೋಧಕವಾಗಿ ನಂತರ ಮಠಪತ್ರಿಕೆಯಾಗಿದೆ.

ಶ್ರೀನಿವಾಸ ಹಾವನೂರವರು 'ಹೊಸಗನ್ನಡ ಅರುಣೋದಯ'ದ(೨೦೦೦, ತಿದ್ದಿ ಬೆಳೆಸಿದ ಎರಡನೆಯ ಆವೃತ್ತಿ) ಪುಟ ೫೧೦-೫೧೨ರಲ್ಲಿ 'ಜ್ಞಾನಬೋಧಕ' ಪತ್ರಿಕೆಯ ಕುರಿತು ಪ್ರಸ್ತಾಪಿಸುತ್ತಾರೆ. 'ಧಾರವಾಡದಲ್ಲಿ (ಕನ್ನಡ) ಜ್ಞಾನಬೋಧವು ತಲೆದೋರಿತು (ನವೆಂಬರ್ ೧೮೬೧). ಅದರ ಸಂಪಾದಕರು ಯಾರೆಂಬುದನ್ನು ಮೊದಲ ಸಂಚಿಕೆಯಲ್ಲಿ ಕಾಣಿಸಿಲ್ಲವಾದರೂ **ವೆಂಕಟರಂಗೋ ಕಟ್ಟಿಯವರ** ಹೆಸರು ವಿಶೇಷವಾಗಿ ಕಂಡು ಬರುವುದರಿಂದ ಅವರೇ ಇದರ ನಿರ್ವಾಹಕರಿದ್ದರೆಂದು ಹೇಳಬಹುದು. 'ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಛಾಪಿಸಿ ಪ್ರಸಿದ್ಧಿ ಮಾಡುವ ಮಂಡಳಿ' ಎಂಬುದೊಂದು ಸಂಸ್ಥೆಯು ಈ ಪತ್ರಿಕೆಯನ್ನು ಹೊರಡಿಸುತ್ತಿದ್ದುದಾಗಿ ಮೊದಲ ಸಂಚಿಕೆಯ ಒಳಪುಟದಲ್ಲಿ ಕಾಣಿಸಲಾಗಿದೆ. ಅದುವೆ Canerese Varnacular Society. ಸರಕಾರೀ ಅಧಿಕಾರಿಗಳು ಮತ್ತು ಶಿಕ್ಷಕರು ಅದರ ಸದಸ್ಯರಿದ್ದರು. ಸರಕಾರದ ಶಿಕ್ಷಣ ಖಾತೆಗೆ ಅನುವರ್ತಿಯಾಗಿ ಈ ಸಂಸ್ಥೆಯಿದ್ದಿತು. ಸುರುವಿಗೆ ಇದರ ಮುದ್ರಣವು ಧಾರವಾಡದ ಸನ್ಮಾರ್ಗದರ್ಶಕ ಛಾಪಖಾನೆಯಲ್ಲಿ ನಡೆಯುತ್ತಿದ್ದರೂ ಸಂಪಾದನ, ಪ್ರಕಾಶನಗಳ ಕಾರ್ಯವು ಬೆಳಗಾಂವಿಯ ಸರ್ದಾರ್ ಹೈಸ್ಕೂಲಿನಿಂದ ನಡೆಯುತ್ತಿದ್ದಿತು. ಮರಾಠಿಯಲ್ಲಿಯೂ ಕೆಲವು ಲೇಖನ, ಪ್ರಕಟಣೆಗಳು ಇರುತ್ತಿದ್ದವು'..... 'ಕ್ರಿ.ಶ. ೧೮೬೫ರ ಸುಮಾರಿಗೆ ಪತ್ರಿಕೆಯ ಮುದ್ರಣವು ಬೆಳಗಾಂವಿಗೆ ಸ್ಥಳಾಂತರ ಹೊಂದಿತು (ಸಮಾಚಾರ ಪ್ರೆಸ್). ಆಗ ಪತ್ರಿಕೆಯು 'ಪ್ರೆಂಚ್ ಕ್ವಾರ್ಟೋ' ಆಕಾರದಲ್ಲಿ

೨೮ ಪುಟಗಳನ್ನು ಒಳಗೊಂಡಿದ್ದು, ಎರಡು ಆಣೆಗೆ ದೊರೆಯುತ್ತಿದ್ದುದಾಗಿ ಸರಕಾರಿ ವರದಿಯೊಂದು ತಿಳಿಸುತ್ತದೆ'. ಇದರಿಂದ ಶಿಕ್ಷಣ ಇಲಾಖೆಯಿಂದ, ಶಿಕ್ಷಕರ ಸದಸ್ಯತ್ವದಲ್ಲಿ, ಮೊದಲು ಹುಟ್ಟಿದ್ದು 'ಕನ್ನಡ ಜ್ಞಾನಬೋಧಕ' ಪತ್ರಿಕೆ. ಈ ಪತ್ರಿಕೆಯ ಇತಿಹಾಸ ಆರಂಭವಾಗುವುದು ೧೯೬೧ರಿಂದಲೆ. ಅಂತರ್ಜಾಲ ತಾನವೂ ವೆಂಕಟ ರಂಗೋ ಕಟ್ಟಿಯವರೇ ಇದರ ಸಂಪಾದಕರು ಎಂದು ಹೇಳುತ್ತದೆ. ಈ ಪತ್ರಿಕೆಯ ಒಂದು ವರ್ತಮಾನವನ್ನೂ ಹಾವನೂರರು ಉಲ್ಲೇಖಿಸುತ್ತಾರೆ:"ಉತ್ತರ ಕನ್ನಡ ಜಿಲ್ಲೆಯು ಮದ್ರಾಸ ಯಿಲಾಖೆಯೊಳಗಿಂದ ಮುಂಬೈ ಇಲಾಖೆಯೊಳಗೆ ಬರುವದದೆ. ಅದರ ಚಾರ್ಜು ತೆಗೆದುಕೊಳ್ಳುವುದಕ್ಕಾಗಿ ಮುಂಬಯಿ ಸರಕಾರದವರ ತರ್ಫಿನಿಂದ ಫ್ರಯರ್ ಸಾಹೇಬ ಕೌನ್ಸಿಲದಾರರು ಹೋಗಿದ್ದರು. ಆದರೆ ಆ ವ್ಯಾಳಾಕ್ಕೆ ಮದ್ರಾಸ ಸರಕಾರದವರು ಚಾರ್ಜೂ ಕೊಡಲಿಲ್ಲವೆಂದು ಕೇಳುತ್ತೇವೆ" ಇಂಥ ಮಹತ್ತರ ಸುದ್ದಿ ಸಮಾಚಾರಗಳನ್ನೊಳಗೊಂಡ 'ಜ್ಞಾನಬೋಧಕ'ವೇ ಇಂದಿನ 'ಜೀವನ ಶಿಕ್ಷಣ' ಪತ್ರಿಕೆಯ ಮೂಲ ಮತ್ತು ಆದಿ. ಅಂತರ್ಜಾಲದ ವಿಕೀಪಿಡಿಯಾದಲ್ಲಿಯೂ ೧೮೬೧ ನವಂಬರ್‌ನಲ್ಲಿ ವೆಂಕಟರಂಗೋ ಕಟ್ಟಿಯವರ ಸಂಪಾದಕತ್ವದಲ್ಲಿ 'ಜ್ಞಾನಬೋಧಕ' ಪತ್ರಿಕೆ ಅರಂಭವಾದ ದಾಖಲೆ ಇದೆ. 'ಜ್ಞಾನಬೋಧಕ'ದ ಉದರದಲ್ಲಿಯೇ ತಾನು ಹುಟ್ಟಿದಕಥೆಯನ್ನು, ಸ್ವಂತಃ ಇತಿಹಾಸವನ್ನು ಮಠಪತ್ರಿಕೆಯೇ ತನ್ನ ಮೊದಲ ಪುಟದಲ್ಲಿ ಹೇಳಿಕೊಂಡಿದೆ: ಈ ಪುಟವನ್ನು ಇದ್ದ ಹಾಗೆಯೇ ಇಲ್ಲಿ ಪ್ರಕಟಿಸಲಾಗಿದೆ:


ಮಠಪತ್ರಿಕೆಯು.




ಶಿಕ್ಷಕರ, ಅಧಿಕಾರಿಗಳ ಬರಹ, ಲೇಖನಗಳಿಗೆ ಏಕೈಕ ಪ್ರಕಟನಾ ಮಾರ್ಗವಾಗಿ, ಮಾಧ್ಯಮವಾಗಿ, ಸೃಜನಾತ್ಮಕತೆಗೆ ವೇದಿಕೆಯಾಗಿ ಬೆಳಗಾವಿಯಲ್ಲಿ ಜ್ಞಾನ ಬೋಧಕ(೧೮೬೧), ಮಠ ಪತ್ರಿಕೆ(೧೮೬೫) ಎಂಬ ಹೆಸರಿನಿಂದ ೧೮೬೫ ಏಪ್ರೀಲ್‌ನಲ್ಲಿ ಆರಂಭಗೊಂಡಿದೆ. ಶಿಕ್ಷಣ ಇಲಾಖೆಯಲ್ಲಿಯ ಶಿಕ್ಷಕರ ನಿಧಿಯಿಂದ ಭದ್ರತೆ ದೊರೆತ ಮೇಲೆ ಪತ್ರಿಕೆ ಪರಿಪೂರ್ಣ ಸ್ವರೂಪ ಕಂಡಿದೆ. ಈ ಪತ್ರಿಕೆಯು ಆರಂಭದಲ್ಲಿ ಕಲ್ಲಚ್ಚಿನ ಅಥವಾ ಶಿಲಾಮುದ್ರಣದ (ಲಿಥೋಗ್ರಾಫ್) ಪದ್ಧತಿಯಂತೆ ಕೈಯಿಂದ ಬರೆದು ಛಾಪಿಸಲ್ಪಡುತ್ತಿತ್ತು. ಇದು ಬೆಳಗಾವಿಯಲ್ಲಿದ್ದ 'ಸಮಾಚಾರ ಮುದ್ರಣಾಲಯ'ದಲ್ಲಿ ಮುದ್ರಣಗೊಳ್ಳುತ್ತಿತ್ತು. ಆರಂಭದಲ್ಲಿ ಬೆಳಗಾವಿಯ ಭಿಕೋಜಿ ಹರಿಸಾವಂತ,

ರಾಮಚಂದ್ರ ಮತ್ತು ಪ್ರಭಾಕರ ಜೋಶಿ ಎಂಬುವರು ಕಲ್ಲಚ್ಚಿನಲ್ಲಿ ತಯಾರಿಸಿ, ಮುದ್ರಣಕ್ಕೆ ನಾಂದಿ ಹಾಡಿದ್ದರು. ಆರು ವರ್ಷಗಳವರೆಗೆ ಈ ಲಿಥೋಗ್ರಾಫ್‌ನಲ್ಲಿಯೇ ಮುದ್ರಣವಾಗಿ, ನಂತರ ವೆಂಕಟ ರಂಗೋ ಕಟ್ಟಿಯವರ ಪರಿಶ್ರಮದಿಂದಾಗಿ ಅಕ್ಷರ ಜೋಡಣೆ, ಮುದ್ರಣ ಕಂಡಿತು.

ಬ್ರಿಟಿಷರ ಅಧಿನಾಯಕತ್ವದಲ್ಲಿ ದೇಶ, ಇಲಾಖೆಗಳು ಮುನ್ನಡೆದಂಥ ಸಂದರ್ಭದಲ್ಲಿ ಇಲಾಖೆಯ ಭಾರತೀಯ ನೌಕರರು, ಟ್ರಾನ್ಸಲೇಟರರು, ಶಿಕ್ಷಕರು ಮತ್ತು ಅಧಿಕಾರಿಗಳು ಏನೇ ಬರೆದರೂ ಆ ಬರಹದ ಕೆಳಗೆ ಅವರ ಹೆಸರಾಗಲಿ, ಪದನಾಮವಾಗಲಿ ಅಥವಾ ವಿಳಾಸವಾಗಲಿ ಅಚ್ಚಾಗಿಲ್ಲ. ಅದನ್ನು ಬರೆದವರು ಯಾರು ಏನು ಎತ್ತ... ಯಾವುದೂ ಅಲ್ಲಿ ಸಿಗುವುದಿಲ್ಲ. ಅಲ್ಲದೆ ಮೊದಮೊದಲಿನ ಸಂಚಿಕೆಗಳನ್ನು ಗಮನಿಸಿದರೆ ಅಲ್ಲಿ ಹೆಚ್ಚಾಗಿ ಇಲಾಖೆಯ ನೋಟಿಸುಗಳು, ಸರ್‌ಕ್ಯೂಲರ್‌ಗಳು, ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆ, ನೇಮೂಣಿಕೆಗಳು, ಇತರ ಎಲ್ಲ ಪರೀಕ್ಷೆಗಳ ಪ್ರಕಟಣೆಗಳು, ವರ್ಗಾವರ್ಗಿಗಳು, ಶಿಕ್ಷಕರಿಗೆ ಮೇಲಾಧಿಕಾರಿಗಳು ಬರೆದ ಎಚ್ಚರಿಕೆಯ, ಸೂಚನೆಯ, ತಿಳುವಳಿಕೆಯ ಮತ್ತು ವಿಧಿಸಿದ ಶಿಕ್ಷೆಯ ಪತ್ರಗಳೇ ಇವೆ. ಶಿಕ್ಷಣಕ್ಕೆ ಸಂಬಂಧಿಸಿದ ಶೈಕ್ಷಣಿಕವಾದ ಲೇಖನಗಳು ತೀರ ಕಡಿಮೆ ಇರುವುದು ಕಂಡುಬರುತ್ತದೆ. ಕ್ರಮೇಣ ಶೈಕ್ಷಣಿಕ ಬರಹಗಳು ಅಘಾದ ರೀತಿಯಲ್ಲಿ ಪ್ರಕಟಗೊಂಡಿವೆ.

ಆರಂಭದ ಪತ್ರಿಕೆಗಳಲ್ಲಿ ಎಲ್ಲಿಯೂ ಪತ್ರಿಕೆಯ ಸಂಪಾದಕರ ಹೆಸರು ಇಲ್ಲ. ಮಠಪತ್ರಿಕೆಯ ಮೊದಲಿನ ಆವೃತ್ತಿಗಳಲ್ಲಿ ಕೇವಲ 'ಎಡಿಟರ್' ಎಂದಿದೆ. ಈ ಸಂಪಾದಕರ ಹೆಸರು ಅಧಿಕೃತವಾಗಿ ಮಠಪತ್ರಿಕೆ ಪುಸ್ತಕ೨ ಸಂಚಿಕೆ ೧ ಬೆಳಗಾವ, ಮಾಹೆ **ಮೇ ೧೮೬೬ರ** ಪುಟ ೩೨ರಲ್ಲಿ ಇರುವ 'ನೋಟಿಸಿ'ನ ಕೊನೆಗೆ **'ವೆಂಕಟರಂಗೋ ಎಡಿಟರ್'** ಎಂದಿದೆ. ಈ ಆಧಾರದ ಮೇಲಿಂದ ವೆಂಕಟ ರಂಗೋ ಕಟ್ಟಿಯವರೇ ೧೮೬೬ಕ್ಕೂ ಮೊದಲೇ(?) ಸಂಪಾದಕರಾಗಿ ಇದ್ದರು, ಆದರೆ ಖಚಿತವಾಗಿ ಎಲ್ಲಿಂದ? ಎನ್ನುವುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಪತ್ರಿಕಾ ಸಂಪಾದನಾ ಚತುರತೆ ಮತ್ತು ಪ್ರಬುದ್ಧತೆ ಹೊಂದಿದ ಕಟ್ಟಿಯವರು ಸಂಪಾದಕತ್ವವನ್ನು ಸಮರ್ಥವಾಗಿ ನಿರ್ವಹಿಸಿದ್ದರು ಎನ್ನುವುದರಲ್ಲಿ ಸಂದೇಹವೇ ಇಲ್ಲ. ಮುಂದೆ 'ಮಠಪತ್ರಿಕೆ ಪುಸ್ತಕ-೨ ಸಂಚಿಕೆ-೪, ಬೆಳಗಾವಿ **ಅಗಸ್ಟ-೧೮೬೬** ಇಸವಿ' ಪುಟ ಸಂಖ್ಯೆ ೧೦೭ ಮತ್ತು ೧೦೮ ರ ಪ್ರಕಾರ ಇವರು **ಅಗಷ್ಟ ೧೮೬೬** ರಷ್ಟೊತ್ತಿಗೆ ಟ್ರೇನಿಂಗ ಸ್ಕೂಲಿನ ಹೆಡ್ ಮಾಸ್ತರರಾಗಿದ್ದರು ಎಂಬುದಕ್ಕೆ 'ಇಸ್ತಿಹಾರನಾಮೆ (*Notification*)ಯ ಕೆಳಗೆ ಇರುವ ಅವರ ಒಂದು ಸಹಿಯು ಆಧಾರ ಒದಗಿಸುತ್ತದೆ. ಮಠ ಪತ್ರಿಕೆ ಆರಂಭವಾದ ಕೂಡಲೆ ಪತ್ರಿಕೆಯು ಗತಿಶೀಲವಾಗಿ ಮುನ್ನಡೆಯಲು ಶಿಕ್ಷಕರೆಲ್ಲ ತಮ್ಮ ಶಾಲೆಯ ಕುರಿತಾಗಿ ಮತ್ತು ಶಾಲೆಗೆ ಸಹಾಯ ಮಾಡಿದವರ ಕುರಿತಾಗಿ ಹೆಚ್ಚಿನ ತಿದ್ದುಪಡಿ ಇಲ್ಲದಂತೆ ಬರೆದು ಕಳಿಸಿದರೆ ಪ್ರಕಟಿಸಲು ಉತ್ತಮವಾಗುವುದಾಗಿ ಪ್ರಕಟಣೆಯನ್ನೂ ನೀಡಲಾಗಿದೆ.



ಆರಂಭದ ಸಂಚಿಕೆಗಳಲ್ಲಿ ಟ್ರೇನಿಂಗ ಕಾಲೇಜಿಗೆ ಸಂಬಂಧಿಸಿದ ಹೆಚ್ಚಿನ ಸುದ್ದಿಗಳೇನೂ ಇರುವುದಿಲ್ಲ. ಅದರೆ ಇಲಾಖೆಯ ಆಡಳಿತಾತ್ಮಕ ಡಾಯರೆಕ್ಟರವರ ಪ್ರಕಟಣೆಗಳು(ಕನ್ನಡ ಮತ್ತು ಮರಾಠಿ ಏರಡೂ ಭಾಷೆಗಳಲ್ಲಿ) ಮತ್ತು ನಾಲ್ಕೂ ಜಿಲ್ಲೆಗಳಿಗೆ ಸಂಬಂಧಿಸಿದ, ಡಿಎಇಯವರ ಪ್ರಕಟಣೆಗಳು, ಜ್ಞಾಪನಗಳು, ವರ್ಗಾವಣೆ, ಶಿಕ್ಷೆ, ನೇಮಣೂಕಿಗಳೇ ಹೆಚ್ಚಾಗಿವೆ. ಪಠ್ಯಕ್ಕೆ ಸಂಬಂಧಿಸಿ ಏನನ್ನು ಕಲಿಸಬೇಕು, ಶಿಕ್ಷಕ–ವಿದ್ಯಾರ್ಥಿ ಸಂಬಂಧ ಮುಂತಾದ ವಿಷಯಗಳ ಕುರಿತು ಲೇಖನಗಳು ಪ್ರಕಟಗೊಂಡಿವೆ.

ವಂತಿಗೆ:

ಆರಂಭದಲ್ಲಿ ಪತ್ರಿಕೆಯ ಪುಟಗಳು ೨೪ ಇದ್ದು ಇದರ ಬೆಲೆ ಏಷ್ಟೆಂದು ತಿಳಿದು ಬರುವುದಿಲ್ಲ. ಅಧಿಕೃತವಾಗಿ ಮಠಪತ್ರಿಕೆ ಪುಸ್ತಕ ೨ ಸಂಚಿಕೆ ೧ ಮೇ ೧೮೬೬ ಪುಟ ೩೨ರಲ್ಲಿ ಹಿಂದಿನ ತಿಂಗಳ ಪತ್ರಿಕೆಯಿಂದ ಅಂದರೆ ಏಪ್ರೀಲ್ ತಿಂಗಳಿಂದ ಪುಟಗಳ ೧/೩ ಭಾಗ (ಅಂದರೆ ೨೪+೮=೩೨) ಹೆಚ್ಚಿಸಿದ್ದರಿಂದ ಪತ್ರಿಕೆಯ ಕ್ರಯ ಪ್ರತಿಯೊಂದಕ್ಕೆ ೩ **ಆಣೆ** ಮಾಡಲಾಗಿದೆ; ಎಲ್ಲ ಜಿಲ್ಲೆಗಳ ನೇಮಣೂಕ, ಬಾಹಾಲಿ, ಬರತರ್ಫಿ (ಬಹಾಲಿ ಎಂದರೆ 'ಕೆಲಸದಿಂದ ತೆಗೆದವರನ್ನು ಮರಳಿ ತೆಗೆದುಕೊಳ್ಳುವುದು ಮತ್ತು ಬಡತರ್ಫಿ ಎಂದರೆ ಕೆಲಸದಿಂದ ತೆಗೆದು ಹಾಕುವುದು) ಮೊದಲಾದವುಗಳನ್ನೆಲ್ಲ ಪ್ರಕಟಿಸುವ ಇನ್ಸಪೆಕ್ಟರ ಅವರ ಆಶಯದಂತೆ ಪತ್ರಿಕೆಯನ್ನು ಅಭಿವೃದ್ಧಿಗೊಳಿಸಲಾಗಿದೆ. ಆದ್ದರಿಂದ ಬೆಳಗಾವಿ, ಧಾರವಾಡ, ಕಲಾದಗಿ ಮತ್ತು ಉತ್ತರ ಕಾನಡಾ ಅದಕ್ಕಾಗಿ ನಾಲ್ಕೂ ಜಿಲ್ಲೆಯ ಡೆಪ್ಯೂಟಿ ಇನ್ಸಪೆಕ್ಟರಗಳು ಪತ್ರಿಕಾ ಬೆಲೆಯ ಹೆಚ್ಚುವರಿ ಖರ್ಚನ್ನು ತೀವ್ರ ಕಳುಹಿಸಲು 'ವೆಂಕಟರಂಗೋ ಎಡಿಟರ' ಇವರಿಂದ ಸೂಚಿಸಲಾಗಿದೆ. ಅಂದರೆ ನಾಲ್ಕೂ ಜಿಲ್ಲೆಗಳ ಚಂದಾ ಹಣವೇ ಪತ್ರಿಕೆಯ ಜೀವಾಳವಾಗಿತ್ತು ಎಂಬುದು ಇದರಿಂದ ಸಿದ್ಧವಾಗುತ್ತದೆ. ಇದಕ್ಕಿಂತಲೂ ಮೊದಲು ೩ ಆಣೆಗಿಂತ ಕಡಿಮೆ ಇದ್ದ ಪತ್ರಿಕೆಯ ಬೆಲೆ ಪುಟ ಹೆಚ್ಚಳದೊಂದಿಗೆ ೩ ಆಣೆಗೆ ಏರಿಸಲಾಗಿದೆ. ಹೀಗೆ ಪೇಪರ್ ಬೆಲೆ ಹೆಚ್ಚಾದಂತೆ, ಪುಟಗಳು ಹೆಚ್ಚಾದಂತೆ ಬೆಲೆಯೂ ಏರಿಕೆ

ಕಂಡಿದೆ. ಆದರೆ ಎಲ್ಲಿಯೂ ವಾಣಿಜ್ಯೀಕರಣದ ಸೊಂಕು ತಾಗಿಸಿಕೊಂಡಿಲ್ಲ. ಶಿಕ್ಷಕರ ಹಣದ ಮೇಲೇ ಸಾಗುತ್ತಿರುವ ಸಂಪೂರ್ಣ ಅರಿವು ಮತ್ತು ಜವಾಬ್ದಾರಿ ಈ ಪತ್ರಿಕೆಗಿದೆ.

ಅ.ನಂ.	ವರ್ಷ	ಬಿಡಿ ಸಂಚಿಕೆಯ ಬೆಲೆ	ವಾರ್ಷಿಕ ಚಂದಾ
೧	೧೮೬೧	–	–
೨	೧೮೬೫	೧ ಆಣೆ	೮ ಆಣೆ
೩	೧೮೭೮	೧ ಆಣೆ ೩ ಪೈಸೆ	೧೨ ಆಣೆ
೪	೧೮೯೦	೧ ಆಣೆ ೩ ಪೈಸೆ	೧೫ ಆಣೆ
೫	೧೮೯೧	೨ ಆಣೆ	೧೫ ಆಣೆ
೬	೧೯೦೯	೨ ಆಣೆ	೧.೫೦ ರೂಪಾಯಿ
೭	೧೯೨೧	೩ ಆಣೆ	೨ ರೂಪಾಯಿ
೮	೧೯೪೧	೪ ಆಣೆ	೨ ರೂಪಾಯಿ
೯	೧೯೪೮	೬ ಆಣೆ	೪ ರೂಪಾಯಿ
೧೦	೧೯೬೯	೫೦ ಪೈಸೆ	೬ ರೂಪಾಯಿ

ಪ್ರಸ್ತುತ ೧/೪ ಡೆಮಿ, ಅಳತೆಯಲ್ಲಿ, ೩೨+೪=೩೬ ಪುಟಗಳೊಂದಿಗೆ ಪ್ರಕಟವಾಗುತ್ತಿದ್ದು ಬಿಡಿ ಪ್ರತಿಗೆ ೧೫ ರೂ, ವಾರ್ಷಿಕ ಚಂದಾ ೧೫೦ ರೂ ನಿಗದಿಪಡಿಸಲಾಗಿದೆ.

ಇಂದಿಗೂ ಚಂದಾಹಣವನ್ನೇ ಪತ್ರಿಕೆ ಅವಲಂಬಿಸಿದೆ. ಆಗೀಗ ಪತ್ರಿಕೆಯ ಕುರಿತಾಗಿ ಕಾಳಜಿ ಮತ್ತು ಜಿಜ್ಞಾಸೆ ಇರುವ ಅಧಿಕಾರಿಗಳು ಬಂದಾಗ ರಾಜ್ಯ ಕಚೇರಿಯಿಂದ ಅನುದಾನ ಕೊಡಿಸಿದ್ದಾರೆ. ಶಾಶ್ವತ ಆಧಾರವೆಂದರೆ ಶಾಲೆಗಳಿಂದ ಬರುವ ಚಂದಾ ಹಣವೇ. ಪತ್ರಿಕೆಯ ಚಂದಾದಾರರು ಉತ್ತರ ಕರ್ನಾಟಕದಲ್ಲಿಯೇ ಹೆಚ್ಚಾಗಿದ್ದಾರೆ. ಧಾರವಾಡ(ಹಾವೇರಿ, ಗದಗ) ಬೆಳಗಾವಿ (ಚಿಕ್ಕೋಡಿ), ವಿಜಯಪುರ (ಬಾಗಲಕೋಟ), ಕಾರವಾರ(ಶಿರಸಿ) ಈ ನಾಲ್ಕೂ ಜಿಲ್ಲೆಗಳ ಎಲ್ಲ ಪ್ರಾಥಮಿಕ ಶಾಲೆಗಳೂ ಇದರ ಸದಸ್ಯತ್ವವನ್ನು ಹೊಂದಿವೆ. ಇದು ಇಡೀ ಕರ್ನಾಟಕಕ್ಕೆ ಹರಡಬೇಕಿದೆ.

ಪ್ರಸಾರ:

ಆರಂಭದಲ್ಲಿ ಈ ಪತ್ರಿಕೆಯ ಎಷ್ಟು ಪ್ರತಿಗಳು ಪ್ರಕಟಗೊಳ್ಳುತ್ತಿದ್ದವು, ಪ್ರಸಾರ ಏಷ್ಟಿತ್ತು ಎಂಬುದು ಎಲ್ಲಿಯೂ ತಿಳಿದು ಬರುವುದಿಲ್ಲ. ಒಂದು ಪತ್ರಿಕೆಗೆ ಆರ್ಥಿಕ ಮೂಲ ಮತ್ತು ಪ್ರಸಾರವನ್ನು ಮೊದಲೇ ನಿರ್ಧರಿಸಿಕೊಳ್ಳಬೇಕಾಗುತ್ತದೆ. ಇಲ್ಲಿಯೂ ಆರ್ಥಿಕ ಮೂಲ ಶಾಲೆಗಳ ಚಂದಾಹಣವೆಂದು ನಿರ್ಧರಿಸಿಕೊಳ್ಳಲಾಗಿದೆ. ಶಾಲೆಗಳ ಸಂಖ್ಯೆ ಕಡಿಮೆಯಾದರೆ ಚಂದಾ ಹಣದ ಸಂಗ್ರಹವೂ ಕಡಿಮೆಯಾಗಿ ಉಂಟಾದ ತಡೆಯನ್ನು ಹಿಂದೆ ನೋಡಿದ್ದೇವೆ. ಆದರೆ ಪ್ರಸಾರದ ದಾಖಲೆ ಲಭ್ಯವಿಲ್ಲ. ಶ್ರೀ ಶಿಂತ್ರಿ ಬಸಪ್ಪನವರು ಹೇಳುವಂತೆ 'ಪತ್ರಿಕೆಗಳ ಸಂಪತ್ತಿಕ ಸ್ಥಿತಿಯು ಅವುಗಳ ಪ್ರಸಾರವನ್ನು ಅವಲಂಬಿಸಿರುತ್ತದೆ. ಪ್ರಸಾರವು ಹೆಚ್ಚಾದಂತೆ ಪ್ರತಿಗಳನ್ನು ಹೆಚ್ಚಾಗಿ ಹೊರಡಿಸಬೇಕಾಗುತ್ತದೆ. ಪ್ರತಿಗಳ ಸಂಖ್ಯೆಯು ಬೆಳೆದಂತೆ ಮುದ್ರಣ ವೆಚ್ಚ ಕಡಿಮೆಯಾಗುವುದು.

ಇದರಿಂದ ಆರ್ಥಿಕ ಸ್ಥಿತಿ ಸುಧಾರಿಸುತ್ತ ಸಾಗುವುದು ಸ್ವಾಭಾವಿಕ'. ಹಾಗಾಗಿ ನಿರ್ಧರಿತ ವಂತಿಗೆ ಅಥವಾ ಚಂದಾಹಣದ ಮೇಲೆ ಪತ್ರಿಕೆಯ ಪ್ರತಿಗಳು, ಪುಟಗಳು ಅವಲಂಬಿಸಿದ್ದು, ಪ್ರಸಾರವು ಅವುಗಳಿಗೆ ಭದ್ರತೆಯನ್ನು ಒದಗಿಸುತ್ತಿತ್ತು.

೧೮೭೧ ರಲ್ಲಿ ಮತ್ತೇ ೨೪ಕ್ಕೇ ಸೀಮಿತಗೊಂಡು, ಅಷ್ಟೇ ಪುಟಗಳ ಪ್ರಕಟಣೆ ಮುಂದುವರೆದಿದೆ. '೧೮೭೩ರಲ್ಲಿ ಮಾತ್ರ ೪೫೯ ಪ್ರತಿಗಳು ಅಚ್ಚಾಗುತ್ತಿದ್ದುವೆಂಬುದರ ಆಧಾರ ಆಗೀನ ಪ್ರಿನ್ಸಿಪಾಲರ ರಿಪೋರ್ಟನಲ್ಲಿ ಉಲ್ಲೇಖವೂ ಸಿಕ್ಕಿದೆ. ೧೯೪೨ರಲ್ಲಿ ಪ್ರತಿ ತಿಂಗಳು ೧೩೦೦ ಪ್ರತಿಗಳು ಹೊರಡುತ್ತಿದ್ದುವೆಂಬುದರ ಉಲ್ಲೇಖವು ಸಿಕ್ಕಿದೆ... ೧೯೫೩ರಲ್ಲಿ ಪ್ರತಿ ತಿಂಗಳು ಹೊರಡುತ್ತಿದ್ದ ಪ್ರತಿಗಳ ಸಂಖ್ಯೆ ೧೩೨೫ ಇತ್ತು ಮತ್ತು ೧೯೫೪ರ ಕೊನೆಗೆ ಅದು ೧೫೦೦ಕ್ಕೇರಿತು. ಆದರೆ ೧೯೫೬ರಲ್ಲಿ ೨೦೦೦ ಪ್ರತಿಗಳು ಪ್ರತಿ ತಿಂಗಳು ಅಚ್ಚಾಗುತ್ತಲಿವೆ. ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗಳಲ್ಲಿಯ ಎಷ್ಟೋ ಪ್ರಾಥಮಿಕ ಸಾಲೆಗಳಿಗೆ ನಮ್ಮ ಪತ್ರಿಕೆ ಹೋಗುವುದಿಲ್ಲ. ಆದುದರಿಂದ ಜಿಲ್ಲಾ ಹಾಗೂ ಮುಸಿಪಲ್ ಸ್ಕೂಲ್ ಬೋರ್ಡಗಳು ತಮ್ಮತಮ್ಮ ಆಡಳಿತಕ್ಕೊಳಪಟ್ಟಿರುವ ಪ್ರತಿಯೊಂದು ಸಾಲೆಯನ್ನು ಈ ಪತ್ರಿಕೆಯ ಚಂದಾದಾರರಾಗಿ ಮಾಡಲು ಬಿನ್ನವಿಸಿಕೊಳ್ಳಲಾಗಿದೆ[೨] ೧೮೭೬ರಲ್ಲಿ ಶಾಲಾಪತ್ರಕ ಪು ೧೧ ಸಂ ೧೧ ಫೆಬ್ರುವಾರೀ ೧೮೭೬, ಪುಟ-೨೪೮-೨೪೯ರ ಪ್ರಕಾರ ಈ ಪತ್ರಿಕೆಯ ವಿದ್ಯಾವರ್ತಮಾನವನ್ನು ತಿಳಿಸಲಿಕ್ಕಿರುವ ಏಕೈಕ ಸಾಧನವಾಗಿದ್ದು, ಅದರ ಚಂದಾ ಹಣವನ್ನು ನೇರವಾಗಿ ಶಾಲಾ ಸಾದಿಲ್ವಾರದಿಂದ ತೆಗೆದು ಕೊಡಬೇಕು ಎಂಬುದಾಗಿ ದಕ್ಷಿಣ ಭಾಗದ ಎಜ್ಯುಕೇಷನ್ ಇನ್ಸಪೆಕ್ಟರರಾದ ರಸೆಲ್ಲರ ಆಜ್ಞೆಯೇ ಆಗಿದೆ. ಅದು ಈ ಮುಂದಿನಂತಿದೆ:

---

೧ ಕನ್ನಡ ಶಾಲಾಪತ್ರಿಕೆಯು, ಈಗಿರುವ ವ್ಯವಸ್ಥೆಯಲ್ಲಿ ಹಿಡುವದಕ್ಕೆ ಯೋಗ್ಯವೂ, ಮನೋವೇಧಕವೂ ಆಗವೆಂಬ ಆಶೆಯಿಂದಲೂ, ಈ ಪ್ರಾಂತದಲ್ಲಿ ಇದೊಂದೇ ಕನ್ನಡ ಸಮಾಚಾರ ಪತ್ರವಿರುವದರಿಂದಲೂ, ವಿದ್ಯಾಖಾತೆಯ ಸಂಬಂಧದಿಂದ ವರ್ತಮಾನಗಳನ್ನು ಪ್ರಸಿದ್ಧ ಪಡಿಸುವದಕ್ಕೆ ಇದೊಂದೇ ಸಾಧನವಾಗಿರುವದರಿಂದಲೂ, ಮುಂದೆ ನಡಿಸುವದಕ್ಕೆ ನಿರ್ಧರಿಸಿದ್ದೇವೆ.

೨ ಈ ಪುಸ್ತಕದ ರಚನೆಯ ಬಗ್ಗೆಯೂ ಕ್ರಿಯೆಯ ಬಗ್ಗೆಯೂ ಮುಂಬಯಿ ಎಜ್ಯುಕೇಶನಲ್ ರಿಪೋರ್ಟ ಯುಬ ಮಾಸಿಕ ಪುಸ್ತಕದಂತೆ ವ್ಯವಸ್ಥೆ ಮಾಡಿರುತ್ತೇವೆ. ಕ ಶಾಲಾಪತ್ರಕದ ಕರ್ತರಾದ ರಾವಬಹದ್ದೂರ ಮಂಡಾವಗೆ ವೆಕಟೇಶ ಚಿಂತಾಮಣಿ ಪೇಟಕರ, ವಿದ್ಯಾಖಾತೆಯ ಆಗನ ಕನ್ನಡ ಟ್ರಾನ್ಸಲೇಟರ, ಇವರು ಇಂಥಿಂಥಾ ವಿಷಯಳ ಮೇಲೆ ಬರೆದು ಕಳುಹಿರೆಂದು ವೇಳೆ ವೇಳೆಕ್ಕೆ ಸಾಲಮಾಸ್ತರ ಜನರಿಗೆ ಸೂಚನೆ ಕೊಡುವರು. ಅದರಂತೆ ಯಾ ವಿಷಯಗಳ ಮೇಲೆ ಚನ್ನಾಗಿ ಪತ್ರಗಳನ್ನು ಬರೆ ಕಳುಹುವಂಥ ಮಾಸ್ತರ ಜನರ ವಿಷಯಕ್ಕೆ ಸಾಹೇಬರು ರೀತಿಯಿಂದ ಲಕ್ಷದಲ್ಲಿ ಇಡುವೆವು.

೩೪೯

೩ ಒಂದು ಪ್ರತಿಗೆ ವರ್ಷವೊಂದಕ್ಕೆ ೧-೮ ,, ಒಂದು ರೂಪಾಯಿ ಎಂಟು ಆಣೆ" ಬೀಳುವದು; ಈ ಶಿಲ್ಕುಹತ್ತು ಮುಂಗಡ ಪ್ರತಿವರ್ಷದ ಶಾಲೆಯ ಸಾದಿಲವಾರ ನೇಮಣೂಕಿನೊಳಗಿಂದ ಕೊಡಲಿಕ್ಕೇ ಬೇಕು. ಈ ಬಗ್ಗೆ ಡಿ. ಇನಸ್ಪೆಕ್ಟರರು ಕನ್ನಡ ಟ್ರಾನ್ಸಲೇಟರರಿಗೆ ಬರೆದು ವ್ಯವಸ್ಥೆ ಮಾಡಬೇಕು. ಮತ್ತು ಟ್ರಾನ್ಸಲೇಟರರು ಈ ನೋಟೀಸನ್ನು ಕನ್ನಡ ಶಾಲಾಪತ್ರಕದಲ್ಲಿ ಪ್ರಸಿದ್ಧ ಮಾಡಬೇಕು.

ಮು. ಧಾರವಾಡ ೨ನೇ ಫೆಬ್ರುವಾರಿ ೧೮೭೬ (Signed) W. A. Russell.
ಎ. ಇ. ದಕ್ಷಿಣಭಾಗ.

೧೯೦೯ ರಲ್ಲಿ ಪುಟಸಂಖ್ಯೆ ಮತ್ತೇ ೩೨ಕ್ಕೇರಿದೆ; ಮತ್ತು ಪುಸ್ತಕದ ಗಾತ್ರ ೭–೫ ದೊಡ್ಡದಾಗಿದೆ. ಹೀಗೆ ಆಗಾಗ ಪುಟಗಳ ಸಂಖ್ಯೆ ಹೆಚ್ಚು ಕಡಿಮೆ, ಏರಿಕೆ ಇಳಿಕೆಗಳನ್ನು ಕಂಡಿದೆ. ೧೯೧೭ ಜನವರಿ ಸಂಪುಟ ೫೩, ಸಂಚಿಕೆ ೧, ಪುಟ ೧ರಲ್ಲಿ ಶಾಲಾಪತ್ರಕದ ವರ್ಗಣಿದರ, ಜಾಹೀರಾತು ಮತ್ತು ಪತ್ರವ್ಯವಹಾರದ ಕುರಿತಾದ ಸೂಚನೆ ಹೀಗಿದೆ:

ಸೂಚನೆ.

—:0:—

೧ ವರ್ಗಣಿಯದರ:—ವರ್ಷಕ್ಕೆ ಮುಂಗಡ ಅಂಚೇ ವೆಚ್ಚ ಸೇರಿ ರೂ. ೧–೮–೦ ಬಿಡಿ ಸಂಚಿಕೆಗೆ ೨ ಆಣೆ.

ಜಾಹಿರಾತಿನ ದರಗಳು: – ಒಂದು ತಿಂಗಳಿನಿಂದ ಮೂರು ತಿಂಗಳುಗಳ ವರೆಗೆ ಇಟ್ಟರೆ ಪ್ರತಿತಿಂಗಳಿಗೆ ಒಂದು ಸಾಲಿಗೆ ನಾಲ್ಕು ಆಣೆ, ಆರು ತಿಂಗಳು ಇಟ್ಟರೆ ಪ್ರತಿತಿಂಗಳಿಗೆ ಒಂದು ಸಾಲಿಗೆ ಮೂರು ಆಣೆ, ಒಂದು ವರ್ಷ ಇಟ್ಟರೆ ಪ್ರತಿತಿಂಗಳಿಗೆ ಒಂದು ಸಾಲಿಗೆ ಎರಡು ಆಣೆ. ಜಾಹಿರಾತುಗಳು ಶಾಲಾ ಪತ್ರಕಕ್ಕೆ ಒಪ್ಪುವಂಥವಿರಬೇಕು.

೨ ಪತ್ರವ್ಯವಹಾರ:—ಶಾಲಾಪತ್ರಕದ ಸಂಬಂಧದ ಪತ್ರವ್ಯವಹಾರವನ್ನು 'ಮ್ಯಾನೇಜರ ಕನ್ನಡ ಶಾಲಾಪತ್ರಕ' ಈ ಪತ್ತೆಯ ಮೇಲೆ ನಡಿಸಬೇಕು. ಬರೆಯತಕ್ಕ ಸಂಗತಿಯನ್ನು ಸುವಾಚ್ಯ ಅಕ್ಷರಗಳಿಂದ ಕಾಗದದ ಒಂದೇ ಮಗ್ಗಲು ಬರೆದು ಕಳಿಸಬೇಕು. ಹಳೇ ಗ್ರಂಥದೊಳಗಿನ ವಿಷಯವನ್ನೇ ಕಳಿಸುತ್ತ ಕೂಡ್ರಬಾರದು. ಅದನ್ನು ಕಳಿಸುವದಾದರೆ, ಹೊಸಪದ್ಧತಿಯಿಂದ ಕಲಿಸಲಿಕ್ಕೆ ಅನುಕೂಲವಾಗುವ ಹಾಗೆ ಅದಕ್ಕೆ ತಕ್ಕ ರೂಪವನ್ನು ಕೊಟ್ಟಿರಬೇಕು. ಶಿಕ್ಷಣ ಸಂಬಂಧದ ಪ್ರಚಲಿತ ವಿಷಯಗಳು, ಪಾಠದ ಟಿಪ್ಪಣೆಗಳು, ಅನುಭವಿಕ ಶಿಕ್ಷಕರ ಅನುಭವಗಳು, ಹೊಸ ಹೊಸ ಶೋಧಗಳು, ಶಿಕ್ಷಣ ಸಂಬಂಧದ ಉಪಯುಕ್ತ ವರ್ತಮಾನಗಳು ಈ ಪತ್ರಕದಲ್ಲಿ ಬರಲಿಕ್ಕೆ ಅಡ್ಡಿ ಇಲ್ಲ.

ಶ್ರೀ ರಾಘವೇಂದ್ರ ಶೇಷಗಿರಿರಾವ ಮಡಿಮನ್ ಅವರು ಸಂಪಾದಕರಾಗಿ ಇದ್ದಾಗ, ೧೯೪೧ರ ಮಹಾಯುದ್ಧಾನಂತರದ ನಿರ್ಣಾಯಕ ದಿನಗಳವು. ಮಹಾಯುದ್ಧದ ಬೇಗೆಯಿಂದ ಎಲ್ಲ ನಿತ್ಯೋಪಯೋಗಿ ಸಾಮಗ್ರಿಗಳು ಬೆಲೆ ಗಗನಕ್ಕೇರಿದ ಸಂದರ್ಭದಲ್ಲಿ ಕಾಗದವೂ ಮುದ್ರಣ ಸಾಮಗ್ರಿಯೂ ದುರ್ಲಭವಾಗಿ ಅವುಗಳ ಬೆಲೆ ಒಂದಕ್ಕೆ ಎರಡಾದಾಗ ಪತ್ರಿಕೆಯ ಬೆಲೆ ಮತ್ತು ಪ್ರಸಾರದ ಮೇಲೆ ಎಂಥ ಪರಿಣಾಮ ಬೀರುವುದೋ? ಎಂಬುದಾಗಿ ಆತಂಕ ವ್ಯಕ್ತ ಪಡಿಸುತ್ತಾರೆ. ಆದರೆ ಪತ್ರಿಕೆಯ ಆಕಾರ ಮಾತ್ರ ಎಂದಿನಂತೆ ಮುಂದುವರೆದಿದೆ.[೩]

ದ್ವಿತೀಯ ವಿಶ್ವಮೇಧದ ಝಳಕ್ಕೆ ಕಮರಿ, ೧೯೪೩ರಿಂದ ಪತ್ರಿಕೆ **ತ್ರೈಮಾಸಿಕವಾಗಿ,** ಪುಟಗಳು ಕೇವಲ ೨೪ಕ್ಕೆ ಸೀಮಿತಗೊಂಡಿವೆ. ಅದರಲ್ಲೂ ಭಾಷಣ, ಧೀರ್ಘ ಲೇಖನಗಳ ಮುಖ್ಯಾಂಶಗಳನ್ನು ಮಾತ್ರ ಪ್ರಕಟಿಸಿದೆ. ಆದರೆ ೧೯೪೭ ಎಪ್ರೀಲನಲ್ಲಿ ಶಿಕ್ಷಕರ ವೇತನ ಶ್ರೇಣಿಗಳು ಹೆಚ್ಚಾದುದರ ಅವುಗಳ ಮಾಹಿತಿ ನೀಡಲಿಕ್ಕೆಂದು ಪುಟಗಳು ಹೆಚ್ಚಾಗಿವೆ. ಅದಕ್ಕಾಗಿ ಪ್ರಾಚಾರ್ಯ ಮತ್ತು ಸಂಪಾದಕರಾದ ರಂ.ಕೃ.ಲಕ್ಕುಂಡಿಯವರು ವಿನಂತಿಸಿ–ಕೊಂಡಿರುವುದೇನೆಂದರೆ 'ಮುಂದಿನ ಸಂಚಿಕೆಯ ಪುಟಗಳು ಕಡಿಮೆಯಾಗುವವು. ಅಂತೂ ಸಧ್ಯಕ್ಕೆ ಸರಕಾರಿ ನಿಯಮದ ಪ್ರಕಾರ ವರ್ಷದಲ್ಲಿ ೯೬ ಪುಟಗಳಷ್ಟು ಮಾತ್ರ ವಿಷಯವನ್ನು ಕೊಡಲು ಬದ್ಧರು' ಎಂದಿದ್ದಾರೆ. ಆದರೆ ಜೂನ್ ೧೯೪೮ರ ಸಂಚಿಕೆಯಿಂದ ತಾನು ಹೇಳಿದಂತೆ ೩೬ ಪುಟಗಳ, ವಿಶಾಲ ಮತ್ತು ಗುಣಮಟ್ಟದ ಹಾಳೆಗಳೊಂದಿಗೆ ಸದೃಢಕಾಯದಿಂದ ಪ್ರಕಟಗೊಂಡಿದೆ. ಪ್ರಾಚಾರ್ಯ ಮತ್ತು

ಸಂಪಾದಕರಾದ ರಂ.ಕೃ.ಲಕ್ಕುಂಡಿಯವರ ಪರಿಶ್ರಮದಿಂದ ಪತ್ರಿಕೆ ಮರುಜೀವ ತಳೆದು ಮುಂಚಿನಂತೆ ನಳನಳಿಸುತ್ತಿದೆ ಎಂಬುದನ್ನು ತಿಳಿದು, ಕೆ.ಜಿ.ಸಯಾದೀನ, ಮುಂಬೈ ಸರಕಾರದ ಶಿಕ್ಷಣ ಸಲಹೆಗಾರರು, ಮುಂಬಯಿ, ೨೩-೪-೧೯೪೮ಕ್ಕೆ ತಮ್ಮ ಸದಾಶಯದ ಸಂದೇಶ ಕಳುಹಿಸಿದ್ದಾರೆ. ಇದರೊಂದಿಗೆ ಡಿ.ಸಿ.ಪಾವಟೆ, ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸಟ್ರಕ್ಶನ್, ಮುಂಬಯಿ ಪ್ರಾಂತ, ಪುಣೆ, ೨೩-೪-೪೮ ಇವರೂ ಪತ್ರಿಕೆ ಶಿಕ್ಷಣದ ಧ್ಯೇಯವನ್ನು ಸಾಧಿಸುವಲ್ಲಿ ಯಶಸ್ಸು ಕೋರಿ ಸಂದೇಶ ಕಳುಹಿಸಿದ್ದಾರೆ.[೪] ತ್ರೈಮಾಸಿಕದ ಮುಖಪುಟದ ಮೇಲೆ ಇರುತ್ತಿದ್ದ 'ಕನ್ನಡ ಶಿಕ್ಷಿಕೆಯೂ ಕನ್ನಡ ಶಾಲಾ ಪತ್ರಕೆಯೂ ಸಮಾವೇಶಗೊಂಡಿವೆ' ಎಂಬ ಬರಹ ೧೯೪೮ರಿಂದ ನಿಂತು ಹೋಗಿದೆ. ಅಂದರೆ ಮಹಿಳಾ ತರಬೇತಿ ಕೇಂದ್ರದಿಂದ ಸ್ವತಂತ್ರವಾಗಿ ಪ್ರಕಟಗೊಳ್ಳುತ್ತಿದ್ದ 'ಶಿಕ್ಷಿಕೆ', ಶಾಲಾ ಪತ್ರಕದಲ್ಲಿ ಸಮಾವೇಶಗೊಂಡಿತ್ತು. ೧೯೪೮ರಿಂದ ಅದೂ ಕೂಡ ನಿಂತು ಹೋಗಿದೆ. ಶಾಲಾ ಪತ್ರಕ ೧೯೪೯ ಫೆಬ್ರುವರಿ-ಮಾರ್ಚನಿಂದ ಪತ್ರಿಕೆ ದ್ವೈಮಾಸಿಕವಾಗಿ ಪ್ರಕಟಗೊಳ್ಳತೊಡಗಿದೆ.

೧೯೫೫ರ ಜೂನ ಪತ್ರಿಕೆಯ ಸಂಪಾದಕೀಯದಲ್ಲಿ (ಸಂಪಾದಕರು-ಎಸ್.ಪಿ. ಪಾಟೀಲ) 'ಪತ್ರಿಕೆಯ ೨೦೦೦ ಪ್ರತಿಗಳು ಛಾಪಿಸಲ್ಪಟ್ಟರೂ ಪತ್ರಿಕೆ ತರಿಸದ ಶಾಲೆಗಳು ಇನ್ನೂ ಇವೆ. ಹಾಗಾಗಿ ಹೆಚ್ಚಿನ ಪ್ರತಿಗಳನ್ನು ಮುದ್ರಿಸಬೇಕಾತ್ತದೆ' ಎಂಬ ಅಭಿಪ್ರಾಯ ಗಮನಿಸಿದಾಗ ೧೯೫೫ರಲ್ಲಿ ೨೦೦೦ ಪ್ರತಿಗಳು ಮುದ್ರಣಗೊಳ್ಳುತ್ತಿದ್ದವಾದರೂ ಇನ್ನೂ ಕೊರತೆ ಇತ್ತು ಎಂಬುದು ಸ್ಪಷ್ಟವಾಗುತ್ತದೆ.

ಪತ್ರಿಕೆಯ ಪುಟಗಳು ಹೆಚ್ಚು ಕಡಿಮೆ ಆಗುವುದರೊಂದಿಗೆ ೧೯೪೦-೫೦ರ ದಶಕದಲ್ಲಿ ಶಿಕ್ಷಣ ಇಲಾಖೆಯ ಪಠ್ಯಪುಸ್ತಕಗಳು ಹಾಗೂ ಪ್ರಕಾಶನಗಳ ಸಾಹಿತ್ಯ ಕೃತಿಗಳು ಪ್ರಕಟಣೆಯಾದಾಗ ಅವುಗಳ ಜಾಹೀರಾತುಗಳೇ ಪತ್ರಿಕೆಯ ಕೊನೆಯ ಸುಮಾರು ೬-೮ ಪುಟಗಳನ್ನು ಆಕ್ರಮಿಸಿ ಬಿಟ್ಟಿವೆ.

೧೯೪೩ ಮಾರ್ಚವರೆಗೆ ೩೨ ಪುಟಗಳಿದ್ದದ್ದು ನಂತರ ೨೮ ಪುಟಗಳಿಗೆ ಇಳಿದಿದೆ. ೧೯೪೮ರಿಂದ ೩೨ ಪುಟಗಳಾಗಿ, ಹೋಯ್ದಾಡುತ್ತ ೧೯೫೧ ಜನೇವರಿಯಿಂದ ಮತ್ತೇ ೨೮, ೨೪, ೨೨ ಪುಟಗಳಿಗೆ ಇಳಿಯುತ್ತ ಏರುತ್ತ ಈಗ ೩೨ ಪುಟಗಳೊಂದಿಗೆ ಅಚ್ಚಾಗುತ್ತಿದೆ.

ಅಲ್ಲಲ್ಲಿ ನಿಂತುಬಿಟ್ಟ ನಿರಂತರತೆ:

- ಕೆಲವು ಬಾರಿ ಪತ್ರಿಕೆ ಪ್ರಕಟಣೆಯು ನಿಂತು ಹೋಗಿದ್ದಿದೆ. ಏಪ್ರೀಲ್ ೧೮೬೮ ರಿಂದ ಮಾರ್ಚ ೧೮೬೯ರ ವರೆಗೆ, ಹನ್ನೆರಡು ತಿಂಗಳ ಪತ್ರಿಕೆಗಳು ಲಭ್ಯವಿಲ್ಲ ಮತ್ತು ಏಕೆ ಎನ್ನುವುದಕ್ಕೆ ಎಲ್ಲಿಯೂ ದಾಖಲೆಗಳೂ ಲಭ್ಯವಿಲ್ಲ. (ಏಪ್ರೀಲ್ ೧೮೬೯ರ ಪತ್ರಿಕೆಗೆ ಮೊದಲ ೯, ೧೮೭೦ರ ಪತ್ರಿಕೆಗೆ ಮೊದಲ ೧೬ ಪುಟಗಳಿಲ್ಲ)
- ಏಪ್ರೀಲ್ ೧೮೭೭ ರಿಂದ ನವೆಂಬರ್ ೧೮೭೭ ಪುಸ್ತಕ ೧೩, ಸಂಚಿಕೆ ೮ ರವರೆಗೆ ಅಂದರೆ ೮ ತಿಂಗಳು ಪತ್ರಿಕೆ ಪ್ರಕಟಗೊಂಡಿರುವುದಿಲ್ಲ. ಆ ನಂತರದ ಪತ್ರಿಕೆಯಲ್ಲಿ ಈ ಎಂಟು ತಿಂಗಳು ಪತ್ರಿಕೆ ಪ್ರಕಟಗೊಳ್ಳದಿರುವುದಕ್ಕೆ ಈ ಮುಂದಿನಂತೆ ಕಾರಣ ನೀಡಲಾಗಿದೆ:

ಶಾಲಾಪತ್ರಕವು

ಪುಸ್ತಕ ೧೨] [ಸಂಚಿಕೆ ೧೨

ತಾರೀಖು ೩೧ ಡಿಸೆಂಬರು, ೧೮೭೭.

ಸೂಚನೆ.

ಈ ಪತ್ರಿಕವು ಈಗ ಯೆಂಟು ತಿಂಗಳು ಹೊರಡಲಿಲ್ಲೆಂಬ ಕಾರಣವೇನಂದರೆ, ಮೊಹಬ್ಬತ ಇನ್‌ಸ್ಪೆಕ್ಟರ ಥೊರೆಯವರು ಬ್ರಾಂಚ ಸ್ಕೂಲುಗಳಿಗೆ ಶಾಲಾಪತ್ರಿಕವನ್ನು ಕಳುಹ ಬಾರದು ಹುಕುಮು ಮಾಡಿದ ಮೂಲಕವಾಗಿ ಪೂರ್ವದ ಎಡಿಟರ ಆಬಗ್ಗೆ ತಕರಾರು ಬರೆದು ಅರಿಕೆ ಮಾಡಿ ಕೊಂಡಿದ್ದರು. ಬ್ರಾ, ಸ್ಕೂಲುಗಳಿಗೆ ಹೋಗುವ ಪ್ರತಿಗಳನ್ನು ಕಡಿಮೆ ಮಾಡಿದರೆ ವ ಕ್ರಯದೊಳಗೆ ಈ ಪತ್ರಿಕದ ವೆಚ್ಚವನ್ನು ನಡಿಸಿ ಕೊಳ್ಳ ಅನುಕೂಲವಾಗುವದಿಲ್ಲೆಂದು ಸದರೀ ಎಡಿಟರರ ಅಭಿಪ್ರಾಯವಿ. ಈ ತಕರಾರಿನ ನಿರ್ಣಯವನ್ನು ಮೊಹಬ್ಬತ ಥೊರೆಗಳವರು ಇದ ತಿಂಗಳಲ್ಲಿ ಧಾರವಾಡಕ್ಕೆ ಬಂದಾಗ ಸಮಕ್ಷದಲ್ಲಿ ಮಾಡಿ, ವಾಲನಂತೆ ಬ್ರಾಂಚಸ್ಕೂಲುಗಳಿಗೆ ಪತ್ರಿಕವನ್ನು ಕಳುಹ ಬಹುದು ಹುಕುಮು ಮಾಡಿರುತ್ತಾರೆ. ಆದರಿಂದ ಪತ್ರಿಕವು ಪುನ: ರುಹಾಯಿತು. ಕಳೆದ ಎಪ್ರಿಲ ತಿಂಗಳಿಂದ ಹೋದ ೮ ತಿಂಗಳ ಅಂಕಗಳನ್ನು ಆದಷ್ಟು ಮಟ್ಟಿಗೆ ಬೇಗ ಛಾಪಿಸಿ ಶಾಲೆಗಳುಹುವೆವು. ಅಥವಾ ಆಬಗ್ಗೆ ಮೊ. ಥೊರೆಗಳವರ ಅಪ್ಪ,


ಬ್ರ್ಯಾಂಚ್‌ಸ್ಕೂಲಗಳಿಗೆ ಪತ್ರಿಕೆಗಳನ್ನು ಕಳುಹಿಸಬಾರದು ಎಂಬ ಎಜ್ಯುಕೆಷನ್ ಇನ್ಸಪೆಕ್ಟರ (ರಸೆಲ್)ರ ಆದೇಶ ಪಾಲಿಸಬೇಕಾದರೆ ಪತ್ರಿಕೆ ಮುದ್ರಣದ ವೆಚ್ಚ ಹೆಚ್ಚಾಗಿ ಪತ್ರಿಕೆ ನಡೆಸಲು ಅನಾನುಕೂಲ ಆಗುವುದಾಗಿ ಮಾಜಿ ಎಡಿಟರವರ(?) ಅಭಿಪ್ರಾಯಪಟ್ಟು, ಬರೆದು ಅರಿಕೆ ಮಾಡಿ, ಪ್ರತಿಕ್ರಿಯೆಗೆ ಕಾಯುತ್ತಿದ್ದಾಗ, ಉತ್ತರ ಬರುವವರೆಗೆ ಈ ಪತ್ರಿಕೆಯ ಮುದ್ರಣ ನಿಂತು ಹೋಗಿತ್ತು. ನಂತರ ಮತ್ತೇ ಆ ಬ್ರ್ಯಾಂಚ್ ಶಾಲೆಗಳಿಗೆ ಪತ್ರಿಕೆ ಹಳುಹಿಸುವ ಕರಾರಿನೊಂದಿಗೆ ಪತ್ರಿಕೆಯ ಮುದ್ರಣ ಆರಂಭವಾಗಿದೆ. ಎಜ್ಯುಕೇಷನ್ ಇನ್ಸಪೆಕ್ಟರರನ್ನೇ ಎದುರು ಹಾಕಿಕೊಂಡು, ಪತ್ರಿಕೆಯನ್ನ ನಿಲ್ಲಿಸಿ, 'ಪತ್ರಿಕೆ ಮುದ್ರಣ, ಖರ್ಚುಗಳು ಅದರ ಪ್ರಸಾರದ ಮೇಲೆ ಅವಲಂಬಿಸಿದೆ' ಎಂಬುದನ್ನು ಮನನ ಮಾಡಿಕೊಟ್ಟ ಮೇಲೆಯೇ, ಪತ್ರಿಕೆ ಪುನಃ ಆರಂಭವಾಗಿರುವುದು ಸಂಪಾದಕರ ದಿಟ್ಟತನ ಮತ್ತು ವಿಷಯ ಪರಿಜ್ಞಾನಕ್ಕೆ ಸಾಕ್ಷಿಯಾಗುತ್ತದೆ.

೧೮೮೫ ತರುವಾಯ ಪತ್ರಿಕೆಯ ವರ್ಗಣಿ ವಸೂಲು ಮಾಡುವ ಪ್ರಕಟಣೆಗಳು ಮೇಲಿಂದ ಮೇಲೆ, ಮೇಲಿಂದ ಮೇಲೆ ಪ್ರಕಟಗೊಳ್ಳುತ್ತಲೇ ಇರುವುದು ಕಣ್ಣಿಗೆ ರಾಚಿದಂತಾಗುತ್ತದೆ. ಇದೂವರೆಗೂ ಪತ್ರಿಕೆಯ ಪ್ರಕಟಣೆಗೆ ಅಂಥ ಅಡಚಣೆ ಏನೂ ಆಗಿರದಿದ್ದರೂ ೧೮೯೯–೯೦ರ ಸುಮಾರಿಗೆಯಂತೂ ಪತ್ರಿಕೆಯ ಪ್ರಕಟಣೆ ಚಿಂತಾಜನಕ ಸ್ಥಿತಿಯಲ್ಲಿದ್ದದ್ದು ವಿಧಿತವಾಗುತ್ತದೆ. ೧೮೯೯ ಜುಲೈನಿಂದ೧೯೦೦ ಜನೇವರಿವರೆಗೆ ಏಳು ತಿಂಗಳ ಸಂಚಿಕೆಗಳಿಲ್ಲ. ಅದಕ್ಕೆ ಕಾರಣಗಳು ತಿಳಿದು ಬರುವುದಿಲ್ಲ.

ಮೌಂಟಫರ್ಡ ಸುಧಾರಣೆಯ ನಂತರ ಜಿಲ್ಲಾ ಲೋಕಲ್ ಬೋರ್ಡಗಳು ಹುಟ್ಟಿ, ಧಾರವಾಡ ಜಿಲ್ಲಾ **'ಸ್ಕೂಲ್ ಬೋರ್ಡ ಪತ್ರಿಕೆ'** ಎಂಬ ಹೆಸರಿನಿಂದ ೧೯೨೮ರಲ್ಲಿ ಪತ್ರಿಕೆಯನ್ನು

ಆರಂಭಿಸಿತು. ಟ್ರೇನಿಂಗ ಕಾಲೇಜಿನ ಪತ್ರಿಕೆಯಲ್ಲಿ ಸಾಕಷ್ಟು ಸ್ಥಳ ಲಭ್ಯವಾಗದ್ದರಿಂದ, ಅಲ್ಲದೆ ಅದರ ಸಂಪಾದಕರು ಬೋರ್ಡಿಗೆ ಸಂಬಂಧವಿಲ್ಲದ ಸರಕಾರೀ ನೌಕರರಾದ್ದರಿಂದ ಅದರಿಂದ ಬೋರ್ಡಿನ ಎಲ್ಲ ಮನೋರಥವು ಸಾಧಿಸುವುದು ಸಾಧ್ಯವಿಲ್ಲೆಂಬುದು ಕಳೆದ ಎರಡು ವರ್ಷದ ಅನುಭವದಿಂದ ಕಂಡುಕೊಂಡಿದ್ದು, ಬೋರ್ಡಿನ ಪರಿಶ್ರಮ ಸಫಲವಾಗಬೇಕಾದರೆ ಒಂದು ಸ್ವತಂತ್ರ ಮುಖಪತ್ರದ ಅವಶ್ಯಕತೆ ಮನಗಂಡು ಆರಂಭಿಸಿದ ಪತ್ರಿಕೆ ಇದು. ಎಚ್.ಎಫ್.ಕಟ್ಟಿಮನಿ ಇವರು ಇದರ ಮ್ಯಾನೇಜಿಂಗ ಎಡಿಟರರಾಗಿ, ಬೋರ್ಡನ ಮಂಡಳಿಯ ಕೆಲ ಸದಸ್ಯರನ್ನು ಸೇರಿಸಿ ಸಂಪಾದಕ ಮಂಡಳಿ ರಚನೆ ಮಾಡಲಾಗಿದೆ. ಈ ಪತ್ರಿಕೆ ನಿರಂತರವಾಗಿ ಮಾರ್ಚ ೧೯೨೯ರವರೆಗೆ ಅಂದರೆ ಒಂದು ವರ್ಷದವರೆಗೆ ಪ್ರಕಟಗೊಂಡು, ನಿಂತುಹೋಗಿದೆ.

ಬೋರ್ಡಿನ ಆಡಳಿತೆಯ ವಿಮಲ ದರ್ಪಣ, ವಿದ್ಯೆಯ ನೆಲೆಗಟ್ಟು, ಕಲಾವಿಶಾರದ ಕೈಪಿಡಿ ಎಂದೆಲ್ಲ ಕರೆಯಿಸಿಕೊಂಡ ಪತ್ರಿಕೆಯ ಮುಖಪುಟದ ಪ್ರತಿ ಮುಂದೆ ಕೊಡಲಾಗಿದೆ: ('ಧಾರವಾಡ ಜಿಲ್ಹಾ ಸ್ಕೂಲ್ ಬೋರ್ಡ ಪತ್ರಿಕೆ', ೧೯೨೮ ಎಪ್ರೀಲ್, ಸಂ-೧, ಸಂ-೧).


ಧಾರವಾಡ ಜಿಲ್ಹಾ

ಸ್ಕೂಲ್ ಬೋರ್ಡ ಪತ್ರಿಕೆ

DHARWAR DISTRICT SCHOOL BOARD MAGAZINE

ಸಂಪುಟ ೧.	ಎಪ್ರಿಲ್ ೧೯೨೮	ಸಂಚಿಕೆ ೧

ಸಂಪಾದಕ ಮಂಡಲ.

೧ ಶ್ರೀ. ಎಸ್, ಕೆ. ಹೊಸಮನಿ ಬಿ. ಎ., ಎಲೆಲ್. ಬಿ. (ಚೇಅರಮನ್ ಡಿ. ಎಸ್. ಬಿ.)

೨ ,, ಜಿ. ಬಿ. ನಲವಡಿ ಬಿ. ಎ., ಎಲೆಲ್. ಬಿ. (ವ್ಹಾಯಿಸ್ ಚೇಅರಮನ್, ಡಿ. ಎಸ್. ಬಿ.)

೩ ,, ಡಿ. ಎಲ್. ಪಾಟೀಲ ಬಿ. ಎ., ಎಲೆಲ್. ಬಿ. (ವ್ಹಾಯಿಸ್ ಪ್ರೆಸಿಡೆಂಟ್ ಡಿ. ಎಲ್. ಬಿ.)

೪ ವ್ಹಿ. ಬಿ. ಜೋಶಿ ಬಿ. ಎ. ರಿಟಾಯರ್ಡ್ ಎಜ್ಯುಕೇಶನಲ್ ಇನ್ಸಪೆಕ್ಟರ.

೫ ಮೌ॥ ಸೈಯ್ಯದ ಫಕರುದ್ದೀನ ಸಾಹೇಬ.

ಮ್ಯಾನೇಜಿಂಗ ಎಡಿಟರ:- ಎಚ್. ಎಫ್. ಕಟ್ಟೀಮನಿ, ಬಿ. ಎ.

ನಂತರ ೧೯೨೯ರ ಎಪ್ರೀಲನಿಂದ ೧೯೩೦ರ ಡಿಸೆಂಬರವರೆಗೂ ೨೧ ತಿಂಗಳು ಯಾವ ಪತ್ರಿಕೆಗಳೂ ಇಲ್ಲ. ಮತ್ತೇ ಜನೇವರಿ ೧೯೩೧ ರಿಂದ 'ಕನ್ನಡ ಪ್ರಾಥಮಿಕ ಶಿಕ್ಷಣ' ಪ್ರಕಟಗೊಳ್ಳತೊಡಗಿದೆ. ಆದರೆ 'ಸ್ಕೂಲ್ ಬೋರ್ಡ ಪತ್ರಿಕೆ'ಹೊರಡುತ್ತಿದ್ದಾಗ ಕನ್ನಡ ಶಾಲಾಪತ್ರಕ

ನಿಂತು ಹೋದಂತಿದೆ. ಈ ಅವಧಿಯಲ್ಲಿ ಶಾಲಾಪತ್ರಕ ಲಭ್ಯವಿಲ್ಲ ಮತ್ತು ಆ ಕುರಿತು ಎಲ್ಲಿಯೂ ಉಲ್ಲೇಖಗಳಿಲ್ಲ. ಶಾಲಾಪತ್ರಕವೇ 'ಸ್ಕೂಲ್ ಬೋರ್ಡ ಪತ್ರಿಕೆ'ಯಾಯಿತೋ...? ಅಥವಾ ಇದು ನಿಂತು ಅದು ಆರಂಭವಾಯಿತೋ? ಅಂತೂ ಈ ಅವಧಿಯ ಮತ್ತು ನಂತರದ ೨೧ ತಿಂಗಳ ಶಾಲಾಪತ್ರಕ ಸಂಚಿಕೆಗಳು ಎಲ್ಲಿಯೂ ಕಾಣಸಿಗುವುದಿಲ್ಲ. ಆ ಕುರಿತ ವಿಚಾರ ಎಲ್ಲಿಯೂ ಇಲ್ಲ.

೧೮೭೭ ಏಪ್ರೀಲ್‌ನಿಂದ ನವೆಂಬರ್ ೧೮೭೭ಅಂದರೆ ೮ ತಿಂಗಳು ಪತ್ರಿಕೆಗಳಿಲ್ಲ.

೧೯೨೯ರ ಎಪ್ರೀಲ್‌ನಿಂದ ೧೯೩೦ರ ಡಿಸೆಂಬರವರೆಗೂ ೨೧ ತಿಂಗಳು ಪತ್ರಿಕೆಗಳಿಲ್ಲ.
('ಸ್ಕೂಲ್ ಬೋರ್ಡ ಪತ್ರಿಕೆ' ಹೆಸರಿನಲ್ಲಿ ಪತ್ರಿಕೆ ಇದೆ)

೧೯೩೩ ಜನೇವರಿಯಿಂದ ೧೯೩೩ ನವೆಂಬರವರೆಗೆ ೧೧ ತಿಂಗಳ ಪತ್ರಿಕೆಗಳಿಲ್ಲ.

೧೯೩೬ ಫೆಬ್ರುವರಿಯಿಂದ ೧೯೩೬ ಡಿಸೆಂಬರವರೆಗೆ ೧೧ ತಿಂಗಳು ಪತ್ರಿಕೆಗಳಿಲ್ಲ.

೧೯೪೯ರ ಜೂನ್‌ನಿಂದ ೧೯೫೦ ಮೇ ವರೆಗೆ ೧೨ತಿಂಗಳು ಪತ್ರಿಕೆಗಳಿಲ್ಲ.

ಇವು ೧೮೬೫ರಿಂದ ೧೯೫೬ರವರೆಗೆ ಒಟ್ಟು ೯೧ ವರ್ಷಗಳ ಅವಧಿಯಲ್ಲಾದ ಸುಧೀರ್ಘ ವಿರಾಮಗಳು. ಈಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಲಭ್ಯವಿರುವ ಪತ್ರಿಕೆಗಳಲ್ಲಿಯೇ ಅಲ್ಲಲ್ಲಿ ಕೆಲವು ಇಲ್ಲ; ಕೆಲವು ಆರಂಭದ, ಮಧ್ಯದ ಮತ್ತು ಅಂತ್ಯದ ಪುಟಗಳು ಇಲ್ಲವಾಗಿವೆ. ಕೆಲವಲ್ಲಿ ಮುಖ್ಯ ಲೇಖನವಿರುವ ಪುಟಗಳೇ ಮಾಯವಾಗಿವೆ. ಉದಾ:೧೮೯೭ರ ಜನೇವರಿ ಸಂಚಿಕೆ, ರೊದ್ದರಾಯರ ಚರಿತ್ರೆ ಇದ್ದ ೧೯೦೮ರ ಜುಲೈ ಸಂಚಿಕೆ, ೧೯೨೪ರ ಅಕ್ಟೋಬರ, ನವೆಂಬರ ಸಂಚಿಕೆ. ಕೆಲವಲ್ಲಿ ಸಂಪುಟ ಸಂಚಿಕೆಗಳ ಅನುಕ್ರಮಗಳು ತಪ್ಪಿವೆ.

ಮಠ ಪತ್ರಿಕೆಯಿಂದ ಜೀವನ ಶಿಕ್ಷಣದವರೆಗೂ ಎಲ್ಲ ಪತ್ರಿಕೆಗಳ ಕ್ರೋಢಿಕರಣದ ಏಕೈಕ ಮೂಲ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿರುವ ಸಂಗ್ರಹಾಲಯ. ಇದು ಬಿಟ್ಟರೆ ಮತ್ತೆಲ್ಲೂ ಈ ಪತ್ರಿಕೆಗಳು ಕಾಣಸಿಗುವುದಿಲ್ಲ. ಅಲ್ಲಿರುವುದು ಒಂದೋಂದೇ ಪ್ರತಿಗಳು. ಇವುಗಳ ರಕ್ಷಣೆಯು ಅತ್ಯಂತ ಅವಶ್ಯವಾಗಿದೆ. ಇಲ್ಲಿಯೇ 'ಕನ್ನಡ ಜ್ಞಾನ ಬೋಧಕ' ಪತ್ರಿಕೆಗಳಿಲ್ಲ.

ಮುದ್ರಣ

'ಮಠ ಪತ್ರಿಕೆ' ಆರಂಭವಾಗಿ ಬೆಳಗಾವಿಯ 'ಸಮಾಚಾರ' ಮುದ್ರಣಾಲಯದಲ್ಲಿ ಮುದ್ರಣವಾಗಿದೆ. ಬೆಳಗಾವಿಯಲ್ಲಿದ್ದಾಗಲೇ ಅಕ್ಟೋಬರ ೧೮೭೧ರ ಪುಸ್ತಕ ೭, ಸಂಪುಟ ೭ ರಿಂದ ಕಲ್ಲಚ್ಚಿನ ಬರಹ ನಿಂತು ಹೋಗಿ, ಯಂತ್ರದಿಂದ ಸಿದ್ಧಗೊಳಿಸಿದ ಅಕ್ಷರಗಳಿಂದ ಮುದ್ರಣ ಆರಂಭವಾಗಿದೆ. ಆದರೆ ಅಕ್ಷರಗಳು ದೊಡ್ಡದೊಡ್ಡದಾಗಿವೆ. ೧೮೬೩ ಏಪ್ರೀಲ್‌ನಿಂದ ಪತ್ರಿಕೆಯ ಹೆಸರಿನ ಕೆಳಗೆ 'ಪುಸ್ತಕ ಸಂಖ್ಯೆ, ಸಂಚಿಕೆ ಸಂಖ್ಯೆ, **ಬೆಳಗಾವಿ**, ಮಾಹೆ ಮತ್ತು ಇಸ್ವಿ' – ಹೀಗೆ ಅಚ್ಚಾಗುತ್ತಿದ್ದದ್ದು ' ಪು ೧೧, ಸಂ ೨ ತಾರೀಖು ೨೫ನೆ ಮಾಹೆ, ಮೇ ೧೮೭೫' ರಿಂದ ಮಧ್ಯದಲ್ಲಿ '**ಬೆಳಗಾವಿ**' ಎಂದು ಹೆಸರು ಛಾಪಿಸುವುದು ನಿಂತು ಹೋಗಿದೆ. ಅಂದರೆ ೧೮೭೫ ಮೇ ಅಷ್ಟೊತ್ತಿಗೆ ಪತ್ರಿಕೆಯ ಮುದ್ರಣಾಲಯ ಧಾರವಾಡಕ್ಕೆ ಸ್ಥಳಾಂತರಗೊಂಡಿದೆ. ಆದಾಗ್ಯೂ

'ಸಮಾಚಾರ' ಮುದ್ರಣಾಲಯದಲ್ಲಿ ಮುದ್ರಿಸುವುದು ಮುಂದುವರೆದಿದೆ. ೧೮೮೯ ಫೆಬ್ರುವರಿಯಿಂದ 'ಧನವರ್ಧಕ ಪ್ರೆಸ್' ಧಾರವಾಡದಲ್ಲಿ ಮುದ್ರಣಗೊಂಡಿದೆ. ೧೯೨೬ರ ಸುಮಾರಿಗೆ printed by M K Joshi at the Karnataka printing works, Dharwad ಎಂದಿದೆ.

'೧೯೯೦ಲ್ಲಿ ನಿಂತು ಹೋಗುವ ಸ್ಥಿತಿಯಲ್ಲಿದ್ದಾಗ ಮತ್ತು ಮುದ್ರಣ ವೆಚ್ಚ ಭರಿಸಲಾಗದಿದ್ದಾಗ, ದೇಣಿಗೆ ಎತ್ತಿ ಒಂದು ಮುದ್ರಣ ಮತ್ತು ಬೈಂಡಿಂಗ ಯಂತ್ರಗಳನ್ನು ಖರೀದಿಸಿ ಕಾಲೇಜಿನಲ್ಲಿಯೇ ಮುದ್ರಣ ಮಾಡುವ ವ್ಯವಸ್ಥೆ ಮಾಡಲಾಯಿತು. ಇಲಾಖೆಯ ತರಬೇತಿ ಸಾಹಿತ್ಯ ಮುಂತಾದುವುಗಳ ಮುದ್ರಣದಿಂದಾಗಿಹಾಗೂ ಇಲಾಖೆಗೆ ಮನವಿ ಮಾಡಿ, ಚಿಕ್ಕ ಪ್ರಮಾಣದ ಆರ್ಥಿಕ ಸಹಾಯ ಪಡೆದದ್ದರಿಂದ ಪತ್ರಿಕೆ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತ ಬಂದು ಪತ್ರಿಕೆ ಚೆನ್ನಾಗಿಯೇ ನಡೆದಿತ್ತು. ಮತ್ತು ಕತ್ತರಿಸಿ ಉಳಿದ ರದ್ದಿಯನ್ನು ಮಾರಿ, ಇತರೇ ಖರ್ಚು ತೂಗಿಸಲಾಗುತ್ತಿತ್ತು. ಹೀಗಾಗಿ ಎಲ್ಲ ಕೆಲಸಗಾರರು ಬಹಳ ನೆಮ್ಮದಿಯಿಂದ ಇದ್ದರು. ಪತ್ರಿಕೆಯ ಖಾತೆಯಲ್ಲಿ ೮ಲಕ್ಷ ಖಾಯಂ ಠೇವಣಿ ಕೂಡ ಇಡಲಾಗಿತ್ತು. ಮುಂದೆ ಇಲಾಖೆಯ ಬದಲಾವಣೆಗಳಿಂದಾಗಿ ಹೊರಗೆ ಮುದ್ರಣಕ್ಕಿಂತ ಇಲ್ಲಿಯ ಮುದ್ರಣ ಖರ್ಚು ಹೆಚ್ಚಾಗುತ್ತಿದೆ ಎಂಬ ಕಾರಣದಿಂದ ಮುದ್ರಣ ಯಂತ್ರ ಮಾರಲಾಯಿತು' ಎಂದು ತಮ್ಮ ಅವಧಿಯ ಆಗುಹೋಗುಗಳನ್ನು ನಿವೃತ್ತ ಸಹ ನಿರ್ದೇಶಕರರಾದ ಶ್ರೀ ಎಂ. ಎಸ್. ಪಾಟೀಲರು ನೆನೆಸಿಕೊಳ್ಳುತ್ತಾರೆ. ಈಗ ಪತ್ರಿಕೆ ಬೆಂಗಳೂರಿನ ಲಾವಣ್ಯ ಮುದ್ರಣಾಲಯದಲ್ಲಿ ಮುದ್ರಣಗೊಳ್ಳುತ್ತಿದೆ.

ಬದಲಾದ ಹೆಸರುಗಳು:

ಏಪ್ರೀಲ್ ೧೮೬೫ ರಿಂದ ಮಾರ್ಚ ೧೮೬೭ ರವರೆಗೆ – 'ಮಠ ಪತ್ರಿಕೆ'

ಏಪ್ರೀಲ್ ೧೮೬೭ ರಿಂದ ಸಪ್ಟೆಂಬರ ೧೮೭೧ರವರೆಗೆ – 'ಶಾಲಾ ಪತ್ರಿಕೆ'

ಅಕ್ಟೋಬರ ೧೮೭೧ ರಿಂದ ಜೂನ್ ೧೮೭೩ರವರೆಗೆ–'ಶಾಲಾ ಪತ್ರಕವು'

ಜುಲೈ ೧೮೭೩ ರಿಂದ ಏಪ್ರೀಲ್ ೧೮೭೪ರವರೆಗೆ–'ಕನ್ನಡ ಶಾಲಾ ಪತ್ರಕವು'

ಮೇ ೧೮೭೪ ರಿಂದ ಜನೇವರಿ ೧೯೨೮ರ ವರೆಗೆ–'ಶಾಲಾ ಪತ್ರಕ'/'ಶಾಲಾ ಪತ್ರಕವು'

ಎಪ್ರೀಲ್ ೧೯೨೮ರಿಂದ ಡಿಸೆಂಬರ ೧೯೨೯ ಮಾರ್ಚವರೆಗೆ 'ಸ್ಕೂಲ ಬೋರ್ಡ ಪತ್ರಿಕೆ'

(ಎಪ್ರೀಲ ೧೯೨೯ರಿಂದ ಡಿಸೆಂಬರ ೧೯೩೦ ರವರೆಗೂ ೨೧ ತಿಂಗಳು ಯಾವ ಪತ್ರಿಕೆಗಳೂ ಇಲ್ಲ)

ಜನೇವರಿ ೧೯೩೧ರಿಂದ –ಅಕ್ಟೋಬರ್ ವರೆಗೆ ೧೯೫೬..... 'ಕನ್ನಡ ಪ್ರಾಥಮಿಕ ಶಿಕ್ಷಣ'.

(ಈ ಮೊದಲು 'ಕನ್ನಡ ಶಿಕ್ಷಿಕೆ' ಶಿಕ್ಷಕಿಯರ ತರಬೇತಿ ಕೇಂದ್ರದಿಂದ ಹೊರಡುತ್ತಿದ್ದ ಪತ್ರಿಕೆ, ಇದರಲ್ಲಿಯೇ ವಿಲೀನಗೊಂಡಿದೆ. ೧೯೪೮ರಿಂದ ಅದೂ ಕೂಡ ನಿಂತು ಹೋಗಿದೆ.)

೧೯೫೬, ನವೆಂಬರ ೧ ರಿಂದ ಕರ್ನಾಟಕ ರಾಜ್ಯೋದಯದ ಸವಿನೆನಪಿಗಾಗಿ 'ಜೀವನ ಶಿಕ್ಷಣ' ಎಂಬ ಅಬಿಧಾನದೊಂದಿಗೆ ಪ್ರಕಟಗೊಳ್ಳುತ್ತಿದೆ. ಇಂದಿಗೂ ಅದು 'ಜೀವನ ಶಿಕ್ಷಣ' ಹೆಸರಿನಲ್ಲಿಯೇ ಇದೆ.

ಹೀಗೆ ವಾಸ್ತವದ ಬೇಡಿಕೆ ಮತ್ತು ಲಭ್ಯತೆಗಳಿಗನುಗುಣವಾಗಿ ತನ್ನ ಪ್ರಸಾರ ಹೆಚ್ಚಿಸುತ್ತ, ಕಡಿಮೆ ಮಾಡುತ್ತ, ಬೇರೆ ಬೇರೆ ಹೆಸರುಳಿಂದ ನಾಮಕರಣಗೊಂಡು ಪ್ರಕಟಗೊಂಡಿದೆ. ಹೀಗೆ ಸ್ವರೂಪ ಮತ್ತು ಹೆಸರುಗಳು ಬೇರೆ ಬೇರೆಯಾಗಿದ್ದರೂ ಅದರ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವಗಳು ಮಾತ್ರ ಬದಲಾಗಿಲ್ಲ.

ಸಂಪಾದಕರು/ ಸಂಪಾದಕೀಯ:

ಆರಂಭದಿಂದಲೂ ಈ ಪತ್ರಿಕೆಗೆ ಸಂಪಾದಕರು ಮತ್ತು ವ್ಯವಸ್ಥಾಪಕರು ಸರಕಾರಿ ಅಧಿಕಾರಿಗಳೇ ಇದ್ದರು ಎಂಬುದು ನಿರ್ವಿವಾದವಾದರೂ, ಮೊದಮೊದಲು ಸಂಪಾದಕರು/ಎಡಿಟರ್ ಪ್ರತ್ಯೇಕ ಮತ್ತು ಸ್ವತಂತ್ರವಾಗಿಯೇ ನೇಮಕವಾಗಿದ್ದಾರೆ. ಇದು ಅವರ ವರ್ಗಾವರ್ಗಿಗಳಲ್ಲಿ ತಿಳಿದು ಬರುತ್ತದೆ. ಮುಂದೆ ಎಜ್ಯುಕೇಷನಲ್ ಇನ್ಸಪೆಕ್ಟರರ ಸಂಚಾಲನೆ ಮತ್ತು ಪ್ರಿನ್ಸಿಪಾಲರ ಪ್ರಧಾನ ಸಂಪಾದಕ್ವದಲ್ಲಿ ಪ್ರಕಟಗೊಂಡಿದೆ. ನಂತರ ಸಂಪಾದಕ ಮಂಡಳಿ ರಚನೆಯಾಗಿದೆ. ೧೯೪೮ ಸಪ್ಟೆಂಬರ ೮೮/೪ರಿಂದ ಸಂಪಾದಕರು ರಂ.ಕೃ.ಲಕ್ಕುಂಡಿ, ಸಂಚಾಲಕರು ಶ್ರೀ ಎ.ಎನ್. ಸಾನೆ, ಎ.ಇ.ದ.ಭಾ ಇವರ ಹೆಸರುಗಳಿವೆ. ಆಡಳಿತ ಅಭಿವೃದ್ಧಿ ಎಂದು ಪ್ರತ್ಯೇಕಗೊಂಡಾಗ ಇದರ ಉಸ್ತುವಾರಿ ಟ್ರೇನಿಂಗ ಕಾಲೇಜಿನದ್ದೇ ಆಗಿದೆ. ಇದು ೧೯೫೦ರಿಂದ ಇಬ್ಬರು ಸರಕಾರೇತರ ಸದಸ್ಯರನ್ನು ಸೇರಿಸಿಕೊಳ್ಳಲಾಗಿದೆ. ಸಂಪಾದಕ ಮಂಡಳಿಯಲ್ಲಿ ಮೂರು ಜನ ಸಹಸಂಪಾದಕರ ಹೆಸರುಗಳೂ ಪ್ರಕಟವಾಗತೊಡಗಿವೆ. ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ರಿಟಾಯರ್ಡ ಎ.ಇ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ ನವಲಗುಂದ ಈ ಮೂವರ ಸಹ ಸಂಪಾದಕತ್ವದಲ್ಲಿ ಪತ್ರಿಕೆ ಪ್ರಕಟಗೊಳ್ಳತೊಡಗಿದೆ. ಮತ್ತು ೧೯೫೦ ತಿಂಗಳ ೩ನೆಯ ದಿನಾಂಕದಿಂದ ೮೪೫೯ ಜಿ.ಆರ್.ಈ.ಡಿ. ನಂಬರ ಕೊಡಲಾಗಿದೆ. ಜೀವನ ಶಿಕ್ಷಣ ಎಂದಾದ ಮೇಲೆ ನೋ.ಸಂಖ್ಯೆ-ರ.ನಂ. ೧೩೨೫೦/ ೫೯ಕೆ.ಆರ್.ಎನ್-೪ ಆಗಿದೆ.

೧೯೪೦ ಜನೇವರಿಯಿಂದ, ಶ್ರೀ ರಾಘವೇಂದ್ರ ಶೇಷಗಿರಿರಾವ ಮಡಿಮನ್ ರವರು ಸಂಪಾದಕಾಗಿದ್ದಾಗ ಹಾರೈಕೆ ರೂಪದಲ್ಲಿ **'ಸಂಪಾದಕೀಯ'** ಬರೆಯುವ ರೂಢಿ ಆರಂಭವಾಗಿದೆ. ೧೯೪೮ ಜೂನ್‌ನಿಂದ ಸಂಪಾದಕೀಯ ಬರೆಯಲಾಗಿದೆ. ಅಲ್ಲಿ ಮುಂದೆ ಹಂತಹಂತವಾಗಿ ಸಂಪಾದಕೀಯ ಬರೆಯತೊಡಗಿದ್ದಾರೆ. ೧೯೮೯ ಫೆಬ್ರುವರಿಯಿಂದ ಅನುಕ್ರಮಣಿಕೆ ಆರಂಭವಾಗಿದೆ. ಆದರೆ ಯಾವುದೂ ನಿರಂತರವಾಗಿ ಇಲ್ಲ. ೧೯೨೪ ಜನೇವರಿಯಿಂದ 'ಸಂಪಾದಕರು- ಅವರ ಹೆಸರು ಮುಖಪುಟದಲ್ಲಿ ಮುದ್ರಣವಾಗುತ್ತಿದೆ.

ಶೀರ್ಷಿಕೆಯ ಶ್ಲೋಕ/ಪದ್ಯಗಳು:

* ಶಾಲಾ ಪತ್ರಕ ಜನೇವರಿ ೧೮೯೦, ಪು ೨೫, ಸಂ ೧ರಿಂದ ಮುಖಪುಟದ ಮೇಲ್ಭಾಗದಲ್ಲಿ ಒಂದು ಶ್ಲೋಕದ ಉಲ್ಲೇಖ ಬರವಣಿಗೆ ಆರಂಭವಾಗಿದೆ. ಆ ಶೀರ್ಷಿಕೆಶ್ಲೋಕ ಈ ಮುಂದಿನಂತಿದೆ:

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸತ್ಸ್ಪೃಹೋತ್ಕರ್ಷಮಂ ।
ಬರೆಯುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂ ದೋಷಮತಿದ್ದಿ ವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫.] ಜನವರಿ ೧೮೯೦. [ಸಂಚಿಕೆ ೧.

ಈ ಶ್ಲೋಕ ಅಖಂಡ ಇಪ್ಪತ್ತೂತ್ತೊರು ವರ್ಷಗಳವರೆಗೆ ನಿರಂತರವಾಗಿ ಶೀರ್ಷಿಕೆಶ್ಲೋಕವಾಗಿ ಪ್ರಕಟಗೊಂಡು ೧೯೧೨ರ ಜನೇವರಿ ಸಂಚಿಕೆಯಿಂದ ನಿಂತು ಹೋಗಿದೆ. ಮತ್ತೇ ೧೯೪೫ರಲ್ಲಿ ಶ್ರೀ ಶ್ರೀನಿವಾಸ ಗುರಾಚಾರ್ಯ ಬೈಚವಾಳ ಅವರು ಸಂಪಾದಕರಾದಾಗ ಮತ್ತೊಂದು ಪದ್ಯದ ನುಡಿಶೀರ್ಷಿಕೆಯಲ್ಲಿ ರಾರಾಜಿಸತೊಡಗಿದೆ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಶ್ರೀನಿವಾಸ ಗುರಾಚಾರ್ಯ ಬೈಚವಾಳ ಎಂ. ಎ.

ಕೂಗುವೊಂದಾಗಿ । ಕರುಳೊಂದಾಗಿ । ಹೃದಯದನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ವಿದ್ವೇಷ ಮತ್ಸರ
ಮದಂಗಳ ನೀಗಿ । ಸಾಗಲನುವಾಗಿರೈ । ಭೋಗವಟ್ಟೇಳಿರೈ ।
ಕನ್ನಡಮ್ಮನ ಕುವರರೇ ॥

—ಋಗ್ವೇದ.

ಸಂಪುಟ ೮೪ } ಜುಲೈ, ಅಗಸ್ಟ, ಸಪ್ಟಂಬರ ೧೯೪೫ { ವರ್ಷ ೧೮ ಸಂ. ೪–೫–೬

ಪತ್ರಿಕೆಗೆ ನೂರು ವರ್ಷ ತುಂಬಿದ ಸಂದರ್ಭದಲ್ಲಿ ಕುವೆಂಪುರವರು ಮಹಾರಾಜಾ ಕಾಲೇಜು, ಮೈಸೂರಿನಿಂದ ಶುಭಾಶಯ ಕಳುಹಿಸಿದ್ದಾರೆ. ಇಲ್ಲಿ ಕಂಡು ಬರುವ ಇನ್ನೊಂದು ಮಹತ್ವದ ಸಂಗತಿ ಎಂದರೆ ಈ ಪತ್ರಿಕೆಯ ಎಲ್ಲ ಸಂಪುಟಗಳು ಟ್ರೇನಿಂಗ ಕಾಲೇಜಿನಲ್ಲಿ ಲಭ್ಯವಿಲ್ಲದಿದ್ದಾಗ, ೧೮೯೦ರಲ್ಲಿ ನಡೆಸಿದ ಶತಮಾನೋತ್ತರ ಬೆಳ್ಳಿಹಬ್ಬದ ಪುಸ್ತಕ ಪ್ರದರ್ಶನ ಸಂದರ್ಭದಲ್ಲಿ ಈ ಪತ್ರಿಕೆಗಳನ್ನು ಒಗ್ಗೂಡಿಸಿ, ಒಂದೆಡೆ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ. **ಮೊರಬದಲ್ಲಿದ್ದ ಸಿದ್ಧನಾಥ ಹೂಲಿ** ಎನ್ನುವ ಒಬ್ಬ ನಿವೃತ್ತ ಕನ್ನಡ ಶಾಲಾ ಮಾಸ್ತರರ ವೈಯಕ್ತಿಕ ಗ್ರಂಥಾಲಯ '**ಸಿದ್ಧನಾಥ ವಾಚನ ಮಂದಿರ**'ದ ಸಂಗ್ರಹದಲ್ಲಿದ್ದ ಬಹುಪಾಲು ಮಠಪತ್ರಿಕೆ ಮತ್ತು

ಕನ್ನಡಶಾಲಾ ಪತ್ರಿಕೆಗಳನ್ನು ತರಿಸಿ, ಒಂದು ವರ್ಷದ ಹನ್ನೆರಡು ಪತ್ರಿಕೆಗಳನ್ನು ಸೇರಿಸಿ, ವರ್ಷಕ್ಕೊಂದು ಪುಸ್ತಿಕೆಯನ್ನಾಗಿಸಿ ಕಟ್ಟಿಸಿ, ಇಡಲಾಗಿದೆ. ಹೀಗೆ ಒಂದೊಂದು ಕಟ್ಟನ್ನು ಮಾಡಲು ಸಮನಾಗಿ ಕತ್ತರಿಸುವಾಗ ಪತ್ರಿಕೆಯ ತುದಿಪುಟಗಳು, ಅದರೊಂದಿಗೆ ಪುಟಸಂಖ್ಯೆಗಳು ಕತ್ತರಿಸಿ ಹೋಗಿರುವುದರಿಂದ ಕೆಲವಷ್ಟು ಪುಟಸಂಖ್ಯೆಗಳು ಲಭ್ಯವಾಗುವುದಿಲ್ಲ. ಆದರೆ ಹಿಂದಿನ ಅಥವಾ ಮುಂದಿನ ಪತ್ರಿಕೆಯ ಪುಟಗಳಾಧಾರದ ಮೇಲಿಂದ ಲೆಕ್ಕ ಹಾಕಿ, ಅಂದಾಜು ಎಣಿಕೆ ಮಾಡಬೇಕು. ಈ ರೀತಿ ಪುಸ್ತಕ ಕಟ್ಟುವಾಗಕೆಲವಕ್ಕೆ ಪೆನ್ನಿನಿಂದ ಹಾಕಿದ ಪುಟಸಂಖ್ಯೆಗಳೂ ಗೋಚರಿಸುತ್ತವೆ. ೧೮೮೪ ರಿಂದ ೧೮೮೮ರವರೆಗಿ ಒಟ್ಟು ಐದು ವರ್ಷಗಳ ಪತ್ರಿಕೆಗಳು ಅತೀ ಸೂಕ್ಷ್ಮಾವಸ್ಥೆಗೆ ತಲುಪಿದ್ದು, ಮುಟ್ಟಿದರೆ ಪುಡಿಪುಡಿಯಾಗುತ್ತಿವೆ. ನೂರು, ನೂರೈವತ್ತು ವರ್ಷ ಪೂರೈಸಿದ ಪತ್ರಿಕೆಗಳು ಹಾಳೆಯಲ್ಲಿ ಎಷ್ಟು ವರ್ಷವಿರಲು ಸಾಧ್ಯ? ಬಹುಮಟ್ಟಿನ ಪತ್ರಿಕೆಗಳಿಗೆ ಇದೇ ಸ್ಥಿತಿ ಪ್ರಾಪ್ತವಾಗಿದೆ. ೧೯೯೧ರಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಿಂದ ೧೮೬೫ ರಿಂದ ೧೯೬೦ ರವರೆಗಿನ (ಒಟ್ಟು ತೊಂಭತ್ತೈದು ವರ್ಷಗಳ) ಪತ್ರಿಕೆಗಳನ್ನು, ಶಿಕ್ಷಣ ಇಲಾಖೆಯ ಅನುಮತಿಯೊಂದಿಗೆ ಸೂಕ್ಷ್ಮ ಚಿತ್ರೀಕರಣ ಮಾಡಲಾಗಿದೆ.*[೧೦] ಆದರೆ ಹಲವು ಪತ್ರಿಕೆಗಳು ಸೂಕ್ಷ್ಮ ಚಿತ್ರೀಕರಣಕ್ಕೂ ವದಗದಷ್ಟು ಜೀರ್ಣಾವಸ್ಥೆಗೆ ತಲುಪಿರುವುದರಿಂದ ಇದನು ಮೀರಿ ಇನ್ನೇನೂ ಮಾಡಬಹುದು ಎಂಬುದನ್ನು ವಿಚಾರಿಸಿ ಕ್ರಮಕೈಕೊಳ್ಳಬೇಕಿದೆ. ಮುಂದುವರೆದ ತಂತ್ರಜ್ಞಾನದ ಈ ಯುಗದಲ್ಲಿ ಅದೇನೂ ಅಸಾಧ್ಯವಲ್ಲ ಆದರೆ ಮಾಡುವ ಕಾಳಜಿ, ಜವಾಬ್ದಾರಿ ಮತ್ತು ಇಚ್ಛಾಶಕ್ತಿ ಬೇಕು.

೫.೨. ಪತ್ರಿಕೆಯ ವಸ್ತು ವೈವಿಧ್ಯ:

ಪತ್ರಿಕೆಗಳು ಸಮಕಾಲೀನ ಜನಾಂಗದ ಚಿಂತನೆಯ ಸ್ವರೂಪವನ್ನು, ವರ್ತನೆ ವಿಧಾನವನ್ನು, ಏಳುಬೀಳುಗಳನ್ನು, ಅವುಗಳ ಹಿಂದಿನ ಕಾರಣಗಳನ್ನು, ನಂತರದ ಪರಿಣಾಮಗಳನ್ನು ಸತ್ಯದರ್ಶನಕ್ಕೆ ಕಂಡಂತೆ ಹಿಡಿದಿಟ್ಟು ವಿಮರ್ಶಿಸುವುದರಿಂದ ಅವು ಭವಿಷತ್ತಿನ ಉತ್ತಮ ಸಾಮಾಜಿಕ ದಾಖಲೆಗಳಾಗುತ್ತವೆಎಂಬುದಕ್ಕೆ ಈ ಪತ್ರಿಕೆ ಅಖಂಡ ಉದಾಹರಣೆ. ಸುದ್ದಿವಾಹಿನಿಯಾಗಿ ಹುಟ್ಟಿದ ವೃತ್ತಾಂತಕ್ಕೆ ಈ ಪತ್ರಿಕೆ ಸಾಕ್ಷಿಯಾಗುತ್ತದೆ.

"ಸುದ್ದಿಯ ಸೊಬಗು"ಎಂಬ ಹೊಸ ವರ್ತಮಾನ ಸಮಾಚಾರ ಪತ್ರಿಕೆ ಹೊರಡಿಸುತ್ತಿರುವ ಕುರಿತು ಹೇಳುತ್ತ 'ಅದು ರತ್ನಾಗಿರಿಯಲ್ಲಿ ಹೊರಡುವ 'ಜಗನ್ಮಿತ್ರ' ಪತ್ರಿಕೆಯಂತೆಯೇ ಇರುವುದು. ಮಹಾರಾಷ್ಟ್ರ, ಗುಜರಾತ, ಬಂಗಾಲ ಮತ್ತು ಕಾಶಿಗಳಲ್ಲಿ ಅವರ ಸ್ಥಳೀಯ ಭಾಷೆಯಲ್ಲಿ ಅಧಿಕ ವರ್ತಮಾನ ಪತ್ರಿಕೆಗಳ ಹೊರಡುತ್ತಿದ್ದರೂ ಕರ್ನಾಟಕ ದೇಶ ಇಷ್ಟು ದೊಡ್ಡದು ಆಗಿದ್ದಾಗ್ಯೂ ಇಲ್ಲಿ

*೧೦- ನೋಡಿ ಅನುಬಂಧ ೬

ಒಂದೂ ವಾರ್ತಾ ಪತ್ರಿಕೆಗಳು ಹೊರಡದಿರುವುದು ಕರ್ನಾಟಕಕ್ಕೆ ಕುಂದು. ಕರ್ನಾಟಕ ದೇಶದ ಸುದ್ದಿಗಳು ಜನರಿಗೆ ತಿಳಿಯುತ್ತಿಲ್ಲ. ಆದ್ದರಿಂದ ಈ ಪತ್ರಿಕೆ ಹೊರಡಿಸುತ್ತಿರುವುದಾಗಿ ಹೇಳಲಾಗಿದೆ'. ಮತ್ತು ಶಿಕ್ಷಣ, ವ್ಯಾಪಾರ, ಉದ್ಯೋಗ, ಧರ್ಮ, ವೈದ್ಯ, ರಾಜಕೀಯ ಮತ್ತು ಮನೋರಂಜಕ ವಿಷಯಗಳು ಎಲ್ಲರಿಗೂ ಎಲ್ಲ ಕ್ಷೇತ್ರಗಳಿಗೂ ಉಪಯೋಗವಾಗುವ ವಿಚಾರ ತಿಳಿಸಲಾಗಿದೆ. 'ಬೆಳಗಾವಿ ಸಮಾಚಾರ'ದ ಮ್ಯಾನೇಜರ್ ಅವರಿಗೆ ಬರೆದು ಪ್ರತಿ ತರಿಸಿಕೊಳ್ಳಲು ವಿನಂತಿಸಲಾಗಿದೆ. ಪ್ರಕಟಿಸಿದವರ ಹೆಸರಿಲ್ಲ.[೫](ಶಾಲಾ ಪತ್ರಕ ೮/೧೦, ೨೦ ಜನೇವರಿ ೧೮೭೩) ಮತ್ತೂ ಒಂದೆರಡು ಹೊಸ ಪತ್ರಿಕೆಗಳ ಪ್ರಕಟಣೆ ಆರಂಭವಾದ ಬಗೆಗೂ ಮಾಹಿತಿ ನೀಡುತ್ತದೆ.


ಇಷ್ಟು ದಿವಸ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ದೇಶದಲ್ಲಿ ಕಲಾದಗಿಯಲ್ಲಿ ೧, ಬೆಳಗಾವಿಯಲ್ಲಿ, ೨, ಧಾರವಾಡದಲ್ಲಿ, ೨, ಈ ಪ್ರಕಾರ ವರ್ತಮಾನಪತ್ರಗಳು ಹೊರಡುತ್ತಿದ್ದವು. ಆದರೆ ಈ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಹುಬ್ಬಳ್ಳೀವೈಭವ ಎಂತ, ಧಾರವಾಡದಲ್ಲಿ ಚಂದ್ರೋದಯ ಎಂತ ಹೊಸ ಪತ್ರಗಳು ಹೊರಡಲಿಕ್ಕವೆ ಎಂದು ತಿಳಿಯುತ್ತದೆ.

ಹುಬ್ಬಳ್ಳಿಯಲ್ಲಿ ಹೋದತಿಂಗಳ ೨೬ ತಾರೀಖಿನಿಂದ ಹುಬ್ಬಳ್ಳಿವೈಭವವೆಂಬದೊಂದು ಸಾಪ್ತಾಹಿಕ ವರ್ತಮಾನಪತ್ರವು ಹೊರಡುತ್ತದೆ.

ಧಾರವಾಡದಲ್ಲಿ ಗತ ತಿಂಗಳ ಪ್ರಾರಂಭದಿಂದ ಚಂದ್ರೋದಯ ಎಂಬ ಸಾಪ್ತಾಹಿಕ ಕನ್ನಡ ವರ್ತಮಾನಪತ್ರವು ಹೊರಡಹತ್ತಿದೆ. ಈ ಪತ್ರವು ದಕ್ಷಿಣಮಹಾರಾಷ್ಟ್ರ ದೇಶದೊಳಗಿನ ಇತರ ಕೆಲವು ಪತ್ರಗಳಂತೆ ಅರ್ಧಕನ್ನಡ ಅರ್ಧ ಮರಾಠಿ ಇಲ್ಲದೆ ಪೂರ್ಣವಾಗಿ ಕನ್ನಡಭಾಷೆಯಲ್ಲಿಯೇ ಹೊರಡುತ್ತದೆ.

ಶಾಲಾಪತ್ರಕ ಪು ೧೨ ಸಂ ೫ ಅಗಷ್ಟ೧೮೭೬, ಪುಟ–೩೮೮*ಶಾಲಾಪತ್ರಕ ಪು ೧೨ ಸಂ ೬ ಸಪ್ಟಂಬರ ೧೮೭೬, ಪುಟ–೪೧೨

ಅಗಸ್ಟನಲ್ಲಿ ಪ್ರಕಟಣೆ ನೀಡಿ ಮರು ತಿಂಗಳಲ್ಲಿಯೇ ಪತ್ರಿಕೆಗಳ ಪ್ರಕಟಣೆ ಆರಂಭವಾಗಿಯೇ ಬಿಟ್ಟಿದೆ. ಆದಿಮ ಪ್ರಕಟಣೆಗಳ ಕುರಿತು ನಿಖರ ಮಾಹಿತಿ ನೀಡುತ್ತದೆ. ಅಲ್ಲದೇ ಕನ್ನಡಿಗರಲ್ಲಿ ಕುಸಿದು ಹೋದ ಅಭಿಮಾನ, ಇಂಥ ಪತ್ರಿಕೆಗಳ ಅಳಿವಿಗೆ ಕಾರಣವಾಗಿದ್ದು, ಕೊನೆ ಪಕ್ಷ ನೌಕರಸ್ಥರಾದರೂ ಕೈಜೋಡಿಸಿದರೆ ಅವನ್ನು ಉಳಿಸಬಹುದು, ಪರಿಹಾರ ಹೇಗೆ ಕಂಡುಕೊಳ್ಳಬಹುದು ಎಂಬುದಕ್ಕೆ ಮಹತ್ವದ ಲೇಖ ಶಾಲಾ ಪತ್ರಕ ಪುಸ್ತಕ ೧೦ ಸಂಪುಟ ೫ ಅಗಸ್ಟ ೧೮೭೪, ಪುಟ ೧೧೦–೧೧೧ರಲ್ಲಿ ಪ್ರಕಟಗೊಂಡಿದೆ. ದೋಂಡೋ ನರಸಿಂಹ ಮುಳಬಾಗಿಲರ ಮನೋಗತವಾದ ನೌಕರಶಾಹಿಗಳೆಲ್ಲ ಒಂದೊಂದು ಪ್ರತಿ ಖರೀದಿಸಿದರೆ ಪತ್ರಿಕೆಗಳು ಮಾರಾಟವಾಗುತ್ತವೆ ಮತ್ತು ಉದ್ಯೋಗಪತಿಗಳು ಅದರ ಖರ್ಚುವೆಚ್ಚ ನೋಡಿಕೊಂಡರೆ ಒಂದು ಪತ್ರಿಕೆ ನಡೆಸುವುದು ಕಠಿಣವೇನಲ್ಲ ಎಂಬ ಅನುಭವಜನ್ಯ ಮತ್ತು ವಾಸ್ತವದ ಕಟು ಉಕ್ತಿಗಳನ್ನು ಓದಿದರೆ ಅವರೊಳಗೆ ಹವಣಿಸುತ್ತಿದ್ದ ಪತ್ರಕರ್ತ, ಕನ್ನಡ ಸಂಪಾದಕನೊಬ್ಬನ ಪರಿತಾಪ ನಮಗೆ ಗೋಚರಿಸುತ್ತದೆ.



*೧೯೧೮ರ ಮಾರ್ಚನಲ್ಲಿ ಚನ್ನಬಸವಯ್ಯಾ ರಾಚಯ್ಯಾ ಚಂಡೂರಮಠ ಎನ್ನುವವರ ಸಂಪಾದಕತ್ವದಲ್ಲಿ ಗದಗಿನಲ್ಲಿ 'ಮಹಿಳಾ' ಎಂಬ ಪತ್ರಿಕೆ ಹೊರಡಿಸುತ್ತಿರುವ ವಿಷಯ ಪ್ರಕಟವಾಗಿದೆ.

'ಜಯಂತಿ ಪತ್ರಿಕೆ' ಸುಂದರ, ಚಿತ್ರಮಯ ಮಾಸಪತ್ರಿಕೆಯಾಗಿದೆ. ಮುಂಬಯಿ, ಮೈಸೂರು, ಸಾಂಗಲಿ ಸರಕಾರಗಳ ಎಲ್ಲ ವಿದ್ಯಾಶಾಲೆಗಳಿಗೂ ತರಿಸಿಕೊಳ್ಳಬಹುದಾದ, ಪಂಡಿತ-ಪಾಮರರಿಬ್ಬರೂ ಓದಬಹುದಾದ ಮಾಸಪತ್ರಿಕೆಯಾಗಿದೆ.[೬]

೧೯೧೩ ಅಕ್ಟೋಬರ ಪು ೪೯, ಸಂ ೧೧, ಪುಟ ಸಂಖ್ಯೆ ೯ರಿಂದ ೧೯ ರಲ್ಲಿರುವ ಪೂಜಾರರು ಬರೆದ ಲೇಖನ 'ಮಹಾಲಕ್ಷ್ಮಿ', ವಸ್ತು ವೈಶಿಷ್ಟ್ಯದಿಂದಾಗಿ ವಿಶೇಷವೆನಿಸುತ್ತದೆ. ಏಕೆಂದರೆ 'ಮಹಾಲಕ್ಷ್ಮಿ' ಎಂಬ ಕವಯಿತ್ರಿ ಕಂತಿ, ಸಂಚಿ, ಅಕ್ಕಮಹಾದೇವಿಯರ ಸಾಲಿನಲ್ಲಿ

ಇವರೆಲ್ಲರಿಗಿಂತಲೂ ವಿಶಿಷ್ಟವಾಗಿ ಕಾಣುವ ವ್ಯಕ್ತಿತ್ವವುಳ್ಳವಳು ಎಂದಿದ್ದಾರೆ. ಏಕೆಂದರೆ ಇವಳು 'ಶ್ರೀರಾಮ ಪಟ್ಟಾಭಿಷೇಕ'ವೆಂಬ ಕಾವ್ಯವನ್ನು ಬಹು ಪ್ರೌಢವಾಗಿ ಬರೆದಿರುವುದು. ಮಂಗಳೂರು ಜಿಲ್ಲೆಯ ಉಡುಪಿ ಕ್ಷೇತ್ರದಲ್ಲಿದ್ದ ರಂಗಭಟ್ಟ ಚಾವಡಿಯವರ ಎಂಬ ಸ್ಮಾರ್ತಬ್ರಾಹ್ಮಣನ ಮಗಳು ಈ ಮಹಾಲಕ್ಷ್ಮಿ. ಇವಳ ಕೃತಿಯಲ್ಲಿ ಮುಖ್ಯವಾದ ಪದ್ಯಗಳನ್ನು ಉಲ್ಲೇಖೀಸುತ್ತ ಅವುಗಳಿಗಿರುವ ಬಹು ಅರ್ಥಗಳನ್ನು ವಿಶ್ಲೇಷಿಸುತ್ತ ಸಾಗಿದ್ದಾರೆ. ೧೧ ಪುಟಗಳ ಈ ಲೇಖನ ಮಹತ್ವದ್ದಾಗಿದೆ. ಅಕ್ಟೋಬರ ತಿಂಗಳ ಪತ್ರಿಕೆಯಲ್ಲಿ 'ಸಮಾಸ ವಿಷಯ', ಮತ್ತು ನವೆಂಬರ ತಿಂಗಳ ಪತ್ರಿಕೆಯಲ್ಲಿ ಹಿಂದಿನ ತಿಂಗಳ ವಿಷಯದ ಮುಂದುವರಿಕೆಯಾಗಿ 'ಆಕ್ಷೇಪನಿರಸನ' ಎಂಬ ಶೀರ್ಷಿಕೆಯಲ್ಲಿ ಸಶೇಷವಾಗಿರುವ ಲೇಖನ ಪ್ರಕಟವಾಗಿದೆ. ಇದೇ ಮುಂದುವರೆದು ನಾಗೇಶ ಚಿಕ್ಕೋಡಿಯವರ 'ಬ್ರಹ್ಮಚರ್ಯ' ಮತ್ತು ೧೯೧೪, ಜುಲೈ ೫೦, ಸಂ ೭ರ ಪುಟ ೧೫-೨೧ರಲ್ಲಿಯ 'ಯೋಗ್ಯವಾದ ಆಹಾರ' -**ಲೇಖನ** ಸಂಶೋಧನಾತ್ಮಕ ಭಾಷಾಂತರವಾಗಿದೆ.

ನವಂಬರ ೧೯೧೪ ಪು ೫೦, ಸಂ ೧೧ರ ಕೊನೆ ಪುಟದಲ್ಲಿ ವಿ ಎನ್ ಮಗದಾಳ. ಧಾರವಾಡ ಇವರ 'ಹಿಂದೂಸ್ತಾನದ ಭೂಗೋಲ' ಎಂಬ **ಪುಸ್ತಕವು** ಸರಕಾರದಿಂದ, ಕನ್ನಡ ಟ್ರೇನಿಂಗ್ ಕಾಲೇಜುಗಳಲ್ಲಿ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸಲು ಮಾನ್ಯ ಮಾಡಿದ ಬಗೆಗೆ, ವಿದ್ಯಾ ಇಲಾಖೆ ಪ್ರಕಟಿಸಿದೆ. ಇದರ ಬೆಲೆ ೮೦ ಪೈಸೆಗಳು ಎಂದಿದೆ.

೧೯೨೫ರ ಎಪ್ರೀಲ್‌ನಲ್ಲಿ ನಿಂಬಾಳಕರ ಪಬ್ಲಿಷರ್ಸ. ಮಿಶನ್ ಕಂಪೌಂಡ, ಧಾರವಾಡ ಇವರ ಜಾಹೀರಾತಿನಂತೆ ಮಿ.ನಿಂಬಳಕರ ಇವರಿಂದ ರಚಿತವಾದ ೬ ಮಹತ್ವದ ಪುಸ್ತಕಗಳ ಪಟ್ಟಿ(ಚಿಕ್ಕ ಪರಿಚಯದೊಂದಿಗೆ) ಇದೆ.

೧- ಹಿಂದುಸ್ತಾನದ ಐತಿಹಾಸಿಕ ನಕಾಶ ಪುಸ್ತಕ

೨- ಮುಂಬಯಿ ಇಲಾಖೆಯ ಭೂಗೋಲ

೩- ಧಾರವಾಡ ಜಿಲ್ಲಾ ವರ್ಣನೆ

೪- ರಾಜಮೂಲಶಿಕ್ಷಕ

೫- ಅಂಕಗಣಿತ ಭಾಗ ೧

೬- ಅಂಕಗಣಿತ ಭಾಗ ೨

ಇದರಲ್ಲಿ ಧಾರವಾಡ ಜಿಲ್ಲೆಯ ಅನೇಕ ಚಿತ್ರ ನಕಾಶೆಗಳೊಂದಿಗೆ ವರ್ಣನೆ ಇರುವ ಮಹತ್ವದ ವಿಷಯ ತಿಳಿದು ಬರುತ್ತದೆ. ಇದರ ಕ್ರಯ ೪ಆಣೆ, ೬ ಪೈಸೆ.[೭]

ಶಿಕ್ಷಣದಿಂದಾಗಿ ಪ್ರಜ್ಞಾವಂತರಲ್ಲಿ ಮಹಿಳಾಪರ ಚಿಂತನೆ ಮತ್ತು ಜಾಗೃತಿ ಉಂಟಾಯಿತು ಎಂಬುದಕ್ಕೆ ೧೯೨೫ರಲ್ಲಿ, ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಶ್ರೀ ನಾರಾಯಣ ವ್ಯಾಸರಾವ

ಕುಲಕರ್ಣಿ ಎಂಬುವರು ಬರೆದ ಮೂರು ವಿಭಿನ್ನ ಚಿಂತನಾಪರ, ಮನೋವೇದಕ ಸಂಗತಿಗಳನ್ನು ವರ್ಣಿಸುವ ಕವಿತೆಗಳ ವಿಷಯ ಬೆರಗು ಹುಟ್ಟಿಸುತ್ತವೆ. ಆದರೆ ಕವಿತೆಗಳು ಇಲ್ಲಿ ಉದ್ಧೃತವಾಗಿಲ್ಲ.

೧- ನರಗುಂದದ ಸಾವಿತ್ರಿಬಾಯಿ

೨- ಕರ್ನಾಟಕದ ಮೊದಲನೆಯ ಜೋಹರ

೩- ಪ್ರೇಮ ಪ್ರಭಾವ

ಗ್ರಂಥ ವಿಮರ್ಶೆಗೆ ಬಂದ ಈ ಕವಿತೆಗಳ ಕುರಿತು ಸಂಪಾದಕರು 'ಮೊದಲನೇದರಲ್ಲಿ ನರಗುಂದದ ಬಾಬಾಸಾಹೇಬನ ಹೆಂಡತಿಯಾದ ಸಾವಿತ್ರಿಬಾಯಿಯು ಮಲಪ್ರಭಾ ನದಿಯಲ್ಲಿ ಹಾರಿಕೊಂಡದ್ದೂ, ಎರಡನೆದರಲ್ಲಿ ಆನೆಗುಂದಿಯ ಅರಸನ ಮಗಳಾದ ಪದ್ಮಾವತಿಯು ಅಗ್ನಿಪ್ರವೇಶ ಮಾಡಿದ್ದೂ, ಮೂರನೆದರಲ್ಲಿ ವಿಜಯನಗರದ ಎರಡನೆಯ ದೇವರಾಯನ ಕಾಲಕ್ಕೆ ಮುದಗಲ್ಲ ಪಟ್ಟಣದಲ್ಲಿರುತ್ತಿದ್ದ ಒಬ್ಬ ಅಕ್ಕ ಸಾಲಿಗನ ಮಗಳಾದ ನಿಹಲೆ ಎಂಬುವಳ ಮನೋದಾರ್ಢ್ಯವೂ ವರ್ಣಿತವಾಗಿವೆ. ಕನ್ನಡಿಗರು ಇಂಥ ಪ್ರಯತ್ನಕ್ಕೆ ಉತ್ತೇಜನ ಕೊಡುವರೆಂದು ನಂಬಿದ್ದೇನೆ'[೮] ಎಂದು ಕೇಳಲಾಗಿದೆ. ಇಂದಿಗೂ ಜ್ವಲಂತವಾಗಿರುವ ವಿಷಯದ ಕುರಿತು ಯುವಮನಸ್ಸುಗಳಲ್ಲಿ ಮೂಡಿದ್ದ ಅರಿವು, ಅಭಿಮಾನ ಹುಟ್ಟಿಸುವಂತಿದೆ.

ವಿಶೇಷವೆಂದರೆ ೧೯೪೧ ಏಪ್ರಿಲ್ ನಲ್ಲಿ 'ವಿವಿಧ ವಿಷಯಗಳು' ಎಂಬ ಶೀರ್ಷಿಕೆಯಡಿ 'ಸೇವಿಂಗ್ಸ ಬ್ಯಾಂಕಿನಲ್ಲಿ ಸಂರಕ್ಷಣೆಯ ಠೇವುಗಳು ಜಾರಿಯಾಗಿವೆ; ಕಡಿಮೆ ಸಂಬಳದ ಸರಕಾರಿ ನೌಕರರಿಗೆ ತುಟ್ಟಿ ಭತ್ಯೆ ಘೋಷಣೆಯಾಗಿದೆ; ಶಿಕ್ಷಣ ಕಾರ್ಯದಲ್ಲಿ ಚಲನಚಿತ್ರಗಳ ಸಹಾಯ ಮುಂತಾದ ಕುತೂಹಲಕಾರಿ ವಿಷಯಗಳು ಪ್ರಕಟವಾಗಿವೆ.

೧೯೪೦ ಏಪ್ರಿಲ್‌ನಿಂದ ಆರಂಭಗೊಂಡ ಕೇಶವಶರ್ಮಾ ಗಲಗಲಿಯವರ ಛಂದಸ್ಸು ಸಂಬಂಧಿ ಲೇಖನ ಮತ್ತು ೧೯೪೦-೪೧ರ ಸಾಲಿನಲ್ಲಿ ಶ್ರೀ ಸೀತಾರಾಮ ತಾವಡೆ, ಎಜ್ಯುಕೇಷನಲ್ ಇನ್ಸಪೆಕ್ಟರ ದಕ್ಷಿಣಭಾಗ ಇವರಿಂದ ಲಿಖಿತಗೊಂಡ ಲೇಖನಗಳು ಆಧ್ಯಯನಪೂರ್ಣವಾಗಿವೆ.

* ಮರಾಠಿ ಬಳಕೆಯ ಕುರಿತು:

'...ಸರಕಾರಿ ಶಾಲೆಗಳಲ್ಲಿ ಉಪಯೋಗಿಸುವುದಕ್ಕಾಗಿ ಮಹಾರಾಷ್ಟ್ರ ಭಾಷೆಯ ನೂತನವಾದ 'ದಾದೊಕೃತ ಲಘುವ್ಯಾಕರಣ' ಅಚ್ಚಿನಲ್ಲಿದ್ದು ತೀವ್ರವಾಗಿ ಬಳಕೆಗೆ ಬರುವುದು. ಕಾರಣ ಪ್ರಸ್ತುತ ಕಾಲದಲ್ಲಿ ಶಾಲೆಗಳಲ್ಲಿ ಬಳಸುತ್ತಿರುವ ಗಂಗಾಧರ ರಾಮಚಂದ್ರ ಟಿಳಕ ಇವರ 'ಲಘುವ್ಯಾಕರಣವು' ಇದನ್ನು ಡಿಸೆಂಬರ ಅಂತ್ಯದವರೆಗೆ ಉಪಯೋಗಿಸಿ, ನಂತರ ಈ ಹೊಸ ಪುಸ್ತಕ ಉಪಯೋಗಿಸಬೇಕಾಗಿ ತಿಳುವಳಿಕೆ ನೀಡುವ ಇಶ್ತಿಯಾರನಾಮೆ ಮಹಾದೇವ ವಾಸುದೇವ-ಎ.ಇ. ದಕ್ಷಿಣ ಭಾಗ ಇವರ ಹೆಸರಿಂದ ಪ್ರಕಟಗೊಂಡಿದೆ. ಇದರಿಂದ ಮರಾಠಿ ಕಲಿಕೆ ಏಷ್ಟೊಂದು

ರಾಜಾರೋಷವಾಗಿ ನಡೆದಿತ್ತು ಎಂಬುದ ವಿಧಿತವಾಗುತ್ತದೆ. ಅಲ್ಲದೆ ಪ್ರತಿ ತಿಂಗಳ ಸಂಚಿಕೆಯ ೨೪ ಪುಟಗಳಲ್ಲಿ ಸರಾಸರಿ ನಾಲ್ಕು ಪುಟಗಳಾದರೂ ಮರಾಠಿ ವಿಷಯ ಅಚ್ಚಾಗಿಯೇ ಇದೆ. ಇದರಿಂದ ಮರಾಠಿಯ ಪ್ರಾಬಲ್ಯ ಮತ್ತು ಬ್ರಿಟಿಷರು ಒಪ್ಪಿತ ಅರ್ಥವಾಗುತ್ತದೆ. ಜನೇವರಿ ೧೮೬೬ರ ಜನೇವರಿ ಸಂಚಿಕೆ ಪುಟ ೨೨೦ರಲ್ಲಿ ರಸೆಲ್ ಎ.ಇ. ಇವರ ಇಸ್ತಿಯಾರನಾಮೆಯಲ್ಲಿ ಮಾಡಿದ 'ಬರೇ ಕನ್ನಡ ಹಾಂಗೂ ಬರೇ ಮರಾಠಿ ಸಾಲಿಗಳು(ಇದ್ದರೆ) ಬಿಟ್ಟು ಇತರ ಯಾವತ್ತೂ ಸಾಲಿಗಳಲ್ಲಿ ಓದೋಣ, ಬರಿಯೋಣ, ಭಾಷಾಂತರ, ಹೇಳಿದ್ದನ್ನು ಬರಿಯೋಣ– ಈ ಮೂರು ವಿಷಯಗಳು ಕನ್ನಡದಲ್ಲಿಯೂ, ಮರಾಠಿಯಲ್ಲಿಯೂ ಕಲಿಸುತ್ತಿರಬೇಕು' ಎಂಬ ಆದೇಶ ಮರಾಠಿಯನ್ನು ಸಂಪೂರ್ಣ ತೆಗೆದು ಹಾಕಲಾಗದ ಅನಿವಾರ್ಯತೆಯ ಪ್ರತೀಕವಾಗಿದೆ. ಮುಲ್ಕಿ ಮತ್ತು ಪೋಲಿಸ ಮುಂತಾದ ಖಾತೆಗಳಲ್ಲಿ ಡಿಪಾರ್ಟಮೆಂಟಲ್ ಪರೀಕ್ಷೆಗಳು ಆರಂಭವಾದ ಕುರಿತು ಮಾಹಿತಿ ಇದೆ. ತನಗೆ ತಾನೆ ನೆರವಾಗುವುದು(Self Help) ಎಂಬ ಶೀರ್ಷಿಕೆ ಬರಹ ಬಹು ವರ್ಷಗಳಿಂದ ಬರೆಯಿಸಿಕೊಂಡು ಬಂದಿರುವಂಥದ್ದು.

ಪತ್ರಿಕೆಯ ರೋಚಕ ವಿಷಯಗಳು:

*ಪತ್ರಿಕೆಯಲ್ಲಿ ಚಿಕ್ಕಪುಟ್ಟವಿರಬಹುದಾದರೂ ಬಹುಮುಖ್ಯವಾದ ಸಂಗತಿಯನ್ನರುಹುವ ಹಲವಾರು ಬರಹಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಉದಾ:೧

ಟ್ರೇನಿಂಗ ಕಾಲೇಜವು ಸದ್ಯಕ್ಕೆ ವೊಂದು ವರ್ಷ ಧಾರವಾಡಕ್ಕೆ ಹೋಗುವದಿಲ್ಲೆಂತ ಕೇಳುತ್ತೇವೆ.

ಈ ವರ್ಷದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ೬೭೭೫ ಜನ ಉಮೇದವಾರರು ಹೋಗಿದ್ದರು. ಅವರಲ್ಲಿ ೪೭೯ ಜನರು ಮಾತ್ರ ಇಂಗ್ಲಿಷದಲ್ಲಿ ಪಾಸ್ ಆದರು. ಇನ್ನು ಇವರಲ್ಲಿ ಎಷ್ಟು ಮಂದಿ ಕಡಿಮೆ ಆಗುತ್ತಾರೋ ತಿಳಿಯದು. ಮುಂಬಯಿ ಹಾಯ್‌ಸ್ಕೂಲಿನಿಂದ ಹೋದ ೬೩೪ ಜನರಲ್ಲಿ ೨೪ ಮಂದಿ ಮಾತ್ರ ಇಂಗ್ಲಿಷದೊಳಗೆ ಪಾಸಾದರಂತೆ!

ಎಮ್. ಏ. ಪರೀಕ್ಷೆಯಲ್ಲಿ ಇಬ್ಬರೂ, ಎಲ್. ಎಲ್. ಬೀ. ಪರೀಕ್ಷೆಯಲ್ಲಿ ಇಬ್ಬರೂ ಪಾಸ್ ಆದರು. ಬೀ. ಏ. ಪರೀಕ್ಷೆಯಲ್ಲಿ ಬೆಳಗಾವಿಯ ರಾ. ಇನಸ್ಪೆಕ್ಟರರು ಪಾಸ್ ಆದರು.

ಇಂಡಿಯಾ ಸರಕಾರದವರು ಇನ್ನು ಮುಂದೆ ವಿದ್ಯಾಖಾತೆಯೊಳಗಿನ ದೊಡ್ಡ ದೊಡ್ಡ ಸ್ಥಳಗಳನ್ನು ಲಷ್ಕರೀ ಅಥವಾ ಸಿವ್ಹಿಲ್ ಖಾತೆಯೊಳಗಿನ ಜನರಿಗೆ ಕೊಡದೆ, ವಿದ್ಯಾಖಾತೆಯೊಳಗಿನ ಅಧಿಕಾರಿಗಳಿಗೇ ಕೊಡತಕ್ಕದ್ದೆಂದು ನಿಯಮ ಮಾಡಿದ ಬಗ್ಗೆ ವರ್ತಮಾನಪತ್ರಗಳಲ್ಲಿ ಲೇಖವುಂಟು.

ಕಲಕತ್ತೆಯ ಹತ್ತರ ಬಜಾರನಗರ ಯೆಂಬಲ್ಲಿ "ಭಾರತಶ್ರಮಜಾಳಿ" ಯೆಂಬವೊಂದು ಮಾಸಿಕ ಪುಸ್ತಕವು ಬಂಗಾಲೀ ಭಾಷೆಯಲ್ಲಿ ಇತ್ತ ಕಡೆಯಲ್ಲಿ ಪ್ರಸಿದ್ಧವಾಗುತ್ತದೆ. ಈ ದೇಶದ ಕಲಾಕೌಶಲ್ಯಗಳ ವಿಷಯಗಳನ್ನೂ ಅವುಗಳ ಸುಧಾರಣೆಯ ವಿಚಾರಗಳನ್ನೂ ಪ್ರಸಿದ್ಧಿಸುವದೇ ಈ ಪುಸ್ತಕದ ಮುಖ್ಯ ಉದ್ದೇಶವು. ಈ ಜಾತಿಯ ಮಾಸಿಕ ಪುಸ್ತಕವು ಈ ದೇಶದಲ್ಲಿ ಇದೇ ಮೊದಲನೇದು.

ಈ ದೇಶದ ಬೇರೆ ಬೇರೆ ಪ್ರದೇಶಗಳೊಳಗಿನ ಪಂಡಿತರು ತಂಜಾವರದಲ್ಲಿ ಕೂಡಿ, ವೇದಗಳ ಬಗ್ಗೆ, ಶಾಸ್ತ್ರಗಳ ಬಗ್ಗೆ ವಾದವಿವಾದಗಳನ್ನು ನಡಿಸುತ್ತಾರೆಂದು ಕೇಳುತ್ತೇವೆ.

ಪ್ರಶಿಯಾ ದೇಶದೊಳಗಿನದೊಂದು ಹಳ್ಳಿಯ ಶಾಲೆಗೆ ೩೦೦ ವರ್ಷಗಳಲ್ಲಿ ಆರೇ ಮಂದಿ ಮಾಸ್ತರರಾದರು. ಅವರು ಆರೂ ಮಂದಿ ವೊಂದೇ ಮನೆತನದವರೂ ವೊಂದೇ ಹೆಸರಿನವರೂ ಇದ್ದರಂತೆ!

ಕೌತುಕದ ವೃತ್ತಾಂತಗಳು.

ಪಂಜಾಬದೊಳಗಿನ ಚನಾಬ ಹೊಳೆಗೆ ೩॥। ಮೈಲು ಉದ್ದವಾದದ್ದೊಂದು ಪೂಲು ಕಟ್ಟುತ್ತಾರೆ. ಇಷ್ಟು ದೊಡ್ಡ ಪೂಲು ಯಾವ ಹೊಳೆಗೂ ಇನ್ನೂವರೆಗೆ ಕಟ್ಟಲ್ಪಟ್ಟಿಲ್ಲ.

ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯವರು ಜಿಲ್ಲಾ ಜ

ರಜದ ಸ್ಥಳಗಳನ್ನು ನೋಡೋದ ಜನರಿಗೆ ಳೊಡ್ಡುವ ಬಗ್ಗೆ ಪ್ರಯಾಸವು ಕಡಿಮೆಯಾಗುತ್ತದೆಂದು ಸುದ್ದಿಯುಂಟು.

ಈ ದೇಶದ ಜನರು ಹೊಟ್ಟೆ ತುಂಬಿಕೊಳ್ಳುವದಕ್ಕೋಸ್ಕರವಾಗಿ ಪರದೇಶಗಳಿಗೆ ಪೂರ್ವದಲ್ಲಿ ಹೋಗುತ್ತಿದ್ದಿಲ್ಲ. ಆದರೆ ಇತ್ತಲಾಗಿ ನಾಲ್ಕು ಮೂರು ವರ್ಷಗಳಲ್ಲಿ ಬಹು ಜನರು ಪರ ದ್ವೀಪಗಳಿಗೂ ದೇಶಗಳಿಗೂ ಹೋದದ್ದುಂಟು. ಮಾರೀಶಸ ದ್ವೀಪಕ್ಕೂ, ವೆಸ್ಟ ಇಂಡೀ ದ್ವೀಪಗಳಿಗೂ, ದಚ್ ಜನರು ಕ್ರೊಕ್ಕುವಾಗಿ ನಿಂತ ದ್ವೀಪಗಳಿಗೂ ಕೂಡ ಹಿಂದಿನ ಯೆರಡು ವರ್ಷಗಳಲ್ಲಿ ೪೦೦೦೦ ಕ್ಕಿಂತ ಹೆಚ್ಚು ಜನರು ನೌಕರಿಯ ಸಲುವಾಗಿ ಹೋದರು. ಅವರಲ್ಲಿ ೩೩೫೭ ಜನ ಬ್ರಾಹ್ಮಣರು, ೭೫೫೯ ಜನ ಕ್ಷತ್ರಿಯರು, ೩೪೭೦ ಜನ ಶೈಗಾರರು?, ೯೭೪೦ ಜನ ಕೂಲಿಯವರು, ೩೬೬೭ ಜನ ಮುಸಲ್ಮಾನರು ಉಂಟು.

ಮುಂಬಯಿಯಲ್ಲಿ ಇದ್ದಲಿಯ ಹೊಗೆಯಿಂದ ಬೀದಿಗಳಲ್ಲಿ ದೀಪಗಳನ್ನು ಹಚ್ಚುತ್ತಿರುತ್ತಾರೆ. ಇತ್ತಕಡೆಯಲ್ಲಿ ಪ್ರೊಬ್ಬ ರಸಾಯನ ಶಾಸ್ತ್ರಜ್ಞನು ಬೇರೊಂದು ಹೊಗೆಯನ್ನು ಶೋಧಿಸಿ ತೆಗೆದಿದ್ದಾನೆ. ಅದು ಗಟಾರದೊಳಗಿನ ಹೊಲಸು ನೀರಿನಿಂದಲೂ, ಒಣೆಯೊಳಗಿನ ಕಸದಿಂದಲೂ, ಮಲದಿಂದಲೂ ಹುಟ್ಟುತ್ತದೆ. ಆದರೆ ಅಪಕ್ಕೆ ಇದ್ದಲಿಯ ಹೊಗೆಗೆ ತಕ್ಕುದಾದ ವೆಚ್ಚದ ಅರ್ಧಕ್ಕಿಂತ ಕಡಿಮೆ

ವೆಚ್ಚ ಹತ್ತಿ, ಅದರ ಪ್ರಕಾಶವು ಇದ್ದಲಿಯ ಹೊಗೆಯ ಪ್ರಕಾಶಕ್ಕಿಂತ ಬಹಳ ಹೆಚ್ಚಿರುತ್ತದೆ.

ಜಪಾನ ದೇಶದಲ್ಲಿ ಪ್ರೊಬ್ಬ ಗೃಹಸ್ಥನು ಹಾರುವದೊಂದು ಯಂತ್ರವನ್ನು ರಚಿಸಿರುತ್ತಾನೆ. ಅದರ ಆಕಾರವು ಪಕ್ಷಿಯ ಹಾಗಿದೆ. ಅದರೊಳಗೆ ಕೂತು ಆಕಾಶಕ್ಕೆ ಹಾರಿ, ಪುನಃ ಬೇಕಾದಾಗ ಕೆಳಗೆ ಬರಲಿಕ್ಕೆ ಬರುತ್ತದೆ.

[10] ಶಾಲಾಪತ್ರಕ ಪು ೧೦ ಸಂ ೯ ಡಿಸೆಂಬರ್ ೧೮೭೪ ಪುಟ ೧೯೪-೧೯೭

ಪತ್ರಿಕೆ ಪ್ರಕಟಿಸಿದ ಮಹತ್ವದ ಮತ್ತು ರೋಚಕ ವಿಷಯಗಳಲ್ಲಿ ಇದೂ ಒಂದು:

(೨೯)

೩. ಈ ಪತ್ರದಲ್ಲಿ ಇರುವಂಥ ಮಜಕೂರು ಪ್ರಸಿದ್ಧಿ ಬರಾಗಿ [illegible] ಶಿಕ್ಷ [illegible]

ಮೇ|| ಕರಬಾಸ ನಾಗೇಶ ವಿನಾಯಕ ಬಾಪಟ ಬಿ.

ಎ. ಇ. ಜಿಲ್ಲಾ ಚಿಕ್ಕಗಾಂವ ಇವರು ಮಾಡಿಕಳಿಸಿದ್ದು

೧ ಸಂ|| ದರತ್ರಿಸಾಲಯೊಳಗೆ ನಾನು, ಇಂಗ್ಲಿಶ ಕ್ಲಾಸಿನ ಅಭ್ಯಾಸ ಮಾಡಿಸುವಾಗ್ಗೆ, ಕೆಲವು ಸಾಮಾನಗಳೂ, ಕೆಲವು ಬುಕ್ಕಗಳು, ಅವಶ್ಯವಾಗಿ ಬೇಕಾಗುತ್ತವೆ, ಅವು ಮಾಡಿ ಕಳುಹಿಸಿ ಕೊಡತಕ್ಕಂಥವಾಗಿ, [illegible] ಕೊಂಡಕ್ಕೆ "ನಾಗೇಶ ಕೃಷ್ಣಪಂತ" ಎಂಬ ಕೆಲವ ಮಾಸ್ತರ ನೀನು ಇಲ್ಲಿಂದ ಹುಕುಮ ಕೊಟ್ಟಿರುತ್ತಾರೆ. ಅಂದಬಳಿಕ, ನಾನು ಕೇಳುವದೇನು? ಇವರು ಹೇಳುವದೇನು? ಇನ್ನು ಬಲ್ಲವರು ವಿಚಾರ ಮಾತ್ರ ಬೇಕು.

೨ ಮೊ|| ನಾಗೇಶ ಕೃಷ್ಣ ಇವರು [illegible] ಕೊಟ್ಟಿಲ್ಲ. ನಾಗರ [illegible] ನಾನು [illegible] ಶಾಲೆಯ ಸಲ್ಲ ಇದ್ದವನು [illegible] ಕೆಲಸದವನು, [illegible] [illegible].

ಮಹಾರಾಜ ರಾಜಮಾನ್ಯ ರಾಜಶ್ರೀ ಸ್ಕೂಲ ಡೇಪ್ಯೆ ಎಡಿಟರ್ ಇವರಿಗೆ-

ನಾನು ಬರೆದ ಕಳುಹಿಸಿದಂಥ ಪತ್ರವನ್ನು ತಮ್ಮ ಸ್ಕೂಲಡೇಪಿಪತ್ರದಲ್ಲಿ ಛಾಪಿಸಿ ಪ್ರಕಟ ಮಾಡಬೇಕೆಂದು ವಿಜ್ಞಾಪಿಸಿದ್ದೇ!

(೨೬)

[illegible]


(೨೮)

[illegible]

[illegible]

(೩೦)


[illegible]



ಶಾಲಾ ಪತ್ರಿಕೆ ಪುಸ್ತಕ ೬, ಸಂಚಿಕೆ ೧, ಎಪ್ರೀಲ್, ಪುಟ ೨೫ರಿಂದ ೩೫ ರವರೆಗಿರುವ ಈ ಪತ್ರವು ಬಹು ಮಹತ್ವದ್ದಾಗಿದ್ದು ಅನೇಕ ಹೊಸ ವಿಷಯಗಳನ್ನು ಮತ್ತು ಊಹೆಗಳನ್ನು ಹುಟ್ಟುಹಾಕುತ್ತದೆ. ಇಲ್ಲಿರುವ ಒಕ್ಕಣಿಕೆ ಮತ್ತು ಅದನ್ನು ಬರೆದಿರುವವರು **"ಚ.ಬ.ಧಾ."** ಎಂಬ ಸಂಕ್ಷೇಪ್ತ ಹೆಸರು ಸೂಚಿಸುವುದು ಇದು 'ಚನ್ನಬಸಪ್ಪ ಬಸಲಿಂಗಪ್ಪಾ ಧಾರವಾಡ' ಇವರನ್ನೇ. ಈ ಅವಧಿಯಲ್ಲಿ ಚನ್ನಬಸಪ್ಪ ಬೆಳಗಾವಿಯಲ್ಲಿಯೇ ಇದ್ದರೇನೋ ನಿಜ. ಇವರು 'ಸವದತ್ತಿಯಲ್ಲಿ ಶಾಲೆ ಕಲಿಸುವಾಗ...' 'ಸವದತ್ತಿ ಶಾಲೆಯ ಹೆಡ್ಡಮಾಸ್ತರ ಬಾಳಪ್ಪ ವಿನಾಯಕಪ್ಪಾ ಕಾಳೆನವರ ಕೆಲವು ತಪ್ಪುಗಳ ಬಗೆಗೆ.....'ಎಂಬ ಸಂಬೋಧನೆಗಳು ಆಶ್ಚರ್ಯ ಹುಟ್ಟಿಸುತ್ತದೆ. ಮತ್ತು ಘಟಿಸಿರಬಹುದಾದ ಕಾಲಾತೀತ ಘಟನೆಯೆಡೆಗೆ ಬೆರಳು ತೋರುತ್ತವೆ. ಒಂದೊಮ್ಮೆ ಡೆಪ್ಯೂಟಿಯಾಗಿದ್ದು ಕೊಂಡೇ ಶಾಲೆ ತರಗತಿ ನಿರ್ವಹಿಸಿರಬಹುದು ಎಂದುಕೊಂಡರೂ ನಾಗೇಶ ವಿನಾಯಕ ಬಾಪಟ ಇವರ ವಿರುದ್ಧ ಮತ್ತು ಶಾಲೆಯಲ್ಲಿನ ಅವ್ಯವಸ್ಥೆ ವಿರುದ್ಧ ಹೀಗೆ ಪತ್ರ ಪ್ರಕಟಿಸುವ ಮೂಲಕ ಬಂಡಾಯವೇಳುವ ಪರಿಸ್ಥಿತಿ ಇವರಿಗೇ ಬಂದೊದಗಿದ ಪರಿ ಮತ್ತು ಅಂದಿನ ವ್ಯವಸ್ಥೆ ವಿಸ್ಮಯ ಹುಟ್ಟಿಸುತ್ತದೆ. ಆದರೆ ಬಾಳಣ್ಣ ಸೀಗೀಹಳ್ಳಿಯವರ ಪ್ರಕಾರ ಇಲ್ಲಿರುವ 'ಚನ್ನಬಸಪ್ಪ ಬಸಲಿಂಗಪ್ಪಾ ಧಾರವಾಡ' ಇವರು ಡೆಪ್ಯೂಟಿ ಚನ್ನಬಸಪ್ಪ'(ದೊಡ್ಡ ಚನ್ನಬಸಪ್ಪ) ಅಲ್ಲ... ಅವರ ತಮ್ಮನಾದ 'ಸಣ್ಣಚನ್ನಬಸಪ್ಪ ಬಸಲಿಂಗಪ್ಪಾ ಧಾರವಾಡ'. ಅವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ಈ ಪತ್ರ ಅವರು ಬರೆದದ್ದು' ಎನ್ನುತ್ತಾರೆ. ಹಾಗಾದರೆ ಈ 'ಸಣ್ಣಚನ್ನಬಸಪ್ಪನೂ ಪೂಣೆಯಲ್ಲಿ ಇಂಜನಿಯರಿಂಗ್ ಓದಿದ್ದರೆ? ಟ್ರೇನಿಂಗ್ ಕಾಲೇಜಿನಲ್ಲಿ ಕೆಲವು ದಿನ ಶಿಕ್ಷಕ ಕೆಲಸ ಮಾಡಿದ್ದರೆ?' ಎಂಬುದು ಸಾಬಿತಾಗಬೇಕಾಗುತ್ತದೆ. ಪತ್ರದ ೭ನೆಯ ಅಂಶದ ಪ್ರಕಾರ 'ಸಂವದತ್ತಿ ಸಾಲಿಯಲ್ಲಿ ಕನ್ನಡ ಕವಿತೆಯ


೧ನೇ ಮತ್ತು ೨ನೆಯ ಪುಸ್ತಕವನ್ನು ಕಲಿಸುವ ಬಗ್ಗೆ ಮೆ. ಚನ್ನಬಸಪ್ಪ ಡಿ.ಎ.ಇ. ಇವರು ಹುಜುರ, ಹುಕುಂ ಪ್ರಕಾರ ಹೂಲಿಯ ವೆಂಕಣಗೌಡರೆಂಬ ಚಲೋ ಶಿಕ್ಷಕರನ್ನು ನೇಮಿಸಿದ್ದರು...' ಎಂದು ಹೇಳಲಾಗಿದೆ. ಒಂದೇ ಪತ್ರದ ಈ ವಿವಿಧ ಹೇಳಿಕೆಗಳು ಗೊಂದಲಕ್ಕೀಡು ಮಾಡುತ್ತವೆ. ನಾಗೇಶ ಬಾಪಟರು ಮರಾಠಿಯಲ್ಲಿಯೇ ಸರಕ್ಯೂಲರ ಹೊರಡಿಸುತ್ತಿರುವ ಬಗೆಗೆ ಮತ್ತು ಬೆಳಗಾವಿ ಜಿಲ್ಲೆಯನ್ನು ಕನ್ನಡದಿಂದ ತುಂಬಬೇಕೆನ್ನುವ ಕಾಳಜಿಯೊಂದಿಗೆ, ಉನ್ನತಾಧಿಕಾರಿಗಳು ಗಮನಿಸಬೇಕೆಂಬುದು ಇವರ ಅಹವಾಲು. ಇದು ಕನ್ನಡಿಗರ ಮತ್ತು ಮರಾಠಿಗರ ಭಾಷಿಕ ಯುದ್ಧ ಎಂಬುದಂತೂ ಸ್ಪಷ್ಟವಾಗುತ್ತದೆ.

ಈ ಬರಹಯುದ್ಧ ಇಲ್ಲಿಗೆ ನಿಲ್ಲುವುದಿಲ್ಲ. ಶಾಲಾಪತ್ರಕದಲ್ಲಿ ಶಾಲಾ ಪತ್ರಿಕೆ ಪುಸ್ತಕ ೬, ಸಂಚಿಕೆ ೨, ಮೇ ಪುಟ ೬೩-೬೪ರಲ್ಲಿ ತನ್ನನ್ನು ಸಸ್ಪೆಂಡ ಮಾಡಿ ನಾಲ್ಕು ತಿಂಗಳಾದರೂ ನಿಕಾಲಿ ಹುಕ್ಕುಂ ಕೊಡದಿರುವ ಬಗೆಗೆ ಮತ್ತು ತಾನು 'ಕನ್ನಡ ಬಾರದ ಕೊಂಕಣಸ್ಥ ಎಂದು ಹೇಳಿದ ಬಗೆಗೆ ಸ್ಪಷ್ಟನೆ ಕೊಡುವ ಮತ್ತೊಂದು ಪತ್ರ ಮತ್ತೇ **'ಚ.ಬ.ಧಾರವಾಡ'** ಎಂಬ ಹೆಸರಿನಿಂದ ಪ್ರಕಟವಾಗಿದೆ. ಇದರಿಂದ ಸ್ಪಷ್ಟವಾಗುವ ವಿಷಯವೆಂದರೆ ಈ ವನಬಸಪ್ಪ ದಾರವಾ ಈತನನ್ನು ಅವನ ಮೇಲಾಧಿಕಾರಿಯಾದ ನಾಗೇಶ ಬಾಪಟ ಇವರು ಸಸ್ಪೆಂಟ ಮಾಡಿದ್ದು, ಅದಕ್ಕೆ ಸಸ್ಪೆಂಡ ಆದ **ಚ.ಬ.ಧಾರವಾಡ'** ಪತ್ರಿಕೆಗೆ ಕಾರಂ, ಸ್ಪಷ್ಟೀಕರಣ ನೀಡಿದ್ದಾನೆ. ಅದು ಈ ಮುಂದಿನಂತಿದೆ:



ಜುಲೈ ೨೬, ೧೮೭೦ರಂದು 'ಚನ್ನಬಸಪ್ಪ ಬಸಲಿಂಗಪ್ಪಾ ಧಾರವಾಡಕರ ಇವರಿಗೆ ಧಾರವಾಡ ಜಿಲ್ಲೆಯ ರಾಣೇಬೆಂನೂರಿಗೆ ಇಂಗ್ರೆಜಿ ಅಸಿಸ್ಟಂಟ ಕೆಲಸದ ಮೇಲೆ ನೇಮಿಸಿದ ಹುಕ್ಕುಂ ಆಗಿದೆ. ಈ ಪ್ರಕಟಣೆ 'ಸತ್ಯಶೋಧಕ' ಕ್ಷ – ಎಂಬ ಹೆಸರಿನಿಂದ ಪ್ರಕಟಗೊಂಡಿದೆ.

ಈ ರೀತಿಯಲ್ಲಿ ಶಿಕ್ಷಣ ಇಲಾಖೆಯ ಒಳಗುದಿಗಳು ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವ ಬೆಳವಣಿಗೆಗಳನ್ನು ಗಮನಿಸಿದ ಇನ್ಸಪೆಕ್ಟರರಾದ ರಸೆಲ್‌ರು ಅಗಸ್ಟ ೧೦, ೧೮೭೦ರಂದು ಈ ತರದ ಪತ್ರಗಳು ಪತ್ರಿಕೆಯಲ್ಲಿ ಪ್ರಕಟವಾಗಕೂಡದು ಎಂಬ ಎಚ್ಚರಿಕೆ ಪತ್ರ ಕಳುಹಿಸಿದ್ದಾರೆ. ಅದರಲ್ಲಿ 'ಚನ್ನಬಸಪ್ಪ ಬಸಲಿಂಗಪ್ಪಾ ಧಾರವಾಡ ಇವನು..' ಎಂದು ಸಂಬೋಧಿಸಿದ್ದಾರೆ. ಇದಕ್ಕೆ ಅಕ್ಟೋಬರದಲ್ಲಿ ಚನ್ನಬಸಪ್ಪ ಬ. ಧಾರವಾಡ. ಇವರು ಕ್ಷಮೆಯಾಚಿಸಿದ್ದಾರೆ ಮತ್ತು ಶಾಲಾ ಪ್ರತಿಕೆ ಕೂಡ ತನ್ನ ಈ ಕೃತ್ಯಕ್ಕೆ ಖೇದ ವ್ಯಕ್ತಪಡಿಸಿದೆ. ಇವೆರಡೂ ಪತ್ರಗಳು ಪುಟ ೨೨೪, ಸಪ್ಟಂಬರ ೧೮೭೦ರಲ್ಲಿ ಶಾಲಾ ಪತ್ರಕ ಪ್ರಕಟಿಸಿದೆ.


Notice.

ನೋಟಿಸು–

(Signed) W. A. Russell.

ಚನಬಸಪ್ಪಾ ಬ. ಧಾರವಾಡ.

ಇಷ್ಟೆಲ್ಲ ಆದರೂ ಈ ಚ.ಬ.ಧಾರವಾಡ ಯಾರು ಎಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಈ ಅವಧಿಯಲ್ಲಿ ಧಾರವಾಡ ಜಿಲ್ಲೆಗೆ ಚನ್ನಬಸಪ್ಪ ಡೆಪ್ಯೂಟಿ ಎಜ್ಯುಕೆಷನ್ ಇನ್ಸಪೆಕ್ಟರರಾಗಿಯೂ ಮತ್ತು ಬೆಳಗಾವ ಜಿಲ್ಲೆಗೆ ನಾಗೇಶ ವಿನಾಯಕ ಬಾಪಟ ಡೆಪ್ಯೂಟಿ ಎಜ್ಯುಕೆಷನ್ ಇನ್ಸಪೆಕ್ಟರರಾಗಿಯೂ ಇರುತ್ತಾರೆ. ಹಾಗಾಗಿ ಈ ಎಲ್ಲ ಪ್ರಕರಣದ ಕೇಂದ್ರ ಚ.ಬ.ಧಾರವಾಡ, ಸಣ್ಣಚನಬಸಪ್ಪನೇ ಆಗಿರಬಹುದಾದರೂ ಅವರೂ ಕೂಡ 'ಪೂಣೆಯಲ್ಲಿ ಇಂಜನಿಯರಿಂಗ್ ಓದಿದ್ದರೆ? ಟ್ರೇನಿಂಗ್ ಕಾಲೇಜಿನಲ್ಲಿ ಕೆಲವು ದಿನ ಶಿಕ್ಷಕ ಕೆಲಸ ಮಾಡಿದ್ದರೆ?' ಎಂಬುದು ಸ್ಪಷ್ಟವಾಗದೆ ಅರ್ಧಸತ್ಯವಾಗಿಯೇ ಉಳಿಯುತ್ತದೆ. ಇಂಥ ರೋಚಕದೊಂದಿಗೆ ಅರ್ಧಸತ್ಯದ ವಿಷಯಗಳನ್ನು ಪತ್ರಿಕೆ ಪ್ರಕಟಿಸಿದೆ.

ಉದಾ ೨)

ಸೊಲ್ಲಾಪುರದವನೊಬ್ಬ ಅತಿ ಚತುರನಾದ ಸಿದ್ಧರಾಮಪ್ಪನೆಂಬ ಶಿಲ್ಪಿಯು ಮೇಲಾದ ಚೂರಿಗಳನ್ನೂ, ಪಟಾಕಗಳ ವಸ್ತುಗಳನ್ನೂ ಬಂಗಾರದ ಬಣ್ಣದ ಮುಕ್ತಿಯನ್ನೂ ಮಾಡಿಕೊಂಡು ಪುಣೆಯೊಳಗಿನ ವಿದ್ಯಾಜ್ಞರಿಗೆ ತೋರಿಸಲಿಕ್ಕೆ ಹೋಗಿರುತ್ತಾನೆ. ಇವನು ಮಾಡಿದ ಪದಾರ್ಥಗಳಿಗೂ ಬಾಜಾರಿನಲ್ಲಿ ಬರುವ ಚೆನಯೀ ಪದಾರ್ಥಗಳಿಗೂ ಯೇನು ಹೆಚ್ಚು ಕಡಿಮೆ ಯಿಲ್ಲ.

ಪಾರಿಸ ಪಟ್ಟಣದವನೊಬ್ಬ ರಸಾಯನ ಶಾಸ್ತ್ರಜ್ಞನು ಬೆಣ್ಣೆಯು ಪೃಥಕ್ಕರಣ ಮಾಡಿ ಅದರೊಳಗಿನ ಮೂಲತತ್ವಗಳನ್ನು ಮೊದಲು ಗೊತ್ತು ಹಚ್ಚಿದನು. ಆ ಮೇಲೆ ಅವನು ಆ ಮೂಲತತ್ವಗಳನ್ನು ಕೂಡಿಸಿ ರಸಾಯನ ಕೃತಿಯಿಂದ ಹೊಸ ಬೆಣ್ಣೆಯನ್ನು ಮಾಡಿದನು. ಈ ಬೆಣ್ಣೆಯು ಯೆಲ್ಲ ಬಗೆಯಿಂದ ಸ್ವಾಭಾವಿಕ ಬೆಣ್ಣೆಯು ಹಾಗೇ ಇದ್ದದ್ದಲ್ಲದೆ, ಇದು ಹೆಚ್ಚು ದಿವಸ ತಾಳುತ್ತದೆ; [೧೧] ಅದೇ-ಪುಟ-೨೨೦

ಉದಾ ೩)

ಹೆಣ್ಣು ಹೊನ್ನಿ ಹುಳಕ್ಕಿರುವ ಪ್ರಖರ ಬೆಳಕು ಮತ್ತು ಅದರಿಂದ ಪಡೆಯಬಹುದಾದ ಉಪಯೋಗಗಳ ಕುರಿತಾದ ಈ ಮುಂದಿನ ಲೇಖನ ಕುತೂಹಲಕಾರಿಯಾಗಿದೆ.

ಶಾಲಾಪತ್ರಕವು.

ಪುಸ್ತಕ ೧೧] [ಸಂಚಿಕೆ ೪

ತಾರೀಖು ೭೫ ನೇ ಮಾಹೆ ಜುಲಾಯಿ ೧೮೭೫.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧವಾದ

ವೃತ್ತಾಂತಗಳು.

ಈ ವರ್ಷ ಮುಲಕೀ ಪರೀಕ್ಷೆಯು ಬರುವ ಅಕ್ಟೋಬರ ತಿಂಗಳ ೫ ನೇ ತಾರೀಖಿಗೆ ಆಗುವದೆಂದು ಮಾ॥ ಎ. ಇನಸ್ಪೆಕ್ಟರ ಧೊರೆಗಳು ಬೆಳಗಾವ ಸಮಾಚಾರ ಪತ್ರದಲ್ಲಿ ಜಾಹೀರಾತು ಕೊಟ್ಟಿರುತ್ತಾರೆ.

ಚಮತ್ಕಾರ ಸಂಗತಿಯು—(ಹೊನ್ನಿ ಹುಳ) ಈ ಮಿಂಚು ಹುಳ, ಹುಳವನ್ನು ಎಲ್ಲರು ನೋಡಿರಬಹುದು. ಪಶ್ಚಿಮ ಅಮೇರಿಕದಲ್ಲಿ ಅದರದೊಂದು ಜಾತಿಯುಂಟು. ಈ ಜಾತಿಯ ಹುಳಗಳನ್ನು ಎರಡು ಮೂರು ಹಿಡಿದರೆ ಪುಸ್ತಕ ಓದುವಷ್ಟು ಅವುಗಳ ಬೆಳಕು ಬೀಳುತ್ತದೆ. ಈ ಹುಳಗಳ ಪ್ರಕಾಶದ ವಿಷಯವಾಗಿ ಪದಾರ್ಥವಿಜ್ಞಾನಿಗಳ ನಿಶ್ಚಯ

ತವು ಇನ್ನು ಏನೂ ಆಗಿಲ್ಲ. ಈ ಪ್ರಕಾಶವು ಹೆಣ್ಣು ಹೊನ್ನಿಹುಳಕ್ಕೆ ಮಾತ್ರ ಇರುತ್ತದೆ.

ಉಳ್ಳೇಗಡ್ಡೆಯೂ, ಸೂಜಿಯೂ,— ಉಳ್ಳೇಗಡ್ಡೆಯನ್ನು ಸುಲಿಯುವಾಗ ಅದರ ಸಂಣ ಪರಮಾಣುಗಳು ಕಣ್ಣೊಳಗೆ ಹೋಗಿ ಕಣ್ಣಿಗೆ ನೀರು ಬರುತ್ತವೆಂಬದು ಯೆಲ್ಲರಿಗೆ ಗೊತ್ತಿರಬಹುದು. ಆದರೆ ಸುಲಿಯುವಾಗ ಬಾಯೊಳಗೆ ಹಲ್ಲುಗಳಿಂದ ಒಂದು ಸೂಜಿಯನ್ನು ಕಚ್ಚಿ ಹಿಡಿದರೆ ನೀರು ಬರುವದಿಲ್ಲೆಂಬದಾಗಿ ತಿಳಿದು ಬಂದದೆ— ಸುಲಿಯುವಾಗ್ಗ ಅದರ ಸೂಕ್ಷ್ಮ ಪರಮಾಣುಗಳು ಹಾರಿ ಹೋಗಿ ಕಣ್ಣಿಗೆ ತಗಲುತ್ತವೆ; ಆದರೆ ಅವುಗಳನ್ನು ಈ ಸೂಜಿಯ ತುದಿಯು ಆಕರ್ಷಣ ಮಾಡಿಕೊಳ್ಳುತ್ತದೆ; ಮೇಲೆ ಹಾರಿ ಹೋಗಗೊಡುವದಿಲ್ಲ.

ಫ್ರಾನ್ಸ ದೇಶದಲ್ಲಿ ಮ. ಡಿ. ಲಾಬರಟಿ ಯೆಂಬವನು ಕಾಜು ಜಿಗಟು ಮಾಡುವದೊಂದು ಯುಕ್ತಿಯನ್ನು ಪ್ರಯೋಗಕ್ಕೆ ತಂದಿದ್ದಾನೆ. ಅವನು ಕಾಜು ಸ್ವಲ್ಪ ಬಿಸಿ ಮಾಡಿ ಒಂದು ತರದ ಯೆಣ್ಣೆಯಲ್ಲಿ ಯೆದ್ದುತ್ತಾನೆ; ಆದರಿಂದ ನೆಲಕ್ಕೆ ಅಪ್ಪಳಿಸಿದರೂ. ಕಲ್ಲಿನ ಮೇಲಿಟ್ಟು ಹೊಡಿದರೂ, ಹೊಡಿಯದಂಥಾ ಶಕ್ತಿಯು ಆ ಕಾಜಿನಲ್ಲಿ ಬರುತ್ತದೆ.

—ಸಾಧಾರಣ ಶಾಲೆಗಳಲ್ಲಿ ಪದಾರ್ಥವಿಜ್ಞಾನಶಾಸ್ತ್ರವು—

ಹೊಸದಾಗಿ ಕೂಡಿದ್ದೊಂದು ಸಭೆಯಲ್ಲಿ ಗ್ಲಾಡಸ್ಟೋನನೆಂಬ ಪ್ರೊಫೇಸರನು ,,ನಮ್ಮ ಸಾಧಾರಣ ಶಾಲೆಗಳಲ್ಲಿ ಪದಾರ್ಥವಿಜ್ಞಾನಶಾಸ್ತ್ರ ಕಲಿಸುವ ಬಗ್ಗೆ, ದಿನದಿನಕ್ಕೆ ಅದರ ಹೆಚ್ಚು ಏಳಿಗೆಯ ಬಗ್ಗೆ, ಅತಿ ಮನೋಹರವಾದದೊಂ

[೧೨] ಶಾಲಾಪತ್ರಕ ಪು ೧೧ ಸಂ ೪ ಜುಲಾಯಿ ೧೮೭೫, ಪುಟ-೭೩-೭೪

ಭಾರತದಲ್ಲಿ ೧೯೭೬ರಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಸಂಪ್ರದಾಯ ಆರಂಭವಾದ ಬಗೆಗೆ ಮಾಹಿತಿ ಸಿಗುತ್ತದೆ. ಅದೂ ಕೂಡ ಬ್ರಿಟಿಷರ ಅನುಕರಣವೇ ಆಗಿದ್ದು, ರಾಜವಂಶಸ್ಥರಿಗೆ ಕೊಡಲಾಗಿದೆ.[೧೩]

> ಕಲಕತ್ತಾ ಯುನಿವರಸಿಟಿಯವರು ದೊಡ್ಡ ಸಮಾರಂಭದಿಂದ ಯುವರಾಜರಾದ ಪ್ರಿನ್ಸ ಆಫ ವೇಲ್ಸ ಇವರಿಗೆ ಸನ್ಮಾನಾರ್ಥವಾದ ಡಾಕ್ತರ್ ಆಫ ಲಾ ಎಂಬ ಪದವಿಯುನ್ನು ಕಳೆದ ತಿಂಗಳಲ್ಲಿ ಕೊಟ್ಟರು. ನಮ್ಮ ದೇಶದಲ್ಲಿ ತಕ್ಕ ಪರೀಕ್ಷೆ ಕೊಡದೆ ಯಾವದೂ ಪದವಿ ಕೊಡುವ ರೀತಿ ಇಲ್ಲ. ಆದರ ವಿಲಾಯತಿಯಲ್ಲಿ ದೊಡ್ಡ ಮನೆತನದವರಿಗಾಗಲೀ ವಿದ್ವಾಂಸರಿಗಾಗಲೀ ಈ ಪ್ರಕಾರ ಸನ್ಮಾನಾರ್ಥಕ ಪದವಿಗಳನ್ನು ಕೊಡುವ ಪ್ರಚಾರ ಉಂಟು.

ಬ್ರಿಟಿಷ ಆಡಳಿತದಲ್ಲಿ ಮಹಾರಾಣಿ ಸರಕಾರದ ಮಂತ್ರಿಮಂಡಳದ ಮಾಜಿ ಚಿಟಣೀಸರಾದ ಗ್ರಾಂಟ್ ಡಫ್ ಅವರು ಭಾರತಿಯರಿಗೆ ಕೊಡಬೇಕಾದ ಶಿಕ್ಷಣ ಕುರಿತು ಅಭಿವ್ಯಕ್ತಪಡಿಸಿದ ಅಭಿಪ್ರಾಯ ಇಂದಿಗೂ ಪ್ರಸ್ತುತವಾಗಿದೆ. 'ಭಾರತದ ವರ್ತಮಾನ ಸ್ಥಿತಿಯಲ್ಲಿ ಗದ್ಯ, ಪದ್ಯ, ಕಾವ್ಯ, ಅಲಂಕಾರ, ಇತಿಹಾಸ, ಭೂಗೋಳ, ಖಗೋಲ ಮುಂತಾದವುಗಳನ್ನು ಕಲಿಸುವುದಕ್ಕಿಂತ ಶಾಸ್ತ್ರೀಯ ವಿಷಯಗಳ ಜ್ಞಾನ ಮಾಡಿಕೊಡುವುದು ಬಹಳ ಮಹತ್ವದ್ದು. ಕೇವಲ ಸರಕಾರಿ ಕೆಲಸಕ್ಕಾಗಿ ಅವರಿಗೆ ಶಿಕ್ಷಣ ನೀಡಬೇಕಾಗಿಲ್ಲ; ಪರಮೇಶ್ವರ ದಯೆಯಿಂದ ನಮಗೆ ಲಭಿಸಿದ ಪ್ರಾಕೃತಿಕ ಮತ್ತು ನೈಸರ್ಗಿಕ ಸಂಪತ್ತನ್ನು ಸಾದ್ಯಂತವಾಗಿ ಉಪಯೋಗಿಸಿಕೊಂಡು ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸುವ, ಸುಧಾರಿತ 'ಶಿಕ್ಷಣ ಪದ್ಧತಿ'ಯನ್ನು ಜಾರಿ ತರಬೇಕಿದೆ. ತಕ್ಕಷ್ಟು ಓದುಬರಹ ಅವರಿಗೆ ಕಲಿಸಬೇಕು'[೧೪] ಎಂಬ ಸಕಾರಾತ್ಮಕ ಅಭಿಪ್ರಾಯ ಇಂದಿಗೂ ಪ್ರಸ್ತುತವಾಗಿದೆ.

ನಕಲಿ ಸರ್ಟಿಫೀಕಟ್ ತಯಾರು ಮಾಡಿ ಸಿಕ್ಕಿ ಬಿದ್ದದ್ದು ಹಾಗೂ ಪೂರ್ಣ ಹಿಂದುಸ್ತಾನದ ವಿಸ್ತೀರ್ಣ, ವಿಭಾಗ, ಜಿಲ್ಲೆ, ವಸತಿ ಮನೆಗಳು ಮತ್ತು ಜನಸಂಖ್ಯೆಯ ಲೆಕ್ಕವನ್ನು ವಿಲಾಯತಿಯಲ್ಲಿರುವ 'ಬ್ಲೂ ಬುಕ್ಸ' ಎನ್ನುವ ಪುಸ್ತಕದಲ್ಲಿ ದಾಖಲಾಗಿರುವ ವಿಷಯ ತುಂಬ ಕುತೂಹಲಕಾರಿಯಾಗಿದ್ದು ಅಧ್ಯಯನಕಾರರಿಗೆ ಒಳ್ಳೆ ಮಾರ್ಗದರ್ಶಿ.[೧೫]

ಶಾಲಾಪತ್ರಕ ಪು-೧೨ ಸಂ-೩ ಜೂನ ೧೮೭೬, ಪುಟ-೩೯-೩೪೦ರಲ್ಲಿ ಹಿಂದೂಸ್ಥಾನದ ವಿದ್ಯಾಇಲಾಖೆಯಲ್ಲಿ ಬಂಗಾಳ, ಮದ್ರಾಸ, ಮುಂಬಯಿ, ವಾಯವ್ಯ ಪ್ರಾಂತ ಮತ್ತು ಪಂಜಾಬ ಇಲ್ಲಿ ಐದು ಡೈರೆಕ್ಟರರಿರುವರು. ೨೦ ವರ್ಷ ಸಿವಿಲಿಯನ್ ದಂಡಿನೊಳಗಿನ ಕರ್ನಲ ಆಗಿ ಕಾರ್ಯ ನಿರ್ವಹಿಸಿದವರನ್ನು ಈ ಹುದ್ದೆಗೆ ಯೋಗ್ಯರನ್ನಾಗಿ ಪರಿಗಣಿಸಲದಲ್ಪಡುತ್ತಿತ್ತು ಎಂಬದು ಆ

ಹುದ್ದೆಗೆ ಬರಬೇಕಾದವರ ಅರ್ಹತೆ ಮತ್ತು ಕನಿಷ್ಠ ಸೇವೆಯ ಬಗೆಗೆ ಮಾಹಿತಿ ನೀಡುತ್ತದೆ. ಹೊಸಬರ ಹಾಜರಾತಿ ಎನ್ನುವುದು ಸ್ವಯಂಚಾಲಿತ ಬಿಡುಗಡೆ ಆದೇಶ ಇದ್ದಂತೆ ಎಂಬುದನ್ನು ಶಾಲಾಪತ್ರಕ ಪು ೧೨ ಸಂ ೩ ಜೂನ ೧೮೭೬, ಪುಟ ೩೪೩ ರಲ್ಲಿ ಹೇಳಲಾಗಿದೆ.

ಬೆಳಗಾವಿಯ ಪಶ್ಚಿಮೋತ್ತರ ಗುಡ್ಡಗಳಲ್ಲಿ ಬೆಳೆಯುತ್ತಿದ್ದ ಬಹು ಅಪರೂಪದ ಔಷದೋಪಯೋಗಿ ಚಂದ್ರಗಿಡದ ವಿವರ ಮನಸಿಗೆ ಮುದ ನೀಡುತ್ತದೆ.[೧೬] ನಾಡಿನ ಮಣ್ಣಿನ ಗುಣ, ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಔಷಧಿ ಸಸ್ಯಗಳ ಲಭ್ಯತೆ ಕುರಿತು ವೈಜ್ಞಾನಿಕ ಮಾಹಿತಿ ಕೊಡುತ್ತದೆ.

೩೯೦

THE CHANDRA TREE.

ಚಂದ್ರಗಿಡವು.

ಈ ಜಾತಿಯ ಗಿಡಗಳು ಮುಂಬಯಿ ಇಲಾಖೆಯೊಳಗಿ
ನ ಬೆಳಗಾಂವಿ ತಾಲೂಕಿನಲ್ಲಿ, ಬೆಳಗಾವಿಯ ಪಶ್ಚಿಮೋ
ತ್ತರ ಅರುವ ಗುಡ್ಡಗಳಲ್ಲಿಯೂ, ಮದ್ರಾಸ ಇಲಾಖೆಯೊಳ
ಗೆ ತಾಪಪತ್ರಿ ನೊವಲಾಪ ಪಟ್ಟಣಗಳ ನೆರೆಯಲ್ಲಿರುವ ಗ
ಡ್ಡಗಳಲ್ಲಿಯೂ ತನ್ನಿಂದ ತಾನೇ ಬೆಳೆಯುತ್ತವೆ. ಈ ಗಿ
ಡವು ಬಹಳವಾಗಿ ಬೆಳೆದರೆ ಸುತ್ತು ಹನ್ನೆರಡು ಮೊಳ ಎ
ತ್ತರವಾಗುತ್ತದೆ. ಇದರ ಎಲೆಗಳು ಕಿಂಬುವ ಎಲೆಗಳಂ
ಗೆ ಇದ್ದು ಸಂಣ ಇರುತ್ತವೆ. ಇದು ವರ್ಷದೊಳಗೆ ಎರಡ
ಸಾರಿ ಫಲ ಫಲಿಸುತ್ತದೆ. ಮೊದಲು ಭಾದ್ರಪದ ಮಾಸ
ಲ್ಲಿ ಹೂವು ಆಗಲಿಕ್ಕೆ ಪ್ರಾರಂಭವಾಗಿ ಆಶ್ವೀನ ಇಲ್ಲವೆ ಕ
ರ್ತಿಕ ಮಾಸಕ್ಕೆ ಕಾಯಿಗಳು ಪಕ್ವವಾಗುತ್ತವೆ. ಎರಡನೇ
ಸಾರಿ ಮಾರ್ಗಶೀರ್ಷ ಮಾಸದಲ್ಲಿ ಹೂವು ಕಾಯಿಗಳು, ಆ
ಫಾಲ್ಗುಣಮಾಸಕ್ಕೆ ಪಕ್ವಕ್ಕೆ ಬರುತ್ತವೆ. ಬಹಳೊಂದ
ಕಡೆಗೆ ಎರಡನೇ ಸಾರೇ ಬೆಳೆಯನ್ನೇ ತಕ್ಕೊಳ್ಳುತ್ತಾರೆ. ಇ
ದರ ಹೂವು ಮೊದಲು ನಸುಗೆಂಪಿನ ಮೇಲೆ ಶುಭ್ರವಾ
ದ್ದು, ಸಂಣ ಸಂಣ ದುಂಡಗಿನ ಕಾಯಿಗಳುಳ್ಳ ಗೊಂಚ
ಗಳಾಗುತ್ತವೆ. ಕಾಯಿಗಳು ಪಕ್ವಕ್ಕೆ ಬಂದ ಬಂದ ಹಾಗೆ
ವುಗಳ ಮೇಲೆ ಕುಂಕುಮವರ್ಣದ ಹುಡಿಯು ಉತ್ಪನ್ನವಾ
ಗುತ್ತಾ ಹೋಗುತ್ತದೆ. ಕಾಯಿಗಳು ಬಲಿತ ಬಳಿಕ ಅವುಗಳನ್ನು
ಗಿಡಮೇರಿ ಕೊಯ್ದುಕೊಂಡು ಬಂದು, ಬಿಸಿಲೊಳಗೆ ಒಂದ

೩೯೧

ದಿವಸ ಒಣಗಲಿಕ್ಕೆ ಹಾಕುತ್ತಾರೆ. ಮರುದಿವಸ ಆ ಒಣಗಿ
ದ ಕಾಯಿಗಳನ್ನು ಒಂದು ಸಣ್ಣ ತೂತುಳ್ಳ ಸಾರಣಿಗೆಯೊಳಗೆ
ಹಾಕಿ, ಅದರ ಕೆಳಗೆ ಒಂದು ಸಾರಣೆ ಮಾಡಿದ ಪುಟ್ಟಿಯನ್ನಾ
ಗಲಿ ದಪ್ಪನ್ನ ಬಟ್ಟೆಯನ್ನಾಗಲಿ ಇಟ್ಟು, ಕಾಯಿಗಳನ್ನು
ಕೈಯಿಂದ ತಿಕ್ಕುತ್ತಾರೆ. ಅದರಿಂದ ಆ ಕಾಯಿಗಳ ಮೇ
ಲೆ ಹತ್ತಿರುವ ಹುಡಿಯು ಉದರಿ ಕೆಳಗಿಟ್ಟ ವಸ್ತ್ರದೊಳಗೆ
ಬೀಳುತ್ತದೆ. ಆ ಹುಡಿಯ ಸಮುದಾಯಕ್ಕೆ ಚಂದ್ರಹಿಟ್ಟೆಂದು
ಅನ್ನುತ್ತಾರೆ. ಇದು ಬಹಳ ಶ್ರಮದಿಂದ ಸ್ವಲ್ಪವೇ ದೊ
ರಿಯುವ ಕಾರಣ, ಅದಕ್ಕೆ ಕ್ರಯವು ಹೆಚ್ಚ ಬೀಳುತ್ತದೆ.
ಕೆಲವರು ಅದರ ಕಾಯಿಗಳನ್ನು ಸಹ ಸಂಣಾಗಿ ಕುಟ್ಟಿ ಹಿ
ಟ್ಟು ಮಾಡಿ, ಸೋಸಿ, ಆ ಕುಂಕುಮ ವರ್ಣದ ಹಿಟ್ಟಿನ
ಲ್ಲಿ ಬೆರೆಸುತ್ತಾರೆ. ಅದರಿಂದ ಅದರ ವರ್ಣವು ಸ್ವಲ್ಪ ಹ
ಸರು ಆಗುತ್ತದೆ. ಇದು ಕಚ್ಚಾ ಆಗುವ ಕಾರಣ, ಸ್ವಲ್ಪ ಅ
ಗ್ಘವಾಗಿ ದೊರಿಯುತ್ತದೆ. ಈ ಹಿಟ್ಟು ದೊರಕಿಸುವವರ
ಶ್ರಮಕ್ಕೆ ಸರಿಯಾದ ಕಿಮ್ಮತ್ತಿನಷ್ಟೇ ದೊರಿಯುವಕಾರಣ
ಇದನ್ನು ಮೊರಕಿಸಲಿಕ್ಕೆ ಬಹಳಮಂದಿ ಪ್ರಯತ್ನಿಸುವದಿ
ಲ್ಲ. ಅದರ ಕ್ರಯವು ಹೆಚ್ಚಿರುವ ಕಾರಣವು ಅದರ ಅಪ
ರೂಪದ ಮೇಲೆಯೇ ಆಧಾರಪಟ್ಟದೆಂದು ತೋರುತ್ತವೆ.

ಈ ಹಿಟ್ಟು ತುರಿ, ಚಾರಣ, ಸಕ್ಕರಕಾಣಿ, ಕಜ್ಜಿ, ಗ
ಜವಕಸೇಲಿ, ಮುಂತಾದ ರೋಗಿಯು ಬಣ್ಣಕ್ಕೆ ದಾಕುನ
ದಕ್ಕೆ ಬಹಳ ಪ್ರಯೋಜನವಾಗಿರುತ್ತದೆ. ಕಸೇಲಿಯ ರೇ
ಷ್ಮೆಯ ಬಣ್ಣಕ್ಕೆ ಹಾಕುವಕಾರಣ ಈ ಹಿಟ್ಟಿಗೆ ಕಸೇಲಿಯ
ಹಿಟ್ಟೆಂಬುವದೇ ಬಹಳ ಖ್ಯಾತಿ ಯುಂಟು. ಯಾವದಾದರೊಂ
ದು ಹುಣ್ಣಾದರೆ ಈ ಹಿಟ್ಟನ್ನು ಕೊಬ್ಬರಿಯ ಎಣ್ಣೆಯೊ

೨೯೨

ಗೆ ಕಲಿಸಿ ಅದ್ದಕ್ಕೆ ಹಚ್ಚಿದರೆ ಬಹಳವಾಗಿ ಆ ಸ್ತ್ರೀಸ್ತು
ಎಸಿಯಾಗುತ್ತದೆ. ನಿಜವಾಗಿ ಸ್ವಲ್ಪವಾದರೂ ಗುಣ ಕೊಡು
ವದೆ. ಅವರ ಹೂಕರ್ ಅನೇಕ ಪ್ರಕಾರದ ಔಷಧಗಳಿಗೆ
ಉಪಯೋಗಿಸಲ್ಪಡುತ್ತದೆಂದು ಹೇಳುತ್ತಾರೆ. ಈ ಹಿಟ್ಟಿನ
ಚರ್ ವಿಶೇಷವಾಗಿ ರೇಶ್ಮೆಯ ವಸ್ತ್ರಗಳನ್ನು ನೇ
ಯುವ ಸ್ಥಳಗಳಲ್ಲಿ ಅಂದರೆ ಹುಬ್ಬಳ್ಳಿ, ಗದಗು ಬಾಗಲ
ಕೋಟೆ ಮೊದಲಾದ ಕಡೆಗೆ ಆಗುತ್ತದೆ.

ಪಕ್ವಕ್ಕೆ ಬಂದ ಕಾಯಿಗಳೆಲ್ಲ ಗೊಂಚಲುಗಳಿಂದ ತುಂ
ಬಿದಾಗ್ಯೆ ಈ ಗಿಡವು ನೋಟಕ್ಕೆ ಬಹು ಅಂದವಾಗಿ ತೋ
ರುತ್ತದೆ. ಚಂದ್ರೋದಯವಾದ್ಯೆ ಚಂದ್ರನನ್ನು ನೋಡ
ವಾಗಿ ಮನಸ್ಸಿಗೆ ಎಷ್ಟು ಆಲ್ಹಾದವಾಗುತ್ತದೆಯೋ ಅಷ್ಟೇ
ಹರ್ಷವು ಈ ಗಿಡವನ್ನು ನೋಡೋಣದರಿಂದ ಆಗುತ್ತ
ದೆ. ಆವಕಾರಣ ಈ ಗಿಡಕ್ಕೆ ಚಂದ್ರ ಗಿಡವೆಂಬ ಹೆಸರು ಕ
ಲ್ಪಿದ್ದಾಗಿದೆ ಎಂದು ಯೋಚಿಸುವದಕ್ಕೆ ಆಸ್ಪದವಾಗುತ್ತದೆ.

ನಮ್ಮ ಸುತ್ತಮುತ್ತಲಿನ ಪರಿಸರ ಹಾಗೂ ಪ್ರಕೃತಿಯ ಅಪರೂಪದ ಮಹತ್ವದ ಮಾಹಿತಿ ಇದು.

ಶ್ರೀಧರ ಜಗನ್ನಾಥ ಗೋಖಲೆ, ಬೊಮ್ಮನಳ್ಳಿ ಶಾಲೆಯ ಹೆಡ್ ಮಾಸ್ತರನು ವ್ಯಾಕರಣ ಕಲಿಸುವ ರೀತಿಯನ್ನು ವಿಶದವಾಗಿ ಮನಮುಟ್ಟುವಂತೆ ಬರೆದ ಲೇಖನವಿದ್ದರೆ, ಕೃಷ್ಣಾಜಿ ಗೋವಿಂದ ಕಿತ್ತೂರ. ಹೆಡ್ ಮಾಸ್ತರ, ಶೇಡಬಾಳ, ಅಥಣಿ ಈತನು ಕ್ರಿಯಾಪದ ಪ್ರಕರಣ ಅರ್ಥವಾಗದೆ ತಾನೇ ವಿವರವಾಗಿ ವಿಶ್ಲೇಶಿಸಿ ಬರೆದ ಬರಹವಿದೆ. ಇವು ಅಂದಿನ ಶಿಕ್ಷಕರ ತುಡಿತ ಮತ್ತು ಇಚ್ಛಾಶಕ್ತಿಯ ಪರಿಚಯ ಮಾಡಿಸುತ್ತವೆ.[೧೭]

'ರತ್ನಾಗಿರಿ ಮತ್ತು ಕುಲಾಬಾ(ಅಲೀಬಾಗ) ಇವೆರಡೂ ಜಿಲ್ಲೆಗಳು, ದಕ್ಷಿಣ ಮಹಾರಾಷ್ಟ್ರ (ಅಂದರೆ ಈಗೀನ ಉತ್ತರ ಕರ್ನಾಟಕದ ಎಜ್ಯುಕೇಷನ್ ಇನ್ಸಪೆಕ್ಟರರ ಮೇಲ್ವಿಚಾರಣಾ ಸುಪರ್ದಿಗೆ ಬಂದವು' ಎಂಬ ವಿಷಯ ಆಶ್ಚರ್ಯ ಮತ್ತು ಖುಷಿಯೊಂದಿಗೆ ಪ್ರಶ್ನೆಯಾಗಿ ಎದುರು ನಿಲ್ಲುತ್ತದೆ. ಇಲ್ಲಿಂದಲೇ ಈ ಎರಡೂ ಜಿಲ್ಲೆಗಳ ಶೈಕ್ಷಣಿಕ ಉಸ್ತುವಾರಿ ದಕ್ಷಿಣ ಭಾಗದ ಎಜ್ಯಕೇಷನ್ ಇನ್ಸಪೆಕ್ಟರ (ಎಸ್.ವಿ.ಪಟವರ್ಧನ)ರೇ ನೋಡಿಕೊಳ್ಳತೊಡಗುತ್ತಾರೆ. ಇದರಿಂದ ೧೮೮೭ರಲ್ಲಿ ರತ್ನಾಗಿರಿ ಮತ್ತು ಕುಲಾಬಾ ಜಿಲ್ಲೆಗಳು ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿದ್ದುದರ ಒಂದು ಅಧಿಕೃತ ದಾಖಲೆಯಾಗಿದೆ.[೧೮]

೧೮೮೯ ಎಪ್ರೀಲ್ ನಲ್ಲಿ ವರ್ಗಾವಣೆಯ ಒಂದು ಸರಣಿಯೇ ಜರುಗಿದೆ. ಅಲ್ಲಿ ಧಾರವಾಡದ ಹೈಸ್ಕೂಲಿನ ಹೆಡ್ ಮಾಸ್ತರರಾದ ಮಹಾದೇವ ವಿಷ್ಣು ರಾಣೆಯವರು ಪುಣೆಯ ಹೈಸ್ಕೂಲಿನ ಆಕ್ಟಿಂಗ್ ಹೆಡ್ ಮಾಸ್ತರರಾಗಿ, ಅವರ ಸ್ಥಳಕ್ಕೆ ಟ್ರಾನ್ಸಲೇಟರರಾದ ರಾವಜೀ ಬಾಳಾಜೀ ಕರಂದೀಕರರನ್ನು, ಅವರ ಸ್ಥಳಕ್ಕೆ ಕಾನಡಾ ಜಿಲ್ಲೆಯ ಡೆಪ್ಯೂಟಿ ಇನ್ಸಪೆಕ್ಟರರಾದ ರಾಮಚಂದ್ರ ಹನುಮಂತ ದೇಶಪಾಂಡೆಯವರನ್ನು, ಅವರ ಸ್ಥಳಕ್ಕೆ ಬೆಳಗಾವಿಯ ಅಸಿಸ್ಟಂಟ ಡೆಪ್ಯುಟಿ

ಇನ್ಸಪೆಕ್ಟರರಾದ ಬಾಬಾಚಾರ್ಯ ಕೆರೂರ ಇವರನ್ನೂ ನೇಮಿಸಿ, ಬಾಬಾಚಾರ್ಯರ ಸ್ಥಳವನ್ನು ಖಾಲಿ ಉಳಿಸಿ ಸರಕಾರ ಆದೇಶ ಹೊರಡಿಸುತ್ತದೆ.[೧೯] ಇದರಿಂದ ತಿಳಿದು ಬರುವ ಅಂಶಗಳೆಂದರೆ:

೧–ಈ ಸರಣಿಯಲ್ಲಿ ಹೆಡ್ ಮಾಸ್ತರ ಹುದ್ದೆಯಲ್ಲಿದ್ದವರು ಆಕ್ಟಿಂಗ್ ಹೆಡ್ ಮಾಸ್ತರರೂ ಆಗುವಂಥದ್ದು; ೨– ಟ್ರಾನ್ಸಲೇಟರ ಹುದ್ದೆಗೆ ಡೆಪ್ಯೂಟಿ ಇನ್ಸಪೆಕ್ಟರರನ್ನು ನೇಮಿಸುವಂಥದ್ದು; ೩–ಈ ಎಲ್ಲ ಹೆಡ್ ಮಾಸ್ತರ, ಆಕ್ಟಿಂಗ್ ಹೆಡ್ ಮಾಸ್ತರ, ಟ್ರಾನ್ಸಲೇಟರ, ಡೆಪ್ಯೂಟಿ ಇನ್ಸಪೆಕ್ಟರ, ಅಸಿಸ್ಟಂಟ ಡೆಪ್ಯುಟಿ ಇನ್ಸಪೆಕ್ಟರ ಹುದ್ದೆಗಳು ಒಂದೇ ವರ್ಗದ ಹುದ್ದೆಗಳಾಗಿ ಪರಿಗಣಿಸಲ್ಪಡುವ ವಾಡಿಕೆ ಇದ್ದದ್ದು; ಇದರೊಂದಿಗೆ 'ಶಾಲಾ ಪತ್ರಕ' ಎಂಬ ಈ ಪತ್ರಿಕೆ ಟ್ರಾನ್ಸಲೇಟಿಂಗ ಕಚೇರಿಯಿಂದ, ಅನುವಾದಕರು ಮತ್ತು ಸಂಪಾದಕರ ಸಾರಥ್ಯದಲ್ಲಿ ಮತ್ತು ಇಲಾಖೆಯ ಸೂತ್ರ/ಕರ್ಣದಾರತ್ವದಲ್ಲಿ ಸ್ವಯಂಭೂವಾಗಿ ಪ್ರಕಟಗೊಳ್ಳುತ್ತಿತ್ತು; ಕೇವಲ ಟ್ರೇನಿಂಗ ಕಾಲೇಜಿನ ಉಸ್ತುವಾರಿಯಲ್ಲಿ ಅಥವಾ ಮಾರ್ಗದರ್ಶನದಲ್ಲೇನೂ ಇದ್ದಿಲ್ಲ ಎಂಬುದಕ್ಕೆ ಮೇಲಿನ ಈ ಬದಲಾವಣೆಯ ಪ್ರಕ್ರಿಯೆಗೆ ಪತ್ರಿಕೆ ಸಾಕ್ಷಿಯಾಗುತ್ತದೆ.

ಈ ಪತ್ರಿಕೆ ಒದಗಿಸುವ ಇನ್ನೊಂದು ಪ್ರಮುಖ ದಾಖಲೆ ಎಂದರೆ ಶಾಲಾ ಪತ್ರಕ ೨೫/೩ ಮಾರ್ಚ, ೧೮೯೦ ಪುಟ ೭೨ರಲ್ಲಿ 'R B Karandikar ವ್ಯವಸ್ಥಾಪಕ ಸಂಪಾದಕ, ಶಾಲಾ ಪತ್ರಕ' ಎಂದಿದೆ. ಏಕೆಂದರೆ ಈ ಅವಧಿಯಲ್ಲಿ ಕರಂದೀಕರರು ಪ್ರಿನ್ಸಿಪಾಲರೂ ಆಗಿದ್ದರು. ಆದ್ದರಿಂದ ಈ ಉಲ್ಲೇಖದ ಆಧಾರವನ್ನವಲಂಬಿಸಿ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರು ವ್ಯವಸ್ಥಾಪಕ ಸಂಪಾದಕರಾಗಿ ಕಾರ್ಯ ನಿರ್ವಹಿಸುವ ಪರಿಪಾಠ ಇಲ್ಲಿಂದಲೇ ಆರಂಭವಾಗಿದೆ. ಇದಕ್ಕೆ ಇದು ಪ್ರಥಮ ದಾಖಲೆ.

ಜನೇವರಿ ೧,೧೯೦೩ ರಂದು ರಾಜಕೀಯ ವಲಯದಲ್ಲಿ ಮಹತ್ತರವಾದ ಬದಲಾವಣೆ ಜರುಗಿತು. ಮಹಾರಾಣಿ ವಿಕ್ಟೋರಿಯಾ ಜನೇವರಿ ೨೨, ೧೯೦೧ರಂದು ಕಾಲವಾದನಂತರ ಗ್ರೇಟ್ ಬ್ರಿಟನ್ ಐರ್ಲಂಡ್‌ನಲ್ಲಿ ೭ನೇ ಅಲ್ಬರ್ಟ ಎಡ್ವರ್ಡ ಸಿಂಹಾಸನಾ ರೂಢನಾದ ದಿನವದು. ಜನೇವರಿ ೧೯೦೩ರ ಪತ್ರಿಕೆಯಲ್ಲಿ ೧೬ ಪುಟಗಳ ವಿವರ ಮತ್ತು ೭ನೇ ಅಲ್ಬರ್ಟ ಎಡ್ವರ್ಡನ ಸುದೀರ್ಘ ವ್ಯಕ್ತಿತ್ವ ಚಿತ್ರಣ ನೀಡಲಾಗಿದೆ; ಆತ ಸ್ವೀಕರಿಸಿದ ಪ್ರಮಾಣವಚನ 'ಮಲಿಕ್ ಮೊಆಜಮ್ಮೈಸರೇ ಹಿಂದ್‌ರವರ ಜಾಹೀರನಾಮೆ' ಎಂಬ ಹೆಸರಲ್ಲಿ ೩ ಪುಟಗಳು, ೧೮೭೭ನೇ ರಲ್ಲಿ ನಡೆದ ದಿಲ್ಲಿ ದರ್ಬಾರದ ವರ್ಣನೆ ೧೩ ಪುಟಗಳಲ್ಲಿ ಹಾಗೂ ೧೯೦೩ ಜನೇವರಿ ೧ನೇ ದಿನವನ್ನು ಭರತಖಂಡದ ಜನ ಮಂಗಳಕರ ದಿನವಾಗಿ ಆಚರಿಸಿ, ವಿವಿಧ ಊರುಗಳಿಂದ, ಶಾಲೆಗಳಿಂದ ಮತ್ತು ಮುಖಂಡರಿಂದ ಬಂದ ಪತ್ರಗಳನ್ನ ೧೩ ಪುಟಗಳಲ್ಲಿ ಕೊಡಲಾಗಿದೆ. ಶಿಕ್ಷಣ ಇಲಾಖೆಯಲ್ಲಿ ಬಹುಮಾನ ಪದವಿಗಳು ಕೊಡಲ್ಪಟ್ಟವು, ಹದಿನಾರು ಸಾವಿರ ಜನರನ್ನು ಬಂಧಮುಕ್ತ ಗೊಳಿಸಲಾಯಿತು. ಸಾಲಬಾಧೆಯಿಂದ ಬಳಲುತ್ತಿದ್ದ ಎಲ್ಲರನ್ನು ಸಾಲಮುಕ್ತರನ್ನಾಗಿ ಮಾಡಲಾಯಿತು. ಅದು ೭ನೇ ಎಡ್ವರ್ಡ ದೊರೆಯ ಪಟ್ಟಾಭೀಷೇಕದ ಸಂಭ್ರಮಾಚರಣೆ ಈಡೀ ಜನೇವರಿ ಮತ್ತು ಫೆಬ್ರುವರಿ ಸಂಚಿಕೆಗಳ ವ್ಯಾಪ್ತಿಯ ೪೮ ಪುಟಗಳನ್ನ ತುಂಬಿಬಿಟ್ಟಿದೆ. ಭರತಖಂಡಕ್ಕೆ ಒಡೆಯನಾದ

ಬ್ರಿಟಿಷ ದೊರೆಯ ಪಟ್ಟಾಭಿಷೇಕವನ್ನ ಹೀಗೇ ಆಚರಿಸದೆ, ಪ್ರಕಟಿಸದೆ ಬೇರೆ ಮಾಡುವುದೇನಿತ್ತು? ಆಗ ಎಲ್ಲರೂ ಪರಿಸ್ಥಿತಿಯ ಕೈಗೊಂಬೆಗಳು.

ಉಳಿದ ಭಾಷೆಗಳಲ್ಲಿ ಪ್ರಕಟಣೆಗೊಳ್ಳುತ್ತಿರುವಂತೆ ಪುಸ್ತಕಗಳು ಕನ್ನಡದಲ್ಲಿ ಪ್ರಕಟಗೊಳ್ಳುತ್ತಿಲ್ಲ ಎಂಬ ಕಾರಣಕ್ಕೆ ಈ ಕೊರತೆಯನ್ನ ನೀಗಲು ಕೈಲಾದ ಮಟ್ಟಿಗಾದರೂ ಪ್ರಯತ್ನ ಮಾಡೋಣವೆಂಬ ಸದುದ್ದೇಶದಿಂದ ಧಾರವಾಡದ ನಾರಾಯಣರಾವ ಕರಿಗುದರಿ ಬಿ.ಎ.ಎಲ್.ಎಲ್.ಬಿ, ವೆಂಕಟೇಶ ಭೀಮರಾವ ಆಲೂರ ಬಿ.ಎ.ಎಲ್.ಎಲ್.ಬಿ ಮುಂತಾದವರು ಕೂಡಿಕೊಂಡು 'ಕರ್ನಾಟಕ ಗ್ರಂಥಪ್ರಸಾರಕ ಮಂಡಲ, ಧಾರವಾಡ' ಎಂಬುದೊಂದು ಸಂಸ್ಥೆಯನ್ನು ಸ್ಥಾಪಿಸಿ, ಹೊಸ ಹೊಸ ಗ್ರಂಥಗಳನ್ನು ಬರೆಯಿಸಿ, ಪ್ರಕಟಿಸುವ ಕಾರ್ಯವನ್ನು ಕೈಗೊಂಡ ವಿಷಯವಿದೆ.

* ಪರಲೋಕವಾಸಿ **ವಿಷ್ಣುಶಾಸ್ತ್ರೀ ಚಿಪೂಳಣಕರವರು** ಹಿಂದೆ ಮಹಾರಾಷ್ಟ್ರ ಶಾಲಾಪತ್ರಕದಲ್ಲಿ ಕವಿತೆಯ ಬಗ್ಗೆ ಬರೆದ ವಿಚಾರಗಳು ಹೆಬ್ಬಳ್ಳಿಯ ಶಾಲಾ ಮಾಸ್ತರರಾದ ಹನುಮಪ್ಪಾ ರಾಮಪ್ಪಾ ಕಾಲವಾಡರಿಂದ ಅನುವಾದಗೊಂಡು ವಿವರಿಸಲ್ಪಟ್ಟಿವೆ.[೨೦]

* ೧೯೦೯ ರಲ್ಲಿ ಶಾಲಾ ಪತ್ರಕದ ಹೊರರೂಪ ಮತ್ತು ಪುಟಗಳ ಸಂಖ್ಯೆ ಹೆಚ್ಚಾದ ಬಳಿಕ ಸುದೀರ್ಘ ಲೇಖನಗಳೇ ಅಧಿಕ. ಅದರಲ್ಲೂ ವಿ.ಎನ್.ಮಗದಾಳರ ಲೇಖನಗಳೇ ಅಧಿಕವಾಗಿದ್ದು ಸುದೀರ್ಘವಾಗಿವೆ. ಆಗಾಗ ಪತ್ರಿಕೆಗೆ ಕಳುಹಿಸಿದ ಲೇಖನಗಳನ್ನು ಸ್ಥಳ ಸಂಕೋಚದಿಂದಾಗಿ ಮುಖ್ಯಾಂಶಗಳನ್ನೋ ಇಲ್ಲವೆ ತುಂಡಾಗಿಯೋ ಪ್ರಕಟಿಸುತ್ತಿರುವ ಸೂಚನೆಗಳೂ ಮಾತ್ರ ಇರುತ್ತಿದ್ದವಾದರೂ ೧೯೧೦ ಜೂನನಿಂದ ವಿ.ಭಾ. ಜೋಶಿಯವರ ಅವಧಿಯಲ್ಲಿ ಪತ್ರಿಕೆಗೆ ಒಂದು ನಿರ್ಧಿಷ್ಟ ಚೌಕಟ್ಟು, ಲೇಖನಗಳಿಗೂ ನಿರ್ಧಿಷ್ಟ ಕ್ಷೇತ್ರ, ನಿರ್ಧಿಷ್ಟ ಮಾರ್ಗ, ಅವುಗಳಿಗೆ ನಿರ್ಧಿಷ್ಟ ವ್ಯಾಪ್ತಿ, ಬರೆಯುವ ರೀತಿಗೆ ವಿಶಿಷ್ಟ ಅಚ್ಚುಕಟ್ಟು ಮತ್ತು ನಿಖರತೆಗೊಳಪಟ್ಟ ಪತ್ರಿಕೆಯ ನಿರ್ಧಿಷ್ಟ ಸ್ಪಂದನೆ, ಪ್ರತಿಕ್ರಿಯೆ, ತನ್ನದೇ ಜವಾಬ್ದಾರಿಗಳೊಂದಿಗೆ ಲೇಖಕರಿಗೆ ಹೊಣೆಯನ್ನ ಖಚಿತಗೊಳಿಸುವಿಕೆ- ಎಲ್ಲವೂ ನಿರ್ಧರಿತವಾಗಿ ಹೊರಹೊಮ್ಮಿದೆ.

೧೯೧೦ರನಂತರದ 'ಪ್ರಕೃತಿ ವಿಮರ್ಶೆ' ಎಂಬ ಶೀರ್ಷಿಕೆಯಡಿ ಲೇಖನಗಳನ್ನು ಗಮನಿಸಿದರೆ ಅವು ಪಠ್ಯಾಧಾರಿತವಾದವುಗಳಾಗಿದ್ದು ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಭೂಗೋಳಶಾಸ್ತ್ರಗಳಿಗೆ ಸಂಬಂಧಿಸಿದವುಗಳಾಗಿವೆ. ಅಲ್ಲದೆ ವಿಷಯವನ್ನು ನಿಖರವಾಗಿ ಮತ್ತು ಕರಾರುವಕ್ಕಾಗಿ ಹೇಳುತ್ತವೆ. ಭಾಷಾಂತರಗೊಂಡಿರುವ ಪದಗಳಂತೂ ಪಕ್ಕನೆ ವಿಷಯ ವಿಧಿತಗೊಳಿಸುವಷ್ಟರಮಟ್ಟಿಗೆ ಸರಳ, ಸ್ಪಷ್ಟವಾಗಿವೆ, ತಾಂತ್ರಿಕವಾಗಿವೆ.

ಪತ್ರಿಕೆ ವಿದ್ಯಾಖಾತೆಯದ್ದಾಗಿರುವುದರಿಂದ ಇತರ ಯಾವುದೇ ಕ್ಷೇತ್ರದ ವಾರ್ತೆಗಳು ಪ್ರಕಟಗೊಳ್ಳದಿದ್ದರೂ ಸಾಮ್ರಾಜ್ಯಶಾಹಿಯ ಪಟ್ಟಾಭಿಷೇಕ ಮತ್ತು ಮರಣವಾರ್ತೆಗಳು, ಅವರ ಅಭಿವಚನಗಳೂ ಸರಕಾರಿ ಅನುವಾದಕ(ಸಯ್ಯದ್ ಶಮಸುದ್ದೀನ ಖಾದ್ರಿ- ಓರಿಯೆಂಟಲ್ ಟ್ರಾನ್ಸಲೇಟರ್ ಟು ಗವರ್ನಮೆಂಟ)ನಿಂದ ಅನುವಾದಗೊಂಡು, ಅಲಿಜನಾಬ ಗವರ್ನರ್ ಜನರಲ್ ಇನ್ ಕೌನ್ಸಿಲ್- ಎ.ಅರ್ಲೆಯವರ ಅಪ್ಪಣೆಯ ಮೇಲಿಂದ ವಿವರವಾಗಿ ಪ್ರಕಟಗೊಂಡಿವೆ. ಮತ್ತು

'ರಾಜಾ ದೈವ ಸಮಾನ, ನಾವು ಅವರ ಒಕ್ಕಲು' ಪರಾಧೀನತೆಯ ಪರಮಾವಧಿ ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆಗಳು– ಇವೆಲ್ಲವೂ ಇಲ್ಲಿ ನಿಜವೇ ಆಗಿವೆ. ಇದೆಲ್ಲದಕ್ಕೂ ಪತ್ರಿಕೆ ತೆರೆದ ಹೃದಯ ಮತ್ತು ಎಲ್ಲಿಯೂ ವಿಷಯ ಮರೆಮಾಚದ ಏಕೈಕ ಸಾಕ್ಷಿಯಾಗುತ್ತದೆ.

೧೯೧೨ರ ಜನೇವರಿಯಿಂದಾರಂಭಿಸಿ ಸಾಮಾನ್ಯವಾಗಿ ಎಲ್ಲ ಸಂಚಿಕೆಗಳು ರಸಾಯನಶಾಸ್ತ್ರ ವಿಷಯವಾಗಿ ಹೆಚ್ಚಿನ ಲೇಖನಗಳನ್ನು ಹೊಂದಿವೆ. ಕೆಲವಷ್ಟು ಶಿಸ್ತು ಕ್ರಮ ಕೈಗೊಂಡ, ವಿಶೇಷ ಘಟನೆಗಳೂ ಇದರಲ್ಲಿ ಪ್ರಕಟಗೊಂಡಿವೆ. ಶಾಲಾ ಪತ್ರಕ ಸಂ ೪೮, ಸಂ–೫ ಮೇ ೧೯೧೨ರ ಪುಟ ೩೨ರಲ್ಲಿ, ಒಂದೇ ಪುಟದಲ್ಲಿರುವ ಇಲಾಖೆಯ ಈ ಎರಡು ಮಹತ್ವದ ಸರಕ್ಯೂಲರ್‌ಗಳು ಈ ಮುಂದಿನಂತಿದೆ:

ಶಾಲಾಪತ್ರಿಕೆ.

38

ಸರಕ್ಯೂಲರ ನಂ. ೧೫೮೯.

ಪುಣೆ ತಾ|| ೭ ನೇ ಮೇ ೧೯೧೨.

ಗಣೇಶ ಬಾಳಕೃಷ್ಣ ಬಾಲೆ ಎಂಬ ಒಬ್ಬ ವಿದ್ಯಾರ್ಥಿಯು ಪುಣೆ ನ್ಯೂಇಂಗ್ಲಿಷ ಸ್ಕೂಲಿನಿಂದ ಪಡಕೊಂಡ ಲೀವ್ಹಿಂಗ ಸರ್ಟಿಫಿಕೇಟಿನಲ್ಲಿ ಪರವಾನಗಿ ಇಲ್ಲದೆ ಕೆಲವು ಹೆಚ್ಚು ಕಡಿಮೆಗಳನ್ನು ಮಾಡಿ ಪುಣೆ ನೇಟಿವ್ಹ ಇನಸ್ಟಿಟ್ಯೂಶನದ ಹೆಡ್‌ಮಾಸ್ತರರ ಕಡೆಗೆ ಹಾಜರು ಮಾಡಿದನು. ಅದಕಾರಣ ಈ ಸರಕ್ಯೂಲರ ಹುಕುಮಿನ ಮೇರೆಗೆ ಅಪ್ಪಣೆ ಕೊಡುವದೇನಂದರೆ–ಈ ವಿದ್ಯಾರ್ಥಿಯನ್ನು ೧೯೧೫ನೆ ಇಸವಿಯ ಕೊನೆಯ ವರೆಗೆ ಶಾಲಾಖಾತೆಯಿಂದ ಮಾನ್ಯವಾದ ಯಾವ ಶಾಲೆಯಲ್ಲಿಯೂ ತೆಗೆದುಕೊಳ್ಳಲಾಗದು.

(Sd.) R. P. GODBOLE,
ಆಕ್ಟಿಂಗ ಎ|| ಇ|| ಮಧ್ಯಭಾಗ.

ನಂ. ೧೭೭೮.

ಪುಣೆ ತಾ|| ೧೫–೫–೧೯೧೨.

ಕೃಷ್ಣಾಜಿ ಮಾರುತಿ ಕಳಂಬೆ (೧೯೧೧ನೆ ಇಸವಿಯ ಮಧ್ಯಭಾಗದ ಸಾತಾರೆ ಜಿಲ್ಹೆಯ ಡಿರೆಕ್ಟರಿ ನಂ. ೬೫. ಪುಟ. ೫೦) ಮತ್ತು ನಾರಾಯಣ ಕೃಷ್ಣಭಾವೆ (೧೯೧೧ನೆ ಇಸವಿಯ ಮಧ್ಯಭಾಗದ ಸಾತಾರಾ ಜಿಲ್ಹೆಯ ಡಿರೆಕ್ಟರಿ ನಂ. ೧೯೮. ಪುಟ ೫೮.) ಇವರು ರಾಜಕೀಯ ವಿಷಯಗಳಲ್ಲಿ ಶಾಲಾಮಾಸ್ತರರು ಕೈಹಾಕಬಾರದೆಂದು ವಿದ್ಯಾಖಾತೆಯ ಹುಕುಮು ಇರುತಿರಲು, ಆ ಹುಕುಮನ್ನು ಅಮಾನ್ಯ ಮಾಡಿದ್ದರಿಂದ ಅವರನ್ನು ಶಾಲಾಖಾತೆಯಿಂದ ಬಡತರ್ಫ ಮಾಡಿರುತ್ತದೆ, ಅವರ ಟ್ರೇನಿಂಗಕಾಲೇಜ ಸರ್ಟಿಫಿಕೇಟುಗಳನ್ನು ರದ್ದು ಮಾಡಿರುತ್ತದೆ, ಹಾಗೂ ಅವರು ಸರಕಾರದ ಯಾವ ಖಾತೆಯಲ್ಲಿಯೂ ಯಾವ ಕೆಲಸ ಮಾಡಲಿಕ್ಕೂ ನಾಲಾಯಕರೆಂದು ಪ್ರಸಿದ್ಧಿಸಲ್ಪಟ್ಟಿದೆ.

(Sd.) R. D. PRIOR
ಆಕ್ಟಿಂಗ ಡಾಯರೆಕ್ಟರ ಆಫ್ ಪಬ್ಲಿಕ ಇನ್ಸಟ್ರಕ್ಶನ್.

ಇಂಥ ಘಟನೆಗಳು ಅಂದಿನಿಂದಲೂ ಇದ್ದೇ ಇವೆ ಎನ್ನುವುದನ್ನು ತಿಳಿಯಲಿಕ್ಕೆ ಒಂದೊಂದು ಉದಾಹರಣೆಗಳೇ ಸಾಕು ಎನಿಸುತ್ತದೆ.

೧೯೧೭ರಲ್ಲಿ **'ಕರ್ನಾಟಕ ಶಿಕ್ಷಕ ಮಂಡಳ'** ಎಂಬ ಒಂದು ಸಂಘ ವಿ.ಎನ್.ಮಗದಾಳರ ಕಾರ್ಯದರ್ಶಿತ್ವದಲ್ಲಿ ಆರಂಭವಾಗಿದೆ. ಮುಂದೆ ರೊದ್ದ ಶ್ರೀನಿವಾಸರಾಯರು ಇದರ ಅಧ್ಯಕ್ಷರಾಗಿ, ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಆರ್.ಎಸ್. ಕುಲಕರ್ಣಿ ಮತ್ತು ಹೆಣ್ಣು ಮಕ್ಕಳಟ್ರೇನಿಂಗ ಕಾಲೇಜಿನ ಸುಪರಿಂಟೆಂಡೆಂಟ್‌ರಾದ ಮಿಸೆಸ್ ಮೆಕಾಫೆಯವರನ್ನು ಇದರ

ಉಪಾಧ್ಯಕ್ಷರಾಗಿದ್ದಾರೆ. ಶ್ರೀಮತಿ. ರಮಾಬಾಯಿ. ಪಾರಗಾವಕರ ಇವರು ಸಹಾಯಕ ಕಾರ್ಯದರ್ಶಿಗಳಾಗಿ ಆಯ್ಕೆ ಮಾಡಿದ ಎಲ್ಲ ಸದಸ್ಯರ ದೊಡ್ಡ ಪಟ್ಟಿಯೊಂದಿಗೆ ಮಂಡಳದ ಸಕ್ರಿಯ ಕಾರ್ಯಚಟುವಟಿಕೆಗಳ ವಿವರವಿದೆ.

೧೯೧೭ರಲ್ಲಿ ಜರ್ಮನಿಯೊಂದಿಗೆ ಬ್ರಿಟಿಷರು ನಡೆಸಿದ ಮಹಾಯುದ್ಧಕ್ಕೆ ತಗುಲಿದ ಖರ್ಚುವೆಚ್ಚಗಳನ್ನು ಭರಿಸಲು ಭಾರತೀಯ ಜನಸಾಮಾನ್ಯನು ಏನುಮಾಡಬಹುದು? ಯಾವರೀತಿಯಲ್ಲಿ ಅರ್ಥಸಹಕಾರ ನೀಡಬಹುದು ಎಂಬುದನ್ನು 'ಇಂಡಿಯನ್ ವಾರಲೋನ್' ಎಂಬ ವಿಶಿಷ್ಟ ಲೇಖನ ವಿವರಿಸುತ್ತದೆ. ೧೯೧೭ ಮೇ ಸಂ ೫೩, ಸಂ೫ರ ಪುಟ ೪ರಲ್ಲಿ ಇರುವ ಈ ಬರಹದಲ್ಲಿ ಬ್ರಿಟಿಷ ಸಾಮ್ರಾಜ್ಯದೊಳಗಿನ ಪ್ರತಿಯೊಬ್ಬರೂ ಇಂಥ ಸಹಾಯ ಮಾಡಲಿಚ್ಛಿಸುವರು. ಅದರಂತೆ ಹಿಂದೂಸ್ಥಾನದೊಳಗಿನ ಪ್ರತಿಯೊಬ್ಬ ವ್ಯಕ್ತಿಯ ಅಂತರಾತ್ಮವೂ ಈ ಸದಿಚ್ಛೆಯನ್ನು ಹೊಂದಿದೆ ಎಂದು ಈ ಲೇಖನ ಹೇಳುತ್ತದೆ ಅಲ್ಲದೆ ಈ ವಾರಲೋನ್ ತೆಗೆದುಕೊಳ್ಳುವುದು ಹೇಗೆ ಎಂಬುದನ್ನೂ ವಿವರಿಸುತ್ತದೆ. ೧- ಹಣವನ್ನು ಸಾಲವಾಗಿ ಕೊಡೋಣ. ೨- ವಾರಬಾಂಡುಗಳನ್ನು ಕೊಂಡುಕೊಳ್ಳೋಣ ೩- ಪೋಸ್ಟ ಆಫೀಸಿನ ಕ್ಯಾಶ್ ಬಾಂಡುಗಳನ್ನು ಕೊಂಡುಕೊಳ್ಳುವುದು. ಈ ಮೂರು ರೂಪದಲ್ಲಿ, ಯುದ್ಧಕ್ಕೆ ಸಹಾಯಾರ್ಥವಾಗಿ ಸರಕಾರಕ್ಕೆ ಸಾಲ ಕೊಡಬಹುದು ಎಂಬ ತಿಳುವಳಿಕೆಯನ್ನು ಮಾಸ್ತರರಿಗೆ ಮಾಡಿಕೊಡಲಾಗಿದೆ. ಪತ್ರಿಕೆಯಲ್ಲಿ ಸುದೀರ್ಘ ೨೪ ಪುಟಗಳವರೆಗೆ ದೇಶಭಕ್ತಿ, ಸ್ವಾಭಿಮಾನ, ಸ್ವದೇಶಾಭಿಮಾನ ಮತ್ತು ಸ್ವಕರ್ತವ್ಯಗಳಿಗೆ ಸವಾಲಾಗಿ ವಾರಲೋನ್ ಕೊಡುವ ಕುರಿತಾದ ತಿಳುವಳಿಕೆ ನೀಡಲಾಗಿದ್ದು, ತುಂಬಾ ಸ್ವಾರಸ್ಯಕರವಾಗಿದೆ. ಜೂನ್ ತಿಂಗಳ ೧೪ನೆಯ ತಾರೀಖಿನಂದು ಟ್ರೇನಿಂಗ್ ಕಾಲೇಜಿನಲ್ಲಿ 'ವಾರ್ ಲೋನ್ ಡೆ' ಯನ್ನಾಗಿ ಆಚರಿಸಿ, ಅದರಿಂದ ಸಂಗ್ರಹವಾದ ೨೫ ರೂಪಾಯಿಗಳಿಂದ ಪೋಸ್ಟಿನ ಸರ್ಟಿಫಿಕೆಟ್‌ಗಳನ್ನು ತೆಗೆದುಕೊಂಡದ್ದನ್ನು ಪತ್ರಿಕೆ ವಿಷದವಾಗಿ ವಿವರಿಸುತ್ತದೆ. ಪ್ರಸ್ತುತ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರಗಳ ಹೆಸರೊಂದೇ ನಮಗೀಗ ಗೊತ್ತಿರುವುದು. ಅದರ ಹಿನ್ನೆಲೆ, ಇತಿಹಾಸ ತಿಳಿದಾಗ ಆಘಾತ, ಆಶ್ಚರ್ಯ ಎರಡೂ ಒಟ್ಟಿಗೇ ಆಗುತ್ತವೆ.

೧೯೨೨ ನವೆಂಬರ್, ಸಂ ೫೯-೮ ರ ಪತ್ರಿಕೆಯ ಮೊದಲ ಪುಟವು ಮುಂಬಯಿ ಇಲಾಖೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಜಾರಿ ಮಾಡುವ ಬಗೆಗೆ ಆದ ಪ್ರಸ್ತಾವನೆಗೆ ಮತ್ತು ರಚಿಸಿದ ಕಮಿಟಿಗೆ ಸಾಕ್ಷಿಯಾಗುತ್ತದೆ. ಏಪ್ರೀಲ್ ೧ ೨೦೧೦ರಂದು, ಸಂವಿಧಾನದ ೨೧ ಎ ಕಲಮಿನಡಿ ಈ ಉಚಿತ ಮತ್ತು ಕಡ್ಡಾಯ ಶಿಕ್ಷಣವು ಜಾರಿಯಾದ ಬಗೆಗೆ ನಮಗೆಲ್ಲ ಗೊತ್ತು. ಆದರೆ ಮುಂಬಯಿ ಕರ್ನಾಟಕದಲ್ಲಿ ಇದರ ಪ್ರಸ್ತಾವವಾಗಿದ್ದು ೧೯೨೨ರಲ್ಲಿಯೇ ಎಂಬ ಎಂಬುದು ಹುಬ್ಬೇರಿಸುವಂತೆ ಮಾಡುತ್ತದೆ. ಶ್ರೀ ನಾರಾಯಣ ಗಣೇಶ ಚಂದಾವರಕರರ ಅಧ್ಯಕ್ಷತೆಯಲ್ಲಿ ೧೧ ಜನರ ಕಮಿಟಿ ಮಾಡಿ, 'ಮುಕ್ಕಟೆ ಮತ್ತು ಒತ್ತಾಯದ ಶಿಕ್ಷಣ'ವನ್ನು ಪ್ರಾರಂಭ ಮಾಡುವ ಸಂಬಂಧ, ಮುಂಬಯಿ ಕರ್ನಾಟಕ ಮತ್ತು ಸಿಂಧ ಪ್ರದೇಶಗಳ ಸವಿವರವಾದ ವರದಿ ನೀಡಲು ನೇಮಿಸಿದ ಪ್ರಕಾರ, ಸವಿಸ್ತಾರವಾದ ವರದಿಯನ್ನು 'ಚಂದಾವರಕರ ಕಮಿಟಿಯ ರೀಪೋರ್ಟು'ಎಂಬ

ಶೀರ್ಷಿಕೆಯಡಿ, ಸುಧೀರ್ಘ ೩೮ ಪುಟಗಳಲ್ಲಿ 'ಕನ್ನಡ ಶಾಲಾ ಪತ್ರಕ' ಪ್ರಕಟವಾಗಿದೆ. ಎಲ್ಲ ಮಗ್ಗುಲುಗಳಿಂದ ಅಳೆದು, ಸುರಿದು ನೋಡಿರುವ ವರದಿ ಸಂಶೋಧನಾತ್ಮಕವಾಗಿದೆ. ಮುಂದೆ ಡಿಸೆಂಬರ ೧೯೨೨ ಸಂ೫೮-೯ ಸಂಚಿಕೆಯಲ್ಲಿ ಚಂದಾವರಕರ ಕಮಿಟಿ ರಿಪೋರ್ಟನ್ನನುಸರಿಸಿ, ಶಿಕ್ಷಣ ಇಲಾಖೆಯ ಮಂತ್ರಿಗಳಾದ ಡಾ.ಪರಾಂಜಪೆಯವರು ಮಾಡಿದ ಶಿಕ್ಷಣ ಮಸೂದೆಯೂ ೫ ಪುಟಗಳಲ್ಲಿದೆ.

ಹಕ್ಕಿಗಳ ಮತ್ತು ಮಾನವರ ಬ್ರೂಣಲಿಂಗ ಪತ್ತೆ ಮಾಡುವ ಯಂತ್ರದ ಉಲ್ಲೇಖವೂ ಇದೆ[೨೧]:

೨. ಬೆಂಕಿಯ ಒಡಿಗಳು.

ಜರ್ಮನಿಯೊಳಗೆ ಸದ್ಯಕ್ಕೆ ಒಂದು ಪ್ರಕಾರದ ಬೆಂಕಿಯ ವಡಿಗಳು ದೊರೆಯ ಹತ್ತಿವೆ. ಈ ವಡಿಗಳನ್ನು ರಾಸಾಯನಿಕ ದ್ರವ್ಯಗಳಿಂದ ಮಾಡಿರುವರು. ಅವುಗಳ ಆಕಾರವು ಗಡಿಯಾರದಷ್ಟು ಇರುತ್ತದೆ. ಆದರೆ ಅವುಗಳ ಉಷ್ಣತೆಯು ೫೦೦೦೦ [ಫ್ಯಾ.] ದಷ್ಟು ಇರುತ್ತದೆ. ಈ ಉಷ್ಣತೆಯನ್ನು ಆರು ಸೆಕಂದುಗಳಲ್ಲಿ ಉತ್ಪನ್ನಮಾಡಲಿಕ್ಕೆ ಬರುತ್ತದೆ. ಬೇಕಾದ ಕೆಲಸಕ್ಕೆ ಈ ವಡಿಗಳನ್ನು ಉಪಯೋಗಿಸಬಹುದು. ಈ ವಡಿಗಳು ಸಾದಾ ಕಡ್ಡಿಗಳಿಂದ ಹತ್ತುವದಿಲ್ಲ. ಆ ಕಡ್ಡಿಗಳು ಬೇರೆ ತರದವಿರುತ್ತವೆ

× × × ×

೩. ಹಾಲಿನ ಉಗಿಬಂಡಿ.

ಅಮೇರಿಕದ ಜನರು ಹೇಗೆ ಶೋಧಕರೋ ಹಾಗೆಯೇ ವಿಲಾಸಿಗಳೂ, ಶ್ರೀಮಂತರೂ ಇರುವರು. ಶಿಕಾಗೋದ ಒಬ್ಬ ಡಾಕ್ಟರನು ಸಾವಿರಾರು ಜನರ ಸಮಕ್ಷ ಉಗಿಬಂಡಿಯ ಎಂಜಿನದೊಳಗೆ ಹಾಲುಹಾಕಿ ೨೦ ಮೈಲು ಬಂಡಿಯನ್ನು ನಡೆಯಿಸಿ ತೋರಿಸಿದನು. ಅವನು ಈ ಹಾಲಿಗೆ ಘನರೂಪಕೊಟ್ಟು, ಅದರಿಂದ ಕಟ್ಟಿಗೆಯಂತೆ ತುಂಡುಗಳನ್ನು ಮಾಡಿ ಕಲ್ಲಿದ್ದಲಿಯ ಬದಲು ಅವುಗಳನ್ನು ಉಪಯೋಗಿಸಿದನು. ಈ ಬಂಡಿಯೊಳಗೆ ೨೦೦ ಜನರು ಉಲ್ಲಾಸದಿಂದ ಕುಳಿತಿದ್ದರು. ಹಾಲಿನ ಉಪಯೋಗವು ಇಂಥ ಕಾರ್ಯದ ಕಡೆಗೆ ಆಗುತ್ತದೆಂಬದನ್ನಾದರೂ ತಿಳಿದು, ಗೋವಧ ಬಂದಾಗಲಿ; ಹೊಟ್ಟೆಯೊಳಗಿನ ಅಗ್ನಿಗೆ ಸಜೀವ ಪ್ರಾಣಿಗಳನ್ನು ತುಂಬುವದಕ್ಕಿಂತ, ಉಗಿಬಂಡಿಯೊಳಗಿನ ಬೆಂಕಿಗೆ ನಿರ್ಜೀವ ಹಾಲು ತುಂಬುವದು ಉತ್ತಮ.

× × × ×

೪. ಗಂಡೋ ಹೆಣ್ಣೋ ಎಂಬದನ್ನು ನೋಡುವ ಯಂತ್ರವು.

ಯಾವದೊಂದು ಕೋಳಿಯ ತತ್ತಿಯೊಳಗಿನದು ಹುಂಜವೋ, ಕೋಳಿಯೋ ಎಂಬದನ್ನು ನೋಡುವ ಸುಲಭ ಯುಕ್ತಿಯನ್ನು ಒಬ್ಬನು ಶೋಧಿಸಿ ತೆಗೆದಿರುವನು. ಬಹಳ ಕೋಳಿಗಳಿರುವಲ್ಲಿ ಇದರ ಉಪಯೋಗವಾಗುತ್ತದೆ. ಯಾವ ತತ್ತಿಯೊಳಗಿಂದ ಹುಂಜ ಹೊರಬೀಳುವದೆಂದು ಗೊತ್ತಾಗುವದೋ ಅದನ್ನು ಪೇಟೆಗೆ ಕಳಿಸುವದಕ್ಕೂ ಕೋಳಿ ಆಗುವದನ್ನು ಮನೆಯೊಳಗೆ ಇಟ್ಟುಕೊಳ್ಳಲಿಕ್ಕೂ ಬರುತ್ತದೆ.

೮೨ ಶಾಲಾಪತ್ರಕ.

ಈ ಯಂತ್ರಮಾಡುವದು ಬಹಳೇ ಸುಲಭವಿರುತ್ತದೆ. ಒಂದು ಬೂಚು ತೆಗೆದುಕೊಂಡು ಅದಕ್ಕೆ ತಾಮ್ರದ ತಂತಿಯನ್ನು ಕಟ್ಟಬೇಕು. ಮತ್ತು ತುದಿಗೆ ಅಲ್ಯುಮಿನಮದ ಪದಾರ್ಥವನ್ನು ತೊಡಕಿಸಬೇಕು. ಹುಂಜವಿದ್ದರೆ ಈ ಯಂತ್ರವು ವರ್ತುಲಾಕಾರವಾಗಿ ತಿರಗುತ್ತದೆ. ಕೋಳಿಯಿದ್ದರೆ ಸರಳರೇಷೆಯೊಳಗೆ ತಿರಗುತ್ತದೆ.

ಮತ್ತೊಬ್ಬ ಗೃಹಸ್ಥನು ಗಂಡಸೋ. ಹೆಂಗಸೋ ಎಂಬದನ್ನು ನೋಡುವ ಯಂತ್ರವನ್ನು ಶೋಧಿಸಿರುವನು. ಇದು ಚೆಂಡಿನಂತೆ ಗೋಲ ಮತ್ತು ಹಗುರಿರುತ್ತದೆ. ಅದರ ಬೆಲೆಯು ೩ ರೂಪಾಯಿ ಮಾತ್ರ ಇರುವದು. ಆದರೆ ಮೇಲಿನ ಯಂತ್ರದ ವಿರುದ್ಧ ಇದರ ಗತಿ ಇರುತ್ತದೆ. ಸ್ತ್ರೀಯರ ಕೈಮೇಲೆ ಇಟ್ಟರೆ ಅದು ವರ್ತುಲಾಕಾರವಾಗಿ ತಿರಗುತ್ತದೆ. ಮತ್ತು ಪುರುಷರ ಕೈಮೇಲೆ ಸರಳರೇಷೆಯೊಳಗೆ ತಿರಗುತ್ತದೆ. ಹುಟ್ಟುವದು ಗಂಡೋ, ಹೆಣ್ಣೋ ಎಂಬದನ್ನು ತಿಳಿಯುವ ಉತ್ಸುಕತೆಯುಳ್ಳ ಸ್ತ್ರೀಪುರುಷರು ಇದರ ನಿಜತ್ವವನ್ನು ಕಂಡುಕೊಳ್ಳಬಹುದು.

ಸಿ. ಹ. ಮಣ್ಣೂರ,
ಅಸಿ. ಮಾ. ಮಿತ್ರೀಕೋಟೆ.

ಕರ್ನಾಟಕ ಶಿಕ್ಷಕರ ಸಂಘದಿಂದ ಪ್ರತಿವರ್ಷ ನಡೆಯುವ 'ಶಿಕ್ಷಕ ಸಮ್ಮೇಳನ ಅಥವಾ ಶಿಕ್ಷಣ ಸಪ್ತಾಹ ೧೯೩೧ರಲ್ಲಿ ಬಿಜಾಪೂರದ ಸರ್ಕಾರಿ ಪ್ರೌಢಶಾಲೆಯಲ್ಲಿ, ೨೬-೧೦-೧೯೩೧ ರಿಂದ ೨೯-೧೦-೧೯೩೧ರವರೆಗೆ ನಡೆದಿದೆ. ಇದು ದಕ್ಷಿಣ ಭಾಗದ ಎಜ್ಯುಕೇಷನಲ್ ಇನ್ಸಪೆಕ್ಟರರಾದ ಮೆ. ಕೆ.ಎಸ್. ವಕೀಲ ಇವರ ಅಧ್ಯಕ್ಷತೆಯಲ್ಲಿ ನೇರವೇರಿತು. ಈ ಸಮ್ಮೇಳನದಲ್ಲಿ ಧಾರವಾಡ, ಬೆಳಗಾವ, ಕಾರವಾರದಂಥ ದೂರದ ಸ್ಥಳಗಳಿಂದ ಶಿಕ್ಷಕರು ಕಡಿಮೆ ಪ್ರಮಾಣದಲ್ಲಿ ಆಮಿಸಿದ್ದರೂ, ಸ್ಥಳೀಯ ಬಹುಸಂಖ್ಯಾತ ಶಿಕ್ಷಕರು ಇದರ ಲಾಭ ಪಡೆದರು. ಈ ಸಮ್ಮೇಳನದಲ್ಲಿ ಮಿಸ್. ಪಾಲ ಎರಡನೆಯ ತರಗತಿಗೆ ಇಂಗ್ಲಿಷ ಪಾಠ ಮಾಡಿ ತೋರಿಸಿದರೆ, ಮಿ. ಕೇತಕರರರು ಸಂಸ್ಕೃತ ಪಾಠ ಮಾಡಿ ತೋರಿಸಿದರು. ಇಂಗ್ಲಿಷ ಅಕ್ಷರಗಳನ್ನ ತೀರ ಅರಿಯದ ಅಂದರೆ ಮೂರನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವಂತೆ, ಡಿರೆಕ್ಟ(ನೇರ) ಪದ್ಧತಿಯಿಂದ ಮಿ. ಪಂಜೆ

ಮಂಗೇಶರಾಯರು ಪಾಠ ಮಾಡಿದ್ದು ತಿಳಿದು ಬರುತ್ತದೆ.[೨೨] ಕನ್ನಡ ಸಾಹಿತ್ಯದ ಮತ್ತು ಶಿಕ್ಷಣದ ದಿಗ್ಗಜರೆಲ್ಲ ಹೀಗೆ ಶಿಕ್ಷಕರಾಗಿ ಕಲಿತು, ಕಲಿಸಿ ವಿದ್ಯೆಯ ಪರ್ವತವಾದವರು. ಶೈಕ್ಷಣಿಕ ಇತಿಹಾಸ ಶೋಧ ಮತ್ತು ರಚನೆಗೆ ಬಹು ಸಂಗತ ಮತ್ತು ಮಹತ್ವದ ವಿಷಯವಾಗಿದ್ದು, ಪ್ರಮುಖ ಸಾಹಿತಿಗಳು, ಚಿಂತಕರು ಪ್ರಾಥಮಿಕ ಶಿಕ್ಷಣ ಕುರಿತಾಗಿ ಹೊಂದಿದ ಕಾಳಜಿಗೆ ಇದು ಸಾಕ್ಷಿಯಾಗಿ ನಿಲ್ಲುತ್ತದೆ.

೫.೩. ಪತ್ರಿಕೆಯ ಭಾಷೆ, ಲಿಪಿ ಮತ್ತು ಬರಹ:

ಹೀಗೆ ತರಬೇತಿ ಶಾಲೆಗೆ ಹೋಗಿ ತರಬೇತಿ ಪಡೆಯದಿದ್ದವರು ಸರ್ಟಿಫೀಕೆಟ್ ಪರೀಕ್ಷೆ ಪಾಸಾಗುವ ಅನುಕೂಲ ಮತ್ತು ನಿಯಮಗಳು ಇರುತ್ತಿದ್ದವು. 'ಸ್ಟ್ಯಾಂಡರ್ಡ'(ತರಗತಿ) ಎಂಬುದಕ್ಕೆ 'ಮರ್ಯಾದೆ' ಹಾಗೂ 'ಪಾಸಾದವರಿಗೆ' ಎಂಬುದಕ್ಕೆ 'ಇಳಿದವರಿಗೆ' ಎಂದು ಬಳಕೆಯ ರೂಢೀ ಆವಾಗ ಇದ್ದದ್ದು "ಅದರಲ್ಲಿ ನಾಲ್ಕನೆಯ ಮರ್ಯಾದೆಯಂತೆ ಇಳಿದವರೊಳಗಿಂದ ಬೇಕಾದಷ್ಟು ಜನರು ಆರಿಸಿ ತೆಗೆದುಕೊಳ್ಳಲ್ಪಡುವರು" ಎಂದು ಬಳಸಲಾಗಿದೆ[೨೩] ಪತ್ರಿಕೆಯಲ್ಲಿ ಆರಂಭದ ಸಂಬೋಧನೆ

'ಪಾಠಶಾಲಾ ಪತ್ರಿಕಾ ಕರ್ತರಿಗೆ......,

'ಬೆಳಗಾವಿಯಲ್ಲಿರುವ ಕಂನಡ ಶಾಲಾ ಪತ್ರಕ ಮಾಲಿಕರಿಗೆ...',

'ಬೆಳಗಾವ ಕಾನಡಿ ಟ್ರಾನಸಲೇಟರ ಯಿವರಿಗೆ...',

'ಬೆಳಗಾಂವಿ ಯಲ್ಲಿರುವ ಕನ್ನಡ ಮಠಪತ್ರಕದ ಕರ್ತರಿಗೆ..'

'ರಾ॥ ರಾ॥ ಬೆಳಗಾಂವ ಕಂನಡ ಟ್ರಾನ್ಸಲೆಟರ ಇವರಿಗೆ'

ಹೀಗೆ ಸಂಬೋಧಿಸಿ ಪತ್ರಿಕೆ, ಲೇಖನ, ಪಠ್ಯವಿಷಯ ಮುಂತಾದುವುಗಳ ಕುರಿತು ಚರ್ಚಿಸಿದ್ದನ್ನು ನೋಡಿದರೆ ಟ್ರಾನ್ಸಲೇಟರರೇ ಪತ್ರಿಕೆಯ ಎಡಿಟರರೂ ಆಗಿದ್ದರು ಎಂಬುದು ಖಚಿತವಾಗುತ್ತದೆ.

ಪತ್ರಿಕೆಗೆ ಲೇಖನಗಳನ್ನು ಕಳುಹಿಸಿ ಬರೆದ ಬಹುಪಾಲು ಶಿಕ್ಷಕರು ಸಂಪಾದಕರನ್ನು ಸಂಬೋಧಿಸಿರುವ ವೈವಿಧ್ಯಮಯ ರೀತಿಗಳು ತೊಂಬುಗೌರವದಿಂದಾಗಿ ಅತ್ಯಾಕರ್ಷಕವಾಗಿವೆ:

- ರಾವಸಾಹೇಬ ದಕ್ಷಿಣ ಭಾಗದ ಶಾಲಾಪತ್ರಿಕ ಕರ್ತರವರ ಚರಣಸಂನಿಧಾನಕ್ಕೆ...
- ಮಹಾರಾಜ ರಾಜಪೂಜಿತ ರಾಜಮಾನ್ಯ ರಾಜಶ್ರೀ ಕನ್ನಡ ಮಠಪತ್ರಕ ಕರ್ತರಿಗೆ...
- ಶ್ರೀಮದರಾಜಸನ್ಮಾನಿತ ರಾ. ರಾ. ವಿದ್ಯಾಮಠಪತ್ರಕ ಕರ್ತರಿಗೆ...
- ಮೆಹರ್ಬಾನ ರಾವಸಾಹೇಬ ದಕ್ಷಿಣ ಭಾಗದ ಶಾಲಾ ಪತ್ರಕದ ಎಡಿಟರರವರ ಚರಣಾರವಿಂಗಳಿಗೆ....
- ರಾವಸಾಹೇಬ ಕನ್ನಡ ಶಾಲಾಪತ್ರ ಕರ್ತೃರಡಿಗಳಿಗೆ ಬೇಡಿಕೊಳ್ಳುವ ಬಿಂನಃ ಏನೇಂದರೆ....

> ಶಾಲಾಪತ್ರಕದ ಕರ್ತರೂ ವಿದ್ಯಾಸಾಗರದಲ್ಲಿ ಆನಂದದಿಂದ ಕ್ರೀಡಿಸುವವರೂ ಆದ ಮಹಾರಾಯರಿಗೆ

> ಶ್ರೀಮನ್ಮಹಾರಾಜಪೂಜ್ಯ ಶ್ರೀವಿರಾಜಮಾನ ಷದ್ಭಾಷಾಪ್ರವೀಣ ಶಾಲಾಪತ್ರಕಜನಕ ವಿಭುಜಂಗಳಕೃಪಾಸ್ಥಾನ ಸನ್ನಿಧಿಗೆ....

> ಓ ಸದ್ಧರ್ಮ ಪ್ರಭುಗಳೂ ವಿದ್ಯಾಗಣ್ಯರೂ ಆದ ಏಡಿಟರ ಮಹನ್ಮಣಿಗಳೇ.....

ಹೀಗೆ ಇರುವ ಸಂಬೋಧನೆಗಳೇ ಆ ಪ್ರಬುದ್ಧ ಶಿಕ್ಷಕರ ಗೌರವವನ್ನೂ, ತಮ್ಮೊಳಗಿರುವ ವಿಧೇಯತೆಯನ್ನೂ, ಹಿರಿಯರಿಗೆ ಬಾಗುವ ರೀತಿಯನ್ನು, ಅವರೊಳಗಿರುವ ಸರ್ವಸಾಮರ್ಥ್ಯವನ್ನೂ ಮತ್ತು ಸಂಬೋಧನೆಯ ವೈವಿಧ್ಯತೆಯನ್ನು ಎತ್ತಿ ತೋರಿಸುತ್ತವೆ.

ಸುತ್ತೋಲೆಗಳ ಒಕ್ಕಣಿಕೆಯಂತೂ ಮರಾಠಿ ಆಡುವವರು ಕನ್ನಡ ಬರೆದಂತೆನಿಸುತ್ತವೆ. ಆರಂಭದ ಸುತ್ತೋಲೆ ಮತ್ತು ಲೇಖನಗಳ ಬರಹಗಳು, ಪದಪದಗಳ ನಡುವೆ ಅಂರತವಿಲ್ಲದೆ ಒಂದರ ಹಿಂದೊಂದು ಪದಗಳನ್ನು ಸರ ಪೋಣಿಸಿದಂತೆ ಬರೆಯಲಾಗಿದೆ. ಸಾಲಿನಲ್ಲಿ ಹತ್ತೊಂಭತ್ತನೆಯ ಶತಮಾನದಲ್ಲಿ ಸ್ವರಗಳ ಬದಲು ಹೆಚ್ಚಾಗಿ ವ್ಯಂಜನಗಳನ್ನೇ ಬಳಸಲಾಗಿದೆ. ಉದಾ–ಯೆಷ್ಟು, ವುಪಯೋಗ, ವೋದಿಸು, ಯಿಡ್ರಿ, ಯಿನ್ನು, ಯಿರಲಿ, ಯೆಲ್ಲಾ... ಒತ್ತಕ್ಷರದ ಬದಲು ಅನುಸ್ವಾರ ಬಳಸಲಾಗಿದೆ: ಉದಾ– ತಂಮ, ನಂಮ, ಹೆಂಣು, ಸಂಣ, ಕಂನಡ ಮುಂತಾದುವು.

ಮರಾಠಿ, ಹಿಂದಿ, ಅರೇಬಿಕ್, ಪಾರ್ಸಿ ಮತ್ತು ಆಂಗ್ಲ ಪದಗಳಂತೂ ಹೇರಳವಾಗಿ ಬಳಕೆಯಾಗಿವೆ: ಪಂತೋಜಿ, ವಸೂಲ, ಜಮಾ, ಗೈರ, ಹಾಜರು, ಜವಾಬು, ಹುಕುಂ, ಅಗರಬಗೈರ, ಖರೆ, ಮೇಹನತ, ಬಿಲ್ ಕುಲ್, ತಜವೀಜು, ಸರಕಾರ, ರಾವಬಹಾದೂರ, ಶಾಹಣೆ, ಕಾನಡಾ, ಕಾನಡಿ, ಪರಂತು, ಮಾಫಿ, ತಾರೀಖು, ಛಾಪಿಸು, ದಫ್ತರ, ಪಗಾರ, ದಾಂದಲೇ, ಸಾಹೇಬ, ಚೌಕಸಿ, ರಿಪೇರಿ, ಬಂದೋಬಸ್ತ ಮುಂತಾಗಿ.

ಪತ್ರಿಕೆಯ ಪುಟಗಳಲ್ಲಿ ನಮಗೆ ಸಿಗುವ ಹಲವಾರು ಉದಾಹರಣೆಗಳು ಶಿಕ್ಷಣಕ್ಕಾಗಿಯೇ ಮೀಸಲಿದ್ದ, ಶಿಕ್ಷಣದ ಅನುಷ್ಠಾನದಲ್ಲಿ ಬಹು ಮುಖ್ಯ ಪಾತ್ರ ವಹಿಸಿ, ತನ್ಮೂಲಕ ಆ ಕಾಲದ ಭಾಷೆ, ಲಿಪಿ, ಶಿಕ್ಷಣ, ಪರಿಸ್ಥಿತಿ, ಏಳುಬೀಳು ಗತಿಗಮ್ಯಗಳನ್ನು ತಿಳಿಸಿ, ಬಳಸಿದ ಭಾಷೆ ಮತ್ತು ಲಿಪಿಗಳು ಭಾಷೆ ಬೆಳೆದ ಬಗೆಗೆ ಆಧಾರ ಒದಗಿಸುತ್ತವೆ. ಉದಾ: 'ಮರಿವರ್ಷ'(ಮರುವರ್ಷ), 'ಸ್ಥಲಸಂಕೋಚ/ಸ್ಥಲಸಂದಿಗ್ಧ' (ಸ್ಥಳದ ಅಭಾವ), 'ಚರಪ್ರವಾಹಿ ಶಾಸ್ತ್ರ'(ಭೌತಶಾಸ್ತ್ರ), 'ಜಂಗಮ ಪದಾರ್ಥ (ಹರಿಯುವ ಪದಾರ್ಥ), 'ಮಹಿಲತಾ'(ಎರೆಹುಳು) 'ಮಚ್ಚುಗೊಡುವ'(ಮೆಚ್ಚುಗೆ ಅರ್ಪಿಸುವ), ಸಮಾರಂಭ, 'ಕರಿಸಾಲಾದ ವರ್ಷ'(ಬರಗಾಲ), ಭೂಯಿಮೂಗ(ಶೇಂಗಾ) ಮುಂತಾದ ಶಬ್ದಗಳನ್ನು ಬಳಸಿ ಮೆದುಳಿಗೆ ಸಾಣೆ ಹಿಡಿಸುವ ಕಾರ್ಯವನ್ನು ಈ ಪತ್ರಿಕೆ ಮಾಡುತ್ತದೆ. ಒಂದು ಶತಮಾನದಷ್ಟು ಹಿಂದೆ ಬಳಸಿದ ಭಾಷೆ, ಲಿಪಿ ಮತ್ತು ಗ್ರಹಿಕೆಗಳು ಎಂಥವರನ್ನು ಓದಿಸಿಕೊಂಡು ಹೋಗುತ್ತವೆ.

೫.೪. ಆಕರ ಸಾಹಿತ್ಯವಾಗಿ ಪತ್ರಿಕೆ

೧೯೭೫ರಲ್ಲಿ ಟ್ರೇನಿಂಗ್ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಹ.ಗ.ಜೋಶಿಯವರು ಪತ್ರಿಕೆಯ ಕುರಿತು "ಶಿಷ್ಯನು ಗುರುವನ್ನು ಮೀರಿಸಿದ್ದಾನೆಂಬ ಮಾತನ್ನು ಶಿಷ್ಯನೇ ಹೇಳಿಕೊಳ್ಳಬಾರದು. 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬ ಮಾತು ಗುರುಮುಖದಿಂದ ಅನಾಯಾಸವಾಗಿ ಹೊರಹೊಮ್ಮಿ ಬರಬೇಕು. ಜೀವನ ಶಿಕ್ಷಣವು ನಡೆದುಬಂದ ದಾರಿಯನ್ನು ಹಿಂದುರುಗಿ ನೋಡಿದರೆ ಎಂಥವರೂ ಬೆರಳು ಕಚ್ಚುವರು. ಕನ್ನಡ ನಾಡನ್ನು ಉದ್ಧರಿಸಿದ, ಕನ್ನಡ ಭಾಷೆಯನ್ನು, ಸಾಹಿತ್ಯವನ್ನು ಪರಿಪುಷ್ಟಗೊಳಿಸಿದ ಪುಣ್ಯಾತ್ಮರು ಆ ಪತ್ರಿಕೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಆ ಸಾಹಿತ್ಯವನ್ನು ಸಂಶೋಧಿಸಿ ಹತ್ತು ಜನ ಡಾಕ್ಟರೇಟ್ ಡಿಗ್ರಿಯನ್ನು ಪಡೆಯಬಹುದಾಗಿದೆ. ಕೇವಲ ಅರ್ಥದಿಂದ ಗುಣವನ್ನು ನೆನೆಯುವುದು, ಬೆಲೆಯನ್ನು ಕಟ್ಟುವುದು ಶೈಕ್ಷಣಿಕ ದೃಷ್ಟಿಯಿಂದ, ಸಾಹಿತ್ಯಜ್ಞನ ಗುಣದಿಂದ ಗೌಣವಾದ ವಿಷಯವು"[೨೪] ಎಂದಿರುವುದು ನೂರಕ್ಕೆ ನೂರು ಸತ್ಯವಾದ ಮಾತು. ಹತ್ತು ಜನರಿಗೆ ಪಿಎಚ್‌ಡಿಗೆ ವಿಷಯ ಒದಗಿಸುವಷ್ಟು ವಿಷಯಜ್ಞಾನ ಸಮೃದ್ಧವಾದ ಪತ್ರಿಕೆ ಇದು. ಕ್ರಿ.ಸ. ೨೦೦೦ದವರೆಗೂ ಇದರ ಸೂಕ್ಷ್ಮ ಚಿತ್ರೀಕರಣವಾಗಬೇಕಿದೆ. ಅಲ್ಲದೆ ಸೂಕ್ಷ್ಮ ಚಿತ್ರೀಕರಣಗೊಳಿಸಲು ಸಾಧ್ಯವಿಲ್ಲದಂಥ ಪತ್ರಿಕೆಗಳ ಪುನರುಜ್ಜೀವನಕ್ಕೆ ಉಪಮಾರ್ಗ ಕಂಡುಕೊಳ್ಳಬೇಕಿದೆ. ತಂತ್ರಜ್ಞಾನದ ಯುಗದಲ್ಲಿ ಇದು ಅಸಾಧ್ಯವೇನಲ್ಲ; ಮಾಡಬೇಕೇನ್ನುವ ಛಲ, ಉತ್ಸಾಹ, ನಿಸ್ವಾರ್ಥಸೇವೆ ಬೇಕು. ಇದಕ್ಕೆ ಸರಕಾರ, ಪರಿಷತ್ತು ಮತ್ತು ಅಕಾಡೆಮಿಗಳು ಕೈಜೋಡಿಸಬೇಕಷ್ಟೇ.

ಶಾಲಾ ಶಿಕ್ಷಣದ ಪ್ರಚಲಿತ ಸುದ್ದಿಗಳನ್ನು, ಸಾಹಿತ್ಯವನ್ನು ಪ್ರಸರಿಸಲೆಂದು ಹುಟ್ಟಿದ ಈ ಪತ್ರಿಕೆ ತನ್ನೊಳಗೆ ಹುದುಗಿಸಿಕೊಂಡಿರುವ ಅಗಾಧ ಜ್ಞಾನನಿಧಿಯನ್ನು ನೋಡಿದರೆ ಇದು ಹತ್ತೊಂಭತ್ತನೆಯ ಮತ್ತು ಇಪ್ಪತ್ತನೆಯ ಶತಮಾನದ ಇಡೀ ಶಿಕ್ಷಣ ಇಲಾಖೆಯ ಆಳಗಲವನ್ನು ತೆರೆದು ತೋರುತ್ತದೆ.

- ದುರ್ಲಭವಾದ ವಿಷಯ ಮತ್ತು ವ್ಯಕ್ತಿಗಳನ್ನು ಹಾಗೂ ವ್ಯಕ್ತಿಗಳ ಕುರಿತಾದ ವಿಷಯಗಳಿಗೆ ಪ್ರಥಮಬಾರಿಗೆ ತೆರೆದುಕೊಳ್ಳುತ್ತದೆ.
- ನಾಲ್ಕೂ ಜಿಲ್ಲೆಗಳಿಗೆ ಸಂಬಂಧಿಸಿದ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಪ್ರತಿಯೊಂದು ಪ್ರಕ್ರಿಯೆಯನ್ನು ಬಿಚ್ಚಿಡುತ್ತದೆ.
- ಶಿಕ್ಷಣಿಕ ಪತ್ರಿಕಾ ಇತಿಹಾಸದಲ್ಲಿಯೇ ದಾಖಲೆ ಬರೆದ ಪತ್ರಿಕೆಯಾಗಿದೆ.
- ಬ್ರಿಟಿಷರು ಮಾಡಿದ ರಾಜಕೀಯ ಆಳ್ವಿಕೆ, ಸಾಮಾಜಿಕ ಸ್ಥಿತ್ಯಂತರ, ಆರ್ಥಿಕ ಮಾನಕಗಳು, ಧಾರ್ಮಿಕ ವಿಚಾರಗಳು ಮತ್ತು ಭಾವನಾತ್ಮಕ ಸ್ಪರ್ಶ ಇವುಗಳಿಗೆ ಸಾಕ್ಷಿಯಾಗುತ್ತದೆ.
- ದೇಶ ವಿದೇಶಗಳ ಪ್ರಚಲಿತ ಮತ್ತು ಅಪರೂಪದ ಸುದ್ದಿಗಳನ್ನು ತಿಳಿಸುತ್ತದೆ.
- ಕಾಲನಿರ್ಣಯದಲ್ಲಿ ಮತ್ತು ವ್ಯಕ್ತಿ ನಿರ್ಣಯಗಳಲ್ಲಿ ಈ ಪತ್ರಿಕೆ ಮಹತ್ವದ ಪಾತ್ರ ವಹಿಸುತ್ತದೆ.

• ಕನಿಷ್ಟ ೫ ಸಂಶೋಧನೆಗಳಿಗೆ ವಿಷಯ ಒದಗಿಸುವಷ್ಟು ಆಕರವನ್ನೊಳಗೊಂಡಿದೆ.

• ಸ್ವತಃ ಅದರದ್ದೇ ಅಧ್ಯಯನಕ್ಕೆ ಸಂಪನ್ಮೂಲವಾಗಿ ಸಾಕಾರಗೊಳಿಸುತ್ತದೆ.

ಇನ್ನೂ ಹತ್ತು ಹಲವಾರು ಅಗತ್ಯ ವಿಷಯಗಳ ಹಾಗೂ ಪ್ರಥಮವಾಗಿ ತಿಳಿಸುವ ಅಘಾದ ವಿಷಯಗಳ ಅಕ್ಷಯ ನಿಧಿಯಾದ ಪತ್ರಿಕೆಯ ಭಾಷೆ ಹಾಗೂ ಆರಂಭದ ಲಿಪಿ ಕುರಿತೇ ಒಂದು ಪ್ರತ್ಯೇಕ ಅಧ್ಯಯನ ಮಾಡುವಷ್ಟು ಶ್ರೀಮಂತವಾಗಿದೆ.

ಒಂದೇ ಮಾತಿನಲ್ಲಿ ಹೇಳುವುದಾದರೆ ನನ್ನ ಈ ಅಧ್ಯಯನದ ಹಂದರ ನಿಂತಿರುವುದು ಈ ಪತ್ರಿಕೆಯ ಆಧಾರದ ಮೇಲೆ. ಟ್ರೇನಿಂಗ ಕಾಲೇಜಿನ ಮಾನಸವಾಣಿಯಾಗಿರುವ ಈ ಪತ್ರಿಕೆಯನ್ನು ಬಿಟ್ಟರೆ ಅಧೀಕೃತವಾದ ಯಾವುದೇ ಸಂಪನ್ಮೂಲ ಸಿಗುವುದು ಅಸಾಧ್ಯ. ಆದ್ದರಿಂದ ಈ ಪ್ರಾಥಮಿಕ ಆಕರವೇ ನನ್ನ ಸಂಶೋಧನೆಗೆ ಪ್ರಧಾನ ಆಕರವಾಗಿದೆ.


೫.೫. ಪತ್ರಿಕೆ ಪ್ರಕಟಿಸಿದ ಸುತ್ತೋಲೆಗಳು

ಸುತ್ತೋಲೆಗಳು ಸರಕಾರದ ಅಥವಾ ಸಂಸ್ಥೆ ಹೊರಡಿಸುವ, ಇಲ್ಲವೇ ಸರಕಾರದ ಅಥವಾ ಸಂಸ್ಥೆಯನ್ನು ಪ್ರತಿನಿಧಿಸುವ ಅಧಿಕಾರಿಗಳು ಹೊರಡಿಸುವ, ತ್ವರಿತವಾಗಿ ಸಂಬಂಧಿಸಿದವರಿಗೆ ವಿಷಯ ತಿಳಿಸುವ ಅಧಿಕೃತ ಪ್ರಕಟಣೆ, ತಿಳುವಳಿಕೆ ಪತ್ರ ಇಲ್ಲವೇ ಆದೇಶಿಸುವ ಪರಿಪತ್ರ ಅಥವಾ ಆಜ್ಞೆಯಾಗಿದೆ. ಮಾಡಬೇಕಾದ ಅಥವಾ ನಡೆಯಬೇಕಾದ ಕಾರ್ಯ/ಕರ್ತವ್ಯದ ಕಾರ್ಯಾನುಷ್ಠಾನದ ಕಾಳಜಿ ಈ ಪರಿಪತ್ರಗಳ ಜೀವಾಳವಾಗಿದೆ.

ಈ ಪತ್ರಿಕೆಯಲ್ಲಿ ಇಂಥ ಸುತ್ತೋಲೆಗಳು ಆರಂಭದಲ್ಲಿ 'ಇಸ್ತಿಯಾರನಾಮೆ ಅಥವಾ Notification' ಎಂಬ ಹೆಸರಿನಲ್ಲಿ ಪ್ರಕಟಗೊಂಡಿವೆ. ನನ್ನ ಪ್ರಬಂಧದ ಎಲ್ಲ ಅಧ್ಯಾಯಗಳಲ್ಲಿ ಪತ್ರಿಕೆಯಲ್ಲಿ ಪ್ರಕಟವಾದ ಆದೇಶಗಳು, ವಿಷಯಗಳು, ಲೇಖನಗಳು ಮತ್ತು ಪ್ರಕಟಣೆಗಳನ್ನು ಉಲ್ಲೇಖಿಸಲಾಗಿದೆ. ಈ ಸಂಶೋಧನಾ ಪ್ರಬಂಧಕ್ಕೆ ಈ ಪತ್ರಿಕೆಯ ದಾಖಲೆಗಳೇ ಪ್ರಾಥಮಿಕ ಆಕರ. ಹಾಗಾಗಿ ಆಯ್ದ ಕೆಲವೇ ಸುತ್ತೋಲೆಗಳನ್ನು ಇಲ್ಲಿ ನೀಡಲಾಗಿದೆ. ಸುಮಾರು ೧೬೦ ವರ್ಷಗಳ ಹಿಂದೆಯೇ ಕನ್ನಡದಲ್ಲಿಯೇ ಪತ್ರವ್ಯವಹಾರ ಮಾಡಬೇಕು, ಕನ್ನಡ ಮಾಧ್ಯಮಲ್ಲಿಯೇ ಶಾಲಾ ಬೋಧನೆ ನಡೆಯಬೇಕು, ಕನ್ನಡ ಅಂಕಿಗಳನ್ನು ಬಳಸಿಯೇ ಗಣಿತದ ಲೆಕ್ಕಗಳನ್ನು ಮಾಡಿಸಬೇಕು, ಶಾಲಾ ಪಂತೋಜಿಗಳು (ಮಾಸ್ತರರು) ಕನ್ನಡದಲ್ಲಿಯೇ ಹಾಜರಿ ಪುಸ್ತಕ ಬರೆಯಬೇಕು, ಎಲ್ಲ ಆಡಳಿತವೂ ಕನ್ನಡದಲ್ಲಿಯೇ ನಡೆಯಬೇಕೆಂದು ಕಟ್ಟುನಿಟ್ಟಿನ ಆದೇಶಗಳನ್ನು ನೀಡಿದ ಧೀಮಂತ ಡೆಪ್ಯೂಟಿ ಚನ್ನಬಸಪ್ಪನವರು ಪತ್ರಗಳು ಕನ್ನಡ ಭಾಷೆಗೆ, ಅದಕ್ಕೆ ನೀಡಿದ ಮಹತ್ವಕ್ಕೆ ಮತ್ತು ಉಂಟಾದ ಜಾಗೃತಿಗೆ ಸಾಕ್ಷಿಯಾಗುತ್ತವೆ. ಹಾಗೇಯೇ ಕಟ್ಟು ನಿಟ್ಟಾಗಿ ಪಾಲಿಸಬೇಕಾದ ಇಲಾಖೆಯ

ನಿಯಮಾವಳಿಗಳನ್ನು ತಿಳಿಸುವ ರಸೆಲ್, ವೆಂಕಟ ರಂಗೋ ಕಟ್ಟಿ, ರೊದ್ದರಾಯ, ತುರಮರಿ, ಭುಜಂಗರಾಯ ಮುಂತಾದವರೆಲ್ಲರ ಸುತ್ತೋಲೆಗಳು, ಪತ್ರಗಳೂ ಅವರಿಗಿದ್ದ ಹೊಣೆಗಾರಿಕೆಯನ್ನು ಎತ್ತಿ ತೋರುತ್ತವೆ.


೧) ರಸೆಲ್‌ರ ಆಯ್ದ ಸುತ್ತೋಲೆಗಳು : ೧.೧


ಮಠಪತ್ರಿಕೆಯು

Notification


W. A. Russell

೧. ೨



Circular.

W. A. Russell

೧.೩.ಕನ್ನಡ ಶಾಲಾ ಪತ್ರಕವು೧೧/೧೨, ಮಾರ್ಚ-೧೮೭೬ ಪುಟ ೨೭೩-೨೭೪




೨)- ಚನ್ನಬಸಪ್ಪನವರ ಸುತ್ತೋಲೆಗಳು- ೨-೧



ಮಠ ಪತ್ರಿಕೆ-೧-೧೧ ಫೇಬ್ರೂಅರಿ, ೧೮೬೬, ಬೆಳಗಾವಿ

೨.೨



(೧೬೯)

Appointments.

ನೇಮಣೂಕುಗಳು -

(ಬೆಳಗಾವ ಜಿಲ್ಲಾ)

कसबा बागेवाडी तालूक बेळगांव येथील पंतोजी भास्कर बाबाजी यांचा वर्ग कसबा पाच्छापुर तालूक चिकोडी येथील [illegible] करून, येथील पंतोजी अणाजी शिवाजी यांस बागेवाडी येथें नेमण्यांत आलें आहे. उभयतांचा पगार सारखाच आहे.

ता. २७ आक्टोबर १८९९ इ॥ बेळगांव.

Chunbussappa B. Sherwark

डे. इं. इन्स्पेक्टर जिल्हा बेळगांव.

ಮಠಪತ್ರಿಕೆ ೨/೬ ಅಕ್ಟೋಬರ ೧೮೯೯, ಪುಟ ೧೬೯

೩. ವೆಂಕಟ ರಂಗೋ ಕಟ್ಟಿಯವರ ಸುತ್ತೋಲೆಗಳು

೩.೧

Notification

ಇಶ್ತಿಹಾರನಾಮೆ

[illegible]

(೧೦೮)

[illegible]

ಬೆಳಗಾವಿ

[illegible]

Venkut Rungo.

[illegible]

ಮಠಪತ್ರಿಕೆ ಪುಸ್ತಕ-೨ ಸಂಚಿಕೆ-೪, ಬೆಳಗಾವಿ ಅಗಷ್ಟ-೧೮೯೯ ಇಸವಿ' ಪುಟ ಸಂಖ್ಯೆ ೧೦೭ ಮತ್ತು ೧೦೮

೩.೨. ಕನ್ನಡ ಶಾಲಾ ಪತ್ರಕ ೯-೫, ಅಗಸ್ಟ ೧೮೭೩,ಪುಟ ೩೯೭-೩೯೮

೩೯೭

NOTICES.

ನೋಟೀಸುಗಳು

ವಿದ್ಯಾಖಾತೆ.

ಮುಂಬಯಿಕೋಟೆ—

ತಾರೀಖು ೪ ನೇ ಜುಲಾಯಿ ೧೮೭೩.

ಪಶ್ಚಿಮ ಭಾಗದ ಇ. ಇನ್ಸ್ಪೆಕ್ಟರರಾದ ರಸ್ಸಲ್ ಸಾಹೇಬರವರು ಕನ್ನಡ ಭಾಷೆಯಲ್ಲಿ ವಿದ್ಯಾರ್ಥಿಗಳಿಗಾಗಿ "ವರ್ಣ ನ್ಯಾಯದ" ಯೆಂಬ ಹೆಸರಿನದೊಂದು ಬಹುಮಾನದ ಸಲುವಾಗಿ ಕೊಡಲ್ಪಟ್ಟ ೧೦೦೦ ರೂಪಾಯಿಯು ಸರಕಾರೀ ಪ್ರಾಮಿಸರೀ ನೋಟಿಗೆ (ಪ್ರಾಂಮೀ ನೋಟಿಗೆ) ಪ್ರತಿವರ್ಷಕ್ಕೆ ಶೇಕಡಾ ೪ ರೂಪಾಯಿಯಂತೆ ಬರುವ ಬಡ್ಡಿಯ ಸಂಬಂಧದ ಅಸಲು ಕಾಗದ ಪತ್ರಗಳು ಸುರಕ್ಷಿತವಾಗಿ ಕಳಿಸಲ್ಪಟ್ಟ ಆಕ್ಟಿಂಗ ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರ ಪತ್ರ ನಂಬರು ೯೦೩ ತಾರೀಖು ೨೪ ನೇ ಜೂನ ಸನ್ನ ೧೮೭೩ ನೇ ಇಸವಿಯದು, ಸದರೀ ಹಣವನ್ನು ಸ್ವೀಕರಿಸುವದಕ್ಕೋಸ್ಕರ ಸರಕಾರದವರ ಮಂಜೂರಿಯ ಸಲುವಾಗಿ ಬರೆಯಲ್ಪಟ್ಟಿತ್ತು.

ಸರಕಾರದವರ ಪತ್ರ ನಂಬರು೫೮೩ ಸನ್ನ ೧೮೭೩ ಇಸವಿಯದಕ್ಕೆ ಪ್ರತ್ಯುತ್ತರವಾಗಿ ಅಕೌಂಟಂಟ ಜನರಲ್ ಇವರಿಂದ ಕಳಿಸಲ್ಪಟ್ಟ ರಿಜಿಸ್ಟರ್ ನಂಬರು ಎಲ್. ಎಫ್. ೩೯೪ ತಾರೀಖು೨೯ ನೇ ಜೂನ ಸನ್ನ ೧೮೭೩ ನೇ ಇಸವಿಯದು,—ರಸ್ಸಲ್ ಸಾಹೇಬರು "ವರ್ಣ ನ್ಯಾಯದ" ಸಲುವಾಗಿ ೧೦೦೦ ರೂಪಾಯಿಯನ್ನು ಸ್ವತಃ ಕೊಟ್ಟದರಿಂದ, ಆ ಹಣವನ್ನು

೩೯೮

ಸರಕಾರದವರು ಸ್ವೀಕರಿಸಿದರೆ, ಅದು ಸ್ವತಂತ್ರವಾದ ರೊಕ್ಕದ ಧಂದೆಯು ಬಾಬತಾಗಲಿಕ್ಕೆ ಅಡ್ಡಿಯಿಲ್ಲೆಂಬ ತಾತ್ಪರ್ಯವು.

ಠರಾವು (ರಿಝೊಲ್ಯೂಶನ್)

ಈ ಹಣವು ಸ್ವೀಕರಿಸಲ್ಪಡತಕ್ಕದ್ದು, ಮತ್ತು ರಸ್ಸಲ್ ಸಾಹೇಬರ ಸಾರ್ವಜನಿಕೋಪಯೋಗಿ ಉದ್ದೇಶವನ್ನು ಕೊನೆಗಾಣಿಸುವದಕ್ಕೋಸ್ಕರ ಅದು ಪ್ರತ್ಯೇಕ ರೊಕ್ಕದ ಧಂದೆಯಾಗಿ ಯೋಜಿಸಲ್ಪಡತಕ್ಕದ್ದು.

(Signed) C. Gonne.

ಸರಕಾರದವರ ಸೆಕ್ರೆಟರಿ

ಯಥಾರ್ಥವಾದ ಭಾಷಾಂತರವು.

Venkat Rungo Katti Canarese Translator.

೪. ಭುಜಂಗರಾಯ ಹುಯಿಲಗೋಳ ಇವರ ಸುತ್ತೋಲೆಗಳು

೪.೧

ಪ್ರವೇಶ ಪರೀಕ್ಷೆಯ ವಿಷಯಕ್ಕೆ.

ಬೆಳಗಾವಿ ಟ್ರೇನಿಂಗಕಾಲೇಜದಲ್ಲಿ ಅಭ್ಯಾಸ ಮಾಡಲಿಚ್ಛಿಸುವವರಿಗೆ ತಿಳಿಯ ಪಡಿಸುವದೇನಂದರೆ—ಸದರ ಪರೀಕ್ಷೆಯು ತಾರೀಖು೯ ನೇ ಮಾಹೆ ಸಪಟೆಂಬರ ಸನ್ನ೧೮೭೫ ನೇ ದಿವಸಾ ಟ್ರೇನಿಂಗಕಾಲೇಜದಲ್ಲಿಯೂ, ಧಾರವಾಡ, ಕಲಾದಗಿ, ಕಾರವಾರ ಡಿಪುಟಿ ಎಜ್ಯುಕೇಶನಲ್ ಇನಸ್ಪೇಕ್ಟರವರ ಆಫೀಸಗಳಲ್ಲಿಯೂ ಆಗುವದು. ಆದರೆ ಈ ಪರೀಕ್ಷೆಯನ್ನು ಕೊಡಲಪೇಕ್ಷಿಸುವವರು ಎರಡು ದಿನ ಪೂರ್ವದಲ್ಲಿಯೇ ಆಯಾಯ ಸ್ಥಳಗಳಲ್ಲಿ ಹಾಜರಾಗಿ, ತಾವು ಅಭ್ಯಾಸ ಮಾಡಿರುವ ಶಾಲೆಯ ಮಾಸ್ತರರ ಕಡೆಯಿಂದ, ತಮ್ಮ ವರ್ತನೆಕ್ಕೋಸ್ಕರ ಸರ್ಟೀಫಿಕೀಟಗಳನ್ನು ತೆಗೆದುಕೊಂಡು ಬಂದು, ತಮ್ಮ ಹೆಸರು ಪರೀಕ್ಷೆಯ ಪಟ್ಟಿಗೆ ದಾಖಲು ಮಾಡಿಸಬೇಕು. ಈ ಪರೀಕ್ಷೆಯು ಅತ್ಯಕಡಿಗೆ ಠರಾವಾದ ವಯಸ್ಸು ಪ್ರಾಯದವರ್ಷದಂತೆ ಅಂದರೆ ಎಷ್ಟಯಂತೆ ಆಗುವದು

ಕನ್ನಡ ಛಾಪಿಯ ಎರಡನೇ ಪುಸ್ತಕವು ಸಿದ್ಧವಾಗಿರುವ ಸ್ಥಳದ ಕಾರಣಾ ಮೊದಲನೇ ಪುಸ್ತಕದಲ್ಲಿಯೇ ಉಮೇದವಾರರು ಪರೀಕ್ಷಿಸಲ್ಪಡುವರು. ತಿಳಿಯುವದು ತಾರೀಖು೩ ನೇ ಜುಲಾಯಿ ಸನ್೧೮೭೫ ಇಸವಿ.

(Signed) B. K. HOOLGOAL.

ಪ್ರಿನಸಿಪಾಲ್. ಟ್ರೈ. ಕಾ. ಬೆಳಗಾವಿ.

(Signed) J. F. FLEET.

ಅಕ್ಟಿಂಗ ಎ. ಇ. ಪಶ್ಚಿಮಭಾಗ.

೪.೨

ನೋಟೀಸು.

[illegible]

ತಾ. ೨೩ ಜುಲೈ
ಸನ್ ೧೮೮೦

B. K. Hoo
ಪ್ರತಿನಿಧಿ [illegible]

ಶಾಲಾ ಪತ್ರಕವು ೧೮೮೦, ೧೬/೬ ಪುಟ ೧೬೮

೫. ರೊದ್ದರಾಯರ ಸುತ್ತೋಲೆಗಳು

೫.೧

ಜಾವಕನಂಬರು ೧೧೦೪

ಧಾರವಾಡ ಜಿಲ್ಹೆಯೊಳಗಿನ ಯಾವತ್ತೂ ಸ್ಕೂಲಮಾಸ್ತರರಿಗೆ-
ಳಿಗೆ ಸಹೀ ಮಾಡುವವರ ಕಡೆಯಿಂದ ನೋಟೀಸು ಕೊಡಲ್ಪಡುವ
ದೇನಂದರೆ_ಇನ್ನು ಮುಂದೆ ಯಾವ ಊರುಗಳಲ್ಲಿ ಹೊಸ ಶಾಲೆಗ
ಳು ಕಟ್ಟಿಸಲ್ಪಡುವವೋ ಆ ಶಾಲೆಗಳದರಿಯ ಹತ್ತೀವ ಅರ್ಧಾ
ಖರ್ಚ ಊರವರು ಕೊಡಬೇಕು. ಅಂದರೆ ಉಳಿದ ಅರ್ಧಾ ಖ
ರ್ಚ ಸರಕಾರದಿಂದ ಸಿಗುವದಲ್ಲದೆ. ಇಮಾರತಿಗಳಿಗೆ ಹತ್ತೀವ
ಕಟ್ಟಿಗೆಯು ಖರ್ಚ ಮುಫತ ಸಿಗುವದು. ಈ ಮಾಡಕೂರು ಮಾಸ್ತ
ರರು ತಮ್ಮ ತಮ್ಮ ಶಾಲೆಗಳ ಪಂಚರಿಗೆ ಮುಟ್ಟ ಗ್ರಾಮಸ್ಥರಿಗೆ
ತಿಳಿಸಬೇಕು. ತಾ. ೧/೯/ ೧೮೮೧ ಇಸ್ವಿ.

S K. Rodda
ಡೆ. ಎ. ಇ. ಜಿಲ್ಹಾ ಧಾರವಾಡ.

ಹೀಗೆ ಪತ್ರಿಕೆ ಶಿಕ್ಷಣ ಇಲಾಖೆಯ ಮಹತ್ವದ ಬದಲಾವಣೇಗಳು, ಆದೇಶಗಳು ಮತ್ತು ವಿಷಯಗಳನ್ನು ತಿಳಿಸಬೇಕಾದಾಗ ಸುತ್ತೋಲೆಗಳ ಮುಖಾಂತರ ತಿಳಿಸಿದೆ.

೫.೬. ಪತ್ರಿಕೆಯ ಪ್ರಸ್ತುತತೆ ಮತ್ತು ಅನನ್ಯತೆ :

ಶಿಕ್ಷಣ, ವ್ಯಾಪಾರ, ಉದ್ಯೋಗ, ಧರ್ಮ, ವೈದ್ಯ, ವಿಜ್ಞಾನ, ಭೂಗೋಲಶಾಸ್ತ್ರ, ಆರ್ಥಿಕ, ಸಾಮಾಜಿಕ, ರಾಜಕೀಯ, ಪರಕೀಯ ಮತ್ತು ಮನೋರಂಜಕ ವಿಷಯಗಳೆಲ್ಲ ಇಲ್ಲಿ ಪ್ರಕಟಗೊಂಡಿವೆ. ಇವುಗಳಲ್ಲದೆ ಟ್ರೇನಿಂಗ ಕಾಲೇಜಿನ ಶಿಕ್ಷಕರು, ಪ್ರಾಚಾರ್ಯರು ಮತ್ತು ಅಧಿಕಾರಿಗಳು ಬರೆದ ಪುಸ್ತಕಗಳು ಧಾರಾವಾಹಿಯಾಗಿ/ಕಂತುಗಳಲ್ಲಿ ಇದರಲ್ಲಿ ಪ್ರಕಟಗೊಂಡಿವೆ ಅವುಗಳ ಸಂಪನ್ಮೂಲ ಶಬ್ದ ಶ್ರೀಮಂತಿಕೆಯನ್ನು ಗಮನಿಸಿದರೆ ಪ್ರಸ್ತುತ ಯಾವ ಹತ್ತು ಪದವಿ ಗಳಿಸಿದವರು ಇವರಿಗೆ ಸಮನಾಗಲಾರರು. ಇಂಥ ಪತ್ರಿಕೆಯ ವಸ್ತು ವಿಶ್ಲೇಷಣೆ ಮತ್ತು ಭಾಷೆ ಹಾಗೂ ಲಿಪಿಗಳ ವಿಶ್ಲೇಷಣೆ ಆಗಬೇಕಾದ್ದು ಅವಶ್ಯವಾಗಿದೆ. ವೈಜ್ಞಾನಿಕ ಲೇಖನಗಳಂತೂ ಈಗ್ಗೆ ೧೦೦ ವರ್ಷಗಳ ಹಿಂದೇ ಇಷ್ಟೂ ಫಲಪ್ರದವಾಗಿ ಪ್ರಕಟಗೊಂಡಿರುವುದನ್ನು ನೋಡಿದರೆ ಮತ್ತು ಆಂಗ್ಲ ಪದಗಳಿಗೆ ಪರ್ಯಾಯವಾಗಿ ಬಳಕೆಗೊಂಡಿರುವ ಕನ್ನಡ ಪದಗಳ ಶ್ರೀಮಂತಿಕೆಯು ಲೇಖಕನ ಜ್ಞಾನ ಶ್ರೀಮಂತಿಕೆಗೆ ಹಿಡಿದ ಕನ್ನಡಿಯಂತಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ವಿಷಯ ಮತ್ತು ಶಬ್ದ ಬಂಢಾರ ಇವುಗಳ ಸಂಪದ್ಭರಿತತೆ ಸಧ್ಯದ ಸನ್ನಿವೇಶಕ್ಕೆ ಬಹಳಷ್ಟು ಪ್ರಸ್ತುತವಾಗಿವೆ.

ಶಾಲಾ ಪತ್ರಕ ೪೮-೭ ಜುಲೈ ೧೯೧೨ರ ಸಂಚಿಕೆಯಲ್ಲಿ ಈ ವರ್ಷ ಜೂನ್ ತಿಂಗಳಲ್ಲಿ 'ವಿದ್ಯಾವಿಷಯಕ ಪ್ರದರ್ಶನವು' ನಡೆದ ಬಗೆಗೆಗಿನ ವರದಿ ಬಹು ಅನನ್ಯವಾಗಿದ್ದು ಪ್ರಸ್ತುತವೂ ಆಗಿದೆ. ಈ ಪ್ರದರ್ಶನದಲ್ಲಿ ಮಾಡಿದ ಪ್ರಯೋಗಗಳು ಮತ್ತು ವಸ್ತುಗಳ ಪ್ರದರ್ಶನ ಹಾಗೂ ಅವುಗಳ ವಿವರಣೆ ಕೊಡಲು ಒಬ್ಬೊಬ್ಬ ವಿದ್ಯಾರ್ಥಿಗಳು ನಿಂತುದು ಮುಂತಾದವೆಲ್ಲವನ್ನು ಓದಿದಾಗ ಈಗ ಮಾಡುತ್ತಿರುವ ವಿಜ್ಞಾನ ವಸ್ತು ಪ್ರದರ್ಶನ, ಕಲಿಕೋಪಕರಣಗಳ ಪ್ರದರ್ಶನ ಮುಂತದುವುವೆಲ್ಲ ಹೊಸ ಪರಿಕಲ್ಪನೆಗಳೇನೂ ಅಲ್ಲ ಎಂಬುದು ಗಮನಕ್ಕೆ ಬರುತ್ತದೆ. ಅಲ್ಲಿ ಪ್ರದರ್ಶಿತವಾದ ವಿಜ್ಞಾನೋಪಕರಣಗಳ ಹೆಸರುಗಳನ್ನು ಓದಿದಾಗ ಮತ್ತು ವಿದ್ಯಾರ್ಥಿಗಳೇ ಮಾಡಿದ್ದವುಗಳು ಎಂಬುದು ತಿಳಿದಾಗ ಸಖೇದಾಶ್ಚರ್ಯವಾಗುತ್ತದೆ. ಒಟ್ಟು ಹನ್ನೊಂದು ಪುಟಗಳ ಈ ವರದಿಯನ್ನೂ ತರಬೇತಿ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳೇ ಮಾಡಿದ್ದಾರೆ.

ಶೈಕ್ಷಣಿಕ ಪತ್ರಿಕಾ ಪ್ರಪಂಚದಲ್ಲಿ ಈ ಪತ್ರಿಕೆಯದ್ದೊಂದು ಅದ್ಭುತ ಸಾಧನೆ. ಪತ್ರಿಕೆಅಂದುಕೊಂಡಂತೆ ಕ್ರಮಬದ್ಧವಾಗಿ ಪ್ರಕಟವಾಗಿದೆ ಎಂದು ಹೇಳಲಾಗದು. ಆದರೆ ದೇಶದ ಏಳುಬೀಳು, ಆಳ್ವಿಕೆಯ ಪ್ರಭಾವಗಳು, ಲಭ್ಯತೆಯ ಕಾಲಿಕ ಅಡೆತಡೆಗಳು, ಕಾಲದ ಪರಿಣಾಮ ಇವು ಪತ್ರಿಕಾ ಪ್ರಪಂಚದ ಮೇಲೆ ಪ್ರಭಾವ ಬೀರಿವೆ. ರಾಷ್ಟ್ರೀಯ ಮತ್ತು ಶೈಕ್ಷಣಿಕ ಜೀವನ ಗತಿಯ ಮೇಲೆ ಪತ್ರಿಕೆ ಕೂಡ ಗಾಢವಾದ ಪರಿಣಾಮ ಬೀರಿದೆ. ಅದರ ಪ್ರಸಾರಕ್ಕಿಂತ ಪ್ರಭಾವ ಮತ್ತು ಪ್ರತಿಕ್ರಿಯೆಗಳು ಆಶ್ಚರ್ಯ ಹುಟ್ಟಿಸುತ್ತವೆ. ಸಮರ್ಥ ಸಂಪಾದಕರ ನೇತೃತ್ವದಲ್ಲಿ ಪ್ರಪಂಚದ ವಿಷಯಗಳ ಆಳ ಜ್ಞಾನದ ಹರಿವು ಇಂದಿಗೂ ಅಧ್ಯಯನ ಯೋಗ್ಯವಾಗಿವೆ.

ಶೈಕ್ಷಣಿಕ ಚಿಂತನ ಮಂಥನದ ಉದ್ದೇಶದಿಂದ 'ಕನ್ನಡ ಜ್ಞಾನಬೋಧಕ'ವಾಗಿ ಅದೇ ಹೆಸರನ್ನೇ ಹೊತ್ತು ೧೯೬೧ರಲ್ಲಿ ಆರಂಭವಾದ ಈ ಪತ್ರಿಕೆ ಶಿಕ್ಷಣ ಇಲಾಖೆಯ ಜ್ಞಾನಗಂಗೋತ್ರಿಯಾಗಿದೆ. ಇದು ಮತಪತ್ರಿಕೆಯಾಗಿ ಆರಂಭದಲ್ಲಿ ಶೈಕ್ಷಣಿಕ ವಿಚಾರಗಳನ್ನು ಮತ್ತು ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಹೊಸ ವಿಚಾರ ತಿಳುವಳಿಕೆ ಪತ್ರಗಳು, ಸೂಚನೆಗಳು ಹಾಗೂ ಸುತ್ತೋಲೆಗಳು, ಇಸ್ತಿಯಾರನಾಮೆಗಳು ಮತ್ತು ನೋಟಿಸುಗಳನ್ನು, ಶಿಕ್ಷಣದ ಇತಿಮಿತಿಗಳನ್ನು ಧಾರವಾಡ ವಿಭಾಗದ ಶಿಕ್ಷಕರಿಗೆಲ್ಲ ತಿಳಿಸುತ್ತ, ಆರಂಭವಾಗಿ ತನ್ನನ್ನು ಗುರುತ್ವವನ್ನು

ಸ್ಥಾಪಿಸಿಕೊಂಡಿದೆ. ನಂತರಶಿಕ್ಷಣ ಪದ್ಧತಿಯ ಕುರಿತಾಗಿ ಬರೆಯುತ್ತ ಕ್ರಮೇಣ ಶಿಕ್ಷಣ ಸಾಹಿತ್ಯ ಅಂದರೆ ಪಠ್ಯವಿಷಯಗಳನ್ನು ಪ್ರಕಟಿಸಿದೆ. ನಂತರ ಆ ಪಠ್ಯ ವಿಷಯಗಳಲ್ಲಿ ಜಟೀಲವಾದುವುಗಳ ಪರಿಹಾರಕ್ಕೆ ಪರಸ್ಪರ ಶಿಕ್ಷಕರಲ್ಲಿ ಚರ್ಚೆ ನಡೆದಿದೆ. ಮೆಲ್ಲನೆ ತನ್ನ ಹರುವನ್ನು ವಿಸ್ತರಿಸಿಕೊಳ್ಳುತ್ತ ಇದು ಶಿಕ್ಷಣ ಸಾಹಿತ್ಯದೊಡನೆ, ಸಾಹಿತ್ಯಿಕ ಚಿಂತನೆಗಳಿಗೆ ಕೈ ಚಾಚಿದೆ. ಅಂದಿನ ಆ ವಿಚಾರಗಳು, ಲೇಖನಗಳು ಮತ್ತು ಬರಹದ ಗಾಢತೆಯನ್ನು ಗಮನಿಸಿದರೆ ಇಂದಿಗೂ ಆ ಬರಹಗಳ ಸಮಾನವಾದವು ಹುಟ್ಟಲಾರವು. ಸಾಮಾಜಿ, ವೈದ್ಯಕೀಯ, ಮತ್ತು ಸಾಂಸ್ಕೃತಿಕ ಲೋಕಕ್ಕೂ ಇದು ತನ್ನನ್ನು ತೆರೆದುಕೊಂಡಿದೆ. ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಮೊದಲರ್ಧಭಾಗದಲ್ಲಿ ಸಾಹಿತ್ಯದ, ಕನ್ನಡ ಭಾಷೆಯ, ಕನ್ನಡ ನಾಡಿನ, ಕನ್ನಡ ನೆಲದ, ಕನ್ನಡ ಸಂಘಗಳ ಮತ್ತು ಕನ್ನಡಕ್ಕಾಗಿ ಶ್ರಮಿಸಿದವರ, ಆ ಕೈಂಕರ್ಯದಲ್ಲಿ ತಮ್ಮನ್ನೇ ಅರ್ಪಿಸಿಕೊಂಡವರ, ಅವರ ಕೃತಿಗಳನ್ನು ಇದು ಪರಿಚಯಿಸುತ್ತದೆ. ಮ.ಪ್ರ. ಪೂಜಾರರ ಕಾವ್ಯಧರ್ಮಗಳ ಪರಾಮರ್ಶೆ, ತ.ನಾ. ಅಮ್ಮಿನಭಾವಿಯವರ ಲೇಖನಗಳು, ಶ್ರೀರಂಗರ ಕನ್ನಡ, ಕರ್ನಾಟಕ ಕುರಿತ ವಿಚಾರಗಳು, ಶೈಕ್ಷಣಿಕ ಸಮ್ಮೇಳನಗಳು ಮತ್ತು ಅಲ್ಲಿ ನಡೆದ ಕಾರ್ಯಕಲಾಪಗಳು, ಪುಸ್ತಕಗಳ ಪರಿಚಯ, ಕವನಗಳ ಪ್ರಕಟಣೆ, ಆಳಸರ ಕುರಿತು ಛಂದಸ್ಸಿನ ಚೌಕಟ್ಟಿನೊಳಗೆ ಬರೆದ ಕವಿತೆಗಳು, ರಾಜಶೇಖರ ವಿಳಾಸ ಮತ್ತು ಶಬ್ದಮಣಿದರ್ಪಣಕ್ಕೆ ಬರೆದ ಟೀಕುಗಳು.... ಪಟ್ಟಿ ಮಾಡುತ್ತ ಹೋದರೆ 'ಸಾಹಿತ್ಯ' ಎನಿಸಿಕೊಂಡದ್ದರೊಳಗಿನ ಯಾವುದೂ ಇಲ್ಲಿ ಬಿಟ್ಟುಹೋಗಿಲ್ಲ. ಹೀಗೆ ಸಾಹಿತ್ಯಿಕವಾಗಿ ಒಂದೊಂದೇ ಹೆಜ್ಜೆಗಳನ್ನು ಊರುತ್ತ ತನ್ನ ಮಾರ್ಗವನ್ನು ಗಟ್ಟಿಗೊಳಿಸಿಕೊಂಡಿದೆ. ಆರಂಭದಲ್ಲಿದ್ದುದೇ ಶಿಕ್ಷಣ ಸಾಹಿತ್ಯ; ಶಿಕ್ಷಣಕ್ಕಾಗಿ ಹುಟ್ಟಿದ ಸಾಹಿತ್ಯ. ಉನ್ನತ ಶಿಕ್ಷಣ ಆರಂಭವಾದುದು ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ. ಆ ನಂತರವೇ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ಪಠ್ಯವಿಷಯಗಳು ನಿರ್ಧಾರಗೊಂಡದ್ದು. ಹಾಗಾಗಿ ಕನ್ನಡ ಸಾಹಿತ್ಯದ ಬೇರು ಈ ಶಿಕ್ಷಣ ಸಾಹಿತ್ಯವೇ. ಸಾಹಿತ್ಯಿಕ ಘಟ್ಟದ ಮೈಲಿಗಲ್ಲು ಇದು. ನಂತರ ಬಂದವರು ಉನ್ನತ ಸಾಹಿತ್ಯ ಓದಿ, ಹೊಳೆ ದಾಟಿದ ಮೇಲೆ, ಈ ಪ್ರಾಥಮಿಕ ಶಿಕ್ಷಣ ಮತ್ತು ಸಾಹಿತ್ಯವನ್ನು ಕಡೆಗಣಿಸಿದ್ದು ಮತ್ತು ಸಾಹಿತ್ಯದ ಆದಿ ಚಿಂತಕರನ್ನು ಶಿಕ್ಷಕರೆಂದು ಕರೆದು, ಸೀಮಿತಗೊಳಿಸಿದ್ದು ಎಷ್ಟರಮಟ್ಟಿಗೆ ಸರಿ? ಐದು ವರ್ಷಗಳವರೆಗೆ ಅಧ್ಯಯನ ಮಾಡಿ ಸಂಗ್ರಹಿಸಿ ಹೊರ ತಂದ ಗಂಗಾಧರ.ಮ. ತುರಮರಿಯವರ 'ಕವಿತಾ ಸಂಗ್ರಹ' ಸಾಹಿತ್ಯದ ಮಹಾದ್ವಾರ. ಅದರ ಮೂಲಕವೇ ಉಳಿದವರು ಹಾದುಹೋದದ್ದು. ಬೋಳುಬಯಲಿನಲ್ಲಿ ಆಲಯ ನಿರ್ಮಿಸಿದಂತೆ ಸಾಹಿತ್ಯ ಗ್ರಂಥಗಳ ಅಡಕಲನ್ನೇ

ನಿರ್ಮಿಸಿದುದಲ್ಲದೇ, ಕನ್ನಡ ಸಾಹಿತ್ಯವನ್ನು ಆಚರಿಸಿ ತೋರಿದ ಬಾಳಾಚಾರ್ಯರು ಒಬ್ಬ ಶಿಕ್ಷಕರಾಗಿದ್ದರೆಂಬುದು ಶಿಕ್ಷಕ ಲೋಕದ ಹೆಮ್ಮೆ. ಅಂದು ಶಿಕ್ಷಕರಾಗಿದ್ದವರಿಗೆ ಸಾಧ್ಯವಾದದ್ದು ಇಂದು ಪ್ರಾಧ್ಯಾಪಕರಿಗೂ ಸಾಧ್ಯವಾಗಿಲ್ಲ ಮತ್ತು ಸಾಧ್ಯವಿಲ್ಲ. ಬರುಬರುತ್ತ ಸಾಹಿತ್ಯಿಕ ಕಾರ್ಯಗಳೊಂದಿಗೆ ವೃತ್ತಿನಾಮಗಳು ಮತ್ತು ವೃತ್ತಿವೃಂದಗಳು ಥಳಕು ಹಾಕಿಕೊಂಡದ್ದು ಸಾಹಿತ್ಯಿಕ ಲೋಕದ ದುರಂತವೇ ಸರಿ. ಇಂಥ ಮಹಾನ್ ಸಾಹಿತ್ಯ ದಿಗ್ಗಜರ ಬರಹಗಳು ಮಿಡಿಯುವ ಹೃದಯವಾದರೆ, ಮಿಡಿತಕ್ಕೆ ದೇಹವಾಗಿ ಸ್ಪಂದಿಸಿ, ವೇದಿಕೆಯಾದದ್ದು ಈ ಜ್ಞಾನಬೋಧಕ ಪತ್ರಿಕೆ. ಟ್ರೇನಿಂಗ ಕಾಲೇಜಿನ ಇತಿಹಾಸವೆಂದರೆ ಸಾಹಿತಿಗಳ ಮತ್ತು ಪತ್ರಿಕೆಯ ಇತಿಹಾಸವೇ ಆಗಿದೆ. ಈ ಮೂರರ ಚರಿತ್ರೆಯನ್ನು ಪ್ರತ್ಯೇಕವಾಗಿ ಹೇಳುವುದು ಅಸಾಧತ್ತೀ ಮೂರು ಕಾಯ, ಕಾಯಕ ಮತ್ತು ಕೃರ್ತ್ಯಗಳಿದ್ದಂತೆ. ಟ್ರೇನಿಂಗ ಕಾಲೇಜು, ಶಿಕ್ಷಕ ಸಾಹಿತಿಗಳು ಮತ್ತು ಪತ್ರಿಕೆ ಈ ಮೂರು ಅಂಶಗಳು ಅಖಂಡ ವಾಕ್ಯದಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳಾಗಿವೆ. ವಿದ್ಯಾರ್ಥಿಗಳಾದಿಯಾಗಿ ವಿದ್ಯಾಧಿಕಾರಿವರೆಗೆ, ಕನ್ನಡಿಗರಾದಿಯಾಗಿ ಪಾಶ್ಚಾತ್ಯರವರೆಗೆ, ಶಿಕ್ಷಣ ಇಲಾಖೆಯ ಚಿಕ್ಕ ಪ್ರಕಟಣೆಗಳಿಂದ ಮಹಾನ್ ಟೀಕೆ, ವ್ಯಾಖ್ಯಾನಗಳವರೆಗೆ ಎಲ್ಲ ವಿಷಯಗಳಿಗೂ, ವ್ಯಕ್ತಿ ಮತ್ತು ವಸ್ತುವಿನ ಚಿತ್ರ ಸಹಿತ ಮಾಹಿತಿಗಳಿಗೆ ಮಡಿಲುಹಾಸಿದ ಪತ್ರಿಕೆ ಸಾವಿರದ ವಿಷಯಗಳ ಆಗರವಾಗಿದೆ; ಹಲವು ಪ್ರಥಮಗಳ ದಾಖಲೆಯಾಗಿದೆ; ಶೈಕ್ಷಣಿಕ ತೊಡಕುಗಳಿಗೆ ಪರಿಹಾರ್ಯವಾಗಿದೆ; ಈ ಪತ್ರಿಕೆಯ ಸಾಹಿತಿಗಳ ಪಟ್ಟಿ ಮಾಡಿದರೆ ಸಂಖ್ಯೆ ಸಾವಿರ ದಾಟುತ್ತದೆ. ಸಾಹಿತಿಗಳ ಪಡೆಯನ್ನು ಕಟ್ಟಲು ಕೇಂದ್ರಬಿಂದು, ಕೂಡಲಸಂಗಮವಾದುದು ಈ ಪತ್ರಿಕೆ. ಹಲವಾರು ಜನರನ್ನು ಸಾಹಿತಿಗಳನ್ನಾಗಿಸಿದೆ ಈ ಪತ್ರಿಕೆ. ನಾಡಿನ ಯಾವುದೋ ಮೂಲೆಯಲ್ಲಿದ್ದವರಿಗೆ ಇನ್ನಾವುದೋ ಮೂಲೆಯಲ್ಲಿದ್ದ ವಿಚಾರವಂತರ ಪರಿಚಯ ಮತ್ತು ವಿಚಾರಗಳನ್ನು ತಲುಪಿಸಿದ ವಾಹಿನಿಯಾಗಿತ್ತು ಈ ಪತ್ರಿಕೆ. ಒಂದುವರೆ, ಎರಡು ಶತಮಾನಗಳಾಚೇಗಿನ ಸ್ಪಂದನದ ನಾಡಿ ಮಿಡಿತವಾಗಿದೆ. ತಾವು ಹಾಕಿಕೊಂಡ ರೂಪರೇಷೆ ಮತ್ತು ಧ್ಯೇಯಗಳನ್ನು ಪಾಲಿಸಿಕೊಂಡು ಆರಂಭದ ಕಗ್ಗಾಡನ್ನು ಹಾಯ್ದು, ಕಾಲ್ದಾರಿ ನಿರ್ಮಿಸಿಕೊಂಡು, ಮುಂದೆ ಬರುವವರಿಗೆ ರಾಜಮಾರ್ಗವನ್ನೇ ನಿರ್ಮಿಸಿದವು. ಶಿಕ್ಷಣ ಮತ್ತು ಸಾಹಿತ್ಯದ ಧೋರಣೆಗೆ ಎಲ್ಲಿಯೂ ಚ್ಯುತಿಬಾರದಂತೆ, ಇಲಾಖೆಯ ಆಜ್ಞೆ ಮೀರದಂತೆ, ಚಿತ್ತಚಾಂಚಲ್ಯಕ್ಕೆ ಆಸ್ಪದವೀಯದೆ, ಸಂಪಾಕೀಯ ಶ್ರದ್ಧೆಯಿಂದ ಮಾಡಿದ ಕಾರ್ಯ ಪತ್ರಿಕೆಯ ಶ್ರೇಯಸ್ಸಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಪತ್ರಿಕೆ ಸಾಹಿತ್ಯದ ಅರುಣೋದಯದ ಕಿರಣವೂ, ಹೊಂಬಣ್ಣವೂ ಆಗಿ, ಕನ್ನಡದ ಪುನರುತ್ಥಾನಕ್ಕೆ ಮುನ್ನುಡಿಯಾಗಿದೆ. ಕನ್ನಡದ ಪ್ರಜ್ಞೆ ಜಾಗೃತವಾದಂತೆಲ್ಲ ತನ್ನ ಹರವನ್ನು ಹೆಚ್ಚಿಸಿಕೊಳ್ಳುತ್ತ ನಡೆದ ಪತ್ರಿಕೆಯದ್ದು ಶಬ್ದಕ್ರಾಂತಿ, ಮೌನಕ್ರಾಂತಿ.

ಮಧ್ಯಮಧ್ಯದಲ್ಲಿ ಹಲವಾರು ಅಡೆತಡೆಗಳಿಂದಾಗಿ ನಿಂತುಹೋಗಿದ್ದರೂ, ಮತ್ತದೇ ಮಾರ್ಗದಲ್ಲಿ ಸಾಗಿ, ಪ್ರಕಟಗೊಳ್ಳುತ್ತಲೇ ಬಂದಿದೆ. ಅಲ್ಲಲ್ಲಿ, ಆಗಾಗ ಉಸಿರುಗಟ್ಟುವ ಪರಿಸ್ಥಿತಿ ಬಂದೊದಗಿದ್ದರೂ ನಿಂತುಹೋಗದೆ, ಬದುಕಿ, ತನ್ನತನ ಉಳಿಸಿಕೊಂಡು, ಪ್ರಕಟಗೊಳ್ಳುತ್ತಿರುವ ಈ ಪತ್ರಿಕೆಯು ಈಗ ೧೫೦ ವರ್ಷಗಳನ್ನು ದಾಟಿದ ಸಂಭ್ರಮದಲ್ಲಿದೆ.

ಕೊನೆ ಟಿಪ್ಪಣಿಗಳು

೧. 'ವಿಚಾರ ಕರ್ನಾಟಕ' ತಿ.ತಾ.ಶರ್ಮಾ, ಪುಟ ೧೦೩, ಪುರೋಗಾಮಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ೧೦ನೆಯ ಕ್ರಾಸ್, ಬೆಂಗಳೂರು, ೧೯೭೦,

೨. 'ಜೀವನ ಶಿಕ್ಷಣ' ನ.ಡಿ.ಜನವರಿ ೧೯೫೭-೫೮

೩. ಕ.ಪ್ರಾ.ಶಿ. ೮೦/೧೨, ಪುಟ ೨, ಏಪ್ರೀಲ್-೧೯೪೧

೪. ಕ.ಪ್ರಾ.ಶಿ. ಸಂ೮೮, ಸಂ೧, ಏಪ್ರೀಲ್/ಮೇ-೧೯೪೮

೫. ಶಾಲಾ ಪತ್ರಕ ೮/೧೦, ೨೦ ಜನೇವರಿ ೧೮೭೩

೬. ಕ.ಪ್ರಾ.ಶಿ. ೭೮/೧೨ ಹಿಂದಿನ ರಕ್ಷಾಪುಟ, ಮಾರ್ಚ ೧೯೪೦

೭. ಕನ್ನಡ ಶಾಲಾಪತ್ರಕ, ೬೨-೧/೨, ಕೊನೆಯ ಜಾಹೀರಾತು ಪುಟ, ಎಪ್ರೇಲ/ಮೇ-೧೯೨೫

೮. ಕನ್ನಡ ಶಾಲಾಪತ್ರಕ, ೬೨-೧೦, ಪುಟ ೧೨, ಜನೇವರಿ-೧೯೨೬

೯. ಶಾಲಾ ಪತ್ರಕ ಪು-೯ರ ಸಂ-೧೨, ,ಪುಟ ಸಂಖ್ಯೆ ೫೬೮-೫೭೦ ನವೆಂಬರ-೧೮೭೩

೧೦. ಶಾಲಾಪತ್ರಕ ಪು ೧೦ ಸಂ ೯, ಪುಟ ೧೯೪-೧೯೭ ಡಿಸೆಂಬರ್-೧೮೭೪

೧೧. ಅದೇ- ಪುಟ-೨೨೦

೧೨. ಶಾಲಾಪತ್ರಕ ಪು ೧೧ ಸಂ ೪, ಪುಟ-೭೩-೭೪, ಜುಲಾಯಿ-೧೮೭೫

೧೩. ಶಾಲಾಪತ್ರಕ ಪು ೧೧ ಸಂ ೧೦, ಪುಟ-೨೨೧, ಜಾನೇವಾರೀ-೧೮೭೬

೧೪. ಶಾಲಾಪತ್ರಕ ಪು ೧೧ ಸಂ ೧೧, ಪುಟ-೨೪೩-೨೪೪ ಫೆಬ್ರುವಾರೀ-೧೮೭೬

೧೫. ಶಾಲಾಪತ್ರಕ ಪು ೧೧ ಸಂ ೧೨, ಪುಟ-೨೬೬-೨೬೭, ಮಾರ್ಚ-೧೮೭೬

೧೬. ಶಾಲಾಪತ್ರಕ ಪು ೧೨ ಸಂ ೪, ಪುಟ-೩೯೦-೩೯೨ರಲ್ಲಿದೆ, ಜುಲಯಿ-೧೮೭೬

೧೭. ೧೭-ಶಾಲಾಪತ್ರಕ ಪು ೧೨ ಸಂ ೫, ಪುಟ-೩೯೮-೪೦೪, ಅಗಷ್ಟ-೧೮೭೬

೧೮. ೧೮ಶಾಲಾ ಪತ್ರಕ ೨೨, ಸಂಚಿಕೆ ೭, ಪುಟ ಸಂಖ್ಯೆ ೧೫೧/೧೫೨, ಜುಲೈ-೧೮೮೭,

೧೯. ಶಾಲಾ ಪತ್ರಕ- ಪುಟ-೮೦-೮೧, ಎಪ್ರೀಲ-೧೮೮೯

೨೦. ಶಾಲಾ ಪತ್ರಕ ೪೫/೮, ಪುಟ-೨೪೬-೨೫೩, ೧೯೦೯

೨೧. ಕನ್ನಡ ಶಾಲಾ ಪತ್ರಕ ಸಂ೬೧, ಸಂ೫ ಪುಟ ೧೧ ಮತ್ತು ೧೨, ಅಗಸ್ಟ ೧೯೨೪

೨೨. ಕನ್ನಡ ಪ್ರಾಥಮಿಕ ಶಿಕ್ಷಣ, ಸಂ೬೮, ಸಂ೮/೯, ಪುಟ ೧೦, ೧೯೩೧

೨೩. ಶಾಲಾ ಪತ್ರಕ ೮-೧೧ ಫೆಬ್ರುವರಿ ೨೩ ೧೮೭೩

೨೪. ಜೀವನ ಶಿಕ್ಷಣ, ಸಂ೧೧೧ ,ಸಂ೨, ಹ.ಗ.ಜೋಶಿ, ಸಂಪಾದಕೀಯ-ನಾವ್ ಬರ್ತೇವಿನ್, ಮಾರ್ಚ-೧೯೭೫

ಅಧ್ಯಾಯ : ೬

ಸ್ವಾತಂತ್ರ್ಯೋತ್ತರದ ಬೆಳವಣಿಗೆ

೬.೧. ಮಡಿಲಾಗಿ ಟ್ರೇನಿಂಗ್ ಕಾಲೇಜ್

೬.೨. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

೬.೩. ಟ್ರೇನಿಂಗ ಕಾಲೇಜ ಆಚರಿಸಿದ ಶತಮಾನೋತ್ಸವಗಳು

ಅಧ್ಯಾಯ ೬
ಸ್ವಾತಂತ್ರ್ಯೋತ್ತರದ ಬೆಳವಣಿಗೆ

೬.೧. ಮಡಿಲಾಗಿ ಟ್ರೇನಿಂಗ್ ಕಾಲೇಜ್

ಕನ್ನಡ ನಾಡು ಪ್ರಾಚೀನ ಕಾಲದಲ್ಲಿ ಸ್ವತಂತ್ರವಾಗಿ ತನ್ನದೇ ಆದ ರೀವಿಯಲ್ಲಿತ್ತು. ಐತಿಹಾಸಿಕ ಕಾಲದಲ್ಲಿ ಹಲವಾರು ರಾಜರ ಸಂಸ್ಥಾನಿಕರ ಆಡಳಿತಕ್ಕೊಳಪಟ್ಟು ಬೆಳೆಸಿದಂತೆ ಬೆಳೆದ, ಕಂಡವರ ಕೈಗೂಸಾಗಿ ಶೈಶವಾವಸ್ಥೆಯಲ್ಲಿತ್ತು. ಬ್ರಿಟಿಷರ ಆಗಮನದಿಂದ ವ್ಯಾಪಾರಕ್ಕಾಗಿ ಮತ್ತು ವ್ಯವಹಾರದ ಸುಗಮತೆಯ ತಕ್ಕಮಟ್ಟಿನ ಅಗತ್ಯಕ್ಕಾಗಿ ಕನ್ನಡ ಮತ್ತು ಶಿಕ್ಷಣ ಗಮನಿಸಲ್ಪಟ್ಟವು. ಹೀಗೆ ಬ್ರಿಟಿಷರ ದೂರಾಲೋಚನೆಯೋ, ದುರಾಲೋಚನೆಯೋ ಅಂತೂ ಕನ್ನಡ ಶಿಕ್ಷಣ ಅಂಬೆಗಾಲಿಟ್ಟು, ಕ್ರಮೇಣ ಬೆಳೆಯತೊಡಗಿತು. ಆರಂಭದ ಪೀಳಿಗೆಯ ಕಲಿಕಾರ್ಥಿಗಳು, ಅದರಲ್ಲೂ ನಾಡಿನ, ನುಡಿಯ ಬಗೆಗಿನ ಚಿಂತಕರು ಶಿಕ್ಷಣದ ತಾತ್ವಿಕತೆಯ ಮತ್ತು ರೂಪರೇಷೆಯ ಬಗೆಗೆ ಚಿಂತಿಸಿ, ಹೋರಾಟ ನಡೆಸಿ, ಬೇಡಿಕೆ ಮಂಡಿಸಿ ಗುರುತರವಾದ ಬದಲಾವಣೆಗಳನ್ನು ಶಿಕ್ಷಣದಲ್ಲಿ ತಂದುದನ್ನು ನಾವು ಕಾಣುತ್ತೇವೆ.

ಸ್ವಾತಂತ್ರ್ಯ ದೊರೆತ ಮೇಲೆ ಶೈಕ್ಷಣಿಕ ಕ್ಷೇತ್ರವು ಇತರ ಕ್ಷೇತ್ರಗಳಿಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಿತು. ಅದುವರೆಗಿದ್ದ ಔಪಚಾರಿಕ ಶಿಕ್ಷಣ ಮತ್ತು ಸಂಸ್ಥೆಗಳು ಕನ್ನಡದ ಜನರ ನವೀಕೃತ ಬದುಕು ಮತ್ತು ಭಾವನೆಗಳಿಗೆ ಈಡಾಗಲಿಲ್ಲ. ಆಗ ಹೊಸ ಹೊಸ, ಉನ್ನತ ಶಿಕ್ಷಣ ಸಂಸ್ಥೆಗಳು ತಲೆ ಎತ್ತತೊಡಗಿದವು. ಸ್ವಾತಂತ್ರ್ಯ ಹೋರಾಟದೊಂದಿಗೆ ಸಾಮಾಜಿಕ ನ್ಯಾಯ, ಸಮಾನತೆ ಶಿಕ್ಷಣದ ಮೇಲೆ ಭಾರಿ ಪರಿಣಾಮವನ್ನುಂಟು ಮಾಡಿತು. ಯುಪೀಳಿಗೆಯಲ್ಲಿ ತಮ್ಮತನದ ಅರಿವು ಉಂಟಾಗಿ ಸಾಮಾಜಿಕ ಬದಲಾವಣೆ ಮೊದಲಾಯಿತು. ಭಾರತವನ್ನು ಸ್ವತಂತ್ರಗೊಳಿಸುವ ಹೋರಾಟದೊಂದಿಗೆ, ಕನ್ನಡ ನಾಡಿನ ಗಡಿಗಳನ್ನು ಗುರುತಿಸುವ ಚಳುವಳಿಗಳು ಕನ್ನಡ ಪ್ರಜ್ಞೆಯನ್ನು ಊರ್ಧ್ವಮುಖವಾಗಿ ಬೆಳೆಸಿದವು.

ಶಿಕ್ಷಣ ಕ್ಷೇತ್ರದ ವಿಪ್ಲವಾವಸ್ಥೆ ಸ್ವಾತಂತ್ರ್ಯಾ ನಂತರ ಬದಲಾಯಿತು. ಸಾರ್ವಜನಿಕ ಶಿಕ್ಷಣ ಕನ್ನಡ ನಾಡಿನ ಜನರ ಅವಶ್ಯಕತೆಗಳನ್ನುಸರಿಸಿ ಕನ್ನಡವನ್ನು ಸ್ಥಿರೀಕರಿಸುವ ಕಾರ್ಯ ಕೈಗೊಂಡಿತು. ಮರಾಠಿ ಕಲಿಸುವುದು ಕಡ್ಡಾಯವಾಗಿದ್ದರೂ, ಕನ್ನಡ ಮರಾಠಿ ಶಾಲೆಗಳು ವಿಭಾಗಿಸಲ್ಪಟ್ಟವು. ಇದರಿಂದ ಕನ್ನಡ ನಿರಾಳ ಉಸಿರು ಬಿಡುವಂತಾಯಿತು. ಶಿಕ್ಷಕರ ಶಿಕ್ಷಣ ಸಂಸ್ಥೆಯಾದ ಟ್ರೇನಿಂಗ ಕಾಲೇಜು ಕನ್ನಡ ಪರ ಹೋರಾಟದ ಕೇಂದ್ರ ಸ್ಥಳವಾಗಿ ತನ್ನನ್ನು ಸಮರ್ಪಿಸಿಕೊಂಡಿತ್ತು. ಕಾಲಕಾಲಕ್ಕೆ ಆಗುವ ಬದಲಾವಣೆಗಳು ಮತ್ತು ಹೊಸ ಹೊಸ ಆಯಾಮಗಳು ಪಠ್ಯದಲ್ಲಿ ಸೇರಿದಾಗ ಅದರ ಒಳಗೊಳಿಸುವಿಕೆಯ ಪ್ರಕ್ರಿಯೆಯಲ್ಲಿ ತರಬೇತಿ ಕಾಲೇಜು ಕಾಲಕಾಲಕ್ಕೆ ಬದಲಾವಣೆಗೆ ಒಡ್ಡಿಕೊಂಡಿತು. ೫ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬೋಧನಾ ಮಟ್ಟದ ಹೆಚ್ಚಳಕ್ಕಾಗಿ

ನವೀಕೃತ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. ಅದುವರೆಗೆ ನಡೆದುಕೊಂಡು ಬಂದ ವರ್ಧಾ ಅಧ್ಯಾಪನಾ ಕೇಂದ್ರ ಮೂಲಶಿಕ್ಷಣದಲ್ಲಿ ವಿಲೀನಗೊಂಡ ನಂತರ ಇದನ್ನು ಬೇಸಿಕ್ ಟ್ರೇನಿಂಗ ಸೆಂಟರ್ ಎಂದು ಕರೆಯಲಾಯಿತು. ಈ ಮೂಲಶಿಕ್ಷಣ ಅಭ್ಯಾಸ ಪತ್ರಿಕೆಯನ್ನು ಎಸ್.ಎಸ್.ಸಿ. (ಸೆಕೆಂಡರಿ ಸ್ಕೂಲ ಸರ್ಟಿಫೀಕೆಟ್) ಪಾಸಾದವರು ಒಂದು ವರ್ಷದಲ್ಲಿ, ಪಿ.ಎಸ್.ಸಿ. (ಪ್ರೈಮರಿ ಸ್ಕೂಲ ಸರ್ಟಿಫೀಕೆಟ್) ಪಾಸಾದವರು ಎರಡು ವರ್ಷದಲ್ಲಿ ಓದಿ ಪೂರ್ಣಗೊಳಿಸಬೇಕಿತ್ತು. ೧೯೫೬ರಲ್ಲಿ ಹೊಸದೊಂದು ಯೋಜನೆ ಜಾರಿಯಾಗಿ,ಎಸ್.ಎಸ್.ಸಿ. ಮತ್ತು ಪಿ.ಎಸ್.ಸಿ. ಪಾಸಾದವರಿಗೂ ಎರಡು ವರ್ಷದ ಅಭ್ಯಾಸ ಪತ್ರಿಕೆ ಜಾರಿಯಾಗಿ, ಅವುಗಳ ಮಟ್ಟ ಮಾತ್ರ ಹೆಚ್ಚು ಕಡಿಮೆ ಆಗಿರುತ್ತಿತ್ತು. ಟ್ರೇನಿಂಗ್ ಕಾಲೇಜಿನಲ್ಲಿ ಪಿ.ಎಸ್.ಸಿ ಪಾಸಾದವರು ಮಾತ್ರ ಇರುವುದರಿಂದ ಕಿರಿಯ ಮಟ್ಟದ ಅಭ್ಯಾಸ ಕ್ರಮ ಅನುಸರಿಸುತ್ತಿದ್ದರು. ನಂತರ ಎಸ್ ಎಸ್ ಎಲ್ ಸಿ ಪಾಸಾದವರು ಟ್ರೇನಿಂಗಿಗೆ ಅರ್ಹರಾದರು. ಮುಂದೆ ಮತ್ತೇ ಪಿಯುಸಿ ಪಾಸಾದವರು ಈ ತರಬೇತಿಗೆ ಪ್ರವೇಶ ಪಡೆಯಬಹುದಾಗಿತ್ತು. ಟಿಸಿಎಚ್– ಟ್ರೇನಿಂಗ್ ಸರ್ಟಿಫೀಕೆಟ್ ಹೈಯರ್ ಎಂದಾಗಿ, ೨೦೦೩ರಲ್ಲಿ ಡಿಇಡಿ ಮತ್ತೆ ೨೦೧೭ರಿಂದ ಡಿಇಎಲ್‌ಡಿ ಎಂದು ಕರೆಯಲಾಗುತ್ತಿದೆ.

ಮೂಲೋದ್ಯೋಗಗಳಾದ ಬಡಿಗತನ, ನೂಲುವು, ನೇಯುವುದು, ಬಣ್ಣಹಾಕುವುದು, ಒಕ್ಕಲುತನ, ಹೈನುಗಾರಿಕೆ ಎಲ್ಲವೂ ಇಲ್ಲಿ ಕಲಿಸಲ್ಪಡುತ್ತಿದ್ದವು. ಪ್ರಾಚಾರ್ಯರಾಗಿದ್ದ ಡೆಪ್ಯೂಟಿ ಚನ್ನಬಸಪ್ಪನವರ ಮೂರ್ತಿ ಅನಾವರಣವು ೧೯೫೫ರಲ್ಲಿ ಆಗಿನ ಮುಖ್ಯಮಂತ್ರಿಯವರ ಹಸ್ತದಿಂದ ನೇರವೇರಿತು. ಪ್ರ್ಯಾಕ್ಟಿಸಿಂಗ ಶಾಲೆಯ ಒಳಪ್ರವೇಶದ ಸಂಖ್ಯೆ ಹೆಚ್ಚಿಸಲಾಯಿತು. ಅಲ್ಲಿಯ ಮಕ್ಕಳಿಗೆ ಮತ್ತು ಶಿಕ್ಷಕ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು 'ಪುಸ್ತಕ ಭಾಂಡಾರ'ವೆಂಬ ಸಹಕಾರಿ ಭಾಂಡಾರವನ್ನು ಸಹಕಾರಿ ಕಾಯ್ದೆಯನ್ವಯ ನೋಂದಾಯಿಸಿ ಆರಂಭಿಸಲಾಯಿತು. ಶಾಲಾ ಮಕ್ಕಳಿಗೆ ಮೋಹಕ ನೈಸರ್ಗಿಕ ವಾತಾವರಣ ಉಂಟು ಮಾಡಲು ಕಾಲೇಜು ಆವರಣದಲ್ಲಿದ್ದ ತೋಟವನ್ನು ವಿಸ್ತೃತಗೊಳಿಸಿ, ಚಿಕ್ಕ ಪ್ರಾಣಿಸಂಗ್ರಹಾಲಯವನ್ನು ತೆರೆಯಲಾಯಿತು.

ಇದೇ ಸಮಯದಲ್ಲಿಯೇ ಕಲೆಕ್ಟರರ ಕಂಪೌಂಡಿನಲ್ಲಿದ್ದ ಭೂಮಿಯನ್ನು (ಈಗ ಇರುವ ಕಾರ್ಯಕಾರಿ ಅಭಿಯಂತರರ ಕಚೇರಿಯ ಸ್ಥಳ) ಬಿಟ್ಟುಕೊಡಬೇಕಾದ್ದರಿಂದ, ಒಕ್ಕಲು ಕೊರತೆಯಾಗಿ ಭೂದಾಖಲೆಗಳ ಕಚೇರಿಯ ಆವರಣದಲ್ಲಿದ್ದ ಪಾಳುಭೂಮಿಯನ್ನು ಸರಕಾರದಿಂದ ವರ್ಗಾಯಿಸಿಕೊಂಡು ಅದನ್ನು ಹೊಲಕ್ಕಾಗಿ ಸಾಗುವಳಿ ಮಡಲಾಯಿತು. ಹಾಸ್ಟೇಲಕ್ಕೆ ಹೊಂದಿ ಇದ್ದ ಡಾ. ಮಹಿಷಿಯವರ ಭೂಮಿಯನ್ನು ಕಾಲೇಜಿನ ಉಪಯೋಗಕ್ಕೆ ತೆಗೆದುಕೊಂಡು, ಎ.ಕೆ ಹಾಯಸ್ಕೂಲಿನ ಹಿಂದಿದ್ದ ಭೂಮಿಯನ್ನೂ ವಿಸ್ತರಿಸಿಕೊಳ್ಳಲಾಯಿತು. ಹೀಗೆ ಒಟ್ಟು ೧೪ ಎಕರೆಗಳಷ್ಟು ಭೂಮಿಯನ್ನು ಒಕ್ಕಲುತನಕ್ಕೆ ಉಪಯೋಗ ಮಾಡಿಕೊಳ್ಳಲಾಯಿತು. ಚಳಿಗಾಲದಲ್ಲಿ ಹಿಂಗಾರಿ ಬೆಳೆ ಬೆಳೆಯಲು ಕಾಲೇಜು ಹಿಂದಿದ್ದ ದೊಡ್ಡ ಹೊಂಡವನ್ನು ದುರಸ್ತಿ ಮಾಡಿ, ಅದರಿಂದ ನೀರು ಒಯ್ಯಲು ಸಿಮೆಂಟಿನ ಕಾಲುವೆ ಮಾಡಲಾಯಿತು. ಇದೆಲ್ಲವೂ ಅಭ್ಯಾಸ ಪತ್ರಿಕೆಯನ್ವಯ

ವಿದ್ಯಾರ್ಥಿಗಳ ಶ್ರಮದಾನದಿಂದಲೇ ಮಾಡಲಾಯಿತು. ಮೂಲಶಿಕ್ಷಣ ಇರುವ ಶಾಲೆಗಳಲ್ಲೆಲ್ಲ ತಯಾರಾದ ಬಟ್ಟೆಗಳಿಗೆ ಬಣ್ಣ ಹಾಕಲು ಕಾಲೇಜಿನಲ್ಲಿಯೇ ಬಣ್ಣ ಹಾಕುವ ಕೇಂದ್ರ ತೆರೆಯಲಾಯಿತು. ದೊಡ್ಡ ಮಂದಿರದಲ್ಲಿ ರಂಗಮಂಟಪ, ನೀರು ತುಂಬಲು ಒಂದು ಹೌದು(ಟ್ಯಾಂಕ), ತೋಟದ ಮಧ್ಯದಲ್ಲಿ ಒಂದು ಕಾರಂಜಿಯನ್ನು ವಿದ್ಯಾರ್ಥಿಗಳ ಶ್ರಮದಾನದಿಂದಲೇ ಕಟ್ಟಲಾಯಿತು. ಇದನ್ನು ೨-೧೦-೧೯೫೬ ಗಾಂಧಿ ಜಯಂತಿಯಂದು ರ್‍ಯಾಂಗ್ಲರ್ ಪಾವಟೆಯವರು ಉದ್ಘಾಟಿಸಿದರು. ಪ್ರ್ಯಾಕ್ಟಿಸಿಂಗ ಶಾಲೆಯ ಮುಂದೆ ಕಾರ್ಯಕ್ರಮ ನಡೆಸಲು ಮಕ್ಕಳೇ ಕಟ್ಟೆ ಕಟ್ಟಿದರು.

ಮೊದಲನೆಯ ಜಾಗತಿಕ ಯುದ್ಧದವರೆಗೂ ಸಮೆಗಳನ್ನು ನಂತರ ಕಂದೀಲು ಬಳಸುತ್ತಿದ್ದ ವಿದ್ಯಾರ್ಥಿಗಳಿಗೆ ೧೯೫೬ರಲ್ಲಿ ವಿದ್ಯುದೀಪಗಳ ಸಂಪರ್ಕ ಕಲ್ಪಿಸಲಾಯಿತು. ೧೯೫೭ರಲ್ಲಿ ವಿಜೃಂಭಣೆಯಿಂದ ಶತಮಾನೋತ್ಸವ ಆಚರಿಸಲಾಯಿತು.

೬.೧. ಹಲವು ಸಂಸ್ಥೆಗಳಿಗೆ ಮಡಿಲಾಗಿ ಟ್ರೇನಿಂಗ್ ಕಾಲೇಜ್

ಆಗ ಇಡೀ ಉತ್ತರ ಕರ್ನಾಟಕಕ್ಕೆ ಮತ್ತು ಅತ್ಯಂತ ವಿಶಾಲವಾದ ಸ್ಥಳಾವಕಾಶವಿರುವ, ಸುಂದರವಾದ ಕಟ್ಟಡಗಳನ್ನು ಹೊಂದಿದ ೩೬ ಏಕರೆ ಭೂ ಪ್ರದೇಶದಲ್ಲಿ ಸ್ಥಾಪಿತವಾದ ಏಕಮೇವ ತರಬೇತಿ ಶಿಕ್ಷಣ ಸಂಸ್ಥೆಯಾಗಿತ್ತು ಈ ಟ್ರೇನಿಂಗ ಕಾಲೇಜ. ಆದ್ದರಿಂದ ಯಾವುದೇ ಹೊಸ ಶಿಕ್ಷಣ ಸಂಸ್ಥೆಗಳಾಗಲಿ, ಕಚೇರಿಗಳಾಗಲಿ ಅಥವಾ ವಿದ್ಯಾಲಯಗಳಾಗಲಿ ಆರಂಭಗೊಳ್ಳಬೇಕಾದರೂ ಅದು ಈ ಟ್ರೇನಿಂಗ ಕಾಲೇಜಿನಲ್ಲಿಯೇ ಆಗಬೇಕಿತ್ತು. ಹಾಗಾಗಿಯೇ ಉತ್ತರ ಕರ್ನಾಟಕದ ಹಲವಾರು ಪ್ರಧಾನ ಕಚೇರಿಗಳಿಗೆಲ್ಲ ಸ್ಥಳಾವಕಾಶ ನೀಡಿ ಮಾತೃಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾದುದು ಈ ಟ್ರೇನಿಂಗ ಕಾಲೇಜ.

- **ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೫೦**

ಕರ್ನಾಟಕ ವಿಶ್ವ ವಿದ್ಯಾಲಯವು, ಕರ್ನಾಟಕ ವಿಶ್ವ ವಿದ್ಯಾಲಯ ಕಾಯಿದೆ ೧೯೪೯ರ ಪ್ರಕಾರ ಅಕ್ಟೋಬರ, ೧೯೪೯ರಲ್ಲಿ ಸ್ಥಾಪನೆಗೊಂಡು, ಮಾರ್ಚ ೧, ೧೯೫೦ರಲ್ಲಿ ಕಾರ್ಯಾರಂಭ ಮಾಡಿತು. ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಆವರಣದಲ್ಲಿಯೇ ಇದು ಕೂಡ ಆರಂಭವಾಯಿತು. ಹಾಗಾಗಿ 'ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಆವರಣ ಉತ್ತರ ಕರ್ನಾಟಕದ ಮಹೋನ್ನತ ವಿದ್ಯಾಸಂಸ್ಥೆಗಳಿಗಿದು ಮಡಿಲು' ಎಂದರೆ ತಪ್ಪಾಗಲಾರದು. ವಿ. ಕೃ. ಗೋಕಾಕರು ಹೇಳುವಂತೆ ಖಂಡಿತವಾಗಿಯೂ "ಟ್ರೇನಿಂಗ್ ಕಾಲೇಜಿನ ಚರಿತ್ರೆ ಎಂದರೆ ಉತ್ತರ ಕರ್ನಾಟಕದ ಇತಿಹಾಸ ಮತ್ತು ಭೂಗೋಲ". ಆದರೆ ಉನ್ನತ ಶಿಕ್ಷಣ ಪ್ರಸಾರದ ಕಾರಣಕ್ಕೆ ಇಂಥ ಪ್ರಾಥಮಿಕ ಸಂಸ್ಥೆಯನ್ನು ಮುಚ್ಚುವ ವಿಚಾರಗಳು ನಡೆದದ್ದಿದೆ ಎಂಬುದನ್ನು ಹಿಂದೆ ಗಮನಿಸಲಾಗಿದೆ.

• **ಚಿತ್ರಕಲಾ ಮಹಾ ವಿದ್ಯಾಲಯ** (೧೯೫೮-೫೯)

ಪ್ರೌಢಶಾಲೆಗಳಲ್ಲಿ ವೈವಿಧ್ಯಮಯವಾದ ತರಗತಿಗಳು ಇರಬೇಕು ಎಂಬ ೧೯೫೨ರಲ್ಲಿ ಲಕ್ಷ್ಮಣಸ್ವಾಮಿ ಮೊದಲಿಯಾರ ಆಯೋಗದ ಶಿಫಾರಸ್ಸಿನಂತೆ ಧಾರವಾಡದ ಆಂಗ್ಲೋ ಕರ್ನಾಟಕ (ಎ.ಕೆ.) ಹೈಸ್ಕೂಲಿನಲ್ಲಿ ಸಂಗೀತ, ಚಿತ್ರಕಲೆ ಮತ್ತು ವಾಣಿಜ್ಯ ತರಗತಿಗಳು ಆರಂಭವಾದವು. ಮೂವರು ಶಿಕ್ಷಕರು ನೇಮಕಗೊಂಡರು. ಇವು ೧೯೬೩ರವರೆಗೆ ನಡೆದವು. ೧೯೬೩ರಲ್ಲಿ ಎ.ಕೆ. ಹೈಸ್ಕೂಲನ್ನು ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪಾಠ ಮಾಡಲೆಂದು ವಿಶ್ವವಿದ್ಯಾಲಯದ ಅಧೀನಕ್ಕೆ ತೆಗೆದುಕೊಳ್ಳಲಾಯಿತು. ಆಗ ಅಲ್ಲಿದ್ದ ಈ ಮೂವರು ಶಿಕ್ಷಕರನ್ನು ತರಬೇತಿ ಕಾಲೇಜಿಗೆ ಸ್ಥಳಾಂತರಿಸಿಕೊಳ್ಳಲಾಯಿತು. ತರಬೇತಿ ಕಾಲೇಜಿನ ಮಕ್ಕಳಿಗೆ ಸಂಗೀತ, ಚಿತ್ರಕಲೆ ಮತ್ತು ವಾಣಿಜ್ಯ ಬೋಧಿಸಲೆಂದು ನೇಮಿಸಲಾಯಿತು. ಮುಂದೆ ಮಕ್ಕಳಿಲ್ಲದ ಕಾರಣಕ್ಕೆ ಸಂಗೀತದವನ್ನುಳಿಸಿಕೊಂಡು, ವಾಣಿಜ್ಯದ ಶಿಕ್ಷಕರನ್ನು 'ಜೀವನ ಶಿಕ್ಷಣ' ಪತ್ರಿಕೆ ನಿರ್ವಹಣೆಗೆ ರೂಪಾಂತರಿಸಿಕೊಳ್ಳಲಾಯಿತು. ೧೯೭೫ರಲ್ಲಿ ಚಿತ್ರಕಲೆಯ ಶಾಲೆಯೊಂದನ್ನು ತೆರೆದು, ಆ ಶಿಕ್ಷಕರನ್ನು ಅಲ್ಲಿಗೆ ನೇಮಿಸಿ, ಮತ್ತೇ ಏಳು ಶಿಕ್ಷಕರನ್ನು ತೆಗೆದುಕೊಳ್ಳಲಾಯಿತು.

• **ರಾಜ್ಯ ಶಿಕ್ಷಣ ಮತ್ತು ಸಂಶೋಧನೆ ತರಬೇತಿ ಇಲಾಖೆ: ೧೯೬೪**

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂಗವಾಗಿ 'ರಾಜ್ಯ ಶಿಕ್ಷಣ ಸಂಸ್ಥೆ'(State Institute of Education)SIE (ಇಂದಿನರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ) ೧೯೬೪ರಲ್ಲಿ ಧಾರವಾಡದ ಟ್ರೇನಿಂಗ ಕಾಲೇಜಿನ ಆವರಣದಲ್ಲಿ ಆರಂಭವಾಯಿತು. ಕೆಲಸಗಳ ವರ್ಗೀಕರಣ, ಸುಸಂಘಟಣೆ, ಸುಸಮನ್ವಯ ಮತ್ತು ಅಧಿಕಾರದ ವಿಕೇಂದ್ರಿಕರಣದ ಉದ್ದೇಶದಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ಈಗ ಹೊಸದಾಗಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ನಿರ್ಮಾಣಗೊಂಡಿದೆ, ಇಲಾಖೆಯ ಅಪರ ನಿರ್ದೇಶಕ (Additional D.P.I)ರೆಂದು ರಾಜ್ಯದ ಮಾಧ್ಯಮಿಕ ಶಿಕ್ಷಣ ಪರೀಕ್ಷಾ ಮಂಡಳಿ(KSEEB) ಯ ಕಾರ್ಯದರ್ಶಿಯಾಗಿದ್ದು, ಮಾನ್ಯ ಶ್ರೀ ಜೆ.ಎಮ್.ಟಿ. ರಾಜನ್ ಅವರ ನಿಯಮಕವಾಗಿದ್ದು ಈಗಾಗಲೇ ಅವರು ಹೊಸ ಅಧಿಕಾರ ಸ್ವೀಕಾರ ಮಾಡಿದ್ದಾರೆ.

ರಾಜ್ಯ ಶಿಕ್ಷಣ ಸಂಸ್ಥೆ, ರಾಜ್ಯ ಶೈಕ್ಷಣಿಕ ಮೌಲ್ಯಮಾಪನ ಸಂಸ್ಥೆ, ರಾಜ್ಯ ವೃತ್ತಿ ಮಾರ್ಗದರ್ಶನ ಸಂಸ್ಥೆ, ರಾಜ್ಯ ದೃಕ್ ಶಿಕ್ಷಣ ವಿಭಾಗ, ರಾಜ್ಯದ ಎಲ್ಲ ಬಿಎಡ್ ಕಾಲೇಜುಗಳು, ಪ್ರಾಥಮಿಕ, ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳು ಹೊಸ ಇಲಾಖೆಯ ಆಡಳಿತಕ್ಕೆ ಈಗ ಒಳಪಟ್ಟಿವೆ. ಕೇಂದ್ರ ಸರ್ಕಾರದ ಕಕ್ಷೆಗೆ ಒಳಪಟ್ಟ ದಿಲ್ಲಿಯ (NCERT) ಸಂಸ್ಥೆಯ ಮಾದರಿಯಲ್ಲಿ ರಚಿತವಾದ (SERT) ಹೊಸ ಇಲಾಖೆ, ಶೈಕ್ಷಣಿಕ ಸಂಶೋಧನೆ ಮತ್ತು ಉತ್ತಮ ಶಿಕ್ಷಕರ ತರಬೇತಿಗೆ ಹೆಚ್ಚಿನ ಮಾರ್ಗದರ್ಶನ ನೀಡಬಹುದೆಂದು ಆಶಿಸಲಾಗಿದೆ. ಶಿಕ್ಷಣ ರಂಗದ ವಿವಿಧ ಹಂತಗಳಲ್ಲಿ ಅಪಾರ ಅನುಭವ ಸಂಪಾದಿಸಿದ ಉತ್ಸಾಹಿ ನಿರ್ದೇಶಕರಾದ ಮಾನ್ಯ ಶ್ರೀ ರಾಜನ್

ಸಾಹೇಬರು ಹೊಸ ಇಲಾಖೆಯ ಬೆಳವಣಿಗೆಗಾಗಿ ಯೋಗ್ಯ ಯೋಜನೆಯನ್ನು ಹಾಕಿ ಇಲಾಖೆಯನ್ನು ಮುನ್ನಡೆಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಭಾರತದ ಕೇಲವೇ ರಾಜ್ಯಗಳಲ್ಲಿ ಶಿಕ್ಷಣ ಸಂಶೋಧನೆ ಮತ್ತು ತರಬೇತಿಗಾಗಿ ಪ್ರತ್ಯೇಕ ಇಲಾಖೆ ಇದ್ದು, ಕರ್ನಾಟಕ ರಾಜ್ಯವೂ ಈ ದಿಶೆಯಲ್ಲಿ ಮುಂದಿನ ಹೆಜ್ಜೆ ಇಟ್ಟಿದ್ದು ಅಭಿಮಾನಾಸ್ಪದವಾದ ಸಂಗತಿ. ಸಂಶೋಧಕ ದೃಷ್ಟಿಯ ಪುರೋಗಾಮಿ ಶಿಕ್ಷಕರಿಗೆ ಉತ್ತೇಜನ, ಮಾರ್ಗದರ್ಶನ ಮತ್ತು ಸೂಕ್ತ ಧನಸಹಾಯವನ್ನು ನೀಡಿ ಮಕ್ಕಳ ಶೈಕ್ಷಣಿಕ ಮಟ್ಟ ಹೆಚ್ಚಿಸುವುದರಲ್ಲಿ ಹೊಸ ಇಲಾಖೆ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ"[7] ಎಂಬ ಹಾರೈಕೆ ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದ ಶ್ರೇಯೋಭಿವೃದ್ಧಿಯನ್ನು ಸಾರುತ್ತದೆ.

ನಂತರ ಇದು ಬೆಂಗಳೂರಿಗೆ ಸ್ಥಳಾಂತರಗೊಂಡು, ಇಲಾಖೆಯ ಇತರ ಅಂಗಗಳಾದ State Institute of Science (SIS), State Educational Evaluation Unit (SEEU), Educational Vocational Guidence Bureau (EVG) ಮುಂತಾದುವುಗಳು ಇದರಲ್ಲಿ ವಿಲೀನಗೊಂಡು, ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು.

- **ಬಳಗದ ಬಳ್ಳಿ: ೧೯೬೮**

೧೯೬೮ರ ಜುಲೈ ೨೫ರಂದು ಟ್ರೇನಿಂಗ ಕಾಲೇಜಿನಲ್ಲಿ ರಾಜ್ಯದ ಎಲ್ಲ ತರಬೇತಿ ಸಂಸ್ಥೆಗಳ ಮುಖ್ಯಸ್ಥರ ಸಮ್ಮೇಳನ ಜರುಗಿತು. ಈ ಸಮ್ಮೇಳನವನ್ನು ಉದ್ಘಾಟಿಸಿದ ವರಿಷ್ಠ ವಿದ್ಯಾಧಿಕಾರಿ ಶ್ರೀ ಎಸ್. ವಿ. ಜೇವೂರವರು, ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಪ್ರೋತ್ಸಾಹಕವಾಗಿರುವ ಸಂಘ ಮತ್ತು ಅದರ ಉದ್ದೇಶಗಳ ಬಗೆಗೆ ಪ್ರಸ್ತಾಪಿಸಿದರು. ಅದೇ ರೀತಿಯಲ್ಲಿ ಮರುದಿನವೇ ೨೬ ಜುಲೈ ೧೯೬೮ರಂದು ಟ್ರೇನಿಂಗ ಕಾಲೇಜಿನಲ್ಲಿ "ಬಳಗದ ಬಳ್ಳಿ" ಎಂಬ ಸಂಘವು ಮಾನ್ಯ ಜೇವೂರರವರಿಂದಲೇ ಸ್ಥಾಪಿಸಲ್ಪಟ್ಟಿತು.

ಈ ಸಂಸ್ಥೆಯ ಬಾಳ ಬಳ್ಳಿ ವಿಶಾಲವಾಗಿ ಚೆಲ್ಲವರಿದು ಕನ್ನಡನಾಡಿನ ತುಂಬೆಲ್ಲ ಹಬ್ಬಿ, ಹರಡಿ, ಹಳೆಯ ಎಲೆಗಳು ಉದುರಿದರೂ ಹೊಸ ಕುಡಿ ಚಿಗುರೊಡೆದು ಬಳ್ಳಿ ಮಾತ್ರ ಬೆಳೆಯುತ್ತಲೇ ಇದೆ. ಮಹಾ ಗುರುಗಳು, ಲೇಖಕರು, ಸಾಹಿತಿಗಳು, ಕವಿಗಳು, ಕಾದಂಬರಿಕಾರರು, ವಿಮರ್ಶಕರು ಮತ್ತು ವಿದ್ಯಾಭಿಮಾನಿ ಹಾಗೂ ಭಾಷಾಭಿಮಾನಿಗಳು ಇಂಥ ಮಹಾನ್ ವಿದ್ವತ್ಪರಂಪರೆಯೇ ಉಸಿರಾಡಿದ, ವಿದ್ಯೆಗೆ ಮತ್ತು ಕನ್ನಡನುಡಿಗೆ ಜೀವ ತುಂಬಿದ ಇಂಥ ಸಂಸ್ಥೆಯ ಪರಂಪರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಬೇಕು; ಕಲಿಕೆ ಚೈತನ್ಯದಾಯಕವಾಗಬೇಕು; ಹಿಂದೆ ಬಾಳಿ, ಬದುಕಿ ಶಿಕ್ಷಣವನ್ನ ಬೆಳೆಸಿ ಹೋದ ಹಿರಿಯ ಜೀವಗಳ ಸ್ಮೃತಿ ಮತ್ತು ಇಲ್ಲಿ ಕಲಿತ, ಕಲೆತ ಮತ್ತು ಕಾಯಕನಿರತರಾಗಿರುವ ನಿಕಟ ಸಂಪರ್ಕ ನಮ್ಮ ವಿದ್ಯಾರ್ಥಿಗಳಿಗಾಗಬೇಕು ಎಂಬ ಸದುದ್ದೇಶದಿಂದ ಈ ಬಳಗದ ಬಳ್ಳಿ ಉದಯಿಸಿತು. ಶಿಕ್ಷಣದ ಉತ್ಕರ್ಷ ಮತ್ತು ಸರ್ವಾಂಗೀಣ ಪ್ರಗತಿಳೇ ಹೆಗುರಿಯಾಗಿರುವ ಈ ಸಂಸ್ಥೆಯ ಬಗೆಗಿನ ಸವಿನೆನಹುಗಳು, ಭಾವನೆಗಳು ಹಾಗೂ ಸ್ಮೃತಿಗಳಿಗೆ

ಒಂದು ಮೂರ್ತ ಸ್ವರೂಪ ಕೊಟ್ಟು, ಶಿಕ್ಷಣಾಭಿವೃದ್ಧಿಗಾಗಿ ವಿದ್ಯಾರ್ಥಿಗಳನ್ನು ಅಣಿಗೊಳಿಸಲು 'ಬಳಗದ ಬಳ್ಳಿ' ಒಂದು ಸಾಧನವಾಗಲಿ ಎಂಬ ಸದುದ್ದೇಶದಿಂದ ಇದು ಜನ್ಮತಳೆಯಿತು. ಬಳಗದ ಬಳ್ಳಿಯು ೧೯೬೮ರಲ್ಲಿ ಉದ್ಘಾಟಣೆಗೊಂಡು ಕಾರ್ಯಾರಂಭ ಮಾಡುವುದರೊಂದಿಗೆ ಕರ್ನಾಟಕ ಸಂಘಗಳ ನೋಂದಾವಣಿ ಕಾಯ್ದೆ, ಮುಂಬಯಿ ಟ್ರಸ್ಟ ಕಾಯ್ದೆ ಹಾಗೂ ಆಧಾಯ ತೆರಿಗೆ ನಿಯಮಗಳಿಗನುಗುಣವಾಗಿ ಬಳಗದ ಬಳ್ಳಿಯು ನೋಂದಾವಣಿಯಾಗಿದೆ.

ಬಳಗದ ಬಳ್ಳಿಯ ಉದ್ದೇಶಗಳು:

೧) ಟ್ರೇನಿಂಗ ಕಾಲೇಜಿನಲ್ಲಿ ತರಬೇತಿ ಪಡೆದು, ಶಿಕ್ಷಣ ಕ್ಷೇತ್ರದಲ್ಲಿ ಬೇರೆಬೇರೆ ಕಡೆಗಳಲ್ಲಿ ದುಡಿಯುತ್ತಿರುವ ಶಿಕ್ಷಕರು ಮತ್ತು ಮಾತೃ ಸಂಸ್ಥೆಯ ನಡುವೆ ನಿಕಟ ಸಂಪರ್ಕ ಬೆಳೆಸುವುದು.

೨) ಸಮ್ಮೇಳನ, ಚರ್ಚೆ, ವಿಚಾರ ಗೋಷ್ಠಿ, ಪತ್ರವ್ಯವಹಾರ ಮುಂತಾದುವುಗಳಿಂದ ವ್ಯವಸಾಯಾತ್ಮಕ ಬೆಳವಣಿಗೆಯನ್ನು ಸಾಧೀಸುವುದು.

೩) ಪ್ರತಿಭಾವಂತ ಸದಸ್ಯರ ಸಾಹಿತ್ಯ, ವಿಜ್ಞಾನ, ಕಲೆ ಮುಂತಾದ ರಂಗಗಳಲ್ಲಿಯ ಸೂಕ್ತ ಸಾಮರ್ಥ್ಯವನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡುವುದು.

೪) ಸದಸ್ಯರ ಸಾಹಿತ್ಯ ಪ್ರಕಟಣೆ ಹಾಗೂ ಅದಕ್ಕೆ ಸಹಾಯ ಮಾಡುವುದು.

೫) ಪ್ರಾಥಮಿಕ ಪೊರೋಗಾಮಿ ಶಿಕ್ಷಕರಾಗಬೇಕೆಂಬ ಬಯಕೆಯನ್ನು ಉತ್ತೇಜಿಸುವುದು.

೬) ಪ್ರಾಥಮಿಕ ಶಿಕ್ಷಕರ ಕುಂದುಕೊರತೆ ಬೇಡಿಕೆಗಳನ್ನು ಕ್ರೋಡಿಕರಿಸುವುದು.

೭) ಹಳೆಯ ಪ್ರತಿಭಾವಂತ ಶಿಕ್ಷಕರ ಹೆಸರಿನಲ್ಲಿ ದಾನ ದತ್ತಿಗಳನ್ನು ಸ್ವೀಕರಿಸಿ, ಹೊಸ ತಲೆಮಾರಿನ ಶಿಕ್ಷಕರಲ್ಲಿ ಲೇಖನ, ಭಾಷಣ, ಸಂಗೀತ, ಚಿತ್ರಕಲೆ ಸ್ಪರ್ಧೆಗಳನ್ನು ಏರ್ಪಡಿಸುವುದು.

೮) ಶಿಕ್ಷಣಾಭಿವೃದ್ಧಿಗಾಗಿ ಮತ್ತು ಬಳಗದ ಉದ್ದೇಶಗಳ ಪೋಷಣೆಗಾಗಿ ಬೇರೆ ಯಾವುದೇ ಉಚಿತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

ಸದಸ್ಯರು: 'ಬಳಗದ ಬಳ್ಳಿ'ಯಲ್ಲಿ ವಂತಿಗೆಯನ್ನು ಸಲ್ಲಿಸಿದವರು ಸದಸ್ಯರಾಗಿ ಉಳಿಯುವರು

೧) ಪೋಷಕರು : ೨೫ ರೂಪಾಯಿಗಳಿಗಿಂತ ಹೆಚ್ಚಿಗೆ ಕೊಟ್ಟವರು.

೨) ದಾನಿಗಳು : ೧೦ ರಿಂದ ೨೫ ರೂಪಾಯಿಗಳನ್ನು ಕೊಟ್ಟವರು.

೩) ಆಜೀವ ಸದಸ್ಯರು : ೫ ರೂಪಾಯಿಗಳು ಮತ್ತು ಹೆಚ್ಚಿಗೆ ಕೊಟ್ಟವರು.

೪) ಪ್ರಾಧ್ಯಾಪಕ ಸದಸ್ಯರು : ೫ ರೂಪಾಯಿ ಮೊಟ್ಟವರು.

೫) ಸಾಮಾನ್ಯ ಸದಸ್ಯರು : ೧ ರೂಪಾಯಿ ಕೊಟ್ಟವರು.

೬) ಸಕ್ರೀಯ ಸದಸ್ಯರು : ೧ ರೂಪಾಯಿ ಕೊಟ್ಟವರು.

ಬಳಗದ ಬಳ್ಳಿಯ ಸದಸ್ಯರಾಗುವವರು ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನವರಾಗಿರಬೇಕು. ಮತ್ತು ಸದಸ್ಯತ್ವದ ಹಣವನ್ನು ಕೊಟ್ಟಿರಬೇಕು. ಪ್ರಾಧ್ಯಾಪಕ ಸದಸ್ಯರಾಗಲು ಬಯಸುವವರು ಕಾಲೇಜಿನ ಪ್ರಾಧ್ಯಾಪಕ ವೃತ್ತಿಯಲ್ಲಿ ಕೆಲಸ ಮಾಡಿದ ಮತ್ತು ಮಾಡುತ್ತಿರುವವರೆಲ್ಲರೂ ತಮ್ಮ ಸದಸ್ಯತ್ವದ ಹಣ ಕಟ್ಟಿ ಸದಸ್ಯರಾಗಬಹುದು. ಸಾಮಾನ್ಯ ಮತ್ತು ಸಕ್ರೀಯ ಸದಸ್ಯರಾಗುವವರು ಕಾಲೇಜಿನಲ್ಲಿ ಓದುತ್ತಿರುವ ಶಿಕ್ಷಕ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ವಂತಿಗೆಯನ್ನು ಸಲ್ಲಿಸಿ ಸದಸ್ಯರಾಗಬೇಕಾಗುವುದು. ಪೋಷಕರು ಮತ್ತು ದಾನಿಗಳಾಗಬಹುದಾದ ಇತರರಿಗೆ ಮತದಾನದ ಅಧಿಕಾರ ಇರಲಾರದು.

ಬಳಗದ ಬಳ್ಳಿಯ ಎಲ್ಲ ಉತ್ತರೋತ್ತರ ಆಶಯಗಳು ಪ್ರತಿಷ್ಠಾನದಲ್ಲಿ ಸಮ್ಮಿಲಿತಗೊಂಡುದರಿಂದ ಬಳ್ಳಿಯ ಹೆಸರಲ್ಲಿ ಕೇವಲ ಸೇವಾ ಪೂರ್ವ ತರಬೇತಿಯಲ್ಲಿ, ವಿವಿಧ ವಿಷಯಗಳಲ್ಲಿ ಪ್ರಥಮ ಬಂದ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಹಣದ ರೂಪದಲ್ಲಿ ಬಹುಮಾನ ಕೊಡುವುದು ಮಾತ್ರ ೨೦೦೭ರವರೆಗೆ ನಡೆದಿತ್ತು. ಆ ಬಹುಮಾನ ರೂಪದ ಹಣವೂ ಸಂಚಿತ ನಿಧಿಯ ಬಡ್ಡಿಯಿಂದ ಬುವುದಾಗಿದ್ದು, ಅದು ಕಾಲಕ್ರಮೇಣ ಕೇವಲ ಒಂದು ಎರಡು ರೂಪಾಯಿಗಳಿಗೆ ಸೀಮಿತವಾದಾಗ ಅದನ್ನೂ ಕೂಡ ಈಗ ನಿಲ್ಲಿಸಲಾಗಿದೆ. ಈಗ ಅಲ್ಲೊಂದು ಇಲ್ಲೊಂದು ಕಣ್ಣಿಗೆ ಬೀಳುವ 'ಬಳಗದ ಬಳ್ಳಿ' ಎಂಬ ಹೆಸರನ್ನು ಅಚ್ಚು ಹಾಕಿರುವ ಕಬ್ಬಿಣದ ಕುರ್ಚಿಗಳು ಬಳ್ಳಿಯ ಗತ ಇತಿಹಾಸಕ್ಕೆ ಸಾಕ್ಷಿಯಾಗಿವೆ.

ಇಂಗ್ಲಿಷ ಭಾಷಾ ತರಬೇತಿ ಕೇಂದ್ರ – ೧೯೭೯

English Language Teaching Campaign –ELTC

ಶಿಕ್ಷಣ ಕ್ಷೇತ್ರದಲ್ಲಿ ಕೊಠಾರಿ ಆಯೋಗ ಮತ್ತು ರಾಷ್ಟ್ರೀಯ ಹೊಸ ಶಿಕ್ಷಣ ನೀತಿ ೧೯೮೬ರನ್ವಯ ಸ್ವತಂತ್ರ ಭಾರತೀಯ ಶಿಕ್ಷಣದಲ್ಲಿ ಹೊಸಹೊಸ ಬದಲಾವಣೆಗಳು ಘಟಿಸಿದವು. ಈ ಶಿಕ್ಷಣ ನೀತಿಗಳನ್ವಯ ಪ್ರೌಢಶಾಲಾ ಶಿಕ್ಷಕರಿಗೆ ಸ್ಥಳೀಯ ಭಾಷೆಯೊಂದಿಗೆ ಇಂಗ್ಲಿಷ ಬೋಧನೆಯ ಸಾಮರ್ಥ್ಯ ವೃದ್ಧಿಗಾಗಿ, ಇಂಗ್ಲಿಷ ತರಬೇತಿಗೆ ಶಿಫಾರಸ್ಸು ಮಾಡಲಾಯಿತು. ಈ ಆಯೋಗಗಳ ಶಿಫಾರಸ್ಸಿನ ಮೇರೆಗೆ ೧೯೭೬ರಲ್ಲಿ ಮೈಸೂರು, ಗುಲ್ಬರ್ಗಾ ಮತ್ತು ಚಿಕ್ಕಬಳ್ಳಾಪೂರಗಳಲ್ಲಿ ಇಂಗ್ಲಿಷ ಭಾಷಾ ತರಬೇತಿ ಕೇಂದ್ರಗಳನ್ನು ತೆರೆಯಲಾಯಿತು. ೧೯೭೯ರಲ್ಲಿ ಧಾರವಾಡದಲ್ಲಿ ಇದ್ದ Teacher Centerನಲ್ಲಿ (ಈಗ ಬಿ.ಇ.ಓ. ಕಚೇರಿ ಇರುವಲ್ಲಿ)ಇಂಗ್ಲಿಷ ಭಾಷಾ ತರಬೇತಿ ಕೇಂದ್ರ ತೆರೆಯಲಾಯಿತು. ಆರಂಭದಲ್ಲಿ ಇದು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿತ್ತು. ಇದಕ್ಕೆ ಎ.ಕೆ.ಅಗರಖೇಡ ಇವರು ಪ್ರಥಮ ಇಂಗ್ಲಿಷ ಭಾಷಾ ಬೋಧಕರಾಗಿ ನೇಮಕವಾದರು. ೧೯೮೧ರಲ್ಲಿ ಪ್ರೌಢಶಾಲಾ ಶಿಕ್ಷಕರೊಂದಿಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಈ ತರಬೇತಿ ನೀಡುವ ತಿರ್ಮಾನ ಕೈಗೊಳ್ಳಲಾಯಿತು. ಆಗ ELTCಯನ್ನು ಸ್ವತಂತ್ರ ಕಟ್ಟಡಕ್ಕೆ (ಈಗ ಶೆಟ್ಟಿ ಕ್ರೀಂಡಾಂಗಣದಲ್ಲಿದೆ) ಸ್ಥಳಾಂತರಿಸಲಾಯಿತು. ಇಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ಪ್ರತ್ಯೇಕವಾಗಿ, ಸತತ ೪೦

ದಿನಗಳ, ೩೦ ದಿನಗಳ ಮತ್ತು ೧೦ ದಿನಗಳ ತರಬೇತಿಯನ್ನು ನೀಡಲಾಗಿದೆ. ಇಲ್ಲಿ CIEFL ಹೈದರಾಬಾದ ಇವರಿಂದ ಪ್ರಮಾಣೀಕರಿಸಿದ ಇಂಗ್ಲಿಷ ಭಾಷಾ ಸಂವಹನ ಡಿಪ್ಲೋಮಾ ದೂರಸಂಪರ್ಕ ತರಬೇತಿಯನ್ನು ಮತ್ತು RIESI ದೂರಸಂಪರ್ಕ ತರಬೇತಿಯನ್ನು ನೀಡಲಾಗಿದೆ. ೨೦೧೧ರಿಂದ ಬ್ರಿಟಿಷ ಕೌನ್ಸಿಲಿಂಗ್ ತರಬೇತಿ ಸತತವಾಗಿ ಐದು ವರ್ಷಗಳ ಕಾಲ ನಡೆಯಿತು. ಈಗ ಈ ಸಂಸ್ಥೆ ಜೀವಂತವಾಗಿದ್ದರೂ ನಿರಂತರವಾಗಿ ಕಾರ್ಯಪ್ರವೃತ್ತವಾಗಿಲ್ಲ.

- **'ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ' –೧೯೮೧ ಜನೇವರಿ ೪**

ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಣೆಯನ್ನು ಗುರಿಯಾಗಿಟ್ಟುಕೊಂಡು ಟ್ರೇನಿಂಗ ಕಾಲೇಜಿನ ಅಂಗವಾಗಿ, ಸ್ವತಂತ್ರವಾಗಿ ಹಿರಿಯರ, ಹಿತೈಷಿಗಳ, ಶಿಕ್ಷಣತಜ್ಞರ ಅಭಿಲಾಷೆಯಂತೆ ದಿನಾಂಕ ೪–೧–೧೯೮೧ ರಿಂದ ಕಾರ್ಯಾರಂಭ ಮಾಡಿದೆ.

ಪ್ರಾಥಮಿಕ ಪ್ರತಿಷ್ಠಾನವು ಉದಯಿಸುವುದಕ್ಕಿಂತ ಪೂರ್ವದಲ್ಲಿ ಟ್ರೇನಿಂಗ ಕಾಲೇಜಿನ ಅಧೀನದಲ್ಲಿ 'ಪ್ರಾಥಮಿಕ ಶಿಕ್ಷಣ ವಿಸ್ತರಣಾ ಸೇವಾ ಕೇಂದ್ರ'ವು ಕಾರ್ಯಾರಂಭ ಮಾಡುತ್ತಲಿತ್ತು. ಈ ಸಂಸ್ಥೆ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಪುಸ್ತಕ ಪ್ರಕಟಣೆಯಂಥ ಕಾರ್ಯಗಳನ್ನು ಮಾಡುತ್ತಲಿತ್ತು. ತದನಂತರ ಈ ಅಂಗಸಂಸ್ಥೆಯು ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತು. ಮುಂದೆ ಡೆಪ್ಯೂಟಿಯವರ ಪುಣ್ಯತಿಥಿ ಶತಮಾನೋತ್ಸವ ಆಚರಿಸಲು ೧೯೮೦ ರಲ್ಲಿ ಸಭೆ ಸೇರಿ ದೊಡ್ಡ ಪ್ರಮಾಣದಲ್ಲಿ ಶತಮಾನೋತ್ಸವವನ್ನು ಆಚರಿಸುವ ಸಂಕಲ್ಪ ಮಾಡಿ ಅದರ ಅಂಗವಾಗಿ ವಿಶ್ವಸ್ಥ ನಿಧಿಯೊಂದನ್ನು ಏರ್ಪಡಿಸಿ ಅದರ ಮೂಲಕ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಪಯುಕ್ತವಾಗುವ ಪುಸ್ತಕಗಳ ಪ್ರಕಟನೆಗಾಗಿ ಗ್ರಂಥಮಾಲೆಯೊಂದನ್ನು ಪ್ರಾರಂಭಿಸಬೇಕು, ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕ ತರಬೇತಿಯ ಗುಣಮಟ್ಟ ಎತ್ತರಿಸುವ ಹಾಗೂ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕಲ್ಯಾಣಕಾರ್ಯಗಳನ್ನು ಕೈಗೊಳ್ಳುವ ಯೋಜನೆ ಹಾಕಿಕೊಳ್ಳಬೇಕೆಂದು ನಿರ್ಣಯಿಸಿ ಸಾರ್ವಜನಿಕರ ಸಹಕಾರದಿಂದ ಯೋಜನೆಯನ್ನೊಂದು ತಯಾರಿಸಲಾಯಿತು. ಡೆಪ್ಯೂಟಿಯವರ ಕೈಂಕರ್ಯವನ್ನು ಮುಂದುವರೆಸಬೇಕು ಎಂಬ ಸದುದ್ದೇಶದಿಂದ ಒಂದು ಪ್ರತಿಷ್ಠಾನ ಸ್ಥಾಪಿಸಲು ಹಲವು ಸಾಹಿತಿಗಳ, ಶಿಕ್ಷಣ ಪ್ರೇಮಿಗಳ ಸಂಗಡ ಸಾಕಷ್ಟು ಚರ್ಚಿಸಿ, ಇದಕ್ಕೊಂದು ಅಂತಿಮ ರೂಪ ನೀಡಲಾಯಿತು. ೧೯೮೧ರಲ್ಲಿ ಡೆ. ಚನ್ನಬಸಪ್ಪನವರ ಪುಣ್ಯತಿಥಿ ಮತ್ತು ಶತಮಾನೋತ್ಸವ ಆಚರಿಸುವ ಮೂಲಕ ಶಿಕ್ಷಣದ ಗುಣಮಟ್ಟ ಸುಧಾರಣೆಯ ಕಾಯಕ ಕೈಗೊಂಡು, ಈ ಶತಮಾನೋತ್ಸವ ಕಾಲಕ್ಕೆ 'ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ' ಸ್ಥಾಪಿಸುವುದರೊಂದಿಗೆ, ಸಂಸ್ಥೆಯ ಎದುರಿನ ಪ್ರಶಸ್ತ ಸ್ಥಳದಲ್ಲಿ ಡೆ. ಚನ್ನಬಸಪ್ಪನವರ ಪುತ್ಥಳಿಯನ್ನು ಪ್ರತಿಷ್ಠಾಪಿಸಲಾಯಿತು; 'ಕನ್ನಡದ ದೀಪ' ಎಂಬ ಸ್ಮರಣಗ್ರಂಥವನ್ನು ಹೊರ ತರಲಾಯಿತು. ಡೆಪ್ಯೂಟಿ ಚೆನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನವು ಟ್ರೇನಿಂಗ ಕಾಲೇಜಿನ ಅಂಗವಾಗಿ, ಇದರ ಆವರಣದಲ್ಲಿಯೇ ಕಛೇರಿಯನ್ನು ತೆರೆದು, ಸ್ವತಂತ್ರವಾಗಿ ಕಾರ್ಯಾರಂಭ ಮಾಡಿತು.

ಕರ್ನಾಟಕ ಸಂಘಗಳ ನೋಂದಾವಣಿ ಕಾಯ್ದೆ, ಮುಂಬಯಿ ಪಬ್ಲಿಕ್ ಟ್ರಸ್ಟ ಕಾಯ್ದೆ ಹಾಗೂ ಆದಾಯ ತೆರೆಗಿ ಕಾಯ್ದೆದೆಗಳಿಗನುಗುಣವಾಗಿ ಪ್ರತಿಷ್ಠಾನವು ನೋಂದಾಯಿತವಾಗಿದೆ. ಇದು ತನ್ನದೇ ಆದ ತತ್ವ ಹಾಗೂ ಉಪನಿಯಮಗಳನ್ನು ಹೊಂದಿದ್ದು ಅದರಂತೆ ಕೆಲಸ ಮಾಡುತ್ತಲಿದೆ. ಪ್ರತಿಷ್ಠಾನದ ಆಡಳಿತದ ಹೊಣೆಯು ಅದರ ವಿಸ್ವಸ್ಥ ಮಂಡಳಿ ಹಾಗೂ ಸಾಮಾನ್ಯ ಸಮಿತಿಗಳದ್ದಾಗಿದ್ದರೂ, ಪ್ರತ್ಯಕ್ಷ ನಿರ್ವಹಣೆಯಕೆಲಸವೂ ಪದಾಧಿಕಾರಿಗಳ ಮೇಲಿರುತ್ತದೆ. ಪ್ರತಿಷ್ಠಾನದ ಘಟನೆಯಲ್ಲಿರುವ ಉದ್ದೇಶಗಳಿಗನುಗುಣವಾಗಿ ಕಾರ್ಯಚಟುವಟಿಕೆಗಳ ವಾರ್ಷಿಕ ಯೋಜನೆಯನ್ನು ತಯಾರಿಸಿ, ಸಭೆಗಳಲ್ಲಿ ಚರ್ಚಿಸಿ, ಒಟ್ಟಾರೆ ಇಲ್ಲವೆ ಬಹುಮತದ ಅಭಿಪ್ರಾಯದ ಮೇರೆಗೆ ನಿರ್ಣಯಗಳನ್ನುಕೈಗೊಂಡು ಅವುಗಳನ್ನು ಕಾರ್ಯಗತ ಮಾಡಲಾಗುತ್ತದೆ.

ಪ್ರತಿಷ್ಠಾನದ ವಿಶ್ವಸ್ಥ ಮಂಡಳಿ:

೧- ಅಧ್ಯಕ್ಷರು: ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ

೨- ಕಾರ್ಯಾಧ್ಯಕ್ಷರು: ಪ್ರಾಚಾರ್ಯರು, ಟ್ರೇನಿಂಗ ಕಾಲೇಜ ಧಾರವಾಡ.

೩- ಕೋಶಾಧಿಕಾರಿ ಮತ್ತು ಕಾರ್ಯದರ್ಶಿ: ಉಪನ್ಯಾಸಕರು, ಟ್ರೇನಿಂಗ ಕಾಲೇಜ ಧಾರವಾಡ.

ಸ್ಥಾನಬಲದ ಸದಸ್ಯರು

೪- ಉಪನಿರ್ದೇಶಕರು, ಧಾರವಾಡ – ಸದಸ್ಯರು

೫- ಉಪನಿರ್ದೇಶಕರು, ಬೆಳಗಾವಿ – ಸದಸ್ಯರು

೬- ಉಪನಿರ್ದೇಶಕರು, ವಿಜಯಪುರ – ಸದಸ್ಯರು

೭- ಉಪನಿರ್ದೇಶಕರು, ಹಾವೇರಿ – ಸದಸ್ಯರು

೮- ಉಪನಿರ್ದೇಶಕರು, ಬಾಗಲಕೋಟ – ಸದಸ್ಯರು

೯- ಉಪನಿರ್ದೇಶಕರು, ಗದಗ – ಸದಸ್ಯರು

೧೦- ಉಪನಿರ್ದೇಶಕರು, ಕಾರವಾರ – ಸದಸ್ಯರು

೧೧- ಶತಮಾನೋತ್ಸವ ಸಮಿತಿಯ ಸದಸ್ಯರು

೧೨- ಇಬ್ಬರು ಕ್ಷೇತ್ರ ಶಿಕಣಾಧಿಕಾರಿಗಳು

೧೩- ಇಬ್ಬರು ರಾಜ್ಯ/ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರು

೧೪- ಆಮಂತ್ರಿತರು

ನಿಕಟಪೂರ್ವ ಗೌರವ ನಿರ್ದೇಶಕರು

ಗೌರವ ನಿರ್ದೇಶಕರು

ಪ್ರತಿಷ್ಠಾನದ ಧ್ಯೇಯೋದ್ದೇಶಗಳು:

೧) ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕ ತರಬೇತಿಯ ಗುಣಮಟ್ಟವನ್ನು ಎತ್ತರಿಸುವ ಚಟುವಟಿಕೆಗಳನ್ನುಸಂಘಟಿಸುವುದು.

೨) ಡೆಪ್ಯೂಟಿ ಚನ್ನಬಸಪ್ಪ ಗ್ರಂಥಮಾಲೆಯೊಂದನ್ನು ಪ್ರಾರಂಭಿಸಿ ಶಾಲೆಮಕ್ಕಳಿಗೆ ವಿವಿಧವ ಅಧ್ಯಯನ ಮತ್ತು ಗೃಹಪಾಠಗಳಿಗೆ ಉಪಯುಕ್ತವಾದ ಪಠ್ಯಪೋಷಕ ಪುಸ್ತಕಗಳನ್ನು ಪ್ರಕಟಿಸುವುದು.

೩) ಕಾರ್ಯನಿರತ ಹಾಗೂ ನಿವೃತ್ತ ಶಿಕ್ಷಕರು, ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಣ ತಜ್ಞರ ಸಹಕಾರದೊಡನೆ ಶೈಕ್ಷಣಿಕ ಪುಸ್ತಕಗಳನ್ನು ಸಿದ್ಧಪಡಿಸುವುದು.

೪) ಶಿಕ್ಷಣ ಸಂಶೋಧನ ಮತ್ತು ತರಬೇತಿ ಮಂಡಳಿ, ಶಿಕ್ಷಣ ವಿಸ್ತರಣಾ ಕೇಂದ್ರ, ಶಿಕ್ಷಕರ ಕೇಂದ್ರ ಹಾಗೂ ಖಾಸಗಿ ಪ್ರಯತ್ನಗಳಿಂದ ಸಿದ್ಧವಾದ ಶಾಲೋಪಯೋಗಿ ಸೈಕ್ಷಣಿಕ ಪುಸ್ತಕಗಳನ್ನು ಪರಿಶೀಲಿಸಿ, ಅದರ ಒಪ್ಪಿಗೆಯೊಂದಿಗೆ ಅವಶ್ಯವೆನಿಸಿದರೆ ಕನ್ನಡದಲ್ಲಿ ದೊಡ್ಡ ಪ್ರಮಾಣದಲ್ಲಿ ಪುನಃ ಮುದ್ರಿಸುವುದು.

೫) ಶಿಕ್ಷಕರ ವೃತ್ತಿಪೋಷಣೆಗೆ ಸಹಾಯವಾಗುವ ವಿಷಯಗಳ ಮೇಲೆ ಉಪನ್ಯಾಸ, ಸಮ್ಮೇಲನ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಕ್ರೀಡಾಕೂಟಗಳನ್ನು ಏರ್ಪಡಿಸುವುದು.

೬) ಶೈಕ್ಷಣಿಕ ಪತ್ರಿಕೆಗಳನ್ನು ಪ್ರಕಟಿಸುವುದು ಹಾಗೂ ಶೈಕ್ಷಣಿಕ ಪತ್ರಿಕೆಗಳಿಗೆ ಧನ ಸಹಾಯ ಮಾಡುವುದು.

೭) ಶಿಕ್ಷಣ ಸಂಶೋಧನೆ ಕೈಗೊಂಡ ಶಿಕ್ಷಕರಿಗೆ ಸಹಾಯ ನೀಡುವುದು.

೮) ಶಿಕ್ಷಕರ, ಲೇಖಕರ ಶೈಕ್ಷಣಿಕ ಪುಸ್ತಕ ಪ್ರಕಾಶನಕ್ಕೆ ಸಹಾಯ ನೀಡುವುದು.

೯) ಕಲಾವಿದ ಶಿಕ್ಷಕರಿಗೆ ಉತೇಜನ ಕೊಟ್ಟು, ಅವರ ಕಲಾಸಂವರ್ಧನೆಗೆ ನೆರವು ನೀಡುವುದು.

೧೦) ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಉತ್ತಮ ಶಿಕ್ಷಕರನ್ನು ಗೌರವಿಸುವುದು.

೧೧) ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುವ ಸರ್ಕಾರದ ಪ್ರಯತ್ನಗಳಿಗೆ ಪೂರಕವಾಗುವ ಇತರ ಕಾರ್ಯಗಳನ್ನು ಏರ್ಪಡಿಸುವುದು.

೧೨) ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ ಅಧ್ಯಯನ ಮಾಡುವ ಅರ್ಹ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದು.

೧೩) ಶಿಕ್ಷಕರಿಗೆ ಮತ್ತು ಅವರ ಮಕ್ಕಳಿಗೆ ವಿಶೇಷ ಅಧ್ಯಯನಕ್ಕಾಗಿ ನೆರವು ನೀಡುವುದು.

೧೪) ಶಿಕ್ಷಕರ ವಾಚನಾಲಯ, ವಿಹಾರ ಕೇಂದ್ರಗಳ ಹಾಗೂ ಶಿಕ್ಷಕ ಚಿಕಿತ್ಸಾಲಯಗಳಿಗೆ ನೆರವು ನೀಡುವುದು.

೧೫) ರೋಗರುಜಿಣ, ಆಪತ್ತು ವಿಪತ್ತುಗಳಲ್ಲಿರುವ ಶಿಕ್ಷಕರಿಗೆ ಧನಸಹಾಯ ನೀಡುವುದು.

ಪ್ರತಿಷ್ಠಾನದ ಪ್ರಕಟನೆಗಳು:

೧) ಕನ್ನಡದ ದೀಪ-೧೯೮೨-ಸಂಪಾದಿತ

೨) ವಿಶೇಷ ಶಿಕ್ಷಣ-೧೯೮೯

೩) ಕನ್ನಡದ ಶಕಪುರುಷ ಡೆಪ್ಯುಟಿ ಚೆನ್ನಬಸಪ್ಪನವರು-೧೯೮೯

೪) ನವೋದಯ ವಿದ್ಯಾಲಯಗಳು ಮತ್ತು ಪ್ರಾಥಮಿಕ ಶಿಕ್ಷಣ-೧೯೮೯

೫) ಭವಿತ್ವವಾದ ಮತ್ತು ಪ್ರಾಥಮಿಕ ಶಿಕ್ಷಣ-೧೯೮೯

೬) ಗಣಿತ ಅಭ್ಯಾಸ ಪುಸ್ತಕ-೧೯೯೦

೭) ನಿರಂತರ-೧೯೯೦

೮) ದೂರಶಿಕ್ಷಣ (ಮುಕ್ತ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಕರ ತರಬೇತಿ)-೧೯೯೦

೯) ಬೋಧನಾ ಮಾದರಿಗಳು-೧೯೯೦

೧೦) ಶಿಕ್ಷಕರು ಮತ್ತು ಸಹಕಾರ-೧೯೯೦

೧೧) ಭಾರತದ ಸ್ಕೌಟ್ಸ ಮತ್ತು ಗೈಡ್ಸ್ ಸಂಸ್ಥೆಯ ಸಾಮಾನ್ಯ ವಿಷಯಗಳು ಮತ್ತು ವ್ಯವಸ್ಥಾ ಕ್ರಮ-೧೯೯೦

೧೨) ಮಗುವಿನ ವ್ಯಕ್ತಿತ್ವ ಮತ್ತು ಮಾನಸಿಕ ಆರೋಗ್ಯ-೧೯೯೧

೧೩) ಪ್ರಾಥಮಿಕ ಶಾಲೆಗಳ ವರ್ಗೀಕರಣ-೧೯೯೨ಶಾಲಾಸಂಕುಲ-೧೯೯೨

೧೪) ಶಾಲಾಸಂಕುಲ-೧೯೯೨

೧೫) ಕನಿಷ್ಠ ಕಲಿಕಾ ಹಂತ ವರ್ಗ-೧(ಭೋಧನಾ ಮಾರ್ಗದರ್ಶಿ)-೧೯೯೪

೧೬) ಗ್ರಾಮೀಣ ಶಿಕ್ಷಣ ಚಿಂತನ-೧೯೯೫

೧೭) ಕಾರ್ಯಾನುಭವದ ಮೂಲಕ ಶಿಕ್ಷಣ(ಪ್ರಾಥಮಿಕ ಹಂತ)-೧೯೯೬

೧೮) ಮಕ್ಕಳ ನಾಟಕಗಳು-೧೯೯೬

೧೯) ಲಿಂಗಸಂವೇದನೆ-೧೯೯೬

೨೦) ಶೈಕ್ಷಣಿಕ ಸಂಶೋಧನೆ-೧೯೯೯

೨೧) ಪರಿಸರ ಆರೋಗ್ಯ ಶಾಲೆ-೧೯೯೯

೨೨) ಮನೋಹರ ಗೀತೆಗಳು-೨೦೦೦

೨೩) ಪ್ರಾಥಮಿಕ ಶಾಲಾ ಮಕ್ಕಳಿಗಾಗಿ "ರಸಪ್ರಶ್ನೆಗಳು"-೨೦೦೦

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಸರಕಾರದ ಪ್ರಯತ್ನಗಳ ಜೊತೆಗೆ ಸಾರ್ವಜನಿಕರ, ವಿದ್ವಜ್ಜನರ ಸಹಕಾರವೂ ಬೇಕು. ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ ಟ್ರೇನಿಂಗ ಕಾಲೇಜಿನ ಅಂಗಸಂಸ್ಥೆಯಾಗಿ, ಕಾಯಿದೆಬದ್ಧ ಸಂಸ್ಥೆಯಾಗಿ ಬೆಳೆಯುವುದಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟು ಶಾಶ್ವತಸ್ವರೂಪ ಕಾಣಿಕೆಯನ್ನು ಕರ್ನಾಟಕದ ಪ್ರಾಥಮಿಕ ಶಿಕ್ಷಣಕ್ಕೆ ನೀಡಿದೆ.

ಇದಲ್ಲದೆ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಸರ್ಕಾರದ ಪ್ರಯತ್ನಗಳಿಗೆ ಪೂರಕವಾದ ಕಾರ್ಯಗಳನ್ನೂ ಮಾಡುತ್ತದೆ. ಪ್ರತಿಷ್ಠಾನದ ಕಾರ್ಯಕ್ಷೇತ್ರವು ಬೆಳಗಾವಿ ವಿಭಾಗದ ಜಿಲ್ಲೆಗಳಿಗೆ ಸೀಮಿತವಾಗಿದೆ. ೧೮೬೮ರಿಂದ ಇಲ್ಲಿಯವರೆಗೆ ನಿರಂತರವಾಗಿ ಶೈಕ್ಷಣಿಕ ರಂಗದಲ್ಲಿ ಸಕ್ರೀಯವಾಗಿ ತನ್ನಷ್ಟಕ್ಕೆ ತಾನು ನಡೆದು ಬರುತ್ತಿರುವ ಪ್ರತಿಷ್ಠಾನಕ್ಕೆ ಸರ್ಕಾರದ ಕಾಯಕಲ್ಪದ ಅವಶ್ಯಕತೆ ಇದೆ.

೬.೨. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಧಾರವಾಡ (೧೯೯೨-೯೩)

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ರಚನೆ ಮತ್ತು ಕಾರ್ಯವೈಖರಿಗಳು ಅಮೂಲಾಗ್ರವಾಗಿ ಬದಲಾವಣೆಗೊಂಡವು. ಸ್ವಾತಂತ್ರ್ಯ ದೊರಕಿದಂದಿನಿಂದ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣ ಮತ್ತು ವಯಸ್ಕರ ಅನಕ್ಷರತೆಯನ್ನು ಬೇರು ಸಹಿತ ಹೋಗಲಾಡಿಸುವುದು– ಇವೆರಡೂ ಮಹತ್ವದ ಗುರಿಗಳಾಗಿವೆ. ಸಂವಿಧಾನದ ೪೫ನೆಯ ವಿಧಿಯ 'ಸ್ವಾತಂತ್ರ್ಯ ಲಭಿಸಿ ಹತ್ತು ವರ್ಷದೊಳಗೆ ಎಲ್ಲ ಮಕ್ಕಳಿಗೆ, ಅವರು ೧೪ ವರ್ಷ ಮುಗಿಯುವವರೆಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸಬೇಕು' ಎಂಬುದನ್ನು ಘೋಷಿಸುತ್ತದೆ. **೧೮೮೬ರ ರಾಷ್ಟ್ರೀಯ ಶಿಕ್ಷಣ ನೀತಿಯೂ** ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೇ ಹೆಚ್ಚಿನ ಒತ್ತು ನೀಡುತ್ತದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವು ಮುಖ್ಯವಾಗಿ ಎರಡು ಮುಖ್ಯಾಂಶಗಳನ್ನು ಹೊಂದಿದೆ: ೧) ಸಾರ್ವತ್ರಿಕ ದಾಖಲಾತಿ ಮತ್ತು ಉಳಿಕೆ ೨) ಸಾರ್ವತ್ರಿಕ ಸಾದನೆ. ಈ ಎರಡರಲ್ಲಿ ಮೊದಲನೆಯದ್ದು ಸಂಖ್ಯಾತ್ಮಕ ಮತ್ತು ಪ್ರಮಾಣಾತ್ಮಕವಾದ ದೃಷ್ಟಿಕೋನ ಹೊಂದಿದ್ದರೆ ಎರಡನೆಯದ್ದು ಸಾರ್ವತ್ರಿಕ ಸಾಧನೆಯನ್ನೇ ಅತ್ಯಂತಿಕ ಗುರಿಯಾಗಿಸಿಕೊಂಡಿರುವಂಥದ್ದು. ಶಿಕ್ಷಣದ ಸಾರ್ವತ್ರೀಕರಣ ಸಾಧಿಸಲು ಮುಖ್ಯವಾಗಿ ಬೇಕಾದವುಗಳೇಂದರೆ ೧–ಅರ್ಪಣ ಮನೋಭಾವದ ಶಿಕ್ಷಕರು ಮತ್ತು ೨– ಈ ಶಿಕ್ಷಕರಿಗೆ ತಕ್ಕ ಶೈಕ್ಷಣಿಕ ಮತ್ತು ಸಂಪನ್ಮೂಲದ ಆಧಾರ. ಇವು ಈ ಮುಂದಿನ ಅಂಶಗಳನ್ನೊಳಗೊಂಡಿದೆ.

→ ಸರಿಯಾದ ಸಮಯಕ್ಕೆ ತರಬೇತಿ, ಮಾರ್ಗದರ್ಶನ ಮತ್ತು ಉಪದೇಶ

→ ಸ್ಥಳಿಯ ಅಗತ್ಯಾಧಾರಿತ ಕಲಿಕಾ ಮತ್ತು ಬೋಧನಾ ಉಪಕರಣಗಳ ಬೆಳವಣಿಗೆ

→ ಮೌಲ್ಯಮಾಪನ ಮತ್ತು ಕ್ಷೇತ್ರ ಅಧ್ಯಯನ

→ ಗುರಿ ಸಾಧಿಸುವಲ್ಲಿ ಇರುವ ಸಮಸ್ಯೆಗಳ ಅಧ್ಯಯನಕ್ಕಾಗಿ ಕ್ರಿಯಾ ಸಂಶೋಧನೆ ಮತ್ತು ಪ್ರಾಯೋಗಿಕತೆ.

ರಾಷ್ಟ್ರೀಯ ಶಿಕ್ಷಣ ಆಯೋಗದ ಅಳವಡಿಕೆಗೂ ಮೊದಲು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಶೈಕ್ಷಣಿಕ ಮತ್ತು ಸಂಪನ್ಮೂಲದ ಉತ್ತೇಜನವನ್ನು NCERT, NIEPA, SCERT ಮುಂತಾದವುಗಳ ಮೂಲಕ ನೀಡಲಾಗಿತ್ತಾದರೂ ಜಿಲ್ಲಾ ಮಟ್ಟದಲ್ಲಿದ್ದ ಪ್ರಾಥಮಿಕ ಶಿಕ್ಷಣ ಕೇಂದ್ರಗಳು ಕೇವಲ ಸೇವಾ ಪೂರ್ವ ಹಂತದವರೆಗೆ ಮಾತ್ರ ಇತ್ತು. ಇದನ್ನು ಮನಗಂಡು ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಕ್ರಿಯಾ ಯೋಜನೆ(POA)ಯು ಜಿಲ್ಲಾ ಮಟ್ಟದಲ್ಲಿ, **ಜಿಲ್ಲಾಶಿಕ್ಷಣ**

ಮತ್ತು ತರಬೇತಿ ಸಂಸ್ಥೆ(DIET)ಗಳ ರೂಪದಲ್ಲಿ ಇನ್ನೊಂದು ಹಂತದ ಶಿಕ್ಷಣಕ್ಕೆ ಉತ್ತೇಜನ ನೀಡಿತು. ೧೯೯೨-೯೩ರಲ್ಲಿ ಈ **ಜಿಲ್ಲಾಶಿಕ್ಷಣ ಮತ್ತು ತರಬೇತಿ ಸಂಸ್ಥೆ**ಗಳು ಎಲ್ಲ ಜಿಲ್ಲೆಗಳಲ್ಲಿ ಅಸ್ತಿತ್ವಕ್ಕೆ ಬಂದವು. ಮೊದಲಿದ್ದ ತರಬೇತಿ ಸಂಸ್ಥೆಗಳನ್ನು ಉನ್ನತೀಕರಿಸಿ ಅವುಗಳನ್ನೇ ಡಯಟ್ ಗಳಾಗಿ ಮಾಡಲಾಯಿತು.

ಈ ಹಿನ್ನೆಲೆಯಲ್ಲಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜ ಡಯಟ್ ಆಗಿ ಪರಿವರ್ತನೆ ಹೊಂದಿತು. ಈ ಸಂಸ್ಥೆಯ ಸಂಘಟನಾತ್ಮಕ ರಚನೆ ಈ ಮುಂದಿನಂತಿದೆ:- ಒಬ್ಬ ಪ್ರಾಚಾರ್ಯರು(ಅಭಿವೃದ್ಧಿ) ಹಿರಿಯ 'ಎ' ವೃಂದದ ಅಧಿಕಾರಿ; ಏಳು ಜನ 'ಎ' ವೃಂದದ ಅಧಿಕಾರಿಗಳು ಮತ್ತು ಹದಿನೇಳು ಜನ 'ಬಿ' ವೃಂದದ ಪತ್ರಾಂಕಿತ ಅಧಿಕಾರಿಗಳು ಹಾಗೂ ಆಡಳಿತ ಸಿಬ್ಬಂದಿ ವರ್ಗ.

Principal(1) ಪ್ರಾಚಾರ್ಯರು

1- PSTE (1+8) (Pre Service Teachers Education)ಸೇವಾಪೂರ್ವ ತರಬೇತಿ ಶಿಕ್ಷಣ
2- WE (1+1) (Work Experience)ಕಾರ್ಯಾನುಭವ
3- DRU (1+4) (District Resource Unit)ಜಿಲ್ಲಾ ಸಂಪನ್ಮೂಲ ಘಟಕ
4- IFIC (1+1) (Inservice Programmes, Field Interaction and Innovation and Co-ordination)
5- CMDE (1+1) (Curriculum Material Development and Evaluation) ಪಠ್ಯವಸ್ತು ಅಭಿವೃದ್ಧಿ ಶಿಕ್ಷಣ
6- ET (1+1) (Educational Technology) ಶೈಕ್ಷಣಿಕ ತಂತ್ರಜ್ಞಾನ
7- P&M (1+1) (Planning and Manegement) ಯೋಜನೆ ಮತ್ತು ಕಾರ್ಯ ನಿರ್ವಹಣೆಮತ್ತು ಆಡಳಿತ ಸಿಬ್ಬಂದಿ ವರ್ಗ.

ಹೀಗೆ ಏಳು ವಿಭಾಗಗಳು ಮತ್ತು ಸಿಬ್ಬಂದಿಯನ್ನೊಳಗೊಂಡು ಡಯಟ್ ಮೇಲಿನ ನಿಗದಿತ ಕಾರ್ಯಗಳನ್ನು ನಿರ್ವಹಿಸಲು ವಹಿಸಿಕೊಡಲಾಯಿತು. ಹಿರಿಯ ಉಪನ್ಯಾಸಕರ ಮುಂದಾಳತ್ವದಲ್ಲಿ ಮತ್ತು ಉಪನ್ಯಾಸಕರ ಸಹಕಾರದೊಂದಿಗೆ, ಏಳು ವಿಭಾಗಗಳು ಪರಸ್ಪರ ಸಹಕಾರ ಮತ್ತು ಸಮನ್ವಯದಿಂದ ಕಾರ್ಯ ನಿರ್ವಹಿಸುತ್ತವೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ತರಬೇತಿ, ಶೈಕ್ಷಣಿಕ ಮತ್ತು ಸಂಪನ್ಮೂಲ ಬೆಂಬಲ ಹಾಗೂ ಕ್ರಿಯಾಸಂಶೋಧನೆ ಮತ್ತು ಅನ್ವೇಷನೆಗಳನ್ನು ನಿರ್ವಹಿಸುತ್ತದೆ.

೧೯೯೩ರಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಎಂದಾದಾಗ ಎನ್.ಸಿ.ಇ.ಆರ್.ಟಿ ಅನುಮತಿ ಪತ್ರವನ್ನು ನೀಡಿದೆ.*[೮]

---

*೧೧ ನೋಡಿ ಅನುಬಂಧ ೭

• ದೇಶದ ಅತ್ಯುತ್ತಮ ನಾಲ್ಕು ಡಯಟ್(ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ)ಗಳಲ್ಲಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯೂ ಒಂದು- ೧೯೯೯

೧೯೯೨-೯೩ರಲ್ಲಿ ಶೈಕ್ಷಣಿಕ, ಗುಣಾತ್ಮಕ ಅಭಿವೃದ್ಧಿಗಾಗಿ **ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ**ಗಳನ್ನು ಸ್ಥಾಪಿಸಿರುವುದು ವೇದ್ಯವಾದ ವಿಷಯ. ಅದರಂತೆ 'ದೇಶದೆಲ್ಲೆಡೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ಅತ್ಯುತ್ತಮ ಕಾರ್ಯ ನಿರ್ವಹಿಸುತ್ತಿರುವ ಬಗೆಗೆ ೧೯೯೮-೯೯ರಲ್ಲಿ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗಿತ್ತು. ಮೈಸೂರಿನಲ್ಲಿರುವ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಶೇಷಾದ್ರಿಯವರ ಮುಂದಾಳತ್ವದಲ್ಲಿ ಮೂರು ಜನರ ಸಮಿತಿ ಈ ಸಮೀಕ್ಷೆಯನ್ನು ಕೈಗೊಂಡಿತ್ತು. ಈ ಸಮೀಕ್ಷೆಯಲ್ಲಿ ತನ್ನೆಲ್ಲ ಅನುಷ್ಠಾನ, ಆಚರಣೆ ಮತ್ತು ಸಾಧನೆಗಳ ಅಗ್ನಿದಿವ್ಯದಲ್ಲಿ ಮಿಂದೆದ್ದ ಅಪ್ಪಟ ಚಿನ್ನವಾಗಿ ಧಾರವಾಡದ **ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ** ಹೊರಹೊಮ್ಮಿತು' ಎಂದು ಶಿಕ್ಷಣ ಇಲಾಖೆಯ ನಿವೃತ್ತ ಸಹ ನಿರ್ದೇಶಕರಾದ ಶಿವಶಂಕರ ಹಿರೇಮಠ ನೆಪಿಸಿಕೊಳ್ಳುತ್ತಾರೆ. ಅದರ ಫಲವಾಗಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಧಾರವಾಡ(ಕರ್ನಾಟಕ), ಕರವೆತ್ತಿನಗರ(ಆಂಧ್ರ), ಬನಾಸ್ಕಾಂತಾ (ಗುಜರಾತ), ಹಾಗೂ ಗಯಾ(ಬಿಹಾರ)ಗಳ ಡಯಟ್(DIET)ಗಳು ಅತ್ಯುತ್ತಮ ಕಾರ್ಯ ನಿರ್ವಹಿಸಿದ್ದನ್ನು ಪರಿಗಣಿಸಿ, ಅತ್ಯುತ್ತಮ ಡಯಟ್‌ಗಳಾಗಿ ಘೋಷಿಸಲಾಯಿತು. ಮತ್ತು ಈ ಸಂಸ್ಥೆಗಳಲ್ಲಿನ ಉತ್ತಮ ಕಾರ್ಯಕ್ರಮಗಳ, ಪಾಲಿಸುತ್ತಿರುವ ಸಂಪ್ರದಾಯಗಳ, ಸಾಧನೆಗಳ ಪರಿಚಯವು ದೇಶದ ಇತರ ಎಲ್ಲಾ ಸಂಸ್ಥೆಗಳಿಗೆ ತಿಳಿಯಪಡಿಸಬೇಕೆನ್ನುವ ಉದ್ದೇಶದಿಂದ, ೧೯೯೯ರ ಸಪ್ಟಂಬರ ತಿಂಗಳಲ್ಲಿ, ಸಂಬಂಧಿಸಿದ ನಾಲ್ಕೂ ಡಯಟ್‌ಗಳ

ಪ್ರಾಚಾರ್ಯರನ್ನು NCERTಯು ನವದೆಹಲಿಗೆ ಕರೆಯಿಸಿಕೊಂಡು ಡಾಕುಮೆಂಟೇಷನ್ ಕಾರ್ಯವನ್ನು ಮಾಡಿಸಿತು. (ಜೀವನ ಶಿಕ್ಷಣ ೧೯೯೯) ಇಂಥ ಸಾಧನೆ ಹಾಗೆ ಒಮ್ಮಿಂದೊಮ್ಮೆ ಆದುದಲ್ಲ. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿರುವ ರಾಷ್ಟ್ರೀಯ ವಿಸ್ತರಣಾ ಸೇವೆ, ಜೀವನ ಶಿಕ್ಷಣ ಪತ್ರಿಕೆ, ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ, ಸುಮಾರು ೪೫ ಅತ್ಯುತ್ಕೃಷ್ಟ ಪುಸ್ತಕಗಳ ಪ್ರಕಟಣೆ, ಬಳಗದ ಬಳ್ಳಿ(ಇಲ್ಲಿ ಕಲಿತು ಹೋದ ಹಳೆ ವಿದ್ಯಾರ್ಥಿಗಳ ಸಂಘ) ಮತ್ತು ಅದರ ಪ್ರಕಟಣೆಗಳು, ಪತ್ತಿನ ಸಹಕಾರಿ ಸಂಘ ಮತ್ತು ಅದರ ಪ್ರಕಟಣೆಗಳು, ಸುಸಜ್ಜಿತ ಗ್ರಂಥಾಲಯ, ಚಿತ್ರಕಲಾ ಕಾಲೇಜು, ಆದರ್ಶ ಪಾಠಭ್ಯಾಸ ಶಾಲೆ, ಕೈಗೊಂಡ ಕ್ರಿಯಾ ಸಂಶೋಧನೆಗಳು, ಅನುದಾನದ ಸಂಪೂರ್ಣ ಬಳಕೆ, ಹಮ್ಮಿಕೊಂಡ ತರಬೇತಿಗಳು, ವಿದ್ಯಾರ್ಥಿ ದತ್ತಕ ಯೋಜನೆ ಮುಂತಾದುವುಗಳೆಲ್ಲ ಡಯಟ್‌ನ್ನ 'ಅತ್ಯುತ್ತಮ ಡಯಟ್'ನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದವು. ರಾಷ್ಟ್ರೀಯ ವಿಸ್ತರಣಾ ಸೇವೆಗೆ ಮ್ಯಾಚಿಂಗ್ ಗ್ರ್ಯಾಂಟ್ ಆಗಿ ಕೊಡಬೇಕಾದ ೨೫% ಶೇಕಡಾ ಹಣವನ್ನು ಸ್ಥಳೀಯ ಸಂಸ್ಥೆಗಳಿಂದ, ತಾಲೂಕು ಪಂಚಾಯತ್‌ನಿಂದ, ಭಾರತ್ ಬುಕ್ ಡಿಪೋ ಅವರಿಂದ ಸಂಗ್ರಹಿಸಿ, ೭೫% ಶೇಕಡಾ

ಸರಕಾರದಿಂದ ಬರುವ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ೧೦೦% ಕಾರ್ಯ ಮಾಡಲು ಸಾಧ್ಯವಾಗುತ್ತಿತ್ತು. ಇದರಿಂದಾಗಿ ಸಂಸ್ಥೆ ಭಾರತದಲ್ಲಿ 'ಅತ್ಯುತ್ತಮ'ವೆನಿಸಿಕೊಳ್ಳಲು ಸಾಧ್ಯವಾಯಿತು.

- **ಅಪರ ಆಯುಕ್ತರ ಕಚೇರಿ, ಧಾರವಾಡ**

ಬೆಂಗಳೂರಿನಲ್ಲಿ ಮಾತ್ರ ಇದ್ದ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯ ಕಾರ್ಯಗಳನ್ನು ವಿಕೇಂದ್ರೀಕರಣಗೊಳಿಸಿ ಧಾರವಾಡ ಮತ್ತು ಗುಲ್ಬರ್ಗಾ ವಲಯಗಳನ್ನು ನಿರ್ಮಿಸಿ ಆಯಾ ವಲಯಗಳ ವ್ಯಾಪ್ತಗೆ ಬರುವ ಜಿಲ್ಲೆಗಳನ್ನು ಮತ್ತು ಸಂಬಂಧಿಸಿದ ಅಧಿಕಾರವನ್ನು ಹಸ್ತಾಂತರಗೊಳಿಸಲಾಯಿತು. ಧಾರವಾಡದಲ್ಲಿ ಆಯುಕ್ತರ ಕಚೇರಿಯ ಸ್ಥಾಪನೆ ಮತ್ತು ಅಲ್ಲಿಯ ಅಧಿಕಾರವನ್ನು ಶ್ರೀ ಶಿವಾನಂದ ಜಾಮದಾರ ೨೦೦೧ರಲ್ಲಿ ಇವರಿಗೆ ವಹಿಸಿಕೊಡಲಾಯಿತು. ಇದ್ದ ಸರಕಾರಿ ಕಟ್ಟಡಗಳಲ್ಲಿಯೇ ಒಂದನ್ನಾಯ್ದು ಕಚೇರಿಯನ್ನು ಆರಂಭಿಸಬೇಕು ಎಂಬ ನಿರ್ಣಯದಂತೆ, ಡಯಟ್ಟಿನ ಕಟ್ಟಡಗಳಲ್ಲಿ ಮುಖ್ಯಭಾಗವಾಗಿದ್ದ ಮತ್ತು ಡಯಟ್ಟಿನ ಕಚೇರಿ ಹಾಗೂ ತರಗತಿಗಳು ನಡೆಯುತ್ತಿದ್ದ ಪ್ರಧಾನವಾದ ಕಟ್ಟಡವನ್ನೇ ಆಯುಕ್ತರ ಕಚೇರಿಗೆ ಆಯ್ಕೆ ಮಾಡಿಕೊಳ್ಳಲಾಯಿತು. ಆ ಕಟ್ಟಡದಲ್ಲಿದ್ದ ಪ್ರಾಚಾರ್ಯರ ಕೊಠಡಿ, ಉಪನ್ಯಾಸಕರ ಕೊಠಡಿ, ತರಗತಿಗಳನ್ನು ಇತರೇ ಕಟ್ಟಡಗಳಿಗೆ ಸ್ಥಳಾಂತರಿಸಿ, ಬಹಳ ವಿಶೇಷವಾಗಿ ರಚಿಸಿದ್ದ ಸಭಾಂಗಣಗಳನ್ನು ತೆಗೆದುಹಾಕಿ ಈಡೀ ಕಟ್ಟಡವನ್ನೇ ನವೀಕರಣಗೊಳಿಸಲಾಯಿತು. ಮೂಲ ತರಬೇತಿ ಸಂಸ್ಥೆಗಾಗಿ ಇದ್ದ ಕಟ್ಟಡ ಇಲಾಖೆಯ ಮೇಲ್ದರ್ಜೆಯ ಕಚೇರಿಗಳಿಗಾಗಿ ತನ್ನ ನೆಲೆಯನ್ನು ಬಿಟ್ಟುಕೊಟ್ಟಿತು. ಆಗಲೇ ಟ್ರೇನಿಂಗ ಕಾಲೇಜಿನ ಅಮೂಲ್ಯವಾದ ದಾಖಲೆಗಳು, ಕಾಗದ ಪತ್ರಗಳು, ಗ್ರಂಥಗಳು ಮತ್ತು ರೂಪ ಎಲ್ಲವೂ ಮೂಲನೆಲೆಯಿಂದ ಸ್ಥಳಾಂತರಗೊಂಡವು. ಇನ್ನೊಂದರ್ಥದಲ್ಲಿ ವಿಚಲಿತಗೊಂಡವು.

ಆಯುಕ್ತರ ಕಚೇರಿ ಒಳಗೊಳ್ಳುವ ಜಿಲ್ಲೆಗಳು: ಧಾರವಾಡ, ಬೆಳಗಾವಿ, ಗದಗ, ಹಾವೇರಿ, ವಿಜಯಪುರ, ಬಾಗಲಕೋಟ, ಚಿಕ್ಕೋಡಿ, ಸಿರಶಿ ಮತ್ತು ಕಾರವಾರ.

ವಿಭಾಗಗಳು: ಸ್ಥಾಪನ, ಅನುದಾನ, ಯೋಜನೆ, ಲೆಕ್ಕವಿಭಾಗ, ಆವಕ, ಜಾವಕ ಮತ್ತು ಚಿತ್ರಕಲಾ ವಿಭಾಗ

'ಎ' ಮತ್ತು 'ಬಿ' ವೃಂದದ ಅಧಿಕಾರಿಗಳು, ಪ್ರಾಥಮಿಕ ಮತ್ತು ಪೌಢಶಾಲಾ ಶಿಕ್ಷಕರು ಹಾಗೂಸಿ ಮತ್ತು ಡಿ ವರ್ಗದವರಿಗೆ ಈ ಕಚೇರಿ ಸೇವೆಯನ್ನೊದಗಿಸುತ್ತದೆ.

ಕಚೇರಿಯ ಸಿಬ್ಬಂದಿ ರಚನೆ:

೧–ಆಯುಕ್ತರು

೧–ನಿರ್ದೇಶಕರು

೪– ಸಹ ನಿರ್ದೇಶಕರು ಅ) ಸಹ ನಿರ್ದೇಶಕರು. ಅ.ಆ.ಕ.ಧಾರವಾಡ

ಆ) ಪ್ರಾಚಾರ್ಯರು ಸಿಟಿಇ ಬೆಳಗಾವಿ.

೧) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ಧಾರವಾಡ

೨) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ಬೆಳಗಾವಿ

೩) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ಕುಮಟಾ

೪) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ಸಿರಶಿ

೫) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ಚಿಕ್ಕೋಡಿ

ಇ) ಪ್ರಾಚಾರ್ಯರು ಸಿಟಿಇ. ಜಮಖಂಡಿ

೧) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ಇಳಕಲ್

೨) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ವಿಜಯಪುರ

೩) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ಹಾವೇರಿ

೪) ಪ್ರಾಚಾರ್ಯರು ಜಿ.ಶಿ ಮತ್ತು ತ. ಸಂಸ್ಥೆ ಗದಗ

ಈ) ಕಾರ್ಯದರ್ಶಿಗಳು ಕ.ಪ್ರೌ.ಶಿ.ಪ.ಮಂಡಳಿ

ಇವರೊಂದಿಗೆ ಆಯುಕ್ತರ ಕಚೇರಿಯ ಇಬ್ಬರು ಡಿಡಿಪಿಐಗಳು ಮತ್ತು ಎಲ್ಲ ಜಿಲ್ಲೆಗಳ ಡಿಡಿಪಿಐ(ಆಡಳಿತ)ರವರು ಬರುತ್ತಾರೆ. ಇವರ ಕೆಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಹ ಕಾರ್ಯಕ್ರಮ ಸಮನ್ವಯಾಧಿಕಾರಿಗಳು ಸರ್ವಶಿಕ್ಷಣ ಅಭಿಯಾನ ಹಾಗೂ ಸಹ ಕಾರ್ಯಕ್ರಮ ಸಮನ್ವಯಾಧಿಕಾರಿಗಳು ಮಾಧ್ಯಮಿಕ ಶಿಕ್ಷಣ ಇವರು ಬರುತ್ತಾರೆ. ಇವರ ಕೆಳಗೆ ಬಿ.ಆರ್.ಸಿ. ಕಚೇರಿಗಳು ಇರುತ್ತವೆ.

- **ಇ–ವಿದ್ಯಾ ಅಕಾಡೆಮಿ**

೨೦೦೫–೦೬ರಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಮೈಕ್ರೋಸಾಫ್ಟ್ ಸ್ಥಾಪಿಸಲ್ಪಟ್ಟಿತು. ಇದು ಪರಿಣಾಮಕಾರಿ ಮತ್ತು ಗುಣಮಟ್ಟದ ಶಿಕ್ಷಣ ಅನುಷ್ಠಾನಗೊಳಿಸುವುದಕ್ಕಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಶಿಕ್ಷಕರ ಐಸಿಟಿ ಸಾಮರ್ಥ್ಯವನ್ನು ವರ್ಧಿಸಲು ಮತ್ತು ಕಾರ್ಯಕ್ಷಮತೆ ಹೆಚ್ಚಿಸಲು ಉದ್ದೇಶಿಸಲಾಗಿತ್ತು. ಕರ್ನಾಟಕದಾದ್ಯಂತ ಮೂರು ಕೇಂದ್ರಗಳನ್ನು ಸ್ಥಾಪಿಸಲಾಯಿತು:

* ಬೆಂಗಳೂರು– ಬೆಂಗಳೂರು ಮತ್ತು ಮೈಸೂರು ವಿಭಗಕ್ಕಾಗಿ

* ಧಾರವಾಡ– ಬೆಳಗಾವಿ ವಿಭಾಗಕ್ಕಾಗಿ

* ಗುಲ್ಬರ್ಗಾ– ಗುಲ್ಬರ್ಗಾ ವಿಭಾಗಕ್ಕಾಗಿ

ಖಾಸಗಿ ಒಡೆತನದ ಸಹಭಾಗಿತ್ವದ ಇ–ವಿದ್ಯಾ ಅಕಾಡೆಮಿಯ ಒಪ್ಪಂದದ ಅವಧಿ ಮುಗಿದ ನಂತರ ಇದರ ಜವಾಬ್ದಾರಿಯನ್ನು ಮಾರ್ಚ ೨೦೧೨ರಂದು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ವಹಿಸಿಕೊಂಡಿತು. ಆಯುಕ್ತರ ಕಚೇರಿ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದ ತರಬೇತಿಗಳು ಕ್ರಮೇಣ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಸುಪರ್ದಿಗೇ ಬಂದವು.ಇಲ್ಲಿ ಕ್ಲಸ್ಟರ್ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಇರುವ ಎಲ್ಲ ಉಸ್ತುವಾರಿ ಅಧಿಕಾರಿಗಳೂ ಇಲ್ಲಿ ತರಬೇತಿ ಪಡೆಯುತ್ತಾರೆ.

ಸರ್ಕಾರ ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲಾನಿಂಗ್ ಘಟಕವನ್ನು ಸ್ಥಾಪಿಸಿತು. ಈ ಘಟಕ ಶಿಕ್ಷಣ ಇಲಾಖೆಯ ಮರುವಿನ್ಯಾಸ ಕುರಿತಂತೆ ವ್ಯಾಪಕ ಅಧ್ಯಯನವನ್ನು ಪ್ರೈಸ್ ವಾಟರ್ ಹೌಸ್ ಕೂಪರ್ ಸಂಸ್ಥೆ ಮೂಲಕ ನಡೆಸಿ, ಶೈಕ್ಷಣಿಕ ವಿಕೇಂದ್ರಿಕರಣಕ್ಕೆ ಪೂರಕವಾದ ಶಿಪಾರಸುಗಳನ್ನು ಮಾಡಿತು.

ಈ ಶಿಪಾರಸ್ಸು ೨೦೦೮ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಗೊಂಡು, ೨೦೧೦ರಲ್ಲಿ (ಸಿಸ್ಲೆಪ್) ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಸಂಸ್ಥೆ (SISLEP-State Institute of school planning and management) ಸ್ಥಾಪಿಸಲಾಯಿತು. ೨೦೧೧ರಲ್ಲಿ ಕರ್ನಾಟಕ ಸಂಘಗಳ ಅಧಿನಿಯಮದಡಿಯಲ್ಲಿ ನೋಂದಾಯಿಸಲಾಯಿತು. ಅಂದಿನಿಂದ ಪಾಲಿಸಿ ಪ್ಲಾನಿಂಗ ಘಟಕವು ಸಿಸ್ಲೆಪ್ ನಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಇದಕ್ಕಾಗಿ ಧಾರವಾಡ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿರುವ 'ನೂಲು ಮತ್ತು ನೇಯ್ಗೆ ತರಬೇತಿ' ಕಟ್ಟಡದಲ್ಲಿ ಸಂಸ್ಥೆಯನ್ನು ಆರಂಭಿಸಲಾಗಿದೆ. ಆವರಣದೊಳಗೆ ೨.೫ ಎಕರೆ ನಿವೇಶನ ಒದಗಿಸಲಾಗಿದ್ದು, ಇಲ್ಲಿ ಸಂಶೋಧನೆ ಮತ್ತು ತರಬೇತಿ ಕೇಂದ್ರ, ವಸತಿ ವ್ಯವಸ್ಥೆ, ಕ್ರೀಡಾ ಸಮುಚ್ಚಯ ಒಳಗೊಂಡಂತಹ ನೂತನ ಕಟ್ಟಡ ನಿರ್ಮಾಣಗೊಳ್ಳುತ್ತಿದ್ದು ೭೫% ಪ್ರತಿಶತ ಪೂರ್ಣಗೊಂಡಿದೆ. ಇದರ ಸ್ಥಾಪನೆಗಾಗಿ ಕೇಂದ್ರ ಸರ್ಕಾರ ಮೂರು ಕೋಟಿ ರೂಪಾಯಿಗಳ ಅನುದಾನ ಒದಗಿಸಿದೆ. ಉಳಿದ ಖರ್ಚುವೆಚ್ಚಗಳನ್ನು ರಾಜ್ಯ ಸರ್ಕಾರ ಭರಿಸುತ್ತದೆ.

ಉದ್ದೇಶಗಳು: ಶಿಕ್ಷಣದ ನಿರ್ವಹಣೆಯನ್ನು ನಿಧಾನವಾಗಿ ಮತ್ತು ಸ್ಥಿರವಾಗಿ ಸರ್ಕಾರದ ನಿಯಂತ್ರಣದಿಂದ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಈ ಸಂಸ್ಥೆಯ ಪ್ರಮುಖ ಗುರಿ. ಇದರ ಸಾಧನೆಗಾಗಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯವಾಗಿದೆ. ಶಾಲಾ ಶಿಕ್ಷಕರಿಂದ ಮೊದಲ್ಗೊಂಡು ಕ್ಲಸ್ಟರ್, ಬ್ಲಾಕ್, ಜಿಲ್ಲೆ ಹಾಗೂ ರಾಜ್ಯ ಮಟ್ಟದವರೆಗಿನ ಶಿಕ್ಷಣಾಧಿಕಾರಿಗಳು, ಸಮುದಾಯದ ನಾಯಕರು ಹಾಗೂ ಪಂಚಾಯಿತಿಗಳ ಸಾಮರ್ಥ್ಯ ಅಭಿವೃದ್ಧಿ ಮಾಡುವುದು ಮತ್ತು ಯೋಜನೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಅಗತ್ಯವಾದ ತಜ್ಞರ ನೆರವು ಒದಗಿಸುವುದು ಹಾಗೂ ಸಮರ್ಥವಾಗಿ ಶೈಕ್ಷಣಿಕ ವಿಕೇಂದ್ರೀಕರಣವನ್ನು ಸಾಧಿಸುವುದು ಸಿಸ್ಲೆಪ್‌ನ ಪ್ರಾಥಮಿಕ ಜವಾಬ್ದಾರಿಗಳಾಗಿವೆ. ಅವುಗಳ ಮುಖ್ಯಾಂಶಗಳು:

→ ಶಿಕ್ಷಣ ನೀತಿ

→ ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ

→ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು

→ ಸಂಶೋಧನೆ ಮತ್ತು ಮೌಲ್ಯಮಾಪನ

→ ಶಿಕ್ಷಣದ ಗುಣಮಟ್ಟ

→ ಹಣಕಾಸು

→ ತಂತ್ರಜ್ಞಾನ ಮತ್ತು ಜ್ಞಾನದ ನಿರ್ವಹಣೆ

ಈ ಜವಾಬ್ದಾರಿಗಳಡಿಯಲ್ಲಿ ಅಗತ್ಯಕ್ಕನುಗುಣವಾಗಿ ತರಬೇತಿ, ಸಂಕಿರಣ, ಸಂವಾದ ಕಾರ್ಯಾಗಾರ, ಸಮ್ಮೇಳನಗಳನ್ನು ಹಮ್ಮಿಕೊಳ್ಳುವ, ಕಾರ್ಯಕ್ರಮಗಳ ಉಸ್ತುವಾರಿ, ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ಮತ್ತು ಸಮೀಕ್ಷೆ ಮಾಡುವ, ಸಂಶೋಧನೆ, ಮೌಲ್ಯಮಾಪನ ಮತ್ತು ಅಧ್ಯಯನ ಕೈಕೊಳ್ಳುವ, ದಾಖಲಾತಿ ವಿಸ್ತರಣೆ ಮತ್ತು ಮಾಹಿತಿ ವಿತರಣೆ ಮಾಡುವ, ಮಾಹಿತಿ ತಂತ್ರಜ್ಞಾನ ಬಳಕೆಗೆ ಪ್ರೋತ್ಸಾಹಿಸುವ ಹಾಗೂ ವೃತ್ತಿಪರ ಸಂಸ್ಥೆಗಳೊಂದಿಗೆ ಸಂಬಂಧ ಮತ್ತು ಸಂಪರ್ಕ ಹೊಂದುವಂಥಹ ಪ್ರಮುಖ ಚಟುವಟಿಕೆಗಳನ್ನು ಈ ಸಂಸ್ಥೆ ಹಮ್ಮಿಕೊಳ್ಳುತ್ತದೆ.

ರಚನೆ:

- **ಆಡಳಿತ ಮಂಡಳಿ:**

ಸಿಸ್ಲೆಪ್ ನ ಗುರಿ, ಕಾರ್ಯತಂತ್ರ ಮತ್ತು ತಾತ್ವಿಕ ತಳಹದಿಯನ್ನು ನಿರ್ದೇಶಿಸುವುದು ಈ ಆಡಳಿತ ಮಂಡಳಿ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಇದರ ಅಧ್ಯಕ್ಷರಾಗಿದ್ದು, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇದರ ಉಪಾಧ್ಯಕ್ಷರು; ಸಿಸ್ಲೆಪ್ ನ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳು; ಶಿಕ್ಷಣ ಇಲಾಖೆಯ ಆಯುಕ್ತರು, ರಾಜ್ಯ ಯೋಜನಾ ನಿರ್ದೇಶಕರು, ಎಸ್,ಎಸ್,ಎ. ಶಿಕ್ಷಣ ತಜ್ಞರು, ನಿರ್ವಹಣೆ ತಜ್ಞರು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಮೊದಲಾದ ಇಪ್ಪತ್ತು ಜನರು ಇದರ ಸದಸ್ಯರಾಗಿರುತ್ತಾರೆ.

- **ಕಾರ್ಯ ನಿರ್ವಹಣಾ ಮಂಡಳಿ:**

ಸಿಸ್ಲೆಪ್‌ನ ನಿಗದಿತ ಚಟುವಟಿಕೆಗಳ ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ಮಾಡುವುದು ಈ ಮಂಡಳಿಯ ಕಾರ್ಯ. ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇದರ ಅಧ್ಯಕ್ಷರಾಗಿದ್ದು, ಸಿಸ್ಲೆಪ್‌ನ ನಿರ್ದೇಶಕರು ಇದರ ಸದಸ್ಯ ಕಾರ್ಯದರ್ಶಿಗಳು; ಇದರ ಸದಸ್ಯರುಗಳಾಗಿ ಶಿಕ್ಷಣ ಇಲಾಖೆಯ ಆಯುಕ್ತರು, ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ ನಿರ್ದೇಶಕರು, ನಿರ್ವಹಣೆ ತಜ್ಞರು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ವಿಶ್ವವಿದ್ಯಾಲಯದ ಕುಲಪತಿಗಳು, ಸರ್ಕಾರದಿಂದ ನಾಮ ನಿರ್ದೇಶನಗೊಂಡ ಅಜೀಂ ಪ್ರೇಮ್‌ಜಿ ಫೌಂಡೇಶನ್ನಿನ ಪ್ರತಿನಿಧಿಗಳು, ಇಬ್ಬರು ಶಿಕ್ಷಣ ತಜ್ಞರು, ಸಿಸ್ಲೆಪ್‌ನ ವಿವಿಧ ವಿಭಾಗಗಳ ಮುಖ್ಯಸ್ಥರು ಸೇರಿದಂತೆ ೧೫ ಜನರು ಇರುತ್ತಾರೆ. ಮೂರು ತಿಂಗಳಿಗೊಮ್ಮೆ ಇವರು ಸಭೆ ಸೇರುತ್ತಾರೆ.

- **ಶೈಕ್ಷಣಿಕ ಮಂಡಳಿ:**

ಸಿಸ್ಲೆಪ್ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳು ಅದರ ವಿಷಯ ಹಾಗೂ ವಿಧಾನಗಳನ್ನು ನಿರ್ಧರಿಸುವುದು ಇದರ ಜವಾಬ್ದಾರಿ. ಸಿಸ್ಲೆಪ್‌ನ ನಿರ್ದೇಶಕರು ಇದರ ಅಧ್ಯಕ್ಷರಾಗಿದ್ದು, ರಾಜ್ಯ

ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ(ಡಿಎಸ್‌ಇಆರ್‌ಟಿ)ಯ ನಿರ್ದೇಶಕರು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ವಿಭಾಗಗಗಳ ನಿರ್ದೇಶಕರು,ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಒಬ್ಬರು ಪ್ರಾಚಾರ್ಯರು (ಆವರ್ತನ ಸ್ಥಾನ) ಇದರ ಸದಸ್ಯರು. ಕಾರ್ಯಕ್ರಮ ಸಲಹಾ ಸಮಿತಿಯಂತೆ ಕಾರ್ಯಗೈಯುವ ಈ ಮಂಡಳಿ ಸಿಸ್ಲೆಪ್‌ನ ಉದ್ದೇಶಗಳನ್ನು ಕಾರ್ಯಚಟುವಟಿಕೆಗಳ ಮುಖಾಂತರ ಸಾಕಾರಗೊಳಿಸುತ್ತದೆ. ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ಸೇರುವುದು. ಅಗತ್ಯವಿದ್ದಲ್ಲಿ ಎಷ್ಟುಬಾರಿಯಾದರೂ ಸಭೆ ಸೇರಬಹುದು.

- **ಸಿಬ್ಬಂದಿ ಮತ್ತು ಹಣಕಾಸು ಮಂಡಳಿ:**

ಸಿಸ್ಲೆಪ್ ನ ಆಯವ್ಯಯ ರೂಪಿಸುವುದು, ಸಿಬ್ಬಂದಿಗಳ ನೇಮಕ, ಸೇವಾ ನಿಯಮಗಳನ್ನು ರೂಪಿಸುವುದು, ಕಟ್ಟಡ ಮತ್ತು ಇತರೆ ಮೂಲಭೂತ ಸೌಕರ್ಯಗಳ ಉಸ್ತುವಾರಿಮೊದಲಾದವು ಇ ಮಂಡಳಿಯ ಜವಾಬ್ದಾರಿಗಳಾಗಿವೆ.

ಹೀಗೆ ಈ ಸಂಸ್ಥೆಯ ಕಾರ್ಯಭಾರವನ್ನು ಆಡಳಿತ, ಕಾರ್ಯನಿರ್ವಾಹಕ ಮಂಡಳಿ, ಶೈಕ್ಷಣಿಕ ಮಂಡಳಿ ಹಾಗೂ ಸಿಬ್ಬಂದಿ ಮತ್ತು ಹಣಕಾಸು ಮಂಡಳಿಗಳು ನಿರ್ವಹಿಸುತ್ತವೆ.

೬.೩. ಟ್ರೇನಿಂಗ ಕಾಲೇಜ ಆಚರಿಸಿದ ಶತಮಾನೋತ್ಸವಗಳು:

- **ಟ್ರೇನಿಂಗ ಕಾಲೇಜಿನ ಪ್ರಥಮ ಶತಮಾನೋತ್ಸವ: ೧೯೫೭ ಡಿಸೆಂಬರ ೨೭ ಮತ್ತು೨೮**

ತರಬೇತಿ ವಿದ್ಯಾಲಯಕ್ಕೆ ೧೯೫೬ರಲ್ಲಿ ನೂರು ವರ್ಷ ತುಂಬಿದವು. ಮರವರ್ಷ ೧೯೫೭ರ ಡಿಸೆಂಬರ ೨೭ ಮತ್ತು ೨೮ರಂದು ಶತಮಾನೋತ್ಸವ ಆಚರಣೆ ಮಾಡಲಾಯಿತು. ಈ ಶತಮಾನೋತ್ಸವವು ಎರಡು ದಿನಗಳ ಕಾಲ ನೇರವೇರಿತು. ಇದು ಉತ್ತರ ಕರ್ನಾಟಕದಲ್ಲಿಯೇ ಮೊದಲನೆಯ ಶತಮಾನೋತ್ಸವ ಎಂಬ ಹೆಗ್ಗಳಿಕೆ ಪಡೆಯಿತು.

ಮೊದಲ ದಿನ ಉದ್ಘಾಟನೆ ಹಾಗೂ ಸ್ಮಾರಕ ಸಂಚಿಕೆಯ ಬಿಡುಗಡೆ ನಡೆಯಿತು. ಈ ಉತ್ಸವವು ಪಾಠಾಭ್ಯಾಸ ಶಾಲೆಯ ಮುಂದೆ ಅಲಂಕರಿಸಿದ ಭವ್ಯ ಮಂಟಪದಲ್ಲಿ ಬಂಥನಾಳ ಶಿವಯೋಗಿಗಳಾದ ಶ್ರೀ ಸಂಗನಬಸವ ಮಹಾಸ್ವಾಮಿಗಳ ಸಾನಿಧ್ಯದಲ್ಲಿ, ಡಾ. ಡಿ.ಸಿ.ಪಾವಟೆಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ, ವಿದ್ಯುಕ್ತವಾಗಿ ನೇರವೇರಿತು. ಅದೇ ದಿನ ಸಂಜೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪಂಡಿತ ವಿದ್ಯಾರತ್ನ, ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರೀಗಳು ಸ್ಮಾರಕ ಸಂಚಿಕೆಯನ್ನು ಬಿಡುಗಡೆಗೊಳಿಸಿ ಶಿಕ್ಷಕರ ಮನಮುಟ್ಟುವಂತೆ ಮಾತನಾಡಿದರು.

ಎರಡನೆಯ ದಿನ ದಿನಾಂಕ ೨೮ರಂದು ಭಾವಚಿತ್ರಗಳ ಅನಾವರಣವು ಶ್ರೀ ಆಲೂರು ವೆಂಕಟರಾಯರಿಂದ ನೇರವೇರಿತು. ಮಧ್ಯಾನ್ಹ ಜೀವನ ಶಿಕ್ಷಣ ಪತ್ರಿಕೆಯ ಪ್ರದರ್ಶನ ಶ್ಯಾಮರಾವ ಹುಕ್ಕೇರಿಕರ ಇವರು ಉದ್ಘಾಟಿಸಿ, ವಿಚಾರ ಸಂಕಿರಣದ ಅಧ್ಯಕ್ಷತೆಯನ್ನೂ ವಹಿಸಿದ್ದರು. ಸಾಯಂಕಾಲ ಡಾ. ಪಾವಟೆಯವರ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಣೆ ಮಾಡುವುದರೊಂದಿಗೆ

ಮುಕ್ತಾಯ ಸಮಾರಂಭಜರುಗಿತು. ಆ ದಿನ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಹೀಗೆ ಟ್ರೇನಿಂಗ ಕಾಲೇಜಿನ ಶತಮಾನೋತ್ಸವವು ವಿಜೃಂಭಣೆಯಿಂದ ನೆರವೇರಿ, ಅಲ್ಲಿ ಶಿಕ್ಷಣ ಪಡೆದ ಎಲ್ಲ ವಿದ್ಯಾರ್ಥಿ ಹಾಗೂ ಅಧಿಕಾರಿಗಳಿಂದ ಸಹಕಾರ ಮತ್ತು ಸಮನ್ವಯತೆ ದೊರೆತು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

• 'ಜೀವನ ಶಿಕ್ಷಣ' ಪತ್ರಿಕೆಯ ಪ್ರಥಮ ಶತಮಾನೋತ್ಸವ: ೧೯೬೭ ಮಾರ್ಚ ೧೯

೧೯೬೫ ಕ್ಕೆ ಜೀವನ ಶಿಕ್ಷಣ ಪತ್ರಿಕೆಗೆ ನೂರು ವರ್ಷ ತುಂಬಿದ್ದರ ಸವಿನೆನಪಿಗಾಗಿ ೧೯೬೭ ಮಾರ್ಚ ೧೯ರಂದು ಪತ್ರಿಕೆಯ ಶತಾಬ್ಧಿ ಸಮಾರಂಭವು ಜರುಗಿತು.೧೦೦ ವರ್ಷದ ಸ್ಮರಣೆಗಾಗಿ ೧೦೦ ಪುಟಗಳ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್. ವಿ. ಜೇವೂರರವರು ವಹಿಸಿದ್ದು, ಉದ್ಘಾಟಣೆಯನ್ನು ಡಾ. ಡಿ.ಸಿ.ಪಾವಟೆಯವರು ನೇರವೇರಿಸಿದರು. ಈ ಸಮಾರಂಭದಲ್ಲಿ ನಾಡಿನ ಗಣ್ಯ ವ್ಯಕ್ತಿಗಳು, ಶಿಕ್ಷಣ ಪ್ರೇಮಿಗಳು, ಸಾಹಿತಿಗಳು, ವಿದ್ವಾಂಸರು ಭಾಗವಹಿಸಿದ್ದರಿಂದ ಅದು ಐಶಸ್ವಿಯಾಗಿ ನಡೆದು ಪತ್ರಿಕಾರಂಗಕ್ಕೆ ಸ್ಫೂರ್ತಿಯನ್ನು ನೀಡಿತು.

• ಪಾಠಾಭ್ಯಾಸ ಶಾಲೆಯ ಶತಮಾನೋತ್ಸವ: ೧೯೭೫ ಫೆಬ್ರುವರಿ ೬ ಮತ್ತು ೭

ಟ್ರೇನಿಂಗ ಕಾಲೇಜಿನಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಮಾದರಿ ಪಾಠವನ್ನು ಕೊಡಲು ೧೮೭೫ರಲ್ಲಿ ಆರಂಭವಾದುದು ಈ ಪಾಠಾಭ್ಯಾಸ ಶಾಲೆ. ತರಬೇತಿ ವಿದ್ಯಾಲಯದಲ್ಲಿ ಏನೇ ಕಾರ್ಯಕ್ರಮ ನಡೆದರೂ ಅದು ಶಾಲೆಯನ್ನೊಳಗೊಂಡೇ ಇರುತ್ತಿತ್ತು. ಹಾಗಾಗೀ ಪಾಠಾಭ್ಯಾಸ ಶಾಲೆ ತರಬೇತಿ ವಿದ್ಯಾಲಯದ ಅವಿಭಾಜ್ಯ ಅಂಗವಾಗಿ, ಜೊತೆಜೊತೆಯಲ್ಲಿಯೇ ಹೆಜ್ಜೆ ಹಾಕಿದಂಥದ್ದು. ಇದು ಸಾಕಷ್ಟು ಅಧಿಕಾರಿಗಳ ಗಣ್ಯ ವ್ಯಕ್ತಿಗಳ ಮೆಚ್ಚುಗೆ ಗಳಿಸಿದಂಥದ್ದು. ತರಬೇತಿ ವಿದ್ಯಾಲಯದ ಹಿಂಭಾಗದಲ್ಲಿ ತನ್ನದೇ ಆದ ಕಟ್ಟಡದಲ್ಲಿ ೧೮೭೫ರಲ್ಲಿ ಆರಂಭವಾದ ಶಾಲೆಗೆ ೧೯೭೫ಕ್ಕೆ ನೂರು ವರ್ಷ ತುಂಬಿದ ಸಂಭ್ರಮ.

ಶಾಲೆಯ ಹಳೆಯ ವಿದ್ಯಾರ್ಥಿಗಳು, ನಿವೃತ್ತ ಶಿಕ್ಷಕರು ಮತ್ತು ಅಭಿಮಾನಗಳ ಇಚ್ಛೆಯ ಮೆರೆಗೆ ಶತಮಾನೋತ್ಸವವನ್ನು ೧೯೭೫, ಫೆಬ್ರುವರಿ ೬ ಮತ್ತು ೭ರಂದು ಆಚರಿಸಲಾಯಿತು. ಸಮಾರಂಭದ ಪ್ರಾರಂಭೋತ್ಸವವು ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳಾದ ಶ್ರೀ ರಾಜಯೋಗೀಂದ್ರ ಮಹಾಸ್ವಾಮಿಗಳ ಅಮೃತಹಸ್ತದಿಂದ ಉದ್ಘಾಟಣೆಗೊಂಡಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ. ಸ.ಸ.ಮಾಳವಾಡ ಇವರು ವಹಿಸಿದ್ದರು. ಕೇಂದ್ರ ಸರ್ಕಾರದ ಸಚಿವರಾದ ಶ್ರೀಮತಿ ಸರೋಜಿನಿ ಮಹಿಷಿಯವರು ಅತಿಥಿಗಳಾಗಿ ಆಗಮಿಸಿದ್ದರು. ದಿನಾಂಕ ೭ರಂದು ಸ್ಮರಣ ಸಂಚಿಕೆಯ ಬಿಡುಗಡೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀ ಎಸ್.ಎಸ್. ಒಡೆಯರ ಇವರು ನೆರವೇರಿಸಿದರು. ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ವರಕವಿ ದ.ರಾ.ಬೇಂದ್ರೆಯವರು ವಹಿಸಿದ್ದರು. ಆ ಎರಡು ದಿನಗಳಂದು ಶಾಲೆಯು

ಸರ್ವಾಲಂಕಾರಭೂಷಿತವಾಗಿ ಕಂಗೊಳಿಸುತ್ತಿತ್ತು. ನೆರೆದ ವಿಭುದರ ವಿದವತ್ಪೂರ್ಣ ನುಡಿ ಹಾರೈಕೆಗಳಿಂದ ಶತಮಾನೋತ್ಸವವು ಅರ್ಥಪೂರ್ಣವಾಗಿ ಮತ್ತು ಯಶಸ್ವಿಯಾಗಿ ಜರುಗಿತು.[೨]

ಮೇಲೆ ಹೇಳಿದ ಮೂರೂ ಶತಮಾನೋತ್ಸವಗಳನ್ನು ಕಂಡ ಹಿರಿಮೆ ಪ್ರಾಚಾರ್ಯರಾದ ಹ.ಗ ಜೋಶಿಯವರದ್ದು. "ನಾನೀ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವಾಗಲೇ ಮೂರು ಶತಮಾನೋತ್ಸವಗಳು ನಡೆದವು. ೧೯೫೭ನೆಯ ಇಸ್ವಿ ಡಿಸೆಂಬರ ತಿಂಗಳಲ್ಲಿ ಈ ಮಹಾಸಂಸ್ಥೆಯ ಶತಮಾನೋತ್ಸವವಾಯಿತು. ಆಗ ನಾನು ಉಪಶಿಕ್ಷಕನಾಗಿದ್ದೆನು. ೧೮೬೭ನೆ ಫೆಬ್ರುವರಿ ತಿಂಗಳಲ್ಲಿ ಜೀವನ ಶಿಕ್ಷಣ ಪತ್ರಿಕೆಯ ಶತಮಾನೋತ್ಸವ ವಾಯಿತು. ನಾನಾಗ ಪ್ರಾಧ್ಯಾಪಕನಾಗಿದ್ದೆ. ಇದೇ ವರುಷದ (೧೯೭೫) ಫೆಬ್ರುವರಿ ೬ ಹಾಗೂ ೭ನೆಯ ದಿನಾಂಕ ಈ ಸಂಸ್ಥೆಗೆ ಸಂಲಗ್ನವಾದ ಪ್ರಾಯೋಗಿಕ ಶಾಲೆಯ ಶತಮಾನೋತ್ಸವವಾಯ್ತು. ಹೀಗೆ ಮೂರು ಶತಮಾನೋತ್ಸವಗಳನ್ನು ಕಂಡ ಭಾಗ್ಯ ನನ್ನದಾಗಿದೆ."[೩] ಎಂದು ಹೇಳುವ ಮೂಲಕ 'ಅದೊಂದು ಭಾಗ್ಯ' ಎಂದೆನಿಸಿಕೊಳ್ಳುತ್ತಾರೆ.

- **ಜೀವನಶಿಕ್ಷಣ ಪತ್ರಿಕೆಯ ಶತಮಾನೋತ್ತರ ಬೆಳ್ಳಿಹಬ್ಬ- ೧೯೭೫ ಏಪ್ರೀಲ್ ೧೬**

'ಮಠ' ಪತ್ರಿಕೆ ಎಂಬ ಹೆಸರಿನಿಂದ ಪ್ರಾರಂಭವಾಗಿ ಇಂದು 'ಜೀವನ ಶಿಕ್ಷಣ' ಪತ್ರಿಕೆ ಎಂಬ ಹೆಸರಿನೊಂದಿಗೆ ಪ್ರಕಟಗೊಳ್ಳುತ್ತಿರುವ, ಏಳುಬೀಳುಗಳೊಂದಿಗೆ, ೧೨೫ ವರ್ಷಗಳ ಸುಧೀರ್ಘ ಕಾಲ ಬಾಳಿ ಬದುಕಿದ ಪತ್ರಿಕೆ ಶಿಕ್ಷಣ ಪ್ರಪಂಚದಲ್ಲಿ ಅತ್ಯಂತ ವಿರಳ. ಈ ಪತ್ರಿಕೆಯ ಶತಮಾನೋತ್ತರ ಬೆಳ್ಳಿಹಬ್ಬದ ಸಮಾರಂಭವೂ ದಿನಾಂಕ ೧೬-೪-೧೯೮೯ ರಲ್ಲಿ ಅದ್ದೂರಿಯಾಗಿ ನಡೆಯಿತು. ಈ ಸಮಾರಂಭಕ್ಕೆ ಉಪರಾಷ್ಟ್ರಪತಿ ಡಾ. ಶಂಕರದಯಾಳ ಶರ್ಮಾರವರು ಅಗಮಿಸಿ ಪತ್ರಿಕೆಯನ್ನು ಕೊಂಡಾಡಿದರು. ಸಮಾರಂಭಕ್ಕೆ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್, ಆರ್. ಬೊಮ್ಮಾಯಿಯವರು, ರಾಜ್ಯಪಾಲರಾದ ಮಾನ್ಯ ಶ್ರೀ ವೆಂಕಟಸುಬ್ಬಯ್ಯನವರು ಉಪಸ್ಥಿತರಿದ್ದು, ಶಿಕ್ಷಣ ಕ್ಷೇತ್ರಕ್ಕೆ ಡೆ. ಚೆನ್ನಬಸಪ್ಪನವರ ತ್ಯಾಗಪೂರ್ಣ ಸೇವೆಯನ್ನು ನೆನೆದು, ಪತ್ರಿಕೆ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಆಶಿಸಿದರು. ಈ ಸಮಾಗಮಕ್ಕೆ ಆಗಮಿಸಿದ್ದ ಅತಿಥಿ ಅಭ್ಯಾಗತರನ್ನು ಶ್ರೀ ಚಂದ್ರಕಾಂತ ಬೆಲ್ಲದರು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ರಾಷ್ಟ್ರಗೀತೆಯನ್ನು ಸಾಮೂಹಿಕವಾಗಿ ಹಾಡಿದ್ದು ಈ ಕಾರ್ಯಕ್ರಮದಲ್ಲಿ ವೈಶಿಷ್ಟ್ಯಪೂರ್ಣವಾಗಿತ್ತು. ಹೀಗೆ ಬೆಳ್ಳಿಹಬ್ಬದ ಸಮಾರಂಭವು ಅದ್ದೂರಿಯಾಗಿ ನಡೆದು ಕನ್ನಡಿಗರಿಗೆಹಾಗೂ ಪತ್ರಿಕಾರಂಗಕ್ಕೆ ಉತ್ತೇಜನಕಾರಿಯಾಗಿತ್ತು.

- **ಗಂಗಾಧರ ಮಡಿವಾಳೇಶ್ವರ ತುರಮರಿಯವರ ಪುಣ್ಯತಿಥಿ ಶತಾಬ್ಧಿ: ೧೯೭೭ ನವೆಂಬರ ೨೮**

ದಿ. ಗಂಗಾಧರ ಮಡಿವಾಳೇಶ್ವರ ತುರಮರಿಯವರು ಗಾವಟಿ ಶಾಲೆಯ ಶಿಕ್ಷಕರಾಗಿ ತಮ್ಮ ಕಾಯಕವನ್ನು ಪ್ರಾರಂಭ ಮಾಡಿದವರು. ಇವರು ಸುಮಾರು ಮೂವತ್ತು ವರ್ಷ ಶಿಕ್ಷಕರಾಗಿದ್ದುಕೊಂಡು ಕನ್ನಡ ಜನತೆಯಲ್ಲಿ ಕನ್ನಡದ ಬಗೆಗೆ ಆಸಕ್ತಿ ಅಭಿಮಾನವನ್ನು ಬಿತ್ತಿ ಬೇಳೆಸಿದವರು. ಬಾಣಭಟ್ಟನ ಸಂಸ್ಕೃತ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿ, ಅದೊಂದು ಮೂಲಕೃತಿ ಎನ್ನುವಂಥ, ಸಾಹಿತ್ಯ ಕ್ಷೇತ್ರಕ್ಕೆ ನಭೂತೋನಭವಿಷ್ಯತಿಃ ಕೊಡುಗೆ ನೀಡಿದವರು.

ಶಲಾಪತ್ರಪುಸ್ತಕಗಳು, ನಿಘಂಟು ರಚನೆ, ಕಾವ್ಯ ರಚನೆಯಂತಹ ಮಹತ್ಕಾರ್ಯ ಮಾಡಿ ಗದ್ಯ ಸಾಹಿತ್ಯದ ಪಿತಾಮಹರೆನಿಸಿದವರು.

ಆದರ್ಶ ಶಿಕ್ಷಕರಾದ ತುರಮರಿಯವರು 'ಮಠಪತ್ರಿಕೆ'ಯ ಸಂಪಾದಕರಾಗಿ, ಪಾಂಡಿತ್ಯಪೂರ್ಣ ಲೇಖನಗಳಿಂದ ಮತ್ತು ನಿರ್ವಹಣಾ ಚಾತುರ್ಯದಿಂದ ಪತ್ರಿಕೆಯ ಘನತೆಯನ್ನು ನಾಡಿನ ತುಂಬ ವಿಸ್ತರಿಸಿದಂಥವರು. ಶಿಕ್ಷಕರಾಗಿ, ಉಪಪ್ರಾಚಾರ್ಯರಾಗಿ, ಪ್ರಾಚಾರ್ಯಗಾಗಿ, ಸಂಪಾದಕರಾಗಿ, ಭಾಷಾಂತರಕಾರರಾಗಿ, ಗ್ರಂಥಕರ್ತರಾಗಿ ಕನ್ನಡ ಭಾಷೆ, ಶಿಕ್ಷಣ ಹಾಗೂ ಸಾಹಿತ್ಯವನ್ನು ಪುರಿಜ್ಜೀವನಗೊಳಿಸಿದ ಮಹಾನುಭಾವರು. ಇವರು ಶಿಕ್ಷಕ ವೃತ್ತಿಯಲ್ಲಿರುವಾಗಲೇ ೧೮೭೭ರಂದು ಮರಣ ಹೊಂದಿದರು. ಇವರ ಪುಣ್ಯತಿಥಿಯ ಶತಮಾನೋತ್ಸವವನ್ನು ತರಬೇತಿ ವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಬಳಗದ ಬಳ್ಳಿಯ ಸದಸ್ಯರು ಸೇರಿ ೧೯೭೭ ನವೆಂಬರ ೨೮ರಂದು ಆಚರಿಸುವ ಮೂಲಕ ಅವರ ಸಾರ್ಥಕಸೇವೆಯನ್ನು ಸ್ಮರಿಸಿಕೊಳ್ಳಲಾಯಿತು. ಅಂದಿನ ಸಮಾರಂಭದ ಸಾನಿಧ್ಯವನ್ನು ಡಾ. ಜ.ಚ.ನಿ. ವಹಿಸಿದ್ದರು. ಆ ಸಂದರ್ಭದಲ್ಲಿ ತುರಮರಿಯವರ 'ಜೀವನ ಮತ್ತು ಕೃತಿಗಳ' ಪರಿಚಯಿಸುವ ಸ್ಮರಣಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಇದೊಂದು ಸರಳ, ಸುಂದರ, ಸಂಭ್ರಮದ ಮಾದರಿ ಸಮಾರಂಭವಾಗಿತ್ತು.

ಸ್ವಾತಂತ್ರ್ಯಾ ನಂತರ ಕೇಂದ್ರ ಸರಕಾರದ ತ್ರಿಭಾಷಾ ಸೂತ್ರ ನೀತಿನಿರೂಪಣೆಯಿಂದಾಗಿ ಶಾಲಾ ಶಿಕ್ಷಣದ ಭಾಷಾ ನೀತಿಯಿಂದಾದದ ವೈಪರೀತ್ಯವನ್ನು ಸರಿಪಡಿಸಿ ಕನ್ನಡ ನೆಲದಲ್ಲಿ ಕನ್ನಡವನ್ನು ಉಳಿಸಿ, ಬೆಳೆಸಲು ಶಿಕ್ಷಣದಲ್ಲಿ ಕನ್ನಡ ಇರುವುದು ಕಡ್ಡಾಯವಾಗಬೇಕು ಎಂಬ ಅಗ್ರಹವನ್ನು ಹೂಡಿ, ವಿ.ಕೃ.ಗೋಕಾಕರ ಮುಂದಾಳತ್ವದಲ್ಲಿ, ೧೯೮೦ ಅಕ್ಟೋಬರ ೨೩ರಂದು ಹಮ್ಮಿಕೊಂಡ ಗೋಕಾಕ ಚಳುವಳಿ ನಡೆದದ್ದೂ ಇದೇ ಟ್ರೇನಿಂಗ ಕಾಲೇಜಿನ ಸಭಾ ಭವನದಲ್ಲಿಯೇ. ಶಾಲಾ ಶಿಕ್ಷಣದಲ್ಲಿ ಕನ್ನಡ ಕಡ್ಡಾಯಗೋಳಿಸಲು ನಡೆದ ಈ ಚಳುವಳಿಯ ಕಾವು ತೀವ್ರಗೊಳ್ಳಲು ಪಾಟೀಲ ಪುಟ್ಟಪ್ಪ ಮಾಡಿದ ಮನವಿಗೆ ಓಗೊಟ್ಟು, ಡಾ. ರಾಜಕುಮಾರ ಮುಂತಾದ ಗಣ್ಯರು ಮುಂದಾಳತ್ವ ವಹಿಸಿದ ಈ ಚಳುವಳಿ ನಡೆದ್ದು ಇದೇ ಟ್ರೇನಿಂಗ ಕಾಲೇಜಿನ ಆವರಣದಲ್ಲಿಯೇ. ಸಾವಿರಾರು ಜನರ ಕನ್ನಡ ಪ್ರಜ್ಞೆಗೆ ಸಾಕ್ಷಿಯಾದದ್ದು ಈ ಪವಿತ್ರ ನೆಲ.

- **ಡೆಪ್ಯೂಟಿ ಚನ್ನಬಸಪ್ಪನವರ ಪುಣ್ಯತಿಥಿ ಶತಮಾನೋತ್ಸವ– ೧೯೮೧**

ಡೆಪ್ಯೂಟಿ ಚನ್ನಬಸಪ್ಪನವರ ಪುಣ್ಯತಿಥಿ ಶತಮಾನೋತ್ಸವದ ಇದೇ ಸಮಾರಂಭದಲ್ಲಿಯೇ ಮೇಲೆ ತಿಳಿಸಿದ ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನದ ಉದ್ಘಾಟನಾ ಸಮಾರಂಭವೂ ನಡೆದಿರುವಂಥದ್ದು.

ಉತ್ತರ ಕರ್ನಾಟಕದಲ್ಲಿದ್ದ ಮರಾಠಿಯ ಪ್ರಾಬಲ್ಯವನ್ನು ಕಡಿಮೆಗೊಳಿಸಿ, ಮನೆಮನೆಯಲ್ಲಿ ಕನ್ನಡದ ಜ್ಯೋತಿಯನ್ನು ಬೆಳಗಿಸಿ, ಬಡ ವಿದ್ಯಾರ್ಥಿಗಳಿಗಾಗಿ ಉಚಿತ ಪ್ರಸಾದ ನಿಲಯವನ್ನು

ಪ್ರಾರಂಭಿಸಿ ಶೈಕ್ಷಣಿಕ ರಂಗದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದರು. ಇವರ ಭವ್ಯ ವ್ಯಕ್ತಿತ್ವದಿಂದ ಕನ್ನಡದ ಕಂಪು ಎಲ್ಲೆಡೆ ಪಸರಿಸಿ, ಇಂದು ಕನ್ನಡದ ಜ್ಯೋತಿಯಾಗಿ ಬೆಳಗುತ್ತಿದೆ. ಇವರು ಜೀವಿತ ಅಲ್ಪ ಕಾಲದಲ್ಲಿ ಮಾಡಿದ ಸಾಧನೆಗಳು ಚಿರಸ್ಮರಣೀಯ. ಇವರು ತೀರ ಚಿಕ್ಕ ವಯಸ್ಸಿನಲ್ಲಿಯೇ ಅಂದರೆ ತಮ್ಮ ೪೮ನೆಯ ವಯಸ್ಸಿಗೆ ೧೮೮೧ ಜನೇವರಿ ೪ರಂದು ನಿಧನ ಹೊಂದಿದರು. ಅವರ ಪುಣ್ಯತಿಥಿ ಶತಮಾನವು ೧೯೮೧ ಜನೇವರಿ ೪ರಂದು ವೈಭವದಿಂದ ನೇರವೇರಿತು. ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಜಿ.ಬಿ ಶಂಕರರಾವ ಅವರು ವಹಿಸಿದ್ದು, ಹಣಕಾಸು ಮಂತ್ರಿಗಳಾಗಿದ್ದ ಮಾನ್ಯ ಶ್ರೀ ವೀರಪ್ಪ ಮೋಯ್ಲಿ ಅತಿಥಿಗಳಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿಗಳನ್ನು ನಡೆಸಲಾಯಿತು. ಇದೇ ಸಂದರ್ಭದಲ್ಲಿಯೇ ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನದ ಆರಂಭ ಮತ್ತು 'ಕನ್ನಡದ ದೀಪ' ಎಂಬ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭಗಳು ನೆರವರಿದವು.

- **ಟ್ರೇನಿಂಗ ಕಾಲೇಜಿನ ಶತಮಾನೋತ್ತರ ಸುವರ್ಣ ಮಹೋತ್ಸವ– ೨೦೧೨**

ಟ್ರೇನಿಂಗ ಕಾಲೇಜಿನ ಸ್ಥಾಪನೆಯಾಗಿ ೨೦೦೬ಕ್ಕೆ ಸರಿಯಾಗಿ ೧೫೦ ವರ್ಷಗಳು ತುಂಬಿದವು. ಹಾಗೆಂದು ಶತಮಾನೋತ್ತರ ಸುವರ್ಣ ಮಹೋತ್ಸವವನಾಚರಿಸಲು ಸರಕಾರದಿಂದ ಅನುದಾನ ಮತ್ತು ಅನುಮತಿಯನ್ನು ಕೋರಿ ೨೦೦೬ರಿಂದಲೇ ಪ್ರಯತ್ನಗಳು ನಡೆದು, ಕೊನೆಗೆ ೨೦೧೨, ಡಿಸೆಂಬರ ೧೨ರಂದು 'ಶತಮಾನೋತ್ತರ ಸುವರ್ಣ ಮಹೋತ್ಸವ' ಜರುಗಿತು. ಗದಗಿನ ಶ್ರೀ ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಜಿಯವರ ಸಾನಿಧ್ಯ, ಹುಬ್ಬಳ್ಳಿ ಧಾರವಾಡ ವಿಧಾನಸಭಾ ಕ್ಷೇತ್ರದ ಸ್ಥಳಿಯ ಶಾಸಕರಾದ ಶ್ರೀ ಚಂದ್ರಕಾಂತ ಬೆಲ್ಲದ ಇವರ ಅಧ್ಯಕ್ಷತೆ, ಶ್ರೀ ಎಂ.ಎಂ. ಕಲಬುರ್ಗಿ, ಶ್ರೀ ಚನ್ನವೀರ ಕಣವಿ, ಶ್ರೀ ಗುರುಲಿಂಗ ಕಾಪ್ಸೆಯವರ ಅತಿಥಿಗಳಾಗಿ, ಸಾರ್ವಜನಿಕ ಇಲಾಖೆಯ, ಬೆಳಗಾವಿ ವಲಯ ಕಚೇರಿಯ ಅಪರ ಆಯುಕ್ತರಾದ ಶ್ರೀ ಎ.ಎನ್.ಪಾಟೀಲರ ಮುಂದಾಳತ್ವದಲ್ಲಿ 'ಶತಮಾನೋತ್ತರ ಸುವರ್ಣ ಮಹೋತ್ಸವ' ವಿಜೃಂಬಣೆಯಿಂದ ನೇರವೇರಿತು. ಅಂದೇ ಶ್ರೀ ಪ್ರಹ್ಲಾದ ಜೋಶಿಯವರಿಂದ (ಸಿಸ್ಲೆಪ್) ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಸಂಸ್ಥೆಯ ಅಡಿಗಲ್ಲು ಸಮಾರಂಭವೂ ಜರುಗಿತು.

ಹೀಗೆ ಅಂದಿನಿಂದ ಇಂದಿನವರೆಗೆ ಹಲವಾರೂ ಬಾರಿ ತನ್ನ ನೆಲೆಯನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದು ನಿಂತರೂ, ಬಂದಂತಯೇ ತನ್ನಷ್ಟಕ್ಕೆ ಕರಗಿಹೋಗಿ, ಹಲವು ವಿದ್ಯಾಲಯಗಳಿಗೆ ಮಡಿಲಾಗಿ, ಮಾತೃಸಂಸ್ಥೆಯಾಗಿ ಇಂದಿಗೂ ತನ್ನತನವನ್ನು ಉಳಿಸಿಕೊಂಡು ಬಂದ ಹೆಮ್ಮೆ ಈ ಸಂಸ್ಥೆಗಿದೆ.

ಕೊನೆ ಟಿಪ್ಪಣಿಗಳು

೧- ಜೀವನ ಶಿಕ್ಷಣ- ಸಂ ೧೧೨, ಸಂ ೧, ಸಂಪಾದಕೀಯ, ಜನೇವರಿ-೧೯೭೬

೨- ಜೀವನ ಶಿಕ್ಷಣ-ಸಂ ೧೧೧, ಸಂ ೨, ಹ.ಗ.ಜೋಶಿ, ಸಂಪಾದಕೀಯ, ಫೆಬ್ರುವರಿ-೧೯೭೪

೩- ಜೀವನಶಿಕ್ಷಣ-ಸಂ ೧೧೧, ಸಂ ೨, ಹ.ಗ.ಜೋಶಿ, ಸಂಪಾದಕೀಯ, ನಾವ್ ಬರ್ತೇವಿನ್- ಮಾರ್ಚ ೧೯೭೪

ಅಧ್ಯಾಯ : ೭

ಸಮಾರೋಪ

ಅಧ್ಯಾಯ ೭

ಸಮಾರೋಪ

ಭಾಷೆ, ಶಿಕ್ಷಣ ಮತ್ತು ಸಾಹಿತ್ಯ ಈ ಮೂರೂ ಪರಸ್ಪರ ಪೂರಕವಾಗಿ, ಪೋಷಕವಾಗಿ ಬೆಳೆದು ಬರಬೇಕು. ಭಾಷೆ ಸಂಪರ್ಕ ಮಾಧ್ಯಮವಾಗಿದ್ದು ಶಿಕ್ಷಣದ ಮೂಲಕ ಬೆಳೆದು ಸಾಹಿತ್ಯವಾಗಿ ಉಳಿಯುತ್ತದೆ. ಸಾಮಾನ್ಯ ಮಾತಿಗೆ ಶಾಶ್ವತತೆಯನ್ನು, ಸಾರ್ಥಕತೆಯನ್ನು ಭಾಷೆ ಮತ್ತು ಸಾಹಿತ್ಯ ನೀಡುತ್ತದೆ. ಭಾಷೆ ಮತ್ತು ಸಾಹಿತ್ಯದ ನೆಲೆಯ ಮೂಲ ಶಿಕ್ಷಣದಲ್ಲಿದೆ. ಈ ಕಾರ್ಯ ಶಿಕ್ಷಣದಿಂದಲೇ ಅಂದರೆ ಕ್ರಮಾಗತ ಕಲಿಕೆಯಿಂದಲೇ ಆಗಬೇಕಾಗಿರುವುದರಿಂದ ಭಾಷಾಶಿಕ್ಷಣ ಚಿಂತನೆಗೆ, ಅಭಿವೃದ್ಧಿಗೆ, ಸಂಪರ್ಕಕ್ಕೆ ಮತ್ತು ಸಾಹಿತ್ಯ ನಿರ್ಮಾಣಕ್ಕೆ ತಳಹದಿಯಾಗಿದೆ.

ಇಂಥ ತಳಮೂಲದ ಶಿಕ್ಷಣ ನೀಡುವಲ್ಲಿ ಆರಂಭಿಕ ಹಂತದಿಂದಲೇ ತರಬೇತಿ ಸಂಸ್ಥೆಯೊಂದು ಅಹರ್ನಿಶವಾಗಿ ತನ್ನನ್ನು ತೆಯ್ದುಕೊಂಡ ಪರಿ ಇಲ್ಲಿ ಸಂಶೋಧನೆಯಲ್ಲಿ ವಿವರಿಸಲಾಗಿದೆ. ಮಾರ್ಗ ಅನುಸರಿಸುವ ಹಂತದಲ್ಲಿ ನಿಂತುಕೊಂಡು ಮಾರ್ಗ ನಿರ್ಮಿಸಿದವರ ಮತ್ತು ಆ ವ್ಯವಸ್ಥೆಯ ಅವಲೋಕನವನ್ನು ಇಲ್ಲಿ ಮಾಡಲಾಗಿದೆ. ಪರಕೀಯ ಆಳ್ವಿಕೆ, ದಬ್ಬಾಳಿಕೆಯಲ್ಲಿ ನಿರ್ಣಯ, ನಿರ್ಧಾರಗಳು, ಹಂಚಿಕೆ ನೀಡಿಕೆಗಳು, ಹೊಗಳಿಕೆ ಹಿರಿಮೆಗಳು ಮತ್ತು ಫಲಿತಾಂಶ, ಪುರಸ್ಕಾರ, ಸಮ್ಮಾನಗಳು ಹಾಗೂ ಸಫಲತೆ ಸಾರ್ಥ್ಯಕ್ಯಗಳೆಲ್ಲದಕ್ಕೂ ಪರತಂತ್ರದ ಪರಮಾವಧಿಯೇ ನಿರ್ಣಾಯಕವಾಗಿದ್ದ ಹಂತದಲ್ಲಿ ಉತ್ತರ ಕರ್ನಾಟಕ ಭಾಗದ ಜನತೆಗೆ ಅಕ್ಷರ ಬೀಜ ಬಿತ್ತಿ, ಬೆಳೆ ಬೆಳೆದ ಅಸಾಧ್ಯ ಹಿರಿಮೆಯ ಒಂದು ಸಂಸ್ಥೆ ಇದಾಗಿದೆ. ಇದರ ಸಂಪೂರ್ಣ ಸಿಂಹಾವಲೋಕನವನ್ನು ಇಲ್ಲಿ ಮಾಡಲಾಗಿದೆ. ಒಟ್ಟು ನೂರು ವರ್ಷಗಳ ಅವಧಿಯನ್ನವಲೋಕಿಸಿ ಈ ಸಂಶೋಧನೆಯನ್ನು ಕೈಕೊಳ್ಳಲಾಗಿದೆ.

ಮೊದಲ ಅಧ್ಯಾಯದಲ್ಲಿ ಸಮಸ್ಯೀಕರಣ, ಅಧ್ಯಯನದ ಉದ್ದೇಶಗಳು, ವ್ಯಾಪ್ತಿ, ಮಹತ್ವ ವಿಧಾನ ಮತ್ತು ಸ್ವರೂಪಗಳ ಕುರಿತು ವಿವರಿಸಲಾಗಿದೆ. ಹಿನ್ನೆಲೆ, ಈ ವಿಷಯವನ್ನಾಯ್ದುಕೊಳ್ಳಲು ಇದ್ದ ಉದ್ದೇಶಗಳನ್ನು, ನೂರು ವರ್ಷದ ವ್ಯಾಪ್ತಿಯನ್ನು ಮತ್ತು ಅಧ್ಯಯನದ ಮಹತ್ವವನ್ನು, ಮಾಹಿತಿ ಪಡೆದ ವಿಧಾನಗಳನ್ನು ಇಲ್ಲಿ ವಿವರಿಸಲಾಗಿದೆ. ಮರಾಠರನ್ನು ಬಗ್ಗುಬಡಿದು, ಕನ್ನಡದ ನೆಲದಲ್ಲಿ ಒಳ ಪ್ರವೇಶಿಸಿ ಆಂಗ್ಲರು ಹಂತಹಂತವಾಗಿ ತಳಊರಿ, ತಮ್ಮ ವ್ಯಾಪಾರ ವಹಿವಾಟುಗಳನ್ನು ಹೆಚ್ಚಿಸಿಕೊಂಡರೂ, ಮರಾಠಿಗರನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗದೆ, ಅವರಿಗೊಂದಿಷ್ಟು ಹಂಚಿ, ತಾವು ಕಾರ್ಯಭಾರ ನಡೆಸಿದ ರೀತಿಯನ್ನು ವಿವರಿಸಲಾಗಿದೆ. ತನ್ನದಲ್ಲದ ನೆಲದಲ್ಲಿ, ಅನ್ಯಸ್ಥಳದಲ್ಲಿ ಪರಕೀಯ ನೆಲೆಊರಿ, ವ್ಯಾಪಾರ ಮಾಡುವುದು ಅಸಾಧ್ಯವಾದಾಗ, ತಮ್ಮ ವಹಿವಾಟು ಹಂಚಿಕೆಗೆ, ದಾಖಲೆ ನಿರ್ವಹಣೆಗೆ, ಸಂಪರ್ಕಕ್ಕೆ ಮತ್ತು ಧರ್ಮ ಪ್ರಚಾರಕ್ಕೆ ಸ್ಥಳೀಯ ಭಾಷೆ, ಸ್ಥಳೀಯರ ಸಂಪರ್ಕಮತ್ತು ಸಹಕಾರದ ಅಗತ್ಯ ಒದಗಿ ಬಂದಾಗ ನಾಲ್ಕು ಅಕ್ಷರ ಭಾರತೀಯರಿಗೆ ಕಲಿಸಬೇಕೆಂಬ

ಸ್ವಾರ್ಥಆಶಯದಿಂದ ಬ್ರಿಟಿಷರು ಶಿಕ್ಷಣ ನೀಡಲು ಮುಂದಾದ ರೀತಿಯನ್ನು ವಿವರಿಸಲಾಗಿದೆ. ಅಂಥದ್ದರಲ್ಲಿಯೇ ಕೆಲವು ಬ್ರಿಟಿಷ ಅಧಿಕಾರಿಗಳು ಈ ನೆಲದ ಮೂಲ ಅರಿತು ಆರಂಭಿಸಿದ ಶಾಲೆಯೇ ಈ ಉತ್ತರ ಕರ್ನಾಟಕದ ಮೊದಲ ಶಾಲೆಯಾದ ವಿಪರ್ಯಾಸವನ್ನು ತಿಳಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ತಮ್ಮ ವ್ಯವಹಾರಿಕ ಸಾಮ್ರಾಜ್ಯ ಸ್ಥಾಪನೆಗೆ ಅಕ್ಷರ ಜ್ಞಾನದ ಅವಶ್ಯಕತೆಗೆ ಶಾಲೆಗಳನ್ನಾರಂಭಿಸಿದ್ದರಿಂದ, ಪಠ್ಯವಸ್ತುವಿಗಾಗಲಿ, ಪಠ್ಯಕ್ರಮ-ಪಠ್ಯಪುಸ್ತಕಕ್ಕಾಗಲಿ ಯಾವುದೇ ತಾತ್ವಿಕ ತಳಹದಿ ಇಲ್ಲದೇ ಯಾರದ್ದೋ ದುಡ್ಡು ಯಾರದ್ದೋ ಜಾತ್ರೆ ಎಂಬಂತಾದ ಶಿಕ್ಷಣದ ಸ್ಥಿತಿಯ ಕುರಿತಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಸಂದಿಗ್ಧ ಪರಿಸ್ಥಿತಿಯಲ್ಲಿ 'ನಾರ್ಮಲ್ ಕ್ಲಾಸ್' ಆಗಿ ಹುಟ್ಟಿ, ಇಡೀ ಉತ್ತರ ಕರ್ನಾಟಕಕ್ಕೆ ಅಕ್ಷರಜ್ಯೋತಿಯಾದ ಪರ್ಯಂತದ ದಾರಿಯನ್ನು ಪರಿಚಯಿಸಲಾಗಿದೆ. ಈ ಪರ್ಯಂತದ ದಾರಿಯಲ್ಲಿ 'ಮಠ ಪತ್ರಿಕೆ' ಮತ್ತು ಶಿಕ್ಷಣ ಸಾಹಿತ್ಯದ ಮೂಲ ನಿರ್ಮಾತೃಗಳ ಕುರಿತು ಚರ್ಚಿಸಲಾಗಿದೆ. ಈ ಪಯಣದಲ್ಲಿ ಸಾಮಾಜಿಕತೆ, ಜಾತಿಯತೆ ಮತ್ತು ಉಳ್ಳವರ ನಿರ್ಣಾಯಕ ಅಧಿಕಾರ, ನಿರ್ಗತಿಕರಿಗೆ ಆದ ಪರಿತಾಪ ಈ ಎಲ್ಲವನ್ನು ಅವಲೋಕಿಸುವ ಅಧ್ಯಯನದ ಆಶಯವನ್ನು ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ ತರಬೇತಿ ಕಾಲೇಜು ಆರಂಭವಾಗುವ ಮೊದಲು ಮತ್ತು ನಂತರ ಸಮಕಾಲೀನ ಪರಿಸ್ಥಿಯಲ್ಲಿ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಪರಿಸರಗಳು ಮತ್ತು ಅವು ಬೀರಿದ ಪ್ರಭಾವಗಳ ಕುರಿತಾಗಿ ವಿವರಿಸಲಾಗಿದೆ. ತಮ್ಮತನದ, ತಮ್ಮನೆಲ, ಜಲ, ಭಾಷೆಯ ಕುರಿತಾಗಿ ಚಿಂತನ ಮಂಥನ ಮಾಡದಿರುವ ಕಾಲದಲ್ಲಿ, ಅಂಥದ್ದೊಂದರ ಅವಶ್ಯಕತೆಯನ್ನು ಮನಗಾಣದೆ, ಇದ್ದದ್ದನ್ನೇ ಬುದುಕುವ ಸನ್ನಿವೇಶದಲ್ಲಿ ಶಿಕ್ಷಣ ಸಂಸ್ಥೆಯೊಂದು ಹುಟ್ಟಿದ ರೀತಿಯನ್ನು ಇಲ್ಲಿ ವಿವರಿಸಲಾಗಿದೆ. ಶಿಕ್ಷಣ ಜಾಗೃತಿಯನ್ನು ಮೂಡಿಸುವ ಕಾರ್ಯ ಭರದಿಂದ ಸಾಗಿದಷ್ಟೇ ಹಿಂದುಳಿದ ವರ್ಗಗಳಿಗೆ ಬೆನ್ನನ್ನೂ ತೋರಿದೆ. ಸಂಪ್ರದಾಯಗಳ ಬಲದಿಂದಾಗಿ ಹಿಂದುಳಿದವರನ್ನು ತುಳಿಯುತ್ತಲೇ ಸಾಗಿದ ಸಂಸ್ಕೃತಿ ಇತಿಹಾಸದುದ್ದಕ್ಕೂ ಲಭಿಸುವಂತೆ ಇಲ್ಲಿಯೂ ಲಭಿಸುತ್ತದೆ.

ಅಧ್ಯಾಯ ಮೂರರಲ್ಲಿ ಟ್ರೇನಿಂಗ ಕಾಲೇಜಿನ ಹುಟ್ಟು ಹೀಗೆ ಎಂದಿರದೆ, ಪ್ರವಾಹದ ಗತಿಯೊಳಗೆ ಪದರುಪದರಾಗಿ ಅದು ತನ್ನನ್ನು ನಿರ್ಮಿಸಿಕೊಂಡ ಸ್ಥಿತಿ, ಕಾಲಗತಿಯೊಳಗೆ ಮುಂದೆ ಶೈಕ್ಷಣಿಕ ರಂಗದ ಅನಿವಾರ್ಯತೆಯಾಗಿ ತಲೆ ಎತ್ತಿದ ರೀತಿ ಕುರಿತು ಚರ್ಚಿಸಲಾಗಿದೆ. ಯಾವ ಮತ್ತು ಯಾರ ನೋಟಕ್ಕೂ ನಿಲುಕದ ಕ್ಷಣದೊಳಗೆ, ಯಾವ ನೀರಹನಿ, ಅಚಾತುರ್ಯವಾಗಿ ಕಪ್ಪೆ ಚಿಪ್ಪಿನೊಳಗೆ ಸೇರಿ, ಎಲ್ಲೆಲ್ಲಿ ಹೊರಳಾಡಿ, ತೇಲಾಡಿ, ಬಿದ್ದು, ಎದ್ದು, ಅದೇ ಪ್ರಕ್ರಿಯೆಯಾಗಿ, ಕೊನೆಗೊಂದು ದಿನ ಮುತ್ತಿನ ಆಕಾರ ಹೊಂದಿ, ಅದರ ಮಹತ್ವ, ಸಂಸ್ಕಾರ ಗೊತ್ತಿರದ ಮೀಂಗುಲಿಗನ ಕೈತಾಗಿ, ಇನ್ನೆಲ್ಲೋ ಹೋಗಿ, ಕೊನೆಗೆ ವಿಶ್ವಕರ್ಮಿಯ ಕೈಸೇರಿ ಸಾರ್ಥ್ಯಕ್ಯಗೊಂಡ ಮುತ್ತಿನ ಕಥೆಯಾದ ಟ್ರೇನಿಂಗ ಕಾಲೇಜಿನ ಇತಿಹಾಸವನ್ನು ಪ್ರಾಥಮಿಕ ಮತ್ತು ಆನುಷಂಗೀಕ

ಆಕರಗಳನ್ನು ಬಳಸಿ ವಿವರಿಸಲಾಗಿದೆ. ನಾರ್ಮಲ್ ಕ್ಲಾಸ್ ಆಗಿ, ನಾರ್ಮಲ್ ಸ್ಕೂಲ್ ಆಗಿ, ತರಬೇತಿ ಸ್ಕೂಲ್ ಆಗಿ ತರಬೇತಿ ಕಾಲೇಜ್ ಉನ್ನತೀಕರಣಗೊಂಡ ಆ ರೋಚಕ ಪರಿಕ್ರಮಣದ ಕುರಿತು ದಾಖಲೆಗಳೊಂದಿಗೆ ವಿವರಿಸಲಾಗಿದೆ. ಟ್ರೈನಿಂಗ್ ಕಾಲೇಜಿನ ಪರಿಕಲ್ಪನೆ, ಶೈಕ್ಷಣಿಕ ರಂಗದ ಅನಿವಾರ್ಯತೆ, ಧಾರವಾಡದ ಇತಿಹಾಸ ಮತ್ತು ಪರಂಪರೆ, ಕನ್ನಡ ಶಿಕ್ಷಣ ಜಾಗೃತಿ, ಹೋರಾಟ ಮತ್ತು ಪರಿಣಾಮದ ವ್ಯಾಪ್ತಿ, ಹೋರಾಟ ನಿರೂಪಿಸಿದ ಶೈಕ್ಷಣಿಕ ಶಿಸ್ತು ಈ ಉಪ ಆಯಾಮಗಳ ಹಿನ್ನೆಲೆಯಲ್ಲಿ ವಿಷಯವನ್ನು ವಿವರಿಸಲಾಗಿದೆ. ಪರಿಸ್ಥಿತಿಯ ಕೂಸಾಗಿ ಬೆಳೆದ ಟ್ರೇನಿಂಗ ಕಾಲೇಜು ಕನ್ನಡಿಗರಲ್ಲಿ ಜಾಗೃತಿ ಮನೆ ಮಾಡಿದಂತೆ, ವೈಚಾರಿಕತೆ ಬೆಳೆದಂತೆ ಮಗ್ಗುಲು ಹೊರಳಿಸುತ್ತ ತಲೆ ಎತ್ತಿ ನಿಂತಿತು. ಇದಕ್ಕೆ ಕಾರಣರಾದ ದಕ್ಷಿಣ ಭಾಗದ ಶಿಕ್ಷಣಾಧಿಕಾರಿಯಾದ ರಸೆಲ್‌ರನ್ನೊಳಗೊಂಡಂತೆ ಡೆಪ್ಯೂಟಿ ಚೆನ್ನಬಸಪ್ಪ, ರೊದ್ದ ಶ್ರೀನಿವಾಸರಾಯರು, ಗಂಗಾಧರ ಮಡಿವಾಳೇಶ್ವರ ತುರಮರಿ, ವೆಂಕಟರಂಗೋ ಕಟ್ಟಿ, ಹುಯಿಲಗೋಳ ಭುಜಂಗರಾಯರು, ರಾ. ಬಾ. ಕರಂದೀಕರ, ವಿ.ಭಾ. ಜೋಶಿ ಮುಂತಾದವರೆಲ್ಲ ಸಂಸ್ಥೆಯ ಪ್ರಾಚಾರ್ಯರಾಗಿ ಪಠ್ಯಪುಸ್ತಕ, ಪಠ್ಯಸಾಹಿತ್ಯ ಮತ್ತು ಪತ್ರಿಕಾ ಸಾಹಿತ್ಯ ಬರೆದು, ಬೆಳೆಸುವುದರೊಂದಿಗೆ ಕಾರಣೀಕರ್ತರಾದರೆ, ಗೋಪಾಲ ಬಾಳಾಚಾರ್ಯ ಸಕ್ಕರಿ, ಶಾಂತವೀರ ರಾಚಿದೇವ ಕಿತ್ತೂರ, ಮ.ಪ್ರ. ಪೂಜಾರ ಮುಂತಾದವರು ಇಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ಪಠ್ಯ ಸಾಹಿತ್ಯ ರಚಿಸಿ ಮತ್ತು ಅವರು ರಚಿಸಿದ ಸಾಹಿತ್ಯವೇ ಪಠ್ಯಗಳಾಗಿ ಪ್ರಖ್ಯಾತಿ ಹೊಂದುವ ಮೂಲಕ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು; ಸಾಹಿತ್ಯಮೇರುಗಳಾದರು. ಆದ್ಯ ಶಿಕ್ಷಣ ಸಂಸ್ಥೆಯಾದ ಈ ಟ್ರೇನಿಂಗ ಕಾಲೇಜಿನಲ್ಲಿ ಶಿಕ್ಷಕವಿದ್ಯಾರ್ಥಿಗಳಾಗಿ ಕಲಿತುಹೋದ ಮಿರ್ಜಿ ಅಣ್ಣಾರಾಯರು, ಫ. ಗು. ಹಳಕಟ್ಟಿ, ಸಿಂಪಿ ಲಿಂಗಣ್ಣ ಮುಂತಾದವರೆಲ್ಲ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇಯಾದ ಕೊಡುಗೆ ನೀಡಿದ ಆದ್ಯರು.

ಇದಲ್ಲದೇ ಈ ಟ್ರೇನಿಂಗ ಕಾಲೇಜಿನ ನೆಲದ ಹುಡಿಯಲ್ಲಿ– ಕರ್ನಾಟಕ ಕಾಲೇಜು, ಕರ್ನಾಟಕ ವಿಶ್ವ ವಿದ್ಯಾಲಯ, ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ,ಜಿಲ್ಲಾ ಲೋಕಲ್ ಬೋರ್ಡ, ಸ್ಕೂಲ್ ಬೋರ್ಡ, ಬೆಳಗಾವಿ ವಿಭಾಗದ ಗ್ರಂಥಾಲಯ ಕಛೇರಿ, ಸ್ನಾತಕೋತ್ತರ ಜೀವನ ಶಿಕ್ಷಣ ಕೇಂದ್ರಗಳು, ಈಗಿನ ಆಯುಕ್ತರ ಕಛೇರಿ, ಸಿಸ್ಲೆಪ್ ಮುಂತಾದುವುಗಳಿಗೆ ಜನ್ಮ ನೀಡಿದ, ಮಡಿಲಲಿಟ್ಟು ತೂಗಿ ಬೆಳೆಸಿದ ಕಥೆಯನ್ನು ಮತ್ತು ಇಂದು ಎಲ್ಲವೂ, ಎಲ್ಲರೂ ಮರೆತು ಹೋಗಿರುವ ವ್ಯಥೆಯನ್ನು ಈ ಅಧ್ಯಾಯದಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕ ಕಾಲೇಜನ್ನು ಆರಂಭಿಸಲು, ಪೈಸೆಪೈಸೆ ದೇಣಿಗೆ ಎತ್ತಿ ಎರಡು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ, ಸರಕಾರಕ್ಕೆ ಕೊಟ್ಟ ರೊದ್ದರಾಯರು ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರು ಯಾರಿಗೆ ನೆನಪಿದ್ದಾರೆ? ಯಾರು ನೆನೆಸುತ್ತಾರೆ? ಕಡೆಪಕ್ಷ ತಿಳಿದವರಾದರು ಬೆಳ್ಳಿ ಹಬ್ಬ, ಬಂಗಾರದ ಹಬ್ಬ, ಶತಮಾನೋತ್ಸವ ಮಾಡುವಾಗ ನೆನೆದರೆ ಸಾಕು, ಅವರೆಲ್ಲರ ಶ್ರಮ

ಸಾರ್ಥವಾಗುತ್ತದೆ ಮತ್ತು ಮುಂದಿನ ಪೀಳಿಗೆಗೂ ಮಾದರಿಯಾಗುತ್ತದೆ ಎಂಬುದನ್ನು ಮನನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯಕ್ಕೆ ಟ್ರೈನಿಂಗ್ ಕಾಲೇಜು, ಕನ್ನಡ ಪಠ್ಯಸಾಹಿತ್ಯ ರಚನೆ, ಅನುವಾದಗಳು, ಪ್ರಕಟಣೆಗಳು, ಪತ್ರಿಕೆ, ಸಾಂಸ್ಕೃತಿಕ ಸಮನ್ವಯ ಮುಂತಾದುವುಗಳನ್ನು ಕೊಡುಗೆಯಾಗಿ ನೀಡುವುದರ ಮೂಲಕ ಅರುಣೋದಯಕ್ಕೆ ಕಾರಣವಾದ, ಸಾಹಿತ್ಯದ ಪರಿಕಲ್ಪನೆಗೆ ಕಾರಣವಾದ ಅಕ್ಷರಕೃಷಿಯ ದುಡಿಮೆ, ಪರಿಶ್ರಮದ ಕುರಿತು ವಿವರಿಸಲಾಗಿದೆ. ಒಬ್ಬ ವ್ಯಕ್ತಿಯ ಶ್ರಮದಿಂದಾರಂಭಿಸಿ, ಅದೇ ವ್ಯಕ್ತಿ ಒಂದು ಸಂಸ್ಥೆಯ ಮಟ್ಟಕ್ಕೆ ಹೇಗೆ ಬೆಳೆದು ನಿಲ್ಲಬಲ್ಲ ಎಂಬುದನ್ನಿಲ್ಲಿ ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕನ್ನಡ ಶಿಕ್ಷಣ ಸಾಹಿತ್ಯದಲ್ಲಿ ಮೊದಲ ಹೆಜ್ಜೆಯಾಗಿ ಜ್ಞಾನಭೋಧಕ/ಮಠ ಪತ್ರಿಕೆ ಮೂಡಿಸಿದ ಶಾಶ್ವತ ಗುರುತುಗಳು, ಅವೇ ಗುರುತುಗಳೇ ತರಬೇತಿ ಮಹಾವಿದ್ಯಾಲಯದ ಇತಿಹಾಸದ ಗಟ್ಟಿ ದಾಖಲೆಗಳಾದದ್ದನ್ನು ಆ ದಾಖಲೆಗಳ ಮುಖಾಂತರವೇ ವಿವರಿಸಲಾಗಿದೆ. ಪತ್ರಿಕೆಯ ಹುಟ್ಟು, ಮೇಲಿಂದ ಮೇಲೆ ಕಂಡ ವಿವಿಧ ಸ್ವರೂಪಗಳು, ಅದರ ವಿಷಯವಸ್ತು ವೈವಿಧ್ಯ, ಅನನ್ಯವಾಗಿರುವ ಭಾಷೆಯ ಕುರಿತು ಉದಾಹರಣೆಗಳೊಂದಿಗೆ ವಿವರಿಸಿಲಾಗಿದೆ. ಮಠಪತ್ರಿಕೆ, ಶಾಲಾ ಪತ್ರಕವು, ಕನ್ನಡ ಶಾಲಾ ಪತ್ರಕವು, ಕನ್ನಡ ಪ್ರಾಥಮಿಕ ಶಿಕ್ಷಣ, ಹೀಗೆ ಬೇರೆ ಹೆಸರುಗಳನ್ನು ಪಡೆದು, ಇಂದು ಮುಂದೆಂದೆಂದಿಗೂ ನಿಖರ ದಾಖಲೆಯಾದ ಈ ಪತ್ರಿಕೆಯೇ ನನ್ನ ಪ್ರಬಂಧದ ಪ್ರಮುಖ ಆಕರವಾಗಿದೆ. ಇದರಲ್ಲಿರುವ ಇನ್ನೂ ಅನೇಕ ದಾಖಲೆಗಳನ್ನು ಬಳಸಿ ಹಲವು ಸಂಶೋಧನೆಗಳು ಸಾಧ್ಯವಿವೆ ಎಂಬುದನ್ನು ಇಲ್ಲಿ ಹೇಳಲಾಗಿದೆ. ಪತ್ರಿಕೆಯ ನಿಖರ, ಪ್ರಥಮ ಮತ್ತು ಅಖಂಡ ದಾಖಲೆಯಿಂದಾಗಿ ಅನನ್ಯವಾಗುವ ಇದು ಎಂದೇಂದಿಗೂ ಪ್ರಸ್ತುತವಾಗುತ್ತದೆ ಎಂಬುದನ್ನು ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ, ಈ ಪ್ರಬಂಧದ ವ್ಯಾಪ್ತಿ ನೂರು ವರ್ಷಗಳಿದ್ದರೂ, ಅದು ಕಾಲಕಾಲಕ್ಕೆ ತನ್ನ ರೂಪ, ಸ್ವರೂಪ, ಕಾರ್ಯ ವಿಧಾನ ಮತ್ತು ಮಹತ್ವವನ್ನು ಬದಲಿಸಿಕೊಳ್ಳುತ್ತ ಬಂದು, ೧೯೯೩ರಿಂದ ಅದು 'ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ' ಎಂಬ ಹೆಸರಿನೊಂದಿಗೆ, ಬದಲಾದ ಕಾರ್ಯ ವಿಧಾನಗಳೊಂದಿಗೆ ಜಿಲ್ಲಾ ಮಟ್ಟದ ಶೈಕ್ಷಣಿಕ ಘನಜವಾಬ್ದಾರಿಯನ್ನು ನಿರ್ವಹಿಸುತ್ತ ತನ್ನ ಕಾರ್ಯಸ್ವರೂಪ ಮತ್ತು ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿರುವುದರಿಂದ ಸ್ವಾತಂತ್ರ್ಯೋತ್ತರ ಬೆಳವಣಿಗೆಗಳನ್ನು ಹೇಳುವುದೂ ಇಲ್ಲಿ ಉಚಿತವೆನಿಸಿ ಸ್ವಾತಂತ್ರ್ಯೋತ್ತರ ಸಾಧನೆಯನ್ನು ವಿವರಿಸಿ ಹೇಳಲಾಗಿದೆ.

ಅಧ್ಯಯನದ ಫಲಿತಗಳು

೧. ತರಬೇತಿ ವಿದ್ಯಾಲಯ ಪುರುಷರಿಗಾಗಿಯೇ ಹುಟ್ಟಿದ್ದು ಎನ್ನುವುದಕ್ಕಿಂತ ಶಿಕ್ಷಣ ಮತ್ತು ನೌಕರಿಗಳು ಪುರುಷರಿಗಾಗಿಯೇ ಎಂಬ ಸಮಾಜದ ಬೇಡಿಕೆ, ನಿಲುವಿಗೆ ಈ ಮಹಾವಿದ್ಯಾಲಯವು ಬದ್ಧವಾಗಿತ್ತು.

೨. ಡೆಪ್ಯೂಟಿ ಚನ್ನಬಸಪ್ಪನವರು ಆರಂಭಿಸಿದ ಲಿಂಗಾಯತ ಬೋರ್ಡಿಂಗ್, ಹೆಸರೇ ಸೂಚಿಸುವಂತೆ ಲಿಂಗಾಯತರಿಗೆ ಮಾತ್ರ ಸೀಮಿತವಾಗಿತ್ತು. ಆರಂಭದ ಅವರ ಇಲಾಖಾಪರ/ಸರಕಾರಿ ಕೆಲವು ಸುತ್ತೋಲೆಗಳು ನೇರವಾಗಿ 'ಲಿಂಗಾಯತ ಜನರಿಗೆ...', 'ಲಿಂಗವಂತರಿಗೆ...' ಎಂಬ ಸಂಬೋಧನೆ ಯೊಂದಿಗೆ ನೇರ ಪ್ರಹಾರ ಮಾಡುವ ರೀತಿ, ಜಾತಿ ಆಚರಣೆಯು ಎಲ್ಲೆಂದರಲ್ಲಿ ಯಾವ ಆತಂಕವಿಲ್ಲದೆ, ಪಕ್ಷಪಾತಿಯಾಗಿ ನಡೆಯುತ್ತಿತ್ತು ಎಂಬುದಕ್ಕೆ ಜೀವಂತ ಉದಾಹರಣೆಯಾಗಿದೆ.

೩. ಕನ್ನಡದ ಅನುಷ್ಠಾನಕ್ಕಾಗಿ ಪ್ರಯತ್ನಿಸಿದವರ ಸುತ್ತೋಲೆಗಳಲ್ಲಿಯೇ ಮರಾಠಿ, ಹಿಂದಿ, ಅರೇಬಿಕ್, ಪಾರ್ಸಿ ಮತ್ತು ಆಂಗ್ಲ ಪದಗಳಂತೂ ಹೇರಳವಾಗಿ ಬಳಕೆಯಾಗಿವೆ. ಸುತ್ತೋಲೆಗಳ ಒಕ್ಕಣಿಕೆಗಳಂತೂ ಮರಾಠಿ ಆಡುವವರು ಕನ್ನಡ ಬರೆದಂತೆನಿಸುತ್ತವೆ. ಕನ್ನಡ ಅನುಷ್ಠಾನಕ್ಕಾಗಿ ಜಾಗೃತಪ್ರಜ್ಞರಾಗಿದ್ದಾಗ್ಯೂ ಅದುವರೆಗೂ ಮರಾಠರ ಪಾಲನೆಯಲ್ಲಿ, ಅನುಸರಿಸಿಕೊಂಡ ಬಂದ ರೂಢಿಭಾಷೆ ಅನುದ್ದೇಶಿತವಾಗಿಯಾದರೂ ಹೀಗೆ ಬಳಕೆಗೊಂಡಿದೆ.

೪. ಇಲ್ಲಿ ಪ್ರಾಚಾರ್ಯರಾಗಲು ಕೂಡ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಿಲ್ಲ. ೧೯೯೩ರಿಂದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಾಗಿ ಉನ್ನತೀಕರಣ ಹೊಂದಿದ ಮೇಲೆ, ಜುಲೈ ೨೦೦೦ದಲ್ಲಿ ಶ್ರೀಮತಿ ಎಸ್. ಉಷಾ. ಮೊಟ್ಟಮೊದಲ ಮಹಿಳಾ ಪ್ರಾಚಾರ್ಯರಾಗಿ ಇಲ್ಲಿ ನೇಮಕಗೊಂಡಿದ್ದೆ ಪ್ರಥಮ ದಾಖಲೆಯಾಗಿದೆ.

೫. 'ಮಠ ಪತ್ರಿಕೆ' ಎಂಬ ಆರಂಭದ ಹೆಸರು ನಂತರದ ಶಾಲಾ ಪತ್ರಕವು, ಕನ್ನಡ ಶಾಲಾ ಪತ್ರಕ, ಕನ್ನಡ ಪ್ರಾಥಮಿಕ ಶಿಕ್ಷಣ ಎಂಬೆಲ್ಲ ಹೆಸರುಗಳಿಗಿಂತ ಭಿನ್ನವಾಗಿ ಮತ್ತು ಜಾತಿ-ಜನಾಂಗ ಸೂಚಕವಾಗಿ ಕಾಣುತ್ತದೆ. ಅಂದಿನ ಕಾಲದಲ್ಲಿ ಸಮಾಜವೇ ಒಪ್ಪಿಕೊಂಡಿದ್ದಂತೆ ಅಯ್ಯನವರು ಅಥವಾ ಜಂಗಮರು ಒಂದೆಡೆ ನಿಂತು ಬೋಧಿಸಿದ ನೀತಿ-ನಿಯಮ, ಮೌಲ್ಯಗಳು ಪಾಠವಾದವು; ಅವರು ನಿಂತ ಸ್ಥಳಗಳು ಮಠಗಳಾದವು. ಹೀಗೆ ಮಠವೇ ಪಾಠಶಾಲೆ ಎಂದು ಒಪ್ಪಿದಂಥ ಘಟ್ಟದಲ್ಲಿ ಇದು 'ಮಠಪತ್ರಿಕೆ'. ನಂತರ ಹೆಸರು ಬದಲಿಸಿಕೊಂಡಿದೆ. ಆದರೆ ಕನ್ನಡ ಜ್ಞಾನ ಬೋಧಕ ಪತ್ರಿಕೆಗಳನ್ನು ಪರಿಗಣಿಸಿಲ್ಲ ಹಾಗಾಗಿಯೇ ಅವುಗಳ ಸಂಗ್ರಹವೇ ಇಲ್ಲ; ಸಂರಕ್ಷಣೆ ಎಲ್ಲಿಯದು?

೬. ಅಂದು ಪ್ರಚಲಿತವಾಗಿದ್ದ ಜಾತಿ, ವರ್ಣಗಳ ಆಚರಣೆಯ ಬಿಸಿ ಈ ತರಬೇತಿ ವಿದ್ಯಾಲಯಕ್ಕೂ ತಟ್ಟದೇ ಇಲ್ಲ. ಲೆಕ್ಕಕ್ಕೆ ಸಿಗುವಷ್ಟು ಅಂಕಿಸಂಖ್ಯೆಯಲ್ಲಿ ಮಕ್ಕಳು ಬರತೊಡಗಿದಾಗಿನಿಂದ ಗಮನಿಸಿದರೆ ಉಚ್ಚ ವರ್ಗದ ಮಕ್ಕಳೇ ಹೆಚ್ಚಾಗಿ ಪ್ರವೇಶ ಪಡೆದಿರುವುದು ಕಂಡು ಬರುತ್ತದೆ.

ಅಲ್ಲದೇ ಬ್ರಾಹ್ಮಣ, ಲಿಂಗಾಯತ ಮತ್ತು ಮುಸ್ಲಿಂ ಹಾಗೂ ಇತರರಿಗೆ ಒಂದೊಂದು ಬೇರೆಬೇರೆ ವಸತಿನಿಲಯಗಳಿದ್ದುದ್ದನ್ನು ನೋಡಿದರೆ ಜಾತಿಯ ಆಚರಣೆಯ ಕಬಂದ ಬಾಹುಗಳಿಂದ ಈ ಶಿಕ್ಷಣ ಸಂಸ್ಥೆಯೂ ತಪ್ಪಿಸಿಕೊಳ್ಳಲಾಗಿಲ್ಲ.

೭. ಇತ್ತೀಚಿನ ಸಾಮಾಜಿಕ ವ್ಯವಸ್ಥೆಯಲ್ಲಿ ದಾಖಲೆಗಳ ಸಂರಕ್ಷಣೆ ಮತ್ತು ಅಧ್ಯಯನದ ಹೊಣೆ, ಜವಾಬ್ದಾರಿ ಇಲ್ಲ. ಇತಿಹಾಸದ ರಚನೆ ಮತ್ತು ದಾಖಲೆಗಳ ಸಂರಕ್ಷಣೆಗೆ ನಿರಂತರ ಮತ್ತು ಖಚಿತ ಕಾನೂನುಗಳಿಲ್ಲ. ಇದ್ದರೂ ಅದನ್ನು ಅನುಸರಿಸುವ ಇಚ್ಛಾಧಾರಿಗಳಿಲ್ಲ. ಸೇವಾ ಲಾಭ ಮತ್ತು ನಗದುಲಾಭ ದೊರೆಯುವವರು ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಸಂಶೋಧನೆ ಕೈಗೊಳ್ಳುತ್ತಾರೆ. ಹೀಗಾಗಿ ಐತಿಹಾಸಿಕ ದಾಖಲೆಗಳು ಕಣ್ಮರೆಯಾಗುವ ಸಾಧ್ಯತೆಗಳಿವೆ.

೮. ಧಾರವಾಡದ ಹೃದ್ಯ ಭಾಗದಲ್ಲಿದ್ದರೂ, ಈಗ ಜಿಲ್ಲಾ ಮಟ್ಟದ ಒಂದು ಪ್ರತಿಷ್ಠಿತ ತರಬೇತಿ ಸಂಸ್ಥೆಯಾಗಿದ್ದರೂ, ಇದರ ಒಡಲಲ್ಲಿ ಸಾವಿರ ತಥ್ಯಗಳು ಅಡಗಿದ್ದರೂ ಅದನ್ನು ಕನಿಷ್ಠ ಪಕ್ಷ ಸಂಶೋಧನೆಯ ಆಕರವಾಗಿಯಾದರೂ ಗಮನಿಸುತ್ತಿಲ್ಲ. ಅದಕ್ಕೆ ಕಾರಣಗಳು ಎರಡು: ೧- ಅಂದಿನ ಟ್ರೇನಿಂಗ ಕಾಲೇಜ್ (ಇಂದಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ) ಇದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸೇರಿದೆ. ಉನ್ನತ ಅಧ್ಯಯನ ವಿಭಾಗಕ್ಕೆ ಸೇರಿಲ್ಲ. ಇಲ್ಲಿ ಸಂಶೋಧನೆ(ಪಿಎಚ್‌ಡಿ) ಮಾಡಲು ಇಲಾಖೆಯಿಂದ ಕಡ್ಡಾಯ ನೀತಿ ನಿರೂಪಣೆ ಇಲ್ಲ. ಇಂಥ ಚಾರಿತ್ರಿಕ, ಐತಿಹಾಸಿಕ ಸಂಶೋಧನೆಗಳಿಗೆ ಅವಕಾಶವಿಲ್ಲ. ಆ ಕಾರಣದಿಂದ ಮಹಾಸಂಶೋಧನೆಗೆ ಹಲವಾರು ವಿಷಯಗಳು ಇಲ್ಲಿದ್ದರೂ ಅವುಗಳೆಡೆಗೆ ಗಮನ ಹರಿಸಿಲ್ಲ. ಉನ್ನತ ಶಿಕ್ಷಣ ಇಲಾಖೆ ಕೂಡ ಸಂಶೋಧನೆಗಾಗಿ ಇತ್ತ ಗಮನ ಹರಿಸಿಲ್ಲ. ಸಂಶೋಧನೆಗೆ ಸಂಪನ್ಮೂಲ ಆಗಬಲ್ಲ ಪರಿಕರಗಳ ಸಂರಕ್ಷಣೆಗಾಗಿ ಸರಕಾರವಾಗಲಿ, ಪತ್ರಾಗಾರ ಇಲಾಖೆಯಾಗಲಿ ಕ್ರಮವಹಿಸಿಲ್ಲ.

೯. ಈ ಕಾಲೇಜಿಗೆ ಪ್ರಾಚಾರ್ಯರಾಗಿ, ನಂತರ ಇನ್ನೂ ಉನ್ನತ ಹುದ್ದೆಗಳನ್ನಲಂಕರಿಸಿದ ರೊದ್ದ ಶ್ರೀನಿವಾಸರಾಯರು, ವೆಂಕಟರಂಗೋ ಕಟ್ಟಿ, ದೋಂಡೊ ನರಸಿಂಹ ಮುಳಬಾಗಲ, ಹುಯಿಲಗೋಳ ಭುಜಂಗರಾಯರು, ರಾ.ಬಾ. ಕರಂದೀಕರ ಹಾಗೂ ಗಂಗಾಧರ ಮಡಿವಾಳೇಶ್ವರ ತುರಮರಿಯವರಂಥ ಹಲವಾರು ಮಹನೀಯರ ಸಾಧನೆಗಳು ಪಿಎಚ್‌ಡಿ ಅಥವಾ ಎಂಫಿಲ್ ಸಂಶೋಧನೆಗೆ ಈಡಾಗುವಷ್ಟು, ಒದಗುವಷ್ಟು ವಿಷಯ ಹರುವನ್ನು, ವ್ಯಾಪ್ತಿಯನ್ನು, ವಿಶಾಲತೆಯನ್ನು ಮತ್ತು ಸೂಕ್ಷ್ಮತೆಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿವೆ. ಇಂಥ ಮಹನೀಯರ ಕುರಿತು ಪಿಎಚ್‌ಡಿ ಅಥವಾ ಎಂಫಿಲ್ ಸಂಶೋಧನೆಗಳಾಗಬೇಕು.

೧೦. ಕನ್ನಡ ಜ್ಞಾನ ಬೋಧಕ ಪತ್ರಿಕೆ ೧೮೬೧ ರಲ್ಲಿ ಆರಂಭಗೊಂಡಾಗಿನಿಂದಾರಂಭಿಸಿ ಜೀವನ ಶಿಕ್ಷಣ ಪತ್ರಿಕೆಯವರೆಗೂ ಮಧ್ಯಮಧ್ಯದಲ್ಲಿ ಅಡೆತಡೆಗಳನ್ನು ಕಂಡಿದೆಯಾದರೂ ಇವತ್ತಿನವರೆಗೂ ಉಳಿದಿರುವ ಮತ್ತು ಜೀವಂತಿಕೆಯನ್ನು ಉಳಿಸಿಕೊಂಡಿರುವ ದೀರ್ಘಾಯುಷ್ಯಿ ಪತ್ರಿಕೆ. ಇದು 'ಕೋಟಿ ಶಬ್ದಶ್ಯಾಮಲೆ', 'ಅನಂತ ವಿಷಯಗಳ ಮಾಲೆ'; ಎಂದರೂ ಸರಿಯೇ; ಅದು 'ಬತ್ತದ ಝರಿ' ಇಂದಿಗೂ ಎಂದೆಂದಿಗೂ ಪ್ರಸ್ತುತ. ಕಲ್ಲಚ್ಚಿನ, ಮೊಳೆಯಕ್ಷರಗಳ ಪತ್ರಿಕೆಯಾಗಿ, ಶೈಕ್ಷಣಿಕ ಮಾಹಿತಿಗಳ ವಾಹಿನಿಯಾಗಿ, ಸರಕಾರದ ಮತ್ತು ಇಲಾಖೆಯ ಸಂದೇಶಗಳ, ಆದೇಶಗಳ ಪ್ರಸಾರಕವಾಗಿ, ಪಠ್ಯ ವಿಷಯಗಳ ಚರ್ಚೆ ಮತ್ತು ವಿಶ್ಲೇಷಣೆಗೆ ವೇದಿಕೆಯಾಗಿ, ಸೃಜನಶೀಲ ಶಿಕ್ಷಕರಿಗೆ ಪ್ರೋತ್ಸಾಹಿಯಾಗಿ, ಪ್ರತಿಭಾವಂತ ಲೇಖಕರಿಗೆ ಪ್ರಕಾಶನವಾಗಿ, ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿ, ಹತ್ತು ಹಲವು ಆಯಾಮಗಳಲ್ಲಿ ಈ ಪತ್ರಿಕೆ ಮಹತ್ತರ ಕಾರ್ಯ ನಿರ್ವಹಿಸಿದೆ. ಈ ಎಲ್ಲಕ್ಕಿಂತ ಮಿಗಿಲಾಗಿ ಎಲ್ಲಿಯೂ ಸಿಗಲಾರದ ದಾಖಲೆಗಳನ್ನಿದು ಒದಗಿಸುತ್ತದೆ. ಹಲವು ಸಂಶೋಧನೆಗಳನ್ನು ಮಾಡಲು ಸಾಧ್ಯವಾಗುವ ಮಾಹಿತಿಗಳ ಬೃಹತ್ ಅಕ್ಷಯ ನಿಧಿಯಾಗಿದೆ ಈ ಪತ್ರಿಕೆ.

೧೧. ಶಾಂತವೀರ ರಾಚೇದೇವ ಕಿತ್ತೂರ, ಗೋಪಾಲ ಬಾಳಾಚಾರ್ಯ ಸಕ್ಕರಿ, ಮ. ಪ್ರ ಪೂಜಾರರ ಬರಹಗಳ ಸಂಗ್ರಹವಾಗಬೇಕು. ಇವುಗಳ ಅಧ್ಯಯನವೂ ಆಗಬೇಕು.

೧೨. ಇವರಲ್ಲದೇ ಪತ್ರಿಕೆಯಲ್ಲಿ ಪ್ರಕಟಗೊಂಡ ತ. ನಾ. ಅಮ್ಮಿನಭಾವಿಯವರ, ಶಿಂತ್ರಿ ಬಸಪ್ಪನವರ, ತಟ್ಟಿ ಶ್ಯಾಮರಾಯರ ವೈಚಾರಿಕ ಬರಹಗಳ ಸಂಗ್ರಹ ಮತ್ತು ಅಧ್ಯಯನ ನಡೆದಿರುವುದಿಲ್ಲ.

೧೩. ಈ ಎಲ್ಲದಕ್ಕೂ ಮೊದಲು ಈ ಪತ್ರಿಕೆಯ ಸಂರಕ್ಷಣೆಯಾಗಬೇಕು. ಪತ್ರಿಕೆಯ ಶತಮಾನೋತ್ಸವ ಸಂದರ್ಭದಲ್ಲಿ ೯೯% ಪ್ರತಿಶತ ಪತ್ರಿಕೆಗಳನ್ನು ಸಂಗ್ರಹಿಸಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ, ಕಪಾಟುಗಳಲ್ಲಿ ಇಡಲಾಗಿದೆ. ಒಂದು ಪತ್ರಿಕೆ ಕಳೆದು ಹೋದರೂ ಅದು ತುಂಬಲಾರದ ಹಾನಿ. ಆದರೆ ಅದು ಯಾರಿಗೂ ಗಮನಕ್ಕೆ ಬಾರದೇ ಹೋಗಬಹುದು. ಸಾಹಿತ್ಯ ಮತ್ತು ಶಿಕ್ಷಣದ ಮೂಲ ಇತಿಹಾಸ ರಚನೆಗೆ ಪ್ರಾಥಮಿಕ ಸಂಪನ್ಮೂಲವಾಗಿದ್ದರೂ, ಶಿಕ್ಷಣ ಇಲಾಖೆಯಲ್ಲಿಯೇ ಅವುಗಳಿಗೊಂದು ಪ್ರತ್ಯೇಕ ಸಂರಕ್ಷಣೆ ಮತ್ತು ಅಧ್ಯಯನ ವ್ಯವಸ್ಥೆಯಾಗಿಲ್ಲ.

೧೪. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಪತ್ರಿಕೆಗಳ ಸೂಕ್ಷ್ಮ ಚಿತ್ರೀಕರಣ ಮಾಡಿದ್ದರೂ ಅದು ಕೇವಲ ೧೦೦ ವರ್ಷಗಳ ಪತ್ರಿಕೆಗಳನ್ನು ಮಾತ್ರ ಮಾಡಿದೆ. ಅಲ್ಲದೆ ಮಾಡಲು ಸಾಧ್ಯವಿರುವ ಪತ್ರಿಕೆಗಳನ್ನು ಮಾತ್ರ ಮಾಡಿದೆ. ಮುಟ್ಟಿದರೆ ಕಳಚುವಂತಾಗಿರುವ, ಮಾಡಲು ಸಾಧ್ಯವಾಗದಿರುವ ಪತ್ರಿಕೆಗಳ ಸಂಪಾದನೆಯಾಗಬೇಕು ಮತ್ತು ಉಳಿದ ಪತ್ರಿಕೆಗಳು ಅಂದರೆ ೧೯೬೫ರ ನಂತರದ ಮೂರು ದಶಕಗಳ ಪತ್ರಿಕೆಗಳೂ ಸೂಕ್ಷ್ಮ ಚಿತ್ರೀಕರಣಗೊಳ್ಳಬೇಕು.

೧೫. ತರಬೇತಿ ಸಂಸ್ಥೆಯ ಮೂಲ ಕಟ್ಟಡಗಳೆಲ್ಲ ಸ್ಮಾರಕ ಕಟ್ಟಡಗಳಾಗಿ ಘೋಷಣೆಯಾಗಬೇಕು. ಯಾವುದೇ ಬದಲೀಕರಣ ಮತ್ತು ಕೆತ್ತುಮೆತ್ತುಗಳು ನಡೆದರೂ ಮೂಲತ್ವಕ್ಕೆ ಧಕ್ಕೆ ಬಾರದಂತೆ ಮಾಡಬೇಕೆಂಬ ನಿಷೇಧ ಹೇರಿಲ್ಲ.

೧೬. ವಿಶ್ವವಿದ್ಯಾಲಯದಲ್ಲಿ ಪ್ರತಿ ವಿಷಯಕ್ಕೊಂದು ವಿಭಾಗವಿರುವಂತೆ ಶಾಲಾಮಟ್ಟದಲ್ಲಿ ಕನ್ನಡ ಭಾಷಾ ಬೋಧನೆಗೆ ಸಂಬಂಧಿಸಿದಂತೆ 'ಶಿಕ್ಷಣಶಾಸ್ತ್ರ ಸಾಹಿತ್ಯ' ವಿಭಾಗಗಳು ನಿರ್ಮಾಣಗೊಂಡಿಲ್ಲ. ಕನ್ನಡದ ಪ್ರಗತಿಯಾಗಬೇಕಾದರೆ ಸೃಜನಶೀಲ ಸಾಹಿತ್ಯಕ್ಕೂ ಮೊದಲು ಮಾನವೀಕ ಮತ್ತು ಶಾಸ್ತ್ರೀಯ ವಿಷಯಗಳಲ್ಲಿ ಪಠ್ಯಸಾಹಿತ್ಯ ಮತ್ತು ಸೃಜನೇತರ ವಿವರಣಾತ್ಮಕ ಚಿಂತನಶೀಲ ಸಾಹಿತ್ಯದ ಅಪಾರ ಅವಶ್ಯಕತೆ ಇದೆ. ಕನ್ನಡದಲ್ಲಿಯ ಎಲ್ಲ ಸೃಜನಶೀಲ ಸಾಹಿತ್ಯ ರಚನೆ, ಬೆಳವಣಿಗೆ, ವಿಮರ್ಶೆ, ದಾರಿದಿಕ್ಕುಗಳ ಕಡೆಗೆ ಗಮನ ಕೊಡುವ ಸಾಹಿತ್ಯವೆತ್ತರು, ಧೀಮಂತರು, ಪ್ರಗತಿಪರ ಚಿಂತಕರು, ಭಾಷಾ ವಿಜ್ಞಾನಿಗಳು, ಕನ್ನಡ ಪಂಡಿತರು ಮುಂತಾದವರೆಲ್ಲ ಕನ್ನಡ ಭಾಷೆಯನ್ನು ಪ್ರಾಥಮಿಕ ಶಾಲಾ ಶಿಕ್ಷಣ ಮತ್ತು ಪ್ರೌಢ ಶಾಲಾ ಶಿಕ್ಷಣ ಹಂತದ ಸಾಹಿತ್ಯ ಕುರಿತು ಚಿಂಥನ-ಮಂಥನ ಮಾಡಿ, ಬುನಾದಿ ಭದ್ರಗೊಳಿಸುವ ಅವಶ್ಯಕತೆ ಇದೆ.

ಅನುಬಂಧ

೧. ಮೂಲ ದಾಖಲೆಗಳ ಮತ್ತು ಟ್ರೈನಿಂಗ್ ಕಾಲೇಜಿನ ಕಟ್ಟಡಗಳ ಛಾಯಾಚಿತ್ರಗಳು

೨. ಟ್ರೇನಿಂಗ್ ಕಾಲೇಜಿನ ಪ್ರಾಚಾರ್ಯರ ಭಾವಚಿತ್ರಗಳು

೩. ಟ್ರೇನಿಂಗ್ ಕಾಲೇಜಿನ ಸ್ಥಳ ನಕ್ಷೆ

೪. ಪರಾಮರ್ಶನ ಗ್ರಂಥಗಳು

ಅನುಬಂಧ-೧.

Education in the Southern Division in the Year 1865/66.

ಸಂ ೧೮೬೫।೬೬ನೇ ವರ್ಷದಲ್ಲಿ ಈ
ದಕ್ಷಿಣಭಾಗದಲ್ಲಿನ ವಿದ್ಯಾಭಿವೃ-
ದ್ಧಿಯ ಮುಖ್ಯ ಸಂಗತಿಗಳು.


ಈ ದಕ್ಷಿಣಭಾಗದಲ್ಲಿ ಬೆಳಗಾವಿ, ಧಾರವಾಡ, ಕಲಾದಗಿ, ಕಾನ
ಡಾ ಪ್ರಾಂತ ನಾಲ್ಕು ಜಿಲ್ಲೆಗಳುಂಟು. [illegible]
[illegible]

(೧೧)


[illegible]

(೧೨)


[illegible]




ಅನುಬಂಧ-೨.



Educational Intelligence.

ವಿದ್ಯಾಖಾತೆಯ ವರ್ತಮಾನಗಳು.





ಅನುಬಂಧ–೩.


ಪತ್ರವ್ಯವಹಾರವು.

೫೭೬

ಭ್ಯಾಸ ಮಾಡಿದೆ. ನಾನಿದೆ ಪೂರ್ಣವೇ ಅಲ್ಲ. ಆದ್ದರಿಂದ ಆ ಉಪಾಧ್ಯಾಯರು ಕಾಲಾಂತರದಲ್ಲಿ, ಕನ್ನಡ ಲಿಪಿಯನ್ನು ಬರೆಯಬಲ್ಲ ಶಾಸಕನಾದರಾಗಿ, ಇವರಿಂದ ಕಾಗದ ಪತ್ರಗಳು ಕನ್ನಡವನ್ನು ಪೂರ್ಣವೆಂಬ ದೀರ್ಘಾಲೋಚನೆಯು ಮನಸ್ಸಿನಲ್ಲಿ ಉದಯಿಸುತ್ತದಲ್ಲ! ಇಷ್ಟೇ ಸಾಕು. ಈ ಆಲೋಚನೆಯು ಈ ಶಾಲೆಗೆ ಈ ಪರೀಕ್ಷೆಯು ಪ್ರಾರಂಭಕ್ಕೆ ಸ್ವ ಕಾರಣವಾಗಿತ್ತೋ? ಅಲ್ಲ. ಮತ್ತು ಅಷ್ಟಾಧ್ಯಾಯಕರಾದ ವಿದ್ಯಾರ್ಥಿಯು ಜನರನ್ನು, ಕವಿತಾ ವ್ಯಾಕರಣಾದಿಗಳನ್ನು, ಕರ್ನಾಟಕ ಭಾಷೆಯನ್ನು ಅಭ್ಯಾಸದಿನ ದಿನೇ ಅಭ್ಯಾಸಿಸುವ ಗಣಿತರು ಇಲ್ಲಿ ಬಂದು, ಕರ್ನಾಟಕದಲ್ಲೇ ಇರಬೇಕಾಯಿತಲ್ಲ! ಹೀಗೆ ಬರೆಯುವದರಿಂದ ನಾವು ಅವರ ಪ್ರೀತಿಭಾವವನ್ನು ಹಿಡಿದೇವೆಂದು ಯಾರೂ ತಿಳಿಯಬಾರದು. ಸ್ವಲ್ಪವಾದರೂ ಅವರಿಗೆ ಸ್ವದೇಶ ಭಾಷೆಗಳ ಮೇಲೆ ಮಮತೆಯು ಹುಟ್ಟಬೇಕೆಂಬ ತಾತ್ಪರ್ಯವಲ್ಲದೆ ಮತ್ತಿನವರಲ್ಲಿ ಮತ್ಸರವಿಲ್ಲ.

೫ ಕನ್ನಡ ಟ್ರೇನಿಂಗ ಕಾಲೇಜು ಉಂಟು. ಇದು ಸರ್ಕಾರದಿಂದಲೂ ಕಂಪನಿಯ ಖ್ಯಾತಿಪಡಿಸುವದಕ್ಕೂ, ಜನರಿ (ವಿಶೇಷವಾಗಿ ತಯಾರಾಗುವ ಮಾಸ್ತರರಿಗೆ) ಆ ಜ್ಞಾನವನ್ನು ಉಪದೇಶಿಸುವದಕ್ಕೂ ಮುಖ್ಯವಾಗಿ ಸ್ಥಾಪಿಸಲ್ಪಟ್ಟಿರುತ್ತದೆ. ಕಾಲಾಂತರದಲ್ಲಿ ಇಂಥ ಇದು ಕರ್ನಾಟಕ ಭಾಷೆಯ ಮೂಲಸ್ಥಳವಾಗತಕ್ಕದ್ದಾಗಿರುತ್ತದೆ. ಇದರಲ್ಲಿ ಈಗಿರುವ ಕನ್ನಡ ಶಿಕ್ಷಕರಾದ ರಾ. ಶಾಂತವೀರಯ್ಯನವರು ಶದ್ಧಪ್ರವರ್ತನ ಮಾಸ್ತರ ಜನರ ಮೇಲೆ ಕೃಪಾದೃಷ್ಟಿಯಿಂದ ಕನ್ನಡ ಭಾಷೆಯ ಮೂಲಗಳ ಯಥಾರ್ಥ ಜ್ಞಾನವನ್ನು ಕಲಿ

೫೭೭

ಸಮರ್ಥರಾಗಿದ್ದಾರೆ. ಇವರಿಗೆ ಅಂಥ ಶಕ್ತಿಯನ್ನು ದೇವರು ಕೊಡಲಿ!

೬ ರಾಜಶೇಖರನೆಂಬ ಹಳಗನ್ನಡ ಕಾವ್ಯದ ಟೀಕಾಕಾರರಿಗೆ ಇನಾಮು ದೊರೆಯುತ್ತದೆಂಬದೊಂದು, ಈ ಕಾವ್ಯದನ್ನು ಯಥಾಸ್ಥಿತಿಯಾಗಿ, ತಿಳಕೊಂಡವನು ಕರ್ನಾಟಕ ಭಾಷೆಯಲ್ಲಿ ಬಲ್ಲಿದನಾದನೆಂದು, ಸಂಭಾಷಣ ಮಾತಪುಂಟು. ಇದು ನನಗೆ ನಿಜವೆಂದು ತೋರುತ್ತದೆ. ಇನಾಮಿನ ಆಶೆಯಿಂದ ಇದನ್ನು ಟೀಕಿಸುವದಕ್ಕೆ ಬಹುಜನರು ಉದ್ಯೋಗಿಸಿದ್ದಾರೆ. ಆದರೆ ಅವರು ಈ ಭಾಷೆಯಲ್ಲಿ ಚನ್ನಾಗಿ, ಪರಿಶ್ರಮವನ್ನು ಮಾಡದೇ, ಸಮರ್ಥರಾಗಲಾರರು. ಈ ಕಾರಣದಿಂದ ತಮ್ಮಷ್ಟಕ್ಕೆ ತಾವೇ ಆ ಜ್ಞಾನವನ್ನು ಸಂಪಾದಿಸಿಕೊಂಡಾರೆಂಬ ನಂಬಿಗೆಯು ಹುಟ್ಟುತ್ತದೆ. ಈಗ ಈ ಗ್ರಂಥದ ೬೭ ಭಾಗಗಳು ಟೀಕಿಸಲ್ಪಟ್ಟವೆಂದು ತೋರುತ್ತದೆ. ಇವರೆ ಎರಡು ಮಾತ್ರ ಪ್ರಸಿದ್ಧವಾಗಿವೆ; ಒಬ್ಬರಿಗೆ ಅದರ ಇನಾಮು ಸಿಕ್ಕದೆ. ಇದು ಗಂಭೀರವಾಗಿ ಟೀಕಿಸಿ, ಪ್ರಸಿದ್ಧಿಸಲ್ಪಡುವಷ್ಟು ದಿವಸ (ಅಂದರೆ ೬೦ಃ೫ ವರ್ಷ) ಗಳಲ್ಲಿ ಈ ಭಾಷೆಯು ಉತ್ತರ ಕರ್ನಾಟಕದಲ್ಲಿ ಚನ್ನಾಗಿ ಪಸ್ಥಪವೆಂದು, ನನ್ನ ಬುದ್ಧಿಗಂತೂ ತೋರುತ್ತದೆ.

೭ ಡಫರ್ನ್ನಾಯಿಜ್ ಎಂಬ ಇನಾಮು ಇದು ಕನ್ನಡ ಭಾಷೆಯಲ್ಲಿ ಪಂಡಿತನಾದವನಿಗೆ ದೊರೆಯುವದು. ಪ್ರತಿ ವರ್ಷದಲ್ಲಿ ಅಂಥ ಜನರಿಗೆ ಅಮೂಲ್ಯ ಇದನ್ನು ಕೊಟ್ಟು, ಬಂದವರ ಪರೀಕ್ಷೆಯನ್ನು ತಕ್ಕೊಂಡು, ಉತ್ತಮ ಸ್ಥಾನವನ್ನು ಪಾದವನಿಗೇ ಕೊಡಬೇಕೆಂದು ಮಿ. ರಸಲ್ಗೋರೆಗಳು ಸ್ವಂತವಾದ ಖರ್ಚಿನಿಂದಲೂ, ಉದಾರ ಮನದಿಂದಲೂ ಪ್ರತಿ ವ

೫೭೮

ರ್ಷಕ್ಕೆ ನೂರೈವತ್ತು ರೂಪಾಯಿಗಳನ್ನು ಕೊಡುತ್ತಾರ ಇದರ ಅಭಿಲಾಷೆಯಿಂದ ಈಗ ಬಹು ಜನರು ಹಳೆಗನ್ನಡ ವ್ಯಾಕರಣ ಕವಿತಾ ಮುಂತಾದವುಗಳನ್ನು ತಿಳಿದುಕೊಳ್ಳಲಿಕ್ಕೆ ಮನಃಪೂರ್ವಕವಾಗಿ ಯತ್ನವನ್ನು ನಡಿಸಿದ್ದಾರೆ. ಇದರಿಂದ ಕನ್ನಡ ಭಾಷೆಯು ಚನ್ನಾಗಿ ಪ್ರಸಿದ್ಧಿಸಲ್ಪಡುವದೆಂದು ತೋರುತ್ತದೆ. ಸನ ೧೮೭೬ ಇಸ್ವಿಯ ನವ್ಹೆಂಬರ ತಿಂಗಳ ೬೭ ನೇ ತಾರೀಖುಗಳಲ್ಲಿ ಮೊದಲು ಪರೀಕ್ಷೆಯಾಗಿ ಇನಾಮು ಕೊಡಲ್ಪಟ್ಟಿತು. ಆದರೆ ಈ ಸಾರಿಯು(೧೮೭೭) ಪರೀಕ್ಷೆಯು ಇನಾಮು ದಾರಿಗೂ ಸಿಗಲಿಲ್ಲ; ಪರೀಕ್ಷೆಕ್ಕೆ ಬಹು ಮಂದಿ ಕೂಡಲಿಲ್ಲವೆಂದು ಕೇಳಿ ನನಗೆ ಬಹು ಆಸಮಾಧಾನವಾಗುತ್ತದೆ. ಮೊದಲು ಸಾರಿ ಪರೀಕ್ಷಕರ ಪ್ರತ್ಯಕ್ಷ ಮೋರೆಗೆ ಈ ಪರೀಕ್ಷೆಯಲ್ಲಿ ಇವರ ಕರ್ತೃಗಳಾದ ರಸಲ್ಗೋರೆಗಳನ್ನು ಹೊಗಳುವ ಕೆಲವು ಪದ್ಯಗಳು ರಚಿಸಲ್ಪಟ್ಟವು. ಅವು ಇಲ್ಲಿ ಬರೆಯಲಿಕ್ಕೆ ತಕ್ಕವುಗಳೆಂದು ಕೆಳಗೆ ಬರೆಯಲ್ಪಟ್ಟವೆ.

॥ಮಾಲಿನೀವೃತ್ತ೧॥

ಬೆಳೆಯಲಿನುಸಾಳ್ದವಿಕ್ರ ಕನ್ನಡೀದಾಪ್ಟ್ರನಲ್ಲಂ।
ದಳಸಿಯತನದಿಂದಂ ನಮುವಾರವಿರ್ದಗ್ಧ॥
ಕರ್ಳಕರುಣೆಗಳಷ್ಟೀ ಶ್ರೀರಸೀಲ್ ಪೇಕಮಾತ್ರ।
ಕರ್ಳದರಮುಳಕೀರ್ತಿಕ್ರೀಯಮುಂದೇಮೆರ್ಯಿಂದಂ॥೧

ಅನುಬಂಧ–೪.

ಶಾಲಾಪತ್ರಕ

ಸಂಪಾದಕ:—ಹಣಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೪	ಜೂನ-ಜುಲೈ ೧೯೩೭.	ಸಂ. ೩–೪

ಸ್ಫುಟ ವಿಚಾರ

ಟ್ರೇನಿಂಗದ ಅವಶ್ಯಕತೆ

ಮುಂದೆ ದಿ. ಬಾ. ಕೊಡ್ಡರಾಯರು ಈ ವಿಷಯದ ಬಗ್ಗೆ ನೇಕನಾಮದಾರ ಗವ್ಹರ್ನರ ಸಾಹೇಬರಿಗೆ ಬರೆದ ವಿನಂತಿಪತ್ರದ ಅನುವಾದವನ್ನು ಕೊಟ್ಟಿದ್ದೇವೆ. ಇದನ್ನು ಕಳಿಸಿದನಂತರ ಸರಕಾರದವರು ಈ ವಿಷಯದಲ್ಲಿ ತಮ್ಮ ಅಂದೋಗಾವು ವಿನೆಂಬುದನ್ನು ಪ್ರಕಟಿಸಿದ್ದಾರೆ. ಅವರು ಮುಖ್ಯವಾಗಿ ಅನ್ನುವದೇನಂದರೆ — "ಪ್ರಾ. ಶಾ. ಗಳಲ್ಲಿ ೧೦೦ ಕ್ಕೆ ೫೦ ರಂತೆ ಟ್ರೇಂಡ ಶಿಕ್ಷಕರಿದ್ದರೆ ಸಾಕು. ಹೆಚ್ಚಿಗೆ ಬೇಡ. ಗುಜರಾತದಲ್ಲಿ ಟ್ರೇಂಡರ ಸಂಖ್ಯೆಯು ನೂರಕ್ಕೆ ೬೬ ಮತ್ತು ಕರ್ನಾಟಕದಲ್ಲಿ ೬೦ ರಂತೆ ಇದ್ದದರಿಂದ ಇನ್ನು ಮುಂದೆ ಹೆಚ್ಚಿಗೆ ಟ್ರೇಂಡರ ಅವಶ್ಯಕತೆ ಇಲ್ಲ. ಟ್ರೇನಿಂಗ ಹೊಂದುವಾಗ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪು ನಂತರ ಟ್ರೇಂಡರಿಗೆ ಅವರ ಸ್ಕೇಲಿನಂತೆ ಬಡತಿ ಕೊಡಬೇಕಾದರೆ ಸರಕಾರದವರು ಹೆಚ್ಚು ವೆಚ್ಚ ಮಾಡಬೇಕಾಗುವದು. ೧೯೩೩ನೇ ಇಸವಿಯ ಪ್ರಾ. ಶಿ. ದ ಅಕ್ಟಿನಂತೆ ಸಾರ್ವತ್ರಿಕ ಒತ್ತಾಯದ ಶಿಕ್ಷಣವನ್ನು ಕೊಡುವದು ಸರಕಾರದ ಕರ್ತವ್ಯವೆಂದು ಗೊತ್ತಾದ್ದರಿಂದ ಶಿಕ್ಷಣದ ವೆಚ್ಚದಲ್ಲಿ ಕೈ ಬಿಗಿಹಿಡಿದು ಕೈ ಕೈ ಉಳಿಸುವದು ಅವಶ್ಯ ತೋರಿದ್ದರಿಂದ ಇನ್ನು ಮುಂದೆ ಹೆಚ್ಚು ಜನರನ್ನು ಟ್ರೇಂಡ ಮಾಡುವ ಅವಶ್ಯಕತೆ ಇಲ್ಲ." ನೂರುಜನ ಶಿಕ್ಷಕರಲ್ಲಿ ೫೦ ಜನರು ಟ್ರೇಂಡರು ಸಾಕಾಗಲಾರರೆಂಬ ಬಗ್ಗೆ ದಿ. ಬಾ. ಕೊಡ್ಡರಾಯರು ತಮ್ಮ ಪತ್ರದ ೩ನೇ ಕಲಮಿನಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನು ನೂರಕ್ಕೆ ೫೦ಕ್ಕಿಂತ ಟ್ರೇಂಡರ ಸಂಖ್ಯೆಯು ಹೆಚ್ಚಾದದ್ದಕ್ಕಾಗಿ ಸರಕಾರದವರೇ ಜವಾಬದಾರರು. ೧೯೧೮ನೇ ಇಸವಿಯಲ್ಲಿ ಗೊತ್ತಾದ ಮೇರೆಗೆ ಪ್ರತಿವರ್ಷ ೫೦೦ ಹೊಸ ಶಾಲೆಗಳನ್ನು ಇಲಾಖೆಯಲ್ಲಿ ತೆರೆಯುತ್ತ ಹೋಗಿದ್ದರೆ ಟ್ರೇಂಡರ ಸಂಖ್ಯೆಯು ನೂರಕ್ಕೆ ೫೦ ಕ್ಕಿಂತ

ಬಹಳ ಕಡಿಮೆಯಾಗುತ್ತಿತ್ತು. ಮತ್ತು ಹೊಸಶಾಲೆಗಳು ಆಗುವವೆಂಬ ಭರವಸೆಯಿಂದ ಪ್ರತಿಯೊಂದು ಜಿಲ್ಹೆಯಲ್ಲಿ ಒಂದೊಂದು ಟ್ರೇನಿಂಗ ಸ್ಕೂಲು ಇಟ್ಟು ಹೆಚ್ಚು ಟ್ರೇಂಡ ಶಿಕ್ಷಕರನ್ನು ಸಿದ್ಧಪಡಿಸಿದವರು ಸರಕಾರದವರೇ. ಆದರೆ ಮಾಂಟೆಗೂ ಚೇಮ್ಸಫರ್ಡ ಸುಧಾರಣೆಯಾಗಿ ಶಿಕ್ಷಣಖಾತೆಯ ಸೂತ್ರಗಳು ದಿವಾಣರ ಕಡೆಗೆಬಂದಮೇಲೆ ಮೊದಲಿನ ಪ್ರಾಗತಿಕಧೋರಣವು ಬದಲಾಯಿತು. ಹೊಸ ಶಾಲೆಗಳು ಪ್ರಾರಂಭವಾಗಲಿಲ್ಲ. ದುರ್ದೈವ ಕೊಂತೆಯು ಎಲ್ಲ ಖಾತೆಗಳಿಗೆ ಬಾಧಿಸಹತ್ತಿತು. ಹೀಗಾಗಿ ಶಿಕ್ಷಣ ಸಂಸ್ಥೆಗಳನ್ನು ನಿಲ್ಲಿಸುವ ವಿಚಾರವು ಸರಕಾರದ ತಲೆಯಲ್ಲಿ ಸೇರಿಕೊಂಡಿತು. ಹೀಗೆ ಉಳಿಸಿದ ಹಣದಿಂದ ಪ್ರಾ. ಶಿ. ದ ಪ್ರಗತಿಯು ವಿಶೇಷವಾಗಲಾರದೆಂದು ಸಾಮಾನ್ಯರಿಗೂ ತಿಳಿಯುವಂತಿದೆ. ಉದಾ–ಧಾರವಾಡ ಬೆಳಗಾಂವಿ ಜಿಲ್ಹೆಗಳಲ್ಲಿ ಈ ವರ್ಷ ೧೩೫ ಹೊಸ ಶಾಲೆಗಳನ್ನು ಮಾಡಬೇಕೆನ್ನುತ್ತಾರೆ. ಇದಕ್ಕೆ ಸರಕಾರದವರು ಕನಿಷ್ಟಪಕ್ಷಕ್ಕೆ ೪೦,೦೦೦ರು. ಗಳ ಗ್ರ್ಯಾಂಟು ಕೊಡಬೇಕಾಗುವದು. ಧಾರವಾಡದ ಟ್ರೇ. ಸ್ಕೂಲು ಬಂದು ಮಾಡುವದರಿಂದ ಬಹಳವಾದರೆ ೪।೫ ಸಾವಿರ ರು. ಉಳಿಯಬಹುದು. ಹೀಗೆ ಶಿಕ್ಷಣ ಸಂಸ್ಥೆಗಳನ್ನು ನಿಲ್ಲಿಸುವದರಿಂದ ಸರಕಾರದವರು ಒತ್ತಾಯದ ಶಿಕ್ಷಣವನ್ನು ಹೇಗೆ ಪ್ರಾರಂಭಿಸುವರೆಂಬ ಬಗ್ಗೆ ಜನರು ಸಾಶಂಕವೃತ್ತಿಯುಳ್ಳವರಾಗಿರುವರು.

ಕರ್ನಾಟಕದಲ್ಲಿ ಪ್ರತಿವರ್ಷ ೧ ಸಾವಿರ ಜನರು ವ್ಹ. ಫಾ. ಪರೀಕ್ಷೆಯಲ್ಲಿ ಪಾಸಾಗುತ್ತಾರೆ. ಅವರಲ್ಲಿ ಎಷ್ಟೋ ಜನರು ಸ್ವಂತ ಖರ್ಚಿನಿಂದ ಮುಂದೆ ನೌಕರಿಯ ಅಪೇಕ್ಷೆ ಇಲ್ಲದೆ ಟ್ರೇನಿಂಗ ಹೊಂದಲಿಕ್ಕೆ ಸಿದ್ಧರಾದವರು ಸಿಗುವರು. ಕಳೆದ ೨ ವರ್ಷಗಳಲ್ಲಿ ಮುನಿಸಿಪಾಲಿಟಿಯಿಂದ ಬಂದ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪು ಕೊಟ್ಟಿರುವದಿಲ್ಲ. ಮುಂದೆ ಅವರ ಸ್ಕೇಲಿನಂತೆ ಪಗಾರುಸಹ ಕೊಟ್ಟಿಲ್ಲ. ಆದರೂ ಅವರು ಸಂತೋಷದಿಂದ ಕೆಲಸಮಾಡುತ್ತಿದ್ದಾರೆ.

ಧಾರವಾಡದ ಟ್ರೇನಿಂಗಕಾಲೇಜನ್ನು ಇಡಬೇಕೆಂಬ ಬಗ್ಗೆ ರಾ. ಬ. ಕಂಬಳಿಯವರು ಈಗ ನಡೆದ ಕೌನ್ಸಿಲಿನಲ್ಲಿ ಒಂದುಠರಾವು ತಂದಿದ್ದಾರೆ. ಅದಕ್ಕೆ ಬಹುಮತವು ದೊರಿತು ಕರ್ನಾಟಕದ ಟ್ರೇನಿಂಗ ಸಂಸ್ಥೆಯು ಪುನಃ ಪ್ರಾರಂಭವಾದೀತೆಂದು ಆಶಿಸುತ್ತೇವೆ.

ಧಾರವಾಡ ಟ್ರೇನಿಂಗಸ್ಕೂಲನ್ನು ಬಂದುಮಾಡದೆ ಮುಂದೆ ಹಾಗೇ ನಡಿಸುವದು ಅಗತ್ಯದ್ದೆಂಬ ಬಗ್ಗೆ ದಿವಾನ ಬಹದ್ದೂರ ಕೊಡ್ಡರಾಯರು ಸಿ. ಆಯ್. ಇ. ಇವರು ನೇಕನಾಮದಾರ ಗವ್ಹರ್ನರ ಸಾಹೇಬರಿಗೆ ಕಳುಹಿಸಿದ

ವಿನಂತಿ ಪತ್ರದ ಕನ್ನಡ ಅನುವಾದವು

(೨–೩–೧೯೩೬)

ಅಖಿಲ ಕರ್ನಾಟಕವು ಏಕವಾಕ್ಯತೆಯಿಂದ ವಿರೋಧಿಸುತ್ತಿರುವಾಗಲೇ ಧಾರವಾಡದ ಟ್ರೇನಿಂಗ ಸ್ಕೂಲನ್ನು ನಿಲ್ಲಿಸಿ ಬಿಟ್ಟಿರುವದನ್ನು ನೋಡಿದರೆ ಅದಕ್ಕೆ ಅಂತಹ

ಕಾರಣವೇನಿರುವದೆಂಬನನ್ನು ತರ್ಕಿಸುವದೂ ಅಸಾಧ್ಯವಾಗಿದೆ. ಸರಕಾರವೂ ಕೂಡ ಈ ವಿಷಯದ ತಮ್ಮ ಹೇಳಿಕೆಯನ್ನು ಎಲ್ಲಿಯೂ ಪ್ರಕಟಿಸಿಲ್ಲ. (ಇದು ಈಗ ಪ್ರಕಟವಾಗಿದೆ ಸಂ. ಶಾ. ಪ.) ನಮ್ಮ ದಕ್ಷಿಣಭಾಗದಲ್ಲಿ ಒಟ್ಟಿಗೆ ೪೦೬೩ ಶಿಕ್ಷಕರಿದ್ದು ಅವರಲ್ಲಿ ೩೬೦೨ ಶಿಕ್ಷಕರು ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನ ಕೆಳಗೂ ೪೬೧ಜನರು ಮ್ಯುನಿಸಿಪಾಲಿಟಿಗಳ ಕೆಳಗೂ ಇರುವರು. ಅವರಲ್ಲಿ ೨೯೩೧ ಜನ ಶಿಕ್ಷಕರು ಟ್ರೇಂಡರಿದ್ದು ಮಿಕ್ಕಾದ ೧೧೪೨ ಜನರು ಅಂಟ್ರೇಂಡರಾರುವರು. ಪ್ರತಿವರ್ಷ ಮರಣ, ಪೆನ್‌ಶನ್ ಮೇಲೆ ಹೋಗುವದು ಮುಂತಾದ ಕಾರಣಗಳಿಂದ ನೂರಕ್ಕೆ ೮ರಂತೆ ಶಿಕ್ಷಕರು ಕಡಿಮೆಯಾಗುತ್ತಿರುವರು. ಅಂದರೆ ಪ್ರತಿವರ್ಷ ೨೩೨ ಜನರು ಟ್ರೇಂಡರೂ ೮೮ಜನ ಅಂಟ್ರೇಂಡರೂ–ಒಟ್ಟಿಗೆ ೩೨೦ಜನರು ಕಡಿಮೆಯಾಗುತ್ತಲಿದ್ದಾರೆ. ೧೯೨೫ ನೇ ಇಸ್ವಿಯ ಜನವರಿ ೧೯ನೇ ತಾರೀಖಿನ ೧೯೯೪ನೇ ನಂಬರಿನ ಸರಕಾರೀ ಠರಾವಿನ ಮೇರೆಗೆ ಧಾರವಾಡ ಟ್ರೇನಿಂಗ ಸ್ಕೂಲಿನಲ್ಲಿ ಬ್ರಿಟಿಶ ಜಿಲ್ಹೆಗಳಿಗಾಗಿ ೨೫೬ಜನ ಶಿಕ್ಷಕರು ಟ್ರೇಂಡರಾಗುತ್ತಿದ್ದರು. ಆದರಿಂದ ೨೯೫ ಜನ ಅಂಟ್ರೇಂಡರನ್ನು ಬೇರೆ ಬೇರೆ ಸ್ಥಾನಿಕ ಸಂಸ್ಥೆಗಳು ಪ್ರತಿವರ್ಷ ಕೆಲಸಕ್ಕೆ ನೇಮಿಸಿಕೊಳ್ಳಬೇಕಾಗುತ್ತಿತ್ತು. ಆದರೆ ಮೊನ್ನೆ ಮೊನ್ನಿನ ಸರಕಾರದ ನಿರ್ಣಯದ ಮೇರೆಗೆ ಧಾರವಾಡದ ಟ್ರೇನಿಂಗ ಸ್ಕೂಲು ಬಂದಾಗಿರುವದರಿಂದ ಆ ೨೫ ಜನ ಟ್ರೇಂಡ ಶಿಕ್ಷಕರೂ ಹೊರಬೀಳದಂತಾದರು. ಆದರಿಂದ ಪ್ರತಿವರ್ಷ ೩೨೦ ಜನ ಅಂಟ್ರೇಂಡ ಶಿಕ್ಷಕರು ಕೆಲಸದಲ್ಲಿ ಸೇರಬೇಕಾಗುವದು. ಈ ಲೆಕ್ಕದಿಂದ ನೋಡಿದರೆ ಹನ್ನೆರಡೇ ವರ್ಷಗಳ ಕಾಲಾವಧಿಯಲ್ಲಿ ದಕ್ಷಿಣ ಭಾಗದ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬನೂ ಟ್ರೇಂಡ ಶಿಕ್ಷಕನು ಉಳಿಯಲಾರನೆಂಬದು ಸಹಜವು. ಹೀಗಾಗುವದರಿಂದ ಪ್ರಾಥಮಿಕ ಶಾಲೆಗಳ ಸ್ಥಿತಿಯು ಎಷ್ಟರಮಟ್ಟಿಗೆ ಅಧೋಗತಿಗೆ ಹೋಗಬಹುದೆಂಬ ಬಹು ವಿಚಾರಾರ್ಹವಾದ ಪ್ರಶ್ನೆಯೊಂದು ತಾನಾಗಿ ಉಪಸ್ಥಿತವಾಗುವದು. ಸಾಮಾನ್ಯ ಜನತೆಯು ಈ ತರದ ಪ್ರಾಥಮಿಕ ಶಾಲೆಗಳ ಅಧೋಗತಿಗೆ ಕಾರಣವಾಗುವ ವಿದ್ಯಾಖಾತೆಯ ಅಧಿಕಾರಿಗಳ ಅನಾಗ್ರತೆಯ ಕೃತಿಯ ವಿಷಯಕ್ಕೆ ಸರಕಾರವೇ ಜವಾಬದಾರನೆಂದು ತಿಳಿಯುವದು ಸಹಜವೇ ಸರಿ.

೨. "ಇನ್ನು ಮುಂದೆ ಇ. ಸ. ೧೯೨೮–೨೯ರ ಒಳಗಾಗಿ ಸ್ಥಾನಿಕ ಸಂಸ್ಥೆಗಳಲ್ಲಿ ಕೆಲಸಮಾಡುವ ಶಿಕ್ಷಕರಲ್ಲಿ ೧೦೦ರಲ್ಲಿ ೫೦ಜನರು ಮಾತ್ರ ಟ್ರೇಂಡರಿದ್ದರೆ ಸಾಕು" ಎಂಬ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯದೆಗೆ ಸಂಬಂಧಪಟ್ಟ ನಿಯಮಗಳೊಳಗಿನ ೫೮ನೇ ನಿಯಮವನ್ನು ಮಂಜೂರು ಮಾಡುವಾಗ ಸರಕಾರದವರು ಶಿಕ್ಷಣ ಖಾತೆಯಲ್ಲಿ ಕೆಲಸಮಾಡಿ ಅನುಭವ ಪಡೆದ ಜನರ ಅಭಿಪ್ರಾಯವನ್ನು ತೆಗೆದುಕೊಂಡಿರುವರೋ ಇಲ್ಲವೋ ಎಂಬುದು ಇಕ್ಕೊಂದು ವಿಚಾರಣೀಯವಾದ ಪ್ರಶ್ನೆಯಾಗಿದೆ. ಈ ತೀರ ಕಡಿಮೆ ಮಾನವನ್ನೇ ತೀರ ಹೆಚ್ಚಿನ ದರ್ಜೆಯೆಂದು ವಿದ್ಯಾಖಾತೆಯ ಅಧಿಕಾರಿಗಳು ಈಗೀಗ

ಅರ್ಥಾಂತರ ಮಾಡಿಕೊಂಡಂತೆ ತೋರುವದು. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ನೋಡಿದರೆ ಎಲ್ಲರೂ ಟ್ರೇಂಡ ಶಿಕ್ಷಕರಾಗಿರುವದು ಯೋಗ್ಯವೆನಿಸುವದು. ೧೯೨೩ನೇ ಇಸ್ವಿಯಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯದೆಯು ಪಾಸಾಗುವದಕ್ಕಿಂತಲೂ ಹಿಂದಿನ ದಿನಗಳಲ್ಲಿ ನೂರಕ್ಕೆ ನೂರು ಶಿಕ್ಷಕರು ಟ್ರೇಂಡರೇ ಇರಬೇಕೆಂಬದು ಸರಕಾರದ ಧೋರಣವಾಗಿದ್ದಿತು. ಮೇಲೆ ಹೇಳಿದ ನಿಯಮಗಳಲ್ಲಿ ಟ್ರೇಂಡ ಶಿಕ್ಷಕರ ಕನಿಷ್ಠಾವಧಿ ಮಾನವು ಎಷ್ಟಿರತಕ್ಕದೆಂಬದನ್ನು ಸ್ಪಷ್ಟವಾಗಿ ಹೇಳಿಲ್ಲ. ಇದೊಂದು ಮಹತ್ವದ ದೋಷವೇ ಸರಿ. ನೂರಕ್ಕೆ ೫೦ ಜನರು ಟ್ರೇಂಡರಿದ್ದರೆ ಸಾಕೆಂಬ ನಿಯಮನ್ನು ನೋಡಿದೊಡನೆ ಇದು ಕೇವಲ ತಪ್ಪುವಳಿಕೆಯಿಂದ ಮಾಡಲ್ಪಟ್ಟಿರುವುದೆಂದೂ, ಇದರಿಂದ ಪ್ರಾಥಮಿಕ ಶಿಕ್ಷಣಕ್ಕೆ ಬಾಧೆಯುಂಟಾಗದೆ ಇರದೆಂದೂ ಚಟ್ಟನೆ ಹೇಳಬಿಡಬೇಕಾಗುವದು. ಈ ನಿಯಮಗಳನ್ನು ಮಾಡಿದವರಿಗೆ ಮುಲ್ಕೀಪರೀಕ್ಷೆಯಲ್ಲಿ ಪಾಸಾದ ಉಮೇದವಾರರಿಗೆ ಯಾವ ಯಾವ ವಿಷಯಗಳ ಎಷ್ಟೆಷ್ಟು ಪರಿಜ್ಞಾನವಿರುವದೆಂಬದರ ತಿಳುವಳಿಕೆಯಿದ್ದಂತೆ ತೋರುವದಿಲ್ಲ. ಕೆಲ ಕೆಲವು ವಿಷಯಗಳ ಪ್ರಾಥಮಿಕ ಜ್ಞಾನವಲ್ಲದೆ ಹೆಚ್ಚಿನದೇನೂ ಈ ಉಮೇದವಾರರಿಗೆ ಇರುವದಿಲ್ಲ. ಶಿಕ್ಷಣಪದ್ಧತಿ, ಚಿಕ್ಕಬಾಲಕರ ಮನಸ್ಸಿನ ವಿಕಾಸ ಬೆಳವಣಿಗೆಗಳ ಅಧ್ಯಾಸ, ಈ ವಿಷಯಗಳ ಮಾತನ್ನಂತೂ ಕೇಳುವದೇಬೇಡ. ಇಂಥ ಅನನುಭವಿಕ ಶಿಕ್ಷಕರು ಬಾಲಕರನ್ನು ತಿದ್ದುವದರ ಬದಲು ಕೆಡಿಸಿಬಿಡುವದಕ್ಕೆ ಹೆಚ್ಚು ಕಾರಣರಾಗುವರೆಂದು ಒತ್ತಿ ಒತ್ತಿ ಹೇಳಬೇಕಾಗುವದು. ೨೫ ವರ್ಷ ಜಿ॥ ಎ॥ ಇ., ೧೦ ವರ್ಷ ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲ, ೧೦ ವರ್ಷ ಡಿ॥ ಲೋ॥ ಬೋ॥ ಪ್ರೆಸಿಡೆಂಟ ಮತ್ತು ೨೫ ವರ್ಷ ಡಿ. ಲೋ. ಬೋ. ಮೆಂಬರ ಹೀಗೆ ಅರ್ಧಶತಮಾನದ ವರೆಗೆ ವಿದ್ಯಾಖಾತೆಯ ಕೆಲಸಗಳ ಅನುಭವದ ಮೂಲಕ ನಾನು ಈ ನಿಯಮಗಳನ್ನು ಮಾಡಿದವರ ಅದೂರದರ್ಶಿತ್ವವನ್ನು ಬಲವಾಗಿ ವಿರೋಧಿಸಬೇಕಾಗಿದೆ. ಬರೇ ಮುಲಕೀಪರೀಕ್ಷೆಯಲ್ಲಿ ಪಾಸಾದ ಉಮೇದವಾರನು ಪ್ರಾಥಮಿಕ ಶಾಲೆಗೆ ಬರುವ ಚಿಕ್ಕಮಕ್ಕಳ ನೈತಿಕ, ಶಾರೀರಿಕ, ಬೌದ್ಧಿಕ ಶಕ್ತಿಗಳನ್ನು ವಿಕಾಸಗೊಳಿಸಿ ಶಿಕ್ಷಣಕೊಡಲು ಎಷ್ಟುಮಾತ್ರಕ್ಕೂ ಯೋಗ್ಯನಲ್ಲ. ಮತ್ತು ಇಂಥವರಿಗೆ ಸಾಕಷ್ಟು ವಿಷಯಗಳ ಹಾಗು ಶಿಕ್ಷಣ ಪದ್ಧತಿಯ ಜ್ಞಾನವನ್ನು ಮಾಡಿಕೊಟ್ಟ ಹೊರತು ಶಿಕ್ಷಕರನ್ನಾಗಿ ನಿಯಮಿಸುವದು ಮಹದಪರಾಧವೆನಿಸುವದು.

೩. ಪ್ರಾಥಮಿಕ ಶಿಕ್ಷಕರಿಗೂ ಮಾಧ್ಯಮಿಕ ಶಿಕ್ಷಕರಿಗೂ ಕೊಡಲ್ಪಡುವ ಶಿಕ್ಷಣ ವಿಷಯಕ ಜ್ಞಾನದಲ್ಲಿ ಮಹದಂತರವಿರುವದು. ಮಾಧ್ಯಮಿಕ ಶಿಕ್ಷಕರಿಗಾಗಿ ಇಟ್ಟಿರುವ ಟ್ರೇನಿಂಗ ಕಾಲೇಜದಲ್ಲಿ ಪದವೀಧರರನ್ನಷ್ಟೇ ಆರಿಸಿಕೊಂಡು ಅವರಿಗೆ ಒಂದು ವರ್ಷದ ಕಾಲಾವಧಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನಷ್ಟೇ ಕಲಿಸುವರು. ಆ ಪದವೀಧರರಿಗೆ ತಾವು ಕಲಿಸಬೇಕಾಗಿರುವ ಹಾಯಸ್ಕೂಲಿನ ಅಭ್ಯಾಸ ಕ್ರಮವನ್ನು ಕಲಿಸಲಿಕ್ಕೆ

ಬೇಕಾಗುವಷ್ಟು ವಿಷಯಗಳ ಸಾಮಾನ್ಯ ಜ್ಞಾನವು ಇದ್ದೇ ಇರುವದು. ಆದರೆ ಮುಲ್ಕೀ ಪರೀಕ್ಷೆಯಲ್ಲಿ ಪಾಸಾದವರ ಮಾತು ಹಾಗಲ್ಲ ಅವರ ಸಾಮಾನ್ಯ ಜ್ಞಾನವು ತೀರ ಕಡಿಮೆಯಿರುವದು. ಅದ್ದರಿಂದ ಪ್ರಾಥಮಿಕ ಟ್ರೇನಿಂಗ ಕಾಲೇಜುಗಳಲ್ಲಿ ಶಿಕ್ಷಣ ಪದ್ಧತಿಗೆ ಸಂಬಂಧಿಸಿದ ವಿಷಯಗಳನ್ನಷ್ಟೇ ಅಲ್ಲದೆ ವಿಶ್ವ ಜ್ಞಾನಾರ್ಜನೆಯ ಸಾಮಾನ್ಯ ವಿಷಯಗಳನ್ನು ಕಲಿಸಬೇಕಾಗುವದು. ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗಿಂತ ಎಷ್ಟೋ ಮಡಿ ಹೆಚ್ಚಿನ ಜ್ಞಾನವುಳ್ಳವನಾಗಿರಬೇಕೆಂಬುದು ತೀರ ಸಹಜವು. ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗೆ ಕಲಿಸಬೇಕಾಗುವಷ್ಟೇ ವಿಷಯಗಳನ್ನು ತಿಳಿದಿದ್ದರೆ ಅವನ ಶಿಕ್ಷಣವು ಎಂದೂ ಪರಿಣಾಮಕಾರಕವಾಗಲಾರದು. ಅಂದರೆ ಎರಡು ಇಯತ್ತೆಗಳನ್ನು ಕಲಿತವನು ಎಂದೂ ಎರಡನೇ ಇಯತ್ತೆಯ ಶಿಕ್ಷಕನಾಗಲಾರನು. ಇದೇ ಸಂಗತಿಯನ್ನು ಇನ್ನೊಂದು ಉದಾಹರಣೆಗಳಿಂದ ಸಿದ್ಧ ಮಾಡಬಹುದು. ಶ್ರೀಮಂತನಿದ್ದವನು ಬೇಡಿದವರಿಗೆ ಸ್ವಲ್ಪ ಹಣವನ್ನು ಕೊಡಬಲ್ಲನು. ಆದರೆ ಬಡವನು ಏನು ಕೊಡಬಲ್ಲನು ! ಇನ್ನು ಎಂಥವರು ಶಿಕ್ಷಕರ ಕೆಲಸಕ್ಕೆ ತಕ್ಕವರೆಂಬುದನ್ನು ನೋಡುವ. ಶಿಕ್ಷಕನು ಕೇವಲ ಪಗಾರಕ್ಕಾಗಿ ಕೆಲಸ ಮಾಡುವಂಥವನಿರಕೂಡದು. ಅವನು ತನ್ನ ಪ್ರೀತಿಯ ಉದ್ಯೋಗವೆಂದು ತಿಳಿದು ಆ ಕೆಲಸವನ್ನು ಕೈಕೊಂಡವನಿರಬೇಕು ಪರಾರ್ಥಕ್ಕಾಗಿ ದುಡಿಯುವವನೂ, ವಿಷಯಗಳ ಸಂಪೂರ್ಣ ಜ್ಞಾನವುಳ್ಳವನೂ, ಶಿಕ್ಷಣದ ಹೊರಿಗೆ ಬೇಕಾಗುವಂಥ ಪದ್ಧತಿಗಳ ಪರಿಜ್ಞಾನವುಳ್ಳವನೂ ಆದವನೇ ಶಿಕ್ಷಕರ ಕೆಲಸಕ್ಕೆ ತಕ್ಕವನೆನಿಸಿಕೊಳ್ಳುವನು. ಪ್ರಪಂಚದ ಸಾಮಾನ್ಯ ಜ್ಞಾನವನ್ನು ಪಡೆದವನೆಂಬುದಿಷ್ಟೇ ಆಧಾರದ ಮೇಲಿಂದ ಯಾರಿಗೂ ಕೋರ್ಟು ಕಚೇರಿಗಳಲ್ಲಿ ವಕೀಲನ ಕೆಲಸ ಮಾಡಲಿಕ್ಕೆ ಕೊಡುತ್ತಿರುವದಿಲ್ಲ. ಅವನು ಕಾಯದೆಯನ್ನು ಅಭ್ಯಾಸಮಾಡಿ ತಕ್ಕ ಪರೀಕ್ಷೆಯಲ್ಲಿ ಪಾಸಾದರೆ ಮಾತ್ರ ಅಂಥ ಕೆಲಸಕ್ಕೆ ತಕ್ಕವನೆಂದು ತಿಳಿಯುವರು. ಅದರಂತೆ ಸಿಕ್ಕ ಸಿಕ್ಕವರಿಗೆ ಡಾಕ್ಟರನಂತೆ ಕೆಲಸ ಮಾಡಿ ಔಷಧೋಪಚಾರ ಮಾಡಲಿಕ್ಕೆ ಬಿಡುತ್ತಿರುವದಿಲ್ಲ. ಅವನು ದೀರ್ಘ ಕಾಲದವರೆಗೆ ತನ್ನ ಉದ್ಯೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಅಭ್ಯಾಸ ಮಾಡಬೇಕಾಗುವದು. ಆದರೆ ಸ್ಥಾನಿಕ ಸಂಸ್ಥೆಗಳಿಗೆ ಅಂಟ್ರೇಂಡ ಜನರನ್ನು ಶಿಕ್ಷಕರ ಕೆಲಸಕ್ಕೆ ನಿಯಮಿಸಿಕೊಳ್ಳಲಿಕ್ಕೆ ಅಪ್ಪಣೆ ಕೊಡುತ್ತಿರುವದನ್ನು ನೋಡಿದರೆ ವಿದ್ಯಾಖಾತೆಯವರು ಮಾತ್ರ ಈ ಎಲ್ಲ ಸಂಗತಿಗಳನ್ನು ಮರೆತುಬಿಟ್ಟಂತೆ ತೋರುವದು. ಅದ್ದರಿಂದ ಹಿಂದೆ ಹೇಳಿದ ನಿಯಮವನ್ನು ಬದಲಿಸಿ ಎಲ್ಲ ಶಿಕ್ಷಕರೂ ಟ್ರೇಂಡರೇ ಇರಬೇಕೆಂದು ನಿಯಮಮಾಡಬೇಕಾಗುವದು. ಚಿಕ್ಕ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ಕಲಿತುಕೊಂಡ ವಿಷಯಗಳ ಭಾವನೆಗಳು ಬಹುಕಾಲದವರೆಗೆ ಉಳಿದು ಬಿಡುವದರಿಂದ ಆ ಕಾಲದಲ್ಲಿ ಅವರ ಮನಸ್ಸಿನಲ್ಲಿ ಯೋಗ್ಯ ಭಾವನೆಗಳು ಬಿಂಬಿಸುವಂತೆ ಮಾಡುವದು ಅತಿ ಮಹತ್ವದ ವಿಷಯವು. ಮತ್ತು ಅದಕ್ಕಾಗಿ ಯೋಗ್ಯ ಜನರನ್ನೇ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೆಲಸಕ್ಕೆ ನಿಯಮಿಸಬೇಕಾಗುವದು. ಶಿಕ್ಷಕರು ವಿದ್ಯಾರ್ಥಿಗಳಿಗೆ ಹಲ ಕೆಲವು ವಿಷಯಗಳ ಜ್ಞಾನ ಮಾಡಿಕೊಟ್ಟರೆ ತಮ್ಮ ಕೆಲಸವಾಯಿತೆಂದು ತಿಳಿಯಕೂಡದು. ಶಿಕ್ಷಕರು ತಮ್ಮ ಬಾಲಕರು ಸತ್ಯಪ್ರಿಯರೂ, ಸಜ್ಜನರೂ, ಧೈರ್ಯದಿಂದ ದುಡಿಯುವವರೂ, ಚಪಲರೂ, ನಿರೀಕ್ಷಣ ಶಕ್ತಿಯುಳ್ಳವರೂ, ರಾಜನಿಷ್ಠರೂ ಆದ ನಾಗರಿಕರಾಗಬೇಕೆಂಬ ಧ್ಯೇಯವುಳ್ಳವರಾಗಿರಬೇಕಲ್ಲದೆ ಯಾವಾಗಲೂ ವಿದ್ಯಾರ್ಥಿಗಳಾಗಿರಬೇಕಾಗುವದು.

೪. ಟ್ರೇನಿಂಗ ಕಾಲೇಜದಲ್ಲಿ ಕಲಿಯುವ ಉಮೇದವಾರರಿಗೆ ಸ್ಕಾಲರಶಿಪ್ಪಗಳನ್ನು ಕೊಡುವ ಕಾರಣವಿಲ್ಲ. ಅವರಿಗೆ ಎರಡು ವರ್ಷಗಳವರೆಗೆ ಬೇರೆ ಬೇರೆ ವಿಷಯಗಳನ್ನು ಕಲಿಸತಕ್ಕದ್ದು. ಇಂಥ ಟ್ರೇಂಡ ಜನರಿಗೆ ನೌಕರಿಯನ್ನು ಕೊಡುವದಕ್ಕೆ ಸರಕಾರವಾಗಲಿ ಸ್ಥಾನಿಕ ಸಂಸ್ಥೆಗಳಾಗಲಿ ಹೊಣೆಯನ್ನು ಹೊರುವ ಕಾರಣವಿಲ್ಲ. ಕಳೆದ ಎರಡು ವರ್ಷಗಳಿಂದಲೂ ಸ್ಥಾನಿಕ ಸಂಸ್ಥೆಗಳಿಂದ ಬಂದಿರುವ ಉಮೇದವಾರರಿಗೆ ಅವರು ವಿದ್ಯೆಯಲ್ಲಿ ಹಿಂದುಳಿದವರಿರಲಿ ಮುಸಲ್ಮಾನರೇ ಇರಲಿ ಯಾವ ಜಾತಿಯವರೇ ಇದ್ದರೂ ಸ್ಕಾಲರ ಶಿಪ್ಪಗಳನ್ನು ಕೊಟ್ಟಿಲ್ಲ. ಹೀಗೆ ತಮ್ಮ ಸ್ವಂತ ಖರ್ಚಿನಿಂದ ಶಿಕ್ಷಣ ಪಡೆಯುವಂಥ ಉಮೇದವಾರರಿಗೆ ದಕ್ಷಿಣ ಭಾಗದಲ್ಲಿ ಕೊರತೆಯಿರುವದಿಲ್ಲ. ಸದ್ಯಕ್ಕೆ ಪ್ರಯೋಗಾರ್ಥವಾಗಿ ಧಾರವಾಡ, ಬೆಳಗಾಂವ, ಮತ್ತು ವಿಜಾಪುರ ಜಿಲ್ಲೆಗಳಿಂದ ೩೫ ಜನ ಉಮೇದವಾರರನ್ನು ಈ ಪ್ರಕಾರದ ಮೇರೆಗೆ ಇಟ್ಟುಕೊಂಡು ಒಂದು ವರ್ಗವನ್ನು ನಡೆಯಿಸಬೇಕು. ಟ್ರೇನಿಂಗ ಸ್ಕೂಲಿನಲ್ಲಿ ಶಿಕ್ಷಣ ಪಡೆದ ತರುವಾಯ ಅವರನ್ನು ಆಯಾ ಸ್ಥಾನಿಕ ಸಂಸ್ಥೆಗಳವರು ಶಿಕ್ಷಕರ ಕೆಲಸಕ್ಕೆ ನಿಯಮಿಸಿಕೊಳ್ಳಬಹುದು. ಇಲ್ಲವೆ ಅವರು ಸಣ್ಣ ಸಣ್ಣ ಹಳ್ಳಿಗಳಲ್ಲಿ ಖಾಸಗೀ ಶಾಲೆಗಳನ್ನು ಆರಂಭಿಸಬಹುದು. ಈ ಮೇಲೆ ಹೇಳಿದ ಸಂಗತಿಗಳ ಮೇಲಿಂದ ಟ್ರೇನಿಂಗ ಸ್ಕೂಲಿನಲ್ಲಿ ಈಗಿನಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಅದನ್ನು ನಡೆಯಿಸುವದು ಶಕ್ಯವೂ ಅವಶ್ಯವೂ ಇರುವದೆಂಬುದು ಸಿದ್ಧವಾಗುವದು.

೫. ಟ್ರೇನಿಂಗ ಕಾಲೇಜುಗಳ ಅಭ್ಯಾಸ ಕ್ರಮವು ಯಾವ ರೀತಿಯಾಗಿರಬೇಕೆಂಬ ವಿಷಯದ ಬಗ್ಗೆ ೧೯೧೮ನೇ ಇಸ್ವಿಯಿಂದಲೂ ಸರಕಾರವು ತಪ್ಪು ಮಾಡುತ್ತ ಬಂದಿರುವದೆಂದು ತೋರುವದು. ಜ್ಞಾನವರ್ಧಕ ವಿಷಯಗಳೆನಿಸಿಕೊಳ್ಳುವ ಸಂಸ್ಕೃತ ಬೀಜಗಣಿತಗಳನ್ನು ಟ್ರೇನಿಂಗ ಕಾಲೇಜದ ಅಭ್ಯಾಸ ಕ್ರಮದೊಳಗಿಂದ ತೆಗೆದಿರುವರು. ಅಂಕಗಣಿತಕ್ಕೆ ಬೀಜಗಣಿತವು ಮೂಲಾಧಾರವಾಗಿರುವದರಿಂದ ಬೀಜಗಣಿತದ ಜ್ಞಾನವಿಲ್ಲದ ಶಿಕ್ಷಕನು ಅಂಕಗಣಿತವನ್ನು ಸರಿಯಾಗಿ ಕಲಿಸಬಹುದೆಂದು ತಿಳಿಯುವದು ಹಾಸ್ಯಾಸ್ಪದವಾಗಿದೆ. ಅದರಂತೆ ಸಂಸ್ಕೃತದ ಜ್ಞಾನವಿಲ್ಲದೆ ಕನ್ನಡದ ಅದರಲ್ಲಿಯೂ ಗ್ರಾಂಥಿಕ ಕನ್ನಡ ಭಾಷೆಯ ಅಭ್ಯಾಸವು ಪೂರ್ಣವಾಗಬಹುದೆಂದು ತಿಳಿಯುವದೂ [illegible]

ಅಭ್ಯಾಸ ಕ್ರಮವನ್ನು ಕಡಿಮೆ ತರಗತಿಗೆ ಇಳಿಸಿದ್ದು ಸರಿಯಲ್ಲ. ಕಾರಣ ಸಂಸ್ಕೃತ ಬೀಜಗಣಿತಗಳನ್ನು ಟ್ರೇನಿಂಗ ಕಾಲೇಜದ ಅಭ್ಯಾಸ ಕ್ರಮದಲ್ಲಿ ಪುನಃ ಸೇರಿಸಬೇಕೆಂದು ಆಗ್ರಹಪೂರ್ವಕವಾಗಿ ಹೇಳದಿರಲಾರೆನು. ಇನ್ನೊಂದು ಆಶ್ಚರ್ಯಕರವಾದ ಮಾತೇನೆಂದರೆ ಟ್ರೇ. ಕಾ. ದ ಮೊದಲನೇ ವರ್ಷದ ವಿದ್ಯಾರ್ಥಿಗಳು ಕನ್ನಡ ಕ್ರಮಿಕ ಪುಸ್ತಕಗಳ ಹೊರತಾಗಿ ಯಾವ ಗದ್ಯ ಇಲ್ಲವೆ ಪದ್ಯ ಗ್ರಂಥಗಳನ್ನು ಓದಬೇಕಾಗುವದೇ ಇಲ್ಲ ! ಉಚ್ಚ ತರದ ಗದ್ಯ ಪದ್ಯ ಕಾವ್ಯಗಳ ಅಭ್ಯಾಸ ಮಾಡದೆ ಇದ್ದ ವಿದ್ಯಾರ್ಥಿಗಳು ಭಾಷಾ ಸೌಂದರ್ಯವನ್ನಾಗಲಿ ಹೆಚ್ಚಿನ ವಿಚಾರಗಳನ್ನಾಗಲಿ ಹೇಗೆ ತಿಳಿದುಕೊಳ್ಳುವರೆಂಬುದು ತೀರ ಆಶ್ಚರ್ಯದ ವಿಷಯವು.

೬. ಪ್ರಾಥಮಿಕ ಶಿಕ್ಷಕರ ಪಗಾರದ ವಿಷಯವಾಗಿ ವಿಚಾರಮಾಡಿ ನೋಡಿದರೆ ಅವರಿಗೆ ಈಗ ಅವರ ಯೋಗ್ಯತೆಗೆ ಮೀರಿ ಪಗಾರು ಕೊಡಲ್ಪಡುವದೆಂದು ಹೇಳಬೇಕಾಗುವದು. ತೀರ ಕಡಿಮೆ ಪಗಾರವನ್ನು ೨೫ ರೂ ಇಟ್ಟಿದ್ದು ಬಹಳ ಹೆಚ್ಚಾಗಿದೆ. ಇನ್ನು ಮುಂದೆ, ಮೊದಲನೇ ವರ್ಷದ ಟ್ರೇಂಡರ ಆರಂಭದ ಪಗಾರ ೨೦ ರೂ. ಇದ್ದರೆ ಸಾಕು. ಸ್ಥಾನಿಕ ಸಂಸ್ಥೆಗಳು ೧೫ ರೂ. ಗಳ ಮೇಲೆ ಅಂಟ್ರೇಂಡ ಶಿಕ್ಷಕರನ್ನು ತಾತ್ಪೂರ್ತಿಕವಾಗಿ ನೇಮಿಸಿಕೊಳ್ಳಬಹುದು. ಎರಡನೇ ಮೂರನೇ ವರ್ಷಗಳ ಟ್ರೇಂಡ ಶಿಕ್ಷಕರ ಆರಂಭದ ಪಗಾರವು ಕ್ರಮವಾಗಿ ೨೫–೩೦ ರೂ. ಇರಬಹುದು. ೧ನೇ ೨ನೇ ೩ನೇ ವರ್ಗಗಳ ಟ್ರೇಂಡ ಶಿಕ್ಷಕರ ಕೊನೆಯ ಪಗಾರು ಕ್ರಮವಾಗಿ ೪೦– ೪೫– ೫೦ ಇದ್ದರೆ ಸಾಕು. ವರ್ಷಂಪ್ರತಿ ಬಡತಿಯ ಸ್ಕೇಲಿನಂತೆ ಪಗಾರು ಕೊಡುವ ಪದ್ಧತಿಯು ಪ್ರಾಥಮಿಕ ಶಿಕ್ಷಕರಿಗೆ ತಕ್ಕದ್ದಲ್ಲ. ಈ ತರದ ರೂಢಿಯು ಪ್ರಚಾರದಲ್ಲಿ ಬಂದಂದಿನಿಂದಲೂ ಶಿಕ್ಷಕರು ತಮ್ಮ ಕೆಲಸದಲ್ಲಿ ತಕ್ಕ ಕಾರ್ಯಸ್ಫೂರ್ತಿಯನ್ನು ತೋರಿಸುವದಿಲ್ಲ; ಮತ್ತು ಬಹುಜನ ಶಿಕ್ಷಕರು ತಮ್ಮ ಹಿಂದಿನ ಶಿಕ್ಷಕರಂತೆ ಸ್ಫೂರ್ತಿಯಿಂದಲೂ ಉತ್ಸಾಹದಿಂದಲೂ ಕೆಲಸಮಾಡುತ್ತಿರುವದಿಲ್ಲ. ಈಗಿನವರಂತೆ ನಿಯಮಿತ ಕಾಲಾವಧಿಯಿಂದ ಗೊತ್ತಾದಷ್ಟು ಬಡತಿಯನ್ನು ಕೊಡುವ ಪದ್ಧತಿಯನ್ನು ನಿಲ್ಲಿಸಿಬಿಡುವದು ಪ್ರಾಥಮಿಕ ಶಿಕ್ಷಣದ ದೃಷ್ಟಿಯಿಂದ ನೋಡಿದರೆ ಹಿತಾವಹವಾಗಿದೆ. ಇನ್ನು ಮುಂದೆ ಶಿಕ್ಷಕರ ಕೆಲಸದಲ್ಲಿ ಯೋಗ್ಯತೆಯನ್ನು ನೋಡಿ ಬಡತಿಗಳನ್ನು ಕೊಡತಕ್ಕದ್ದು. ಅದರಿಂದ ಶಿಕ್ಷಕರಲ್ಲಿ ಯೋಗ್ಯ ಹೋರಾಟವೂ ಸ್ಪರ್ಧೆಯೂ ಉಂಟಾಗುವವು. ಈಗ ಕೊಟ್ಟಿರುವ ಹೆಡ್‌ಮಾಸ್ತರ ಅಲಾವನ್ಸು ಹೆಡ್‌ಮಾಸ್ತರ ಮತ್ತು ಅಸಿ॥ ರಲ್ಲಿ ಕಲಹಕ್ಕೆ ಕಾರಣವಾಗುವದರಿಂದ ಅದನ್ನು ನಿಲ್ಲಿಸಿಬಿಡತಕ್ಕದ್ದು. ಈ ರೀತಿ ಆರಂಭದ ಪಗಾರವನ್ನು ಕಡಿಮೆ ಮಾಡಿ, ನಿಯಮಿತ ಕಾಲಾವಧಿಯಿಂದ ಬಡತಿಯನ್ನು ಕೊಡುವ ಕ್ರಮವನ್ನು ನಿಲ್ಲಿಸಿ, ಹೆಡ್‌ಮಾಸ್ತರರಿಗೆ ಅಲಾವನ್ಸವನ್ನು ಕೊಡುವ ಕ್ರಮವನ್ನು ಬಂದು ಮಾಡುವದರಿಂದ ಸರಕಾರಕ್ಕೆ ವೆಚ್ಚವು ಬಹಳ ಕಡಿಮೆಯಾಗಿ ಉಳಿತಾಯವಾಗುವದು. ಈ ಹಣವನ್ನು ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿಯೂ ಟ್ರೇನಿಂಗದ ಬಗ್ಗೆಯೂ ಉಪಯೋಗಿ

೭. ಧಾರವಾಡದ ಟ್ರೇನಿಂಗ ಸ್ಕೂಲನ್ನು ಬಂದು ಮಾಡದೆ ಅದಕ್ಕೆ ಇನ್ನೂ ಹೆಚ್ಚಿಗೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂತಲೂ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯದೆಯೊಳಗಿನ ಹಿಂದೆಹೇಳಿದ ಭಾಗಗಳನ್ನು ತಿದ್ದಿ ಸರಿಪಡಿಸಬೇಕೆಂತಲೂ ಸ್ಥಾನಿಕ ಸಂಘಗಳಿಗೆ ಕೊಟ್ಟಿರುವ ಅಧಿಕಾರಗಳನ್ನು ದುರುಪಯೋಗವಾಗುವ ಪ್ರಸಂಗದಲ್ಲಿ ಅವುಗಳ ಮೇಲೆ ಯೋಗ್ಯ ಮೇಲ್ವಿಚಾರಣೆ ನಡಿಸಿ ಅವುಗಳ ಮಾರ್ಗವನ್ನು ನಿಯಂತ್ರಣಪಡಿಸುವದಕ್ಕೆ ಆವಶ್ಯಕವೆನಿಸುವ ಕೆಲವು ಹೆಚ್ಚಿನ ಮಾತುಗಳನ್ನು ಅದರಲ್ಲಿ ಸೇರಿಸಬೇಕೆಂತಲೂ ತುಂಬಾ ಆಗ್ರಹದೊಡನೆ ವಿನಂತಿ ಮಾಡಿಕೊಂಡು ಈ ವಿನಂತಿ ಪತ್ರವನ್ನು ಮುಗಿಸುವೆನು.

S. K. Rodda

ಶಾಲಾಪತ್ರಕ

ಸಂಪಾದಕ—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೪	ಅಗಸ್ಟ ೧೯೨೬	ಅಂ. ೫

ಸ್ಫುಟ ವಿಚಾರಗಳು

೧. ಅಭಿನಂದನ

ಟ್ರೇನಿಂಗ ಕಾಲೇಜವು ಹೊಸತು ಪ್ರಾರಂಭವಾದದ್ದಕ್ಕಾಗಿ ಅನೇಕ ಸದ್ಗೃಹಸ್ಥರಿಂದ ಅಭಿನಂದನ ಪತ್ರಗಳು ನಮ್ಮ ಕಡೆಗೆ ಬಂದವೆ. ಅವುಗಳನ್ನೆಲ್ಲ ಪ್ರಕಟಿಸಲು ಸ್ಥಳ ಕಡಿಮೆ ಇರುವದರಿಂದ ಅಭಿನಂದನ ಪತ್ರಗಳನ್ನು ಕಳಿಸಿದ ಸದ್ಗೃಹಸ್ಥರಿಗೆಲ್ಲ ನಮ್ಮ ಪ್ರೇಮಪೂರ್ವಕ ವಂದನೆಗಳನ್ನು ಸಮರ್ಪಿಸುವೆವು. ನಮ್ಮ ಕಡೆಗೆ ಬಂದ ಪತ್ರಗಳಲ್ಲಿ ಒಂದರ ಸಾರಾಂಶವನ್ನು ಕೆಳಗೆ ಕೊಟ್ಟಿದ್ದೇವೆ.

"ಹೊಸ ಟ್ರೇ. ಕಾ. ದ ಪ್ರಾರಂಭವಾದ ಸಂಗತಿಯನ್ನು ಕೇಳಿ ಬಹಳ ಆನಂದ ಪರಮಾನಂದವಾಯಿತು. ಬಹಳ ದಿವಸಗಳ ಕನಸು ಕೊನೆಗೆ ನನಸಾಯಿತು. ನಿಮ್ಮಿಂದ ನಮ್ಮ ಮಿತ್ರರಲ್ಲಿ ಅನಂತ ಪ್ರದರ್ಶನವು ಕೂಡ ಆಯಿತು. ಈ ಕಾರ್ಯಕ್ಕಾಗಿ ಬಿ. ಬಿ. ದೇಶಪಾಂಡೆಯವರ ಸತತ ಪ್ರಯತ್ನಗಳ ಬಗ್ಗೆ ಕೃತಜ್ಞತೆ ಸಲ್ಲಬೇಕು. ಇನ್ನು ಮುಂದೆ ಏನೊಂದೂ ಆತಂಕವಿಲ್ಲದೆ ದೇವರು ಸಾಗಿಸಲೆಂದು ಈಶ್ವರ ಪ್ರಾರ್ಥನೆಯು ಮಾಡಲ್ಪಟ್ಟಿತು.

ಕನ್ನಡಭಾಷೆಯು ಅಭಿವೃದ್ಧಿಗೆ ಕೇಂದ್ರವಾಯಿತು. ... ದಾರಿಯಾಯಿತು. ಸಂಕಟಪಡುವವನೂ ಕಳೆಯುವವನೂ ದೇವನೇ ಅಲ್ಲವೇ ? ಇಂಥ ಕರ್ನಾಟಕದಲ್ಲಿ ಕನ್ನಡಭಾಷೆಯು ತನ್ನ ದುಸ್ಥಿತಿಯನ್ನು ಕಾಯ್ದುಕೊಂಡು ಇರುವ ವೇಳೆಯು ಬಂದಂತಾಯಿತು. ಸ್ವಸ್ತಿ! ಆನಂದ! ಆನಂದ !! ಪರಮಾನಂದ!!"

ಟ್ರೇ. ಕಾ. ವು ಊರ್ಜಿತದೆಶೆಗೆ ಬರುವದರ ಸಲುವಾಗಿಯು ಮುಂದಾಳುಗಳ ಪ್ರಯತ್ನವು ಒಂದು ಕಾರಣವಾಗಿದೆ. ಆದರೆ ಮುಖ್ಯವಾಗಿ ಈಗಿನ ಶಿಕ್ಷಣಮಂತ್ರಿಗಳಾದ ನಾಮದಾರ ಬಿ. ಬಿ. ಹರಿಲಾಲ ದೇಸಾಯಿಯವರ ಸಂಪೂರ್ಣ ಸಹಾನುಭೂತಿಯೂ ವಿಶೇಷ ಕಾರಣವು. ಗುಜರಾಥದಲ್ಲಿಯು ಪ್ರೇಮಚಂದ ರಾಯಚಂದ ಟ್ರೇನಿಂಗ ಕಾಲೇಜದ ಅವಶ್ಯತೆಯೂ ನಮ್ಮಲ್ಲಿಯ ಟ್ರೇ. ಕಾ. ದಂತೆ ಇತ್ತು. ಅಲ್ಲಿಯ ಮುಂದಾಳುಗಳೂ ಈ ಕಾರ್ಯದಲ್ಲಿ ಒಳ್ಳೇ ಜಾಗ್ರತೆಯಿಂದ ಪ್ರಯತ್ನಿಸಿದ್ದಲ್ಲದೆ ಒಂದು ಶಿಷ್ಟಮಂಡಳ ವನ್ನು ಶಿಕ್ಷಣ ಮಂತ್ರಿಗಳ ಕಡೆಗೆ ಕಳುಹಿಸಿ ತಮ್ಮ ಟ್ರೇ. ಕಾ. ವನ್ನು ಇಡಲೇಬೇಕೆಂದು ಆಗ್ರಹದ ವಿನಂತಿಯನ್ನು ಮಾಡಿಕೊಂಡರು. ಹೊಸ ರಾಜಕೀಯ ಸುಧಾರಣೆಯ ಪ್ರಚಾರವು ನಮ್ಮಲ್ಲಿ ಬಂದಂದಿನಿಂದ ಶಿಕ್ಷಣಖಾತೆಯು ಮೊದಲಿಗಿಂತ ಬೇರೆಂದು ಜನರು ತಿಳಿದಿದ್ದರು. ಅದು ಹೋಗಿ ಮೊದಲಿದ್ದದ್ದರಲ್ಲಿಯೇ ಕಡಿಮೆಯಾದದ್ದನ್ನು ನೋಡಿ ಜನರ ಮನಸ್ಸು ಕುಗ್ಗಿ ಹೋಗಿತ್ತು. ಆದರೆ ನಮ್ಮ ಸುದೈವದಿಂದ ಮುಂಬಯಿ ಇಲಾಖೆಯಲ್ಲಿ ಶಿಕ್ಷಣಖಾತೆಗೆ ಸಮರ್ಥರಾದ ಮಂತ್ರಿಗಳು ಬಂದದರಿಂದ ಅವರು ಟ್ರೇನಿಂಗ್ ಕಾಲೇಜಗಳ ಅಸ್ಥಿಪಂಜರಗಳಲ್ಲಿ ಜೀವಕಳೆಯನ್ನು ತುಂಬಿ ಅವುಗಳಿಗೆ ಮೊದಲಿನ ಸ್ವರೂಪವನ್ನು ಕೊಟ್ಟಿದ್ದಲ್ಲದೆ ಇನ್ನೂ ಅವುಗಳ ಅಭಿವೃದ್ಧಿಯನ್ನು ಸಹ ಬಯಸುತ್ತಿರುವರು. ಅದಕ್ಕಾಗಿ ಮುಂಬಯಿ ಇಲಾಖೆಯ ಜನರೆಲ್ಲರು ನಾ. ಬಿ. ಬಿ. ದೇಸಾಯಿಯವರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ.

೨. ಟ್ರೇನಿಂಗ ಕಾಲೇಜದ ಅಭಿವೃದ್ಧಿ

ಹೀಗೆ ಪ್ರಯತ್ನಪೂರ್ವಕವಾಗಿ ಶಿಕ್ಷಣ ಮಂತ್ರಿಗಳು ನಮಗೆ ತಿರುಗಿ ಕೊಟ್ಟ ಧಾರವಾಡದ ಟ್ರೇನಿಂಗ ಕಾಲೇಜವನ್ನು ಪೂರ್ವದ ಸ್ಥಿತಿಗೆ ತರುವದು ಕರ್ನಾಟಕದ ಸ್ಕೂಲಬೋರ್ಡುಗಳ ಕೈಯಲ್ಲಿ ಇದೆ. ನಮ್ಮಲ್ಲಿಯ ಸಂಸ್ಥೆಯನ್ನು ಎತ್ತಿಹಿಡಿಯಲಿಕ್ಕೆ ಶಿಕ್ಷಣ ಭಾಗದ ಮುಂದಾಳುಗಳು ಮನಃಪೂರ್ವಕವಾಗಿ ಪ್ರಯತ್ನಮಾಡುವದನ್ನು ನೋಡಿ ನಮ್ಮಲ್ಲಿಯ ಸ್ಕೂಲಬೋರ್ಡುಗಳು ಉತ್ಸಾಹದಿಂದ ಮುಂದೆಬಂದು ಎರಡನೆಯ ವರ್ಷದ ಟ್ರೇಂಡರ ಬೇಡಿಕೆಯನ್ನು ಮಾಡಿ ಟ್ರೇನಿಂಗ್ ಕಾಲೇಜವು ಮೊದಲಿನಂತೆ ಆಗುವದಕ್ಕೆ ಸಹಾಯವನ್ನು ಮಾಡುವದಲ್ಲದೆ ಅಂಥ ಟ್ರೇಂಡಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಿ ಪ್ರಾಥಮಿಕ ಶಿಕ್ಷಣವನ್ನು ಯಶಸ್ವಿಯಾಗಿ ಮಾಡುವದೂ ಅವುಗಳ ಕರ್ತವ್ಯವಾಗಿದೆ.

ಟ್ರೇಂಡರ ಸಂಖ್ಯೆಯು ಹೆಚ್ಚಾಯಿತು, ಹೆಚ್ಚಾಯಿತೆಂಬ ಕೂಗಾಟವನ್ನೇ ಮುಂದೆ ಮಾಡಿ ಶಿಕ್ಷಣ ಕಳೆಯನ್ನರಿಯದ (ಅಂಟ್ರೇಂಡ) ವ್ಹ. ಫಾ. ಪಾಸಾದ ಜನರನ್ನು ನೇಮಿಸಿಕೊಳ್ಳುವದರಿಂದ ಪ್ರಾ. ಶಿ. ದ ಹಾನಿಯು ಎಷ್ಟಾಗುವದೆಂಬುದನ್ನು ಅವರು ವಿಚಾರಪೂರ್ವಕವಾಗಿ ವಿಮರ್ಶಿಸಿದಲ್ಲಿ ಮತ್ತು ಕನ್ನಡ ಭಾಷೆಯ ಅಭ್ಯಾಸಕ್ಕೆ ಉತ್ತೇಜನ

ವಿಲ್ಲದಂತಾಗಿ ಭಾಷೆಯು ಆವಶ್ಯತೆಯು ಮುಂದೆ ಎಷ್ಟು ಹೀನಸ್ಥಿತಿಗೆ ಹೋಗಬಹುದೆಂಬುದನ್ನು ಆಲೋಚಿಸಿದಲ್ಲಿ ಅವರು ಈ ಬಗ್ಗೆ ಸಹಾನುಭೂತಿಪೂರ್ವಕವಾಗಿ ವಿಚಾರಮಾಡಿ ಧಾರವಾಡ, ಬೆಳಗಾಂವ, ವಿಜಾಪೂರ ಜಿಲ್ಲೆಗಳಿಂದ ಆಯಾ ಜಿಲ್ಲೆಗಳ ಪ್ರಮಾಣ ಕ್ಕನುಸರಿಸಿ ಟ್ರೇಂಡರನ್ನು ಬೇಡಿದರೆ ಪ್ರಾ. ಶಾಲೆಗಳ ಸುಸ್ಥಿತಿಗೂ ಕನ್ನಡ ಭಾಷೆಯ ಅಭ್ಯಾಸಕ್ಕೂ ಉತ್ತೇಜನವನ್ನುಂಟುಮಾಡುವದೆಂಬ ವಿಷಯದಲ್ಲಿ ಸಂದೇಹವಿಲ್ಲ.

ಈಗಿನ ನಿಯಮಗಳಂತೆ ಟ್ರೇನಿಂಗದ ಲಾಭವು ಬ್ರಾಹ್ಮಣರಿಗಿಂತ ಬ್ರಾಹ್ಮಣೇತರರಿಗೇ ಆಗುವದುಂಟು. ೧೯೨೪ನೇ ಇ. ಯಿಂದ ೩ ವರ್ಷಗಳಲ್ಲಿ ಬ್ರಿಟಿಶ್ ಜಿಲ್ಲೆಗಳಲ್ಲಿ ಟ್ರೇಂಡರಾದ ೬೫ ಜನರಲ್ಲಿ ೮ ಜನ ಬ್ರಾಹ್ಮಣರೂ ೫೭ ಜನ ಬ್ರಾಹ್ಮಣೇತರರೂ ಇದ್ದರು. ಒಳ್ಳೆಗೆ ಬ್ರಾಹ್ಮಣ, ಪಂಚಾಳ ಮುಂತಾದ ಮುಂದರಿದ ಜನರನ್ನು ನೂರಕ್ಕೆ ೨೫ ರಂತೆ ತೆಗೆದುಕೊಳ್ಳಬೇಕೆಂಬ ನಿಯಮವಿರುವದು. ಆದದರಿಂದ ಬ್ರಾಹ್ಮಣೇತರ ಬಹು ಸಂಖ್ಯೆಯುಳ್ಳ ಬೋರ್ಡುಗಳು ಮೇಲಿನ ಸಂಗತಿಯನ್ನು ಅವಗಾಹನೆಗೆ ತಂದು ಟ್ರೇ. ಕಾ. ವನ್ನು ಪೂರ್ವದ ಸ್ಥಿತಿಗೆ ತರುವದು ಕರ್ತವ್ಯವಿದೆ.

ಇನ್ನು ಮುಂದೆ ಒಂದೊಂದು ಭಾಗಕ್ಕೆ ಒಂದೊಂದು ಸಂಪೂರ್ಣ ಟ್ರೇನಿಂಗ ಕಾಲೇಜವು ಇರಲೇಬೇಕೆಂಬ ಧೋರಣವನ್ನು ಶಿಕ್ಷಣ ಮಂತ್ರಿಗಳು ತಮ್ಮೆದುರಿಗೆ ಇಟ್ಟುಕೊಂಡಿರುವರೆಂದು ಕೇಳುತ್ತೇವೆ. ಆದದರಿಂದ ಇಂಥ ಅನುಕೂಲ ಪರಿಸ್ಥಿತಿಯ ಉಪಯೋಗವನ್ನು ಸ್ಕೂಲಬೋರ್ಡುಗಳು ಮಾಡಿಕೊಳ್ಳದೇ ಬಿಡಲಾರರೆಂದು ನಂಬಿದ್ದೇವೆ. ೧೯೨೪ನೇ ಇಸ್ವಿಯಲ್ಲಿ ಧಾರವಾಡದಂತೆ ಅಹಮ್ಮದಾಬಾದದ ಟ್ರೇನಿಂಗ ಕಾಲೇಜದಲ್ಲಿಯೂ ಒಂದನೇ ವರ್ಷದ ಒಂದೇ ವರ್ಗವನ್ನು ಇಡಬೇಕೆಂದು ಸರಕಾರದವರು ಮೊದಲು ಗೊತ್ತುಮಾಡಿದ್ದರು. ಆದರೆ ಸ್ವಾಭಿಮಾನವುಳ್ಳ ಗುಜರಾಥದ ಜನರೂ ಅಹಮ್ಮದಾಬಾದ ಸುರತಗಳ ಮುನಸಿಪಾಲಿಟಿಯವರೂ ಡಿಸ್ಟ್ರಿಕ್ಟ ಬೋರ್ಡಿನವರೂ ತಮಗೆ ಹೆಚ್ಚಿನ ಯೋಗ್ಯತೆಯ ಟ್ರೇಂಡರು ಅವಶ್ಯವಾಗಿ ಬೇಕೆಂಬ ಆಗ್ರಹವನ್ನು ತೋರಿಸಿದ್ದರಿಂದ ೧ನೇ ವರ್ಷದಲ್ಲಿ ೬೦ ವಿದ್ಯಾರ್ಥಿಗಳನ್ನೂ ೨ನೇ ವರ್ಷದಲ್ಲಿ ೨೫ ವಿದ್ಯಾರ್ಥಿಗಳನ್ನೂ ಇಟ್ಟುಕೊಳ್ಳಬೇಕೆಂದು ಸರಕಾರದವರು ಗೊತ್ತುಮಾಡಿದರು. ಕರ್ನಾಟಕದ ಜನರು ಈಗಿನಂತೆ ಆ ಕಾಲಕ್ಕೆ ಈ ಪ್ರಶ್ನದ ವಿಷಯವಾಗಿ ಆಸ್ಥೆಯನ್ನು ತೋರಿಸಿದ್ದರೆ ಟ್ರೇ. ಕಾ. ದಲ್ಲಿ ೨ನೇ ವರ್ಷದ ವರ್ಗವು ಉಳಿಯಬಹುದಾಗಿತ್ತು. ಆದುದರಿಂದ ಇನ್ನು ಮುಂದೆ ಪ್ರಾಥಮಿಕ ಶಿಕ್ಷಣದ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡ ಕರ್ನಾಟಕದ ಮುಂದಾಳುಗಳು ಯೋಗ್ಯ ಉತ್ಸಾಹವನ್ನು ತೋರಿಸುವರೆಂದು ನಂಬುತ್ತೇವೆ.

ತುಲನೆಗಾಗಿ ಬೇರೆ ಬೇರೆ ಭಾಗಗಳಲ್ಲಿಯ ಟ್ರೇಂಡ ಜನರ ಸಂಖ್ಯೆಯನ್ನು ಕೆಳಗೆ ಕೊಟ್ಟಿದ್ದೇವೆ.

ಇ. ಸ. ೧೯೨೪ರಲ್ಲಿದ್ದ ಸಂಖ್ಯೆ.

ಭಾಗ	೨ನೇ ವರ್ಷ	೩ನೇ ವರ್ಷ	೧ನೇ ವರ್ಷ	ಒಟ್ಟು ಟ್ರೇಂಡರ ಸಂಖ್ಯೆ
ಮುಂಬೈ	೬೦೬	೬೫೧	೧೮೫೫	೩೪೪೩
ಮಧ್ಯ	೬೫೫	೧೨೩೯	೧೮೪೪	೩೯೩೮
ಉತ್ತರ	೮೮೩	೬೪೯	೧೭೯೩	೩೩೨೩
ದಕ್ಷಿಣ	೯೮೦	೧೧೩೪	೧೨೫೫	೩೨೨೯
ಸಿಂಧ	೬೭೯	೩೫೫	೮೭೩	೧೮೭೯

ಮೇಲಿನ ಕೋಷ್ಟಕದಿಂದ ದಕ್ಷಿಣಭಾಗದಲ್ಲಿ ೧ನೇ ವರ್ಷದ ಟ್ರೇಂಡರ ಸಂಖ್ಯೆಯು ಉತ್ತರ ಮಧ್ಯ ಮತ್ತು ಸಿಂಧ ಭಾಗಗಳಿಗಿಂತ ಪ್ರಮಾಣಕ್ಕನುಸಾರವಾಗಿ ನೋಡಿದರೆ ಕಡಿಮೆಯದೆಂಬುದು ಗೊತ್ತಾಗುವದು. ೨ನೇ ವರ್ಷದವರ ಸಂಖ್ಯೆಯು ಸಿಂಧಕ್ಕಿಂತ ನಮ್ಮಲ್ಲಿ ಕಡಿಮೆಯದೆ. ೩ನೇ ವರ್ಷದ ಟ್ರೇಂಡರ ಸಂಖ್ಯೆಯು ಮಾತ್ರ ನಮ್ಮ ಭಾಗದಲ್ಲಿ ಹೆಚ್ಚಾಗಿದೆ. ಆದರೆ ಈ ನಾಲ್ಕು ವರ್ಷಗಳ ಅವಧಿಯಲ್ಲಿ ಈ ಸಂಖ್ಯೆಯು ಮರಣ, ಪೆನ್ಶನ್ ಮೊದಲಾದ ಕಾರಣಗಳಿಂದ ನೂರಕ್ಕೆ ವರ್ಷಕ್ಕೆ ೮ ರಂತೆ ಕಡಿಮೆಯಾಗಿ ೩ನೇ ವರ್ಷದ ಟ್ರೇಂಡರ ಸಂಖ್ಯೆಯು ೬೭೩ ಆಗಿರಬಹುದು. ಮತ್ತು ೩ನೇ ವರ್ಷದ ವರ್ಗವು ಕಳೆದ ನಾಲ್ಕು ವರ್ಷಗಳಿಂದ ಇಲ್ಲದ್ದರಿಂದ ಹೊಸ ಜನರ ಪೂರೈಕೆಯಿಲ್ಲ. ಆದದರಿಂದ ೩ನೇ ವರ್ಷದ ವರ್ಗವನ್ನು ಇಲ್ಲಿಯ ಟ್ರೇ. ಕಾ. ದಲ್ಲಿ ಇಡುವದು ಅವಶ್ಯವದೆಯೆಂಬುದು ಗೊತ್ತಾಗುವದು.

ಕನ್ನಡ ಶಾಲಾ ಪತ್ರಕ ೧೯೨೭ ಅಕ್ಟೋಬರ್ ಸಂ ೬೪-೭, ಶಿಕ್ಷಣ ಮಂತ್ರಿಗಳು ಆಡಿದ ಮಾತಿನ ಸಾರಾಂಶ:

ಶಾಲಾಪತ್ರಕ.

ಶಿಕ್ಷಣ ಮಂತ್ರಿಗಳ ವಿಚಾರಗಳು

ಇದೇ ನವಂಬರ ತಿಂಗಳ ೬ನೆಯ ತಾರೀಖಿನ ದಿವಸ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ನಮ್ಮ ವಿದ್ಯಾಖಾತೆಯ ಮಂತ್ರಿಗಳಾದ ನಾ. ದಿವಾನ ಬಹಾದ್ದೂರ ಹರಿಲಾಲ ದೇಸಾಯಿಭಾಯಿಯವರ ಅಧ್ಯಕ್ಷತೆಯಲ್ಲಿ ಇನಾಮಿನ ಸಮಾರಂಭವು ನೆರವೇರಿಸಲ್ಪಟ್ಟಿತು. ಆ ಸಮಯದಲ್ಲಿ ದಿ. ಬ. ರವರು ಮಾಡಿದ ಭಾಷಣವು ಮಹತ್ವದ್ದಾಗಿರುವದರಿಂದ ಇಲ್ಲಿ ಕೊಟ್ಟಿರುವೆವು.

ದಿ. ಬಾ. ಕೊದ್ದರಾಯರು ಈ ಟ್ರೇನಿಂಗ ಕಾಲೇಜದ ದೆಶೆಯಿಂದ ಮಾಡಿದ ಪ್ರಯತ್ನಗಳ ಬಗ್ಗೆ ಅವರನ್ನು ಮನೋವೇಧಕವಾದ ರಿಪೋರ್ಟನ್ನು ಓದಿದ್ದಕ್ಕಾಗಿ ಮಿ. ದೇಶಪಾಂಡೆಯವರನ್ನು ಪ್ರಶಂಸುತ್ತೇನೆ. ಸಾಕಷ್ಟು ಟ್ರೇಂಡ ಶಿಕ್ಷಕರಿಲ್ಲದಿದ್ದರೆ ಪ್ರಾಥಮಿಕ ಶಿಕ್ಷಣವು ಸಂಪನ್ನವಾಗಿ ಸಾಗಬಹುದೆಂದು ನಾನಾಗಲಿ ಸರಕಾರವಾಗಲಿ ತಿಳಿದುಕೊಂಡಿಲ್ಲ. ಆದರೆ ಈ ದಕ್ಷಿಣಭಾಗದಲ್ಲಿ ಟ್ರೇಂಡ ಶಿಕ್ಷಕರ ಪ್ರಮಾಣವು ೭೦ ಕ್ಕಿಂತ ಹೆಚ್ಚಿಗೆ ಇರುವದು. ಪ್ರಾ. ಶಿ. ಕ್ಕೆ ಸಂಬಂಧಿಸಿದ ಕಾಯದೆಯ ನಿಯಮಗಳಲ್ಲಿ ನೂರಕ್ಕೆ ೫೦ ರಂತೆ ಟ್ರೇಂಡರಿದ್ದರೆ ಸಾಕೆಂದು ಗೊತ್ತಾಗಿದೆ. ಇದಲ್ಲದೆ ವಿದ್ಯಾರ್ಥಿಗಳಿಗೆ ಕಾಲೇಜದಲ್ಲಿರುವಾಗ ಸ್ಕಾಲರಶಿಪ್ಪು ಕೊಡಬೇಕಾಗುವದು; ಪಾಸಾದ ಕೂಡಲೆ ನೌಕರಿಯನ್ನು ಕೊಡುವ ಜವಾಬದಾರಿಯಿರುವದು; ನಂತರ ಸ್ಕೇಲಿನಂತೆ ಅವರಿಗೆ ಪಗಾರವನ್ನು ಕೊಡಬೇಕಾಗುವದು. ಮೊದಲು ಸ್ಕಾಲರಶಿಪ್ಪಿನ ದರವು ೫ ರೂಪಾಯಿ ಇದ್ದಿತು. ಮುಂದೆ ಏರುತ್ತ ಹೋಗಿ ಹದಿನೈದು ರೂಪಾಯಿಯದಾಗಿತ್ತು. ಈಗ ಅದು ರು. ೧೨-೮-೦ ಆಗಿದೆ. ಶಿಕ್ಷಕರ ಪಗಾರದ ಮಾನವೂ ಒಂದಕ್ಕೆ ಎರಡಾಗಿದೆ. ಈ ಎಲ್ಲ ಅಡಚಣಿಗಳ ಮೂಲಕವಾಗಿ ಗುಜರಾಥದ ಹಾಗು ದಕ್ಷಿಣಭಾಗದ ಟ್ರೇನಿಂಗ ಕಾಲೇಜಗಳನ್ನು ನಿಲ್ಲಿಸಿಬಿಡುವ ವಿಚಾರವು ಕಳೆದ ಜೂನ್ ತಿಂಗಳಲ್ಲಿ ನಡೆದಿತ್ತು. ಆ ಮೇಲೆ ದಿ. ಬ. ಕೊದ್ದರಾಯರ ಬಿನ್ನಹದ ಮೇರೆಗೆ ಈ ವರ್ಷದ ಮಟ್ಟಿಗೆ ನಿಮ್ಮ ಟ್ರೇನಿಂಗ ಕಾಲೇಜವನ್ನು ಪುನಃ ಪ್ರಾರಂಭಿಸಿದೆವು. ಸರಕಾರದ ಮೇಲೆ ಮೇಲೆ ಹೇಳಿದ ಮೂರೂ ತರದ ಜವಾಬದಾರಿಯನ್ನು ಹಾಕದೆ ಇದ್ದರೆ ನಿಮ್ಮ ಟ್ರೇನಿಂಗ ಕಾಲೇಜವನ್ನು ನಡಿಸಲಿಕ್ಕೆ ಏನೊಂದೂ ಅಡಚಣೆಯಿರುವದಿಲ್ಲ.

ಅನುಬಂಧ-೫.

ತರಬೇತಿ ಸಂಸ್ಥೆಯ ಚಿಹ್ನೆ

ಅನುಬಂಧ-೬.

ಜೀವನ ಶಿಕ್ಷಣ

ಶೈಕ್ಷಣಿಕ ಮಾಸಪತ್ರಿಕೆ ಧಾರವಾಡ-8

ಸಂಸ್ಥಾಪನೆ :1865 — ಸಂಸ್ಥಾಪಕರು

ಶತಮಾನೋತ್ತರ ಬೆಳ್ಳಿಹಬ್ಬ — ಡೆಪ್ಯೂಟಿ ಚೆನ್ನಬಸಪ್ಪನವರು

(ಏಪ್ರಿಲ್ 1989 ರಿಂದ) — (1833-1881)

ಧಾರವಾಡದ ಟ್ರೇನಿಂಗ ಕಾಲೇಜದ ಪ್ರಥಮ ಪ್ರಿನ್ಸಿಪಾಲರಾದ ಡೆಪ್ಯೂಟಿ ಚೆನ್ನಬಸಪ್ಪನವರು 1865 ರಲ್ಲಿ ಇಂದಿನ ಜೀವನ ಶಿಕ್ಷಣ ಪತ್ರಿಕೆಯನ್ನು ಮಠಪತ್ರಿಕೆ ಎಂಬ ಹೆಸರಿನಲ್ಲಿ ಪ್ರಾರಂಭಿಸಿದರು. ಮಠಪತ್ರಿಕೆಯೇ ನಂತರ ಶಾಲಾ ಪತ್ರಿಕೆ. ಪ್ರಾಥಮಿಕ ಶಿಕ್ಷಣ, ಜೀವನ ಶಿಕ್ಷಣ ಎಂಬ ಬದಲಾದ ಹೆಸರುಗಳಿಂದ ನಿರಂತರವಾಗಿ ಪ್ರಕಟಗೊಳ್ಳುತ್ತಲಿದೆ.

ಮುಂಬೈ ಕರ್ನಾಟಕದ ಧಾರವಾಡ, ಬೆಳಗಾವಿ, ವಿಜಾಪುರ, ಕಾರವಾರ ಜಿಲ್ಲೆಗಳ ಪ್ರಾಥಮಿಕ ಶಾಲಾ ಶಿಕ್ಷಕರು, ವಿದ್ಯಾ ಇಲಾಖೆಯ ಅಧಿಕಾರಿ ವರ್ಗ ಮತ್ತು ನಾಡಿನ ಜನತೆಯ ಪ್ರೀತಿ ಅಭಿಮಾನಗಳ ಪೋಷಣೆಯಲ್ಲಿ 125 ವರ್ಷಗಳ ಕಾಲ ಜೀವನ ಶಿಕ್ಷಣ ಉಳಿದು ಬೆಳೆದು ಬಂದಿದೆ. ಕರ್ನಾಟಕದಲ್ಲಿ ಇಷ್ಟು ದೀರ್ಘ ಕಾಲ ಬದುಕಿರುವ 'ಏಕಮೇವ ನಿಯತಕಾಲಿಕವಾಗಿ ಇತಿಹಾಸಕ ದಾಖಲೆಯನ್ನೇ ನಿರ್ಮಿಸಿದ ಕೀರ್ತಿ ಈ ಪತ್ರಿಕೆಯದಾಗಿದೆ.

ಈ ಪತ್ರಿಕೆಯ ಹಳೆಯ ಸಂಚಿಕೆಗಳನ್ನು ಸರಕಾರಿ ಶಿಕ್ಷಣ ಕೇಂದ್ರ, ಶಿಕ್ಷಣ ಸಂತಸ, ಧಾರವಾಡದಿಂದ ಶ್ರೀ ಶಿವಲಿಂಗ ಹಿರೇಮಠ ಹಾಗೂ ಶ್ರೀ. ಪಾಟೀಲರವರ ಮುಖೇನ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಗೆ ಸೂಕ್ಷ್ಮ ಚಿತ್ರೀಕರಣ ಮಾಡಲು ಅನುಮತಿ ನೀಡಲಾಗಿದ್ದು, ಈ ಸೌಭಾಗ್ಯವನ್ನು ಸಂಶೋಧಕರಿಗೂ ಸಹ ನೀಡಲು ಒಪ್ಪಿರುತ್ತಾರೆ.

(ಸಹಿ) 6/3/91
(ಡಾ: ಎಲ್. ಮುನಿಸ್ವಾಮಿ)
ನಿರ್ದೇಶಕರು
ಕರ್ನಾಟಕ ರಾಜ್ಯ ಪತ್ರಾಗಾರ.

राष्ट्रीय अध्यापक शिक्षा परिषद

NCTE

National Council for Teacher Education
(A Statutory Body of the Government of India)
Southern Regional Committee

TO BE PUBLISHED IN THE GAZETTE OF INDIA – PART III, SECTION IV

F.KR/ELE/73/SRO/NCTE/2000-2001/ 1777 Date:

READ

ORDER

In exercise of the powers vested under Section 14(3)(a) of the National Council For Teacher Education (NCTE) Act, 1993, the Southern Regional Committee grants recognition to **District Institute of Education & Training, K.C.Park P.O. Dharwad-580008, Karnataka** for **Elementary course** of two years duration from the academic session **2000-2001** with an annual intake of **60 in Kannada Medium**, subject to fulfilling the following conditions

1. All such teachers already appointed who do not fulfil the NCTE norms shall acquire the qualifications as per the norms within a period of two years of this order.
2. Librarian and Library Asst. should be appointed.
3. The institution shall ensure library, laboratories and other instructional infrastructure as per the NCTE norms.
4. The admission to the approved course shall be given only to those candidates who are eligible as per the regulations governing the course and in the manner laid down by the affiliating University / State Government.
5. Tuition fee and other fees will be charged from the students as per the norms of the affiliating University / State Government till such time NCTE regulations in respect of fee structure come into force.
6. Curriculum transaction, including practical work / activities, should be organised as per the norms and standards for the course and the requirements of the affiliating University / examining body.
7. Teaching days including practice teaching should not be less than the number fixed in the NCTE norms for the course.
8. **The Institution shall continue to fulfil the norms laid down under the regulations of the NCTE and submit to the Regional Committee the Annual Report and the Performance Appraisal Report at the end of each academic year. The performance appraisal report should inter alia give the extent of compliance of the conditions indicated above.**

If **District Institute of Education & Training, K.C.Park P.O. Dharwad-580008, Karnataka** contravenes the provisions of the NCTE Act or the rules, regulations and orders made or issued thereunder or fails to fulfil the above conditions, the Regional Committee may withdraw this recognition under the provisions of Section 17(1) of the NCTE Act.

By order

(M Pankaja)
Regional Director

The Manager,
Government of India,
Department of Publications, (Gazette Section)
Civil Lines, Delhi – 110 054.

To

The Principal
District Institute of Education & Training,
K.C.Park P.O. Dharwad 580008,
Karnataka

C.C. to:

1. The Education Secretary (School Education), Government of Karnataka, Bangalore, Karnataka.
2. The Commissioner for Public Instructions, Nrupathunga Road, Bangalore, Karnataka
3. The Director, DSERT, B.P.Wadia Road, Basavanagudi, Bangalore, Karnataka.
4. The Special Officer, CAC, Old Junior College Building, Opp Cauvery Bhavan, K G Road, Bangalore, Karnataka.
5. The Director, KSEE Board, Malleshwaram, Bangalore, Karnataka.
6. The Member Secretary, NCTE, New Delhi
7. Office Order file.

ಅನುಬಂಧ-೮.



ಆಯುಕ್ತರ ಕಚೇರಿ



ನವೀಕರಣಗೊಳಿಸಿದ ಪಿಸ್ಲೆಪ್ ಕಟ್ಟಡ



ಅದೇ ಹಳೆಯ ಕಟ್ಟಡ



ತರಬೇತಿ ಸಂಸ್ಥೆಯ ಕಚೇರಿ









ಗ್ರಂಥಾಲಯ



ನೇಯ್ಗೆ ಹಾಲ್



ಪ್ರಾಚಾರ್ಯರ ನಿವಾಸ







ಅನುಬಂಧ-೯

೨. ಟ್ರೇನಿಂಗ್ ಕಾಲೇಜಿನ ಪ್ರಾಚಾರ್ಯರ ಭಾವಚಿತ್ರಗಳು

ಟ್ರೇನಿಂಗ್ ಕಾಲೇಜಿನ ಪ್ರಾಚಾರ್ಯರು (೧೮೫೬-೧೯೫೬)



ಡೆಪ್ಯೂಟಿ ಚನ್ನಬಸಪ್ಪನವರು


ವೆಂಕಟ ರಂಗೋ ಕಟ್ಟಿ

ಭುಜಂಗರಾವ.ಕೃಷ್ಣರಾವ.ಹುಯಿಲಗೋಳ


ಶ್ರೀ ಆರ್. ಜಿ. ಕರದೀಂಕರ


ಶ್ರೀನಿವಾಸ ಕೊನೇರ ರೊದ್ದ


ಶ್ರೀ ವಿ. ಬಾ. ಜೋಶಿ


ಶ್ರೀ ರಾ. ಶ್ರೀ. ಕುಲಕರ್ಣಿ


ಶ್ರೀ ಆರ್. ಎಂ. ಮಹಿಷಿ


ಶ್ರೀ ರಾ. ನಾ. ಪೆರೂರ













ಶ್ರೀ ಹ. ಗ. ದೇಶಪಾಂಡೆ



ಶ್ರೀ ವೆಂ. ನ. ಮುಗದಲ




ಶ್ರೀ ದ. ವಿ. ಕಾಳೆ



ಶ್ರೀ ರಾ. ಕೆ. ಮಡಿಮನ

ಹ. ಸು. ತೊರಗಲ್



ಶ್ರೀ ಹು. ಬ. ಉಮದಿ



ಶ್ರೀ ಎಸ್. ಬಿ. ಬೈಚವಾಳ



ಶ್ರೀ ರಾ. ಕೃ. ಲಕ್ಕುಂಡಿ



ಶ್ರೀ ರಾ. ವ್ಹಿ. ದೇಸಾಯಿ













ಶ್ರೀ ಕೆ. ಗು. ಕುರ್ತಕೋಟಿ



ಶ್ರೀ ಮ. ಘು. ಹಂದ್ರಾಳ



ಶ್ರೀ ಮ. ಪ. ಜಾಲಿ



ಶ್ರೀ ಎಸ್. ಎಂ. ಪಾಟೀಲ



ಗಂಗಾಧರ.ಮ.ತುರಮರಿ
ಉಪಪ್ರಾಚಾರ್ಯರು
ಅನುವಾದಕರು.
ಪತ್ರಿಕೆಯ ಸಂಪಾದಕರು



ಶಾಂತಕವಿಗಳು
ಟ್ರೇನಿಂಗ್ ಕಾಲೇಜಿನ ಶಿಕ್ಷಕರು
ಉದ್ದಾಮ ಕವಿಗಳು














ಅನುಬಂಧ- ೧೦

೩.ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಸ್ಥಳ ನಕ್ಷೆ



೪. ಪರಾಮರ್ಶನ ಗ್ರಂಥಗಳು

೪.೧. ಪ್ರಾಥಮಿಕ ಆಕರ ಗ್ರಂಥಗಳು

೧. ಕನ್ನಡದ ದೀಪ– ಡೆ. ಚನ್ನಬಸಪ್ಪನವರ ಸಂಸ್ಮರಣ ಗ್ರಂಥ–೧೯೮೨

೨. ಕಟ್ಟಿ ವೆಂ.ರಂ. (ಅನು) ಗ್ಯಾಝೆಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಭಾರತೀಯ ಗ್ಯಾಝೇಟಿಯರ್– ಕರ್ನಾಟಕದ ಗ್ಯಾಝೆಟಿಯರ್– ಧಾರವಾಡ ಜಿಲ್ಲಾ ಗ್ಯಾಝೆಟಿಯರ್, ಪರಿಷ್ಕೃತ ಆವೃತ್ತಿ ೧೯೯೫

೩. BOMBAY STATE GAZETTEER, Dharwad District- U231K 14.2-85052– (ದೊರಕಿದ್ದು–ಜಯಕರ ಮುಖ್ಯ ಗ್ರಂಥಾಲಯ, ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ ಪುಣೆ) 1959

೪. GAZETTEER of the BOMBAY PRESIDENCY, VOLUME- XXII, DHARWAR - (ದೊರಕಿದ್ದು-ಭಾರತ ಇತಿಹಾಸ ಸಂಶೋಧನ ಮಂಡಳ, ಸದಾಶಿವ ಪೇಟ, ಪೇರು ಗೇಟ, ಪುಣೆ) 1884

ಪತ್ರಿಕೆಗಳು

೧. ಕನ್ನಡ ಶಾಲಾ ಪತ್ರಕಗಳು (೧೮೬೫ ರಿಂದ ೧೯೫೬)

೨. ಕನ್ನಡ ಪ್ರಾಥಮಿಕ ಶಿಕ್ಷಣ–ಪತ್ರಿಕೆಗಳು (೧೮೬೫ ರಿಂದ ೧೯೫೬)

೩. ಜೀವನ ಶಿಕ್ಷಣ– ಪತ್ರಿಕೆಗಳು (೧೯೫೭–೫೮ ನ.ಡಿ.ಜನವರಿ)

೪. ವಾಗ್ಭೂಷಣ– ವಿದ್ಯಾವರ್ಧಕ ಸಂಘ, ಧಾರವಾಡ(ಸಪ್ಟಂಬರ ೧೯೨೪ ಸಂ.೨೯: ಸಂ೨)

೫. ಮಠ ಪತ್ರಿಕೆಗಳು (೧೮೬೫ ರಿಂದ ೧೯೫೬)

೬. ಶಾಲಾ ಪತ್ರಕ–ಪತ್ರಿಕೆಗಳು (೧೮೬೫ ರಿಂದ ೧೯೫೬)

೪.೨. ಪೂರಕ ಆಕರ ಗ್ರಂಥಗಳು

೧. ಕರಡಿ ಆರ್.ಎನ್. ಕನ್ನಡದ ಶಕಪುರುಷ ಡೆಪ್ಯೂಟಿ ಚನ್ನಬಸಪ್ಪ, ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ ಧಾರವಾಡ–೮, ೧೯೮೯

೨. ಕಲಬುರ್ಗಿ.ಎಂ.ಎಂ., ಸಂಸ್ಕೃತಿ–ವಿಕೃತಿ ೨೦೦೬,

೩. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ (ಪರಿಷ್ಕೃತ ಆವೃತ್ತಿ)– ೧೯೯೫

೪. ಕಟಗೇರಿ ನ.ಹ. ಗತಕಾಲದ ಧಾರವಾಡ – (ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆ–ಪುಷ್ಪ: ೩೭) ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ–೫೮೦೦೦೧, ೨೦೦೮

೫. ಕಾಮತ ಸೂರ್ಯನಾಥ (ಸಂ), ಕರ್ನಾಟಕ ರಾಜ್ಯ ಗ್ಯಾಝೆಟಿಯರ್–ಭಾಗ ಒಂದು, ೧೯೮೪,

೬. ಗೋಖಲೆ ಬಿ.ಜಿ. ಏನ್ಸಿಯಂಟ್ ಇಂಡಿಯಾ–ಹಿಸ್ಟರಿ ಆಂಡ್ ಕಲ್ಚರ್– ಏಶಿಯಾ ಪಬ್ಲಿಷಿಂಗ್ ಹೌಸ್, ಬಾಂಬೆ, ೧೯೫೨

೭. ಗೋಪಾಲರಾವ್, ಎಚ್, ಎಸ್. ಕರ್ನಾಟಕ ಏಕೀಕರಣ ಇತಿಹಾಸ– ನವಕರ್ನಾಟಕ ಪ್ರಕಾಶನ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–೫೬೦೦೦೧, ಪ್ರಥಮ ಮುದ್ರಣ ೧೯೯೬

೮. ಜತಾರ ಶಂ.ವಾ. ಮನೋಜ ಪಾಟೀಲ, ಧಾರವಾಡ ಮಾರ್ಗದರ್ಶಿ– ಅಭಿಜಾತ ಪ್ರಕಾಶನ, ಧಾರವಾಡ. ೧೯೮೫

೯. ಜೇವೂರ. ಎಸ್.ವಿ. ಶತಮಾನೋತ್ಸವ ಸ್ಮರಣ ಸಂಚಿಕೆ– ಲಿಂಗಾಯತ ಅಭಿವೃದ್ಧಿ ಸಂಸ್ಥೆ, ಧಾರವಾಡ ೧೯೮೩

೧೦. ತಟ್ಟಿ ವಲ್ಲಭ ಮಹಾಲಿಂಗ ಕನ್ನಡಿಗರ ಜನ್ಮ ಸಾರ್ಥಕತೆ– ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ–೧೮೯೨

೧೧. ತೂರ್ಮರೀ ಗಂ. ಮ. ಕವಿತಾ ಸಂಗ್ರಹವು– ಬೆಳಗಾವಿ.೧೮೭೪

೧೨. ಧಾರವಾಡಕರ ರಾ. ಯ. ಹೊಸಗನ್ನಡ ಸಾಹಿತ್ಯದ ಉದಯಕಾಲ– ೧೯೭೫

೧೩. ದೊಡ್ಡೆಗೌಡ ಆರ್. (ಸಂ.) ಉತ್ತರ ಕರ್ನಾಟಕದಲ್ಲಿ ಕನ್ನಡ ಕಟ್ಟಿದ ಮಹನೀಯರು–ಸಪ್ನ ಬುಕ್ ಹೌಸ್. ಬೆಂಗಳೂರು. ೨೦೧೭

೧೪. ಪಾಗುಂಡಪ್ಪ ತಿಮ್ಮಪ್ಪ, ವಸಾಹತುಶಾಹಿ ಶಿಕ್ಷಣ: ಶಿವರಾಮ ಕಾರಂತರ ಪ್ರತಿಕ್ರಿಯೆ ಮತ್ತು ಪ್ರಯೋಗ' –(ಸಂಶೋಧನ ಪ್ರಬಂಧ) ೨೦೧೬

೧೫. ಪ್ರೊಸಿಡಿಂಗ್ಸ ಆಫ್ ದಿ ಬೋರ್ಡ ಆಫ್ ರೆವಿನ್ಯೂ (ಪಿ.ಎಂ.ಬಿ.ಆರ್), ೧೧–೧೨–೧೮೦೦,

೧೬. ಬಣಕಾರ ಮಹಾದೇವ–ಆಂಗ್ಲರ ಆಡಳಿತದಲ್ಲಿ ಕನ್ನಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃತತುಂಗ ರಸ್ತೆ, ಬೆಂಗಳೂರು. ೧೯೮೬

೧೭. ಬಿದರಿ ಐ ಎಸ್ (ಅನು)– 'ಭಾರತೀಯ ಶಿಕ್ಷಣದ ಇತಿಹಾಸ (೧೮೦೦–೧೯೬೫)' ಕನ್ನೆ ಅಧಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ– ೧೯೭೭

೧೮. ಬೇಂದ್ರೆ ದ.ರಾ, ಸಾಹಿತ್ಯ ಸಂಶೋಧನೆ– ೧೯೪೦

೧೯. ಸೀಗಿಹಳ್ಳಿ ಬಾಳಣ್ಣ, ಡೆಪ್ಯೂಟಿ ಚೆನ್ನಬಸಪ್ಪನವರು– ಜೀವನ ಮತ್ತು ಸಾಧನೆ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ–೧೯೯೩

೨೦. ಶಿವರುದ್ರಪ್ಪ.ಜಿ. ಕಾಂಟ್ರಿಬ್ಯೂಷನ್ ಆಫ್ ವೀರಶೈವ ಮಠಾಸ್ ಟು ದಿ ಡೆವಲೆಪ್‌ಮೆಂಟ್ ಆಫ್ ಏಜ್ಯುಕೇಷನ್ ಇನ್ ಕರ್ನಾಟಕ–ಪಿ.ಎಚ್.ಡಿ. ಪ್ರಬಂಧ, ಮೈಸೂರು ವಿ ವಿ, ಮೈಸೂರು– ೧೯೭೪

೨೧. ಮಾಳವಾಡ ಸ.ಸ. 'ಡೆಪುಟಿ ಚನ್ನಬಸಪ್ಪ', ೧೯೭೩

೨೨. ಮುತ್ತಣ್ಣ ಐ. ಮಾ. ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ: ಭಾಗ ೧- ಭಾರತ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆ, ಶ್ರೀ ಶಕ್ತಿ ಇಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು-೫೭೦೦೧೪(ತಿದ್ದಿದ ಎರಡನೆಯ ಆವೃತ್ತಿ) ೧೯೮೭

೨೩. ಮುಗಳಿ ರಂ. ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್: ಪ್ರಕಾಶಕರು: ಮೈಸೂರು (ಪರಿಷ್ಕೃತ ಎಂಟನೆಲು ಮುದ್ರಣ)೧೯೯೦

೨೪. ಮೂದಲಿಯಾರ್ ಎ. ಲಕ್ಷ್ಮಣಸ್ವಾಮಿ- ಭಾರತದಲ್ಲಿ ಶಿಕ್ಷಣ, ಅನು-ಜಿ.ಬಿ.ಮೆಂಚ್- ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ- ೧೯೭೨

೨೫. ವಾದ್ವಾನಿ ಎಂ. ಆರ್ ಮತ್ತು ಎ.ಎ.ಎಲ್.ಡಿಸೋಜಾ, 'ಮಾಡರ್ನ ಇಂಡಿಯಾ- ೧೮೦೦-೧೯೬೪', ಶೇಠ್ ಪಬ್ಲಿಷರ್ಸ್, ಮುಂಬಯಿ, ೧೯೮೦

೨೬. ಶರ್ಮಾ.ತಿ.ತಾ. 'ವಿಚಾರ ಕರ್ನಾಟಕ', ಪುರೋಗಾಮಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ೧೦ನೆಯ ಕ್ರಾಸ್, ಬೆಂಗಳೂರು ೧೯೭೦

೨೭. ಶಿವಸ್ವಾಮಿ.ಜಿ.ವಿ. (ಸಂ)ಶಿವಯೋಗಿ ಚನ್ನಬಸಪ್ಪನವರು- ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು-೧೮, ೧೯೯೦

೨೮. ಮಾಳವಾಡ ಸ.ಸ., ಸಾಹಿತ್ಯ ಸಂಗಮ- ಜಯ ಪ್ರಕಾಶನ, ಧಾರವಾಡ-೭, ೧೯೭೦,

೨೯. ಶಂಕರನಾರಾಯಣರಾವ್.ಎಸ್.ಪಿ. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು-ರಾಷ್ಟ್ರೀಯ ಚಳುವಳಿಯ ಸಮಗ್ರ ಪರಿಚಯ, ನವಕರ್ನಟಕ ಪ್ರಕಾಶನ, ಎಂಟನೆಯ ಮುದ್ರಣ, ೨೦೦೦

೩೦. ಹಾವನೂರ ಶ್ರೀನಿವಾಸ, ಹೊಸಗನ್ನಡ ಅರುಣೋದಯ-(ತಿದ್ದಿ ಬೆಳೆಸಿದ ಎರಡನೆಯ ಆವೃತ್ತಿ) – ಕನ್ನಡ ಪುಸ್ತಕ ಪ್ರಧಿಕಾರ, ಬೆಂಗಳೂರು, ೨೦೦೦.

೩೧. ಹಾಲಪ್ಪ.ಗ.ಸ, ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿ- ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ,ಲಿ, ಧಾರವಾಡ- ೧೯೬೨

೩೨. ಹಂದ್ರಾಳ.ಮ.ಗು. 'ಡೆಪ್ಯುಟಿ ಚನ್ನಬಸಪ್ಪ'-ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೭೭

೩೩. ಹಳಕಟ್ಟಿ.ಫ.ಗು. 'ಕೈಲಾಸವಾಸಿ ಚನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಚರಿತ್ರೆಯು', ಶಿವಾನುಭವ ಗ್ರಂಥಮಾಲೆ ಬಿಜಾಪೂರ, ೧೯೩೦

೩೪. An Introduction to antropological thought- Machan Jha-Vikas Publishing House Pvt Ltd E-28, sector-8,NOIDA-201301, 1983.

೩೫. Promotion of Learning in India by early European settlers – N.N.Law:

೩೬. Report of the D.P.I. Bombay- 1855-56

ಪತ್ರಿಕೆಗಳು

೧. ಜೀವನ ಶಿಕ್ಷಣ- ಪತ್ರಿಕೆಗಳು (೧೯೫೭-೫೮ ನ.ಡಿ.ಜನವರಿ)

೨. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಹುಬ್ಬಳ್ಳಿ, (೨೬-೮-೧೯೩೫)

೩. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಹುಬ್ಬಳ್ಳಿ, (೨೬-೬-೧೯೩೫)

೪. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಹುಬ್ಬಳ್ಳಿ, (೧೨-೫-೧೯೫೯)

೪.೩. ಸಂಶೋಧಿಸಿದ ಸ್ಥಳಗಳು

೧. ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ, ಮುಖ್ಯ ಜಯಕರ ಗ್ರಂಥಾಲಯ, ಪುಣೆ

೨. ಭಾರತ ಇತಿಹಾಸ ಸಂಶೋಧನ ಮಂಡಳ, ಸದಾಶಿವ ಪೇಟ, ಪೇರು ಗೇಟ, ಪುಣೆ

೩. ಡೆಕ್ಕನ್ ಕಾಲೇಜಿನ ಸ್ನಾತಕೋತ್ತರ ಮತ್ತು ಸಂಶೋಧನ ಸಂಸ್ಥೆ, ಯರವಾಡಾ,ಪುಣೆ- ೪೧೧೦೦೬

೪. ವಿಶ್ರಾಮಭಾಗವಾಡಾದ ಸರಕಾರಿ ಗ್ರಂಥಾಲಯ, ಪುಣೆ.


೫. ಭಂಡಾರಕರ ಸಂಶೋಧನ ಸಂಸ್ಥೆ, ೮೧೨, ಶಿವಾಜಿನಗರ, ಪುಣೆ- ೪೧೧೦೦೪

೬. ಪುಣೆ ಪುರಾಲೇಖಾಗಾರ, ೧೨, ಬಂಡಗಾರ್ಡನ್ ರೋಡ, ಪುಣೆ, ೪೧೧೦೦೧ ಪುರಾಭಿಲೇಖ ಸಂಚಾಲನಾಲಯ, ಮಹಾರಾಷ್ಟ್ರ ಸರ್ಕಾರ.

೭. ಸರಕಾರಿ ಫೋಟೋಜಿಂಕೊ ಮುದ್ರಣಾಲಯ ಮತ್ತು ಗ್ರಂಥಾಲಯ, ೫ ಫೋಟೋಜಿಂಕೊ ರಸ್ತೆ, ಪುಣೆ -೪೧೧೦೦೯

೮. Directorate of Archives, government of maharastra, 156 sir Cowasjee Jahangeer Readymoney Building (Elphinston college building) Mahatma gandhi road, kala godha, fort, MUMBAI-400032

*



ಸಾಹಿತ್ಯ ಅಧ್ಯಯನ ವಿಭಾಗ